

ಲೋಹಿಯಾ ಜೊತೆಯಲ್ಲಿ...

ಮಾರ್ಕ್ಸ್-ಗಾಂಧಿ-ಲೋಹಿಯಾ-ಅಂಬೇಡ್ಕರ್ ಕುರಿತ ಬರಹಗಳು

ಡಿ.ಎಸ್. ನಾಗಭೂಷಣ

ಲೋಹಿಯಾ ಜೊತೆಯಲ್ಲಿ...

(ಮಾರ್ಕ್ಸ್-ಗಾಂಧಿ-ಲೋಹಿಯಾ-ಅಂಬೇಡ್ಕರ್ ಕುರಿತ ಬರಹಗಳು)

ಡಿ. ಎಸ್. ನಾಗಭೂಷಣ

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ - ೫೭೭ ೨೦೧

Lohia joteyalli... A collection of articles on Marx, Gandhi, Lohia and Ambedkar by **D.S. Nagabhushana**, HIG-5, 'Nudi', Kallahally Extn., VinobaNagara , Shivamogga-577 204. Phone: 08182-248574 Mob: 94492 42284
Published by **GEETHANJALI PUSTAKA PRAKASHANA**, Revenue Building, 100ft Road, Rajendra Nagar, Shimoga - 577201, Karnataka. Mobile: 9449886390, 9916197291. E-mail: gbtmohan@gmail.com

ISBN: 978-93-81876-36-7

First Impression: 2014

Pages: 248

Price : Rs. 175

Paper Used: 70 GSM. Maplitho
Size: Demy 1/8

ಲೋಹಿಯಾ ಜೊತೆಯಲ್ಲಿ...
(ಮಾರ್ಕ್ಸ್–ಗಾಂಧಿ–ಲೋಹಿಯಾ–ಅಂಬೇಡ್ಕರ್ ಕುರಿತ ಬರಹಗಳು)
ಲೇ: ಡಿ. ಎಸ್. ನಾಗಭೂಷಣ

ಮೊದಲನೆಯ ಮುದ್ರಣ: 2014

ಪುಟಗಳು: 248

ಬೆಲೆ: ನೂರ ಎಪ್ಪತ್ತೈದು ರೂಪಾಯಿಗಳು

ಮುಖಪುಟ ವಿನ್ಯಾಸ: ಅರುಣ್‌ಕುಮಾರ್ ಜಿ.

ಪುಸ್ತಕ ವಿನ್ಯಾಸ: ಶ್ರೀಧರ್

ಪ್ರಕಾಶಕರು
ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ - 577 201
ದೂರವಾಣಿ: 9449886390

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಕುಟುಂಬದ ಗೆಳೆತಿಯರಾಗಿ
ಪ್ರೀತಿ–ವಿಶ್ವಾಸಗಳಿಂದ
ನಮ್ಮನ್ನು ಪೊರೆಯುತ್ತಿರುವ

ರೇಖಾಂಬ ಪ್ರಭು
ಮಂಜುಳಾ ಎಂ. ರಾಜು
ಮತ್ತು
ಎಲ್.ಕೆ. ಪೂರ್ಣಿಮಾ

ಇವರಿಗೆ ಈ ಕೃತಿ ಅರ್ಪಿತ

ಲೇಖಕನ ಮಾತು

ಸಕ್ರಿಯ ರಾಜಕಾರಣ ಇಂದು ಎಲ್ಲ ತಾತ್ವಿಕ ಆಧಾರಗಳನ್ನೂ(Ideology) ಕಳಚಿಕೊಂಡು ಶುದ್ಧ ವ್ಯಾವಹಾರಿಕ ರಾಜಕಾರಣದತ್ತ ಸರಿಯುತ್ತಿರುವಾಗ ನಮ್ಮ ಕಾಲದ ರಾಜಕೀಯ ತತ್ವಚಿಂತನೆಯ–ಕನಿಷ್ಟ ಭಾರತದ ಮಟ್ಟಿಗಾದರೂ– ನಾಲ್ಕು ಧೃವತಾರೆಗಳಂತಿರುವ ಮಾರ್ಕ್ಸ್, ಗಾಂಧಿ, ಲೋಹಿಯಾ ಮತ್ತು ಅಂಬೇಡ್ಕರ್ ಕುರಿತ ನನ್ನ ಈವರೆಗಿನ ಬರಹಗಳ ಸಂಗ್ರಹ ಹೊರಬರುತ್ತಿರುವುದು ನನ್ನ ಕೆಲವು ಗೆಳೆಯರ ಮಟ್ಟಿಗಾದರೂ ಸೋಜಿಗದ ಸಂಗತಿಯಾಗಿ ಕಾಣಬಹುದು. ಆದರೆ ಈ ಸಂದರ್ಭದಲ್ಲಿ ನನಗೆ ಸೋಜಿಗವಾಗಿ ಕಾಣುತ್ತಿರುವ ಸಂಗತಿ ಎಂದರೆ, ತತ್ವಚಿಂತನೆಯ ಗೋಜಿನಿಂದ ದೂರ ಸರಿಯುತ್ತಿರುವ ರಾಜಕೀಯ ಪಕ್ಷಗಳ ರಾಜಕಾರಣಕ್ಕೆ ಪ್ರತಿಯಾಗಿ ಪರ್ಯಾಯ ರಾಜಕಾರಣನ್ನು ಕಟ್ಟುವ ಮಾತನಾಡುತ್ತಿರುವ ಆಂ ಆದ್ಮಿ ಪಕ್ಷವೂ ಈಗ ತತ್ವ ಚಿಂತನೆ ಅಪ್ರಸ್ತುತವಾಗಿದೆ ಎಂದು ಹೇಳುತ್ತಿರುವುದು. ಇದು ಇತರ ರಾಜಕೀಯ ಪಕ್ಷಗಳ ತಾತ್ವಿಕ ಬರಡುತನ–ಔಪಚಾರಿಕ ತುಟಿ ಸೇವೆಯ ಹೊರತಾಗಿ–ಕುರಿತು ಆಡುತ್ತಿರುವ ಟೀಕೆಯ ಮಾತೋ, ನೀಡುತ್ತಿರುವ ಪ್ರತಿಕ್ರಿಯೆಯೋ ಅಥವಾ ಇದೇ ಆ ಪಕ್ಷದ ಸ್ಥಾಯಿ ನಿಲುವಾಗಿದೆಯೋ ಎಂಬ ಗೊಂದಲ ನನಗುಂಟಾಗಿದೆ. ಪ್ರತಿ ಸಮಸ್ಯೆ ಎದುರಾದಂತೆ ಅದನ್ನು ಎಡಪಂಥೀಯ, ಬಲಪಂಥೀಯ, ಬಂಡವಾಳಶಾಹಿ ಅಥವಾ ಸಮಾಜವಾದಿ ಎಂಬ ಹಣೆಪಟ್ಟಿಗಳೊಂದಿಗೆ ಪರಿಹರಿಸಹೊರಡುವ ಬದಲು ಸದರಿ ಸಮಸ್ಯೆಯ ಸುತ್ತಮುತ್ತಲಿನ ಸಾಕ್ಷ್ಯದ ಆಧಾರದ ಮೇಲೆ ಅದಕ್ಕೆ ಕಾಲ ಸಂದರ್ಭಾನುಸಾರವಾದ ಪರಿಹಾರ ಕಂಡುಹಿಡಿಯುವುದು ಒಳ್ಳೆಯದು ಎಂದು ಅದು ಹೇಳುತ್ತಿದೆ.

ರಾಜಕೀಯ (ಅಥವಾ ಯಾವುದೇ ನೆಲೆಯ) ತತ್ವಚಿಂತನೆಯ ವಿಷಯದಲ್ಲಿ ಹೆಚ್ಚು ಹೆಚ್ಚು ಅನಕ್ಷರಸ್ಥವಾಗುತ್ತಿರುವ ನಮ್ಮ ಜನ ಸಮುದಾಯಕ್ಕೆ ಇದು ಹಿತವಾದ ಮಾತಾಗಿ ಕೇಳುವುದಾದರೂ, ಅದು ದೀರ್ಘಕಾಲದ ರಾಜಕಾರಣದ ದೃಷ್ಟಿಯಿಂದ ಬರೀ ಮಾತಿನ ಪರಿಹಾರ ಮಾತ್ರವಾಗಿ ಅಪಾಯಕಾರಿಯಾಗಿ ಪರಿಣಮೀಸೀತು. ಇದು ಆಂ ಆದ್ಮಿ ಪಕ್ಷದ ನಾಯಕರಿಗೆ ಗೊತ್ತಿಲ್ಲವೆಂದಲ್ಲ. ಏಕೆಂದರೆ ಈ ಪಕ್ಷದ ನಾಯಕ ಗಣ ಮತ್ತು ಸಲಹಾಕಾರರಲ್ಲಿ–ಯೋಗೇಂದ್ರ ಯಾದವ್, ಪ್ರೊ. ಆನಂದ ಕುಮಾರ್, ರಾಜ್‌ಮೋಹನ ಗಾಂಧಿ, ಆಶೀಶ್ ನಂದಿ, ಶಿವ ವಿಶ್ವನಾಥನ್, ಮೇಧಾ ಪಾಟ್ಕರ್–ಬಹಳ ಜನ ನಮ್ಮ ನಡುವಣ ಹಲವು ನೆಲೆಗಳ ಮತ್ತು ಸ್ವರೂಪಗಳ ಶ್ರೇಷ್ಠ ತತ್ವಮೀಮಾಂಸಕರೆಂದೇ ಪರಿಚಿತರು. ಅವರು ದಟ್ಟ ಛಾಯೆಯ ಎಡ–ಬಲಗಳ ವರ್ಗೀಕರಣದಿಂದ ಬಂಧಿತರಾಗದವರಾದರೂ, ಭಾರತದ ಜನಜೀವನಕ್ಕೆ ಗರಿಷ್ಠ ಸಾಧ್ಯ ನೆಮ್ಮದಿ ತರುವಂತಹ ಜೀವನ ಮೌಲ್ಯ ಮತ್ತು ಮಾದರಿ ಯಾವುದಿರಬಹುದೆಂದು ಬಹುಕಾಲದಿಂದ ಪ್ರಯೋಗ ಮತ್ತು ಜಿಜ್ಞಾಸೆ

ನಡೆಸುತ್ತಿರುವರು. ಸಮಸ್ಯೆ ಬಂದಂತೆ ಎದುರಿಸಬಹುದೆಂದು ಇವರೆಲ್ಲ ಭಾವಿಸಿದ್ದರೆ, ಈ ಪ್ರಯೋಗ–ಜಿಜ್ಞಾಸೆಗಳ ಅಗತ್ಯವೇ ಇರುತ್ತಿರಲಿಲ್ಲ. ಹಾಗಾಗಿ, ಬಹುಶಃ ಈ ಪಕ್ಷ, ಈವರೆಗಿನ ರಾಜಕಾರಣದ ತಾತ್ವಿಕ ಮೋಸದಾಟಗಳಿಂದ ಹತಾಶರಾಗಿರುವ ಜನರ ಮುಂದೆ ತನ್ನನ್ನು ಇನ್ನೊಂದು ತಾತ್ವಿಕ ಮಾದರಿಯ ರೂಪದಲ್ಲಿ ಪ್ರಸ್ತುತಪಡಿಸಿಕೊಳ್ಳುವುದು ಕಾಲೋಚಿತವಲ್ಲ ವೆಂದು ಭಾವಿಸಿರಬಹುದು. ಆದರೆ ಇದೊಂದು ಜಾಣ ಕ್ರಮವಾಗಿರಬಹುದೇ ಹೊರತು ವಿವೇಕದ ಕ್ರಮವಾಗಲಾರದು. ಏಕೆಂದರೆ, ಚುನಾಣಾ ರಾಜಕಾರಣ ಎಂದರೆ ಸ್ಪರ್ಧಾತ್ಮಕ ರಾಜಕಾರಣವಾಗಿದ್ದು, ಜನರಿಗೆ ಆಯ್ಕೆಗೊಂದು ಆಧಾರ ಅಗತ್ಯವಿದೆ. ಜನವೇನು ಆದ್ಮಿ ಪಕ್ಷವನ್ನು ಅದರ ನಾಯಕರ ಪ್ರಾಮಾಣಿಕತೆಯನ್ನು ನಂಬಿ ಆಯ್ಕೆ ಮಾಡಬೇಕೆ? ಹೋಗಲಿ, ಈ ಪ್ರಾಮಾಣಿಕತೆಗೇನಾದರೂ ಆಧಾರಗಳಿವೆಯೇ? ಬರಿ ನಂಬಿಕೆಯ ಮೇಲಿನ ರಾಜಕಾರಣ ಇಂದು ಹಳ್ಳಿಯಲ್ಲೂ ನಡೆಯಲಾರದು. ಆದರೆ ಆ ಆದ್ಮಿ ಪಕ್ಷ ಈಗ ನಿರ್ವಹಿಸ ಹೊರಟಿರುವುದು ಜಾಗತಿಕ ರಾಜಕಾರಣದ ಪರಿಪ್ರೇಕ್ಷ್ಯದಲ್ಲಿನ ರಾಷ್ಟ್ರ ರಾಜಕಾರಣವನ್ನು.

ಇದಕ್ಕಿಂತ ಮುಖ್ಯವಾಗಿ, ಯಾವುದೇ ಕಾಲದ ಯಾವುದೇ ಸಾರ್ವಜನಿಕ ಸಮಸ್ಯೆ ಬರೀ ಆ ಕಾಲದ ಸಮಸ್ಯೆಯಾಗಿರುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಅದು ಚರಿತ್ರೆಯ ವ್ಯುತ್ಪತ್ತಿಯೂ ಆಗಿರುತ್ತದೆ. ಹಾಗಾಗಿ ನೀನು ಚರಿತ್ರೆಯನ್ನು ಗ್ರಹಿಸುವ ಮತ್ತು ಅದರ ಆಧಾರದ ಮೇಲೆ ಅದನ್ನು ನಿರ್ವಹಿಸುವ ರೀತಿ ನೀತಿಗಳೇ ಆ ಸಮಸ್ಯೆಯನ್ನು ನೀನು ಗ್ರಹಿಸುವ ಮತ್ತು ಬಗೆಹರಿಸುವ ನೆಲೆಗಳನ್ನು ನಿರ್ಧರಿಸುತ್ತದೆ. ಹಾಗಾಗಿ ನಿನಗೆ ಸಮಸ್ಯೆಯನ್ನು ಬಗೆಹರಿಸುವ ಅಧಿಕಾರ (ಅಂದರೆ ರಾಜಕೀಯ ಅಧಿಕಾರ) ಕೊಡುವ ಮುನ್ನ ಚರಿತ್ರೆಯನ್ನು ಕುರಿತ ನಿನ್ನ ಗ್ರಹಿಕೆಗಳೇನು ಎಂಬುದು ಜನಕ್ಕೆ ಗೊತ್ತಾಗಬೇಕಿದೆ. ಇಲ್ಲಿಯೇ ಪಕ್ಷವೊಂದರ ತತ್ವಚಿಂತನೆಯ ಅಗತ್ಯ ಹುಟ್ಟುವುದು.

ಹಾಗೆ ನೋಡಿದರೆ ಈ ಎಲ್ಲ ಸಾರ್ವಜನಿಕ ಸಮಸ್ಯೆಗಳು ಹುಟ್ಟುವುದು ಸಮಾಜವೊಂದರ ಒಡೆದುಹೋದ ಹಿತಾಸಕ್ತಿಗಳ ಘರ್ಷಣೆಯಲ್ಲಿ. ಈ ಹಿತಾಸಕ್ತಿಗಳು ಹುಟ್ಟುವುದು ಮಾನವ ಬದುಕಿನ ಸಾರ್ಥಕ್ಯದ ನೆಲೆಗಳನ್ನು ಕುರಿತ ಗೊಂದಲಗಳಿಂದಾಗಿ. ಇವನ್ನು ಅನಾದಿ ಕಾಲದಿಂದಲೂ ಧರ್ಮ ಮತ್ತು ರಾಜಕಾರಣ ಜೊತೆಜೊತೆಯಾಗಿ ನಿರ್ವಹಿಸುತ್ತಾ ಬಂದಿವೆ. ಈ ಅರ್ಥದಲ್ಲೇ ಗಾಂಧೀಜಿ ಧರ್ಮವೆಂದರೆ ಅಲ್ಪಾವಧಿ ರಾಜಕಾರಣವೆಂದೂ, ರಾಜಕಾರಣವೆಂದರೆ ಅಲ್ಪಾವಧಿ ಧರ್ಮವೆಂದೂ ಹೇಳುತ್ತಿದುದು. ಹಾಗಾಗಿ ರಾಜಕಾರಣವೆಂದರೆ ಕೇವಲ ತತ್ಕಾಲೀನ ಸಮಸ್ಯೆಗಳ ಪರಿಹಾರದ ಕೌಶಲ್ಯ ಮಾತ್ರವಾಗಿರದೆ, ಮಾನವ ಬದುಕಿನ ಆಸಕ್ತಿ, ಕ್ರಿಯಾಶೀಲತೆಗಳನ್ನು ಅರಿಯುವ, ಅವು ಸಮರಸವಾಗಿ ಅಭಿವ್ಯಕ್ತಿಗೊಳ್ಳುವ ಮಾದರಿಗಳನ್ನು ರೂಪಿಸುವ, ಹುಡುಕುವ ಬೌದ್ಧಿಕ ಕೆಲಸವೂ ಆಗಿದೆ.

ಇದಕ್ಕೆ ವಿವಿಧ ಸಮಾಜಗಳು ಚರಿತ್ರೆಯಲ್ಲಿ–ಒಮ್ಮೊಮ್ಮೆ ಚರಿತ್ರೆಯ ಎಲ್ಲೆಗಳನ್ನೂ ಮೀರಿ–ರೂಪಿಸಿ ಅಳವಡಿಸಿಕೊಂಡ ಲೋಕ ಗ್ರಹಿಕೆಯ ಕ್ರಮಗಳನ್ನು ಅರಿಯುವ ಅಗತ್ಯವಿದೆ. ಹಾಗೇ ಅದನ್ನು ಆಧರಿಸಿ ತಮ್ಮ ಸಾಮಾಜಿಕ ಬದುಕನ್ನು ಮರು ರೂಪಿಸಿಕೊಳ್ಳುತ್ತಾ ಹೋಗಲು ಅದು ಪ್ರಯೋಗಶೀಲವಾಗಿ ಆವಿಷ್ಕರಿಕೊಳ್ಳುವ ವೈಚಾರಿಕ ಮತ್ತು ಭೌತಿಕ ಪರಿಕರಗಳ ದೀರ್ಘಕಾಲಿಕ ಪರಿಣಾಮಗಳನ್ನು ಸೂಕ್ಷ್ಮವಾಗಿ ನಿರುಕಿಸುವ ಅಗತ್ಯವಿದೆ.

ಇನ್ನೂ ಮುಖ್ಯವಾಗಿ, ಇದೆಲ್ಲದರ ಪರಿಣಾಮವಾಗಿಯೇ ಕ್ಷಿಪ್ರವಾಗಿ ಬದಲಾಗುತ್ತಿರುವ ಜಗತ್ತಿನ ಚಿತ್ರದ ಗತಿಶೀಲತೆಯನ್ನೂ ಅರಿತು ಈ ಜಟಿಲ ಸಂಕೀರ್ಣ ಜಗತ್ತಿನ-ಪರಿಸರ ವಿಜ್ಞಾನವೆಂಬುದು ಅರಿವಿಗೆ ಬಂದ ಇತ್ತೀಚೆಗಂತೂ ಇಡೀ ಸೃಷ್ಟಿಯ-ಚಿತ್ರದಲ್ಲಿ ತನ್ನ ಜನಸಮುದಾಯದ ಹಿತವನ್ನು ಸಂರಕ್ಷಿಕೊಳ್ಳುವ ಜವಾಬ್ದಾರಿಯನ್ನೂ ರಾಜಕಾರಣ ಹೊತ್ತಿದೆ. ಹೀಗೆ ರಾಜಕಾರಣವೆಂಬುದು ಇಂದು ಕೇವಲ ಕೇವಲ ಚುನಾವಣಾ ವ್ಯವಹಾರವಾಗದೆ, ಇತಿಹಾಸ, ಧರ್ಮ, ಸಂಸ್ಕೃತಿ, ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳೊಂದಿಗೆ ಬೆರೆತು ಬೆಳೆಯುತ್ತಾ, ಒಟ್ಟಿಗೇ ಸ್ಥಳೀಯವೂ, ಜಾಗತಿಕವೂ ಆಗಬೇಕಾಗಿದೆ. ರಾಜಕಾರಣದ ಇತ್ತೀಚಿನ ಬಹು ಮುಖ್ಯ ಸಮಸ್ಯೆ ಎಂದರೆ, ಸ್ಥಳೀಯತೆ ಮತ್ತು ಜಾಗತಿಕತೆಗಳ ನಡುವಣ ಸಮತೋಲನ ವಿಪರೀತ ಪ್ರಮಾಣದಲ್ಲಿ ಏರುಪೇರಾಗಿ ಅದು ತನ್ನ ಸ್ಥಳೀಯತೆಯ ಜಲಮೂಲಗಳನ್ನೇ ಕಳೆದುಕೊಂಡು ಅತಿ ಸ್ಥೂಲ ದೇಹಿಯಾಗುತ್ತಿರುವುದು.

ಅದೇನೇ ಇರಲಿ, ರಾಜಕಾರಣವನ್ನು ತನ್ನ ಈ ಎಲ್ಲ ಅಮೂರ್ತ ಮತ್ತು ಮೂರ್ತ ನೆಲೆಗಳಲ್ಲಿ ನೋಡುವ ಒಂದು ಪ್ರಯತ್ನ ಇಲ್ಲಿ ಸಂಗ್ರಹಿತವಾಗಿರುವ ಬರಹಗಳಲ್ಲಿ ನೀವು ಕಾಣಬಹುದು ಎಂದು ಇಲ್ಲಿ ಹೇಳಬಯಸುವೆ. ಮೂಲತಃ ಸಮಾಜವಾದಿ ಚಿಂತಕ ಡಾ. ರಾಮಮನೋಹರ ಲೋಹಿಯಾ ಅವರ ರಾಜಕೀಯ ತತ್ವಚಿಂತನೆಯನ್ನು ನನ್ನ ರಾಜಕೀಯ ಆಸಕ್ತಿಯ ಆರಂಭದ ದಿನಗಳಿಂದಲೂ ಮೆಚ್ಚಿಕೊಳ್ಳುತ್ತಾ, ಅಧ್ಯಯನ ಮಾಡುತ್ತಾ, ವಿಮರ್ಶಿಸುತ್ತಾ ಬಂದಿರುವ ನಾನು, ಮಾರ್ಕ್ಸ್-ಗಾಂಧಿ-ಅಂಬೇಡ್ಕರ್‌ರ ತತ್ವ ಚಿಂತನೆಗಳನ್ನು ಲೋಹಿಯಾ ತತ್ವ ಚಿಂತನೆಯ ಅಧ್ಯಯನ ಮತ್ತು ವಿಮರ್ಶೆಗಳಿಗೆ ಪೂರಕವಾಗಿ-ಆದರೆ ಅವುಗಳ ಸ್ವಾಯತ್ತತೆಗಳನ್ನು ಒಪ್ಪಿಕೊಂಡೇ-ಗಮನಿಸುತ್ತಾ ಬಂದವನು. ಇದು ಅಗತ್ಯವಿದ್ದೆಡೆಯಲ್ಲೆಲ್ಲ ಲೋಹಿಯಾ ಚಿಂತನೆ ಮತ್ತು ಲೋಹಿಯಾ ಸಮಾಜವಾದಿಗಳ ವರ್ತನೆಗಳನ್ನು ನಿಷ್ಠುರ ವಿಮರ್ಶೆ ಮತ್ತು ಟೀಕೆಗಳಿಗೆ ಒಡ್ಡಲು ನನಗೆ ಯಾವ ಅಡ್ಡಿಯನ್ನೂ ಉಂಟು ಮಾಡಿಲ್ಲದಿರುವುದನ್ನು ಓದುಗರು ಗಮನಿಸಬಹುದು. ನನ್ನ ಈ ದೃಷ್ಟಿ ಇಲ್ಲಿನ ಲೇಖನಗಳಿಗೂ ಒಂದು ಸಡಿಲವಾದದ್ದಾದರೂ ಸೂತ್ರಬದ್ಧತೆಯನ್ನು ಒದಗಿಸಿರುವುದನ್ನೂ ನೀವು ಗಮನಿಸಬಹುದು. ಇದೇ ಈ ಪುಸ್ತಕದ ಶೀರ್ಷಿಕೆಗೂ ಕಾರಣವಾಗಿರುವುದು. ಆದರೆ ಇತ್ತೀಚೆಗೆ-ಜಾಗತೀಕರಣದ ಹಿಂಸೆಯ ನೆಲೆಗಳು ಮತ್ತು ತೀವ್ರತೆ ಹೆಚ್ಚುತ್ತಿದ್ದಂತೆ-ನನ್ನ ಮನಸ್ಸು ಗಾಂಧಿ ಕಡೆಗೆ ಹೆಚ್ಚು ಒಲಿಯುತ್ತಿದೆ ಎಂಬುದನ್ನೂ ಇಲ್ಲಿ ಹೇಳಿಬಿಡಬೇಕು. ಅಂದರೆ ಗಾಂಧಿ ತತ್ವ ಚಿಂತನೆ ಮತ್ತು ರಾಜಕಾರಣದ ಹಿನ್ನೆಲೆಯಲ್ಲಿ ಇತರ ಮುವ್ವರನ್ನೂ ಗಮನಿಸುವುದೇ ಹೆಚ್ಚು ಸಾಧು ಮತ್ತು ಉಪಯುಕ್ತವೆಂದು ನನಗೆ ಅನ್ನಿಸತೊಡಗಿದೆ. ಕಾರಣ, ಇಂದಿನ ನಮ್ಮ ಎಲ್ಲ ಗೋಜಲು ಮತ್ತು ಗೋಳುಗಳಿಗೆ ಕಾರಣವಾಗಿರುವ ಆಧುನಿಕತೆ ಎಂಬ ಎಂಬ ಮಾಯಾಜಿಂಕೆಯನ್ನು ಮಾಯಾಜಿಂಕೆಯೆಂದು ಮೊದಲು ಗುರುತಿಸಿ, ಅದರ ಆಟ ಪಾಠಗಳ ವಿರುದ್ಧ ಎಚ್ಚರಿಸಿದವರು ಗಾಂಧಿ. ಅದನ್ನು ಇತ್ತೀಚಿನವರೆಗೆ ಅಷ್ಟು ಗಂಭೀರವಾಗಿ ಪರಿಗಣಿಸದ ನಾವು ಇಂದು ನಮ್ಮೆಲ್ಲ-ಬರೀ ರಾಜಕೀಯ ಅಲ್ಲ-ಬೌದ್ಧಿಕ ಚರ್ಚೆಗಳ ಕೇಂದ್ರವಾಗಿ ಚರ್ಚಿಸುತ್ತಿರುವುದಾದರೂ ಏನನ್ನು? ಇಂದು ಜಾಗತೀಕರಣವೆಂದು ಹೆಸರು ಪಡೆದು ನಮ್ಮ ಸುತ್ತ ಸುಳಿದಾಡುತ್ತಿರುವ ಈ ಕಾಂಚನ ಮೃಗವನ್ನು ಪಳಗಿಸುವ ಬಗೆಗಳನ್ನೇ ಅಲ್ಲವೇ? ಹಾಗೆ ಇದು ಮತ್ತೆ ರಾಜಕಾರಣ

ಧರ್ಮವಾಗುವ/ವಾಗಬೇಕಾದ ಸಂದರ್ಭ. ಈ ಪ್ರಕ್ರಿಯೆಯ ಸುಳಿವುಗಳು ನಿಮಗೆ ಈ ಲೇಖನಗಳಲ್ಲೆಲ್ಲಾದರೂ ಕಾಣಿಸಿಕೊಂಡರೆ ನನ್ನ ಪ್ರಯತ್ನ ಸಾರ್ಥಕ. ಇನ್ನೊಂದು ಮಾತು: ಕಳೆದ ಮುವ್ವತ್ತು ವರ್ಷಗಳಲ್ಲಿ ವಿವಿಧ ಸಂದರ್ಭಗಳಲ್ಲಿ, ವಿವಿಧ ವೇದಿಕೆಗಳ ಆಹ್ವಾನದ ಮೇರೆಗೆ ಬರೆದ ಲೇಖನ ಅಥವಾ ಆಡಿದ ಮಾತುಗಳ ಬರಹ ರೂಪಗಳಾದುದರಿಂದ ಹಲವು ವಿಷಯಗಳ ಪುನರಾವರ್ತನೆಯಾಗಿದ್ದರೆ ಕ್ಷಮಿಸಿರಿ ಮತ್ತು ಕೆಲವೆಡೆ ದೃಷ್ಟಿಕೋನಗಳ ಮತ್ತು ಅಭಿಪ್ರಾಯಗಳ ವ್ಯತ್ಯಾಸವಿದ್ದರೆ ಅದು ಕಾಲ ಸಹಜ ಬದಲಾವಣೆ ಅಥವಾ ಮಾಗುವಿಕೆಯೆಂದು ತಿಳಿಯಿರಿ ಎಂದು ಕೋರುವೆ.

ಈ ಸಂಗ್ರಹವನ್ನು ಪ್ರಕಟಿಸಲು ಮುಂದೆ ಬಂದಿರುವ ಗೀತಾಂಜಲಿ ಪುಸ್ತಕ ಪ್ರಕಾಶನದ ಕಿರಿಯ ಮಿತ್ರ ಜಿ.ಬಿ.ಟಿ. ಮೋಹನ್, ಮುಖಪುಟ ವಿನ್ಯಾಸ ಮಾಡಿದ ಅರುಣ್ ಕುಮಾರ್, ಪುಸ್ತಕ ವಿನ್ಯಾಸ ಮಾಡಿರುವ ಆರ್.ಎಸ್. ಶ್ರೀಧರ್ ಮತ್ತು ಪುಸ್ತಕವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟಿರುವ ಲಕ್ಷ್ಮಿ ಮುದ್ರಣಾಲಯದ ಸಿಬ್ಬಂದಿ ಮತ್ತು ಮಾಲೀಕರಿಗೆ ನನ್ನ ನಮನಗಳು ಸಲ್ಲುತ್ತವೆ.

೧೫.೩.೨೦೦೧೪ — **ಡಿ.ಎಸ್. ನಾಗಭೂಷಣ**

ಶಿವಮೊಗ್ಗ

ಪರಿವಿಡಿ

ಕನಸು, ಬಂಡಾಯಗಳ ನಾಯಕ: ಲೋಹಿಯಾ

"ಸತ್ಯ ಅನ್ನುವುದು ಅಖಂಡವಾದದ್ದು. ಅಲ್ಲದಿದ್ದರೆ ಅದು ಸತ್ಯ ಆಗಿರುವುದಿಲ್ಲ. ಖಂಡ ಸತ್ಯ ಅಥವಾ ಪಾರ್ಶ್ವಸತ್ಯ ಎನ್ನುವುದು ಅಭಿವ್ಯಕ್ತಿಯಲ್ಲಿನ ದೋಷವಷ್ಟೆ." ಈ ಮಾತುಗಳನ್ನಾಡಿದ ಡಾ॥ ರಾಮಮನೋಹರ ಲೋಹಿಯಾ ಅವರ ಬಗ್ಗೆ ಏನು ಬರೆದರೂ ಅದು ಖಂಡ ಸತ್ಯವೇ ಆಗಿರುತ್ತದೆ. ಏಕೆಂದರೆ ಸುತ್ತ ಹಬ್ಬುತ್ತಿದ್ದ ಯಾಂತ್ರಿಕ ಸಂಸ್ಕೃತಿಯ ನಡುವೆಯೂ ಸತ್ಯಾನ್ವೇಷಣೆಯನ್ನು ಒಂದು ವ್ಯಸನವನ್ನೇ ಮಾಡಿಕೊಂಡು ಹೋರಾಡಿ ಸತ್ತ ಚೇತನ ಈತ. ಇಂತಹ ಚೇತನದ ಬಗ್ಗೆ ಏನು ಹೇಳಹೋದರೂ ಅದು ಅಪೂರ್ಣವಾಗಿ ಉಳಿಯುತ್ತದೆ. ಆತ ರೂಪಿಸಿದ ಸಿದ್ಧಾಂತದಂತೆ, ನಡೆಸಿದ ಹೋರಾಟದಂತೆ, ಬಿಟ್ಟು ಹೋದ ಬದುಕಿನಂತೆ, ೧೯೬೭ರಲ್ಲಿ ತನ್ನ ೫೭ನೇ ವಯಸ್ಸಿನಲ್ಲಿ ಭಾರತದ ರಾಜಕಾರಣಕ್ಕೆ ಹೊಸದೊಂದು ಶಕ್ತಿ, ತೇಜಸ್ಸು ಹಾಗೂ ದಿಕ್ಕು ಕೊಡಬಲ್ಲಷ್ಟು ಹಿಡಿತ ಸಾಧಿಸಿದ್ದಾನೆ ಎನ್ನುವಷ್ಟರಲ್ಲೇ ಈತ ತನ್ನ ಸಮಾನತೆಯ ಹುಚ್ಚಿನಲ್ಲಿ, ತನ್ನ ಒಂದು ಸಣ್ಣ ಶಸ್ತ್ರಚಿಕಿತ್ಸೆಗಾಗಿ ಭಾರತದ ಸಾಮಾನ್ಯ ಪ್ರಜೆಗೆ ದೊರಕುವ ವೈದ್ಯಕೀಯ ಸೌಲಭ್ಯಗಳಿಗಿಂತ ಹೆಚ್ಚಿನ ವಿಶೇಷ ಸೌಲಭ್ಯ ಪಡೆಯುವುದು ಅನೀತಿಕರ ಎಂದು ಸರಕಾರಿ ಆಸ್ಪತ್ರೆಗೆ ಸೇರುವ ಹಠ ಮಾಡಿ ಅಸು ನೀಗಿದ. ಇದೇ ಇಂದು ರಾಷ್ಟ್ರದ ರಾಜಧಾನಿಯಲ್ಲಿ ಅತ್ಯಂತ ಸುಸಜ್ಜಿತ ಆಸ್ಪತ್ರೆಗಳಲ್ಲೊಂದಾಗಿ ಬೆಳೆದಿರುವ ಡಾ॥ ರಾಮಮನೋಹರ ಲೋಹಿಯಾ ಆಸ್ಪತ್ರೆ. ಈತನನ್ನು ಇವರ ಮಿತ್ರರು ಹಾಗೂ ಶತ್ರುಗಳು ಹಲವಾರು ಹೆಸರುಗಳಿಂದ ಕರೆದಿದ್ದಾರೆ. ಬಿರುದು ಬಾವಲಿಗಳಿಂದ ಅಲಂಕರಿಸಿದ್ದಾರೆ. 'ಅರೆಹುಚ್ಚ', 'ಅಧಿಕ ಪ್ರಸಂಗಿ', 'ಘೋಳೆ ಕನಸುಗಾರ', 'ನೆಹರೂ ದ್ವೇಷಿ', 'ಕೇಂದ್ರಹೀನ ದಾರ್ಶನಿಕ', 'ವಿಗ್ರಹ ಭಂಜಕ', 'ಬಂಡುಕೋರ', 'ವಿಚಾರ ದೈತ್ಯ', 'ಬುದ್ಧಿಭಾವಗಳ ಜ್ವಾಲಾಮುಖಿ' ಇತ್ಯಾದಿ ಇತ್ಯಾದಿ. ಭೋಲಾ ಚಟರ್ಜಿ ಎಂಬ ಬಂಗಾಳಿ ಗೆಳೆಯನ ಪ್ರಕಾರ ಲೋಹಿಯಾ, "ಸೂಯೆಜ್‌ನಿಂದ ಪೂರ್ವಕ್ಕೆ ಬಾಳಿದ; ಅರಿಸ್ಟಾಟಲ್‌ನ ಕಾವ್ಯ ಮೀಮಾಂಸೆ ಆಗಿರಲಿ, ಮಾರ್ಕ್ಸ್‌ನ ಬಂಡವಾಳಶಾಹಿ ವಿಶ್ಲೇಷಣೆಯೇ ಆಗಿರಲಿ, ಗಾಂಧೀಜಿಯ ಅಹಿಂಸೆ ಮತ್ತು ಸತ್ಯಾಗ್ರಹಗಳ ಪರಿಕಲ್ಪನೆಗಳೇ ಆಗಿರಲಿ ಅಥವಾ ಉಪನಿಷತ್ತುಗಳ ವ್ಯಾಖ್ಯಾನವೇ ಆಗಿರಲಿ, ಇವೆಲ್ಲವುಗಳ ಬಗ್ಗೆ ಕೇಳುವವರನ್ನು ಮೂಕವಿಸ್ಮಿತರನ್ನಾಗಿ ಮಾಡುವಷ್ಟು ಆಳವಾದ ಚರ್ಚೆ ನಡೆಸಬಲ್ಲಂತಹ ಜ್ಞಾನಕೋಶ ಸಮಾನವಾದದ್ದೆಂದು ಹೇಳಬಹುದಾದ ಬಹು ಆಯಾಮಗಳ ವ್ಯಕ್ತಿತ್ವದ ಕೊನೆಯ ಮೇಧಾವಿ." ಈ ವರ್ಣನೆ ಸ್ವಲ್ಪ ಹೆಚ್ಚಿರಬಹುದು ಅಥವಾ ಸ್ವಲ್ಪ ಕಡಿಮೆಯೂ ಇರಬಹುದು; ಆದರೆ ಲೋಹಿಯಾ ಎಂಬ ವ್ಯಕ್ತಿ, ಸ್ವಾತಂತ್ರ್ಯೋತ್ತರ ರಾಜಕಾರಣದಲ್ಲಿ ನಡೆಸಿದ ಪ್ರಯೋಗಗಳ ವಿವಿಧ ಆಯಾಮಗಳನ್ನು ಒಂದು ಒಟ್ಟಂದದಲ್ಲಿ ಗ್ರಹಿಸಬಲ್ಲವರಿಗೆ ಈ ವರ್ಣನೆ ಸುಳ್ಳು ಎನಿಸುವುದಿಲ್ಲ.

೧೯೧೦ರ ಮಾರ್ಚ್ ೨೩ ರಂದು ಈಗಿನ ಉತ್ತರ ಪ್ರದೇಶದ ಅಕ್ಬರ್‌ಪುರದಲ್ಲಿ ದೇಶಭಕ್ತ ಮಾರ್ವಾಡಿ ಕುಟುಂಬವೊಂದರಲ್ಲಿ ಜನಿಸಿದ ರಾಮಮನೋಹರ ಲೋಹಿಯಾ, ಕಲ್ಕತ್ತೆ, ಮುಂಬಯಿಗಳಲ್ಲಿ ಶಾಲಾ ಕಾಲೇಜು ವಿದ್ಯಾಭ್ಯಾಸ ಮುಗಿಸಿ, ಬ್ರಿಟನ್ ಆಳುವವರ ದೇಶವೆಂದು, ಅದು ಬಿಟ್ಟು ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಿಂದ 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ಒಂದು ಸಂಪ್ರಬಂಧಕ್ಕಾಗಿ ಡಾಕ್ಟರೇಟ್ ಪಡೆದು ಭಾರತಕ್ಕೆ ಹಿಂದಿರುಗಿದಾಗ ಅವರಿಗೆ ೨೨ ವರ್ಷ. ತಂದೆಯ ಮೂಲಕ ಗಾಂಧೀಜಿಯ ದಟ್ಟ ಪ್ರಭಾವಕ್ಕೆ ಒಳಗಾಗಿದ್ದ ಅವರು, ವಸಾಹತುಶಾಹಿಯ ನೌಕರಿ ನಿರಾಕರಿಸಿ ಕಾಂಗ್ರೆಸ್ ಆಂದೋಲನ ಸೇರಿದರು. ೧೯೩೪ರಲ್ಲಿ ಕಾಂಗ್ರೆಸ್‌ನೊಳಗೇ ಸಮಾಜವಾದಿ ಕೂಟ ರಚಿಸಿದ ಪ್ರಮುಖರಲ್ಲಿ ಇವರೊಬ್ಬರು. ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಭೂಗತ ಚಟುವಟಿಕೆಗಳ ಸೂತ್ರಧಾರರಲ್ಲೊಬ್ಬರಾಗಿದ್ದ ಲೋಹಿಯಾ, ಭಾರತದ ವಿಭಜನೆಯನ್ನು ಕಾಂಗ್ರೆಸ್ ಕಾರ್ಯಕಾರಣಿಯ ನಿರ್ಣಾಯಕ ಸಭೆಯಲ್ಲಿ ವಿರೋಧಿಸಿದ ಕೆಲವೇ ಕೆಲವರಲ್ಲಿ ಒಬ್ಬರು. ಹಾಗೆ ಭಾರತದ ವಿಭಜನೆಯ ದುರಂತ ರಾಜಕೀಯ ನಾಟಕವನ್ನು ಗಾಂಧೀಜಿ ಜೊತೆಯಲ್ಲಿದ್ದುಕೊಂಡು ಹತ್ತಿರದಿಂದ ಕಂಡವರು. 'ಭಾರತದ ವಿಭಜನೆಯ ತಪ್ಪಿತಸ್ಥರು' (Guilty men of India's Partition) ಎಂಬ ಅವರ ಪುಸ್ತಕ ಈ ದುರಂತ ನಾಟಕನ್ನು ತೀಕ್ಷ್ಣವಾದ ವಿಮರ್ಶೆಗೆ ಒಳಪಡಿಸುತ್ತದಲ್ಲದೆ, ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ವಿಕೃತಿಗಳ ಬೇರುಗಳನ್ನು ಅಧಿಕಾರ ಹಿಡಿದವರ ಚಾರಿತ್ರ್ಯದ ಹಿನ್ನೆಲೆಯಲ್ಲಿ ಹುಡುಕಲು ಹವಣಿಸುತ್ತದೆ.

ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ನೊಳಗಿನ ಒತ್ತಡದಿಂದಾಗಿ ಸಮಾಜವಾದಿ ಗುಂಪು ಹೊರಬರಬೇಕಾಗಿ ಬಂದಾಗ ರೂಪುಗೊಂಡ ಸಮಾಜವಾದಿ ಪಕ್ಷಕ್ಕೆ ಆಚಾರ್ಯ ನರೇಂದ್ರ ದೇವ ಹಾಗೂ ಜಯಪ್ರಕಾಶ್ ನಾರಾಯಣ್ ಅವರೊಂದಿಗೆ ಒಂದು ನಿರ್ದಿಷ್ಟ ಸಿದ್ಧಾಂತ, ಸಂಘಟನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಲೋಹಿಯಾ. ೧೯೫೨ರ ಚುನಾವಣೆಗಳಲ್ಲಿ ಅನುಭವಿಸಿದ ಭಾರೀ ಸೋಲಿನ ನಂತರ ಪಂಚಮಡಿ ಎಂಬಲ್ಲಿ ದಿಗ್ಭ್ರಮೆ ಹಾಗೂ ಹತಾಶೆಗಳೊಂದಿಗೆ ಸಮಾವೇಶಗೊಂಡ ಸಮಾಜವಾದಿ ಪಕ್ಷಕ್ಕೆ ತಮ್ಮ ನವನವೀನ ಆಲೋಚನಾ ಲಹರಿಯ ಅಧ್ಯಕ್ಷ ಭಾಷಣದ ಮೂಲಕ ಹೊಸಶಕ್ತಿ ಹಾಗೂ ದಿಕ್ಕು ನೀಡಿದವರು ಡಾ॥ ಲೋಹಿಯಾ. 'ಸಮಾಜವಾದದ ತಾತ್ವಿಕ ಅಡಿಗಲ್ಲುಗಳು' (Doctrinal foundations of Socialism) ಎಂಬ ಶೀರ್ಷಿಕೆಯ ಈ ವಿಚಾರಧಾರೆ, ಇಂದಿಗೂ ಭಾರತೀಯ ಸಮಾಜವಾದವೆಂಬುದೇನಾದರೂ ಇದ್ದರೆ, ಅದರ ಬೆನ್ನೆಲುಬಾಗಿ ಉಳಿದಿದೆ.

ಲೋಹಿಯಾ ಅವರ ವ್ಯಕ್ತಿತ್ವವನ್ನು ಅದರಿಂದ ಒಡಮೂಡಿದ ವಿಚಾರಗಳನ್ನೂ ಅದರದೇ ಆದ ಸೃಜನಶೀಲ ನೆಲೆಯಲ್ಲಿ ಅರ್ಥೈಸಿಕೊಳ್ಳಲು, ಈ ವ್ಯಕ್ತಿತ್ವ ಎರಕಗೊಂಡ ಹಿನ್ನೆಲೆಯನ್ನೂ ಗಮನಿಸಬೇಕಾಗುತ್ತದೆ. ತಾಯಿ ಇಲ್ಲದ ತಬ್ಬಲಿಯಾಗಿ, ಗಾಂಧಿ ಬಳಿ ಇರುತ್ತಿದ್ದ ತಂದೆಯಿಂದ ದೂರಾಗಿ ಮನೆಯಲ್ಲಿ ಒಬ್ಬಂಟಿಯಾಗಿ, ನೆರೆಯ ಅಯೋಧ್ಯೆ ಹಾಗೂ ಮಥುರಾಗಳಿಂದ ಹೊಮ್ಮುತ್ತಿದ್ದ ರಾಮ ಹಾಗೂ ಕೃಷ್ಣರ ಕಥ-ಉಪಕಥಾನಕಗಳ ನಡುವ ಬಾಲ್ಯವನ್ನೂ, ವೇದೋಪನಿಷತ್ತುಗಳ ಪುನರುದ್ದೀಪನದ ಮೂಲಕ ವಿಕಾಸಗೊಂಡ

ವಂಗ ನವೋದಯದ ಕೇಂದ್ರ ಕಲ್ಕತ್ತದಲ್ಲಿ ಹದಿಹರೆಯವನ್ನೂ, ಜಗತ್ತಿನ ಮುಖವನ್ನೇ ಬದಲಿಸಲಿದ್ದ ಎರಡು ಮಹಾಯುದ್ಧಗಳ ಪೈಕಿ ಮೊದಲನೆಯದರ ಕಾರ್ಮೋಡಗಳು ಕವಿಯುತ್ತಿದ್ದ ಯೂರೋಪ್‌ನಲ್ಲಿ ಹರೆಯದಾರಂಭವನ್ನೂ ಕಳೆದ ಲೋಹಿಯಾ, ಸ್ವತಂತ್ರ ವಿಚಾರ ಮಥನದ ಶಕ್ತಿ ರೂಢಿಸಿಕೊಳ್ಳುವ ವೇಳೆಗೆ, ತಾರಕ ಘಟ್ಟವನ್ನು ಮುಟ್ಟುತ್ತಿದ್ದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿದ್ದ ಹಿರಿಯ ಚೇತನಗಳ ಮಧ್ಯೆ ಇದ್ದರು. ಗಾಂಧೀಜಿಯ ವ್ಯಕ್ತಿತ್ವ ತನ್ನೆಲ್ಲಾ ಪ್ರಯೋಗಶೀಲತೆಯ ಹಂತಗಳನ್ನು ದಾಟಿ ಒಂದು ಒಟ್ಟಂದವನ್ನು ರೂಪಿಸಿಕೊಳ್ಳುತ್ತಿದ್ದ ಉತ್ಕಟ ಕ್ಷಣಗಳ ಕಾಲವದು. ಈ ಉತ್ಕಟ ಕ್ಷಣಗಳು ಊದುತ್ತಿದ್ದ ವಿಚಾರ ಸಂಘರ್ಷದ ಕುಲುಮೆಯಲ್ಲಿ ಪುಟಗೊಂಡ ಲೋಹಿಯಾ ವ್ಯಕ್ತಿತ್ವದ ಸ್ಥಿರಭಿತ್ತಿ 'ವ್ಯವಸ್ಥಾ ಅವಿಧೇಯತೆ'(Non confirmism)ಯೇ ಆಯಿತು. ಗಾಂಧೀಜಿ ಕೂಡಾ ಅಂತಿಮ ದರ್ಶನದಲ್ಲಿ ಸ್ಫಟಿಕಶುದ್ಧ ಅರಾಜಕತಾವಾದಿ ತಾನೇ?

ಮನುಷ್ಯ ತನ್ನೆಲ್ಲಾ ಸೃಜನಶೀಲತೆಯೊಂದಿಗೆ ಸಮೃದ್ಧವಾಗಿ ಪ್ರಕಟಗೊಳ್ಳುವ ಘಳಿಗೆಯೇ ಬದುಕಿನ ಶುಭ ಘಳಿಗೆ. ಅದೇ ಎಲ್ಲ ನೋವು, ದುಃಖ, ನಿರಾಶೆ, ಭಯ, ಕ್ರೋಧಗಳಿಂದ ಬದುಕು ಬಿಡುಗಡೆಗೊಳ್ಳುವ ಕ್ಷಣ ಕೂಡ. ಇಂತಹ ಬಿಡುಗಡೆಯ, ವಿಮೋಚನೆಯ ಕನಸು ಕಂಡವರು ಲೋಹಿಯಾ. 'ಪ್ರಭುತ್ವ'ವಿದ್ದೆಡೆ ಭಯ ಇರುತ್ತದೆ. ಈ ಭಯವೇ ವ್ಯಕ್ತಿಯ ಎಲ್ಲ ವಿಕೃತಿಗಳಿಗೂ ಮೂಲಕಾರಣ. ಆದುದರಿಂದ ಈ ಭಯದ ಬೀಜವಿರದ 'ಪ್ರಭುತ್ವ'ವನ್ನು ಸ್ಥಾಪಿಸುವುದೇ ಲೋಹಿಯಾ ಅವರ ಸಿದ್ಧಾಂತ ಹಾಗೂ ಹೋರಾಟಗಳ ಮೂಲಪ್ರೇರಣೆಯಾಗಿತ್ತು.

ಲೋಹಿಯಾ ಕಂಡ ಜಗತ್ತು ಬಂಡವಾಳಶಾಹಿ ಹಾಗೂ ಕಮ್ಯೂನಿಸ್ಟ್ ಎಂಬ ಎರಡು ಶಕ್ತಿ ಪಾಳೆಯಗಳು ತಮ್ಮ ಪ್ರಭಾವ ವಲಯಗಳನ್ನು ವಿಸ್ತರಿಸಿಕೊಳ್ಳಲು ಎದುರು ಬದುರಾಗಿ ನಿಂತ ರಣರಂಗವಾಗಿತ್ತು. ವಸಾಹತುಶಾಹಿಯ ಫಲವಾದ ಬಂಡವಾಳದ ಕ್ರೋಢೀಕರಣ ಪ್ರೇರೇಪಿಸಿದ ವೈಜ್ಞಾನಿಕ ಅನ್ವೇಷಣೆಗಳ ಅನ್ವಯದಿಂದ ಹುಟ್ಟಿದ ಆಧುನಿಕ ತಂತ್ರಜ್ಞಾನದ ಮುಖೇನ ಬೃಹತ್ ಉತ್ಪಾದನಾ ಸಾಮರ್ಥ್ಯ ಸಾಧ್ಯವಾಯಿತು. ಇದರ ಮೂಲಕ ಸಾಧಿಸಬಹುದಾದ ಭೌತಿಕ ಸಮೃದ್ಧಿ, ಮನುಷ್ಯನನ್ನು ಎಲ್ಲ ಬವಣೆಗಳಿಂದ ಮುಕ್ತಗೊಳಿಸಿ ಆಧ್ಯಾತ್ಮಿಕಗೊಳಿಸುವುದು ಎಂಬ ಮೂಲನಂಬಿಕೆಯನ್ನು ಆಧರಿಸಿದ ಈ ಎರಡೂ 'ವ್ಯವಸ್ಥೆ'ಗಳು, ಮನುಷ್ಯನನ್ನು 'ಭಯ'ದಿಂದ ಬಿಡುಗಡೆಗೊಳಿಸಲು ವಿಫಲಗೊಂಡಿದ್ದವು. ಅಷ್ಟೇ ಅಲ್ಲ, ಇವು ತಮ್ಮೊಳಗಿನ ತಾತ್ವಿಕ ಹಾಗೂ ಸಾಂಸ್ಥಿಕ ವಿರೋಧಾಭಾಸಗಳಿಂದಾಗಿ ಮನುಷ್ಯನನ್ನು 'ಭಯ'ದಿಂದ ಬಿಡುಗಡೆಗೊಳಿಸುವುದಿರಲಿ, ಆತನನ್ನು 'ಭಯ'ವೂ ಅನುಭವಕ್ಕೆ ಬಾರದಂತಹ 'ಜಡತೆ'ಗೆ ದೂಡುವ ವ್ಯವಸ್ಥೆಯ ಪ್ರತೀಕಗಳಾಗಿದ್ದವು. ಬಂಡವಾಳಶಾಹಿಯು ಮುಕ್ತ ಪೈಪೋಟಿಯನ್ನು ಪ್ರತಿಪಾದಿಸುತ್ತಾ, ಜಗತ್ತಿನ ಒಂದು ಭಾಗದ ಮನುಷ್ಯನನ್ನು ಸಮೃದ್ಧಿಯ ಆಯಾಸದಿಂದ ಹುಟ್ಟುವ ಪಾರಮಾರ್ಥಿಕ ಭಯಕ್ಕೂ, ಈ ಸಮೃದ್ಧಿಗಾಗಿ ಕೊಳ್ಳೆ ಹೊಡೆಯಲ್ಪಟ್ಟ ಜಗತ್ತಿನ ಇನ್ನೊಂದು ಭಾಗದ ಮನುಷ್ಯನನ್ನು ಬಡತನದ ಭಯಾನಕತೆಯಿಂದ ಹುಟ್ಟುವ ಲೌಕಿಕ ಭಯಕ್ಕೂ ದೂಡಿದ್ದರೆ; ಕಮ್ಯೂನಿಸಂ ಸಮಾನತೆಯನ್ನು ಪ್ರತಿಪಾದಿಸುತ್ತಾ, ಇಡೀ ಜಗತ್ತನ್ನೇ 'ಜಾಗತಿಕ

ಕಾರ್ಮಿಕ ಕ್ರಾಂತಿ' ಎಂಬ ಧರ್ಮಯುದ್ಧದ ಮೂಲಕ ಒಂದು ಸರ್ವಾಧಿಕಾರಿ 'ಮಹಾಪ್ರಭುತ್ವ' ವನ್ನು ಕಟ್ಟುವ ರಾಕ್ಷಸ ಭಯವನ್ನು ಹುಟ್ಟು ಹಾಕಿತ್ತು.

ಈ ಎರಡೂ, ಮಿತಿ ಇಲ್ಲದ ಸುಖದ ಮಾಯಾಮೃಗವನ್ನು ಬೆನ್ನಟ್ಟ ಬಯಸುವ ಆಕ್ರಮಣಶೀಲ ನಾಗರಿಕತೆ ರೂಪಿಸಿದ ಮನಸ್ಸಿನ ಎರಡು ಅಭಿವ್ಯಕ್ತಿ ರೂಪಗಳಷ್ಟೇ ಎಂದು ಹೇಳುವ ಲೋಹಿಯಾ, ಹೊಸದಾಗಿ ವಿಮೋಚನೆಗೊಂಡ ಶೋಷಿತ ರಾಷ್ಟ್ರಗಳು; ಸದ್ಯಕ್ಕೆ ಈ ಎರಡೂ ಪಾಳೆಯಗಳಲ್ಲಿನ ಸಮಾಜಗಳು ತಮ್ಮ ಆಂತರಿಕ ವಿರೋಧಾಭಾಸಗಳಿಂದಲೇ ಕುಸಿದಾಗ ಆರಿಸಿಕೊಳ್ಳಲೇಬೇಕಾದ ಸತ್ಯ, ಸಮತೆ ಮತ್ತು ಸೌಂದರ್ಯಗಳನ್ನಾಧರಿಸಿದ ಹೊಸ ನಾಗರಿಕತೆಯೊಂದನ್ನು ಸಲಹುವ 'ಪ್ರಭುತ್ವ'ವನ್ನು ರೂಪಿಸಿಕೊಳ್ಳಬೇಕು ಎನ್ನುತ್ತಾರೆ. ಏಕೆಂದರೆ ಸೌಂದರ್ಯದ ಮೇಲೆ ಕಣ್ಣಿಟ್ಟಿರುವ ಬಂಡವಾಳಶಾಹಿ ನಾಗರಿಕತೆಗೆ, ಸತ್ಯ ಮತ್ತು ಸಮತೆಗಳ ನೋಟಗಳು ಬೆರೆಯದ ಸೌಂದರ್ಯ ಅಶ್ಲೀಲವಾಗುವುದು ಎಂಬ ಪರಿವೆ ಇಲ್ಲ; ಹಾಗೆಯೇ ಸಮತೆಯ ಮೇಲೆ ಕಣ್ಣಿಟ್ಟಿರುವ ಕಮ್ಯೂನಿಸ್ಟ್ ನಾಗರಿಕತೆಗೆ, ಸತ್ಯ ಮತ್ತು ಸೌಂದರ್ಯಗಳ ನೋಟಗಳು ಬೆರೆಯದ ಸಮತೆ ವಿಷಮವಾಗುವುದು ಎಂಬ ಪರಿವೆ ಇಲ್ಲ ಎಂಬುದು ಲೋಹಿಯಾ ಅವರ ತಾತ್ವಿಕ ದರ್ಶನದ ಮುಖ್ಯ ಧ್ವನಿ.

ಸತ್ಯ, ಸಮತೆ ಮತ್ತು ಸೌಂದರ್ಯ – ಈ ಮೂರು ಕಾಳಜಿಗಳೂ ಏಕೀಭವಿಸಿಕೊಂಡ ಹೊಸ ನಾಗರಿಕತೆಯ ನಿರ್ಮಾಣದ ನೇತೃತ್ವವನ್ನು ಭಾರತ ವಹಿಸಬಹುದಾಗಿದೆ ಎಂಬುದು ಲೋಹಿಯಾ ಅವರ ನಂಬಿಕೆಯಾಗಿತ್ತು. ಏಕೆಂದರೆ ಇಂತಹ ನಾಗರಿಕತೆಯೊಂದರ ಹೊಳಹು ನೀಡಿದ್ದ ಗಾಂಧೀಜಿ ಎಂಬ ಘನ ವ್ಯಕ್ತಿತ್ವವನ್ನು ಭಾರತ ಜಗತ್ತಿಗೆ ನೀಡಿತ್ತು. ಹೀಗಾಗಿ ತಮ್ಮ ತಾತ್ವಿಕ ದರ್ಶನದ ಅನುಷ್ಠಾನಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಲೋಹಿಯಾ ಬಳಸುವುದು ಗಾಂಧೀಜಿಯ ಒಳನೋಟಗಳನ್ನೇ. ಗಾಂಧೀಜಿಯ ಗುರಿ ಎನ್ನುವುದು ತಲುಪುವುದಲ್ಲ, ಆಗುವುದು ಎಂಬ ನಂಬಿಕೆಯಲ್ಲಿನ ಸತ್ಯ ನಿಷ್ಠುರತೆಯನ್ನೂ, ಮೇಲ್ಜಾತಿಯವನಾಗಿ ಹುಟ್ಟಿದುದರ ಪಾಪ ತೊಳೆದುಕೊಳ್ಳಲು ಅಸ್ಪೃಶ್ಯನಾಗಿ ಪುನರ್ಜನ್ಮ ಪಡೆಯುವ ಇಚ್ಛೆಯಲ್ಲಿನ ಸಮತೆಯ ಹಂಬಲವನ್ನೂ, ಯಂತ್ರ ಮನುಷ್ಯನನ್ನು ಹೃದಯಹೀನನನ್ನಾಗಿ ಮಾಡುವುದು ಎಂಬ ಕಾಣ್ಕೆಯಲ್ಲಿನ ಸೌಂದರ್ಯ ದೃಷ್ಟಿಯನ್ನೂ, ಲೋಹಿಯಾ ಗುರುತಿಸಿದ್ದರು. ಈ ಒಳನೋಟಗಳೇ ಮುಂದೆ ಲೋಹಿಯಾ ಪ್ರತಿಪಾದಿಸಿದ ಭಾರತೀಯ ಸಮಾಜವಾದದ ಮೂರು ಮುಖ್ಯ ಅಡಿಗಲ್ಲುಗಳಾದ ನಿರಂತರ ನಾಗರಿಕ ಅಸಹಕಾರ ಸತ್ಯಾಗ್ರಹ ಆಂದೋಲನ, ಜಾತಿವಿನಾಶ ಆಂದೋಲನ ಹಾಗೂ ಸಣ್ಣ ಘಟಕ ತಂತ್ರಜ್ಞಾನ (Small unit technology) ಆಂದೋಲನಗಳಿಗೆ ಪ್ರೇರಣೆ ಒದಗಿಸಿದ್ದು.

"ನಾಗರಿಕ ಅಸಹಕಾರ ಸತ್ಯಾಗ್ರಹಿಗೆ ಚರಿತ್ರೆಯ ಪಾಠ ಗೊತ್ತಿದೆ. ಕ್ರೂರಿಗಳು ಬದುಕುವುದು ಹೇಡಿಗಳಿರುವೆಡೆಗಳಲ್ಲಿ ಮಾತ್ರ ಎಂಬುದು ಗೊತ್ತಿದೆ. ಜಗತ್ತಿನ ಜನತೆ ೯೯ ವರ್ಷಗಳ ಸಾಧು ಗೋವುಗಳ ಬದುಕು ಹಾಗೂ ನಂತರದ ಒಂದು ವರ್ಷದ ಹುಲಿಯ ಬದುಕಿನ ನಡುವೆ ತುಯ್ದಾಡುತ್ತದೆ ಎಂಬುದು ಗೊತ್ತಿದೆ. ದೀರ್ಘ ಹಾಗೂ ನಿಸ್ಸಹಾಯಕ ಶರಣಾಗತಿಯ ನಂತರ ಅದು ಸಿಡಿದೆದ್ದು ನಿಲ್ಲುತ್ತದೆ, ಕ್ರೂರ ವ್ಯವಸ್ಥೆಯೊಂದನ್ನು ಹೊಡೆದುರುಳಿಸಿ ಮತ್ತೊಂದು ಕ್ರೂರ ವ್ಯವಸ್ಥೆಯನ್ನು ಕಟ್ಟಲು....ಎಂಬುದು ಗೊತ್ತಿದೆ" ಎನ್ನುವ ಲೋಹಿಯಾಗೆ ತಾವು ಪ್ರತಿಪಾದಿಸಿದ್ದ ಸಮಾಜವಾದವೂ ಸೇರಿದಂತೆ ಎಲ್ಲ

ವ್ಯವಸ್ಥೆಗಳೂ ಅಧಿಕಾರದ ಅಮಲಿಗೆ ಒಳಗಾಗಿ ಕ್ರೂರವಾಗಬಲ್ಲವು ಎನ್ನುವುದು ಗೊತ್ತಿತ್ತು. ಅದಕ್ಕೇ ಅವರು 'ಪ್ರಭುತ್ವ'ದ ದಮನಕಾರಿ ಪ್ರವೃತ್ತಿಗಳ ವಿರುದ್ಧ ಸದಾ ಎಚ್ಚರದಿಂದ ಇರುವ ನಾಗರಿಕ ಅಸಹಕಾರ ಸತ್ಯಾಗ್ರಹ ಆಂದೋಲನವನ್ನು ಸಮಾಜವಾದಿ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವನ್ನಾಗಿ ಮಾಡಲು ಯತ್ನಿಸಿದ್ದು. ಈ ಪ್ರಯತ್ನದಲ್ಲಿ ಅವರು ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಲ್ಲಿ ಯಾರೂ ಕಳೆದಿರದಷ್ಟು ದೀರ್ಘ ಅವಧಿಗಳನ್ನು ಸೆರೆಮನೆಗಳಲ್ಲಿ ಕಳೆಯಬೇಕಾಯಿತು. ಭೂ ಚಳುವಳಿ, ಕಾರ್ಮಿಕ ಚಳುವಳಿ, ಹಿಂದುಳಿದ ಜಾತಿ ಚಳುವಳಿ, ಸ್ತ್ರೀ ವಿಮೋಚನಾ ಚಳುವಳಿ, ಇಂಗ್ಲಿಷ್ ತೊಲಗಿಸಿ ಚಳುವಳಿ, ಗೋವಾ ವಿಮುಕ್ತಿ ಚಳುವಳಿ, ನೇಪಾಳದ ಪ್ರಜಾಪ್ರಭುತ್ವ ಚಳುವಳಿಗಳಲ್ಲದೆ, ಅಮೆರಿಕಾ, ಬ್ರಿಟನ್, ಪೋರ್ಚುಗಲ್ ದೇಶಗಳಲ್ಲೂ ಅನ್ಯಾಯದ ವಿರುದ್ಧ ಪ್ರತಿಭಟಿಸಿ ದಸ್ತಗಿರಿಗೆ ಒಳಗಾದರು. ಅಮೆರಿಕದ ಒಂದು ನಗರದಲ್ಲಿ ಅವರು ಬಿಳಿಯರಿಗಲ್ಲದೆ ಬೇರೆಯವರಿಗೆ ಪ್ರವೇಶವಿಲ್ಲದಿದ್ದ ಉಪಾಹಾರ ಗೃಹವನ್ನು ಪ್ರವೇಶಿಸಿ ದಸ್ತಗಿರಿಯಾಗಿ ಆ ದೇಶದ ಸರ್ಕಾರ ಕ್ಷಮಾಪಣೆ ಕೇಳುವಂತಹ ಪರಿಸ್ಥಿತಿಯನ್ನು ನಿರ್ಮಿಸಿದ್ದರು. ತಾವು ಪ್ರತಿಪಾದಿಸಿದ ಭಾರತೀಯ ಸಮಾಜವಾದದ ವಿಸ್ತರಣೆ(Projection)ಯಾಗಿ ರೂಪಿಸಿದ್ದ ವಿಶ್ವಸರ್ಕಾರ ಕಲ್ಪನೆಗೆ ಒಂದು ಸಾಂಕೇತಿಕ ಅರ್ಥ ಕೊಡಲು ಅವರು ರಂಗೂನ್‌ನಲ್ಲಿ ನಡೆದ ಏಷ್ಯಾದ ಸಮಾಜವಾದಿ ಸಮ್ಮೇಳನಕ್ಕೆ ಪಾಸ್‌ಪೋರ್ಟ್ ಇಲ್ಲದೆ ಪ್ರಯಾಣ ಬೆಳೆಸಿ ಯಶಸ್ವಿಯಾದರು. ಬದಲಾವಣೆಯ ಪ್ರಮುಖ ಮತ್ತು ಏಕೈಕ ಅಸ್ತ್ರ, ನಾಗರಿಕ ಅಸಹಕಾರ ಸತ್ಯಾಗ್ರಹ ಎಂಬುದು ಅವರ ದೃಢ ನಂಬಿಕೆಯಾಗಿತ್ತು.

ಲೋಹಿಯಾ ಪ್ರಕಾರ, ಭಾರತ ಅಲ್ಲೊಂದು ಇಲ್ಲೊಂದು ತಾವರೆಗಳು ಅರಳಿಕೊಂಡಿರುವ ಕೊಚ್ಚೆಯಾದ ಕೊಳವಿದ್ದಂತೆ. ನಾವು ಆಚರಿಸುವ ಲಿಂಗಭೇದ ಹಾಗೂ ಜಾತಿಭೇದಗಳೇ ಈ ಕೊಳವನ್ನು ಕೊಚ್ಚೆಯಾಗಿಸಿರುವುದು. ಜಾತಿ ಎಂದೋ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡು ಜಡವಾಗಿರುವ ವರ್ಗವಾಗಿದ್ದು, ಅದು ಸಮಾಜದ ಸಮಗ್ರ ಸಾಮರ್ಥ್ಯ ತನ್ನೆಲ್ಲಾ ಸೃಜನಶೀಲ ಶಕ್ತಿಯನ್ನು ಪ್ರಕಟಿಸುವ ಸಾಧ್ಯತೆಯನ್ನೇ ಇಲ್ಲವಾಗಿಸಿದೆ. ಜಾತಿ ಪದ್ಧತಿ ಇಂದು ಕೇವಲ ಧಾರ್ಮಿಕ ಮಾನ್ಯತೆಯಿಂದಷ್ಟೇ ಉಸಿರಾಡಿಕೊಂಡು ಬಿದ್ದಿದೆ. ಆದರೆ ಇಂತಹ ಅಸಂಬದ್ಧ ಜಾತಿ ವ್ಯವಸ್ಥೆಯನ್ನು ಇನ್ನೂ ಮಾನ್ಯ ಮಾಡಿಕೊಂಡಿರುವ ಧರ್ಮ ತನ್ನೆಲ್ಲಾ ಆಧ್ಯಾತ್ಮಿಕತೆಯನ್ನೂ ಕಳೆದುಕೊಂಡಿದೆ. ಈ ವಿಷವೃತ್ತದಿಂದ ಭಾರತೀಯ ಹೊರಬರದ ಹೊರತು ಅವನಿಗೆ ಭವಿಷ್ಯವಿಲ್ಲ. ಜಾತಿ ವ್ಯವಸ್ಥೆಯಿಂದಾಗಿ ಅರ್ಧ ಸತ್ತಿರುವ ಬ್ರಾಹ್ಮಣ ಹಾಗೂ ಅರ್ಧ ಸತ್ತಿರುವ ಶೂದ್ರ (ಮತ್ತು ಹೆಣ್ಣು) ಪರಸ್ಪರ ವಿಮೋಚನೆಗೊಳಿಸಿಕೊಳ್ಳಲು, ಐತಿಹಾಸಿಕವಾಗಿ ಜಾತಿ ದಮನಕ್ಕೊಳಗಾದ ಸಮುದಾಯಗಳಿಗೆ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ವಿಶೇಷ ಪ್ರಾಶಸ್ತ್ಯ (Preferential treatment) ಕೊಡುವ ಮೂಲಕ ಹಾಗೂ 'ಅಂತರ್ಧರ್ಮೀಯ ಮತ್ತು ಅಂತರ್ಜಾತೀಯ' ವಿವಾಹಗಳಿಗೆ ಪ್ರೋತ್ಸಾಹ ಕೊಡುವ ಮೂಲಕ ಅನುವಾಗಬೇಕು. ಹಾಗೆಯೇ ಧರ್ಮವೂ ತನ್ನ ಮನಸ್ಸಿನ ಮೇಲೆ ಶತ ಶತಮಾನಗಳಿಂದ ರಾಶಿ ಹಾಕಿಕೊಂಡಿರುವ ಧೂಳನ್ನು ಗುಡಿಸಿಕೊಂಡು ಹೊಸ ಅನುಭಾವಿಕ ಎತ್ತರಗಳನ್ನು ಮುಟ್ಟಲು ವರ್ತಮಾನದ ಘಳಿಗೆಗಳಿಂದಲೇ ಮತ್ತೆ ಆಧ್ಯಾತ್ಮಿಕ ಶಕ್ತಿ ಸಂಚಯ ಮಾಡಿಕೊಳ್ಳಬೇಕು ಎನ್ನುವುದು ಲೋಹಿಯಾ ಅವರ ಒಟ್ಟು

ಸಾಮಾಜಿಕ ದೃಷ್ಟಿಕೋನವಾಗಿತ್ತು. ಹಿಂದೂಯೇತರರನ್ನು ಹೊರಗಿನವರು ಎಂದು ಗುಮಾನಿಪಡುವುದು ಹಿಂದೂ ಮನಸ್ಸಿನ ಅನಾರೋಗ್ಯಕರ ಲಕ್ಷಣ ಎಂದು ಗುರುತಿಸುವ ಲೋಹಿಯಾ; ಬಾಬರ್ ಹೊರಗಿನವನಿರಬಹುದು, ಆದರೆ ಅಕ್ಬರ್ ನಮ್ಮವನೇ ಎಂಬ ಐತಿಹಾಸಿಕ ಸತ್ಯವನ್ನು ಅರಗಿಸಿಕೊಳ್ಳುವ ಪ್ರಬುದ್ಧತೆ ಭಾರತೀಯ ಮನಸ್ಸಿಗೆ ಬರುವ ತನಕ ಅದಕ್ಕೆ ನೆಮ್ಮದಿ ಇಲ್ಲ ಎನ್ನುತ್ತಾರೆ.

"ಮೂಲಭೂತ ಸಮಸ್ಯೆ ಆಸ್ತಿಯದ್ದು. ಆಸ್ತಿ ಎರಡು ರೂಪಗಳಲ್ಲಿ ಕಾಡುತ್ತದೆ; ಆಸೆಯ ರೂಪದಲ್ಲಿ ಮತ್ತು ವ್ಯವಸ್ಥೆಯ ರೂಪದಲ್ಲಿ. ಆಸ್ತಿಯ ಆಸೆಯ ರೂಪಕ್ಕೆ ಸಂಬಂಧಪಟ್ಟ ಸಮಸ್ಯೆಗೆ ಉಪನಿಷತ್ತುಗಳು ಪರಿಹಾರ ಸೂಚಿಸುತ್ತವೆ. ವ್ಯವಸ್ಥೆಯ ರೂಪಕ್ಕೆ ಸಂಬಂಧಪಟ್ಟ ಸಮಸ್ಯೆಗೆ ಮಾರ್ಕ್ಸ್‌ವಾದ ಪರಿಹಾರ ಸೂಚಿಸುತ್ತದೆ. ಆದರೆ ನಮಗೀಗ ಬೇಕಾಗಿರುವುದು ಈ ಎರಡೂ ರೂಪಗಳನ್ನು ಎದುರಿಸುವಂತಹ ಒಂದು ಸಂಯೋಜಿತ ರಾಜಕೀಯ ತತ್ವಜ್ಞಾನ. ನನ್ನ ಪ್ರತಿಪಾದನೆ ಆಸ್ತಿಯ ಸ್ಥಿತಿಜ್ಞಾನವನ್ನೇ ಬದಲಿಸುವ ಗುರಿ ಹೊಂದಿದೆ" ಎನ್ನುವ ಲೋಹಿಯಾ ಪ್ರತಿಪಾದಿಸುವುದು ಪ್ರತಿ ಕುಟುಂಬಕ್ಕೂ ಹೊರಗಿನ ಕಾರ್ಮಿಕ ಶಕ್ತಿಯಿಲ್ಲದೆ ನಿಭಾಯಿಸಬಲ್ಲಷ್ಟು ಆಸ್ತಿಯ ಹಕ್ಕನ್ನು ನೀಡಿ, ಸಣ್ಣ ಘಟಕ ತಂತ್ರಜ್ಞಾನವನ್ನು ಉತ್ಪಾದನೆಯಲ್ಲಿ ಜಾರಿಗೆ ತರುವ ವ್ಯವಸ್ಥೆಯನ್ನು. ಈ ಪ್ರತಿಪಾದನೆಯು ಕೇವಲ ತಾತ್ವಿಕ ರೂಪದಲ್ಲೇ ಉಳಿದುಕೊಂಡಿದ್ದು, ಇದೇ ಮುಖ್ಯವಾಗಿ ಸಮಾಜವಾದ ತನ್ನ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವುದಕ್ಕೆ ಕಾರಣವಾಗಿದೆ.

ಲೋಹಿಯಾ ತಮ್ಮ ಸಮಾಜವಾದಿ ಹೋರಾಟದಲ್ಲಿ ಅಳವಡಿಸಿಕೊಂಡ ಇನ್ನೂ ಎರಡು ಮುಖ್ಯ ಸಂಗತಿಗಳೆಂದರೆ ಭಾಷೆ ಮತ್ತು ಅಧಿಕಾರ ವಿಕೇಂದ್ರೀಕರಣ. ಇಂಗ್ಲೀಷನ್ನು ಅಧಿಕಾರದ ಗದ್ದುಗೆಯಿಂದ ತೊಲಗಿಸಿ ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸದಿದ್ದಲ್ಲಿ ಪ್ರಜಾಪ್ರಭುತ್ವವೆಂಬುದು ಒಂದು ಕಪಟ ನಾಟಕವಾಗಿ ಮಾತ್ರ ಜಾರಿಯಲ್ಲಿರುತ್ತದೆ ಎಂಬ ನಂಬಿಕೆಯಿಂದ ಅವರು ರಾಷ್ಟ್ರಾದ್ಯಂತ 'ಇಂಗ್ಲಿಷ್ ಹಠಾವೋ' ಚಳುವಳಿ ಆರಂಭಿಸಿದರು. ಅಧಿಕಾರವನ್ನು ರಾಜ್ಯ ಹಾಗೂ ವಿಭಾಗಗಳ ಮಟ್ಟಗಳಲ್ಲಿ ವಿಕೇಂದ್ರೀಕರಿಸಿ ಭಾರತದ ಒಕ್ಕೂಟ ವ್ಯವಸ್ಥೆಯನ್ನು ಬಲಗೊಳಿಸುವ ಮೂಲಕ ಅದರ ರಾಜಕೀಯ ಮತ್ತು ಸಾಂಸ್ಕೃತಿಕ ಏಕತೆಯನ್ನು ಬಲಗೊಳಿಸಬೇಕೆಂದು ಪ್ರತಿಪಾದಿಸಿದರು.

೧೯೬೨ರಲ್ಲಿ ಲೋಹಿಯಾ ಫೂಲ್‌ಪುರ ಕ್ಷೇತ್ರದಿಂದ ನೆಹರೂ ವಿರುದ್ಧ ಸ್ಪರ್ಧಿಸಿ, ಸೋತರು. ೧೯೬೭ರ ಚುನಾವಣೆಗಳಲ್ಲಿ ಗ್ವಾಲಿಯರ್ ಕ್ಷೇತ್ರದಲ್ಲಿ ಮಹಾರಾಣಿ ವಿಜಯರಾಜೇ ಸಿಂಧಿಯಾ ಅವರ ವಿರುದ್ಧ ಜಾಡಮಾಲಿ ಮಹಿಳೆಯೊಬ್ಬರನ್ನೂ ಸ್ಪರ್ಧಿಯನ್ನಾಗಿಸಿದರು. ಇವೆರಡೂ ಸಂಗತಿಗಳಿಗಾಗಿ ಅವರನ್ನು ಹುಚ್ಚರೆಂದು ಕರೆದವರುಂಟು. ಆದರೆ ಹೋರಾಟದ ಸಾಂಕೇತಿಕ ಅರ್ಥಗಳಲ್ಲೂ ನಂಬಿಕೆ ಇರಿಸಿದ್ದ ಲೋಹಿಯಾ, ಫೂಲ್‌ಪುರ ಕ್ಷೇತ್ರದ ಹಲವಾರು ಮತಗಟ್ಟೆಗಳಲ್ಲಿ ನೆಹರೂ ಅವರಿಗಿಂತ ತಮಗೇ ಹೆಚ್ಚು ಮತಗಳು ಬಿದ್ದಿರುವುದು ಭಾರತೀಯನ ಮನಸ್ಸಿನಲ್ಲಿ ಪ್ರಜಾಪ್ರಭುತ್ವದ ಚೇತನ ನೆಲೆಕೊಂಡಿರುವುದನ್ನು ಸಾಬೀತುಪಡಿಸಿದೆ ಎಂದರು. ಗ್ವಾಲಿಯರ್ ಸ್ಪರ್ಧೆಯು ಪ್ರಜಾಪ್ರಭುತ್ವದಲ್ಲಿ ಮಹಾರಾಣಿ ಹಾಗೂ ಜಾಡಮಾಲಿ ಸಮಾನ ಸ್ಥಾನಮಾನವುಳ್ಳವರು ಎಂಬ ಸಂದೇಶವನ್ನು ಸಾರಬಲ್ಲುದು ಎಂದರು. ಸ್ಟಾಲಿನ್‌ವಾದವನ್ನು ರಾಕ್ಷಸೀಯ ಎಂದು ವಿಶ್ಲೇಷಿಸಿದ ಲೋಹಿಯಾ, ಸ್ಟಾಲಿನ್

ಪದಚ್ಯುತಗೊಂಡು ಅಸುನೀಗಿದ ನಂತರ ಆತನ ಮಗಳು ಸ್ವೆಟ್ಲಾನಾಳನ್ನು ರಷ್ಯಾ ಹೊರದೂಡಿದಾಗ ಭಾರತ ಆಕೆಗೆ ಆಶ್ರಯ ನೀಡಬೇಕೆಂದು ವಾದಿಸಿ ಸಂಸತ್ತಿನಲ್ಲಿ ರಂಪ ಎಬ್ಬಿಸಿದರು. ಪ್ರಧಾನಿ, ವಿದೇಶೀ ಗಣ್ಯರೊಬ್ಬರಿಂದ ಬೆಲೆಬಾಳುವ ಮಿಂಕ್‌ಕೋಟ್ ಅನ್ನು ಉಡುಗೊರೆಯಾಗಿ ಪಡೆದಿದ್ದರ ಹಿನ್ನೆಲೆಯನ್ನೂ ವಿವರವಾಗಿ ಕೆದಕಿ, ಚರ್ಚೆಯನ್ನು ಅಧ್ಯಾತ್ಮದ ಎತ್ತರಕ್ಕೆ ಒಯ್ದರು!

ಹೀಗೆ ಮುಖ್ಯ ಅಮುಖ್ಯಗಳ ಭೇದವಿಲ್ಲದೆ ಎಲ್ಲವೂ ಸತ್ಯಾನ್ವೇಷಣೆಯ ಪರಿಕರಗಳೇ ಎಂದು ಭಾವಿಸಿದ ಲೋಹಿಯಾ, ಬದುಕಿನ ಎಲ್ಲ ಸಣ್ಣ ವಿವರಗಳನ್ನೂ ಸಮಾಜವಾದಿ ಹೋರಾಟದ ಆಕೃತಿಯೊಳಕ್ಕೆ ಲೀನಗೊಳಿಸಿಕೊಳ್ಳುವ ಕಲಾವಿದ ಮನಸ್ಸಿನ ರಾಜಕಾರಣಿ ಯಾಗಿದ್ದರು. ರಾಜಕಾರಣಕ್ಕೆ ಕಾವ್ಯದ ತೀವ್ರತೆಯನ್ನೂ, ಸಂಗೀತದ ತನ್ಮಯತೆಯನ್ನೂ, ಚಿತ್ರಕಲೆಯ ಶಿಸ್ತನ್ನೂ ತುಂಬಲು ಯತ್ನಿಸಿದ ಈ ಸಂಪೂರ್ಣ ಬಂಡುಕೋರ, ಬಹುಶಃ ಎಲ್ಲ ಬಂಡುಕೋರರಂತೆ, ತಮ್ಮ ಕನಸುಗಳ ಮಧ್ಯೆಯೇ ಕಣ್ಮರೆಯಾದರು.

(ಉದಯವಾಣಿ, ಮಾರ್ಚ್ ೨೦, ೧೯೮೮)

ಲೋಹಿಯಾ ಅವರ ಲೋಕ ಗ್ರಹಿಕೆಯ ನೆಲೆಗಳು

ಎಲ್ಲರಿಗೂ ನಮಸ್ಕಾರ.

ಡಾ|| ರಾಮಮನೋಹರ ಲೋಹಿಯಾ ಅವರ ಜನ್ಮ ಶತಮಾನೋತ್ಸವವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಏಕೆ ಆಚರಿಸುತ್ತಿದೆ ಎಂದು ನಿಮ್ಮಲ್ಲಿ ಕೆಲವರಿಗಾದರೂ ಆಶ್ಚರ್ಯವಾಗಿರಬಹುದು. ಇನ್ನು ಈ ವಿಚಾರ ಸಂಕಿರಣದ 'ಲೋಹಿಯಾ ಮತ್ತು ಕನ್ನಡ ಸಾಹಿತ್ಯ' ಎಂಬ ವಿಷಯ ಕೂಡಾ ಇಂತಹವರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿರಬಹುದು. ರಾಜಕಾರಣಿ ಲೋಹಿಯಾಗೂ ಕನ್ನಡ ಸಾಹಿತ್ಯಕ್ಕೂ ಏನು ಸಂಬಂಧ ಎಂಬ ಕುತೂಹಲ ಇವರಲ್ಲಿ ಉಂಟಾಗಿರಬಹುದು. ಆದರೆ ಲೋಹಿಯಾ ಅವರ ರಾಜಕಾರಣದ ವಿವಿಧ ಮಗ್ಗಲುಗಳನ್ನು ಮತ್ತು ಅವರ ವ್ಯಕ್ತಿತ್ವದ ಬಹುಮುಖ ವಿಸ್ತರಣೆಗಳನ್ನು ಬಲ್ಲವರಿಗೆ, ಇಂತಹ ಯಾವ ಆಶ್ಚರ್ಯವೂ ಉಂಟಾಗಲಾರದು ಮತ್ತು ಇಂತಹ ಯಾವುದೇ ಪ್ರಶ್ನೆ ಏಳಲಾರದು ಎಂದು ನಾನು ಭಾವಿಸಿದ್ದೇನೆ.

ಗಾಂಧೀಜಿಯ ನಿಕಟ ಅನುಯಾಯಿಗಳಲೊಬ್ಬರಾಗಿದ್ದ ಹೀರಾಲಾಲರ ಮಗನಾಗಿ ಲೋಹಿಯಾ, ಪರೋಕ್ಷವಾಗಿ ಗಾಂಧಿ ಪ್ರಭಾವದಲ್ಲೇ ಬೆಳೆದವರು. ಅವರು ತಮ್ಮ ೨೨ನೇ ವಯಸ್ಸಿನಲ್ಲಿ, ಕಳೆದ ಶತಮಾನದ ಮೂರನೇ ದಶಕದಲ್ಲಿ ಜರ್ಮನಿಯ ವಿಶ್ವವಿದ್ಯಾಲಯ ವೊಂದರಿಂದ ರಾಜಕೀಯ ಶಾಸ್ತ್ರದಲ್ಲಿ ಡಾಕ್ಟೊರೇಟ್ ಪಡೆದು ಭಾರತಕ್ಕೆ ಹಿಂದಿರುಗಿದಾಗ, ಅವರ ಮುಂದೆ ಆಧುನಿಕ ಜಗತ್ತಿನ ಉನ್ನತ ಹುದ್ದೆಗಳ ಮತ್ತು ಸುಖ ಬದುಕಿನ ವಿಫುಲ ಸಾಧ್ಯತೆಗಳು ತೆರೆದಿದ್ದವು. ಆದರೆ ಅವರು ರಾಷ್ಟ್ರೀಯ ಹೋರಾಟಕ್ಕೆ ತಮ್ಮ ಬದುಕನ್ನು ಮುಡಿಪಾಗಿಡಲು ನಿರ್ಧರಿಸಿದರು. ಅದರ ಭಾಗವಾಗಿ ಅನೇಕ ಬಂಧನಗಳಿಗೆ ಒಳಗಾದರು, ಲಾಹೋರ್ ಕೋಟೆ ಸೆರೆಮನೆಯಲ್ಲಿ ತಿಂಗಳುಗಟ್ಟಲೆ ಚಿತ್ರಹಿಂಸೆಯನ್ನು ಅನುಭವಿಸಿದರು. ಕಾಂಗ್ರೆಸ್ ಆಂದೋಲನದ ತತ್ವ ಮತ್ತು ಹೋರಾಟಗಳನ್ನು ರೂಪಿಸುವಲ್ಲಿ ತಮ್ಮದೇ ಸೃಜನಶೀಲ ಪಾತ್ರ ವಹಿಸುವ ಮೂಲಕ ಗಾಂಧೀಜಿಯ ಗಮನ ಸೆಳೆದರು. ಹಾಗಾಗಿ ಗಾಂಧೀಜಿಯವರೊಂದಿಗೆ ನಿಕಟ ಮತ್ತು ಆತ್ಮೀಯ ಸಂಬಂಧ ಸಾಧ್ಯವಾದ ಅಂದಿನ ಬಹಳಷ್ಟು ಹೋರಾಟಗಾರರಂತೆ, ಕಾರ್ಯಕರ್ತರಂತೆ, ಲೋಹಿಯಾ ರಾಜಕಾರಣವನ್ನು ಅಧಿಕಾರದ ಲೌಕಿಕ ಸಾಧನವನ್ನಾಗಿ ಮಾತ್ರ ನೋಡದೆ, ಬದುಕಿನ ಅರ್ಥದ ಅನ್ವೇಷಣೆಯ ಅಧ್ಯಾತ್ಮಿಕ ಸಾಧನವನ್ನಾಗಿ ರೂಪಿಸಿಕೊಂಡರು. ಅವರಿಗೆ ರಾಜಕಾರಣವೆನ್ನುವುದು ತಮ್ಮ ಬದುಕಿನ ಅರ್ಥಪೂರ್ಣ ವಿಸ್ತರಣೆಯೇ ಆಗಿತ್ತು. ಹಾಗಾಗಿಯೇ. ಇದರ ಭಾಗವಾಗಿ ಅವರು ರೂಪಿಸಿದ ಸಮಾಜವಾದ, ಆಗ ಜಗತ್ತಿನಲ್ಲಿ ಬಹು ಪ್ರಚಲಿತವಿದ್ದ ಮತ್ತು ರಾಜಕೀಯವಾಗಿ ಪ್ರಭಾವಯುತವೂ ಆಗಿದ್ದ ಮಾರ್ಕ್ಸ್‌ವಾದಕ್ಕಿಂತ ಮೂಲಭೂತವಾಗಿ ಭಿನ್ನವಾಗಿತ್ತು.

ಲೋಹಿಯಾ ಗಾಂಧಿ ಪ್ರಭಾವಕ್ಕೆ ಒಳಗಾಗಿದ್ದರೂ, ಅವರು ಅದನ್ನು ಇಡಿಯಾಗಿ ಒಪ್ಪಲಿಲ್ಲ. ಆದ್ದರಿಂದಲೇ ಅವರು ತಮ್ಮನ್ನು ಮತ್ತು ತಮ್ಮ ಸಮಾಜವಾದಿ ಗೆಳೆಯರನ್ನು ಬಂಡಾಯ ಗಾಂಧಿವಾದಿಗಳು ಎಂದು ಕರೆದುಕೊಂಡರು. ಮನುಷ್ಯನ ಉದ್ಧಾರದ, ಬಿಡುಗಡೆಯ ನಿಜವಾದ ನೆಲೆ ನೈತಿಕತೆ ಎನ್ನುವ ಗಾಂಧೀವಾದದ ನಂಬಿಕೆಯನ್ನು ಅವರು ಇಡಿಯಾಗಿ ಒಪ್ಪಲಿಲ್ಲ. ಹಾಗೇ ಆ ನೆಲೆ ಮೂಲಭೂತವಾಗಿ ಆರ್ಥಿಕವಾದದ್ದು ಎನ್ನುವ ಮಾರ್ಕ್ಸ್‌ವಾದಿ ನಂಬಿಕೆಯನ್ನೂ ಅವರು ಪೂರ್ಣವಾಗಿ ಒಪ್ಪಲಿಲ್ಲ. ಮುಖ್ಯವಾಗಿ ಅವರು ಈ ಆರ್ಥಿಕತೆ ಮತ್ತು ನೈತಿಕತೆಗಳ ಮಧ್ಯೆ ದ್ವಂದ್ವವಿದೆ ಮತ್ತು ಇವೆರಡರ ದ್ವಂದ್ವ ಶಕ್ತಿಯಿಂದಲೇ ಇತಿಹಾಸ ರೂಪಿತವಾಗುತ್ತದೆ ಎಂದು ಹೇಳುವ ದ್ವಂದ್ವಮಾನ ಭೌತವಾದವನ್ನೇ ಅವರು ಪ್ರಶ್ನಿಸಿದರು. ಗಾಂಧಿಯವರ ನೈತಿಕ ಮೂಲಭೂತವಾದದಂತೆಯೇ ಮಾರ್ಕ್ಸ್‌ನ ಆರ್ಥಿಕ ಮೂಲಭೂತವಾದವೂ ಮನುಷ್ಯನ ಬಿಡುಗಡೆ ಅಥವಾ ಉದ್ಧಾರಕ್ಕೆ ಸಮರ್ಥ ಹಾಗೂ ಸಂಪೂರ್ಣ ತಾತ್ವಿಕ ಸಾಧನವಾಗಲಾರದು ಎಂದು ಲೋಹಿಯಾ ಭಾವಿಸಿದರು. ಈ ಭೌತ-ಅಭೌತ ಅಥವಾ ವಸ್ತು-ಚೈತನ್ಯ (Matter and Spirit), ಮತ-ಮತಾತೀತತೆ, ವರ್ತಮಾನ-ಭವಿಷ್ಯ, ವ್ಯಕ್ತಿ-ಸಮಾಜ, ರೊಟ್ಟಿ ಮತ್ತು ಸ್ವಾತಂತ್ರ್ಯ ಇತ್ಯಾದಿ ದ್ವಂದ್ವ ಜೋಡಿಗಳೆಲ್ಲವೂ ಆಧುನಿಕ ನಾಗರೀಕತೆಯ ಸೃಷ್ಟಿಗಳು, ಅದರ ಆಲೋಚನಾ ಕ್ರಮದಿಂದಾಗಿ ಕಲ್ಪಿತವಾದವು ಎಂದು ವಿಶ್ಲೇಷಿಸಿದರು. ಅವರ ಪ್ರಕಾರ ಸ್ವಾತಂತ್ರ್ಯವಿಲ್ಲದ ರೊಟ್ಟಿ, ರುಚಿ ಇಲ್ಲದ ರೊಟ್ಟಿಯಾಗಿ ಸತ್ವಹೀನವಾಗಿರುತ್ತದೆ. ಹಾಗಾಗಿ ಪೂರ್ಣಾರ್ಥದಲ್ಲಿ ಅದು ರೊಟ್ಟಿಯೇ ಅಲ್ಲ.

ಇಂತಹ ವಿಶ್ಲೇಷಣೆಯ ಭಾಗವಾಗಿ ಅವರ ಸಂಸ್ಕೃತಿಯ ಕಲ್ಪನೆ ಮೂಡಿಬಂತು. ಹಾಗಾಗಿಯೇ ಅವರಿಗೆ ಭಾರತ ಗಾಂಧೀಜಿಗೆ ಕಂಡಂತೆ ಆಕ್ರಮಣಗಳಿಂದಾಗಿಯಷ್ಟೇ ಸತ್ವಹೀನವಾಗಿದ್ದಂತೆ ಅಥವಾ ಅಡಗಿ ಹೋಗಿರುವ ಸುಪ್ತ ಪ್ರತಿಭೆಯ ಆಗರವಾಗಿಯಾಗಲೀ ಕಾಣಲಿಲ್ಲ. ಹಾಗೇ, ಮಾರ್ಕ್ಸ್‌ನಿಗೆ ಕಂಡಂತೆ ಹಾವು-ಕಪಿಗಳನ್ನು ಪೂಜಿಸುವಂತಹ ಮೌಢ್ಯ ಮತ್ತು ಹಿಂದುಳಿದಿರುವಿಕೆಯ ಹಾಳು ಕೊಂಪೆಯಂತಾಗಲೀ ಕಾಣಲಿಲ್ಲ. ಬದಲಾಗಿ ಅದು ಅಲ್ಲಲ್ಲಿ ಸುಂದರ ತಾವರೆಗಳು ಅರಳಿರುವ ಕೊಳಚೆಯಾದ ಕೊಳದಂತೆ ಕಂಡಿತು. ಆ ಕೊಳಚೆ ಆ ಕೊಳದ್ದೇ, ಅಲ್ಲೇ ಉತ್ಪತ್ತಿಯಾದದ್ದು. ಯಾರೋ ಹೊರಗಿನಿಂದ ತಂದು ಹಾಕಿದ್ದಲ್ಲ. ಹಾಗಾಗಿ ಭಾರತದ ಸಂಸ್ಕೃತಿ ಎಂದರೆ, ಸದ್ವಿಚಾರ ಮತ್ತು ಸದಾಚಾರಗಳ ಸ್ಫಟಿಕ ಶುದ್ಧ ಆಕೃತಿಯಲ್ಲ. ಅದು ಎಲ್ಲ ಒಳಿತು-ಕೆಡುಕುಗಳೂ, ಎಲ್ಲ ವಿಕೃತಿ ಮತ್ತು ಸೌಂದರ್ಯಗಳೂ ಒಟ್ಟಿಗೆ ಇರಬಲ್ಲ ಲೋಳೆ ಲೋಳೆಯಾದಂತಹ ಒಂದು ವಸ್ತು! ಹಾಗಾಗಿಯೇ ಇಲ್ಲಿ ಎಲ್ಲವೂ ಭಗವಂತನ ಕೃಪೆಯ ರೂಪದಲ್ಲಿ ಇದ್ದು, ಸಮಾನವಾಗಿಯೇ ಇವೆ ಎಂಬ ಅತ್ಯುನ್ನತ ಚಿಂತನದಿಂದ ಹೊರಹೊಮ್ಮಿದ ಸತ್ಯದ ನೋಟ ಸಾಧ್ಯವಾಗಿದೆ. ಆದರೆ ಅದೇ ಸಮಯದಲ್ಲಿ ಈ ನೋಟ ಪಾರಮಾರ್ಥಿಕ ಸತ್ಯ ಮತ್ತು ವ್ಯಾವಹಾರಿಕ ಸತ್ಯವಾಗಿಯೂ ಒಡೆದುಹೋಗಿ, ಈ ಸಮಾನತೆಯನ್ನು ವ್ಯಾವಹಾರಿಕ ನೆಲೆಯಲ್ಲಿ ಒಪ್ಪದ ವ್ಯವಸ್ಥೆಯೊಂದು ಇಲ್ಲಿ ನಿರ್ಮಾಣಗೊಂಡಿದೆ. ಹಾಗಾಗಿ, ಸಮಾನತೆಯನ್ನು ಒಂದು ಪಾರಮಾರ್ಥಿಕ ಸತ್ಯವಾಗಿ ಹೇಳುವ ನಾಲಗೆಯುಳ್ಳ ದೇಹದ ಕೈಗಳೇ ವ್ಯಾವಹಾರಿಕ ಸತ್ಯದ ಸಮರ್ಥನೆಗಾಗಿ, ನಿಶ್ಚಿಂತೆಯಿಂದ ಕೊಲೆಯನ್ನೂ ಮಾಡಬಲ್ಲುದಾಗಿದೆ. ಇದರ

ಮುಂದುವರಿಕೆಯಾಗಿಯೇ ಈ ಆಧುನಿಕ ಯುಗದಲ್ಲಿ, ಬೆಳಿಗ್ಗೆ ಎದ್ದು ಚರಕದ ಮಂತ್ರ ಹೇಳುವ ಮನುಷ್ಯನೇ ಮಧ್ಯಾಹ್ನ ಗಿರಣಿಯ ಸ್ವಿಚ್ಚನ್ನೂ ಒತ್ತಬಲ್ಲವನಾಗಿದ್ದಾನೆ, ಸಂಜೆಗೆ ದೊಡ್ಡ ಅಣೆಕಟ್ಟುಗಳ ಅಡಿಗಲ್ಲನ್ನೂ ಹಾಕಬಲ್ಲವನಾಗಿದ್ದಾನೆ ಎಂದು ಲೋಹಿಯಾ ಹೇಳುತ್ತಾರೆ.

ಹೀಗೆ ಬುಡದಿಂದ ಒಡೆದು ಹೋದ ಮನಸ್ಸನ್ನು ಒಗ್ಗೂಡಿಸಿ ಕಟ್ಟಬೇಕಾದ ಸಂಸ್ಕೃತಿಗೆ ಆಧಾರ, ಒಟ್ಟಿಗೇ ಲೌಕಿಕ ಮತ್ತು ಪಾರಮಾರ್ಥಿಕ ಅರ್ಥಗಳೆರಡನ್ನೂ ಹೊಂದಿರುವ ಸಮಾನತೆಯ ತತ್ವವೇ ಆಗಿರಬೇಕೆಂಬುದು ಅವರ ವಿಶಿಷ್ಟ ಹೊಳಹಾಗಿದ್ದಿತು. ಹಾಗಾಗಿ ಅವರ ಸಂಸ್ಕೃತಿಯ ಕಲ್ಪನೆ ಕೇವಲ ಜೀವನ ಮಟ್ಟದ ಕಲ್ಪನೆಗೆ ಸಂಬಂಧಿಸಿರದೆ, ಜೀವನವನ್ನು ಗ್ರಹಿಸುವ ಬಗೆಗೂ ಸಂಬಂಧಿಸಿತ್ತು. ಜೀವನವನ್ನು ಕೈಗಳು ಮಾತ್ರ ಕಟ್ಟುತ್ತಿರುವುದಿಲ್ಲ; ಕಟ್ಟುತ್ತಿರುವ ಆ ಕೈಗಳ ಜೊತೆಗೇ ಇನ್ನೊಂದು ನೆಲೆಯಲ್ಲಿ ಆತನ ಮನಸ್ಸು ಆ ಕಟ್ಟುವಿಕೆಯ ವಿನ್ಯಾಸವನ್ನು, ಅದರ ಅನನ್ಯತೆಯನ್ನು ನಿಯಂತ್ರಿಸುತ್ತಿರುತ್ತದೆ ಎಂದು ಅವರು ಪ್ರತಿಪಾದಿಸಿದರು. ಅಂದರೆ ಮನುಷ್ಯನ ಯಾವುದೇ ಕೆಲಸದಲ್ಲಿ ಹೊರಗಿನ ಒತ್ತಡಗಳಷ್ಟೇ ಅಲ್ಲ, ಒಳಗಿನ ಸ್ಫೂರ್ತಿಗಳೂ ಕೆಲಸ ಮಾಡುತ್ತಿರುತ್ತವೆ. ಇದು, ವಸ್ತು-ಚೈತನ್ಯಗಳೆರಡೂ ಒಟ್ಟಿಗೇ ಅಭಿನ್ನವಾಗಿ ಕ್ರಿಯಾಶೀಲವಾಗುವ, ಮನುಷ್ಯನ ನಿಜವಾದ ಸೃಜನಶೀಲತೆಯ ಮೂಲ. ಹೀಗೆ, ಮನುಷ್ಯ ಇತಿಹಾಸದ ವಾಸ್ತವ ಪರಿಧಿಗಳಲ್ಲಿ, ಕಟ್ಟುಗಳಲ್ಲಿ ಬದುಕಲು ಹೆಣಗುತ್ತಿರುವಾಗಲೇ, ಇತಿಹಾಸದ ಆಚೆಯ ಅತಿವಾಸ್ತವದಲ್ಲೂ ಬದುಕಲು ಹವಣಿಸುತ್ತಿರುತ್ತಾನೆ ಎಂಬುದು ಅವರ ಮುಖ್ಯ ಮಾತು. ಹೀಗಾಗಿ ವರ್ತಮಾನವೆಂಬುದು ಒಂದು ಕಲ್ಪನೆಯೇ. ಮನುಷ್ಯ ನಿಜವಾಗಿ ಇರುವುದು ಈ ಎಲ್ಲ ಕಲ್ಪನೆಗಳಾಚೆಯೇ. ಮನುಷ್ಯನ ಇರವಿನ ಈ ನೆಲೆಯನ್ನೂ ಗುರುತಿಸದ, ಮಾನ್ಯ ಮಾಡದ ಇತಿಹಾಸ ಪ್ರಜ್ಞೆ, ಮನುಷ್ಯನನ್ನು ಕ್ರಾಂತಿಯ ಒಂದು ಸಾಧನವನ್ನಾಗಿ ಪರಿಗಣಿಸಬಲ್ಲದೇ ಹೊರತು, ಅವನನ್ನು ಅದರ ಅಂತಿಮ ಗುರಿಯನ್ನಾಗಿ ಗ್ರಹಿಸಲಾರದು ಎಂಬುದು ಅವರ ಕಾಣ್ಕೆಯಾಗಿತ್ತು. ಇದೇ ಭೌತವಾದಿ ನಾಗರೀಕತೆಯಾಗಿ ಕಟ್ಟಲ್ಪಡುತ್ತಿರುವ ಆಧುನಿಕ ನಾಗರೀಕತೆಯ ಅಂತಿಮ ದುರಂತಕ್ಕೆ ಕಾರಣವೂ ಆಗಬಹುದು ಎಂಬುದು ಅವರ ಆತಂಕ ಕೂಡಾ ಆಗಿತ್ತು.

ಹೀಗಾಗಿ ಅವರ ಕಾಲದ ಬಹು ದೊಡ್ಡ ರಾಜಕೀಯ ಸ್ಫೂರ್ತಿಯಾಗಿದ್ದ ಮತ್ತು ಈಗಲೂ ನಮ್ಮ ನಡುವಿನ ಬಹಳ ಜನ ಬುದ್ಧಿಜೀವಿಗಳಿಗೆ ತಾತ್ವಿಕ ಸ್ಫೂರ್ತಿಯಾಗಿರುವ ಮಾರ್ಕ್ಸ್‌ವಾದ ನಂಬಿದ್ದಂತೆ, ಮನುಷ್ಯನ ಆರ್ಥಿಕ ನೆಲೆಗಟ್ಟು ಅಥವಾ ಉತ್ಪಾದನಾ ಕ್ರಮವೇ ಬದುಕಿನ ಮೂಲ ನೆಲಗಟ್ಟು; ಅದನ್ನವಲಂಬಿಸಿ ಅಥವಾ ಅದು ನಿರ್ದೇಶಿಸಿ ದಂತೆಯೇ ಅವನ ಸಾಂಸ್ಕೃತಿಕ ನೆಲೆಗಟ್ಟು, ಅಂದರೆ ಅವನ ಕಾಲದ ಕಲೆ, ಧರ್ಮ, ತತ್ವಜ್ಞಾನ, ಸಾಹಿತ್ಯ, ಸಂಗೀತ, ಶಿಲ್ಪಗಳು ರೂಪು ಪಡೆಯುತ್ತವೆ ಎಂಬುದನ್ನು ಒಪ್ಪಲು ಅವರು ನಿರಾಕರಿಸಿದರು. ಅಂದರೆ ಎಲ್ಲ ಅಭೌತವೂ, ಭೌತ ಪ್ರಪಂಚದ ಪ್ರತಿಬಿಂಬ ಅಥವಾ ಪರೋಕ್ಷ ಸೃಷ್ಟಿ ಎನ್ನುವುದನ್ನು ಅವರು ಅಲ್ಲಗೆಳೆದರು. ಭೌತ ಅಭೌತಗಳೆರಡೂ ಒಂದೇ ಕಾಲದಲ್ಲಿ ಪರಸ್ಪರ ಪ್ರಭಾವದಿಂದ ಜಗತ್ತನ್ನು ಕಾಣಿಸುತ್ತಾ, ಬದುಕನ್ನು ರೂಪಿಸುತ್ತಾ ಹೋಗುತ್ತದೆ ಎಂದು ಅವರು ನಂಬಿದ್ದರು. ಕಾಲ ಪ್ರವಾಹದಲ್ಲಿ ಪ್ರತಿಯೊಂದು ಕ್ಷಣವೂ, ಕ್ಷಣಿಕ ಅಂದರೆ ಸೀಮಿತ ಕಾಲಬಿಂದುವಾಗಿ ನಮಗೆ ಅನುಭವಕ್ಕೆ ಬರುವಂತೆಯೇ;

ಅನಂತದ ಅನುಭವವನ್ನೂ ಸೃಷ್ಟಿಸಬಲ್ಲುದು. ಜಗತ್ತಿನಲ್ಲಿ ಯಾವುದೇ ಒಂದನ್ನು ವಸ್ತುವನ್ನಾಗಿ, ಅಂದರೆ ಅದರ ಭೌತಿಕ ಸ್ವರೂಪದಲ್ಲಿ ನೋಡಿದಾಗ, ಅದು ಅದರ ಕ್ಷಣಿಕ ರೂಪವಾಗಿ ನಮಗೆ ಕಂಡು, ನಮ್ಮ ಅರಿವಿನಿಂದ ಮರೆಯಾಗುತ್ತದೆ. ಆದರೆ ಅದನ್ನು ಒಂದು ವಿದ್ಯಮಾನವನ್ನಾಗಿ, ಅಂದರೆ ಅದರ ವ್ಯುತ್ಪತ್ತಿಯೊಂದಿಗೆ ನೋಡಿದಾಗ, ಅದು ಅದರ ಅನಂತದ ರೂಪದಲ್ಲಿ ನಮ್ಮನ್ನು ಕಾಡತೊಡಗುತ್ತದೆ.

ಹಾಗಾಗಿ ಜಗತ್ತು ಅರಿವಿನ ಈ ಎರಡೂ ನೆಲೆಗಳಲ್ಲಿ ಕಟ್ಟಲ್ಪಡುತ್ತಿದೆ. ಅಂದರೆ ಕ್ಷಣಿಕ ಜಗತ್ತಿನ ಭೌತಿಕ ಆಸ್ತಿಯೊಡನೆಯೇ, ಅನಂತ ಜಗತ್ತಿನ ಆದಿಭೌತಿಕ ಆಸ್ತಿಯೂ ತನ್ನ ಸಾಂಸ್ಕೃತಿಕ ರೂಪಗಳಲ್ಲಿ ಅದರೊಡನೆ ಅಭಿನ್ನವಾಗಿ ಬೆರೆತು ಸೃಷ್ಟಿಯಾಗಿರುತ್ತದೆ. ಒಂದರಿಂದ ಅಥವಾ ಒಂದರ ನಂತರ ಇನ್ನೊಂದಲ್ಲ. ಒಂದರೊಳಗೊಂದು. ಲೋಹಿಯಾ ಗಾಂಧೀಜಿ ಕುರಿತು ಆಡಿದ ಈ ಮಾತು ಅವರ ಈ ಲೋಕದೃಷ್ಟಿಯನ್ನು ಸೂಕ್ಷ್ಮವಾಗಿ ಹಿಡಿದಿಡುತ್ತದೆ: 'ದೇವರು ಮತ್ತು ಹೆಣ್ಣು, ಪ್ರಾಯಶಃ ಇವೆರಡೇ ಬದುಕಿನ ಉದ್ದೇಶಗಳು ಎಂದು ನಾನೊಮ್ಮೆ ಹೇಳಿದ್ದೆ. ದೇವರನ್ನು ನಾನು ಕಂಡಿಲ್ಲ, ಹೆಣ್ಣು ಏಕೋ ನನಗೆ ಎಟುಕಿಲ್ಲ. ಆದರೆ ದೇವರು ಮತ್ತು ಹೆಣ್ಣು ಈ ಎರಡರ ಮಿಂಚುಗಳನ್ನೂ ಒಟ್ಟಿಗೇ ಪ್ರಕಾಶಿಸುತ್ತಿದ್ದ ಮನುಷ್ಯನನ್ನು ಕಾಣುವ ಸೌಭಾಗ್ಯ ನನ್ನದಾಗಿತ್ತು. ಆತ ಕಣ್ಮರೆಯಾದಂದಿನಿಂದ ಆ ಪ್ರಕಾಶದ ನೆನಪು ಗಾಢವಾಗಿ ನನ್ನನ್ನು ಕಲಕುತ್ತಿದೆ. ಜೊತೆಗೆ ಅಂತಹ ಪ್ರಕಾಶದ ಅನ್ವೇಷಣೆ ನನ್ನಲ್ಲಿ ಹೊಸದಾಗಿ ಆರಂಭವಾಗಿದೆ.'

ಇಲ್ಲಿಯೇ ಲೋಹಿಯಾ, ಸಮೂಹದೊಳಗಿನ ಮನುಷ್ಯ ಕೆಲ ಕ್ಷಣಗಳಾದರೂ ಅದರಿಂದ ಕಳಚಿಕೊಂಡು ತನ್ನ ಖಾಸಗೀತನದಲ್ಲಿ ವಿಹರಿಸಲು, ತನ್ನನ್ನು ತಾನು ಹೊಸದಾಗಿ ಮಾಡಿಕೊಳ್ಳಲು, ನೋಡಿಕೊಳ್ಳಲು ತುಡಿಯುವ ಅವನ ನೈಸರ್ಗಿಕ ಹಕ್ಕನ್ನೂ, ಅದನ್ನು ಕಾಪಾಡುವ ಅಗತ್ಯವನ್ನೂ ಎತ್ತಿ ಹೇಳುವುದು.[೧] ಮನುಷ್ಯ ಇಡಿಯಾಗಿ ಇತಿಹಾಸದಡಿಯಲ್ಲಿಯೇ, ಅದರ ಸ್ವಯಂಸಿದ್ಧ ನಿಯಮಗಳ ಪ್ರಕಾರವೇ ಬದುಕುತ್ತಾ ಬಂದಿದ್ದಲ್ಲಿ, ವರ್ಗ ಸಮಾನವಾದ ಆರ್ಥಿಕ ತುಡಿತಗಳ ಪ್ರೇರಣೆಗಳಿಂದಲೇ ಬದುಕುವಂತಾಗಿದ್ದರೆ, ಸಾಮಾನ್ಯರು, ಬಡವರು, ಶೋಷಿತರು ಅಥವಾ ಅವಮಾನಿತರು ಎಂದು ವರ್ಗೀಕರಿಸಬಹುದಾದ ಸಮುದಾಯ ಕೇವಲ ಅಷ್ಟೋ ಇಷ್ಟೋ ತಿಂದು ಭೋಗಿಸುತ್ತಾ, ಪ್ರಾಣಿಗಳಂತಷ್ಟೇ ಬದುಕುವ ಖಂಡನೆಗೆ ಒಳಗಾಗುತ್ತಿದ್ದರು. ಆದರೆ ಅವರು ದೊಡ್ಡ ಪ್ರಮಾಣದಲ್ಲಿ ಮತ್ತು

---

೧. ಮನುಷ್ಯನ ಈ ಖಾಸಗಿ ಕ್ಷಣಗಳ ನೈಸರ್ಗಿಕ ಹಕ್ಕನ್ನೂ ಜಾತಿ ಪ್ರಜ್ಞೆ ಅತಿಕ್ರಮಿಸಿದೆ, ಅಂದರೆ ಆತನ ಸಾಕ್ಷೀ ಪ್ರಜ್ಞೆಯನ್ನೂ ಅದು ದಮನ ಮಾಡಿದೆ ಎಂದು ಲೋಹಿಯಾ ಹೇಳಿದ್ದಾರೆಂದು ನಂತರ ಮಾತನಾಡಿದ ನಟರಾಜ್ ಹುಳಿಯಾರ್ ಹೇಳಿದರು. ಹಾಗಿದ್ದಲ್ಲಿ, ಯಾರೇ ಆಗಲೀ ಯಾವುದೇ ಕಾರಣದಿಂದ ತಮ್ಮ ಜಾತಿಯನ್ನು ಮೀರಲಾಗದವರಾಗಿಬಿಡುತ್ತಾರೆ! ಇದು, ಸಾಮಾಜಿಕ ನ್ಯಾಯ ಪರಿಕಲ್ಪನೆಯು ಲೋಹಿಯಾ ಪ್ರತಿಪಾದಿಸಿದ ಜಾತಿ ವಿನಾಶ ಕಾರ್ಯಕ್ರಮವನ್ನು ತಿರಸ್ಕರಿಸಿ ಇಂದು ತಲುಪಿರುವ ಜಾತಿ ಸಮಾನತೆಯೆಂಬ, ಭ್ರಷ್ಟಗೊಂಡ ಸಮಾಜವಾದಿ(ಅಥವಾ ಅ-ಸಮಾಜವಾದಿ) ಗುರಿಯೆಡೆಗೆ ನಮ್ಮನ್ನು ಕೊಂಡೊಯ್ಯುತ್ತದಷ್ಟೆ.... ಆದುದರಿಂದ ಲೋಹಿಯಾ ಎತ್ತಿ ಹೇಳುವ ನೈಸರ್ಗಿಕ ಹಕ್ಕು ಇನ್ನೂ ಆಳದ; ಅಜ್ಞಾತ ಸ್ತರದ ಪ್ರಜ್ಞೆಗೆ ಸಂಬಂಧಿಸಿದ್ದು ಎಂಬುದು ಸ್ಪಷ್ಟ.

ಅಷ್ಟೇ ದೊಡ್ಡ ರೀತಿಯಲ್ಲಿ ಸೃಜನಶೀಲರೂ ಆಗಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅವರು ಇತಿಹಾಸದುದ್ದಕ್ಕೂ ಧರ್ಮ, ಸಂಸ್ಕೃತಿ, ಕಲೆ, ಸಾಹಿತ್ಯ, ಶಿಲ್ಪ, ಸಂಗೀತ ಇತ್ಯಾದಿಗಳಿಗೆ ದೊಡ್ಡ ಕೊಡುಗೆಗಳನ್ನು ಸಲ್ಲಿಸುತ್ತಲೇ ಬಂದಿದ್ದಾರೆ. ವರ್ಗ ಔದಾಸೀನ್ಯತೆಗಳ ನಡುವೆಯೂ ಬದುಕನ್ನು ತಮ್ಮ ಮಿತಿಗಳಲ್ಲೇ ಸಹ್ಯ ಮತ್ತು ಸಂತೋಷಕರ ಮಾಡಿಕೊಂಡು ಇತಿಹಾಸದ ವಿರುದ್ಧ ತಿರುಗಿ ಬೀಳುವ ಶಕ್ತಿಯನ್ನು ಅವರು ಕ್ರೋಢೀಕರಿಸಿಕೊಂಡಿದ್ದಾರೆ.

ಹಾಗಾಗಿ ಜಗತ್ತಿನಲ್ಲಿ ವರ್ಗ ಹೋರಾಟಗಳೇನಾದರೂ ಸಂಭವಿಸಿ ಕ್ರಾಂತಿಯಾಗಿದ್ದರೆ, ಅದಕ್ಕೆ ಅವುಗಳ ಹಿಂದೆ ಬಹಿರಂಗ ರೂಪದ ತತ್ಕಾಲೀನ ಆರ್ಥಿಕ ಕಾರಣಗಳಷ್ಟೇ, ಇವುಗಳಿಂದ ಪ್ರಭಾವಿತವಾಗದ ಅಂದಿನ ಮನುಷ್ಯನ ಅಂತರಂಗದ ಅವರ್ಗೀಕೃತ ಅಜ್ಞಾತ ಶಕ್ತಿಯೂ ಕಾರಣವಾಗಿದೆ. ಹಾಗಾಗಿ ಜಗತ್ತಿನ ಇತಿಹಾಸ ಮಾರ್ಕ್ಸ್ ಹೇಳಿದಂತೆ, ಕೇವಲ ವರ್ಗ ಹೋರಾಟಗಳ ಇತಿಹಾಸವಾಗದೆ, ಮನುಷ್ಯನ ಅಂತರಂಗದ ಆಳಗಳಲ್ಲಿ ನಡೆದ ಪ್ರಜ್ಞಾ ಸ್ಫೋಟಗಳ ಮತ್ತು ವಿಸ್ತರಣೆಗಳ ಇತಿಹಾಸವೂ ಆಗಿದೆ. ಮನುಷ್ಯನ ಖಾಸಗಿ ಕ್ಷಣಗಳ ಈ ಅಜ್ಞಾತ ಶಕ್ತಿಯ ಆಟವನ್ನು ಇತಿಹಾಸದ ಭೌತವಾದಿ ನಿರೂಪಣೆ ವಿವರಿಸಲು ಶಕ್ಯವಾಗುವುದಿಲ್ಲ. ಉದಾಹರಣೆಗೆ ಭಾರತದ ಬಹು ದೊಡ್ಡ ಮತ್ತು ವಿಶಿಷ್ಟ ಸಾಮಾಜಿಕ ಆಂದೋಲನವೂ ಎನಿಸಿದ ಭಕ್ತಿ ಆಂದೋಲನವನ್ನು ದ್ವಂದ್ವಮಾನ ಭೌತವಾದ ಸಂಪೂರ್ಣವಾಗಿ ವಿವರಿಸಲಾರದು. ಅದು ವಿವರಿಸಲು ಯತ್ನಿಸಿದಷ್ಟೂ ಭಕ್ತಿ ಆಂದೋಲನದ ಹಿಂದಿನ ಚೈತನ್ಯವೇ ಉಡುಗಿದಂತಾಗಿ, ಅದರ ಇತಿಹಾಸ ವಿರೂಪಗೊಳ್ಳುತ್ತಾ ಹೋಗುತ್ತದಷ್ಟೆ.[೨] ಲೋಹಿಯಾ ವಿಶ್ವ ಸಮಾಜವಾದಿ ಸಮ್ಮೇಳನದಲ್ಲಿ ಪ್ರತಿಪಾದಿಸಿದ ಸಪ್ತ ಕ್ರಾಂತಿಗಳಲ್ಲಿ ಮನುಷ್ಯನ ಖಾಸಗಿತನದ ಮೇಲಿನ ಆಕ್ರಮಣದ ವಿರುದ್ಧ ರಕ್ಷಣೆಯೂ ಸೇರಿತ್ತು ಎಂಬುದು ಇಲ್ಲಿ ಗಮನಾರ್ಹ.

ಬದುಕನ್ನು, ಇತಿಹಾಸವನ್ನು ಭೌತವಾದಿಯಾಗಷ್ಟೇ ನೋಡುವ ಕ್ರಮವನ್ನು ಲೋಹಿಯಾ ಹೀಗೆ ಮೂಲಭೂತವಾಗಿ ಪ್ರಶ್ನಿಸಲು ಕಾರಣವಾದದ್ದು, ಅವರು ಭಾರತದ ಬದುಕನ್ನು ತಾವು ಕಲಿತ ಪಶ್ಚಿಮದ ಶಿಕ್ಷಣದ ಕಣ್ಣಿಂದ ಅಂದಿನ ಆಧುನಿಕತಾವಾದಿಗಳಂತೆ ಸಂದೇಹದಿಂದ ನೋಡದೆ, ಗಾಂಧಿ ಸ್ಫೂರ್ತಿಯಲ್ಲಿ ಅದನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು, ಅದರ ಮೌಲ್ಯ-ನಂಬಿಕೆಗಳ ನೆಲೆಯಲ್ಲೇ ನೋಡಿ.ಅದರ ಶಕ್ತಿ-ದೌರ್ಬಲ್ಯಗಳನ್ನು ಕಂಡುಕೊಂಡಿದ್ದರಿಂದಾಗಿ ಎಂದು ಕಾಣುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆಗಳು ಅವರ 'ರಾಜಕೀಯದ ಮಧ್ಯೆ ಬಿಡುವು' ಕೃತಿಯಲ್ಲಿನ ಅನೇಕ ಲೇಖನಗಳು.

---

೨. ಮಾರ್ಕ್ಸ್‌ವಾದದ ಇತ್ತೀಚಿನ ಅಧ್ಯಯನಗಳು ಎಂದು ಹೇಳಲಾಗುವ ಕೆಲವು ಹೊಸ ವಾದಗಳು ಈ ಆರ್ಥಿಕ ಮತ್ತು ಪಾರಮಾರ್ಥಿಕಗಳ ಸಂಬಂಧವನ್ನು, ಅದು ನಿರೂಪಿಸಿದ್ದ ಒಂದರಿಂದ ಇನ್ನೊಂದು ಎಂಬ ನಿಯಮದ ಬಂಧನದಿಂದ ಸ್ವಲ್ಪ ಮಟ್ಟಿಗೆ ಬಿಡಿಸಲೆತ್ನಿಸಿವೆ. ಆದರೆ, ಅದರ ಪರಿಣಾಮವಾಗಿ ಅದು ಮುಂದಿನ ತನ್ನ ಇತರೆಲ್ಲ ಪ್ರಮೇಯಗಳನ್ನೂ ಪುನರ್‌ನಿರೂಪಿಸಬೇಕಾದ ಇಕ್ಕಟ್ಟಿಗೆ ಸಿಕ್ಕಿದೆ. ಇದರಿಂದಾಗಿ ಮಾರ್ಕ್ಸ್‌ವಾದವೆನ್ನುವುದು. ತನ್ನ ಮೂಲ ರೂಪ ಮತ್ತು ಅರ್ಥ ಸಾಂಗತ್ಯ ಹಾಗೂ ಆ ಮೂಲಕ ತನ್ನ ವಿಶಿಷ್ಟ ಕ್ರಾಂತಿಕಾರತ್ವವನ್ನೂ ಕಳೆದುಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ.

ಇದು ರಾಜಕೀಯದ ಮಧ್ಯೆ ಬಿಡುವು ಅಲ್ಲ, ಇತಿಹಾಸದ ನಡುವೆ ಬಿಡುವು. ಒಂದು ರೀತಿಯಲ್ಲಿ ಇತಿಹಾಸಕ್ಕೆ ಹೇಳುವ ಧಿಕ್ಕಾರ ಕೂಡಾ! ಇಲ್ಲಿನ 'ರಾಮ, ಕೃಷ್ಣ, ಶಿವ', 'ಯೋಗದಲ್ಲಿ ಒಂದು ಅಧ್ಯಾಯ', 'ಕಲ್ಲಿನ ಮಾತು' 'ಡೆಲ್ಹಿ ಎಂದೂ ಕರೆಯುವ ದಿಲ್ಲಿ' 'ವಸಿಷ್ಠರು ಮತ್ತು ವಾಲ್ಮೀಕಿಯರು' ಇತ್ಯಾದಿ ಲೇಖನಗಳು ಯಾವುದೇ ಅತ್ಯುತ್ತಮ ಸಾಹಿತಿಯ ಬರಹಗಳಿಗೆ ಸರಿ ಸಾಟಿಯಾಗಿ ನಿಲ್ಲಬಲ್ಲವು.

'ರಾಮ, ಕೃಷ್ಣ, ಶಿವ' ಲೇಖನ ಲೋಹಿಯಾರ ರಾಜಕೀಯ ವ್ಯಕ್ತಿತ್ವದ ಎಲ್ಲ ಸಂಕೀರ್ಣತೆಗಳನ್ನೂ ಅದ್ಭುತವಾಗಿ ನಿರೂಪಿಸುವ ಒಂದು ವಿಶಿಷ್ಟ ಲೇಖನ. ಭಾರತದ ಮನಸ್ಸು ಸೃಷ್ಟಿಸಿದ ವ್ಯಕ್ತಿತ್ವದ ಮಾದರಿಗಳನ್ನು ಶೋಧಿಸುವ ಮೂಲಕ ಅದರ ನಾಗರೀಕತೆಯ ಸತ್ವವನ್ನು ಅರಿಯಲು ಪ್ರಯತ್ನಿಸುವ ಈ ಲೇಖನ, ಈ ಮೂರೂ ಪುರಾಣೀಕೃತ ವ್ಯಕ್ತಿತ್ವಗಳು ಹೇಗೆ ಸತತವಾಗಿ ಇತಿಹಾಸವನ್ನು ಧಿಕ್ಕರಿಸುವ ಭಾರತೀಯ ಬದುಕಿನ ನಿರಂತರ ಪ್ರತೀಕಗಳಾಗಿ ಬೆಳೆದು ಉಳಿದಿವೆ ಎಂಬುದನ್ನು ಬಹು ಮನೋಹರವಾಗಿ ಹೇಳುತ್ತದೆ. ಶಿವನನ್ನು ನಿರಾಯಾಮ ವ್ಯಕ್ತಿತ್ವವೆಂದೂ, ಕೃಷ್ಣನನ್ನು ಸಮೃದ್ಧ ವ್ಯಕ್ತಿತ್ವವೆಂದೂ, ರಾಮನನ್ನು ಸೀಮಿತ ವ್ಯಕ್ತಿತ್ವವೆಂದೂ ಗುರುತಿಸುವ ಈ ಲೇಖನ, ಇಂದಿನ ಆಧುನಿಕ ವಾಸ್ತವ ಬದುಕಿಗೆ ಆಯ್ದುಕೊಳ್ಳುವುದು ಸೀಮಿತ ವ್ಯಕ್ತಿತ್ವದ ಮಾದರಿಯನ್ನೇ. ಹಾಗಾಗಿಯೇ ಈ ಲೇಖನದ ಕೊನೆಯ ವಾಕ್ಯ, ಲೋಹಿಯಾ ಪ್ರತಿಪಾದಿಸಿದ ಸಮಾಜವಾದಕ್ಕೆ ಒಂದು ರೂಪಕ ನಿರ್ಮಿಸಿದಂತಿದೆ: 'ತಾಯಿ ಭಾರತಿ, ನಮಗೆ ಶಿವನ ಮನಸ್ಸನ್ನೂ, ಕೃಷ್ಣನ ಹೃದಯವನ್ನೂ, ರಾಮನ ಲೋಕವನ್ನೂ ಕೊಡು. ನಿರಾಯಾಮವಾದ ಮನಸ್ಸು, ಸಮೃದ್ಧ ಹೃದಯ, ಆದರೆ ಸೀಮೆಗಳುಳ್ಳ ಬದುಕು, ಇವುಗಳಿಂದ ನಮ್ಮನ್ನು ನಿರ್ಮಿಸು'

ಮೇರೆಗಳಿಲ್ಲದ ಮನಸ್ಸಿನ ವಿಹಂಗಮತೆ ಮತ್ತು ಸಮೃದ್ಧ ಮನಸ್ಸಿನ ತುಂಬು ಅಲೆಗಳು ಬದುಕಿನ ವಾಸ್ತವದ ಗೆರೆಗಳೊಳಗೆ ಇದ್ದಲ್ಲಿ ಮಾತ್ರ ಅವು ಸೌಂದರ್ಯವನ್ನೂ, ನೆಮ್ಮದಿಯನ್ನೂ ಸೃಷ್ಟಿಸಬಲ್ಲವು. ಇಂತಹ ಸೌಂದರ್ಯ ಮತ್ತು ನೆಮ್ಮದಿಗಳ ಪ್ರತೀಕವಾಗಿಯಷ್ಟೇ ಲೋಹಿಯಾ ಸಮಾನತೆಯನ್ನು ವ್ಯಾಖ್ಯಾನಿಸುತ್ತಾರೆ. ಬರೀ ಬೋಳು ಸಾರ್ವಜನಿಕ ಸಮಾನತೆಯನ್ನಲ್ಲ. ಅವರ ಪ್ರಕಾರ ಸಮಾನತೆ ಎಂದರೆ, ಸಮತೆ; ಎಲ್ಲ ರೀತಿಯ, ಅಂದರೆ ಆಂತರಿಕ ಮತ್ತು ಬಾಹ್ಯ ಸಮತೋಲನ. ಹಾಗಾಗಿಯೇ ಅವರು ಪ್ರತಿಪಾದಿಸಿದ ಸಮಾಜವಾದದ ಪ್ರಕಾರ ರಾಷ್ಟದೊಳಗಿನ ಸಮಾನತೆಯ ಜೊತೆಗೆ ರಾಷ್ಟ್ರಗಳ ನಡುವಣ ಸಮಾನತೆಯೂ ಸಾಧಿತವಾಗಬೇಕು. ಹಾಗೇ ಸಮಾಜದಲ್ಲಿ ಬಾಹ್ಯ ಬಂಧುತ್ವವಲ್ಲದೆ ವೈಯುಕ್ತಿಕವಾದ ಆಂತರಿಕ ಪ್ರಶಾಂತಿಯನ್ನೂ ಅದು ಸಾಧಿಸುವಂತಿರಬೇಕು. ಇಂದಿನ ಆಧುನಿಕ ಜಗತ್ತಿನಲ್ಲಿ ಹೀಗೆ ಸೌಂದರ್ಯ ಮತ್ತು ನೆಮ್ಮದಿಗಳ ಪ್ರತೀಕವಾದ ಮತ್ತು ಒಂದು ರೀತಿಯಲ್ಲಿ ಬದುಕಿನ ಒಂದು ಆವೃತ ದೃಷ್ಟಿಕೋನದಿಂದ ಹುಟ್ಟುವ ಇಂತಹ ಸಮಾನತೆಯ ಕಲ್ಪನೆ ಸಾಕಾರಗೊಳ್ಳಲು ಸಾಧ್ಯವಾಗುವುದು, ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಬದುಕಿನ ಶೈಲಿಗೆ ಪರ್ಯಾಯವಾಗಿ ಬದುಕಿಗೆ ಒಂದು ಸರಳ ಸಭ್ಯ ಜೀವನ ಮಟ್ಟದ ಗೆರೆ ಹಾಕಿಕೊಂಡಾಗ ಮಾತ್ರ. ಅಂತಹ ಗೆರೆ ಹಾಕುವ ರಾಜಕಾರಣದ ಭಾಗವಾಗಿಯೇ ಅವರು ತಮ್ಮ ಸಮಾಜವಾದವನ್ನು ನಿರೂಪಿಸಿದ್ದು. ಅವರ ಜಾತಿ ವಿನಾಶ, ಖರ್ಚಿನ ಮೇಲೆ ಮಿತಿ, ಸಣ್ಣ ಪ್ರಮಾಣದ ತಂತ್ರಜ್ಞಾನ, ಇಂಗ್ಲಿಷ್ ತೊಲಗಿಸಿ

ಇತ್ಯಾದಿಗಳೆಲ್ಲವೂ, ಮನುಷ್ಯ ಆಧುನಿಕ ನಾಗರೀಕತೆಯ ಹಲವು ಮೋಹಗಳ ನಡುವೆ ಕಳೆದು ಹೋಗದಂತೆ; ಒಂದು ಸಂಯಮ ರೂಢಿಸಿಕೊಂಡು ಹೊಸದೊಂದು ಘನತೆಯನ್ನು ಕಂಡುಕೊಳ್ಳುವ ಕಾರ್ಯಕ್ರಮಗಳಾಗಿಯೇ ಪ್ರಸ್ತುತಗೊಂಡವು ಎಂಬುದನ್ನು ನಾವು ಗಮನಿಸಬೇಕು. ಈ ನೆಲೆಯಲ್ಲಿಯೇ ಲೋಹಿಯಾ ಅವರು ತಮ್ಮ ಸಪ್ತ ಕ್ರಾಂತಿಗಳ ಕಲ್ಪನೆಯಲ್ಲಿ ಜಗತ್ತಿನ ಸೌಂದರ್ಯಶಾಸ್ತ್ರದಲ್ಲಿನ ಕ್ರಾಂತಿಯನ್ನೂ ಸೇರಿಸಿದ್ದುದು.

ಹೀಗೆ ಸಮಾನತೆಯ ಅರ್ಥವನ್ನು ಕೇವಲ ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಇತ್ಯಾದಿ ಬಿಡಿ ಬಿಡಿ ನೆಲೆಗಳಲ್ಲಿ ಹುಡುಕದೆ, ಅವೆಲ್ಲ ಒಟ್ಟಾರೆ ಸೇರಿದಂತಿರುವ ಮನುಷ್ಯನ ವೈಯುಕ್ತಿಕ ಘನತೆಯ ಸಾಧನೆಯ ರೂಪದಲ್ಲಿ ಕಂಡರಿಸುವ ಲೋಹಿಯಾ ಪ್ರಯತ್ನ, ಸಹಜವಾಗಿಯೇ ಸೂಕ್ಷ್ಮ ಮನಸ್ಸಿನ ಚಿಂತಕ–ಲೇಖಕ–ಕಲಾವಿದರ ಗಮನ ಸೆಳೆಯಿತು. ಅವರು ಸಂಪಾದಿಸುತ್ತಿದ್ದ 'Mankind' ಪತ್ರಿಕೆ ಜಾಗತಿಕ ಮಟ್ಟದಲ್ಲಿ ಮನುಷ್ಯನ ಇಂತಹ ಲೌಕಿಕ ಸಂಯಮವನ್ನಾಧರಿಸಿದ ಅಧ್ಯಾತ್ಮಿಕ ಘನತೆಯ ಅನ್ವೇಷಣೆಯ ದೊಡ್ಡ ವೇದಿಕೆಯಾಗಿತ್ತು. ಜಗತ್ತಿನ ಮತ್ತು ಭಾರತದ ಅತ್ಯುತ್ತಮ ಮನಸ್ಸುಗಳು ಈ ಪತ್ರಿಕೆಯಲ್ಲಿ ಬರೆದವು, ಚರ್ಚಿಸಿದವು. ಮಿತಿಯಿಲ್ಲದ ಸುಖದ ಅನ್ವೇಷಣೆಯಲ್ಲಿರುವ ಇಂದಿನ ವಿಪತ್ಕಾರಿಯಾದ ಆಧುನಿಕ ನಾಗರೀಕತೆಗೆ ಪರ್ಯಾಯವಾಗಿ, ಮಿತಿಗಳುಳ್ಳ ಬದುಕಿನ ಹೊಸ ನಾಗರೀಕತೆಯ ಮಾತೃಕೆಗಳನ್ನು ಅವು ರೂಪಿಸಲು ಯತ್ನಿಸಿದವು.

ಲೋಹಿಯಾ ನೇತೃತ್ವದ ಇಂತಹ ಪ್ರಯತ್ನ ಭಾರತದ ಸಾಂಸ್ಕೃತಿಕ ಲೋಕದಲ್ಲಿಯೂ ಹೊಸ ಸಂಚಲನ ಉಂಟು ಮಾಡಿದ್ದರಲ್ಲಿ ಆಶ್ಚರ್ಯವಿಲ್ಲ. ಆ ಕಾಲದ ಬಹುಪಾಲು ಎಲ್ಲ ಶ್ರೇಷ್ಠ ಲೇಖಕರು, ಕಲಾವಿದರು, ಉದಾಹರಣೆಗೆ ಧರ್ಮವೀರ ಭಾರತಿ, ಅಗ್ಗೇಯ, ಬೀರೇಂದ್ರಕುಮಾರ್ ಭಟ್ಟಾಚಾರ್ಜಿ, ಎಂ.ಎಫ್.ಹುಸೇನ್ ಇತ್ಯಾದಿಗಳಲ್ಲದೆ ಕರ್ನಾಟಕದ ಶ್ರೇಷ್ಠ ಮನಸ್ಸುಗಳು– ಕುವೆಂಪು, ಪು.ತಿ.ನ., ಜಿಎಸ್ಸೆಸ್ ಅವರಿಂದ ಹಿಡಿದು, ಲಂಕೇಶ್, ತೇಜಸ್ವಿ, ಸುಬ್ಬಣ್ಣ, ಆಲನಹಳ್ಳಿ ಕೃಷ್ಣ, ಅನಂತಮೂರ್ತಿ, ಚಂಪಾ, ದೇವನೂರ ಮಹಾದೇವರವರೆಗೆ ಅನೇಕರ ಆಲೋಚನಾ ಕ್ರಮ ಮತ್ತ ಬರವಣಿಗೆಯನ್ನು ಪ್ರಭಾವಿಸಿದವು. ಇದರಿಂದಾಗಿ ಸಾಹಿತ್ಯದಲ್ಲಿ ಹೊಸ ರೀತಿಯ, ಹೊಸ ನೆಲೆಯ ಬದುಕಿನ ಅನ್ವೇಷಣೆಯ ಪ್ರಯತ್ನಗಳು ಆರಂಭವಾದವು. ಭಾರತದ ಮಟ್ಟಿಗೆ ಮಾತನಾಡುವ ಅರ್ಹತೆ ನನಗಿಲ್ಲ. ಆದರೆ ಕನ್ನಡದ ಮಟ್ಟಿಗೆ ಹೇಳುವುದಾದರೆ, ಗಾಂಧಿ ನಂತರ ಲೋಹಿಯಾರಷ್ಟು ಕನ್ನಡದ ಸೃಜನಶೀಲ ಮನಸ್ಸುಗಳನ್ನು ಪ್ರಭಾವಿಸಿದ ಸಾರ್ವಜನಿಕ ವ್ಯಕ್ತಿತ್ವ ಮತ್ತೊಂದಿಲ್ಲ ಎನ್ನುವುದು ಅತಿಶಯೋಕ್ತಿಯ ಮಾತಾಗಲಾರದು.

ಹಾಗಾಗಿಯೇ ಭಾರತದ ಸಮಾಜವಾದಿ ಆಂದೋಲನ ಬಡವರಿಂದ, ಶೋಷಿತರಿಂದ, ಅವಮಾನಿತರಿಂದಷ್ಟೇ ಅಲ್ಲದೆ, ಸೂಕ್ಷ್ಮ ಮತ್ತು ಸಂವೇದನಾಶೀಲ ಮನಸ್ಸುಗಳ ಸಾಹಿತಿ–ಕಲಾವಿದರಿಂದ ತುಂಬಿರುತ್ತಿತ್ತು. ಸಮಾಜವಾದಿಗಳ ಸಭೆ ಎಂದರೆ, ಅದು ಬರೀ ಆರ್ಥಿಕ–ಸಾಮಾಜಿಕ ಚರ್ಚೆ–ಘೋಷಣೆ–ಕಾರ್ಯಕ್ರಮಗಳ ಸಭೆಯಾಗದೆ, ಒಂದು ದೊಡ್ಡ ಸಾಂಸ್ಕೃತಿಕ ಸಂಘಟನೆಯ ಸಭೆಯಂತೆ ತಲ್ಲಣಿಸುತ್ತಿರುತ್ತಿತ್ತು. ಈ ಆಂದೋಲನ ಲೋಹಿಯಾರಂತಹ ಚುಂಬಕ ಶಕ್ತಿ ಇಲ್ಲವಾದ ತದನಂತರವೇ ಒಂದು ಸಂಘಟನೆಯಾಗಿ ಉಳಿಯದೇ ಛಿದ್ರವಾಗಿ ವಿವಿಧ ಸಂಘಟನೆಗಳಲ್ಲಿ ಹಂಚಿ ಹೋಗಲು ಇದೂ ಒಂದು ಕಾರಣವಾಗಿದ್ದರಲೂಬಹುದು!

ಅದೇನೇ ಇರಲಿ, ಸಮಾಜವಾದಿ ಆಂದೋಲನ ಇಂತಹ ಸಾಂಸ್ಕೃತಿಕ ಸ್ವರೂಪಕ್ಕೆ ಸಾಕ್ಷಿಯಂತಿದ್ದಾರೆ ಇಂದಿನ ಇಬ್ಬರು ನಮ್ಮ ಅತಿಥಿಗಳಾದ, ಇಂದಿನ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕಡಿದಾಳು ಶಾಮಣ್ಣ ಮತ್ತು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಲಿರುವ ಎಚ್.ಗಣಪತಿಯಪ್ಪನವರು. ಇಬ್ಬರೂ ಅಷ್ಟೇನೂ ರಾಜಕೀಯಕ್ಕೆ ಅಂಟಿಕೊಳ್ಳದೆ ರಾಜಕಾರಣ ಮಾಡಿದ ವ್ಯಕ್ತಿಗಳು. ಶಾಮಣ್ಣ ಹೋರಾಟದಲ್ಲಿದ್ದೂ ಬರೀ ಹೋರಾಟಗಾರರಾಗದೆ, ತೇಜಸ್ವಿ, ಲಂಕೇಶ್, ಅನಂತಮೂರ್ತಿಯರಂತಹವರ ಒಡನಾಟದಲ್ಲಿ ಒಂದು ಸಾಂಸ್ಕೃತಿಕ ವ್ಯಕ್ತಿತ್ವವನ್ನು ಉಳಿಸಿಕೊಂಡು ಬಂದವರು. ಇನ್ನು ಗಣಪತಿಯಪ್ಪ ಸ್ವಾತಂತ್ರ್ಯ ಹೋರಾಟಗಾರ, ಭೂ ಹೋರಾಟಗಾರರೆಂದು ಹೆಸರಾದರೂ, ಅವರು ತಮ್ಮ ಈ ಹೋರಾಟಗಳನ್ನು ಕಾಗೋಡಿನಲ್ಲಿ ಆರಂಭಿಸಿದ್ದು ಒಂದು ಸಾಂಸ್ಕೃತಿಕ ಹೋರಾಟವಾಗಿ ಎಂಬುದನ್ನು ನಾವು ಗಮನಿಸಬೇಕು. ಅವರು ದೀವರನ್ನು ಭೂಮಾಲಿಕರ ವಿರುದ್ಧ ಹೋರಾಟಕ್ಕೆ ಅಣಿ ಮಾಡಿದ್ದು, ಮೊದಲಿಗೆ ಅವರಿಗೆ ಬದುಕಿನ ಕೆಲವು ಮೂಲಭೂತ ಅಚ್ಚುಕಟ್ಟುಗಳನ್ನು ಕಲಿಸುವ ಮೂಲಕ. ಅಕ್ಷರ ಜ್ಞಾನ, ಮಾತುಗಾರಿಕೆ, ನಾಗರಿಕ ಸ್ವಚ್ಛತೆ ಇತ್ಯಾದಿಗಳ ಪ್ರಜ್ಞೆಯನ್ನು ಅವರಲ್ಲಿ ಮೂಡಿಸುವ ಮೂಲಕ.

ಹೀಗಾಗಿ ಇವರಿಬ್ಬರ ಉಪಸ್ಥಿತಿಯಲ್ಲಿ ಈ ವಿಚಾರ ಸಂಕಿರಣ ಲೋಹಿಯಾ ಅವರ ಸಾಂಸ್ಕೃತಿಕ ವ್ಯಕ್ತಿತ್ವವನ್ನು, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಮೇಲೆ ಅವರು ಮಾಡಿರುವ ಪ್ರಭಾವಗಳ ನೆಲೆಗಳನ್ನು ಅರ್ಥ ಮಾಡಿಕೊಳ್ಳುವ, ಅರ್ಥ ಮಾಡಿಸಿಕೊಡುವ ಕೆಲಸವನ್ನು ಗಂಭೀರವಾಗಿ ಮಾಡುತ್ತದೆ ಎಂಬ ಆಶಯದೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(೨೦೦೯ರ ಅಕ್ಟೋಬರ್ ೧೨ರಂದು ಸಾಗರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಳೀಯ 'ಪ್ರಜ್ಞಾ ತಂಡ'ದ ಸಹಯೋಗದಲ್ಲಿ ಆಯೋಜಿಸಿದ್ದ 'ಲೋಹಿಯಾ ಮತ್ತು ಕನ್ನಡ ಸಾಹಿತ್ಯ' ಕುರಿತ ವಿಚಾರ ಸಂಕಿರಣದ ಆಶಯ ಭಾಷಣ)

ಲೋಹಿಯಾ: ಮಿತಿಗಳುಳ್ಳ ಬದುಕಿನ ಸೌಂದರ್ಯ ಮೀಮಾಂಸಕ*

ಸ್ನೇಹಿತರೇ,

ಬೆಳಗಿನಿಂದ ಇಲ್ಲಿ ಸಾಹಿತ್ಯ ಗೋಷ್ಠಿ ನಡೆದಿದೆ. ಸಾಹಿತ್ಯದ ನೆಲೆ, ಸ್ವರೂಪ ಇತ್ಯಾದಿಗಳ ಬಗ್ಗೆ ಇಲ್ಲಿ ವ್ಯಾಪಕ ಚರ್ಚೆಯಾಗಿದೆ. ಈ ಸಾಹಿತ್ಯ ಲಹರಿಗೆ ಭಂಗ ಬರದಂತೆ ನಾನು ನನಗೆ ಸೂಚಿಸಲಾಗಿರುವ ವಿಷಯದ ಬಗ್ಗೆ ಮಾತುಗಳನ್ನು ಆರಂಭಿಸ ಬಯಸುತ್ತೇನೆ. ನಾನು ಇಂದು ಮಾತನಾಡಬೇಕಾಗಿರುವ ವಿಷಯ: 'ಇವೊತ್ತಿನ ಭಾರತ ಮತ್ತು ಲೋಹಿಯಾ'. ಈ ವಿಷಯ ಮೇಲ್ನೋಟಕ್ಕೇ ಶುದ್ಧ ರಾಜಕೀಯ ವಿಷಯವಾಗಿ ಕಾಣುತ್ತದೆ. ಆದರೆ ಒಳಹೊಕ್ಕು ನೋಡಿದರೆ, ಸಾಹಿತ್ಯ ಮತ್ತು ರಾಜಕಾರಣಗಳು ಮನುಷ್ಯನ ಸೃಜನಶೀಲತೆಯ ಎರಡು ಮುಖ್ಯ ಅಭಿವ್ಯಕ್ತಿಗಳೆಂಬುದು ಹಾಗೂ ಇವೆರಡೂ, ಮನುಷ್ಯ ತನ್ನ ಬದುಕನ್ನು ಕಂಡರಿಸಲು ಮತ್ತು ಅದರ ಚೆಲುವನ್ನು ಹೆಚ್ಚಿಸಿಕೊಳ್ಳಲು ಮಾಡಿದ ಪ್ರಯತ್ನಗಳೇ ಎಂಬುದೂ ಅರಿವಿಗೆ ಬರುತ್ತದೆ. ಹಾಗಾಗಿ ಇವೆರಡೂ ಲೋಕ ಧರ್ಮಗಳೇ. ಲೋಕ ಧರ್ಮಗಳೆಲ್ಲಾ ಒಂದು ನೆಲೆಯಲ್ಲಿ ಕಲೆಗಳೇ! ಇವುಗಳಲ್ಲಿ ಒಂದು ಅಕ್ಷರ ಶಕ್ತಿಯನ್ನು ನೆಚ್ಚಿಕೊಂಡಿದ್ದರೆ, ಇನ್ನೊಂದು ಜನತೆಯ ಶಕ್ತಿಯನ್ನು ನೆಚ್ಚಿಕೊಂಡಿದೆ.

ಲೋಹಿಯಾ ನಿಧನರಾಗಿ ೪೦ ವರ್ಷಗಳೇ ಸಂದು ಹೋಗಿವೆ. ಅವರು ಕಟ್ಟಿದ ಸಮಾಜವಾದಿ ಆಂದೋಲನವಾಗಲೀ, ಸಮಾಜವಾದಿ ಪಕ್ಷವಾಗಲೀ ಅವರ ಕಾಲದಲ್ಲಿ ಜನತೆಯನ್ನು ಗಾತ್ರದಲ್ಲಿ ಅಷ್ಟೇನೂ ಆಕರ್ಷಿಸಿದ ಕುರುಹುಗಳಿಲ್ಲ. ಏಕೆಂದರೆ ಸಂಸತ್ತಿನಲ್ಲಾಗಲೀ, ರಾಜ್ಯ ಶಾಸನ ಸಭೆಗಳಲ್ಲಾಗಲೀ ಅವರ ಪಕ್ಷದ ಸದಸ್ಯರ ಸಂಖ್ಯೆ ಅಷ್ಟೇನೂ ಗಣನೀಯವಾಗಿರಲಿಲ್ಲ. ಆದರೂ ಅವರ ಹೆಸರು ಕೇಳದ ಪ್ರಜ್ಞಾವಂತ ಪ್ರಜೆ ಈ ದೇಶದಲ್ಲಿ ಇಲ್ಲ ಎಂದೇ ಹೇಳಬಹುದು. ಕಾರಣ, ಅವರು ಮುಖಾಮುಖಿ ಮಾಡಿಕೊಂಡದ್ದು, ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಅತ್ಯಂತ ಜನಪ್ರಿಯ ರಾಜಕೀಯ ಪ್ರತಿಮೆಯಾಗಿದ್ದ ಜವಹರಲಾಲ್ ನೆಹ್ರೂ ಅವರನ್ನು; ಅವರ ರಾಜಕೀಯ ಮಾದರಿ ಮತ್ತು ಸಂಸ್ಕೃತಿಗಳನ್ನು. ಆ ಮೂಲಕ ಪಶ್ಚಿಮವು ತನ್ನ ವಸಾಹತುಶಾಹಿ ರಾಜಕಾರಣದ ಭಾಗವಾಗಿ ದೇಶವನ್ನು ಮರುಳುಗೊಳಿಸಿ ಚಾಲ್ತಿಗೆ ತಂದಿದ್ದ ಆಧುನಿಕ

---

* ಇದು 'ಮಂಥನ' ಬಳಗವು ಜುಲೈ ೨೪ರಂದು ಶಿವಮೊಗ್ಗ ಜಿಲ್ಲೆಯ ಉಪ್ಪಳ್ಳಿಯಲ್ಲಿ ಏರ್ಪಡಿಸಿದ್ದ 'ದಶಕದ ಕನ್ನಡ ಸಾಹಿತ್ಯ: ಆಶಯದ ನೆಲೆಯಲ್ಲಿ ಅಭಿವ್ಯಕ್ತಿ' ಕುರಿತ ವಿಚಾರ ಕಮ್ಮಟದಲ್ಲಿ 'ಇವೊತ್ತಿನ ಭಾರತ ಮತ್ತು ಲೋಹಿಯಾ' ವಿಷಯವಾಗಿ ಆಡಿದ ಮಾತುಗಳ ಮತ್ತು ಆನಂತರ ನಡೆದ ಚರ್ಚೆಯಲ್ಲಿ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ಬರಹ ರೂಪ.

ನಾಗರೀಕತೆಯನ್ನು; ಅದು ಎತ್ತಿ ಹಿಡಿದಿದ್ದ ಬದುಕಿನ ಮೌಲ್ಯಗಳು ಮತ್ತು ಮಾದರಿಗಳನ್ನು. ಹೀಗಾಗಿ, ನೆಹ್ರೂ ಅವರ ರಾಜಕೀಯ ವಾರಸುದಾರಿಕೆಯೇ ಇಂದೂ ಮುಂದುವರೆಯುತ್ತಾ, ಅದರ ಆತ್ಯಂತಿಕ ಫಲವಾಗಿ ಪಶ್ಚಿಮದ ಆಧುನಿಕತೆಯ ಆತ್ಯಂತಿಕ ರೂಪದಂತಿರುವ ಜಾಗತೀಕರಣದ ಅನಾಹುತಗಳನ್ನು ದೇಶ ಎದುರಿಸುತ್ತಿರುವಾಗ, ಲೋಹಿಯಾ ಈಗ ವಿವಿಧ ರಾಜಕೀಯ ವಲಯಗಳಲ್ಲಿ ಮತ್ತೆ ಮತ್ತೆ ನೆನಪಿಗೆ ಬರುತ್ತಿರುವುದು ಸಹಜವೇ ಆಗಿದೆ. ತಮ್ಮ ಮಾತನ್ನು ಕೇಳದ ಜನಕ್ಕೆ ಅವರೇ ಒಮ್ಮೇ ಹೇಳಿದ್ದರು: 'ಜನ ನನ್ನ ಮಾತುಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ... ಬಹುಶಃ ನಾನು ಕಾಲದ ಜೊತೆ ಹೆಜ್ಜೆ ಹಾಕುವಾಗ ಒಂದರೆಡು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದೇನೇನೋ... ಆದರೆ ಒಂದಲ್ಲ ಒಂದು ದಿನ ಅವರು ಅರ್ಥ ಮಾಡಿಕೊಳ್ಳಲೇಬೇಕು. ನಾನು ಸತ್ತ ಮೇಲಾದರೂ...' ಇದಕ್ಕೆ ಸಾಕ್ಷಿಯೋ ಎಂಬಂತೆ ಇಂದು ಪೇಜಾವರರಂತಹ ಪೇಜಾವರರೇ ತಾವೂ ಲೋಹಿಯಾ ಅಭಿಮಾನಿಯೇ ಎಂದು ಹೇಳತೊಡಗಿ ಎಲ್ಲರಲ್ಲೂ ಆಶ್ಚರ್ಯವನ್ನೂ, ಗಾಬರಿಯನ್ನೂ ಹುಟ್ಟಿಸಿದ್ದಾರೆ!

ಅದೇನೇ ಇರಲಿ; ಇದಕ್ಕೆ, ಕಲೆಗಾರನೊಬ್ಬ ತನ್ನ ಬದುಕಿನ ಕಂಡರಿಸುವಿಕೆಯನ್ನು ಚಿತ್ರಿಸಲು ತಕ್ಕನಾದ ರೇಖೆಗಳನ್ನೋ, ಬಣ್ಣಗಳನ್ನೋ, ಪಾತ್ರಗಳನ್ನೋ ಕಡೆಯುವಂತೆ ಲೋಹಿಯಾ ರಾಜಕಾರಣವನ್ನು ಬದುಕಿನ ಅರ್ಥ ಗ್ರಹಿಸುವ ಮಾಧ್ಯಮವನ್ನಾಗಿ ಮಾಡಿಕೊಂಡು ತಾವು ಕಂಡುಕೊಂಡ ತಾತ್ವಿಕತೆಗೆ ಅನುಗುಣವಾದ ಕಾರ್ಯಕ್ರಮಗಳನ್ನು ಜನಮಧ್ಯದಲ್ಲಿ ಆವಿಷ್ಕರಿಸುವದರಲ್ಲಿ ತೋರಿದ ಸೃಜನಶೀಲತೆಯೇ, ಕಲಾಭಿಜ್ಞತೆಯೇ ಕಾರಣವೆಂದು ಹೇಳಬಹುದು. ಹಾಗಾಗಿಯೇ ಅವರು ಕಟ್ಟಿಕೊಟ್ಟ ಸಮಾಜವಾದದಲ್ಲಿ ಅದರ ತಾತ್ವಿಕತೆ ಮತ್ತು ಕಾರ್ಯಕ್ರಮಗಳ ನಡುವೆ ಬಿರುಕೆಂಬುದೇ ಇರಲಿಲ್ಲ. ಅವರು ಪ್ರತಿಪಾದಿಸಿದ ಸಣ್ಣ ಘಟಕಗಳ ತಂತ್ರಜ್ಞಾನ, ವ್ಯಾವಹಾರಿಕ ಭೂಪರಿಮಿತಿ ನಿಗದಿ, ಆದಾಯ ಮತ್ತು ಖರ್ಚುಗಳ ಮೇಲೆ ಮೇಲಿನ ಗರಿಷ್ಠ ಮಿತಿ, ಜಾತಿ ವಿನಾಶ ಕಾರ್ಯಕ್ರಮ, ಇಂಗ್ಲಿಷ್ ತೊಲಗಿಸಿ ಆಂದೋಲನ, ಚತುಸ್ತಂಭ ರಾಷ್ಟ್ರ ಮತ್ತು ವಿಶ್ವ ಸರ್ಕಾರದ ಪರಿಕಲ್ಪನೆ ಇತ್ಯಾದಿಗಳು ಭಾರತದ ಕೃಷಿಮೂಲ ಬದುಕು ಕೈಗಾರಿಕಾ ಸಮಾಜದಿಂದ ಹುಟ್ಟಿದ ಆಧುನಿಕ ನಾಗರೀಕತೆಯನ್ನು ರಚನಾತ್ಮಕವಾಗಿ ಮುಖಾಮುಖಿ ಮಾಡಿಕೊಳ್ಳಲು ಅನುವಾಗುವಂತೆ ರೂಪಿತವಾಗಿದ್ದವು. ಅಷ್ಟೇ ಅಲ್ಲ, ಆಧುನಿಕ ನಾಗರೀಕತೆಯ ದೊಡ್ಡ ಆಕರ್ಷಣೆಯೆನಿಸಿದ್ದ ಸಮಾನತೆಯನ್ನು ಭಾರತ ತನ್ನದೇ ವಿಶಿಷ್ಟ ರೀತಿಯಲ್ಲಿ ಸಾಧಿಸುವ ತಂತ್ರಕ್ಕನುಗುಣವಾಗಿ ಪರಸ್ಪರ ಪೂರಕವಾಗಿರುವಂತೆ ರೂಪಿತವಾಗಿದ್ದವು. ಇವುಗಳ ಕೇಂದ್ರದಲ್ಲಿದ್ದುದು, ಆಧುನಿಕ ನಾಗರೀಕತೆಯ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಆದರ್ಶಕ್ಕೆ ಎದುರಾಗಿ ಮಿತಿಗಳುಳ್ಳ ಒಂದು ಸರಳ ಸಭ್ಯ ಜೀವನಮಟ್ಟದ ಸಂಯಮ ಸಂಸ್ಕೃತಿಯ ಆಶಯ. ಆದರೆ ಈ ಒಟ್ಟು ಚಿತ್ರ, ಜನತಾ ಆಂದೋಲನದ ಮೂಲಕವೇ ಮೂಡಬೇಕೆಂಬುದು ಲೋಹಿಯಾ ಅವರ ರಾಜಕೀಯ ಕಲ್ಪನೆಯಾಗಿತ್ತು. ಅದೇ ಲೋಹಿಯಾ ಸಮಾಜವಾದದ ಶಕ್ತಿ ಮತ್ತು ಸೌಂದರ್ಯಗಳ ಮೂಲವೂ ಆಗಿದ್ದುದು.

ಈ ಹಿನ್ನೆಲೆಯಲ್ಲಿಯೇ ಲೋಹಿಯಾ ಗಾಂಧೀಜಿ ರೂಪಿಸಿದ್ದ ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಒಂದು ನಿರಂತರ ಆಂದೋಲನವಾಗಿ

ಕ್ರಿಯಾಶೀಲಗೊಳಿಸಬಯಸಿದ್ದರು. ಅದಕ್ಕಾಗಿ ಪ್ರತಿ ಊರಿನಲ್ಲೂ ನಾಗರಿಕ ಅಸಹಕಾರ ಸತ್ಯಾಗ್ರಹಿಗಳ ಒಂದು ದಳವನ್ನು ರೂಪಿಸುವ ಕಾರ್ಯಕ್ರಮವನ್ನು ಅವರು ರಾಷ್ಟ್ರದ ಮುಂದಿಟ್ಟಿದ್ದರು. ಆ ಮೂಲಕ ಆಧುನಿಕ ನಾಗರೀಕತೆಯ ಸಮಾನತೆಯ ಆಶಯವನ್ನು ಗಾಂಧೀಜಿಯ ಮಾರ್ಗ ಮತ್ತು ಗುರಿಗಳ ಅಭಿನ್ನತೆಯ ತತ್ವದ ಸ್ಫೂರ್ತಿಯೊಂದಿಗೆ ಸಾಧಿಸುವ ಪ್ರಯತ್ನ ಅವರದಾಗಿತ್ತು. ಹಾಗಾಗಿಯೇ ಅವರು ಈ ಆಧುನಿಕ ಸತ್ಯಾಗ್ರಹಿಯ ಒಂದು ಕಣ್ಣಲ್ಲಿ ಅನ್ಯಾಯ-ಅಸಮಾನತೆಗಳಿಗೆ ಒಳಗಾದ ಮನುಷ್ಯ ಅಥವಾ ಸಮುದಾಯದ ಬಗ್ಗೆ ಸಹಾನುಭೂತಿಯ ಕಣ್ಣೀರಿದ್ದಂತೆಯೇ, ಇನ್ನೊಂದು ಕಣ್ಣಲ್ಲಿ ಅನ್ಯಾಯ-ಅಸಮಾನತೆಯ ಪ್ರವೃತ್ತಿಗಳ ವಿರುದ್ಧ ಕ್ರೋಧಧ ಕಿಡಿಯೂ ಇರಬೇಕೆಂದು ಪ್ರತಿಪಾದಿಸಿದರು. ಆ ಮೂಲಕ ಸರ್ಕಾರಿ ಮತ್ತು ಆಶ್ರಮವಾಸಿ ಗಾಂಧಿವಾದಿಗಳಿಂದಾಗಿ ಹಲ್ಲು ಕಳೆದುಕೊಂಡಿದ್ದ ಸತ್ಯಾಗ್ರಹ ಪರಿಕಲ್ಪನೆಗೆ ಈ ಬಂಡಾಯ ಗಾಂಧಿವಾದಿ ಹೊಸದೊಂದು ಶಕ್ತಿ ನೀಡಿದರು. ಅಷ್ಟೇ ಅಲ್ಲ, ಅಂತಹ ಅನೇಕ ಸತ್ಯಾಗ್ರಹಗಳ ನೇತೃತ್ವ ವಹಿಸಿಯೂ ತೋರಿಸಿದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಯಾರೂ ಸೇರದಷ್ಟು ಬಾರಿ ಸೆರೆಮನೆ ಸೇರಿ, ಸ್ವಾತಂತ್ರ್ಯ ಹೋರಾಟಗಾರರಾಗಿ ವಸಾಹತುಶಾಹಿ ಭಾರತದ ಸೆರೆಮನೆಗಳಲ್ಲೂ ಅನುಭವಿಸದಂತಹ ದೈಹಿಕ ಮತ್ತು ಮಾನಸಿಕ ಆಘಾತಗಳಿಗೆ ಒಳಗಾದರು. ತಮ್ಮ ದೀರ್ಘ ರಾಜಕೀಯ ಜೀವನದ ತತ್ವ ಮತ್ತು ಕಾರ್ಯಕ್ರಮಗಳ ಅವಿಭಾಜ್ಯತೆಯ ಪ್ರತೀಕವಾಗಿಯೇ ಅವರು ಭಾರತದ ಸಾಮಾನ್ಯ ಪ್ರಜೆ ಹೋಗಬಲ್ಲ ಸರ್ಕಾರಿ ಆಸ್ಪತ್ರೆಗೆ ಮಾತ್ರ ಸೇರುವ ಹಠ ಮಾಡಿ, ತಮ್ಮ ಐವತ್ತೇಳನೇ ವಯಸ್ಸಿನಲ್ಲಿಯೇ ಕೊನೆಯುಸಿರೆಳೆದರು.

ಆದರೆ ಇಂದು ರಾಜಕಾರಣ ತಾತ್ವಿಕತೆಯನ್ನೇ ಕೈಬಿಟ್ಟು ವ್ಯಾವಹಾರಿಕವಾಗಿ ಯಶಸ್ವಿಯಾಗಬಲ್ಲ ಕಾರ್ಯಕ್ರಮಗಳನ್ನೇ ನೆಚ್ಚಿಕೊಂಡು ದೊಡ್ಡ ದಂಧೆ ಮಾತ್ರವಾಗಿ ಜನವಿರೋಧಿಯಾಗಿರುವಾಗ, ಇದನ್ನು ಎದುರಿಸಲು ಸದ್ಯಕ್ಕೆ ಸಂಸದೀಯ ಪ್ರಜಾಪ್ರಭುತ್ವದ ಹೊರತಾಗಿ ಇನ್ನಾವ ಆಸರೆಯೂ ಇಲ್ಲವಾಗಿದೆ ಎಂದು ನಂಬಿರುವವರಿಗಾದರೂ ಲೋಹಿಯಾ ಮತ್ತೆ ಮತ್ತೆ ನೆನಪಾಗುತ್ತಿದ್ದಾರೆ. ಏಕೆಂದರೆ, ಇಂದು ಬಹು ಪ್ರಚಲಿತವಿರುವ ನಾಗರಿಕ ಸಮಾಜ ಚಳುವಳಿ(Civil Society Movement) ಸಮಾಜದ ಪರಿಧಿಯಲ್ಲಿ ನಿಂತು ಯಾವ ಮೌಲ್ಯಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿದೆಯೋ, ಅದೇ ಮೌಲ್ಯಗಳನ್ನೇ ಲೋಹಿಯಾ ವ್ಯವಸ್ಥೆಯ ವಿರುದ್ಧ ನಿರಂತರ ಜಾಗೃತಿಗಾಗಿ ಅದರ ಕೇಂದ್ರದಲ್ಲಿ ನಿಂತು ಅಸಹಕಾರ ಸತ್ಯಾಗ್ರಹವನ್ನು ಜೀವಂತವಾಗುಳಿಸುವ ದಳವೊಂದರ ರಚನೆಯ ಮೂಲಕ ರಕ್ಷಿಸುವ ಪರಿಕಲ್ಪನೆಯನ್ನು ಮಂಡಿಸಿದ್ದುದು. ಆಧುನಿಕ ನಾಗರೀಕತೆಯ ವ್ಯಾಮೋಹಗಳನ್ನು ಬೆಂಬತ್ತುವ ಸಮಾಜ-ಅದೂ ಒಣ ಪಾರಮಾರ್ಥಿಕತೆಯಿಂದಾಗಿ ಲೌಕಿಕವಾಗಿ ಬಹು ಹಸಿದಿದ್ದ ಭಾರತದಂತಹ ಸಮಾಜ-ತನ್ನ ದುರಾಶೆಯಲ್ಲಿ ಒಣ ಭೌತವಾದಿಯಾಗಿ ರೂಕ್ಷವೂ, ಕ್ರೂರವೂ ಆಗುವ ಸಾಧ್ಯತೆಗಳನ್ನು ಅವರು ಮನಗಂಡಿದ್ದರು. ತಮ್ಮ ಕಾಲದ ಆಧುನಿಕ ನಾಗರೀಕತೆಯ ಎರಡು ಅವತಾರಗಳಂತಿದ್ದ ಬಂಡವಾಳಶಾಹಿ ಮತ್ತು ಕಮ್ಯೂನಿಸ್ಟ್ ಈ ಎರಡೂ ಸಮಾಜಗಳಲ್ಲಿ ಅವರಿಗೆ ಈ ಸಾಧ್ಯತೆಗಳು ಗೋಚರಿಸಿದ್ದವು. ಹಾಗಾಗಿಯೇ ಅವರು ಬಂಡವಾಳಶಾಹಿಗೆ ಪರ್ಯಾಯ, ಬಂಡವಾಳಶಾಹಿಯ ಗರ್ಭವನ್ನೊಡೆದು ಮೂಡುವುದೆಂದು ಮಾರ್ಕ್ಸ್‌ವಾದ ಹೇಳುವ ಏಕಪಕ್ಷ ಸರ್ವಾಧಿಕಾರದ ಕಮ್ಯೂನಿಸಂ

ಅಲ್ಲ. ಬದಲಿಗೆ ಬಂಡವಾಳಶಾಹಿಯನ್ನು ಬುಡಸಹಿತ ಕಿತ್ತೊಗೆಯಬಲ್ಲ ಜನತಾಂತ್ರಿಕ ಸಮಾಜವಾದ ಎಂದು ಅವರು ಪ್ರತಿಪಾದಿಸಿದರು.

ಇದಕ್ಕಾಗಿ, ಲೋಹಿಯಾ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಹೇಗೆ ಅವಳಿ ಜವಳಿ ಹುಟ್ಟುಗಳು ಎಂಬುದನ್ನು ಅಂಕಿ ಅಂಶಗಳೊಂದಿಗೆ ವಿಷದೀಕರಿಸಿ, ಸಾಮ್ರಾಜ್ಯಶಾಹಿಯಿಂದ ಭಾರತದ ನಿಜವಾದ ವಿಮೋಚನೆ ಬಂಡವಾಳಶಾಹಿಯಿಂದಲೂ ಅದು ವಿಮೋಚನೆಗೊಂಡಾಗ ಮಾತ್ರ ಎಂದು ವಿವರಿಸಿದರು. ಹಾಗೇ, ಈ ಬಂಡವಾಳಶಾಹಿಯು ಯೂರೋಪಿನ ಪುನರುಜ್ಜೀವನ (Renaissance) ಯುಗದ ಉಪ ಉತ್ಪತ್ತಿಗಳಲ್ಲೊಂದಾಗಿ ಪೌರ್ವಾತ್ಯ ದೇಶಗಳನ್ನು ಸೂರೆ ಮಾಡಿ ಬೆಳೆದಿದೆ. ಹಾಗಾಗಿ ಅದರೊಡಲಿಂದ ಮಾರ್ಕ್ಸ್‌ವಾದ ನಿರೀಕ್ಷಿಸುವಂತೆ ಭಾರತದಂತಹ ಸೂರೆಗೊಂಡ ದೇಶಗಳಿಗೆ ಪ್ರಯೋಜನವಾಗುವಂತಹ ಯಾವ ಕ್ರಾಂತಿಕಾರಿ ರಾಜಕೀಯ ಚಿಂತನೆಯೂ ಒಡಮೂಡದು ಎಂದು ಲೋಹಿಯಾ ಕಂಡುಕೊಂಡರು. ಆದುದರಿಂದ ಜಗತ್ತೀಗ ತನ್ನ ಉನ್ನತಿಗಾಗಿ, ನೆಮ್ಮದಿಗಾಗಿ ಹೊಸ ದಿಕ್ಕಿನಲ್ಲಿ ಯೋಚಿಸಬೇಕಿದೆ ಎಂದು ಸೂಚಿಸಿದರು. ಇದಕ್ಕಾಗಿ ಅವರು ಈ ಜಗತ್ತನ್ನು ಮತ್ತು ಅದರ ಎಲ್ಲ ವಿದ್ಯಮಾನಗಳನ್ನು ಭೌತ–ಅಭೌತವೆಂದು ವಿಭಜಿಸಿ ನೋಡಿ ವಿಶ್ಲೇಷಿಸುವ ಯೂರೋಪಿನ ಆಧುನಿಕ–ವೈಜ್ಞಾನಿಕವೆಂದು ಹೇಳಲಾಗುವ–ದ್ವಂದ್ವ ಗ್ರಹಿಕೆಯ ಅಧ್ಯಯನದ ಕ್ರಮವನ್ನು ಪ್ರಶ್ನಿಸಿದರು. ಲೋಕವನ್ನು ಅವಿಭಾಜ್ಯವಾಗಿ ನೋಡುವ–ಬೌದ್ಧ ತತ್ವವಾದ ಈ ಅಸ್ತಿತ್ವದಲ್ಲಿ ಯಾವುದೂ ಯಾವುದೇ ಬಿಡಿಬಿಡಿತನದಲ್ಲಿರದೆ, ಎಲ್ಲವೂ ಇನ್ನೆಲ್ಲದರ ಸಂಬಂಧದಲ್ಲಿ ಮಾತ್ರ ಅರ್ಥಪೂರ್ಣತೆಯನ್ನು ಪಡೆದಿದೆ ಎಂದು ಹೇಳುವ 'ಪ್ರತೀತ್ಯ ಸಮುತ್ಪಾದ ತತ್ವ'(Doctrine of dependent origination) ಎಂಬ ಬೌದ್ಧ ತತ್ವಕ್ಕೆ ಸಮೀಪವಾದ–ಪೂರ್ವದ್ದೆಂದು ಹೇಳಬಹುದಾದ ನೋಟ ಕ್ರಮವನ್ನು ಅವರು ಪ್ರತಿಪಾದಿಸಿದರು. ಇದು 'Truth is either whole or not at all. Partial truth is only an error of expression'(ಸತ್ಯ ಅಖಂಡವಾದದ್ದು. ಇಲ್ಲದಿದ್ದರೆ ಅದು ಸತ್ಯವೇ ಅಲ್ಲ. ಪಾರ್ಶ್ವ ಸತ್ಯ ಎಂಬುದು ಅಭಿವ್ಯಕ್ತಿ ದೋಷವಷ್ಟೆ) ಎಂಬ ಅವರ ಪ್ರಖ್ಯಾತ ಹೇಳಿಕೆಯಲ್ಲಿ ಅಂತರ್ಗತವಾಗಿದೆ ಎಂದು ನಾನು ಭಾವಿಸಿದ್ದೇನೆ.

ಇದರಿಂದಾಗಿ ಲೋಹಿಯಾ, ರಾಷ್ಟ್ರ, ಸಮಾಜ, ಮನುಷ್ಯ, ಇತಿಹಾಸ, ನಾಗರೀಕತೆ ಗಳನ್ನಷ್ಟೇ ಅಲ್ಲ; ಆಧುನಿಕತೆ, ಬಂಡವಾಳ, ತಂತ್ರಜ್ಞಾನ, ಸಮಾನತೆ ಇತ್ಯಾದಿ ಪರಿಕಲ್ಪನೆಗಳನ್ನು ಪುನಾರಚಿಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು. ಸಮಾನತೆ ಎಂಬ ಪಶ್ಚಿಮದ ಆಧುನಿಕ ಪರಿಕಲ್ಪನೆಗೆ ಬದಲಾಗಿ ಅವರು ಸಮತೆ ಎಂಬ ಭಾರತೀಯ ಮೂಲದ ಪರಿಕಲ್ಪನೆಯನ್ನು ಮಂಡಿಸಿ, ಆಧುನಿಕತೆಯ ಪರಿಕಲ್ಪನೆಗೊಂದು ಭಾರತೀಯ ಪರಿಪ್ರೇಕ್ಷವನ್ನೊದಗಿಸುವ ಪ್ರಯತ್ನ ಮಾಡಿದರು. ಸಮತೆ ಎಂದರೆ ಭೌತಿಕ ಸಮಾನತೆಯನ್ನು ಒಳಗೊಂಡೂ ಅದನ್ನು ಮೀರಿದ ವೈಯುಕ್ತಿಕ ಮತ್ತು ಸಾಮುದಾಯಿಕ ನೆಲೆಯ ಒಂದು ಸಮತುಲಿತ ಸ್ಥಿತಿ. ಹಾಗಾಗಿಯೇ ಅದನ್ನು ಲೋಹಿಯಾ ರಾಷ್ಟ್ರ ರಾಷ್ಟ್ರಗಳ ನಡುವಣ ಸಮಾನತೆಯಿಂದ ಮೂಡುವ ರಾಷ್ಟ್ರದೊಳಗಿನ ಸಮಾನತೆಯು, ವ್ಯಕ್ತಿ ನೆಲೆಯಲ್ಲಿ ಸೃಷ್ಟಿಸುವ ಬಾಹ್ಯ ಬಂಧುತ್ವದ ಭಾವನೆ ಮತ್ತು ಆಂತರಿಕ ಪ್ರಶಾಂತಿಯ ಸ್ಥಿತಿ ಎಂದು ಬಣ್ಣಿಸುತ್ತಾರೆ. ಪ್ರತಿಯೊಬ್ಬ ವಿಶ್ವ ಪ್ರಜೆಯಲ್ಲೂ ಈ ನಾಲ್ಕು ಆಯಾಮಗಳ 'ಸಮತೆ'ಯನ್ನು ಸೃಷ್ಟಿಸುವ

ಆಶಯವುಳ್ಳ ತತ್ವ ಚಿಂತನೆಯನ್ನು ಅವರು ತಮ್ಮ ಸಮಾಜವಾದವಾಗಿ ಪ್ರಸ್ತುತಪಡಿಸುತ್ತಾರೆ. ಅದನ್ನು ಅವರು ಹೊಸ ಸಾಂಸ್ಕೃತಿಕ ಸಮಗ್ರೀಕರಣ ಮತ್ತು ಭೌತಿಕ ಸಮೀಪೀಕರಣಗಳ ಮೂಲಕ ಸಾಧಿಸಬಹುದಾದ ಹೊಸ ಜಾಗತಿಕ ನಾಗರೀಕತೆಯ ಸಿದ್ಧಾಂತವೆಂದೂ ಬಣ್ಣಿಸುತ್ತಾರೆ.

ಇದಕ್ಕನುಗುಣವಾಗಿಯೇ ಲೋಹಿಯಾ ಬೃಹತ್ ಬಂಡವಾಳವನ್ನಾಧರಿಸಿದ ಬೃಹತ್ ಘಟಕಗಳ ತಂತ್ರಜ್ಞಾನದ ಬದಲಾಗಿ, ಸ್ಥಳೀಯ ಬಂಡವಾಳದ ಲಭ್ಯತೆಯ ಪ್ರಮಾಣ ಮತ್ತು ಸ್ಥಳೀಯ ಅಗತ್ಯಗಳನ್ನಾಧರಿಸಿ; ಸ್ಥಳೀಯರು ತಮ್ಮ ಸೃಜನಶೀಲತೆಯಿಂದ ಆವಿಷ್ಕರಿಸಿದ ಸಣ್ಣ ಘಟಕಗಳ ತಂತ್ರಜ್ಞಾನವನ್ನು ಪ್ರತಿಪಾದಿಸುತ್ತಾರೆ. ಈ ಸೃಜನಶೀಲತೆಯು ಮುಕ್ತಾದ ಮತ್ತು ಸ್ಥಳೀಯ ಪ್ರತಿಭೆ ಮತ್ತು ಶಕ್ತಿಗಳನ್ನು ಕಳೆದುಕೊಂಡ ಸಮಾಜದಿಂದ ಸಾಧ್ಯವಿಲ್ಲವೆಂದು ಅವರು ವಾದಿಸುತ್ತಾರೆ. ಹಾಗಾಗಿ ಭಾರತದಲ್ಲಿ ಜಾತಿ ವಿನಾಶ ಮತ್ತು ಅದರ ಭಾಗವಾಗಿ ದಲಿತರು, ಶೂದ್ರರು, ಆದಿವಾಸಿಗಳು ಮಹಿಳೆಯರು ಹಾಗೂ ಮುಸ್ಲಿಮರಿಗೆ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ವಿಶೇಷ ಪ್ರಾಶಸ್ತ್ಯ ನೀಡಿ ಆ ಸಮುದಾಯಗಳಲ್ಲಿ ಆತ್ಮವಿಶ್ವಾಸ ತುಂಬುವುದು, ಕೆಳ ಹಂತದಿಂದ ಕಟ್ಟಲ್ಪಟ್ಟ ನಾಲ್ಕು ನೆಲೆಗಳಲ್ಲಿ ವಿಕೇಂದ್ರೀಕೃತವಾದ ಆಡಳಿತ ಮತ್ತು ಇಂಗ್ಲಿಷ್ ತೊಲಗಿಸಿ ಕಾರ್ಯಕ್ರಮಗಳನ್ನು ರೂಪಿಸಿ ನೀಡುತ್ತಾರೆ. ಹಾಗೇ ಭೂ ಪರಿಮಿತಿ ಮತ್ತು ಆದಾಯ ಹಾಗೂ ಖರ್ಚುಗಳ ಮೇಲಿನ ಗರಿಷ್ಠ ಮಿತಿ ನಿಗದಿಗಳ ಮೂಲಕ ದೇಶವೊಂದರಲ್ಲಿ ಅಸಮಾನತೆ ೧:೧೦ ಪ್ರಮಾಣವನ್ನು ಮೀರದಂತೆ ನೋಡಿಕೊಳ್ಳಬೇಕೆಂದು ಸೂಚಿಸುತ್ತಾರೆ.

ಇದೆಲ್ಲದರ ಆತ್ಯಂತಿಕ ಪರಿಣಾಮವಾಗಿ ಎಲ್ಲರಿಗೂ ಸಾಧ್ಯವಾಗುವ ಸರಳ ಸಭ್ಯ ಜೀವನ ಮಟ್ಟವೊಂದನ್ನು ದೇಶ ಕಂಡುಕೊಳ್ಳಬಹುದೆಂದು ಲೋಹಿಯಾ ಭಾವಿಸುತ್ತಾರೆ. ಮನುಷ್ಯನ ಮನಸ್ಸನ್ನು ಹೀಗೆ ಒಂದು ಆರೋಗ್ಯಕರ ಮಿತಿಗೆ ಒಳಪಡಿಸುವ ಪ್ರಯತ್ನ ಸಾಧ್ಯವೆಂದು ನಮ್ಮ ಉಪನಿಷತ್ತುಗಳಲ್ಲಿರುವ ಆತ್ಮೋನ್ನತಿಯ 'ಶ್ರೇಯ' ಮತ್ತು ಲೌಕಿಕ ಉನ್ನತಿಯ 'ಪ್ರೇಯ' ಪರಿಕಲ್ಪನೆಗಳನ್ನು ಕುರಿತ ಚರ್ಚೆಯ ಪ್ರಸ್ತಾಪ ಮಾಡುತ್ತಾ ಹೇಳುತ್ತಾರೆ. ಸಮಾಜವಾದಿಗಳು ಇದೆಲ್ಲದರ ಬಗ್ಗೆ ವಿವರವಾಗಿ ಚಿಂತಿಸಲು, ಧ್ಯಾನಿಸಲು; ತಮ್ಮ ಹೋರಾಟಗಳಿಗೆ ಹೊಸ ಉತ್ಸಾಹ ಮತ್ತು ಸ್ಫೂರ್ತಿ ಗಳಿಸಿಕೊಳ್ಳಲು, ಆಗಾಗ್ಗೆ ಬಂದು ತಂಗಿ ಹೋಗುವಂತಹ 'ಸಮಾಜವಾದಿ ಆಶ್ರಮ'ಗಳನ್ನು ಸ್ಥಾಪಿಸಿಕೊಳ್ಳಬೇಕೆಂದು ಕರೆ ನೀಡುವ ಮೂಲಕ ಸಮಾಜವಾದವನ್ನು ಪೂರ್ಣವಾಗಿ ಪಶ್ಚಿಮದ ತಾತ್ವಿಕ ತೆಕ್ಕೆಯಿಂದ ಬಿಡುಗಡೆಗೊಳಿಸುತ್ತಾರೆ.

ಇದಕ್ಕೆ ಪೂರಕವಾಗಿ ಲೋಹಿಯಾ, ಧರ್ಮ ಕುರಿತ ಆಧುನಿಕ ದೃಷ್ಟಿಕೋನದ ಮಿತಿಯನ್ನು ಗುರುತಿಸಿ, ಸಾರ್ವಜನಿಕ ಜೀವನದಲ್ಲಿ ಸಮಕಾಲೀನ ವಿಮರ್ಶೆಗೊಳಪಟ್ಟ ಧರ್ಮಕ್ಕೆ–ಅದರ ಅಧ್ಯಾತ್ಮಿಕ ನೆಲೆಯಲ್ಲಿ–ಅವಕಾಶ ಇರಬೇಕೆಂದು ವಾದಿಸುತ್ತಾರೆ. ಇದರ ವಿಷದೀಕರಣದ ಭಾಗವಾಗಿ ರಾಮಾಯಣ–ಮಹಾಭಾರತಗಳಂತಹ ಹಲವು ಧಾರ್ಮಿಕ–ಸಾಹಿತ್ಯಿಕ ಪಠ್ಯಗಳನ್ನು ಸಮಕಾಲೀನ ವ್ಯಾಖ್ಯಾನಗಳಿಗೆ ಒಳಪಡಿಸುತ್ತಾರೆ. ರಾಮ–ಕೃಷ್ಣ–ಶಿವರಂತಹ ಪುರಾಣ ಪ್ರತೀಕಗಳಿಗೆ ಹೊಸ ಅರ್ಥ ನೀಡುತ್ತಾರೆ. ನನಗೆ ಆದರ್ಶವಾಗ ಬೇಕಾಗಿರುವುದು ಕೋದಂಡರಾಮನಲ್ಲ, ಸೀತಾರಾಮ ಎನ್ನುತ್ತಾರೆ. ಇದರ ಅಂಗವಾಗಿ

ಸ್ವತಃ ತಮ್ಮ ಪಕ್ಷದ ವತಿಯಿಂದ ಪ್ರತಿ ವರ್ಷ ಚಿತ್ರಕೂಟದಲ್ಲಿ 'ರಾಮಾಯಣ ಮೇಳ' ನಡೆಸಿ ರಾಮಾಯಣದ ಬಹುಪರ್ಯಾಯತೆಯನ್ನು ಪರಿಚಯಿಸುವ ಪ್ರಯತ್ನ ಮಾಡುತ್ತಾರೆ. ಹಾಗೇ ನಮ್ಮ ಹೆಣ್ಣು ಮಕ್ಕಳಿಗೆ ಆದರ್ಶವಾಗಬೇಕಾಗಿರುವುದು ಪರಮ ವಿಧೇಯತೆಯ ಸೀತೆಯೂ ಅಲ್ಲ, ಪತಿ ಪರಾಯಣೆಯಾದ ಸಾವಿತ್ರಿಯೂ ಅಲ್ಲ; ಐವರು ಗಂಡಂದಿರ ಕೋಟಲೆಯ ರಾಜಕಾರಣದ ಮಧ್ಯೆಯೂ ಕೃಷ್ಣನೊಡನೆಯ ದಿವ್ಯ ಪ್ರೇಮದ ಪ್ರಭಾವದಲ್ಲಿ ಪರಮ ವಿವೇಕ ಮತ್ತು ದಿಟ್ಟತನವನ್ನಾಧರಿಸಿದ ತನ್ನದೇ ರಾಜಕಾರಣವನ್ನು ಪ್ರದರ್ಶಿಸಿದ ದ್ರೌಪದಿ ಎನ್ನುತ್ತಾರೆ.

ಹಾಗೇ ಬಾಬರ್ ಹೊರಗಿನವನಿರಬಹುದು; ಆದರೆ ಅಕ್ಬರ್ ಅಲ್ಲ ಎಂಬ ಹಿಂದೂ-ಮುಸ್ಲಿಂ ಅನುಸಂಧಾನದ ಹೊಸ ನೆಲೆಯೊಂದನ್ನು ಲೋಹಿಯಾ ಗುರುತಿಸುತ್ತಾರೆ. ಭಾರತೀಯ ಮುಸ್ಲಿಮನನ್ನು ವಿರೋಧಿಸುವವರು ಪಾಕಿಸ್ತಾನದ ಮಿತ್ರರೇ ಆಗಿರುತ್ತಾರೆ ಎಂದು ಎಚ್ಚರಿಸುತ್ತಾರೆ. ಬುರ್ಖಾ, ಪರದಾಗಳಂತಹ ಮಧ್ಯಯುಗೀನ ಮತ್ತು ಅನಾಗರಿಕ ಪದ್ಧತಿಗಳನ್ನು ನಿಷೇಧಿಸಬೇಕೆಂದು ಆಗ್ರಹಿಸುತ್ತಾರೆ. ಅಲ್ಲದೆ, ಇಡೀ ದೇಶಕ್ಕೆ ಸಾಮಾನ್ಯ ನಾಗರಿಕ ಸಂಹಿತೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತಾರೆ. ಮತಾಂತರಕ್ಕೆ ಅವಕಾಶವಿರಬೇಕು;ಆದರೆ ಅವುಗಳ ನೋಂದಣಿ ಆಗುವ ವ್ಯವಸ್ಥೆ ಇರಬೇಕು ಎನ್ನುತ್ತಾರೆ. ಚೀನಾ ಆಕ್ರಮಣದ ಸಂದರ್ಭದಲ್ಲಿ 'ಹಿಮಾಲಯ ಬಚಾವೋ' ಆಂದೋಲನ ನಡೆಸಿ ಹಿಮಾಲಯ ಹೇಗೆ ಭಾರತಕ್ಕೆ ರಾಜಕೀಯವಾಗಿ ಮಾತ್ರವಲ್ಲ, ಸಾಂಸ್ಕೃತಿಕವಾಗಿ ಕೂಡಾ ಬಹುಮುಖ್ಯ ಎಂಬುದನ್ನು ರಾಷ್ಟ್ರಕ್ಕೆ ವಿವರಿಸುವ ಪ್ರಯತ್ನ ಮಾಡುತ್ತಾರೆ. ಹೀಗೆ ಲೋಹಿಯಾ ಅವರ ಚಿಂತನೆಯು ರಾಜಕಾರಣ-ಧರ್ಮ-ಸಾಹಿತ್ಯ-ಸಂಸ್ಕೃತಿಗಳೆಂಬ ವಿಭಜನೆಯನ್ನು ಮೀರಿದ ಒಂದು ಸಮಗ್ರ ನೋಟವನ್ನು ಒಳಗೊಂಡ ತತ್ವ ಮೀಮಾಂಸೆಯೇ ಆಗಿರುವುದನ್ನು ನಾವು ಗಮನಿಸಬಹುದು.

ಈ ಸಮಗ್ರ ನೋಟದ ಹಿಂದೆ ಇರುವುದು ಆಧುನಿಕತೆಯ ವಿವಿಧ ಅವತಾರಗಳ ಪ್ರಭಾವದಲ್ಲಿ-ವಿಶೇಷವಾಗಿ ಅದರ ವಿಭಜನಶೀಲ ಭೌತವಾದಿ ವೈಚಾರಿಕತೆಯ ಗೊಂದಲಕ್ಕೆ ಸಿಕ್ಕಿ-ಮನುಷ್ಯ ತನ್ನ ಕೇಂದ್ರವನ್ನೇ ಕಳೆದುಕೊಳ್ಳಬಹುದೆಂಬ ಆತಂಕ. ಹಾಗಾಗಿ ಇದು ಸಮಾಜ-ವಾದವೆಂದು ಪ್ರತಿಪಾದಿಸಲ್ಪಟ್ಟಿದೆಯಾದರೂ, ಆರಂಭದಿಂದ ಅಂತ್ಯದವರೆಗೂ ಮನುಷ್ಯನನ್ನು ತನ್ನ ಕೇಂದ್ರ ಗಮನದಲ್ಲಿರಿಸಿಕೊಂಡ ತತ್ವ ಚಿಂತನೆಯೇ ಆಗಿದೆ. ಇದು ಲೋಹಿಯಾ ಸಮಾಜವಾದವನ್ನು ಇತರ ರೀತಿಯ ಸಮಾಜವಾದಗಳಿಂದ ಭಿನ್ನವಾಗಿಸುತ್ತದೆ. ಮಿಕ್ಕ ಸಮಾಜವಾದಗಳೆಲ್ಲವೂ ಸಮಾಜ ಪರಿವರ್ತನೆಯ ಮೂಲಕವೇ ಆತ್ಯಂತಿಕವಾಗಿ ವ್ಯಕ್ತಿಯ ಪರಿವರ್ತನೆಯೂ ಸಾಧ್ಯ ಎಂದು ಭಾವಿಸಿದ್ದರೆ, ಲೋಹಿಯಾ ಜಗತ್ತು, ರಾಷ್ಟ್ರ ಅಥವಾ ಸಮಾಜ ಮತ್ತು ವ್ಯಕ್ತಿ ಒಂದರೊಳಗೊಂದು ಹಾಸು ಹೊಕ್ಕಾಗಿದ್ದು, ಈ ಎಲ್ಲ ನೆಲೆಗಳಲ್ಲೂ ಪರಿವರ್ತನೆಯನ್ನು ಸಾಧ್ಯ ಮಾಡುವ ಕಾರ್ಯಕ್ರಮಗಳು ಮಾತ್ರ ಮನುಷ್ಯ ಹಂಬಲಿಸುತ್ತಿರುವ ನಿಜವಾದ ಬಿಡುಗಡೆಯನ್ನು ಸಾಧಿಬಲ್ಲವು ಎಂದು ಕಂಡುಕೊಂಡರು.

ಬಂಡವಾಳಶಾಹಿ ರಾಜಕಾರಣಕ್ಕೆ ಸೂಚಿಸಲಾಗುವ ಪರ್ಯಾಯ ರಾಜಕಾರಣಗಳೆಲ್ಲವೂ ಆಗ-ಲೋಹಿಯಾ ತಮ್ಮ ರಾಜಕೀಯ ತತ್ವವನ್ನು ಆವಿಷ್ಕರಿಸಿಕೊಂಡ ಇಪ್ಪತ್ತನೇ ಶತಮಾನದ ಆರಂಭದ ದಶಕಗಳಲ್ಲಿ-ಒಂದಲ್ಲ ಒಂದು ರೀತಿಯಲ್ಲಿ ಸಮಾಜವಾದ

ಎನಿಸಿಕೊಳ್ಳುತಿದ್ದವು. ಅಲ್ಲದೆ, ಲೋಹಿಯಾ ತಮ್ಮ ಮೊದಲ ರಾಜಕೀಯ ಪಾಠಗಳನ್ನು ವಿವಿಧ ಸಮಾಜವಾದಗಳ ಪ್ರಯೋಗಶಾಲೆಯಂತಿದ್ದ ಜರ್ಮನಿಯ ರಾಜಕೀಯ ಕಮ್ಮಟದಲ್ಲಿ ಕಲಿಯಲಾರಂಭಿಸಿ, ಅದನ್ನು ಮೂಲತಃ ಮಾರ್ಕ್ಸ್‌ವಾದಿ ಚಿಂತನಾ ಶಾಲೆಯಾಗಿದ್ದ ಭಾರತೀಯ ಸಮಾಜವಾದಿ ಕೂಟದಲ್ಲಿ ಮುಂದುವರೆಸಿದ್ದರಿಂದಾಗಿ, ಅವುಗಳ ಮಿತಿಗಳನ್ನೆಲ್ಲ ದಾಟಿದ ಮೇಲೂ ಅವರ ಚಿಂತನೆ ಸಮಾಜವಾದದ ಹೆಸರಲ್ಲಿ ಪ್ರತಿಪಾದಿತವಾಯಿತಷ್ಟೇ. ಹಾಗೆ ನೋಡಿದರೆ, ವೈಯುಕ್ತಿಕ ಕುಟುಂಬವೊಂದೆಂಬುದು ಇಲ್ಲದೆ, ಒಂದು ನಿರ್ದಿಷ್ಟ ವಿಳಾಸವನ್ನಾಗಲೀ ಅಥವಾ ಒಂದು ಬ್ಯಾಂಕ್ ಖಾತೆಯನ್ನಾಗಲೀ ಹೊಂದಿಲ್ಲದೆ ಮೂಲತಃ ಅಲೆಮಾರಿ ವ್ಯಕ್ತಿತ್ವದವರಾಗಿದ್ದ ಲೋಹಿಯಾ ಅವರ ತತ್ವ ಚಿಂತನೆ ಆಧುನಿಕ ಪಕ್ಷ ರಾಜಕಾರಣಕ್ಕಿಂತ ನಮ್ಮ ತತ್ವಪದಕಾರರ ಅಥವಾ ಅವಧೂತರ ಪರಂಪರೆಯ ಜನಾಂದೋಲನಕ್ಕೆ ಹತ್ತಿರವಾದದ್ದು ಎಂದು ಹೇಳಬಹುದು. ಹಾಗಾಗಿಯೇ ಅವರ ಸಮಾಜವಾದ, ಪಕ್ಷ ರಾಜಕಾರಣದ ರೂಪದಲ್ಲಿ ವ್ಯಾವಹಾರಿಕ ಯಶಸ್ಸನ್ನು ಪಡೆಯಲಾಗಲಿಲ್ಲ. ಆದರೆ ಅದು ತಾತ್ವಿಕವಾಗಿ ಅದರ ರಾಜಕೀಯ ಚೌಕಟ್ಟಿನಾಚೆಯ ಜನರನ್ನೂ ಆಕರ್ಷಿಸುವ ಮೂಲಕ ಜನಮನದಲ್ಲಿ ನೆಲೆಸಿ, ಭಾರತೀಯ ಸಮಾಜದಲ್ಲಿ ಒಂದು ನಿರಂತರ ತಳಮಳವನ್ನು ಸೃಷ್ಟಿಸುತ್ತಿರುವ ಸೃಜನಶೀಲ ಶಕ್ತಿಯಾಗಿ ಉಳಿದುಕೊಂಡಿದೆ.

ಹಾಗಾಗಿಯೇ ಇಂದು ಅವರು ಕಟ್ಟಿದ ಪಕ್ಷವಿಲ್ಲದಿದ್ದರೂ, ಅವರ ಪ್ರತಿಪಾದಿಸಿದ ಸಮಾಜವಾದ ಕಾಲದ ಹೊಡೆತಗಳಿಗೆ ಸಿಕ್ಕಿ ರಾಜಕೀಯ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದ್ದರೂ, ಜಾಗತಿಕ ಮತ್ತು ಭಾರತೀಯ ರಾಜಕಾರಣ ಕುರಿತ ಅವರು ನೀಡಿದ ಹೊಳಹುಗಳು ಇಂದೂ ಅವರನ್ನು ನೆನೆಪಿಸಿಕೊಳ್ಳುವಂತೆ ನಮ್ಮನ್ನು ಪ್ರೇರೇಪಿಸುತ್ತಿವೆ. ಇಂದಿನ ಜಾಗತೀಕರಣ ಮತ್ತೇನೂ ಅಲ್ಲದೆ ಬದುಕಿನ ಮಾರುಕಟ್ಟೀಕರಣವೇ ಆಗಿದ್ದು, ಅದು ತಾನು ಸೃಷ್ಟಿಸುತ್ತಿರುವ ಸಂಪತ್ತಿನ ಮಾಯಾ ದ್ವೀಪಗಳ ಆಕರ್ಷಣೆಯಲ್ಲಿ ಅವನಿಗೆ ಗೊತ್ತಿಲ್ಲದಂತೆಯೇ ಮನುಷ್ಯನನ್ನೂ, ಮನುಷ್ಯ ಸಂಬಂಧಗಳನ್ನೂ ಗ್ರಾಹಕ ವಸ್ತುವನ್ನಾಗಿ ಮಾಡುತ್ತಿದೆ. ಇದಕ್ಕಿಂತ ಹೆಚ್ಚು ಅನಾಹುತಕಾರಿ ಸಂಗತಿ ಎಂದರೆ, ನಮ್ಮ ಇಡೀ ರಾಜಕೀಯ ಮುಖ್ಯ ಪ್ರವಾಹ ಬೇರೆ ಪರ್ಯಾಯವೇ ಇಲ್ಲವೆಂಬಂತೆ ಅದಕ್ಕೆ ಶರಣಾಗುತ್ತಿದೆ. ಇಂತಹ ಸಂದರ್ಭದಲ್ಲಿ ನಮಗೆ ಲೋಹಿಯಾ ನೆನಪಾಗಬೇಕಾದದ್ದು ಅವರ ಈ ಬೀಜ ಮಾತಿಗಾಗಿ: ನಿಜವಾಗಿ ಆಧುನಿಕವಾಗುವುದೆಂದರೆ, ಮಿತಿಗಳುಳ್ಳ ಬದುಕಿನ ಹೊಸ ಸೌಂದರ್ಯಶಾಸ್ತ್ರವನ್ನು ಸೃಷ್ಟಿಸಿಕೊಳ್ಳುವುದೇ ಆಗಿದೆ; ಮಿಕ್ಕೆಲ್ಲವೂ ಅನಾಹುತಕಾರಿಯೇ.

ಇದು ಇಂದು ನಮ್ಮನ್ನು ನಿಜ ಎಚ್ಚರಕ್ಕೆ ಒಯ್ಯಬಹುದಾಗಿದೆ.

ಪ್ರಶ್ನೋತ್ತರ:

ಪ್ರಶ್ನೆ–೧: ಲೋಹಿಯಾ ಬ್ರಾಹ್ಮಣ ಜಾತಿಯ ವಿರುದ್ಧ ಮಂಡಿಸಿದ ವಿಚಾರಗಳನ್ನು ಬಳಸಿಕೊಂಡು ಕರ್ನಾಟಕದಲ್ಲಿ ಕೆಲ ಮೇಲ್ಜಾತಿ ಬ್ರಾಹ್ಮಣೇತರರು ತಮ್ಮನ್ನು ಶೂದ್ರರೆಂದು ಕರೆದುಕೊಂಡು ಸಾರ್ವಜನಿಕ ಜೀವನದಲ್ಲಿ ಲಾಭ ಮಾಡಿಕೊಂಡರೆಂಬ ಟೀಕೆ ಇದೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ: ಮೊದಲಾಗಿ ಲೋಹಿಯಾ ಬ್ರಾಹ್ಮಣ ಜಾತಿಯ ವಿರುದ್ಧ ವಿಚಾರಗಳನ್ನು ಮಂಡಿಸಿದರು ಎಂದು ಹೇಳುವುದೇ ತಪ್ಪು. ಅವರು ವಿಚಾರಗಳನ್ನು ಮಂಡಿಸಿದ್ದು ಜಾತಿ ವ್ಯವಸ್ಥೆಯ ವಿರುದ್ಧ. ಈ ಜಾತಿ ವ್ಯವಸ್ಥೆ ಶ್ರೇಣೀಕರಣವನ್ನು ಆಧರಿಸಿರುವುದರಿಂದ, ಈ ಶ್ರೇಣಿಯಲ್ಲಿ ಮೇಲಿರುವ ಬ್ರಾಹ್ಮಣ ಜಾತಿಯವರು(ಹಾಗೇ ದ್ವಿಜರೆನಿಸಿದ ಕ್ಷತ್ರಿಯ ಮತ್ತು ವೈಶ್ಯರು) ಇತಿಹಾಸದಲ್ಲಿ ಹೆಚ್ಚಿನ ಲಾಭ, ಪ್ರಯೋಜನಗಳನ್ನು ಪಡೆದಿದ್ದಾರೆ. ಇದನ್ನರಿತು ಈ ಜನ ಈಗ ಸ್ವಲ್ಪ ಕಾಲ ಮತ್ತು ಸ್ವಲ್ಪ ಮಟ್ಟಿಗೆ ಹಿಂದೆ ಸರಿದು, ಶೂದ್ರ(ಅಂದರೆ ದ್ವಿಜೇತರ) ಜಾತಿಯವರಿಗೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಅವರು ಹೇಳಿದರು. ಶತಮಾನಗಳ ಜಾತಿ ವ್ಯವಸ್ಥೆಯಿಂದಾಗಿ ದ್ವಿಜ ಮತ್ತು ಶೂದ್ರರಿಬ್ಬರೂ ಅರೆ ಸತ್ತು ಬಿದ್ದಿದ್ದಾರೆ. ಹಾಗಾಗಿ ಅವರು ಪರಸ್ಪರ ಕೈಹಿಡಿದು ಮೇಲೇಳಬೇಕು. ಸಮಾಜವಾದಿ ಸಮಾಜ ರಚನೆಗೆ ಶೂದ್ರ ಬೀಜವಾದರೆ, ಬ್ರಾಹ್ಮಣ ಗೊಬ್ಬರವಾಗಬೇಕು. ಇವು ಲೋಹಿಯಾ ಜಾತಿ ವ್ಯವಸ್ಥೆ ಕುರಿತಂತೆ ರೂಪಕ ಭಾಷೆಯಲ್ಲಿ ಮಂಡಿಸಿದ ವಿಚಾರ ಲಹರಿ. ಇದರ ಭಾವವನ್ನು ಸರಿಯಾಗಿ ಅರಿತು ಅನೇಕ ದ್ವಿಜರು ಸಮಾಜವಾದಿ ಆಂದೋಲನದಲ್ಲಿ ಭಾಗವಹಿಸಿದರು ಮತ್ತು ಶೂದ್ರ ನಾಯಕತ್ವವನ್ನು ಬೆಳೆಸಿದರು. ಇದರ ಅತ್ಯುತ್ತಮ ಉದಾಹರಣೆ, ಬಿಹಾರದ ಕರ್ಪೂರಿ ಠಾಕೂರ್.

ನಿಜ, ಲೋಹಿಯಾ ನಿಧನಾನಂತರ ಸಮಾಜವಾದಿ ಆಂದೋಲನ ದಿಕ್ಕೆಟ್ಟಾಗ, ಜಾತಿ ವಿರೋಧಿಯಾದ ಸಮಾಜವಾದಿ ನಿಲುವು, ಕೆಲವೆಡೆ ಬ್ರಾಹ್ಮಣ ವಿರೋಧಿಯಾಗಿ ಸ್ಥೂಲಗೊಂಡಿತು. ಇದರಿಂದ ನಷ್ಟವಾದದ್ದು ಸಮಾಜವಾದಿ ಆಂದೋಲನಕ್ಕೇ. ಅದು ತನ್ನ ವಿಶ್ವಾಸಾರ್ಹತೆಯನ್ನೇ ಕಳೆದುಕೊಳ್ಳುತ್ತಾ ಹೋಯಿತು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಇದು ಹೆಚ್ಚಾಗಿ ಕಂಡು ಬಂದದ್ದು ಸಾಹಿತ್ಯ-ಸಾಂಸ್ಕೃತಿಕ ವಲಯದಲ್ಲೇ ಹೊರತು, ಸಾಮಾಜಿಕ ಜೀವನದಲ್ಲಲ್ಲ. ಇದರಿಂದಾಗಿ, ಹೇಳಿಕೊಳ್ಳುವಂತಹ ಪ್ರತಿಭೆಯೇನಿಲ್ಲದ ಕೆಲ ಬ್ರಾಹ್ಮಣ ಲೇಖಕ-ಕಲಾವಿದರಿಗೆ ಒಂದಷ್ಟು ಮುಜುಗರವಾಗಿರಬಹುದೇ ಹೊರತು, ಬೇರೇನೂ ನಷ್ಟವಾದಂತಿಲ್ಲ. ಆದರೆ ಇದಕ್ಕೆಲ್ಲ ಬ್ರಾಹ್ಮಣರ ಪರಂಪಾರಗತ ಸಾಹಿತ್ಯ-ಸಾಂಸ್ಕೃತಿಕ ರಾಜಕಾರಣದ ಕೊಡುಗೆಯೂ ಇತ್ತು ಎಂಬುದನ್ನೂ ನಾವು ಬರೆಯಬಾರದು. ಈ ಸಂಬಂಧ ಲಂಕೇಶ್ ತಮ್ಮ 'ಕಂಡದ್ದು ಕಂಡ ಹಾಗೆ'ಯಲ್ಲಿ ಪ್ರಕಟಿಸಿರುವ ಅಡಿಗರಿಗೆ (ಅಂದಿನ 'ಸಾಕ್ಷಿ'ಗೆ ಕಳಿಸಿ ಪ್ರಕಟವಾಗದ) ಬರೆದಿರುವ ಪತ್ರವನ್ನೂ ಗಮನಿಸುವುದೂ ಒಳ್ಳೆಯದು.

ಪ್ರಶ್ನೆ-೨: ಈ ಸಮಾಜವನ್ನು ಬ್ರಾಹ್ಮಣರು ಆಳಿದಂತೆ ಮುಸ್ಲಿಮರೂ ಆಳಿದ್ದಾರೆ. ಇತಿಹಾಸ ಹೀಗಿರುವಾಗ, ಈ ದೇಶದ ಅವನತಿಗೆ ಬ್ರಾಹ್ಮಣರೂ ಕಾರಣರಾದಂತೆ ಮುಸ್ಲಿಮರೂ ಕಾರಣವಲ್ಲವೆ? ಹಾಗಾಗಿ ಬ್ರಾಹ್ಮಣರಂತೆ ಮುಸ್ಲಿಮರನ್ನೂ ದಮನ ಮಾಡಬೇಕಲ್ಲವೆ?

ಉತ್ತರ: ಮೊದಲಾಗಿ, ಸಮಾಜವನ್ನು ಆಳುವುದು ಬೇರೆ, ದೇಶವನ್ನು ಆಳುವುದು ಬೇರೆ. ಅಲ್ಲದೆ, ದೇಶವನ್ನು ಮುಸ್ಲಿಮರು ಮಾತ್ರ ಆಳಿಲ್ಲ. ಹಾಗೇ, ಆಳಿದ ಮುಸ್ಲಿಮರು ದೊರೆಗಳಾಗಿದ್ದವರೇ ಹೊರತು, ಜನ ಸಾಮಾನ್ಯರಲ್ಲ. ಅದೇನೇ ಇರಲಿ, ಸಮಾಜವನ್ನು

ಬೌದ್ಧಿಕವಾಗಿ ಆಳಿದರೆಂದು ಹೇಳಲಾಗುವ ಬ್ರಾಹ್ಮಣರನ್ನು ದಮನ ಮಾಡಬೇಕೆಂದು ಯಾರೂ ಹೇಳಿಲ್ಲ. ಲೋಹಿಯಾ ಆಗಲೀ, ಯಾವುದೇ ಸಮಾಜವಾದವಾಗಲೀ ಹೇಳಿಲ್ಲ. ನಾವೂ ಹೇಳಕೂಡದು. ನೀವೂ ಹೇಳಕೂಡದು. ಬ್ರಾಹ್ಮಣ ಜಾತಿ ಕುರಿತು ಸಮಾಜವಾದಿ ನಿಲುವು ಏನೆಂಬುದನ್ನು ಈ ಮೊದಲಿನ ಪ್ರಶ್ನೆಗೆ ನೀಡಿರುವ ಉತ್ತರದಲ್ಲೇ ಸ್ಪಷ್ಟವಾಗಿ ವಿವರಿಸಲಾಗಿದೆ. ಹಾಗಾಗಿ ಈ ವಿಷಯಕ್ಕೆ ಮುಸ್ಲಿಮರ ಆಳ್ವಿಕೆಯ ವಿಷಯವನ್ನು ತಗುಲಿ ಹಾಕಿ ತರ್ಕ ಮಾಡುವುದು ಅಸಂಬದ್ಧ. ಅಮಾನವೀಯ ಕೂಡಾ. ಹಾಗೆ ನೋಡಿದರೆ, ಸಮಾಜವಾದ ಮುಸ್ಲಿಮರನ್ನು ದಲಿತರು, ಶೂದ್ರರು, ಆದಿವಾಸಿಗಳು ಮತ್ತು ಮಹಿಳೆಯರಂತೆಯೇ ಶೋಷಿತ ಸಮುದಾಯವೆಂದು ಗುರುತಿಸಿ ಅವರಿಗೆ ವಿಶೇಷ ಪ್ರೋತ್ಸಾಹದ ಕ್ರಮಗಳನ್ನು ಪ್ರತಿಪಾದಿಸುತ್ತದೆ.

ಲೋಹಿಯಾ ತತ್ತ್ವ ಚಿಂತನೆ: ಕರ್ನಾಟಕ ಪ್ರತಿಕ್ರಿಯೆ

ನಾನು ಎಂದೂ ಸೋಷಿಯಲಿಸ್ಟ್ ಪಾರ್ಟಿಯಲ್ಲಿದ್ದವನಲ್ಲ ಅಥವಾ ಅದರ ಯುವಜನ ಶಾಖೆಯಾದ ಸಮಾಜವಾದಿ ಯುವಜನ ಸಭಾಕ್ಕೂ ಅಧಿಕೃತವಾಗಿ ಸೇರಿದವನಲ್ಲ. ಸಾಹಿತ್ಯ ಕುರಿತ ನನ್ನ ಆಸಕ್ತಿಯಿಂದಾಗಿ ಲೋಹಿಯಾ ಬಗ್ಗೆ ಆಸಕ್ತಿ ಬೆಳೆಸಿಕೊಂಡವನು. ಕಳೆದೊಂದು ಒಂದೂವರೆ ದಶಕದಲ್ಲಷ್ಟೇ ಸಮಾಜವಾದಿಗಳೊಂದಿಗೆ ಒಡನಾಡಿದವನು. ನಾನು ಮುಂದೆ ಆಡಲಿರುವ ಮಾತುಗಳು ಈ ಮಟ್ಟಿಗೆ ಸೀಮಿತ ಪ್ರಸ್ತುತತೆ ಉಳ್ಳವು ಮಾತ್ರ. ಹಾಗೇನೇ ಈ ಮಾತುಗಳು ಕರ್ನಾಟಕದ ಸಮಾಜವಾದಿ ಚಟುವಟಿಕೆಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಆಡುವ ಮಾತುಗಳಾದರೂ ಸಾರ್ವತ್ರಿಕ ಅರ್ಥದಲ್ಲಿ ಇಡೀ ಭಾರತಕ್ಕೇ ಅನ್ವಯಿಸುವಂಥವೂ ಆಗಿರಬಹುದು.

ಕರ್ನಾಟಕದಲ್ಲಿ ಲೋಹಿಯಾ ಎಂದೊಡನೆ ತಕ್ಷಣ ನೆನಪಾಗುವುದು ಸೋಷಿಯಲಿಸ್ಟ್ ಪಾರ್ಟಿಯೂ ಅಲ್ಲ, ಅದು ನಡೆಸಿದ ಭೂಚಳುವಳಿಗಳೂ ಅಲ್ಲ. ಇನ್ನು ತಾತ್ವಿಕ ಮಟ್ಟದಲ್ಲಿ ಅವರ ನೆನಪಾಗುವುದು ಅವರ ಬಂಡವಾಳಶಾಹಿ–ವಸಾಹತುಶಾಹಿ ಅವಳಿ ಹುಟ್ಟಿನ ಸಿದ್ಧಾಂತ, ಸಮಾನ ಅಪ್ರಸ್ತುತತೆಯ ತತ್ವ ಅಥವಾ ತಾಕ್ಷಣಿಕ ಪ್ರಸ್ತುತತೆಯ ತತ್ವ ಅಥವಾ ಚತುಸ್ತಂಭ ರಾಷ್ಟ್ರಕಲ್ಪನೆಯ ಮೂಲಕವೂ ಅಲ್ಲ. ಲೋಹಿಯಾ ಹೆಸರು ಕೇಳಿರುವ ಕನ್ನಡಿಗ ಅವರನ್ನು ಗುರುತಿಸುವುದುಮೀಸಲಾತಿ ಚಳುವಳಿ ಅಥವಾ ಶೂದ್ರ ಚಳುವಳಿ ಅಥವಾ ಕನ್ನಡ ಸಾಹಿತ್ಯದ ಇತ್ತೀಚಿನ ಚಳುವಳಿಗಳೊಂದಿಗೇ. ಇದು ಭಾರತದ ಇನ್ನುಳಿದ ಭಾಗಗಳಲ್ಲಿ ಲೋಹಿಯಾ ಬಗ್ಗೆ ಇರುವ ಚಿತ್ರಕ್ಕಿಂತ ಬಹುವಾಗಿ ಭಿನ್ನವಾಗಿಲ್ಲವಾದರೂ, ಲೋಹಿಯಾ ಚಿತ್ರವನ್ನು ಈ ಮೂರು ಚಳುವಳಿಗಳು ಬಿಡಿಸಿದಷ್ಟು ಸ್ಫುಟವಾಗಿ ಇನ್ನಾವ ಸಂಗತಿಯೂ ಬಿಡಿಸಿಲ್ಲ..

ನಮ್ಮೆಲ್ಲರಿಗೂ ಗೊತ್ತು–ಮೀಸಲಾತಿ ಚಳುವಳಿ ಹಾಗೂ ಶೂದ್ರ ಚಳುವಳಿಗಳು ತಮ್ಮೆಲ್ಲಾ ತಾತ್ವಿಕ ಶಕ್ತಿಯನ್ನೂ ಮತ್ತು ಕನ್ನಡ ಸಾಹಿತ್ಯದ ಇತ್ತೀಚಿನ ಎರಡು ಚಳುವಳಿಗಳಾದ ನವ್ಯ ಹಾಗೂ ಬಂಡಾಯ, ತನ್ನ ಒಂದೆರಡು ಆಯಾಮಗಳನ್ನು ಲೋಹಿಯಾ ತತ್ವ ಚಿಂತನೆಯಿಂದ ಪಡೆದುಕೊಂಡುವಾದರೂ, ಈ ಮೂರೂ ಸಂಗತಿಗಳು ನಿಜವಾಗಿ ಲೋಹಿಯಾರ ಪೂರ್ಣಚಿತ್ರವನ್ನಿರಲಿ. ಒಂದು ಪಾರ್ಶ್ವವನ್ನೂ ಪೂರ್ಣವಾಗಿ ಬಿಡಿಸಲಾರವು ಎಂದು. "ಸತ್ಯ ಅಖಂಡವಾದದ್ದು, ಹಾಗಿಲ್ಲದಿದ್ದಲ್ಲಿ ಅದು ಸತ್ಯವೇ ಅಲ್ಲ. ಪಾರ್ಶ್ವ ಸತ್ಯ ಎನ್ನುವುದು ಕೇವಲ ಅಭಿವ್ಯಕ್ತಿಯಲ್ಲಿ ದೋಷ" ಎಂದು ನಂಬಿದ್ದ ಲೋಹಿಯಾ ಅವರಿಗೆ ಇದು ನಿಜವಾಗಿಯೂ ಅನ್ಯಾಯ ಮಾಡುವಂತಹ ಸಂಗತಿಯೇ ಆಗಿದೆ. ಲೋಹಿಯಾ ತತ್ವಚಿಂತನೆಯ ಸಂಪೂರ್ಣ ಅಭ್ಯಾಸ ಮಾಡಿದವರು ಹಾಗೂ ಅವರ ದೃಷ್ಟಿಕೋನವನ್ನು ಸಮಗ್ರವಾಗಿ ದಕ್ಕಿಸಿಕೊಂಡ ಉದಾಹರಣೆಗಳೇ ಇಲ್ಲವೆಂದು ಇದರರ್ಥವಲ್ಲ. ಕನ್ನಡದ

ಒಟ್ಟು ಮಾನಸಕ್ಕೆ, ಲೋಹಿಯಾ ದಕ್ಕಿರುವ ರೀತಿಯ ಬಗ್ಗೆ ಹೇಳುತ್ತಿರುವ ಮಾತು ಇದಷ್ಟೆ. ಊರ್ಧ್ವ ಮುಖಿಯಾದ ಗರಿಷ್ಟ ದಕ್ಷತೆಯ ವಿರುದ್ಧ ಬಹುಮುಖಿಯಾದ ಸಮಗ್ರ ದಕ್ಷತೆಯನ್ನು ರೂಢಿಸಿಕೊಳ್ಳುವ ನಾಗರೀಕತೆಯ ಕನಸನ್ನು ಬಿತ್ತಿದ ವ್ಯಕ್ತಿ, ಒಂದು ಒಟ್ಟು ಮಾನಸಕ್ಕೆ ಸ್ಥೂಲವಾಗಿಯಾದರೂ ಸಮಗ್ರವಾಗಿ ದಕ್ಕದೆ, ಕೇವಲ ಒಂದು ಪಾರ್ಶ್ವವಾಗಿ ದಕ್ಕಿರುವುದು, ಆ ವ್ಯಕ್ತಿ ಪ್ರತಿಪಾದಿಸಿದ ಸಿದ್ಧಾಂತದ ಬಗ್ಗೆ ಹಾಗೂ ಅದನ್ನು ಗ್ರಹಿಸಿಕೊಳ್ಳಲು ಹೆಣಗಿದ ಸಮಾಜದ ಮನಸ್ಸಂಕೀರ್ಣದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಎತ್ತುತ್ತದೆ.

ನಿಜ, ಲೋಹಿಯಾ ತತ್ವ ಚಿಂತನೆಯನ್ನು ಜನಮನಕ್ಕೆ ಮುಟ್ಟಿಸುವುದನ್ನು ಕರ್ತವ್ಯವಾಗಿ ಪಾಲಿಸಬೇಕಾಗಿದ್ದ ಪಕ್ಷ ಕರ್ನಾಟಕದಲ್ಲಿ ತೀರಾ ಸೀಮಿತ ಪ್ರಭಾವವುಳ್ಳ ಪಕ್ಷವಾಗಿತ್ತು. ಆದರೆ ಪಕ್ಷವನ್ನೂ ಮೀರಿದ ಪ್ರಭಾವವನ್ನು ವ್ಯಾಪಕವಾಗಿ ಲೋಹಿಯಾ ತಮ್ಮ ವೈಯಕ್ತಿಕ ಪ್ರತಿಭೆಯ ಮೂಲಕ ಕರ್ನಾಟಕದ ಅತ್ಯುತ್ತಮ ಎನ್ನಬಹುದಾದ ಮನಸ್ಸುಗಳ ಮೇಲೆ ಬೀರಿದ್ದರು. ಶಾಂತವೇರಿ ಗೋಪಲಗೌಡ, ಪರಮೇಶ್ವರಪ್ಪ, ಎಸ್. ವೆಂಕಟರಾಂ, ಖಾದ್ರಿ ಶಾಮಣ್ಣ, ವಿ. ರಘರಾಮಶೆಟ್ಟಿ, ಸಿ.ಜಿ.ಕೆ. ರೆಡ್ಡಿ, ಸ್ನೇಹಲತಾ ರೆಡ್ಡಿ–ಇವರಿಂದ ಹಿಡಿದು ಎಂ.ಡಿ. ನಂಜುಂಡಸ್ವಾಮಿ, ತೇಜಸ್ವಿ, ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ, ಅಡಿಗ, ಕೆ.ಎಂ. ಶಂಕರಪ್ಪ, ಲಂಕೇಶ್, ಚಂದ್ರಶೇಖರ ಪಾಟೀಲ, ದೇವನೂರು ಮಹಾದೇವ–ಇವರವರೆಗೆ ಕನ್ನಡದ ಅತ್ಯಂತ ಪ್ರತಿಭಾವಂತರ ಗಮನವನ್ನೂ ಅವರು ತಮ್ಮೆಡೆಗೆ ಸೆಳೆದುಕೊಂಡಿದ್ದಾರೆ. ಲೋಹಿಯಾ ಕನ್ನಡದ ಮಾನಸ ಲೋಕವನ್ನು ಪ್ರವೇಶಿಸಿದ್ದು. ಮುಖ್ಯವಾಗಿ ಇವರ ಮೂಲಕವೇ.

ಇವರು ಕಟ್ಟಿದ ಸೋಷಿಲಿಸ್ಟ್ ಪಕ್ಷ, ಹುಟ್ಟು ಹಾಕಿದ ಸಮಾಜವಾದಿ ಯುವ ಜನಸಭಾ, ಅಖಿಲ ಕರ್ನಾಟಕ ಬರಹಗಾರರ ಹಾಗೂ ಕಲಾವಿದರ ಒಕ್ಕೂಟ, ನವನಿರ್ಮಾಣ ಸಮಿತಿ, ಜನತಾ ಪಕ್ಷ, ವಿಚಾರವಾದಿಗಳ ಸಂಘ, ದಲಿತ ಸಂಘರ್ಷ ಸಮಿತಿ, ರೈತ ಸಂಘ, ಅಕ್ಷರ ಪ್ರಕಾಶನ, ಸಂಕ್ರಮಣ, ಆಂದೋಲನ, ಮಾನವ, ಲಂಕೇಶ್ ಪತ್ರಿಕೆ, ಸುದ್ದಿ ಸಂಗಾತಿ, ಜನತಾ ಮಾಧ್ಯಮ–ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಲೋಹಿಯಾ ತತ್ವ ಚಿಂತನೆಗೆ ಕನ್ನಡದ ಸೃಜನಶೀಲ ಮನಸ್ಸು ಪ್ರತಿಸ್ಪಂದಿಸಿದ ವಿವಿಧ ರೀತಿ ನೀತಿಗಳೇ ಆಗಿವೆ. ಈ ಮಾತನ್ನು ಎಷ್ಟೇ ಗಂಭೀರವಾಗಿ ಹೇಳಹೋದರೂ ಈ ಸಂಘಟನೆಗಳ, ವೇದಿಕೆಗಳ, ಅಭಿವ್ಯಕ್ತಿ ಮಾಧ್ಯಮಗಳ ಚರಿತ್ರೆ ಅಥವಾ ವರ್ತಮಾನ ಯಾವುದೇ ಒಂದು ಸಾಮಾನ್ಯ ಅರ್ಥಸಾಂಗತ್ಯಕ್ಕೆ ನಿಲುಕದೆ ಒಂದು ಗಿಜಿಬಿಜಿ ಎನಿಸುವ ಸಂತೆಯಂತೆ ನಮ್ಮ ಕಣ್ಮುಂದೆ ನೆರೆದು, ಒಂದು ರೀತಿಯ ಅಸಂಬದ್ಧ ಮುಗುಳ್ನಗೆ ಇಣುಕುತ್ತದೆ.

ಯಾಕೆ ಹೀಗೆ? ಲೋಹಿಯಾ ತತ್ವಚಿಂತನೆ ಯಾಕೆ ಇಂತಹ ಹಿಗ್ಗಾಮುಗ್ಗಾ ಎಳೆದಾಟಗಳಿಗೆ ತಮ್ಮನ್ನು ಒಪ್ಪಿಸಿಕೊಳ್ಳುವಂತಾಯಿತು?

ಈ ಪ್ರಶ್ನೆಗೆ ಸಾಮಾನ್ಯವಾಗಿ ಮೂರು ಉತ್ತರಗಳು ದೊರಕುತ್ತವೆ. ಲೋಹಿಯಾ ತತ್ವ ಚಿಂತನೆ ಪೆಟ್ಟಿ–ಬೂರ್ಜ್ವಾಗಳ ಚಿಂತನೆಯಾಗಿದ್ದು, ಅಷ್ಟಿಷ್ಟು ಆಸ್ತಿಯುಳ್ಳ ಈ ಮಧ್ಯಮ ಜಾತಿಗಳ ಮೇಲ್ಮುಖ ಚಲನೆಗೆ ಮಾತ್ರ ಪ್ರೇರಕವಾಗಿರುವುದೇ ಈ ಗೊದಲಕ್ಕೆ ಕಾರಣವೆಂದು ಕಮ್ಯೂನಿಸ್ಟರು ಹೇಳಿದರೆ, ಪ್ರತಿಭಟನೆಯನ್ನು ಒಂದು ವ್ಯಸನವಾಗಿ ಅಥವಾ ವೃತ್ತಿ ಮಾಡಿಕೊಂಡದ್ದೇ ಅದರ ರೂಪ ಭಿನ್ನತೆಗಳಿಗೆ ಕಾರಣವೆಂದು ಮಧ್ಯಮ ವರ್ಗೀಯ

ಚಿಂತಕರು ಹೇಳುತ್ತಾರೆ. ಇನ್ನು ಲೋಹಿಯಾ ಬಗ್ಗೆ ಪಂಡಿತ ಆಸಕ್ತಿ ಮಾತ್ರ ತಳೆದಿರುವ ಬುದ್ಧಿಜೀವಿಗಳು, ಲೋಹಿಯಾ ತತ್ವಚಿಂತನೆ ಒಂದು ಶಿಸ್ತುಬದ್ಧ ತಾತ್ವಿಕ ರಚನೆಯೇ ಆಗಿರದೆ ಅದು ತತ್ವವಾಗಿ ಪೂರ್ತಿ ವಿಕಾಸವಾಗದೇ ಉಳಿದುಹೋದ ಕನಸುಗಳ ರಾಶಿ ಆಗಿರುವುದೇ ಈ ಅರಾಜಕತೆಗೆ ಕಾರಣವಾಗಿದೆ ಎನ್ನುತ್ತಾರೆ.

ಇವುಗಳಲ್ಲಿ ಯಾವುದು ನಿಜ? ಅಥವಾ ಸಂಪೂರ್ಣ ನಿಜ? ಮೊದಲನೆಯದನ್ನು ಒಪ್ಪಹೋದರೆ, ಅದನ್ನು ಇಡೀ ದೇಶಕ್ಕೆ ಅನ್ವಯಿಸಿ ದೇಶದ ಜನಸಂಖ್ಯೆಯ ಶೇಕಡಾ ೬೦ರಷ್ಟು ಇರುವ ಸಮುದಾಯಗಳನ್ನು ವರ್ಗಶತ್ರುಗಳೆಂದು ಪರಿಗಣಿಸುವ ಮೂರ್ಖ ತೀರ್ಮಾನಕ್ಕೆ ಬರಬೇಕಾಗುತ್ತದೆ ಅಥವಾ ಸರ್ವರನ್ನೂ ಮೇಲೆತ್ತುವ ಪ್ರೇರಣಾಶಕ್ತಿ ಇರುವ ಕಮ್ಯೂನಿಸಮ್ಮಿನ ವಕ್ತಾರರ ಜಾತಿ ಹಾಗೂ ಆಸ್ತಿಪಾಸ್ತಿಗಳ ವಿವರಗಳನ್ನು ಪರೀಶೀಲಿಸುವ ತಮಾಷೆಯ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಮಧ್ಯಮ ಮಾರ್ಗಿಗಳ ಉತ್ತರವನ್ನು ಒಪ್ಪಹೋದರೆ, ಪ್ರತಿಭಟನೆಯನ್ನು ವ್ಯಸನ ಅಥವಾ ವೃತ್ತಿಮಾಡಿಕೊಳ್ಳದೇ ಹವ್ಯಾಸ ಮಾತ್ರ ಮಾಡಿಕೊಂಡು ಅವರು ಮುಟ್ಟಿರುವ ಸ್ಥಿತಿಯನ್ನು ಕಂಡು ಭಯವಾಗತೊಡಗುತ್ತದೆ. ಕೊನೆಗೆ ಉಳಿದದ್ದು ಬುದ್ಧಿಜೀವಿಗಳ ಶಿಸ್ತುಬದ್ದ ರಚನೆಯ ಪ್ರಶ್ನೆ. ಆದರೆ ಇವರೆಂದೂ ಲೋಹಿಯಾ ತತ್ವಚಿಂತನೆ ಹೇಗೆ ಒಂದು ಶಿಸ್ತುಬದ್ಧ ರಚನೆಯಾಗಿಲ್ಲ ಎಂದು ವಿಶ್ಲೇಷಿಸಿ ಹೇಳುವ ಆಯಾಸವನ್ನೇ ಮಾಡಿಕೊಂಡಿಲ್ಲ. ಒಂದು ವೇಳೆ ಲೋಹಿಯಾ ತತ್ವ ಚಿಂತನೆಯ ಮೂಲಸೆಲೆಯೇ ಸಾಂಪ್ರದಾಯಿಕ ಅರ್ಥದ ಶಿಸ್ತುಬದ್ಧರಚನೆಯ ಕಲ್ಪನೆಗೇ ವಿರೋಧವಾಗಿದ್ದರೆ? ಅದು ತನ್ನದೇ ಸೃಜನಶೀಲ ಅರ್ಥದಲ್ಲಿ ಹೊಸದೊಂದು ಹದದ ತಾಂತ್ರಿಕ ರಚನೆಯ ಕಲ್ಪನೆಯನ್ನು ಇಟ್ಟುಕೊಂಡಿದ್ದರೆ? ಪ್ರಚಲಿತ ತತ್ವರಚನೆಯ ವಿನ್ಯಾಸಕ್ರಮವನ್ನೇ ಪ್ರಶ್ನಿಸುವ ಉದ್ದೇಶವಿಟ್ಟುಕೊಂಡಿದ್ದರೆ?

ಲೋಹಿಯಾ ಅವರನ್ನು ಅಷ್ಟಿಷ್ಟಾದರೂ ಅಭ್ಯಾಸಮಾಡಿರುವ ನಿಮ್ಮಲ್ಲಿ ಕೆಲವರಿಗಾದರೂ ಗೊತ್ತಿರಬಹುದು, ನಾನು ಈ ಪ್ರಶ್ನೆಗಳನ್ನು ಕೇವಲ ಊಹೆಗಳಾಗಿ ಮುಂದಿಡುತ್ತಿಲ್ಲ ಎಂದು. ಕ್ಷಣ–ಅನಂತಗಳನ್ನು, ಭೌತ–ಅಭೌತಗಳನ್ನು, ಗುರಿ–ಮಾರ್ಗಗಳನ್ನು, ತತ್ವ–ಕ್ರಿಯೆಗಳನ್ನು, ವ್ಯಕ್ತಿ–ಸಮಾಜಗಳನ್ನು, ಒಂದು ತುದಿಯಿಂದ ಇನ್ನೊಂದು ತುದಿಗೆ ತುಯ್ದಾಡುವ ಏಕತ್ರ ಸತ್ಯವೆಂದು ಪರಿಭಾವಿಸುವ ಕ್ರಮವೇ ಲೋಹಿಯಾ ತತ್ವ ಚಿಂತನೆಯ ರಚನಾಕ್ರಮವೂ ಆಗಿದೆ ಎಂಬುದರ ಅರಿವಿದ್ದವರು ನನ್ನ ಪ್ರಶ್ನೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವರು ಎಂದು ಭಾವಿಸುತ್ತೇನೆ. ಬದುಕು ಇಡಿಯಾಗಿ ಅನುಭಾವಕ್ಕಾಗಲೀ, ತರ್ಕಕ್ಕಾಗಲೀ ಸಿಗುವಂತಹ ಸಂಗತಿಯಲ್ಲ ಎಂದು ಲೋಹಿಯಾ ಗುರುತಿಸಿದ್ದರು. ಅದಕ್ಕೇ ಅವರು ಪ್ರಾಚೀನ ಬದುಕು ತನ್ನ ನಾಗರೀಕತೆಯ ಉತ್ತುಂಗದಲ್ಲಿ ಸಾಧಿಸಿಕೊಂಡ ಪೂರ್ಣ ಬದುಕಿನ ರಸ ಘಟ್ಟಿಯಂತಿರುವ ವೇದಾಂತದ ಅನುಭಾವವನ್ನೂ, ಆಧುನಿಕ ಬದುಕು ತನ್ನ ನಾಗರೀಕತೆಯ ಬಿಕ್ಕಟ್ಟಿನ ಕಾಲದಲ್ಲಿ ಅಪೂರ್ಣ ಬದುಕಿನ ಆತಂಕದ ವಿರುದ್ಧ ರೂಪಿಸಿಕೊಂಡ ಪ್ರಣಾಳಿಕೆಯಂತಿರುವ ಅಸ್ತಿತ್ವವಾದದ ತರ್ಕವನ್ನೂ ತಮ್ಮ ತತ್ವಚಿಂತನೆಗೆ ಏಕಕಾಲಕ್ಕೆ ಬಳಸಿಕೊಂಡರು. ಇವೆರಡರ ನಡುವಿನ ಹದವನ್ನು ತಮ್ಮ ತತ್ವ ಹಾಗೂ ಕಾರ್ಯಕ್ರಮಗಳ ನಡುವಣ ದ್ವಂದ್ವಾತ್ಮಕ ಚಲನೆಲ್ಲಿ ಕಂಡುಕೊಂಡರು.

ಲೋಹಿಯಾ ತಮ್ಮನ್ನು ಉದಾರತತ್ವ ಹಾಗೂ ತೀವ್ರ ಕಾರ್ಯಕ್ರಮವಾದಿ ಎಂದು

ಕರೆದುಕೊಳ್ಳುತ್ತಿದ್ದರು. ಬುದ್ಧನನ್ನು ಅವರು ಉದಾರ ತತ್ವ, ಉದಾರ ಕಾರ್ಯಕ್ರಮವಾದಿ ಎಂತಲೂ, ಅದ್ವೈತ ಸಿದ್ಧಾಂತದ ಶಂಕರಾಚಾರ್ಯರನ್ನು ಉದಾರ ತತ್ವ ತೀವ್ರ ಕಾರ್ಯಕ್ರಮವಾದಿ ಎಂತಲೂ ಗುರುತಿಸುತ್ತಿದ್ದರು. ಕಮ್ಯೂನಿಸಂನ್ನು ತೀವ್ರ ತತ್ವ, ತೀರ ಕಾರ್ಯಕ್ರಮವಾದವಾದ ಎಂದು ಗುರುತಿಸುತ್ತಿದ್ದರು. ಆದರೆ ತೀವ್ರ ತತ್ವ ಉದಾರ ಕಾರ್ಯಕ್ರಮವಾದದ ಮೂಲಕ ಮಾತ್ರ ತತ್ವದ ಹಿಂದಿರುವ ಸತ್ಯವನ್ನು ಅದರ ಅನೇಕ ಮುಖಗಳೊಡನೆ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ ಎಂದು ನಂಬಿದ್ದರು. ಅದಕ್ಕನುಗುಣವಾಗಿಯೇ ಅವರು ತಮ್ಮ ಹೋರಾಟಗಳನ್ನು ರೂಪಿಸಿದ್ದು ಕೂಡ. ಆದರೆ ವೇದಾಂತದ ಅನುಭಾವಿಕತೆ, ಅಸ್ತಿತ್ವವಾದದ ವಿಚಾರಶೀಲತೆ, ಉದಾರ ತತ್ವದ ಸಹಿಷ್ಣುತೆ ಹಾಗೂ ತೀವ್ರ ಕಾರ್ಯಕ್ರಮದ ನಿಷ್ಠುರತೆಗಳು ಏಕೀಭವಿಸಿ ಪಾಕಗೊಂಡ ಅವರ ಈ ತತ್ವಚಿಂತನೆ ಒಂದೂಂದು ಕಾರಣಕ್ಕಾಗಿ ಒಬ್ಬೊಬ್ಬರಿಗೆ ಅಥವಾ ಗುಂಪುಗಳಿಗೆ ಆಕರ್ಷಕವಾಗಿ ಕಂಡಿದ್ದರೂ ಆಶ್ಚರ್ಯವಿಲ್ಲ. ಇದರ ಒಂದು ಫಲವೇ ನಾನು ಈ ಪ್ರಬಂಧದ ಆರಂಭದಲ್ಲಿ ಸೂಚಿಸಿದ ಲೋಹಿಯಾ ಹೆಸರಿನಲ್ಲಿನ ಕರ್ನಾಟಕ ಗಿಜಿಬಿಜಿ ಸಂತೆ. ಈ ಸಂತೆಯನ್ನು ನಾವು ನಿಷೇಧಾತ್ಮಕವಾಗಿಯೇ ನೋಡಬೇಕಿಲ್ಲ. ಲೋಹಿಯಾರಂತಹ ಪ್ರಯೋಗಶೀಲ ವ್ಯಕ್ತಿತ್ವವನ್ನು ಇಂತಹ ಪ್ರಯೋಗಗಳ ಮೂಲಕ ಅರಿತುಕೊಳ್ಳಲು ಸಾಧ್ಯ. ಆದರೆ ಇವು ಪ್ರಯೋಗಗಳು ಎಂಬ ಅರಿವು ಮತ್ತು ವಿನಯಗಳು ಸದಾ ನಮ್ಮನ್ನು ಕಾಯಬೇಕಷ್ಟೆ. ಆಗ ಮಾತ್ರ ಲೋಹಿಯಾ ತತ್ವ ಚಿಂತನೆ ಕರ್ನಾಟಕದಲ್ಲಿ ಒಂದು ಚೈತನ್ಯಶಕ್ತಿಯಾಗಿ ಇಲ್ಲಿನ ಬದುಕನ್ನು ಗುಣಾತ್ಮಕವಾಗಿ ಬದಲಾಯಿಸುವ ಆಂದೋಲನವಾಗುತ್ತದೆ.

(ಮಂಗಳೂರು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗವು ಲೋಹಿಯಾ ವಿಚಾರಧಾರೆ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಓದಲಾದ ಪ್ರಬಂಧ (೧೯೮೮)

ಸಮಾಜವಾದದ ಆಧ್ಯಾತ್ಮಿಕತೆ

ಗೆಳೆಯ ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ 'ಬೆಳಗಿನ ಬೆರಗು' ಪುಸ್ತಕದ ಮುದ್ರಿತ ಕರಡು ಪ್ರತಿಯನ್ನು ಮುನ್ನುಡಿಗಾಗಿ ವಿಶ್ವಾಸದಿಂದ ನನಗೆ ಕಳಿಸಿದಾಗ, ಲೋಕಸಭಾ ಚುನಾವಣೆ(೨೦೦೪)ಗಳಿನ್ನೂ ಮುಗಿದಿರಲಿಲ್ಲ. ಬಿ.ಜೆ.ಪಿ. ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗದ ಸರ್ಕಾರವೇ ಮರು ಆಯ್ಕೆಯಾಗುವುದು ಈಗಾಗಲೇ ತೀರ್ಮಾನವಾಗಿ ಹೋಗಿರುವ ವಿಚಾರ ಎಂಬುದು ಸಾರ್ವತ್ರಿಕ ಅಭಿಪ್ರಾಯವಾಗಿತ್ತು. ಇಂತಹ ಸಂದರ್ಭದಲ್ಲಿ, ಸಮಾಜವಾದಿ ಆಶಯಗಳ ಹಿನ್ನೆಲೆಯಲ್ಲಿ ಬರೆದ ಈ ಸಂಗ್ರಹದ ಲೇಖನಗಳನ್ನು ನಾನು ಕೊಂಚ ಮರುಕ ತುಂಬಿದ ಸಹಾನುಭೂತಿಯಿಂದಲೇ ಓದಿದ್ದೆ. ಸಮಾಜವಾದವನ್ನು ಲೈಸೆನ್ಸ್ ಪರ್ಮಿಟ್ ರಾಜ್ಯ ವ್ಯವಸ್ಥೆಯೆಂದು ಹೀಗಳೆದು, ಈವರೆಗೆ ರಾಷ್ಟ್ರ ಈ ವ್ಯವಸ್ಥೆಯನ್ನು ಅನುಸರಿಸಿದ ಕಾರಣ ನಿಜವಾದ ಪ್ರಗತಿಯನ್ನೇ ಕಾಣದೆ ಹೋಗಿದೆ ಎಂಬ ವಾದ ಮಂಡಿಸುತ್ತಾ; ಮುಕ್ತ ಮಾರುಕಟ್ಟೆ ನೀತಿಯ ಜಾಗತೀಕರಣವೇ ಪ್ರಗತಿಯ ಹೆಬ್ಬಾಗಿಲನ್ನು ತೆರೆಯಬಲ್ಲದು ಎಂಬ ನಂಬಿಕೆಯೊಡನೆ, ನಮ್ಮ ಆಡಳಿತಗಾರರು ಕಳೆದೊಂದು ದಶಕದಲ್ಲಿ ಹೊಸ ರಾಜಕೀಯ ವಾತಾವರಣವನ್ನೇ ಉಂಟು ಮಾಡಿದ್ದರು. ವಿಶ್ವಬ್ಯಾಂಕ್ ಮತ್ತು ಇತರೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹರಿದುಬಂದ ಸಾಲದ ಹಣ ಮತ್ತು ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಮಾರುಕಟ್ಟೆಗೆ ತಂದು ಸುರಿದ ವೈವಿಧ್ಯಮತಯ ಗ್ರಾಹಕ ವಸ್ತುಗಳ ಮೂಲಕ ರಾಷ್ಟ್ರಾದ್ಯಂತ ಸಮೃದ್ಧಿಯ ದ್ವೀಪಗಳನ್ನು ಸೃಷ್ಟಿಸಿ, ಈ ಝುಗಝುಗಿಸುವ ದ್ವೀಪಗಳನ್ನು ಎಲ್ಲರ ಕಣ್ಮುಂದಿನ ಕನಸುಗಳನ್ನಾಗಿ ಪ್ರಸ್ತುತಪಡಿಸಲಾಗಿತ್ತು.

ಆದರೆ ಈ ಚುನಾವಣೆ, ರಾಷ್ಟ್ರ ಇಂತಹ ಕನಸು ಕಾಣಲು ಸುತರಾಂ ನಿರಾಕರಿಸಿದೆ ಎಂಬುದನ್ನು ಸಾಬೀತುಪಡಿಸಿದೆ. ಹೊಸ ಆಡಳಿತಗಾರರು ಈಗ ಮಾನವೀಯ ಮುಖದ ಆರ್ಥಿಕ ಸುಧಾರಣೆಗಳ ಮಾತುಗಳನ್ನಾಡುತ್ತಿದ್ದಾರೆ. ಅಂದರೆ ಈವರೆಗೆ ನಾವು ಕಂಡ ಜಾಗತೀಕರಣದ ಪ್ರಕ್ರಿಯೆ ಅಮಾನವೀಯವಾಗಿತ್ತು ಎಂಬುದನ್ನು ಒಪ್ಪಿಕೊಂಡಂತಾಯಿತು. ಅಂದಹಾಗೆ ಈ ಹೊಸ ಆಡಳಿತಗಾರರು ಮತ್ತಾರೂ ಅಲ್ಲ. ನಮ್ಮ ದೇಶದಲ್ಲಿ ಜಾಗತೀಕರಣ ಪ್ರಕ್ರಿಯೆಗೆ ದಾರಿ ಮಾಡಿಕೊಟ್ಟ ಆರ್ಥಿಕ 'ಸುಧಾರಣೆ'ಗಳನ್ನು ಜಾರಿಗೆ ತಂದ ಮೂಲಪುರುಷರು ಇವರು! ಅದೇನೆ ಇರಲಿ, ಈ ಹತ್ತು ವರ್ಷಗಳಲ್ಲಿ ಈಗ ಮೊದಲ ಬಾರಿಗೆ ಯಾವುದೇ ಮುಜುಗರವಿಲ್ಲದೆ ಮತ್ತೆ ನಾವು ಸಮಾಜವಾದದ ಬಗ್ಗೆ ಮಾತಾಡಬಹುದಾಗಿದೆ. ಏಕೆಂದರೆ ಮಾನವೀಯ ಮುಖದ ಆರ್ಥಿಕ ಸುಧಾರಣೆ ಎಂದರೇನು ಎಂಬ ಪ್ರಶ್ನೆಗೆ ಉತ್ತರಕ್ಕಾಗಿ ನಾವು ಮತ್ತೆ ಸಮಾಜವಾದಿ ಸಂಕಥನಕ್ಕೆ ಒಂದಿರುಗಬೇಕಾಗುವುದು ಅನಿವಾರ್ಯವಾಗುತ್ತದೆ. ಅಲ್ಲದೆ ಈ ಬಾರಿಯ ಚುನಾವಣೆಗಳಲ್ಲಿ

ರಾಷ್ಟ್ರವೇಕೆ ಜಾಗತೀಕರಣ ಸೂಚಿಸುತ್ತಿದ್ದ ಸಮೃದ್ಧಿಯ ಕನಸನ್ನು ಮೌನವಾಗಿ ತಳ್ಳಿಹಾಕಿಬಿಟ್ಟತು? ಈ ಕನಸು ನನಸಾಗಲು ಸಾಧ್ಯವಿಲ್ಲ ಎಂಬುದು ರಾಷ್ಟ್ರದ ಅಂತರಾಳಕ್ಕೆ ತಲುಪಿದ್ದಾದರೂ ಹೇಗೆ? ಎಂಬ ಪ್ರಶ್ನೆಗಳನ್ನು ಹಿಂಬಾಲಿಸಿದರೆ ನಮಗೆ ಕಾಣುವ ಸತ್ಯವೆಂದರೆ ನಮ್ಮ ದೇಶದಲ್ಲಿ ಸಮಾಜವಾದಿ ಸಂಕಥನ ತನ್ನ ತಾರ್ಕಿತ ಅಂತ್ಯವನ್ನು ಇನ್ನೂ ಕಂಡಿಲ್ಲವೆಂಬುದೇ ಆಗಿದೆ. ಹೀಗಾಗಿ ನಾವೀಗ ಜಿ.ಎನ್. ಮಲ್ಲಿಕಾರ್ಜುನ ಅವರು ಈ ಲೇಖನಗಳನ್ನು ಹೊಸ ಪ್ರಸ್ತುತತೆಯ ನೆಲೆಯಲ್ಲಿಯೇ ಓದಬಹುದಾಗಿದೆ.

ಈ ಸಂಗ್ರಹದಲ್ಲಿರುವ ಎಲ್ಲ ಲೇಖನಗಳೂ ಜಾಗತೀಕರಣದ ಬಗ್ಗೆ ಕಳೆದ ಹತ್ತು ವರ್ಷಗಳಲ್ಲಿ ನಡೆದಿರುವ ಚರ್ಚೆಯ ಭಾಗವೇ ಆಗಿ ಒಡಮೂಡಿದೆ. ಇಲ್ಲಿನ ಲೇಖನಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಿ ನೋಡಬಹುದು. ಒಂದು, ಜಾಗತೀಕರಣವು ಪ್ರಗತಿ ಮತ್ತು ಸಮೃದ್ಧಿಯ ಹೆಸರಿನಲ್ಲಿ ರಾಷ್ಟ್ರ ಜೀವನದಲ್ಲಿ ಉಂಟು ಮಾಡುತ್ತಿರುವ ಅನಾಹುತಗಳನ್ನು ಅಂಕಿ ಅಂಶಗಳೊಂದಿಗೆ ವಿಷದೀಕರಿಸುವ ವಿಶ್ಲೇಷಣಾತ್ಮಕ ಲೇಖನಗಳು. ಇವು ಸಂಗ್ರಹದ ಕೊನೆಯ ಆರೇಳು ಲೇಖನಗಳು. ಇನ್ನೊಂದು, ಜಾಗತೀಕರಣಕ್ಕೆ ಪರ್ಯಾಯವಿಲ್ಲ ಎಂಬ ವಾದಕ್ಕೆ ವಿರುದ್ಧವಾಗಿ ಪ್ರಸ್ತುತಗೊಂಡಂತೆ ತೋರುವ ಪರ್ಯಾಪ್ತ ಪರಿಕಲ್ಪನೆಗಳನ್ನು ಕುರಿತ ಪರಿಚಯತ್ಮಕ ಲೇಖನಗಳು. ಇವು ಸಂಗ್ರಹದ ಮೊದಲ ಆರು ಲೇಖನಗಳು. ವೈಯಕ್ತಿಕವಾಗಿ ನನ್ನ ಆಸಕ್ತಿ ಈ ಎರಡನೇ ಗುಂಪಿನ ಲೇಖನಗಳ ಕಡೆಗೇ. ಏಕೆಂದರೆ ಜಾಗತೀಕರಣದ ಅನಾಹುತಗಳು ವಿಷದೀಕರಣ ಹಾಗೂ ವಿಶ್ಲೇಷಣೆಗಳನ್ನೂ ಮೀರಿ ಕಣ್ಣಿಗೆ ಢಾಳಾಗಿ ಒಡೆದು ಕಾಣುವಂತಿವೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಆಂಧ್ರ-ಕರ್ನಾಟಕ ರಾಜ್ಯಗಳಲ್ಲಿ ನಡೆದ- ಹಿಂದೆಂದೂ ಕಂಡು ಕೇಳರಿಯದ ದಾರುಣ ಪರಿಸ್ಥಿತಿಯಲ್ಲಿ – ಸಾವಿರಾರು ರೈತರ ಆತ್ಮಹತ್ಯೆಗಳ ನಂತರವೂ ಜಾಗತೀಕರಣದ ಪರವಾಗಿ ಯಾರಾದರೂ ತತ್ವ ವಿಶ್ಲೇಷಣೆಗೆ ಹೊರಟರೆ ಅವರನ್ನು ಹುಚ್ಚರೆಂದೋ ಅವಿವೇಕಿಗಳೆಂದೋ ಕರೆಯಬೇಕಾಗುತ್ತದೆ. ಕಳೆದ ಮೂರ್ನಾಲ್ಕು ವರ್ಷಗಳ ಕಾಲ ಈ ರಾಜ್ಯಗಳ ಬಹುಭಾಗಗಳನ್ನಾವರಿಸಿದ ಬರಗಾಲದಿಂದಾಗಿ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬಂದ ಹಸಿವು – ಅವಮಾನ – ಅಸಹಾಯಕತೆಗಳ ದುರಂತ ಕಥೆಯು ರಾಷ್ಟ್ರದ ಎದೆಗೆ ಮುಟ್ಟದೇ ಹೋಗುವಷ್ಟು ಅಸೂಕ್ಷ್ಮತೆಯನ್ನು ಈ ಜಾಗತೀಕರಣದ ರಾಜಕಾರಣ ಉಂಟು ಮಾಡಿತ್ತೆಂಬುದನ್ನು ಯಾರಾದರೂ ನಿರಾಕರಿಸಲಾದೀತೇ? ಹಾಗೆ ನಿರಾಕರಿಸುವಷ್ಟು ಧೈರ್ಯ ಮತ್ತು ಹಠವುಳ್ಳವರು ಈ ಸಂಗ್ರಹದ ಕೊನೆಯ ಆರೇಳು ಲೇಖನಗಳನ್ನು ಓದುವ ಮನಸ್ಸು ಮಾಡಬೇಕು. ಜಾಗತೀಕರಣ ಕೇವಲ ರೈತರ ಕತ್ತನ್ನಲ್ಲ – ಸಮಾನತೆಯ ತತ್ವವನ್ನು ಅವ್ಯಾವಹಾರಿಕವೆಂದು ಬಗೆಯುವ ಅಸೂಕ್ಷ್ಮವಾದ ನವ ಶ್ರೀಮಂತಶಾಹಿಯನ್ನು ಸೃಷ್ಟಿಸುವ ಮೂಲಕ – ದೇಶದ ಕತ್ತನ್ನೇ ಹೇಗೆ ಕೊಯ್ಯಹೊರಟಿದೆ ಎಂಬುದರ ಸತ್ಯ – ಮಿಥ್ಯೆಗಳ ಕತೆಯನ್ನು ಈ ಲೇಖನಗಳು ನಿರೂಪಿಸುತ್ತವೆ.

ಆದರೆ ಮೊದಲೇ ಹೇಳಿದಂತೆ ನನ್ನ ಕುತೂಹಲವಿರುವುದು, ಈ ದುರಂತಕ್ಕೆ ಪರಿಹಾರವೆಂಬಂತೆ, ಈ ಸಂಗ್ರಹದ ಮೊದಲ ಆರು ಲೇಖನಗಳಲ್ಲಿ ಪರಿಚಯಿಸಲಾಗಿರುವ ತತ್ವಗಳ ಮತ್ತು ಪರಿಕಲ್ಪನೆಗಳ ಸಾಧ್ಯಾಸಾಧ್ಯತೆಗಳ ಬಗ್ಗೆ. ಬುದ್ಧ-ಬಸವರ ಅರ್ಥ ವ್ಯವಸ್ಥೆಯಿಂದ ಹಿಡಿದು ಲೋಹಿಯಾ ಅವರ ತಂತ್ರಜ್ಞಾನ ನೀತಿ, ಅಮರ್ತ್ಯಸೇನರ

ನೈತಿಕ ಅರ್ಥಶಾಸ್ತ್ರದ ಪರಿಕಲ್ಪನೆ ಹಾಗೂ ನಮ್ಮ ನಡುವಿನ ಹಿರಿಯ ಸಮಾಜವಾದಿ ಚಿಂತಕ ಕಿಷನ್ ಪಟ್ನಾಯಕ್ ಅವರ ಸಮಾಜವಾದದ ಹೊಸ ನಿರೂಪಣೆವರೆಗೆ ಇಲ್ಲಿ ವೈಚಾರಿಕ ಪರ್ಯಾಯ ಮಾದರಿಗಳನ್ನು ಪ್ರಸ್ತುತಪಡಿಸಲಾಗಿದೆ. ಇದೆಲ್ಲದಕ್ಕೆ ಕಳಸವಿಟ್ಟಂತೆ, ಈ ಮಾದರಿಗಳ ಮಧ್ಯದಿಂದಲೇ ಮೂಡಿಬಂದಂತಿರುವ ಅಣ್ಣಾ ಹಜಾರೆ ಅವರು ಅಭಿವೃದ್ಧಿಪಡಿಸಿರುವ ರಾಳೆಗಾಣ ಸಿದ್ಧಿ ಗ್ರಾಮದ ಪ್ರಯೋಗ ಚಿತ್ರವನ್ನು ಜಿ.ಎಸ್. ಮಲ್ಲಿಕಾರ್ಜುನ ಅವರು ನೀಡಿದ್ದಾರೆ. ಈ ಪೈಕಿ ಕಿಷನ್ ಪಟ್ನಾಯಕ್ ಚಿಂತನೆ ಕುರಿತ ಲೇಖನ, ಒಂದೂವರೆ ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ನಡೆದ ಒಂದು ಸಮಾಜವಾದಿ ಚಿಂತನಾ ಕಮ್ಮಟದಲ್ಲಿ ನಾನು 'ಸಮಾಜವಾದವೆಂಬುದು ಒಂದು ರೊಮ್ಯಾಂಟಿಕ್ ಕಲ್ಪನೆ; ಆದರೆ ಅದು ಅವ್ಯಾವಹಾರಿಕ ಕೂಡಾ ಎಂಬುದೀಗ ಸಾಬೀತಾಗಿದೆ' ಎಂದು, ಚರ್ಚೆಗಾಗಿ ಮಂಡಿಸಿದ ಒಂದು ಪ್ರಮೇಯಕ್ಕೆ ಕಿಷನ್ ಪಟ್ನಾಯಕ್ ಅವರು ಕಮ್ಮಟದ ಸಮಾರೋಪ ಭಾಷಣದ ರೂಪದಲ್ಲಿ ನೀಡಿದ ವಿಸ್ತೃತ ಪ್ರತಿಕ್ರಿಯೆಯ ಸಾರಾಂಶವಾಗಿದೆ.

ಅಂದು ನಾನು ಮಂಡಿಸಿದ ಪ್ರಮೇಯದ ಹಿಂದಿದ್ದ ವಾದ ಸರಣಿ ಇದು: ಇಂದಿನ ತಂತ್ರಜ್ಞಾನ ಸ್ಫೋಟವು ಸೃಷ್ಟಿಸಿರುವ ಸುಖ-ಸಮೃದ್ಧಿಗಳ ಹೊಸ ಅಳತೆಗೋಲುಗಳ ಹಾಗೂ ವರ್ಗ ಸಂಘಟನೆಯ ಹೊಸ ವಿನ್ಯಾಸಗಳ ಹಿನ್ನೆಲೆಯಲ್ಲಿ ಮನುಷ್ಯನ ಚಿತ್ತವೃತ್ತಿಯನ್ನು ಅಂದಾಜು ಮಾಡುವಲ್ಲಿ ಸಮಾಜವಾದವು ವಿಫಲವಾಗಿದ್ದು, ಸಮಾನತೆಯ ಸಂಸ್ಕೃತಿಯನ್ನು ನಿರ್ಮಿಸಲು ಅವರ ಬಳಿಯಿರುವ ಪರಿಕರಗಳು ಹಾಗೂ ಪರಿಕಲ್ಪನೆಗಳು ಈಗ ಅಪ್ರಸ್ತುತವೆನಿಸಿಕೊಂಡಿವೆ. ಎಂಬುದೇ ಆಗಿತ್ತು. ನನ್ನ ಈ ವಾದ ಸರಣಿಗೆ ಕಿಷನ್ ಅವರು ನೀಡಿದ ವಿಸ್ತೃತ ಉತ್ತರದಲ್ಲಿ ಸಮಾಜವಾದ ಮತ್ತೆ ಮರುಜೀವ ಪಡೆಯಬಹುದಾದ ಶಕ್ತಿ ಮೂಲಗಳನ್ನು ಬುದ್ಧ, ಪರಮಹಂಸ, ಗಾಂಧಿ, ಮದರ್ ಥೆರೇಸಾ ಅವರಲ್ಲಿ ಗುರುತಿಸಿ ಕುತೂಹಲ ಹುಟ್ಟಿಸಿದ್ದಾರೆ. ಈ ಮೂಲಕ ಅವರು, ಸಮಾಜವಾದ ಈವರೆಗೆ ಒಂದು ಭೌತಿಕ ಅಥವಾ ಲೌಕಿಕ ಪರಿಕರವೆಂಬಂತೆ ಮಾತ್ರ ಕೆಲಸ ಮಾಡಿ exhuast ಆಗಿದೆ; ಅದೀಗ ಒಂದು ಆಧ್ಯಾತ್ಮಿಕ ಆಯಾಮವನ್ನು ಪಡೆದು ಧರ್ಮದಂತೆ ಕೆಲಸ ಮಾಡಬೇಕಾದ ಸಂದರ್ಭ ಬಂದಿದೆ ಎಂದು ಸೂಚಿಸುತ್ತಿರುವಂತೆ ನನಗೆ ತೋರುತ್ತಿದೆ. ಆಧ್ಯಾತ್ಮ ಎಂದೊಡನೆ ದೇವರು-ದಿಂಡಿರು, ಜಪ-ತಪ-ಭಜನೆ ಎಂದು ಹೀಯಾಳಿಸುತ್ತಾ ಹೌಹಾರುವ ಸಮಾಜವಾದಿ ಗೆಳೆಯರ ಸಂಖ್ಯೆ ನಮ್ಮಲ್ಲೇನೂ ಕಡಿಮೆ ಇಲ್ಲ. ಇದು ಪೆರಿಯಾರ್ ಚಳುವಳಿಯ ಸ್ಥೂಲತೆಯಿಂದುಂಟಾದ ವಕ್ರತೆಯಷ್ಟೆ. ಆದರೆ ಆಧ್ಯಾತ್ಮವೆಂದರೆ ಕೆಲಸದ ನಂತರದ ವಿಶ್ರಾಂತಿ ; ಮಾತಿನ ನಂತರದ ಮೌನ ಎಂಬ ಸಹಜಾರ್ಥದಲ್ಲಿ ಗ್ರಹಿಸುವುದಾದರೆ ಕಿಷನ್ ನೀಡುತ್ತಿರುವ ಸೂಚನೆ ನಮಗೆ ಅರ್ಥವಾದೀತು. ನಾನು ಎತ್ತಿದ ಮನುಷ್ಯನ ಚಿತ್ತವೃತ್ತಿಯನ್ನು ಅಂದಾಜು ಮಾಡುವಲ್ಲಿನ ಸಮಾಜವಾದದ ವೈಫಲ್ಯದ ಪ್ರಶ್ನೆಗೂ ಕಿಷನ್ ಇಲ್ಲಿ ಉತ್ತರ ಬೊಟ್ಟು ಮಾಡುತ್ತಿದ್ದಾರೆಂದು ನನಗನ್ನಿಸುತ್ತದೆ.

ಹಾಗೆ ನೋಡಿದರೆ ಸಮಾನತೆ ಎಂಬುದೇ ಒಂದು ಆಧ್ಯಾತ್ಮಿಕ ಪ್ರೇರಣೆ ಎಂಬುದನ್ನು ನಾವು ಗಮನಿಸಬೇಕು. ಈ ದೃಷ್ಟಿಯಿಂದ ಸಮಾಜವಾದಿ ಚಳುವಳಿ ಒಂದು ಸ್ತರದಲ್ಲಿ ಧಾರ್ಮಿಕ ಚಳುವಳಿಯಂತೆಯೇ ಕ್ರಿಯಾಶೀಲಾವಾಗಬೇಕಿತ್ತು. ಆದರೆ ಕಳೆದ ಐವತ್ತು-ಅರವತ್ತು ವರ್ಷಗಳ ಸಮಾಜವಾದಿ ಚಳುವಳಿ ಈ ಆಧ್ಯಾತ್ಮಿಕ ಆಯಾಮವನ್ನೇ ಮಸುಕು

ಮಾಡುವಷ್ಟು ಆಕ್ರಮಣಕಾರಿಯಾಗಿ ವರ್ತಿಸಿ ತನ್ನೆಲ್ಲ ಆಯುಧಗಳನ್ನೇ ಕಳೆದುಕೊಂಡು ಕೂತಿದೆ. ಲೋಹಿಯಾ ಹೇಳಿದ ಅನ್ಯಾಯ ಕುರಿತಂತೆ 'ಒಂದು ಕಣ್ಣಲ್ಲಿ ಕಣ್ಣೀರ ಹನಿ; ಮತ್ತೊಂದು ಕಣ್ಣಲ್ಲಿ ಕ್ರೋಧದ ಬೆಂಕಿ' ಧೋರಣೆಯು ಚಳುವಳಿಯುದ್ಧಕ್ಕೂ ಕ್ರೋಧವಾಗಿ ಮಾತ್ರ ಅಭಿವ್ಯಕ್ತಗೊಂಡಿರುವುದರ ಹಿಂದಿರುವ ಕಾರಣಗಳಾದರೂ ಏನು ಮತ್ತು ಇದರಿಂದ ಉಂಟಾಗಿರುವ ಪರಿಣಾಮಗಳಾದರೂ ಎಂತಹವು ಎಂಬುದನ್ನು ಸಮಾಜವಾದಿಗಳು ಆಳವಾಗಿ ಆಲೋಚಿಸಬೇಕಿದೆ. ಕ್ರೋಧದ ರಾಜಕಾರಣ ಸಮಾಜವಾದಿಗಳನ್ನು ಎಷ್ಟರಮಟ್ಟಿಗೆ ಸ್ವಯಂಪರವಶರನ್ನಾಗಿ ಮಾಡಿತೆಂದರೆ, ಆಚಾರ್ಯ ನರೇಂದ್ರದೇವ, ಲೋಹಿಯಾ, ಜೆ.ಪಿ. ಮುಂತಾದ ಸಮಾಜವಾದಿ ಚಿಂತಕರು ಪ್ರತಿಪಾದಿಸಿದ ಅನೇಕ ತಾತ್ವಿಕ ಹಾಗೂ ಪ್ರಾಯೋಗಿಕ ಮಾದರಿಗಳ ಬಗೆಗೆ ಅವರಲ್ಲಿ ಅಸೂಕ್ಷ್ಮತೆ-ಅವಜ್ಞತೆಗಳು ಉಂಟಾಗಿ, ಆ ಮಾದರಿಗಳು ಚಳುವಳಿಯ ಭಾಗವಾಗಿ ಬೆಳೆಯಲೇ ಇಲ್ಲ. ಉದಾಹರಣೆಗೆ ನರೇಂದ್ರದೇವ ಅವರು ಪ್ರತಿಪಾದಿಸಿದ್ದ ಗಾಂಧಿ ಮುಖೇನ ಬುದ್ಧ-ಮಾರ್ಕ್ಸ್‌ರ ಅನುಸಂಧಾನ, ಲೋಹಿಯಾ ಪ್ರತಿಪಾದಿಸಿದ್ದ ಸಣ್ಣ ಘಟಕ ತಂತ್ರಜ್ಞಾನ ಹಾಗೂ ಜೆ.ಪಿ. ಅವರ 'ಸಮಾಜವಾದಿ ಆಶ್ರಮ'ಗಳ ಪ್ರಯೋಗ ಸಮಾಜವಾದಿ ಚಳುವಳಿಯ ಭಾಗವೇ ಆಗಲಿಲ್ಲ. ಆದರೆ ವಿಷಾದದ ಸಂಗತಿ ಎಂದರೆ ಈ ಎಲ್ಲವೂ ಸಮಾಜವಾದದ ಆಧ್ಯಾತ್ಮಕ ಹೃದಯ ಭಾಗವೇ ಆಗಿತ್ತು ಎಂಬುದನ್ನು ಸಮಾಜವಾದಿ ಚಳುವಳಿ ಅರಿಯದೇ ಹೋಯಿತು ಎಂಬುದು. ಬಹುಶಃ ಕಿಷನ್ ಸೂಚಿಸುತ್ತಿರುವುದೂ ಇದನ್ನೇ.*

ಅದೇನೇ ಇರಲಿ, ಈ ಸಂಗ್ರಹದ ಅಮರ್ತ್ಯಸೇನರ ಅರ್ಥಶಾಸ್ತ್ರ, ಸಮಾಜವಾದದ ತಂತ್ರಜ್ಞಾನ ನೀತಿ ಹಾಗೂ ಅಣ್ಣಾ ಹಜಾರೆ ಕುರಿತ ಲೇಖನಗಳು ಕ್ರಮವಾಗಿ ಈ ಮೇಲೆ ಪ್ರಸ್ತಾಪಿಸಿದ ನರೇಂದ್ರದೇವ, ಲೋಹಿಯಾ ಹಾಗೂ ಜೆ.ಪಿ.ಯವರ ವಿಚಾರಗಳ ಕ್ರಿಯಾಶೀಲ ವಿಸ್ತರಣೆಗಳಂತಿರುವುದನ್ನು ನಾವು ಗಮನಿಸಬೇಕು. ಮಾರ್ಕ್ಸ್‌ವಾದದ ಸುಖ ಹಾಗೂ ಬುದ್ಧನ ದುಃಖ ಮೀಮಾಂಸೆಗಳ ಅನುಸಂಧಾನದಂತೆ ತೋರುವ well being (ನೆಮ್ಮದಿ) ಎನ್ನುವ ಪರಿಕಲ್ಪನೆಯನ್ನು ಅರ್ಥಶಾಸ್ತ್ರೀಯ ಪರಿಭಾಷೆಯಲ್ಲಿ ಪುನರ್ವ್ಯಾಖ್ಯಾನಿಸುವ ಅಮರ್ತ್ಯಸೇನರ ಪ್ರಯತ್ನವು, ಬಡತನ ಮತ್ತು ಅಸಮಾನತೆಗಳನ್ನು ಅನುಭೋಗ ಮತ್ತು ತುಷ್ಟಿ ಗುಣಗಳ ಮಟ್ಟಗಳೆಂಬ ಭೌತಿಕ ಅಳತೆಗೋಲುಗಳಿಂದ ಬಿಡುಗಡೆಗೊಳಿಸುವ ಮೂಲಕ ಒಂದು ನೈತಿಕ ಪ್ರಭೆಯನ್ನು ಪಡೆದುಕೊಳ್ಳುತ್ತದೆ. ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ ಲೇಖನದಲ್ಲಿ ಇದನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಹಾಗೇ ಲೋಹಿಯಾ ಪ್ರತಿಪಾದಿಸಿದ ಸಣ್ಣ ಘಟಕ ಯಂತ್ರದ ಪರಿಕಲ್ಪನೆಯನ್ನು ಸಮಾಜವಾದಿ ಚಳುವಳಿ ಮರೆತರೂ, ದೇಶೀ ತಂತ್ರಜ್ಞರ ಸಮೂಹವೊಂದು ಅದನ್ನು ವಿಸ್ತರಿಸಿ ಬೆಳೆಸಿರುವುದನ್ನು ಮತ್ತು ಜಾಗತೀಕರಣದೊಂದಿಗೆ ಬೆಸೆದುಕೊಂಡು ಬಂದಿರುವ ಹೊಸ ಮಾದರಿಯ ತಂತ್ರಜ್ಞಾನ ಹುಟ್ಟು ಹಾಕುತ್ತಿರುವ ಅಸಮಾನತೆ ಮತ್ತು ಸಾಂಸ್ಕೃತಿಕ ಅರಾಜಕತೆಗಳ ಇಂದಿನ ಸಂದರ್ಭದಲ್ಲಿ ಅದರ ಕಾರ್ಯಶೀಲ ಪ್ರಸ್ತುತತೆಯನ್ನು ಲೇಖಕರು ಪ್ರಸ್ತಾಪಿಸಿದ್ದಾರೆ. ಸಮಾಜವಾದಿಗಳು ಇದನ್ನು ವಿಷಾದದಿಂದ ಓದಿಕೊಳ್ಳಬಹುದು.

---

* ಈ ಕುರಿತ ಜಿ.ಎನ್. ಮಲ್ಲಿಕಾರ್ಜುನ ಅವರ ಲೇಖನ ಅಂದು ಕಿಷನ್ ಪಟ್ನಾಯಕ್ ಮಾಡಿದ ಭಾಷಣದ ಸಾರಾಂಶ ಮಾತ್ರ ಎಂಬುದನ್ನು ಈ ಸಂದರ್ಭದಲ್ಲಿ ಓದುಗರಿಗೆ ನೆನಪಿಸಬೇಕಿದೆ.

ಇನ್ನು ಅಣ್ಣಾ ಹಜಾರೆ ಅವರು ತಮ್ಮ ಹುಟ್ಟೂರು ರಾಳೇಗಣ ಸಿದ್ಧಿಯನ್ನು 'ಗಾಂಧೀಜಿ ಕನಸಿನ ಹಳ್ಳಿ'ಯನ್ನಾಗಿ ಪರಿವರ್ತಿಸಿರುವ ಪವಾಡ ಯಾರನ್ನಾದರೂ ಬೆರಗುಗೊಳಿಸುವಂತಿದೆ. ಇದು ವ್ಯಕ್ತಿಯ ಅಂತರಾಳದ ದುಃಖ, ಆದರ್ಶ ಹಾಗೂ ಹಠಗಳಿಂದ ಸಾಕಾರಗೊಂಡ ಪವಾಡ. ಈ ಕುರಿತ ಇಲ್ಲಿನ ಲೇಖನ ಅಣ್ಣಾ ಹಜಾರೆ ಎಂಬ ಸಾಮಾನ್ಯ ನಿವೃತ್ತ ಸೈನಿಕನೊಬ್ಬನ ಮೌನದಾಳಗಳನ್ನು ವಿವರವಾಗಿ ಪರಿಚಯ ಮಾಡಿಕೊಡುತ್ತದೆ. ಇಲ್ಲಿ ಬುದ್ಧ, ಪರಮಹಂಸ, ಗಾಂಧಿ, ಥೆರೇಸಾ ಎಲ್ಲ ಕ್ರಿಯಾಶಲರಾಗಿದ್ದಾರೆ. ಜಿ.ಎನ್. ಮಲ್ಲಿಕಾರ್ಜುನ ಅವರು ತಮ್ಮ ಈ ಲೇಖನಕ್ಕೆ 'ಬೆಳಗಿನೊಳಗಿನ ಬೆರಗು...' ಎಂಬ ಶೀರ್ಷಿಕೆ ನೀಡಿರುವುದು ಉಚಿತವಾಗಿಯೇ ಇದೆ. ತತ್ವಗಳ ಹಿಂದಿನ ಬೆಳಕನ್ನು ಇಲ್ಲಿ ಕಣ್ಣಿಗೆ ಕಾಣುವ ಬೆಳಕನ್ನಾಗಿ ಮಾರ್ಪಡಿಸಿದ್ದಾರೆ ಅಣ್ಣಾ ಹಜಾರೆ. ಜೆ.ಪಿಯವರು ಗ್ರಾಮಾಂತರ ಪ್ರದೇಶಗಳಲ್ಲಿ 'ಸಮಾಜವಾದಿ ಆಶ್ರಮ'ಗಳ ಸ್ಥಾಪನೆಯ ಪರಿಕಲ್ಪನೆಯನ್ನು ಮುಂದಿಟ್ಟಾಗ ಅವರ ಮನಸ್ಸು ಇದೇ ತರಂಗಾಂತರದಲ್ಲಿತ್ತೇನೋ! ಆದರೆ ಸ್ವತಃ ಜೆ.ಪಿ.ಯಂತಹ ಜೆ.ಪಿ.ಯವರೇ ಸೆಖೋದೋವ್ರೋರಾದಲ್ಲಿ ಸ್ಥಾಪಿಸಿದ 'ಸಮಾಜವಾದಿ ಆಶ್ರಮ' ಅವರ ಕಣ್ಮುಂದೆಯೇ ಅನೇಕ ತರಲೆ–ತಾಪತ್ರಯಗಳ ಬೀಡಾಗಿ ಹೋಯಿತು ಎಂಬುದನ್ನು ನೆನಸಿಕೊಂಡಾಗ ಸಮಾಜವಾದಿ ಚಳುವಳಿಯಲ್ಲಿ ಮೂಡದ, ಆದರೆ ಅಣ್ಣಾ ಹಜಾರೆ ಎಂಬ ವ್ಯಕ್ತಿಯಲ್ಲಿ ಪ್ರಕಟಗೊಂಡ ಕ್ರತುಶಕ್ತಿಯ ಮೂಲ ಯಾವುದು ಎಂಬುದನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಈ ಲೇಖನ ನಮಗೆ ವಹಿಸುತ್ತದೆ. ಆಳದ ನೋವಿನಿಂದ ಚಿಮ್ಮದ ಯಾವುದೇ ಕ್ರಿಯಾಶೀಲತೆಗೆ ಹೆಚ್ಚಿನ ಧಾರಣಾಶಕ್ತಿ ಇರಲಾರದು. ಗಾಂಧಿ ಒಡನಾಟದಿಂದ ಬೇರ್ಪಟ್ಟ ಸಮಾಜವಾದಿ ಚಳುವಳಿ ಆಳದ ನೋವನ್ನು ಕಳೆದುಕೊಂಡು ಸೈದ್ಧಾಂತಿಕ ವಿಶಿಷ್ಟತೆಯ ಅಹಂಕಾರವನ್ನಷ್ಟೇ ಬೆಳೆಸಿಕೊಂಡು ಆಕ್ರಮಣಕಾರಿಯಾಗುತ್ತ ಹೋಗಿ ಸುಮ್ಮನೆ ಕುಸ್ತಿ ಮಾಡಿ ಮಾಡಿ ಸುಸ್ತಾಗಿ ಹೋಯಿತೇ?

ಹೀಗೆಲ್ಲ – ಇಷ್ಟು ವಿಸ್ತಾರದಲ್ಲಿ – ಯೋಚಿಸಲು ಈ ಸಂಗ್ರಹದ ಲೇಖನಗಳು ನಮ್ಮನ್ನು ಪ್ರೇರೇಪಿಸುತ್ತವೆ. ಇಂತಹ ಪ್ರೇರೇಪಣೆ ಇಂದಿನ ಸಂದರ್ಭದಲ್ಲಿ ಸಾಮಾನ್ಯ ಮಹತ್ವದಲ್ಲ. ಗೆಳೆಯ ಮಲ್ಲಿಕಾರ್ಜುನ ತಮ್ಮ ಮೊದಲ 'ಬೋಧಿವೃಕ್ಷದ ಕೆಳಗೆ' ಕೃತಿಯ ಮೂಲಕ ಕನ್ನಡದಲ್ಲಿ ಅಭಿವೃದ್ಧಿ ವಿನ್ಯಾಸಗಳನ್ನು ಕುರಿತ ಸಾಹಿತ್ಯ ಕೃಷಿಯನ್ನು ಆರಂಭಿಸಿದವರು. ಈ ಪುಸ್ತಕದ ಮೂಲಕ ಅವರು ಕೆಲವಡೆ ಪ್ರತ್ಯಕ್ಷವಾಗಿ, ಮತ್ತೆ ಕೆಲವೆಡೆ ಪರೋಕ್ಷವಾಗಿ ಸಮಾಜವಾದಿ ಚಿಂತನೆಯ ವಿಸ್ತರಣೆಯ ಅನಿವಾರ್ಯತೆ ಮತ್ತು ಸಾಧ್ಯತೆಗಳ ಕಡೆ ಬೊಟ್ಟು ಮಾಡಿ ಪರ್ಯಾಯ ಚಿಂತನೆಯ ತುರ್ತು ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ಇದಕ್ಕಾಗಿ ನಾನು ಜಿ.ಎನ್. ಮಲ್ಲಿಕಾರ್ಜುನ ಅವರನ್ನು ಅಭಿನಂಧಿಸುತ್ತೇನೆ.

---

* ಆಸಕ್ತರು 'ನೆಲಸಿರಿ' ಹೊರ ತಂದಿರುವ ಅವರ 'ಬನ್ನಿ ಬೆಳಕಿನ ದೊಂದಿ ಹಚ್ಚೋಣ' ಎಂಬ ಸಿ.ಡಿ. ಕೇಳಬಹುದು. ವಿಚಾರಿಸಿರಿ : ೯೪೪೮೮೭೧೮೧೫

(ಜಿ.ಎನ್. ಮಲ್ಲಿಕಾರ್ಜುನಪ್ಪ ಅವರ ಅಭಿವೃದ್ಧಿ ಸಾಹಿತ್ಯ ಲೇಖನಗಳ ಸಂಗ್ರಹ : 'ಬೆಳಗಿನ ಬೆರಗು'ಗಾಗಿ ಬರೆದ ಮುನ್ನುಡಿಯ ಮಾತುಗಳು)

ಸರಕು ಅರ್ಥಶಾಸ್ತ್ರ ಮತ್ತು ಸಮಾಜವಾದ

ಈಗ ಮದುವೆಗಳನ್ನು ಹೊರ ಗುತ್ತಿಗೆ ಕೊಟ್ಟು ಏರ್ಪಡಿಸುತ್ತಿರುವ ಸಂಗತಿಯನ್ನು ನೀವು ಈಚೆಗೆ ಪತ್ರಿಕೆಗಳಲ್ಲಿ ಓದಿರಬಹುದು. ಈಚೆಗೆ ಜೋಧ್‌ಪುರದಲ್ಲಿ ಅನಿವಾಸಿ ಭಾರತೀಯ ಉದ್ಯಮಿ ಅರುಣ್ ನಯ್ಯರ್ ಹಾಗೂ ಹಾಲಿವುಡ್ ನಟನೊಬ್ಬನ ಮಾಜಿ ಪತ್ನಿ ಹರ್ಲೆ ನಡುವೆ ನಡೆದ ಕೋಟ್ಯಾಂತರ ರೂಪಾಯಿಗಳ ವೆಚ್ಚದ ಮದುವೆ ಇದಕ್ಕೊಂದು ಇತ್ತೀಚಿನ ಉದಾಹರಣೆಯಷ್ಟೆ. ಐದು ಕೋಟಿ ರೂಪಾಯಿಗಳಿಂದ ಹಿಡಿದು ಐದು ನೂರು ಕೋಟಿ ರೂಪಾಯಿಗಳವರೆಗಿನ ಮೌಲ್ಯದ ಈ ಹೊರ ಗುತ್ತಿಗೆಯಲ್ಲಿ ಶೇಕಡಾ ೧೦ ರಿಂದ ೧೫ರವರೆಗೆ ಸೇವಾ ಕಮೀಷನ್ ಸಿಗುತ್ತದೆಂದು 'ಈವೆಂಟ್ ಮ್ಯಾನೇಜ್‌ಮೆಂಟ್' ಎಂಬ ಹೊಸ ಮರ್ಯಾದಸ್ಥ ಹೆಸರು ಪಡೆದುಕೊಂಡಿರುವ ಈ ಗುತ್ತಿಗೆದಾರರು ಹೇಳುತ್ತಾರೆ. ಇದು ಈ ಕಾಲದ 'ಸೇವೆ'! ಅಂದರೆ, ಮದುವೆಯೆಂಬುದೊಂದು 'ಈವೆಂಟ್'. ಅಂದರೆ ಒಂದು 'ಷೋ' – ಪ್ರದರ್ಶನ! ಹೃದಯ ಸಂಬಂಧಗಳನ್ನು ಬೆಸೆಯುವ, ಹಾಗಾಗಿ ತೀರಾ ವೈಯುಕ್ತಿಕ ನೆಲೆಯಲ್ಲಿ ಮತ್ತು ಕೌಟುಂಬಿಕ ಚೌಕಟ್ಟಿನಲ್ಲಿ ನಡೆಯಬೇಕಾದ ಮದುವೆ, ಈಗ ಸೇವಾ ಶುಲ್ಕ ತೆರಬೇಕಾದ ಒಂದು Performance ಎಂಬಂತೆ – ಒಂದು 'ಆಟ'ವೆಂಬಂತೆ ಆಯೋಜಿತವಾಗುತ್ತಿದೆ. ಈ 'ಆಟ'ದಲ್ಲಿ ಮದುಮಕ್ಕಳು

ಆಟಕ್ಕುಂಟು, ಲೆಕ್ಕಕ್ಕಿಲ್ಲ. ಏನಿದ್ದರೂ ಮುದುಮಕ್ಕಳ ಅಪ್ಪ–ಅಮ್ಮಂದಿರು ಹಾಗೂ ಬಂಧು–ಮಿತ್ರರದೆ ಆಟ–ಕೂಟ. ಈ ಆಟ–ಕೂಟದಲ್ಲಿ ಪ್ರದರ್ಶನವಾಗುವುದು ಅವರ ಸಂಪತ್ತಿನ ಹಾಗೂ ಸಂಬಂಧಗಳ ಆಳ–ಎತ್ತರಗಳು. ಈ ಪ್ರದರ್ಶನದ ಗುರಿ ಅವರ ವಾಣಿಜ್ಯ ವ್ಯವಹಾರ ವಿಸ್ತರಣೆ.

ಬೆಳ್ಳಿ ತಗಡಿನಲ್ಲಿ ಕೆತ್ತಲ್ಪಟ್ಟ ಮದುವೆಯ ಆಹ್ವಾನ ಪತ್ರಿಕೆ, ಅದರೊಂದಿಗೆ ವಿಮಾನ ಟಿಕೆಟ್‌ಗಳೂ, ಪ್ರತಿ ಆಹ್ವಾನಿತರಿಗೂ ಒಂದು ಹವಾನಿಯಂತ್ರಿಕ ಕಾರು, ಆ ಮದುವೆಗೆಂದೇ ನಿಗದಿಯಾದ ವಿಶೇಷ ಉಡುಪು, ನಾಲ್ವರು ಸೇವಕರು, ದಿನವೊಂದಕ್ಕೆ ೧.೬ ಲಕ್ಷ ರೂಪಾಯಿಗಳ ಬಾಡಿಗೆ ಇರುವ ಹೋಟೆಲ್ ಕೊಠಡಿ, ನಾಲ್ಕು ಭೂ ಖಂಡಗಳ ಶೈಲಿಯ ವಿಶೇಷ ಊಟ, ಮುತ್ತು–ರತ್ನಗಳಿಂದ ಸಜ್ಜಾದ ದಂತದ ಉಡುಗೊರೆಗಳು, ಗತ ಇತಿಹಾಸದ ಚಕ್ರವರ್ತಿಗಳ ಸ್ಮಾರಕಗಳಾಗಿರುವ ಕೋಟೆಗಳಲ್ಲೋ ಅಥವಾ ಅರಮನೆಗಳಲ್ಲೋ; ಅದು ಸಾಧ್ಯವಾಗದಿದ್ದರೆ, ಅವುಗಳ ಮಾದರಿಯಲ್ಲಿ ಜಗತ್ತಿನ ಸುಪ್ರಸಿದ್ಧ ವಾಸ್ತು ವಿನ್ಯಾಸಕಾರರಿಂದ ನಿರ್ಮಿಸಲ್ಪಟ್ಟ ಮದುವೆ ಮಂಟಪದಲ್ಲಿ ಮುದುವೆ. ಸಂಸ್ಕೃತ ಪ್ರೊಫೆಸರಗಳ ಮಾರ್ಗದರ್ಶನ ದಲ್ಲಿ ಮದುವೆಯ ವಿಧಿಗಳು, ಜಾಗತಿಕ ಮದುವೆಯಾದುದರಿಂದ ಸಂಸ್ಕೃತ ಮಂತ್ರಗಳ ಇಂಗ್ಲಿಷ್ ಅನುವಾದದ ಮೂಲಕ ಭಾರತೀಯ ಸಂಸ್ಕೃತಿಯ ಪನ್ನೀರು ಸಿಂಚನ. ಹಾಲಿವುಡ್ಡಿನದೋ ಬಾಲಿವುಡ್ಡಿನದೋ ತಾರಾ ತಂಡದ ನೃತ್ಯ–ಸಂಗೀತ ಕೂಟ. ಅಲಂಕೃತ

ಆನೆ. ಒಂಟೆ, ಕುದುರೆಗಳ ಮಧ್ಯೆ ಮದುಮಕ್ಕಳ ಪಲ್ಲಕ್ಕಿ ಮೆರವಣಿಗೆ! ನಂತರ ಹವಾಯಿಯಲ್ಲೋ, ಬಾಲಿಯಲ್ಲೋ, ಆಲ್ಫ್ಸ್ ಪರ್ವತಗಳ ತಪ್ಪಲಲ್ಲೋ ಮಧುಚಂದ್ರ. ಇದು ಈಗಿನ ಭಾರತದ ಕಾರ್ಪೊರೇಟ್ ಜಗತ್ತು ನಡೆಸುತ್ತಿರುವ ಮದುವೆಗಳ ವೈಖರಿ.

ಎಂದಿನಿಂದ ದೇಶ ಸಾಗಿದ್ದ ದಾರಿ ಅದನ್ನು ಭಾರಿ ಕಂದಕದ ಮುಂದೆ ತಂದು ನಿಲ್ಲಿಸಿ ಅದರ ಬುದ್ಧಿಯನ್ನು ಮಂಕಾಗಿಸಿತೋ, ಅಂದಿನಿಂದ ಈ ದೇಶದಲ್ಲಿ ಎಲ್ಲ ಕಲ್ಪನೆ–ಪರಿಕಲ್ಪನೆಗಳೂ ಬದಲಾಗತೊಡಗಿವೆ. ಎಲ್ಲ ಅಶ್ಲೀಲ–ಅನಾಚಾರಗಳಿಗೂ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಪರಿಭಾಷೆಯಲ್ಲಿ ಆಶ್ರಯ ಸಿಕ್ಕಿ ಅವು ಹೊಸ ಹೈ–ಟೆಕ್ ಹೆಸರುಗಳಲ್ಲಿ ಹೊಸ ಪಾವಿತ್ರ್ಯಗಳನ್ನು ಗಳಿಸಿಕೊಳ್ಳುತ್ತಿವೆ. ಈಗ ಎಲ್ಲವೂ Product ಅಥವಾ Service! Manufacturing ಏನಿದ್ದರು ಹೆಸರುಗಳದ್ದು! ಸುಳ್ಳು ಹೇಳುವುದು, ಟೋಪಿ ಹಾಕುವುದು, ಚೆಲ್ಲಾಟ, ಕೊಲ್ಲುವುದು ಇತ್ಯಾದಿಗಳು ಈ ಹಿಂದೆಯೂ ವ್ಯಾಪಾರೋದ್ಯಮಗಳಲ್ಲಿ ನಡೆಯುತ್ತಿದ್ದುವಾದರೂ, ಅವು ಒಳಗಿನವರಿಗಲ್ಲದಿದ್ದರೂ ಹೊರಗಿನವರಿಗೆ ಪಾಪ ಕೃತ್ಯಗಳೆನಿಸುತ್ತಿದ್ದವು.

ಆದರೀಗ ಅವೆಲ್ಲ ಜಾಗತಿಕ ಮಾರುಕಟ್ಟೆ ವ್ಯವಹಾರಕ್ಕೆ ಇಂದು ಅತ್ಯಗತ್ಯವೆನಿಸಿರುವ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ನಾಜೂಕಿನ ರೂಪಗಳನ್ನೂ, ಹೆಸರುಗಳನ್ನೂ ಪಡೆಯುತ್ತಿವೆ. ಸುಳ್ಳು ಹೇಳುವುದು PR ಆಗಿ, ಟೋಪಿ ಹಾಕುವುದು fine print ಎಂದಾಗಿ, ಮೃದು ವ್ಯಭಿಚಾರ social intervention ಎಂದಾಗಿ, ಕೊಲ್ಲುವುದು survival of the fittest ಎಂದಾಗಿ ಹೊಸಶಾಸ್ತ್ರೀಯ ಬೆಡಗನ್ನು ಪಡೆಯುತ್ತಿವೆ. ನಮ್ಮ ಮಕ್ಕಳು ಇಂದು ಬದುಕಲು ಬೇಕಾದ ಹಾಗೂ ಮಾರುಕಟ್ಟೆಯಲ್ಲಿ ಬಹು ಬೇಡಿಕೆ ಇರುವ ವ್ಯಾಸಂಗ ಕ್ರಮಗಳೆಂದು ಹೇಳಲಾದ ಹೊಸ ಹೊಸ ಶಾಸ್ತ್ರಗಳಡಿಯಲ್ಲಿ ಅವಗಳನ್ನು ಕಲಿತು, ಅವುಗಳ ಬಗೆಗಿದ್ದ ಎಲ್ಲ ಮುಜುಗರಗಳನ್ನು ಕಳೆಯತೊಡಗಿದ್ದಾರೆ. ಇಂತಹ ಮುಜುಗರಗಳನ್ನು ಕಳೆದುಕೊಂಡಷ್ಟೂ ಹಳೆಯ ಹಳವಂಡಗಳಿಂದ ವಿಮೋಚಿತರಾಗಿ ಹೊಸ ಜಗತ್ತಿನ ಹೊಸ ರುಚಿಗಳನ್ನು ಸವಿಯುವ ಅವಕಾಶ ಹೆಚ್ಚೆಂಬ ನಿರೀಕ್ಷೆಯಲ್ಲಿ ನಾವು, ನಮ್ಮ ಆ ಹಳೆ ಲೋಕದ ಪಾಪಗಳನ್ನೆಲ್ಲ ನಮ್ಮ ಹೊಸ ಲೋಕದ ಪುಣ್ಯಗಳನ್ನಾಗಿ ಮಾಡಿಕೊಳ್ಳುತ್ತಿದ್ದೇವೆ.

ನಮ್ಮ ಹೆಣ್ಣುಮಕ್ಕಳು ಕಾಲ್ ಸೆಂಟರ್‌ಗಳಲ್ಲಿ ತಮ್ಮ ರಾತ್ರಿಗಳನ್ನು ಹಗಲುಗಳನ್ನಾಗಿ ಬದಲಿಸಿಕೊಳ್ಳುವುದಲ್ಲದೆ, ತಮ್ಮ ಸಹಜ ಭಾಷಾ ಶೈಲಿ ಹಾಗೂ ಉಚ್ಚಾರಣೆಗಳ ಜೊತೆಗೆ ತಮ್ಮ ಮೂಲ ಗುರುತಿನ ಪ್ರತೀಪಾತ್ರ ಹೆಸರುಗಳನ್ನೂ ಬದಲಿಸಿಕೊಂಡು 'ಸೇವೆ' ಸಲ್ಲಿಸುವಂತಹ ಒತ್ತಡಕ್ಕೆ ಸಿಕ್ಕಿ, ತಮ್ಮ ನಿಜ ವ್ಯಕ್ತಿತ್ವದ ಆಧಾರಗಳನ್ನೇ ಕಳೆದುಕೊಳ್ಳುತ್ತಿದ್ದಾರೆ ಎಂಬ ಸಂಗತಿ ನಮಗೆ ಮುಖ್ಯವಾಗದೇ ಹೋಗುವಷ್ಟು ನಾವು ಸಂವೇದನಾ ಹೀನರಾಗುತ್ತಿದ್ದೇವೆ. ನಮ್ಮ ಸಾಫ್ಟ್‌ವೇರ್ ಮಕ್ಕಳು ಆ ವೃತ್ತಿಯ ಜೀವನ ಕ್ರಮದ ಒತ್ತಡಗಳಿಗೆ ಸಿಕ್ಕಿ ಕ್ರಮೇಣ ಸಂತಾನ ಹೀನರಾಗುತ್ತಿದ್ದಾರೆ; ತಮ್ಮ ವಿರಾಮ ವೇಳೆಯನ್ನೂ, ಸುಖ – ಶಾಂತಿಗಳನ್ನು ಹುಡುಕಿಕೊಂಡು ಮಸಾಜ್ ಸೆಂಟರುಗಳೆಂಬ ಲೌಕಿಕ ಅರಾಮ ಕೇಂದ್ರಗಳಿಂದ ಹಿಡಿದು ಧ್ಯಾನ ಕೇಂದ್ರಗಳೆಂಬ ಆಧ್ಯಾತ್ಮಿಕ ವ್ಯಾಪಾರ ಕೇಂದ್ರಗಳವರೆಗೆ ಅಲೆದಾಡುವುದಲ್ಲಿ ವ್ಯರ್ಥಗೊಳಿಸಿಕೊಳ್ಳುತ್ತಿದ್ದಾರೆ ಎಂಬ ಸಂಗತಿ ನಮ್ಮನ್ನು ಕಿಂಚಿತ್ತೂ ಅಲುಗಾಡಿಸುವುದಿಲ್ಲ. ಮತ್ತು ನಮ್ಮ ಮಕ್ಕಳನ್ನು ಆ ಕ್ಷೇತ್ರಕ್ಕೆ ದೂಡುವ ನಮ್ಮ ಹುಚ್ಚು ಸ್ವಲ್ಪವೂ ಕಡಿಮೆಯಾಗುವುದಿಲ್ಲ.

ಆರ್ಥಿಕ ಬಂಡವಾಳದ ಈ ಎಲ್ಲ ಹಪಾಹಪಿಗಳಲ್ಲಿ ನಮ್ಮ ಮಾತೃಭಾಷೆಗಳನ್ನೇ ಇತಿಹಾಸದಲ್ಲಿ ಹೂತು ಹಾಕಲು ಹಿಂಜರಿಯದೆ, ನಮ್ಮ ಸಾಂಸ್ಕೃತಿಕ ಬಂಡವಾಳವನ್ನೇ ಕಳೆದುಕೊಳ್ಳಲು ಸಿದ್ಧರಾಗುತ್ತಿದ್ದೇವೆ. ಇದರ ದೂರಗಾಮಿ ಪರಿಣಾಮಗಳನ್ನು ಕಲ್ಪಿಸಿಕೊಳ್ಳಲೂ ವ್ಯವಧಾನವಿಲ್ಲದಷ್ಟು ಇಂದಿನ ಜಾಗತೀಕರಣದ ಸರಕು ಸಂತೆಯ ಸುಖ ಕಲ್ಪನೆಯಲ್ಲಿ ಮಗ್ನರಾಗಿ, ನಾವು ನಮ್ಮಿಂದಲೇ ದೂರವಾಗುತ್ತಿದ್ದೇವೆ ಎಂಬ ಕೇಂದ್ರ-ಅರಿವನ್ನೇ ಕಳೆದುಕೊಳ್ಳುತ್ತಿದ್ದೇವೆ. ಇದು ಮನುಷ್ಯನ ಆಳದ ಆಧ್ಯಾತ್ಮಕತೆಯ ಸಾವು. ಇದೇ ಮನುಷ್ಯನ ಅತ್ಯಂತಿಕ ದುರಂತ ಕೂಡ.

ಬಹುಶಃ ಮನಮೋಹನ ಸಿಂಗರು ಹದಿನೈದು ವರ್ಷಗಳ ಹಿಂದೆ ಆರ್ಥಿಕ 'ಸುಧಾರಣೆ'ಗಳೆಂಬ ಹುಸಿ ಹೆಸರಿನಲ್ಲಿ ಈ ಹೊಸ ಆರ್ಥಕತೆಯನ್ನು ವಿಶ್ವ ಬ್ಯಾಂಕಿನ ಮಾರ್ಗದರ್ಶನದಲ್ಲಿ ಜಾರಿ ಮಾಡಿದಾಗ, ಅವರಲ್ಲಿ ಇಂತಹ ದುರಂತದ ಕಲ್ಪನೆಯೂ ಇದ್ದಿರಲಾರದು. ಈಗಲೂ ಅದು ಮೂಡಿರಲಾರದು. ಏಕೆಂದರೆ, ಅವರು ಬಡತನದಲ್ಲಿ ಬೆಳೆರಾದರೂ, ಕಲಿತದ್ದು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸನ ಪಾಠಗಳನ್ನು. ಅದು ನಿಂತಿರುವುದೇ, ಮನುಷ್ಯನ ಭೌತಿಕ ಅಗತ್ಯಗಳು ಹಾಗೂ ಅವುಗಳ ಪೂರೈಕೆಯ ನಿರಂತರ ಚಕ್ರದ ಚಲನೆಯಲ್ಲೇ ಅರ್ಥಶಾಸ್ತ್ರ ಹುಟ್ಟಿ ಬೆಳೆಯುವುದೆಂಬ ನಂಬಿಕೆಯ ಮೇಲೆ. ಆವರು ಕೆಲಸ ಮಾಡಿದ್ದೂ ಇದೇ ಅರ್ಥಶಾಸ್ತ್ರದ ನಿಯಮಗಳಲ್ಲಿ ನಂಬಿಕೆಯಿಟ್ಟ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲೇ. ಅವರು ಈ ಸಂಸ್ಥೆಗಳ ಸೇವೆಯಿಂದ ನಿವೃತ್ತರಾದಾಗ, ಅವರ ದೇಶ ಭಾರತ ತಾನು ಆರಿಸಿಕೊಂಡ ಅಭಿವೃದ್ಧಿಯ ಹಾದಿಯಲ್ಲಿ ಸೋತು ಸುಸ್ತಾಗಿ ತನ್ನ ಕಾಪು ಚಿನ್ನವನ್ನೆಲ್ಲಾ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲಿ ಅಡವಿಟ್ಟು ಉಸಿರು ಉಳಿಸಿಕೊಂಡಿತ್ತು. ತಾವು ಕಲಿತ ಅರ್ಥಶಾಸ್ತ್ರ ಪಶ್ಚಿಮ ದೇಶಗಳಲ್ಲಿ ಕೊಟ್ಟ ಅದ್ಭುತ ಫಲಗಳನ್ನಷ್ಟೇ ಕಂಡು ಬೆರಗಾಗಿದ್ದ ಮನನೋಹನರಿಗೆ, ಈ ಅದ್ಭುತ ಫಲಗಳ ಹಿಂದಿನ ಜಾಗತಿಕ ರಾಜಕಾರಣದ ಅರಿವಿದ್ದಂತಿರಲಿಲ್ಲ. ಹಾಗಾಗಿಯೇ ಅವರಿಗೆ ಭಾರತೀಯ ಸಮಾಜವಾದವೆಂಬುದೊಂದಿದೆ; ಅದು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ನ ತಿಳುವಳಿಕೆಗಿಂತ ಭಿನ್ನವಾದ, ಬೇರೊಂದು ನೆಲೆಯ ಅರ್ಥಶಾಸ್ತ್ರದ ಆಧಾರ ಹೊಂದಿದೆ ಎಂಬ ಅರಿವೇ ಇದ್ದಂತಿರಲಿಲ್ಲ.

ಹೆಚ್ಚೆಂದರೆ, ಅವರಿಗೆ ಗಾಂಧಿ ಅರ್ಥಶಾಸ್ತ್ರದ ಬಗೆಗೆ ಅರಿವಿದ್ದಿತೇನೋ. ಆದರೆ ಅದರ ಜೊತೆಗೇ, ಬಹುಶಃ ಆ ಅರ್ಥಶಾಸ್ತ್ರ ನೆಹರೂ ಕಾಲದಲ್ಲೇ ತಿರಸ್ಕೃತಗೊಂಡಿದೆ ಎಂಬ ಮಾಹಿತಿಯೂ ಇತ್ತು. ಅದರಾಚೆಗೆ, ಗಾಂಧಿ ಎಂದರೆ ವೈಯುಕ್ತಿಕ ಸರಳತೆ ಮಾತ್ರ. ಆದರೆ ಅದು ತನ್ನ ಒಡಲಾಳದಲ್ಲಿ ಭಾರತಕ್ಕೇ ವಿಶಿಷ್ಟವಾದ ಅರ್ಥಶಾಸ್ತ್ರವನ್ನು ಹುದುಗಿಸಿಕೊಂಡಿದೆ; ಭಾರತೀಯ ಸಮಾಜವಾದಿ ಚಳವಳಿ ಅದನ್ನು ಡಾ॥ ರಾಮ ಮನೋಹರ ಲೋಹಿಯಾರಂತಹವರ ಒಳನೋಟಗಳ ಮೂಲಕ ಯುದ್ಧೋತ್ತರ ಹೊಸ ಜಗತ್ತಿನ ಅರ್ಥಶಾಸ್ತ್ರವನ್ನಾಗಿ ವಿಸ್ತರಿಸಿ ಮಂಡಿಸಿದೆ ಎಂಬ ತಿಳುವಳಿಕೆ ಅವರಿಗಿಲ್ಲದೇ ಹೋಗಿರುವುದು, ಅವರ ಸಹವಾಸ ದೋಷದ ಹಿನ್ನೆಲೆಯಲ್ಲಿ ಸಹಜವೇ ಆಗಿದೆ. ಆ ತಿಳುವಳಿಕೆ ಆವರಿಗಿದ್ದಲ್ಲಿ, ಭಾರತದ ಅಭಿವೃದ್ಧಿ ಸೋಲನ್ನು ಪಶ್ಚಿಮದ ಬಂಡವಾಳವಾದಿಗಳ ಅಬ್ಬರದ ಮಧ್ಯೆ ಸಮಾಜವಾದದ ಕೊರಳಿಗೆ ಕಟ್ಟಿ; ಗೆಲುವಿಗೆ ಇನ್ನಿರುವುದು ಒಂದೇ

ದಾರಿಯಂಬಂತೆ ಆಗಿನ ಗುಮ್ಮನೆ ಗುಸುಕ ವ್ಯಕ್ತಿತ್ವದ ಪ್ರಧಾನಿ ನರಸಿಂಹರಾಯರ ಅಭಯ ಹಸ್ತವಡಿಯಲ್ಲಿ ಸಾಲಾಧಾರಿತ ಮುಕ್ತ ಬಂಡವಾಳವಾದಿ ಆರ್ಥಿಕ ಕ್ರಮಗಳನ್ನು ಪ್ರತಿಪಾದಿಸುತ್ತಿರಲಿಲ್ಲ.

ಈ ಮುಕ್ತ ಬಂಡವಾಳವಾದ ಇಂದು ಜಾಗತೀಕರಣವೆನಿಸಿ, ಭಾರತದಲ್ಲಿ ಅಪಾರ ಸಂಪತ್ತಿನ ದ್ವೀಪಗಳನ್ನು 'ಸೃಷ್ಟಿ'ಸುತ್ತಿದೆ. ಇದನ್ನು ತಮ್ಮ ಈ ಯಶಸ್ಸಿನ ಪ್ರತೀಕವೆಂದೇ ಭಾವಿಸಿ ಬಹುಶಃ ಮನಮೋಹನರು ಆ ಅಂತಹ ಅಶ್ಲೀಲ, ಅನಾಚಾರಗಳ ಮದುವೆಗಳಿಗೆ ಹೋಗುತ್ತಾರೆಂದು ಕಾಣುತ್ತದೆ. ಆದರೆ, ಅವುಗಳ ಅಶ್ಲೀಲತೆ-ಅನಾಚಾರಗಳು ಅವರಿಗೆ ಕಾಣದೇ ಹೋಗಲು, ಅವೆಲ್ಲವೂ ಮುಕ್ತ ಬಂಡವಾಳದ ಸಹಜ ಉಪ ಉತ್ಪನ್ನಗಳಾಗಿದ್ದು, ಅವುಗಳ ಕ್ರಿಯಾಶೀಲ ಪರಿಣಾಮಗಳಿಂದಾಗಿ ಆ ಸಂಪತ್ತಿನ ದ್ವೀಪಗಳು ಇತರರೆಡೆಗೂ ಹಿಗ್ಗತೊಡಗುವವು ಎಂದು ಅವರು ಕಲಿತು ನಂಬಿದ ಅರ್ಥಶಾಸ್ತ್ರ ಹೇಳುವುದೇ ಕಾರಣವಾಗಿದೆ. ಆದರೆ ಜಾಗತಿಕ ರಾಜಕಾರಣದ ಅಪಾರ ತಿಳುವಳಿಕೆಯುಳ್ಳವರಾಗಿದ್ದ ಲೋಹಿಯಾ, ಗಾಂಧಿವಾದದ ಪ್ರಭಾವದಲ್ಲಿ ಮತ್ತು ನೆಹರೂ ರಾಜಕಾರಣದ ಹಿನ್ನೆಲೆಯಲ್ಲಿ ಬಂಡವಾಳವಾದದ ಅಪಾಯಗಳನ್ನು ಅವರದೇ ರೀತಿಯಲ್ಲಿ ವಿಶ್ಲೇಷಿಸಿ, ಬಂಡವಾಳವಾದದ ಯಾವುದೇ ರೂಪ (ಅವರು ಕಮ್ಯುನಿಸಮ್ಮನ್ನೂ ಬಂಡವಾಳವಾದದ ಇನ್ನೊಂದು ರೂಪವೆಂದೇ ಪ್ರತಿಪಾದಿಸಿದ್ದರು) ಭಾರತದಂತಹ ಬಂಡವಾಳ ಸೂರೆಗೊಂಡ ದೇಶಕ್ಕೆ ಮುಕ್ತಿ ದೊರಕಿಸಲಾರದು ಎಂದು ಪ್ರತಿಪಾದಿಸಿದ್ದರು. ಶೋಷಣೆಯ ಮೂಲಕವೇ ಹುಟ್ಟಿ, ಶೋಷಣೆಯ ಮೇಲೆಯೇ ಬೆಳೆದಿರುವ ಬಂಡವಾಳವಾದವು ಶೋಷಣೆಯ ಅಸ್ತ್ರವಾಗಿ ಜಗತ್ತನ್ನು ಬಡ-ಶ್ರೀಮಂತವೆಂದು ಎರಡಾಗಿ ಒಡೆದಿದೆ. ಅದು ಭಾರತದಂತಹ ಬಡ ದೇಶಗಳ ಸಮಾಜಗಳನ್ನು ಬಡ ಹಾಗೂ ಶ್ರೀಮಂತ ವರ್ಗಗಳನ್ನಾಗಿ ಒಡೆದಿಟ್ಟು ನಿರಂತರ ಘರ್ಷಣೆ-ಅಶಾಂತಿಗೆ ಕಾರಣವಾಗಿ, ಅತ್ಯಂತಿಕವಾಗಿ ಅವನ್ನು ಪರೋಕ್ಷ ವಸಾಹತು ದೇಶಗಳನ್ನಾಗಿ ಮಾಡಿಕೊಳ್ಳುತ್ತದೆ ಎಂಬುದು ಅವರ ವಿಶ್ಲೇಷಣೆಯಾಗಿತ್ತು. ಇಂದು ಆಗುತ್ತಿರುವುದೂ ಅದೇ ಆಗಿದೆ.

ಲೋಹಿಯಾ ಅವರ ಈ ವಿಶ್ಲೇಷಣೆಯನ್ನು, ಹೋದ ವರ್ಷ ಬ್ರೆಝಿಲ್‌ನಲ್ಲಿ ನಡೆದ 'ವಿಶ್ವ ಸಾಮಾಜಿಕ ವೇದಿಕೆ'ಯ ವಾರ್ಷಿಕ ಸಮಾವೇಶದಲ್ಲಿ ಅಮೆರಿಕಾದ ಗೂಢಚರ್ಯೆ ಸಂಸ್ಥೆ ಸಿ.ಐ.ಎ.ಯ ಜಾನ್ ಪರ್ಕಿನ್ಸ್ ಎಂಬ ಮಾಜಿ ಗೂಡಚಾರ ಬಹಿರಂಗಗೊಳಿಸಿದ ಮಾಹಿತಿಯೊಂದಿಗೆ (ನೋಡಿ ಈತನ ಪುಸ್ತಕ : Economic Hitmen) ಜೋಡಿಸಿ ನೋಡಿದಾಗ, ಜಾಗತೀಕರಣವೆಂಬುದು ಒಂದು ಸಹಜ ಅರ್ಥಶಾಸ್ತ್ರೀಯ ವಿದ್ಯಮಾನ ವಾಗಿರದೆ, ಹೇಗೆ ಕಾರ್ಪೊರೇಟ್ ಬಂಡವಾಳಿಗರ ಒಂದು ಜಾಗತಿಕ ರಾಜಕೀಯ ಪಿತೂರಿಯಾಗಿದೆ ಎಂದು ಗೊತ್ತಾಗುತ್ತದೆ. ಆತನ ಪ್ರಕಾರ, ಮುಕ್ತ ಬಂಡವಾಳದ ಗುರು ಸ್ಥಾನದಲ್ಲಿರುವ ಅಮೆರಿಕ, ತನ್ನ 'ಗುರಿ'ಯಾಗುಳ್ಳ ದೇಶಕ್ಕೆ 'ಅಭಿವೃದ್ಧಿ ತಜ್ಞ'ನೊಬ್ಬನ ರೂಪದ ದಲ್ಲಾಳಿಯ ಮೂಲಕ, ಆ ದೇಶ ಭರಿಸಲಾಗದಷ್ಟು ಪ್ರಮಾಣದ ಸಾಲ ನೀಡಿಕೆಯನ್ನು ಪ್ರಸ್ತಾಪಿಸುತ್ತದೆ. ಬಯಸದೆ ಬಂದ ಭಾಗ್ಯದಂತೆ ಅದನ್ನು ಆ ದೇಶ ಒಪ್ಪಿಕೊಂಡ ಕೂಡಲೇ, ವಿಶ್ವಬ್ಯಾಂಕಿನದೋ, ಅಂತರಾಷ್ಟ್ರೀಯ ಹಣಕಾಸು ನಿಧಿಯದೋ ಹಣ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಯೊಂದಕ್ಕೆ ಬಂದು ಬೀಳುತ್ತದೆ. ಆ ಕಂಪನಿ ತನ್ನ ಷರತ್ತುಗಳ

ಮೇಲೇ, ಸಂಬಂಧಪಟ್ಟ ದೇಶದ ರಾಜಕೀಯ ವ್ಯವಸ್ಥೆ ಹಾಗೂ ಅಧಿಕಾರ ಶಾಹಿಯೊಂದಿಗೆ ಶಾಮೀಲಾಗಿ ಬೃಹತ್ ಪ್ರಮಾಣದ ಲಾಭದೊಂದಿಗೆ ಅಲ್ಲಿ ಸ್ಥಳೀಯರ ಮೂಲಕವೇ 'ಅಭಿವೃದ್ಧಿ' ಕಾರ್ಯಕ್ರಮಗಳನ್ನು ರೂಪಿಸಿ ಕೈಗೊಂಡು, ಆ ದೇಶವನ್ನು 'ಆಧುನೀಕರಣ' ಕ್ಕೊಳಪಡಿಸುವ ಕಾರ್ಯದಲ್ಲಿ ತನ್ನ ಅಮೂಲ್ಯ ಕೊಡುಗೆಯನ್ನು ಸಲ್ಲಿಸುತ್ತದೆ! ಅಕಸ್ಮಾತ್ ಆ ದೇಶದ ರಾಜಕೀಯ ಅಧಿಪತಿ ಸಾಲದ ಪ್ರಸ್ತಾಪವನ್ನು ಒಪ್ಪದಿದ್ದರೆ, ವಿರೋಧ ಪಕ್ಷಗಳಿಗೆ ಬೃಹತ್ ಪ್ರಮಾಣದ ಹಣ ಒದಗಿಸಿ ಆತನನ್ನು ಪದಚ್ಯುತಗೊಳಿಸುವ ಅಥವಾ ಆ ದೇಶದ ರಾಜಕೀಯ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುವ ಪರೋಕ್ಷ ಬೆದರಿಕೆ ಒಡ್ಡಲಾಗುತ್ತದೆ. ಅದಕ್ಕೂ ಬಗ್ಗದಿದ್ದರೆ, ಚಿಲಿ, ಹೈಟಿ, ಪನಾಮಾ ಇತ್ಯಾದಿ ದೇಶಗಳಲ್ಲಿ ಈ ಹಿಂದೆ ನಡೆಸಿದ ರಾಜಕೀಯ ಕೊಲೆಗಳನ್ನು ನೆನಪಿಸಲಾಗುತ್ತದೆ... ಹೀಗೆ, ಈ ಎರಡೂ ಸಂದರ್ಭಗಳಲ್ಲಿ ಆ ದೇಶ ಅಮೆರಿಕಾದ ಬಾಲಂಗೋಚಿ ದೇಶವಾಗುವುದು ಅನಿವಾರ್ಯ ವಾಗುತ್ತದೆ!

ಇದೇ ಸಮಾವೇಶದಲ್ಲಿ ಭಾಗವಹಿಸಿದ್ದ 'ಇನ್ನೊಂದು ಜಗತ್ತು ಸಾಧ್ಯ' ವೆಂಬ ಪರಿಕಲ್ಪನೆಗೆ ಸ್ಫೂರ್ತಿ ನೀಡಿದ ಮತ್ತು ನವೋದಿತ ಸಮಾಜವಾದದ ಜಾಗತಿಕ ಪ್ರತಿನಿಧಿಯಂತಿರುವ ವೆನಿಜೂಲದ ಅಧ್ಯಕ್ಷ ಹ್ಯೂಗೊ ಶಾವೆಜ್, ಅಮೇರಿಕಾ ಹೇಳುತ್ತಿರುವ ಬರೀ ಲಾಭಾಧಾರಿತವಾದ ವ್ಯಾಪಾರ ಒಪ್ಪಂದಗಳನ್ನಾಧರಿಸಿದ ಜಾಗತೀಕರಣದ ಬದಲಾಗಿ, ಸಾಮಾಜಿಕ – ಸಾಂಸ್ಕೃತಿಕ ವಿನಿಮಯ ಒಪ್ಪಂದಗಳನಾಧರಿಸಿದ ಜಾಗತೀಕರಣದ ಪ್ರತಿಪಾದನೆ ಮಾಡಿದರು. ಹತ್ತು ವರ್ಷಗಳ ಸುಸ್ಥಿರ ಬಂಡವಾಳವಾದಿ ಅಭಿವೃದ್ಧಿಯ ನಂತರ ಸಂಪತ್ತು ಬಡವರ ಕಡೆಗೂ ಹರಿಯತೊಡಗುತ್ತದೆ (Tricle down theory)ಎಂಬ ಜಾಗತೀಕರಣ ವಾದಿಗಳ ಭವಿಷ್ಯವಾದವನ್ನು ನಂಬಬಾರದೆಂದು ಹೇಳಿದ ಅವರು; ಸಮಾನತೆ ಮನುಷ್ಯನ ಸಹಜ ಹಕ್ಕಾಗಿದ್ದು, ಅದಕ್ಕಾಗಿ ಬಡವರು ಹತ್ತಾರು ವರ್ಷಗಳ ಕಾಲ ಕಾಯುತ್ತಾ ಕೂರುವ ಮೂರ್ಖತನ ತೋರಬಾರದೆಂದು ಕರೆಕೊಟ್ಟರು.

ಇದು ಭಾರತೀಯ ಸಮಾಜವಾದದ ಪ್ರತಿಧ್ವನಿಯೇ ಆಗಿದೆ. ಸಮಾನತೆಯನ್ನು ಸಾಮಾಜಿಕ ಸಮತೋಲನ ಹಾಗೂ ನೆಮ್ಮದಿಯ ಮೂಲ ಸೂತ್ರವನ್ನಾಗಿ ಕಂಡಿದ್ದ ಲೋಹಿಯಾ, ಅದನ್ನು ಜಾಗತಿಕವಾಗಿ ಸಾಧಿಸಿದಾಗ ಮಾತ್ರ ಅದು ಸುಸ್ಥಿರವಾಗಿರಬಲ್ಲುದು ಎಂದು ನಂಬಿದ್ದರು. ಅದಕ್ಕಾಗಿ ಒಬ್ಬರಲ್ಲ ಒಬ್ಬರ ಶೋಷಣೆಯನ್ನಾಧರಿಸಿದ ಮತ್ತು ಸದಾ ಏರುತ್ತಾ ಹೋಗುವ ಆಸ್ಫೋಟನಕಾರಿ ಜೀವನ ಶೈಲಿಗೆ ಕಾರಣವಾಗಿರುವ ಬೃಹತ್ ಪ್ರಮಾಣದ ತಂತ್ರಜ್ಞಾನದ ಬದಲಿಗೆ, ಯಾವುದೇ ಹೊರಗಿನ ಬಂಡವಾಳ ಬೇಡದಂತಹ ಸ್ಥಳೀಯ ಎಲ್ಲೆಗಳುಳ್ಳ ಉತ್ಪಾದನಾ ತಂತ್ರಜ್ಞಾನವನ್ನಾಧರಿಸಿದ ಒಂದು ಸಭ್ಯ–ಸಾಧಾರಣ ಜೀವನಕ್ರಮವನ್ನು ಜಗತ್ತು ಒಪ್ಪಿಕೊಳ್ಳುವ ವಿವೇಕವನ್ನು ಜನತೆಯಲ್ಲಿ ಜಾಗತಿಕ ಮಟ್ಟದಲ್ಲಿ ರೂಢಿಸುವುದು ಅವರು ಪ್ರತಿಪಾದಿಸಿದ ಸಮಾಜವಾದದ ಮೂಲ ಆಶಯವಾಗಿತ್ತು. ಅದಕ್ಕಾಗಿ ಅವರು ಅನೇಕ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ನೆಲೆಗಳ ಕಾರ್ಯಕ್ರಮಗಳನ್ನು ರೂಪಿಸಿ ಜನತೆಯ ಮುಂದಿಟ್ಟಿದ್ದರು. ಆದರೆ ಪಶ್ಚಿಮದ ಆಧುನಿಕತೆಯ ಹುಚ್ಚಿನಲ್ಲಿದ್ದ ಅವರ ದೇಶವೇ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಅದು ಅವರಿಗೂ ಗೊತ್ತಿತ್ತು. ಅವರು ಹೇಳಿದ್ದರು : "ನಾನು ಕಾಲದೊಂದಿಗೆ ಹೆಜ್ಜೆ ಹಾಕುವಾಗ

ಒಂದೆರಡು ಹೆಜ್ಜೆ ಮುಂದು ಹೋಗಿಬಿಟ್ಟಿರುವೆನೇನೋ.... ಆದರೆ ಒಂದಲ್ಲ ಒಂದು ದಿನ ದೇಶ ನನ್ನ ಮಾತನ್ನು ಕೇಳಲೇ ಬೇಕಾಗುತ್ತದೆ....."

ಲೋಹಿಯಾ ಅವರ ಈ ಮಾತು, ಅವರು ನಿಧನರಾದ ನಲವತ್ತು ವರ್ಷಗಳ ನಂತರದಲ್ಲೂ ಪ್ರತಿ ವರ್ಷ ಮಾರ್ಚ್ ೨೩ರಂದು ಅವರ ಹುಟ್ಟು ಹಬ್ಬ ಆಚರಿಸುವ ಅವರ ಪ್ರತಿಯೊಬ್ಬ ಅನುಯಾಯಿಯ ಕಿವಿಗಳಲ್ಲಿಯೂ ಅನುರುಣಿಸದಿರದು.

(ವಿಕ್ರಾಂತ ಕರ್ನಾಟಕ, ಮಾರ್ಚ್ ೨೩–೨೭, ೨೦೦೭)

ದಾರಿ ತಪ್ಪಿದ ಸಮಾಜವಾದಿಗಳು

ಕಳೆದ ವಾರ ನಮ್ಮ ಮನೆಗೆ ಅಂಚೆಯಲ್ಲಿ ನನ್ನ ಹೆಂಡತಿಯ ಹೆಸರಿಗೆ ಗದಗ್‌ನಿಂದ ಒಂದು ಕರಪತ್ರ ಬಂತು. ಅಕಾಲಿಕ ಮರಣಕ್ಕೆ ತುತ್ತಾದ ಭರವಸೆಯ ಕವಯಿತ್ರಿ ವಿಭಾರ ನೆಪದಲ್ಲಿ ಕೆಲವು ತಿಂಗಳುಗಳ ಹಿಂದೆ ಗದಗ್‌ನಲ್ಲಿ ಸಾಹಿತ್ಯ ಕಾರ್ಯಕ್ರಮವೊಂದನ್ನು ಆಯೋಜಿಸಿದ್ದ ಗೆಳೆಯರ ಗುಂಪಿನ ಕಡೆಯಿಂದ ಬಂದ ಕರಪತ್ರವದು. ನನ್ನ ಹೆಂಡತಿಯೂ ಓರ್ವ ಕವಯಿತ್ರಿಯಾಗಿ ಆಹ್ವಾನಿತಳಾಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದುದರಿಂದ, ಆ ನೆನಪಿನಲ್ಲಿ ಈ ಕರಪತ್ರವನ್ನು ಆಯೋಜಕರು ನಮಗೆ ಕಳಿಸಿರಬಹುದೆಂದು ನಾನು ಆ ಬಗ್ಗೆ ಹೆಚ್ಚಿನ ಆಸಕ್ತಿಯನ್ನೇನೂ ತಾಳಲಿಲ್ಲ. ಆದರೆ, ಅದು ಪ್ರಸ್ತಾಪಿಸಿದ್ದ ಇದೇ ಮಾರ್ಚ್ ೨೩ ರಂದು ಗೋಕಾಕದಲ್ಲಿ ರಾಜ್ಯ ಮಟ್ಟದ ಭಗತ್‌ಸಿಂಗ್-ಲೋಹಿಯಾ ಚಿಂತನೆಗಳ ಸಮಾವೇಶದ ಆಯೋಜನೆ ಮತ್ತು ಅದರ ಬಹು-ಆಯೋಜಕತ್ವ ನನ್ನ ಕುತೂಹಲ ಕೆರಳಿಸಿತು. ಸಮಾವೇಶವನ್ನು ಆಯೋಜಿಸಲಿದ್ದುದು ನಾನು ಈವರೆಗೆ ಹೆಸರೇ ಕೇಳಿರದ ಸಂಘಟನೆಗಳು - ಕರ್ನಾಟಕ ಸೌಹಾರ್ದ ವೇದಿಕೆ, ಭೂಮಿ ಬೇಕು-ರೈತ ಆಂದೋಲನ ಸಮಿತಿ ಹಾಗೂ ಸವಾಜವಾದಿ ಚಿಂತನ ವೇದಿಕೆ, ಗೋಕಾಕ. ಭಗತ್‌ಸಿಂಗ್‌ರಿಗೂ ಲೋಹಿಯಾ ಚಿಂತನೆಗಳಿಗೂ ಏನು ಸಂಬಂಧವಿದ್ದೀತು ಎಂದು ಆಶ್ಚರ್ಯ ಪಟ್ಟೆನಾದರೂ, ಮಾರ್ಚ್ ೨೩ ಲೋಹಿಯಾರ ಹುಟ್ಟುಹಬ್ಬ ಹೇಗೋ ಭಗತ್‌ಸಿಂಗರು ಹುತಾತ್ಮರಾದ ದಿನವೂ ಆದುದರಿಂದ ಕೆಲ ಸಮಾನ ಮನಸ್ಕರು ಸೇರಿ ಇಬ್ಬರ ನೆನಪನ್ನೂ ಒಟ್ಟಿಗೆ ಆಚರಿಸುವ ಉದ್ದೇಶದ ಸಮಾರಂಭ ಅದಿರಬಹುದೆಂದು ಆ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ.

ಆದರೆ, ಮೂರು ದಿನಗಳ ಕೆಳಗೆ ಸಮಾರಂಭದ ಅಧಿಕೃತ ಆಹ್ವಾನ ಪತ್ರಿಕೆ ಬಂದಾಗ ಅದರ ವಿವರ-ವೈಖರಿಗಳನ್ನು ನೋಡಿ ಗಾಬರಿಯಾದೆ. ಅದರಲ್ಲಿ ಲೋಹಿಯಾರ ಒಂದು ಸಣ್ಣ ಭಾವಚಿತ್ರವನ್ನು ಹೊರತುಪಡಿಸಿದರೆ, ಕೆಂಪುಬಣ್ಣ ಪ್ರಧಾನವಾದ ಆ ಆಹ್ವಾನಪತ್ರಿಕೆಯಲ್ಲಿ ಇರುವುದೆಲ್ಲ ಭಗತ್‌ಸಿಂಗರನ್ನು ಮೆರಸುವ ವಿವಿಧ ಚಿತ್ರಗಳು ಹಾಗೂ ಘೋಷಣೆ-ಉಲ್ಲೇಖಗಳು! ಇದೇನಿದೆಂದು, ಈ ಹಿಂದೆ ಬಂದಿದ್ದ ಕರಪತ್ರವನ್ನು ವಿವರವಾಗಿ ಗಮನಿಸಿದಾಗ ಕಂಡದ್ದು, ಇಡೀ ಕರಪತ್ರದಲ್ಲಿ ಶೀರ್ಷಿಕೆಯ ಲೋಹಿಯಾ ಎಂಬ ಮೂರಕ್ಷರಗಳನ್ನು ಹೊರತು ಪಡಿಸಿದರೆ, ಇನ್ನೆಲ್ಲೂ ಸಮಾಜವಾದಿ ಚಳುವಳಿಯ ಅಥವಾ ಲೋಹಿಯಾ ವಿಚಾರಗಳ ಉಲ್ಲೇಖವಿಲ್ಲ. ಬದಲಿಗೆ, ಇಡೀ ಕರಪತ್ರ ಭಗತ್‌ಸಿಂಗ್‌ರ ಆರಾಧನೆಗೆ ಮೀಸಲು, ಅಷ್ಟೇ ಅಲ್ಲ, ಕರಪತ್ರದ ಬಲ ಮೇಲ್ತುದಿಯಲ್ಲಿ ಸುತ್ತಿಗೆ ಕುಡುಗೋಲುಗಳನ್ನು ಹಿಡಿದ ಪುರುಷ-ಮಹಿಳೆಯ ಆ ಅದೇ ಹಳೆಯ ಕಮ್ಯುನಿಸ್ಟ್ ಲಾಂಛನ!

ಆಗ ಥಟ್ಟನೆ ನನಗೆ ನೆನಪಾದದ್ದು, ಹೋದ ವರ್ಷ ಶಿವಮೊಗ್ಗದಲ್ಲಿ ಭಗತ್‌ಸಿಂಗರ ಹುಟ್ಟುಹಬ್ಬ ಆಚರಿಸಲು ತರಾತುರಿಯಿಂದ ಓಡಾಡಿದ ಜನ. ಅವರೆಲ್ಲ ಈಗ ಮಲೆನಾಡಿನಲ್ಲಿ ಭೂಗತ ಕಮ್ಯುನಿಸ್ಟ್ ರಾಜಕಾರಣ ಮಾಡುತ್ತಿರುವ ಗುಂಪಿನೊಂದಿಗೆ ಗುರುತಿಸಿಕೊಂಡಿರುವ ಜನ. ಹೌದು, ಈಗ ಭಗತ್‌ಸಿಂಗ್ ನಕ್ಸಲೀಯ ಚಳುವಳಿಕಾರರ ಒಂದು ಗುಂಪಿನ ಜನಸಂಪರ್ಕ ಲಾಂಛನವಾಗಿದ್ದಾನೆ. ಅವರ ಈ ಜನ ಸಂಪರ್ಕ ಕಾರ್ಯಕ್ರಮದ ಅಂಗವಾಗಿಯೇ ಈ ಗೋಕಾಕದ ಸಮಾವೇಶ. ಇದಕ್ಕೆ ಅಮಾಯಕವಾಗಿ ಜನರನ್ನು ಸೆಳೆಯಲು ಲೋಹಿಯಾ ಹೆಸರಿನ ಬಳಕೆ ಎಂಬುದು ಯಾರಿಗಾದರೂ ಹೊಳೆಯದಿರದು. ಹಾಗೆ ನೋಡಿದರೆ, ಭಗತ್‌ಸಿಂಗ್ ಈವರೆಗೆ ಬಲದಿಂದ ಹಿಡಿದು ಎಡದವರೆಗೆ ಹಲವು ಛಾಯೆಗಳ ರಾಜಕೀಯ ಗುಂಪುಗಳ ಪ್ರಚಾರ ಪ್ರತೀಕ(ICON)ವಾಗಿ ಬಳಸಲ್ಪಟ್ಟು ಸವೆದು ಹೋದ ಮೂರ್ತಿಯಾಗಿದ್ದರೂ, ಆತ ಜನರ ಅಂತರಾಳದಲ್ಲಿ ಇನ್ನೂ ಕಟ್ಟಾ ದೇಶಪ್ರೇಮದ ಸ್ಥೂಲ ಸಂಕೇತವಾಗಿ ಎಲ್ಲೋ ನೆಲಸಿದ್ದಾನೆ. ಲೋಹಿಯಾ ಕೂಡ ಈ ಸಹ ಸ್ವಾತಂತ್ರ್ಯ ಹೋರಾಟಗಾರನ ನೆನಪಿಗೆ ಗೌರವ ಸಲ್ಲಿಸುವ ಸಂಕೇತವಾಗಿ, ಎಂದೂ ಮಾರ್ಚ್ ೨೩ರಂದು ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರಲಿಲ್ಲ. ಲೋಹಿಯಾ–ಭಗತ್‌ಸಿಂಗ್‌ರ ಸಂಬಂಧ–ಸಾಮ್ಯತೆ ಇಷ್ಟಕ್ಕೇ ನಿಲ್ಲುವಂಥದ್ದು. ಏಕೆಂದರೆ, ಲೋಹಿಯಾ ಪ್ರತಿನಿಧಿಸುವುದು ಜನಸಮ್ಮುಖ ಸತ್ಯಾಗ್ರಹಿ ರಾಜಕಾರಣವಾದರೆ, ಭಗತ್‌ಸಿಂಗ್ ಪ್ರತಿನಿಧಿಸುವುದು ಭೂಗತ ಹಿಂಸಾತ್ಮಕ ರಾಜಕಾರಣ. ಹೀಗಾಗಿ ಇವರಿಬ್ಬರ ವಿಚಾರ–ಹೋರಾಟಗಳ ದಿಕ್ಕುಗಳೇ ಬೇರೆ ಬೇರೆ.

ಭಗತ್‌ಸಿಂಗ್ ಕೆಲವೇ ವರ್ಷಗಳ ಹಿಂದಿನವರೆಗೂ ಸಂಘ ಪರಿವಾರದವರ ಪ್ರಚಾರ ಪ್ರತೀಕವೂ ಆಗಿದ್ದ ಎಂಬುದನ್ನು ನೆನಪಿಸಿಕೊಂಸರೆ, ಆತ ಹೇಗೆ ಚರಿತ್ರೆ ಮೀರಿದ ದಂತಕಥೆಯಾಗಿದ್ದಾನೆ ಎಂಬುದು ಗೊತ್ತಾಗುತ್ತದೆ. ಆತ ಕಮ್ಯುನಿಸ್ಟ್ ಸಾಹಿತ್ಯವನ್ನೂ ಓದಿಕೊಂಡು ಮಲಿನಗೊಂಡಿದ್ದ ಎಂದು ಭಾವಿಸಿಯೋ ಏನೋ, ಸಂಘ ಪರಿವಾರದವರು ಆತನನ್ನು ಕ್ರಮೇಣ ಕೈಬಿಟ್ಟರೆಂದು ತೋರುತ್ತದೆ. ಹಾಗೆ ಕೈಬಿಟ್ಟ ಭಗತ್‌ಸಿಂಗ್‌ರನ್ನು ಈಗ ಭೂಗತ ಕಮ್ಯುನಿಸ್ಟರು ಕೈಹಿಡಿಯ ಹೊರಟಿದ್ದಾರೆ!

ಸಂಘ ಪರಿವಾರವು ತನ್ನ ಮುಂದಿನ ರಾಜಕಾರಣದ ಯಶಸ್ಸಿಗಾಗಿ ಕುವೆಂಪು, ಕನಕದಾಸರಿಂದ ಹಿಡಿದು ಅಂಬೇಡ್ಕರ್‌ವರೆಗೆ ಪ್ರಚಾರ ಪ್ರತೀಕಗಳನ್ನು ಹುಡುಕಿಕೊಂಡು ಹೊರಟಿರುವಂತೆ, ಈ ಭೂಗತ ರಾಜಕಾರಣದ ಕಮ್ಯುನಿಸ್ಟರೂ ಭೂಮಿಯ ಮೇಲೆ ಬರಲು ಸೂಕ್ತ ಪ್ರಚಾರ ಪ್ರತೀಕಗಳನ್ನು ಹುಡುಕುತ್ತಾ ಹೊರಟು ಈಗ ಭಗತ್‌ಸಿಂಗ್‌ರಿಗೆ ಗಂಟು ಬಿದ್ದಿದ್ದಾರೆ! ಇದು ಭಾರತೀಯ ಸಮಾಜವನ್ನು ತಮ್ಮ ಸರಳೀಕೃತ ಚಿಂತನೆ–ಹೋರಾಟಗಳ ಮೂಲಕ ಒಡೆಯುತ್ತ ಒಡೆಯುತ್ತ ನಾಶ ಮಾಡುತ್ತಿರುವ ವಿನಾಶಕಾರಿ ರಾಜಕಾರಣದ ನಮ್ಮ ಕಣ್ಮುಂದಿನ ಈ ಎರಡೂ ಆವೃತ್ತಿಗಳು ಎದುರಿಸುತ್ತಿರುವ ತತ್ವ ದಾರಿದ್ರಕ್ಕೆ ಸಾಕ್ಷಿಯಾಗಿದೆ.

ಭಗತ್‌ಸಿಂಗ್ ತನ್ನ ಕಾಲದ ಎಲ್ಲ ಯುವಕರಂತೆ ಮಾರ್ಕ್ಸ್‌ವಾದಿ ಬರಹಗಳೆಡೆಗೂ ಆಕರ್ಷಿತನಾಗಿದ್ದ ಎಂಬುದರ ಹೊರತಾಗಿ ಆತ ಮಾರ್ಕ್ಸ್‌ವಾದಿ ಹೋರಾಟಗಾರ ಎನ್ನಲು ಬೇರೆನೂ ಪುರಾವೆ ನಮಗೆ ಸಿಗುವುದಿಲ್ಲ. ಅಲ್ಲದೆ, ೨೩ ವರ್ಷಗಳ ಆತನ ಅಲ್ಪ

ಜೀವನಾವಧಿಯಲ್ಲಿ ಆತನಿಗೊಂದು ಖಚಿತ ರಾಜಕೀಯ ನಿಲುವು ಸಾಧ್ಯವಾಗಿತ್ತೆ ಎಂಬುದರ ಬಗ್ಗೆ ಸಹಜವಾವಾಗಿಯೇ ಸಂದೇಹಗಳಿವೆ. ಹಾಗಾಗಿಯೇ ಆತ ಐತಿಹಾಸಿಕ ವ್ಯಕ್ತಿಗಿಂತ ಹೆಚ್ಚಾಗಿ ಒಂದು ದಂತಕಥೆಯಾಗಿಯೇ ನಮ್ಮ ರಾಷ್ಟ್ರೀಯ ಸ್ಮೃತಿಯಲ್ಲಿ ಉಳಿದಿದ್ದಾನೆ. ಆದರೆ, ಇತಿಹಾಸದ ಭೌತವಾದಿ ನಿರೂಪಣೆಯನ್ನು ನಂಬಿರುವ ಈ ಕಮ್ಯುನಿಸ್ಟ್‌ರು ಈಗ ಇತಿಹಾಸವನ್ನು ಮೀರಿ ನಿಂತ ದಂತಕಥೆಯೊಂದನ್ನು ಹೀಗೆ ನಗದು ಮಾಡಿಕೊಳ್ಳಲು ಹೊರಟಿರುವುದು ಎಂತಹ ಚೋದ್ಯವಾಗಿದೆ!

ಇದನ್ನೆಲ್ಲ ನಾನು ಹೇಳುತ್ತಿರುವುದು, ನಕ್ಸಲೀಯ ಚಳುವಳಿಯ ತಂತ್ರಗಾರಿಕೆಯ ಪರಿಚಯ ಮಾಡಿ ಕೊಡುವುದಕ್ಕಲ್ಲ. ಅದನ್ನು ಎಲ್ಲರೂ ಬಲ್ಲರು. ಬದಲಿಗೆ, ಲೋಹಿಯಾ-ವಾದಿ ಅಥವಾ ಅಭಿಮಾನಿಗಳೆಸಿಕೊಂಡವರು. ಇದಕ್ಕೆಲ್ಲ ಅವಕಾಶ ಮಾಡಿಕೊಡುವ ದೈನೇಸಿ ಪರಿಸ್ಥಿತಿಯನ್ನು ಮುಟ್ಟಿರುವುದೇತಕ್ಕೆ ಎಂದು ಚಿಂತಿಸಲು. ಇದಕ್ಕಾಗಿ ನಾನು ಈ ಸಮಾವೇಶದ ಆಯೋಜಕರಲ್ಲಿ ಲೋಹಿಯಾವಾದಿ ಇರಬಹುದೆಂದು ಭಾವಿಸಿದ ಧಾರವಾಡದ ಕವಿಮಿತ್ರರೊಬ್ಬರನ್ನು ಸಂಪರ್ಕಿಸಿ, ಹೀಗೇಕಾಗಿದೆ ಎಂದು ಕೇಳಿದೆ. ಅವರು ನನ್ನ ಪ್ರಶ್ನೆಯಿಂದ ಗಲಿಬಿಲಿಗೊಂಡಂತೆ, ಇದೆಲ್ಲಾ ಹೀಗಾಗುತ್ತದೆಂದು ತಮಗೂ ಗೊತ್ತಿರಲಿಲ್ಲವೆಂದೂ; ಹೆಚ್ಚಿನ ವಿವರಗಳು ಬೇಕಾದರೆ, ಗದಗ್‌ನ ಮೂಲಕ ಆಯೋಜಕರೊಂದಿಗೆ ನನಗೆ ಸಂಪರ್ಕ ಮಾಡಿಸಿಕೊಡುವುದಾಗಿಯೂ ಹೇಳಿದಾಗ, ಇದು hopeless case ಎಂದು ಸುಮ್ಮನಾದೆ.

ಏಕೆಂದರೆ, ಇಂತಹ hopeless ಪರಿಸ್ಥಿತಿ ಮುಂದೊಂದು ದಿನ ಸಮಾಜವಾದಕ್ಕೆ ಎದುರಾಗುವ ಅಪಾಯವನ್ನು ಲೋಹಿಯಾ ಮುನ್ನೋಡಿದ್ದರು. ಭಾರತೀಯ ಸಮಾಜವಾದವು ಬಂಡವಾಳವಾದ ಹಾಗೂ ಮಾರ್ಕ್ಸ್‌ವಾದಗಳ ಮಧ್ಯೆ ತನ್ನ ವಿಶಿಷ್ಟ ಸತ್ವ ಹಾಗೂ ಚಹರೆಯನ್ನು ಸಾಧಿಸಿಕೊಳ್ಳದೇ ಹೋದರೆ, ಮುಂದೊಂದು ದಿನ ಸಮಾಜವಾದಿ ಚಳವಳಿ ಅವೆರಡರ ಮಧ್ಯೆ ಹರಿದು ಹಂಚಿಹೋಗುವ ಅಪಾಯವಿದೆಯೆಂದು ಅವರು ಹಲವಾರು ಸಮಾಜವಾದಿ ಸಮಾವೇಶಗಳಲ್ಲಿ ಎಚ್ಚರಿಸಿದ್ದರು. ಲೋಹಿಯಾ ನಿಧನಾನಂತರ ಬಹಳಷ್ಟು ಸಮಾಜವಾದಿಗಳು ಒಂದಲ್ಲ ಒಂದು ನೆಪದ ಮೇಲೆ ಬೇರೆ ಬೇರೆಯಾಗಿ ಪಕ್ಷಗಳ ಜಗುಲಿಗಳ ಮೇಲೆ ಮಲಗಲಾರಂಭಿಸಿ, ಕೊನೆಗೆ ಸಮಾಜವಾದಿ ಪಕ್ಷವೆಂಬುದೇ ೧೯೭೭ರ ಜನತಾ ಪಕ್ಷದಲ್ಲಿ ಲೀನವಾಗುವುದರೊಂದಿಗೆ ಇಲ್ಲವಾದದ್ದು ಹಾಗೂ ಆ ಪಕ್ಷವೂ ಛಿದ್ರ-ವಿಚ್ಛಿದ್ರವಾದ ಮೇಲೆ ಸಮಾಜವಾದಿಗಳೆನಿಸಿಕೊಂಡವರು ಸೇರದೇ ಇದ್ದ ಪಕ್ಷವೇ ಇಲ್ಲದಂತಾದುದು, ಲೋಹಿಯಾ ಎದುರು ನೋಡಿದ್ದ ಆ ಆಪಾಯವನ್ನು ಅವರ ನಂತರ ಯಾರೂ ಗಂಭೀರವಾಗಿ ಪರಿಗಣಿಸದ ಕಾರಣದಿಂದಾಗಿಯೇ ಎಂದು ಹೇಳಬಹುದು.

ಭಾರತದಲ್ಲಿ ಸಮಾಜವಾದಿ ಚಳುವಳಿ ಹುಟ್ಟಿದ್ದು ಆಚಾರ್ಯ ನರೇಂದ್ರ ದೇವ, ಡಾ. ಸಂಪೂರ್ಣಾನಂದ, ಜಯಪ್ರಕಾಶ್ ನಾರಾಯಣ, ಮಿನೂ ಮಸಾನಿ, ಅಶೋಕ ಮೆಹ್ತಾ ಮುಂತಾದ ಮೂಲತಃ ಮಾರ್ಕ್ಸ್‌ವಾದಿಗಳಾಗಿದ್ದವರಿಂದಲೇ ಎಂಬುದು ನಿಜವಾದರೂ ಅವರ್‍ಯಾರೂ ಭಾರತದಲ್ಲಿ ಮಾರ್ಕ್ಸ್‌ವಾದದ ಅಧಿಕೃತ ವಾರಸುದಾರನಂತಿದ್ದ ಭಾರತದ ಕಮ್ಯೂನಿಸ್ಟ್ ಪಕ್ಷ ಸೇರದೆ ಸ್ವಾತಂತ್ರ್ಯ ಚಳುವಳಿಯ ನಾಯಕತ್ವ ವಹಿಸಿದ್ದ

ಕಾಂಗ್ರೆಸ್ ಪಕ್ಷದ ಚೌಕಟ್ಟಿನಲ್ಲೇ ತಮ್ಮದೇ ಸಮಾಜವಾದಿ ಪಕ್ಷವೊಂದನ್ನು ಸ್ಥಾಪಿಸಿಕೊಂಡು; ಕ್ರಮೇಣ ಗಾಂಧಿವಾದದ ಪ್ರಭಾವದಲ್ಲಿ, ಮಾರ್ಕ್ಸ್‌ವಾದವನ್ನು ಮೀರಿ ಬೆಳೆದ ಒಂದು ತತ್ವವಾಗಿ ಭಾರತೀಯ ಸಮಾಜವಾದವನ್ನು ನಿರೂಪಿಸಲು ಯತ್ನಿಸಿದವರು ಎಂಬುದನ್ನು ನಾವು ಮರೆಯಬಾರದು. ಆದರೆ ಈ ಸಮಾಜವಾದದ ಅಭಿವ್ಯಕ್ತಿ, ಸ್ವಾತಂತ್ರ್ಯಾನಂತರವೂ ಪ್ರತಿರೋಧ ರಾಜಕಾರಣದ ರೂಪದಲ್ಲೇ ಪ್ರಕಟವಾಗಬೇಕಾದ ರಾಜಕೀಯ ಅನಿವಾರ್ಯತೆಗೆ ಸಿಕ್ಕಿದ್ದರಿಂದಾಗಿ, ಅದರ ರಚನಾತ್ಮಕತೆ ಕ್ರಿಯಾಶೀಲವಾಗಿ ಪ್ರಕಟವಾದದ್ದು ಬಹು ಕಡಿಮೆ ಎಂದೇ ಹೇಳಬೇಕು. ಮೊದಲ ಮಹಾ ಚುನಾವಣೆಯಲ್ಲಿ ಅನಿರೀಕ್ಷಿತ ಭಾರಿ ಸೋಲನ್ನು ಅನುಭವಿಸಿದ್ದಲ್ಲದೆ, ಕಾಂಗ್ರೆಸ್ ನಂತರದ ಸ್ಥಾನವನ್ನೂ ಕಮ್ಯುನಿಸ್ಟರಿಗೆ ಬಿಟ್ಟುಕೊಟ್ಟ ದಿಗ್ಭ್ರಮೆಯಲ್ಲಿದ್ದ ಸಮಾಜವಾದಿಗಳನ್ನು ಉದ್ದೇಶಿಸಿ ಮಾಡಿದ ಸಮಾಜವಾದದ ತಾತ್ವಿಕ ಅಡಿಗಲ್ಲು (Doctrianal Foundation of Indian Socialism - 1952) ಎಂಬ ತಮ್ಮ ಸುಪ್ರಸಿದ್ಧ ಭಾಷಣದ ಮೂಲಕ ಲೋಹಿಯಾ ತನ್ನ ಸಹಚರರನ್ನು ವರ್ಗ ಹೋರಾಟದ ಮಾರ್ಕ್ಸ್‌ವಾದಿ ಚಿಂತನೆಯ ಎರಕದಿಂದ ಬಿಡುಗಡೆಗೊಳಿಸಿದರು. ಆಗ ಆಳುವ ಚಿಂತನೆಗಳಾಗಿ ಪ್ರಚಲಿತವಿದ್ದ ಬಂಡವಾಳವಾದ ಹಾಗು ಮಾರ್ಕ್ಸ್‌ವಾದಗಳೆರಡಕ್ಕೂ ಸಂವಾದಿಯಾದ, ಮಿತಿಗಳುಳ್ಳ ಬದುಕಿನ ಹೊಸ ವಿಶ್ವ ನಾಗರಿಕತೆಯ ಆಶಯ ರೂಪದಲ್ಲಿ ಭಾರತೀಯ ಸಮಾಜವಾದದವನ್ನು ಪ್ರಸ್ತುತಪಡಿಸಿದ್ದ ಅವರು; ಈ ಹೊಸ ಸಮಾಜವಾದ ವನ್ನು ಗುದ್ದಲಿ, ಸೆರಮನೆ ಹಾಗೂ ಓಟು ಎಂಬ ಮೂರು ಕಾರ್ಯಶೀಲ ಆಧಾರಗಳ ಮೇಲೆ ಕಟ್ಟಬೇಕಾಗಿದೆ ಎಂದು ಸೂಚಿಸಿದ್ದರು. ಲೋಹಿಯಾ ಪ್ರಕಾರ, ಗುದ್ದಲಿ ರಚನಾತ್ಮಕ ಕೆಲಸಗಳಿಗೆ, ಸೆರಮನೆ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಪ್ರತಿಭಟನೆಗೆ, ಓಟು ಸಂಸದೀಯ ರಾಜಕಾರಣದಲ್ಲಿ ಪಾಲ್ಗೊಳ್ಳುವುದಕ್ಕೆ ಸಂಕೇತಗಳಾಗಿದ್ದವು.

ಆದರೆ, ಸ್ವಾತಂತ್ರ್ಯೋತ್ತರ ಭಾರತದ ವಾಸ್ತವ ರಾಜಕಾರಣದೆದುರು ಸಮಾಜವಾದಿ ಕನಸು–ಆಶಯಗಳೆಲ್ಲ ಕೇಂದ್ರ ಕಳೆದುಕೊಳ್ಳುತ್ತ ಸಂಘಟನೆ ಸಡಿಲವಾಗುತ್ತಾ ಹೋದಂತೆ, ಗುದ್ದಲಿ ಹಿಡಿದುಕೊಂಡು ಜೆ.ಪಿ. ಗುಂಪು ಸರ್ವೋದಯದ ಕಡೆ ನಡೆದರೆ, ಅಶೋಕ ಮೆಹ್ತಾ ಗುಂಪು ರಾಷ್ಟ್ರಹಿತ ದೃಷ್ಟಿಯ ನೆಪದಲ್ಲಿ ಸಮನ್ವಯ ರಾಜಕಾರಣವನ್ನು ಪ್ರತಿಪಾದಿಸುತ್ತಾ ಓಟಿನ ಹಿಂದೆ ಬಿದ್ದು ಕಾಂಗ್ರೆಸ್ಸಿನೆಡೆಗೆ ಹೋಯಿತು. ಇದೆಲ್ಲವನ್ನೂ ಕ್ರುದ್ಧರಾಗಿ ನೋಡಬೇಕಾಗಿ ಬಂದ ಲೋಹಿಯಾ, ಪ್ರತಿಭಟನೆಯ ರಾಜಕಾರಣವನ್ನು ತೀವ್ರಗೊಳಿಸುವ ಒತ್ತಡಕ್ಕೆ ಸಿಕ್ಕಿ ಪದೇ ಪದೇ ಸೆರೆಮನೆಯ ಕಡೆ ಹೋಗಬೇಕಾಯಿತು. ಹೀಗೆ ಕ್ರಮೇಣ ತನ್ನ ತಾತ್ವಿಕ ದೃಷ್ಟಿ ಕೇಂದ್ರವನ್ನೇ ಕಳೆದುಕೊಳ್ಳುತ್ತಾ ಹೋದ ಸಮಾಜವಾದಿ ಚಳುವಳಿ, ಪ್ರತಿರೋಧ ರಾಜಕಾರಣಕ್ಕೇ ತನ್ನನ್ನು ಮೀಸಲಾಗಿರಿಸಿಕೊಳ್ಳುವ ರಾಜಕೀಯ ಅನಿವಾರ್ಯತೆಗೆ ಸಿಕ್ಕಿತು. ಇದರಿಂದ ಹೊರಬರಲೆಂದೇ, ೧೯೬೭ರ ಚುನಾವಣೆಗಳ ಸಂದರ್ಭದಲ್ಲಿ ಲೋಹಿಯಾ 'ಕಾಂಗ್ರೆಸ್ಸೇತರವಾದ'ವನ್ನು ರೂಪಿಸಿ ತಕ್ಕ ಮಟ್ಟಿಗೆ ಯಶಸ್ವಿಯಾದರಾದರೂ, ಅವರ ಅಕಾಲಿಕ ಮರಣದಿಂದಾಗಿ ಆ ಯಶಸ್ಸೇ ಮುಂದಿನ ದಿನಗಳಲ್ಲಿ ಸಮಾಜವಾದದ ತಾತ್ವಿಕ ಛಿದ್ರೀಕರಣಕ್ಕೆ ದಾರಿ ಮಾಡಿಕೊಟ್ಟಿತೆಂಬುದೂ ನಿಜ. ಇದನ್ನೇ ಭಾರತೀಯ ಸಮಾಜವಾದದ ಚರಿತ್ರೆಕಾರ ಹ್ಯಾರಿಸ್ ವೊಫರ್ಡ್, ಭಾರತೀಯ ಸಮಾಜವಾದದ ದುರಂತವೆಂದರೆ, ಅದು ಹಾಕಿಕೊಂಡವರ ತಲೆಯ ಆಕಾರ ಪಡೆಯುವ

ಕಾಂಗ್ರೆಸ್ ಟೊಪ್ಪಿಗೆಯಾದಂತಾದ್ದು ಎಂದು ಹೇಳಿದ್ದು! ಸರ್ವಾಧಿಕಾರಿ ರಾಜಕಾರಣಕ್ಕೆ ಒಂದು ಮಾನ್ಯತೆ ಒದಗಿಸಿಕೊಟ್ಟ ಇಂದಿರಾಗಾಂಧಿಯೂ ಸಮಾಜವಾದಿಯೆಂದೇ ಚರಿತ್ರೆಯಲ್ಲಿ ಪ್ರಸ್ತುತಪಡಿಸಲ್ಪಡುತ್ತಿದ್ದಾರೆ ಎಂದ ಮೇಲೆ, ಭಾರತೀಯ ಸಮಾಜವಾದ ಎಂತಹ ರೋಗಕ್ಕೆ ತುತ್ತಾಯಿತು ಎಂಬುದನ್ನು ನಾವು ಊಹಿಸಿಕೊಳ್ಳಬಹುದಾಗಿದೆ.

ಈ ದುರಂತದ ಹೊಣೆಗಾರಿಕೆಯನ್ನು ಸಮಾಜವಾದಿಗಳಲ್ಲದೆ ಇನ್ಯಾರು ಹೊರಬಲ್ಲರು? ಅಧಿಕಾರ ರಾಜಕಾರಣಕ್ಕೆ ಸಿಕ್ಕಿ ದಾರಿ ತಪ್ಪಿದ ಸಮಾಜವಾದಿಗಳು ಕ್ರಮೇಣ ಸಮಾಜವಾದದ ದಾರಿಯನ್ನೇ ತಪ್ಪಿಸ ಹೊರಟಾಗ, ಈ ಹೊಣೆಗಾರಿಕೆಯ ಶಿಲುಬೆಯನ್ನು ತನ್ನ ಹೆಗಲ ಮೇಲೆ ಹೊತ್ತ ದಿವಂಗತ ಕಿಷನ್ ಪಟ್ನಾಯಕ್‌ರಂತಹ ಚರಿತ್ರವಂತ ಸಮಾಜವಾದಿಗಳು, ಇತ್ತೀಚಿನವರೆಗೆ ಲೋಹಿಯಾ ರೂಪಿಸಿದ್ದ ಸಮಾಜವಾದದ ವಿಶಿಷ್ಟ ಸತ್ವ ಹಾಗೂ ಗುರುತನ್ನು ಉಳಿಸಿಕೊಡಲು ಸರ್ವ ಪ್ರಯತ್ನ ಮಾಡಿದರು. ಸಂಪನ್ಮೂಲಗಳ ಅಪಾರ ಕೊರತೆ ಹಾಗೂ ಸತತ ಅನಾರೋಗ್ಯದ ಮಧ್ಯೆಯೂ ದೇಶಾದ್ಯಂತ ತಿರುಗಾಡಿ, ಸಮಾಜವಾದಿ ಕನಸನ್ನು ಅತ್ಯಂತಿಕವಾಗಿ ಹೊಸಕಿ ಹಾಕಿ ಬಿಡಲು ಸನ್ನದ್ಧವಾಗಿರುವ ಜಾಗರೀಕರಣದ ವಿರುದ್ಧ ಹೋರಾಟವನ್ನು ಸಂಘಟಿಸುತ್ತಿದ್ದ ಅವರು, ಇದು ಸಮಾಜವಾದಿಗಳಿಗೆ ಧ್ಯಾನದ ಕಾಲ ಎನ್ನುತ್ತಿದ್ದರು. ಅದರ ಅರ್ಥ ಸಮಾಜವಾದಿಗಳು ಅನೈಕ್ಯತೆ, ಅಲಸ್ಯ ಮತ್ತು ಅನುಭೋಗದಲ್ಲಿ ತಾವು ಕಳೆದುಕೊಂಡಿರುವ ದೃಷ್ಟಿಕೇಂದ್ರವನ್ನು ಮರಳಿ ಪಡೆಯುವ ಅಗತ್ಯವನ್ನು ಮನಗಾಣಬೇಕೆಂಬುದೇ ಆಗಿತ್ತು. ಇದಕ್ಕೆ ಅತ್ಯಗತ್ಯವಾದದ್ದು, ಬದಲಾದ ಸಂದರ್ಭದಲ್ಲಿ ತಾತ್ವಿಕ ಸ್ಪಷ್ಟತೆಯ ಹಾಗೂ ಬದ್ಧತೆಯ ತರಬೇತಿ ಚಟುವಟಿಕೆಗಳು. ಅದಕ್ಕಾಗಿ ಮೊದಲು ಒಂದು–ಅದು ಎಷ್ಟೇ ಚಿಕ್ಕದಾದರೂ–ಸಂಘಟನೆ. ಕಿಷನ್‌ಜಿಯಂತಹವರ ಸ್ಫೂರ್ತಿ ಮತ್ತು ಮಾರ್ಗದರ್ಶನವಿದ್ದೂ, ಇದಾವುದನ್ನೂ ಮಾಡಲಾಗದ ಕರ್ನಾಟಕದ ಸಮಾಜವಾದಿಗಳು ಸಹಜವಾಗಿಯೇ, ಸಮಾಜವಾದದ ಸರಿಯಾದ ತರಬೇತಿಯಿಲ್ಲದೆ ಸ್ಥೂಲ ನೋಟದಲ್ಲಿ ಮಾತ್ರ ಲೋಹಿಯಾ ಕಡೆ ಆಕರ್ಷಿತರಾಗಿರುವ ಇತ್ತೀಚಿನ ತಲೆಮಾರಿನ ಬಹುಪಾಲು ಯುವಜನರು ನಕ್ಸಲೀಯ ಗುಂಪುಗಳೂ ಸೇರಿದಂತೆ ಎಲ್ಲ ರೀತಿಯ ಅನಪೇಕ್ಷಣೀಯ ಗುಂಪುಗಳ ರಾಜಕಾರಣಕ್ಕೆ ಬಲಿಯಾಗುತ್ತಿರುವುದನ್ನು, ನಿಸ್ಸಹಾಯಕರಾಗಿ ನಿಂತು ನೋಡುವ ದುಃಸ್ಥಿತಿಗೆ ಈಡಾಗಿದ್ದಾರೆ.

ಈಗ ಈ ಮೊದಲು ಪ್ರಸ್ತಾಪಿಸಿದ ಭಗತ್‌ಸಿಂಗ್–ಲೋಹಿಯಾ ಚಿಂತನಾ ಸಮಾವೇಶದ ಹೆಸರಿನಲ್ಲಿ ಆಗುತ್ತಿರುವುದೂ ಇದೇ. ಆದರೆ, ಇದು ಅಸಂಬದ್ಧ, ಅಕ್ರಮ ಹಾಗೂ ಅಪಾಯಕಾರಿ ಎಂದು ಹೇಳಬಲ್ಲ ರಾಜ್ಯವ್ಯಾಪಿಯಾದ ಒಂದು ಸಮಾಜವಾದಿ ಸಂಘಟನೆಯೂ ಕರ್ನಾಟಕದಲ್ಲಿ ಇಲ್ಲವಾದರೆ? ಜಾಗತೀಕರಣವನ್ನು ಅನ್ಯ ದೂಷಣೆಯ ಹಳೆಯ ಸಮಾಜವಾದಿ ಮಾದರಿಯಲ್ಲೇ ಬೈಯುತ್ತಾ ಕೂತರೆ, ಸಮಾಜವಾದದ ಮುಂದಿನ ದಾರಿ ಸ್ಪಷ್ಟವಾಗುವುದೆ? ಸಮಾಜವಾದವೇ ಜಾಗತೀಕರಣಕ್ಕೆ ಪರ್ಯಾಯವೆಂದು ನಾವು ಹೇಳುವ ಮೊದಲು ಸಮಾಜವಾದದ ಬಗೆಗೆ ಉಂಟಾಗಿರುವ ತಪ್ಪು ಕಲ್ಪನೆಯನ್ನು ನಿವಾರಿಸುವ ಮತ್ತು ಸಮಾಜವಾದವೆಂದರೆ ನಿಜವಾಗಿ ಏನು ಎಂಬುದನ್ನು ಬದಲಾದ ಸಂದರ್ಭದಲ್ಲಿ ನಮಗೆ ನಾವೇ ಮೊದಲು ಸ್ಪಷ್ಟಪಡಿಸಿಕೊಂಡು ಇತರರಿಗೆ ಸ್ಪಷ್ಟಪಡಿಸುವ ಹೊಣೆಗಾರಿಕೆಯನ್ನು ಹೊರಬೇಕಿದೆ. ಇದಕ್ಕಾಗಿ, ಅರ್ಧ ಹತಾಶೆ–ಅರ್ಧ ಆಶೆಗಳಿಂದ

ಅತ್ತಿತ್ತ ನೋಡುವುದನ್ನು ಬಿಟ್ಟು, ಈಗಲಾದರೂ ಸೂಕ್ತ ಸಿದ್ಧತೆ ಮಾಡಿಕೊಳ್ಳುವ ಕಾರ್ಯಕ್ರಮವಾಗಿ ಮಾತ್ರ ಲೋಹಿಯಾ ಹುಟ್ಟುಹಬ್ಬದ ಆಚರಣೆಗಳು ಅರ್ಥಪೂರ್ಣ ವೆನಿಸಿಕೊಳ್ಳಬಲ್ಲವು. ಇಲ್ಲದೇ ಹೋದರೆ, ಲೋಹಿಯಾ ನೆನಪು ಕ್ರಮೇಣ ಒಂದು ದುಃಸ್ವಪ್ನವಾಗಿ ನಮ್ಮನ್ನು ಕಾಡತೊಡಗುವುದು ನಿಶ್ಚಿತ.

('ಅಗ್ನಿ', ಮಾರ್ಚ್ ೨೯, ೨೦೦೭)

ಒಂದು ಪ್ರತಿಕ್ರಿಯೆ

ಸಮಾಜವಾದಕ್ಕೆ ಅಡ್ಡದಾರಿಗಳಿಲ್ಲ

ಕುಂಬಳಕಾಯಿ ಕಳ್ಳ ಎಂದೊಡನೆ ನನ್ನ ಇಬ್ಬರು 'ಕಮ್ಯುನಿಸ್ಟ್' ಗೆಳೆಯರು ಹೆಗಲು ಮುಟ್ಟಿ ನೋಡಿಕೊಂಡಿದ್ದಾರೆ. ಗೋಕಾಕದಲ್ಲಿ ಆಯೋಜಿತವಾಗಿದ್ದ 'ಲೋಹಿಯಾ–ಭಗತ್‌ಸಿಂಗ್ ಚಿಂತನಾ ಸಮಾವೇಶ'ದ ಅಸಂಬದ್ಧತೆಯ ಬಗ್ಗೆ ನಾನು ಬರೆದ ಲೇಖನಕ್ಕೆ (ಅಗ್ನಿ, ೨೯–೩–೨೦೦೭) ಹೋದ ವಾರದ 'ಅಗ್ನಿ'ಯಲ್ಲಿ ಸನತ್ ಕುಮಾರ್ ಬೆಳಗಲಿ ಹಾಗೂ ಇನ್ನೊಂದು ಪತ್ರಿಕೆಯಲ್ಲಿ ಅವರ ಸಹಮನಸ್ಕ ಗೆಳೆಯ ಶಿವಸುಂದರ ವಿಸ್ತಾರವಾಗಿ ಪ್ರತಿಕ್ರಿಯಿಸಿದ್ದಾರೆ. ನಾನು ತಾತ್ವಿಕ ನೆಲೆಯಲ್ಲಿ ಬರೆದುದನ್ನು ಇವರು ವೈಯಕ್ತಿಕ ನೆಲೆಗೆ ಇಳಿಸಿ ನನ್ನ ಮೇಲೆ ಹರಿಹಾಯ್ದಿದ್ದಾರೆ. ಅಂದರೆ, ನಾನು ಬರೆದದ್ದು ಅವರ ಮರ್ಮಕ್ಕೆ ತಾಗಿದೆ ಎಂದೇ ಅರ್ಥ. ಅಷ್ಟರಮಟ್ಟಿಗೆ ನನ್ನ ಬರಹ ಸಾರ್ಥಕ್ಯ ಕಂಡಿದೆ.

ಗೆಳೆಯರ ಪ್ರತಿಕ್ರಿಯೆಗಳಲ್ಲಿ ವೈಯಕ್ತಿಕ ಟೀಕೆ–ವ್ಯಂಗ್ಯಗಳು, ಉದ್ದೇಶಪೂರ್ವಕ ಗೊಂದಲ ಸೃಷ್ಟಿಗಳೂ ಇರುವುದರಿಂದ ನಾನು ಸ್ವಲ್ಪ ವಿವರವಾಗಿಯೇ ಪ್ರತಿಕ್ರಿಯಿಸಬೇಕಿದೆ. ನನ್ನ ಮೂಲ ಬರಹದ ಉದ್ದೇಶ – ಅದರಲ್ಲೇ ಹೇಳಿದಂತೆ – ಈ 'ಕಮ್ಯೂನಿಸ್ಟ್'ರ ತಂತ್ರಗಾರಿಕೆಯನ್ನು ಪರಿಚಯ ಮಾಡಿಕೊಡುವುದಲ್ಲ; ಬದಲಿಗೆ ಈ ಸಮಾವೇಶದಲ್ಲಿ ಲೋಹಿಯಾ ತತ್ವ ಹೋರಾಟಗಳಲ್ಲಿ ನಂಬಿಕೆ ಇಟ್ಟ ಯಾರಾದರೂ ಭಾಗವಹಿಸದ್ದಲ್ಲಿ, ಅವರಿಗೆ ಇಂತಹ ಮರುಳೇಕೆ ಕವಿಯಿತು ಎಂದು ಚಿಂತಿಸಲು. ಏಕೆಂದರೆ, ಈ ಭೂಮಿಯ ಮೇಲೆ ಕಮ್ಯುನಿಸ್ಟರೆಂಬುವರು ಕಾಲಿಟ್ಟ ದಿನದಿಂದಲೂ ಅವರು ತತ್ವವನ್ನು ತಂತ್ರದ ಬಾಲಂಗೋಚಿಯಾಗಿ ಮಾಡಿಟ್ಟುಕೊಂಡು ರಾಜಕಾರಣ ಮಾಡಿಕೊಂಡು ಬಂದವರು. ಭಾರತದಲ್ಲಿ ಸಮಾಜವಾದಿ ಚಳುವಳಿ ಆರಂಭವಾದ ೩೦ರ ದಶಕದಲ್ಲೇ, ತಮ್ಮ ಅಂತಾರಾಷ್ಟ್ರೀಯ ಯಜಮಾನರ ಅಣತಿಯಂತೆ 'ಐಕ್ಯರಂಗ'ದ ಹೆಸರು ಹೇಳಿಕೊಂಡು ಸಮಾಜವಾದಿ ಚಳುವಳಿಯನ್ನು ವಶಪಡಿಸಿಕೊಳ್ಳಲು ಯತ್ನಿಸಿ, ತಂತ್ರ ಬಯಲಾದಾಗ ಇವರನ್ನು ನಂಬಿ ಆಲಂಗಿಸಿದ್ದ ಜಯಪ್ರಕಾಶ್ ನಾರಾಯಣ್‌ರಿಂದಲೇ 'ಇವರು ನಮ್ಮ ಶತ್ರುಗಳು ಮಾತ್ರವಲ್ಲ, ಜನತೆಯ ಶತ್ರುಗಳು ಕೂಡಾ' ಎಂದು ಛೀಮಾರಿ ಹಾಕಿಸಿಕೊಂಡು ಹೊರದಬ್ಬಿಸಿಕೊಂಡವರು. ಆ ವೇಳೆಗಾಗಲೇ ಈ ಐಕ್ಯರಂಗವಾದಿಗಳು ದಕ್ಷಿಣ ಭಾರತದ ಅನೇಕ ಸಮಾಜವಾದಿ ಶಾಖೆಗಳನ್ನೂ ತಮ್ಮಲ್ಲಿ ಐಕ್ಯಗೊಳಿಸಿಕೊಂಡಿದ್ದನ್ನು ಸಮಾಜವಾದಿಗಳು

ಹೇಗೆ ದಿಗ್ಭ್ರಮೆಯಲ್ಲಿ ನೋಡ ಬೇಕಾಯಿತು ಎಂಬುದನ್ನು ಭಾರತೀಯ ಸಮಾಜವಾದಿ ಚರಿತ್ರೆ ಬಲ್ಲ ಎಲ್ಲರಿಗೂ ತಿಳಿದಿದೆ.

ಹಾಗೆ ನಂಬಿದವರಿಗೆ ದ್ರೋಹ ಬಗೆಯುವುದನ್ನು ತಮ್ಮ ತತ್ವ-ತಂತ್ರಗಳೆಡನ್ನೂ ಮಾಡಿಕೊಂಡು ಯಾವ ಮುಜುಗರವೂ ಇಲ್ಲದೆ ನಿರುಮ್ಮಳವಾಗಿರಬಲ್ಲ ಈ 'ಉಗ್ರ ಸತ್ಯನಿಷ್ಠ ಕಮ್ಯುನಿಷ್ಟರು', ಒಂದು ವರ್ಷದ ಹಿಂದಷ್ಟೇ ಶಿವಮೊಗ್ಗ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿನ 'ಪ್ರಗತಿಶೀಲ' ರೆಂದೆನಿಸಿಕೊಂಡವರಿಗೆ 'ಜನಪರ ಹೋರಾಟ'ದ ಟೋಪಿ ಹಾಕಿ ಜನ ಮತ್ತು ಹಣ ಎರಡನ್ನೂ ತಮ್ಮ 'ಕಾಣದ ಹೋರಾಟ'ಕ್ಕಾಗಿ ಲಪಟಾಯಿಸಿಕೊಂಡು ಹೋಗುವ ಅವಸರದಲ್ಲಿದ್ದಾಗ ಸಿಕ್ಕಿಬಿದ್ದು, ಹೇಗೆ ಅನೇಕ ಪ್ರಗತಿಪರರ ದಿಗ್ಭ್ರಮೆಗೆ ಕಾರಣರಾಗಿದ್ದಾರೆ ಎಂಬುದನ್ನು ಈಗಲೂ ಶಿವಮೊಗ್ಗಕ್ಕೆ ಬಂದ ನಾಲ್ಕು ಜನರನ್ನು ವಿಚಾರಿಸಿದರೆ ಗೊತ್ತಾಗುತ್ತದೆ. ಅಲ್ಲಿಂದೀಚೆಗೆ ಈ ಜನಪರ ಹೋರಾಟಗಾರರು 'ಬಲಿ'ಗಳನ್ನು ಹುಡುಕಿಕೊಂಡು ತುಂಗಭದ್ರಾದ ಆಚೆಕಡೆಗೆ ಗುಳೆ ಹೊರಟಿದ್ದಾರೆಂದು ಕಾಣುತ್ತದೆ.

ನಾನು ನನ್ನ ಬರಹದಲ್ಲಿ ಎಚ್ಚರಿಸಿದ್ದುದು ಈ ಮಾರುವೇಷದ ರಾಜಕಾರಣದ ವಿರುದ್ಧ. ನನ್ನ ಈ ಗೆಳೆಯರು ಮೂಲತಃ ಕಮ್ಯೂನಿಸ್ಟರೇ ಆಗಿದ್ದರೆ, ಇವರೇಕೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪಾಲ್ಗೊಂಡು ಬಹಿರಂಗ ರಾಜಕಾರಣ ಮಾಡುತ್ತಿರುವ ತಮ್ಮ ಸೋದರ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಮೊದಲು ಐಕ್ಯತೆ ಸ್ಥಾಪಿಸಿಕೊಳ್ಳಬಾರದು? ಬದಲಿಗೆ, ಕಮ್ಯುನಿಸ್ಟ್ ಆಡಳಿತಶಾಹಿ ಕುರಿತಂತೆ ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದ ಗಾಂಧಿ-ಲೋಹಿಯಾಗೆ ಯಾಕೆ ಇವರ ಗಂಟು ಬೀಳಲು ಹೊರಟಿದ್ದಾರೆ? ತಮ್ಮ ಹತಾಶ ರಾಜಕೀಯ ತತ್ವ ಹಾಗೂ ತಂತ್ರಗಳಿಂದಾಗಿ ಜನವಿಮುಖರಾಗಿ ಕಾಡು ಹೊಕ್ಕಿರುವ ಇವರಿಗೆ ಸದ್ಯಕ್ಕೆ ಜನ ಬೇಕಿದೆ ಮತ್ತು ಹೇಗಾದರೂ ಅದನ್ನು ಪಡೆಯಬೇಕಿದೆ! ಅದಕ್ಕಾಗಿ ಇದ್ದಕ್ಕಿದ್ದಂತೆ ಭಗತ್‌ಸಿಂಗ್-ಗಾಂಧಿ-ಲೋಹಿಯಾ ಬಗೆಗೆ ಪ್ರೀತಿ ಉಕ್ಕಿ ಹರಿದು ಈ ಹೆಸರುಗಳ ಬಳಕೆಗೆ ಸಿದ್ಧತೆ ನಡೆದಿದೆ.

ಇವರು, ಲೋಹಿಯಾ ಇಂದು ಬದುಕಿದ್ದರೆ ಏನು ಮಾಡುತ್ತಿದ್ದರು ಎಂಬುದನ್ನು ತಾವೇ ಊಹಿಸಿಕೊಂಡು ತಮ್ಮ ರಾಜಕಾರಣವನ್ನು ಸಮರ್ಥಿಸಿಕೊಂಡಿದ್ದಾರೆ. ಇಂತಹ ಊಹಾತ್ಮಕ ರಾಜಕಾರಣದಲ್ಲಿ ನನಗೆ ನಂಬಿಕೆ ಇಲ್ಲದಿದ್ದರೂ, ಇವರ ಊಹೆಗೆ ಪ್ರತಿಕ್ರಿಯಿಸಿ ಹೇಳುವುದಾದರೆ, ಖಂಡಿತ ಲೋಹಿಯಾದ ಹೋರಾಟದಲ್ಲಿ ಸಂವಿಧಾನ ಹಾಗೂ ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲುಗೊಳಿಸ ಬಯಸುವವರಿಗೆ ಸ್ಥಾನವಿರುತ್ತಿರಲಿಲ್ಲ. ಅಂತಹವರನ್ನು ಅವರು ದಾರಿತಪ್ಪಿದ ಮಕ್ಕಳೆಂದು ಸಹಾನುಭೂತಿಯಿಂದ ನೋಡುತ್ತಿದ್ದರೆ ಹೊರತು, ಅದರೊಂದಿಗೆ ಎಂದೂ ರಾಜಕೀಯವಾಗಿ ಗುರುತಿಸಿಕೊಳ್ಳುತ್ತಿರಲಿಲ್ಲ. ನನ್ನ ಕಮ್ಯೂನಿಸ್ಟ್ ಗೆಳೆಯರಿಗೆ ಲೋಹಿಯಾ ಈಗ ಅಷ್ಟು ಪ್ರೀತಿಯ ಹೆಸರಾಗಿ ಪರಿವರ್ತಿತ ವಾಗಿದ್ದರೆ, ಲೋಹಿಯಾ ಹೆಸರನ್ನು ಸೇರಿಸಿಕೊಂಡು ಆಯೋಜಿಸಿದ್ದ ಗೋಕಾಕ್ ಸಮಾವೇಶದ ಕರಪತ್ರ ಮತ್ತು ಆಹ್ವಾನ ಪತ್ರಿಕೆಯಲ್ಲಿ ಲೋಹಿಯಾ ವಿಚಾರಗಳಿಗೆ ಒಂದು ಸಾಲಿನ ಜಾಗವನ್ನೂ ಏಕೆ ಕೊಡಲಾಗಿಲ್ಲ? ಇನ್ನು ಇವರ ಕೈಲಿ ಸಿಕ್ಕು ಗಾಂಧಿ ಪಾಡೇನಾಗಬೇಕು?

ಇನ್ನು, ಇಬ್ಬರು ಗೆಳೆಯರು ಮಾಡಿರುವ ಕಿಷನ್ ಪಟ್ನಾಯಕ್ ಹಾಗೂ ಸುರೇಂದ್ರ

ಮೋಹನರ ಪ್ರಸ್ತಾಪ. ೩೦ ವರ್ಷಗಳಿಂದ ಸತತವಾಗಿ ಕಿಷನ್ ಪಟ್ನಾಯಕ್‌ರೊಂದಿಗೆ ಒಡನಾಡಿರುವ ನನಗೆ ಅವರ ಬಗ್ಗೆ ಈ ಇಬ್ಬರು ಗೆಳೆಯರಿಗಿಂತ ಹೆಚ್ಚು ಗೊತ್ತೆಂದು ವಿಶ್ವಾಸದಿಂದ ಹೇಳಬಲ್ಲೆ. ಖಂಡಿತ ಅವರು ಕಮ್ಯುನಿಸ್ಟರೂ ಸೇರಿದಂತೆ ಜಾಗತೀಕರಣದ ವಿರುದ್ಧ ಇರುವ ಎಲ್ಲ ಎಡಪಂಥೀಯರ ಒಗ್ಗಟ್ಟಿಗೆ ಶ್ರಮಿಸಿದರು. (ಈಚಿನ ನಂದಿಗ್ರಾಮ ಪ್ರಕರಣದ ನಂತರ ಅವರ ನಿಲುವು ಏನಾಗುತ್ತಿತ್ತೋ ಊಹಿಸುವುದು ಕಷ್ಟ.) ಆದರೆ, ಈ ಒಗ್ಗಟ್ಟಿನ ಹೋರಾಟ ಸಂಪೂರ್ಣವಾಗಿ ಜನಸಮ್ಮುಖದಲ್ಲಿ ಅಹಿಂಸಾತ್ಮಕವಾಗಿ ನಡೆಯಬೇಕೆಂದು ಅವರು ನಂಬಿದ್ದರು. ಬೀದಿಯಲ್ಲೊ, ಕಾಡಿನಲ್ಲೋ ಕಂಡವರ ಮಕ್ಕಳ 'ರಕ್ತ ಚೆಲ್ಲುವ' ವಿಕ್ಷಿಪ್ತ ವೀರಾವೇಶದ 'ಹೋರಾಟ'ದ ಮತುಗಳಿಗೆ ಅವರ ಬಳಿ ಅವಕಾಶವಿರಲಿಲ್ಲ. ಹಾಗಾಗಿ ಈ ಗೆಳೆಯರು ಕಿಷನ್ ಪಟ್ನಾಯಕರ ಅಥವಾ ಸುರೇಂದ್ರ ಮೋಹನದ ಹೆಸರನ್ನಾಗಲಿ ಪ್ರಸ್ತಾಪಿಸುತ್ತಿದ್ದರೆ, ಅದು ಮತ್ತೆ ಅವರ Cadre buildingಗಾಗಿ ಮಾತ್ರ

ಇವರ ಕೋಮುವಾದಿ ರಾಜಕಾರಣದ ವಿರುದ್ಧದ ಹೋರಾಟವೂ ಅಷ್ಟೆ. ನಾನೂ ಆರಂಭದಲ್ಲಿ ಇವರ 'ಕೋಮು ಸೌಹಾರ್ದ ವೇದಿಕೆ'ಗೆ ನನ್ನ ಕೈಲಾದಷ್ಟು ಚಂದಾ ಕೊಟ್ಟವನೇ ಹಾಗೂ ಕೊಡಿಸಿದವನೇ. ಆದರೆ ಕೋಮು ಸೌಹಾರ್ದ ವೇದಿಕೆ ಬಳಕೆಯಾದದ್ದು ಸೌಹಾರ್ದಕ್ಕೆ ಬದಲಾಗಿ ಸಂಘರ್ಷಕ್ಕೆ. ಅದಕ್ಕಿಂತ ಹೆಚ್ಚಾಗಿ ಇವರ ರಾಜಕೀಯ 'ಜಾಗ'ವನ್ನು ಭದ್ರಪಡಿಸಿಕೊಳ್ಳಲಿಕ್ಕೆ. ಇದು ಬಯಲಾದೊಡನೆ ಹೊಸ ಹೊಸ ಮುಖವಾಡಗಳ ಅವಿಷ್ಕಾರ ಶುರುವಾಗಿದೆ. ಹೀಗಾಗಿ ಈಗ ಅದು ಗದಗ–ಗೋಕಾಕದ ಕಡೆ ಕೋಮು ಕಳಚಿಕೊಂಡು ಬರೀ ಸೌಹಾರ್ದ ವೇದಿಕೆಯಾಗಿ ತಲೆ ಎತ್ತಿದೆ! ಜೊತೆಗೆ ಅವರೇ ಹೇಳಿಕೊಂಡಂತೆ, ಭೂ ಮಾಲೀಕರನ್ನು ನಡುಗಿಸಿರುವ 'ಭೂಮಿ ಬೇಕು' ಆಂದೋಲನ ... ಇಷ್ಟು ಸಶಕ್ತರಾದ ಇವರು ಸಂಘ ಪರಿವಾರದ ರಾಜಕಾರಣದ ವಿರುದ್ಧ ಹೋರಾಟ ಮಾಡುವುದಿದ್ದರೆ, ನೇರವಾಗಿ ತಮ್ಮ ಹೆಸರಿನಲ್ಲಿ ಸಮಾವೇಶದ ಸಂಘಟನೆ ಏಕೆ ಮಾಡಬಾರದಿತ್ತು? ಬಂಡಾಯ ಸಾಹಿತ್ಯ ಸಂಘಟನೆ ಇರುವುದು ಇಂತಹ 'ಮಧ್ಯವರ್ತಿ' ಕೆಲಸಗಳಿಗೇ ಎಂದು ಕಾಣುತ್ತದೆ. ಹಾಗೆ ನೋಡಿದರೆ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿದ್ದೇ ಆಗಿನ ಕಮ್ಯುನಿಸ್ಟ್ ನಾಯಕ ಎಂ.ಕೆ. ಭಟ್ಟರ ಮಾರುವೇಷದ ರಾಜಕೀಯ ಕಾರ್ಯಕ್ರಮವಾಗಿ. ಆದರೆ, ನಂತರ ಅದು ಅವರ ಹಿಡಿತಕ್ಕೆ ಸಿಗದೆ ಸಾಹಿತ್ಯದ ಹೆಸರಲ್ಲಿ ರಾಜಕೀಯ ಮಾಡಹೊರಟ ಪುಢಾರಿಗಳ ಕೈವಶವಾದದ್ದು ಬೇರೆ ವಿಷಯ.

ಹಿಂದೂ ಸಮಾಜೋತ್ಸವದ ಬಗ್ಗೆ ನಾನೇನೂ ಮಾತಾಡಲಿಲ್ಲವೆಂದೂ, ಜಾರ್ಜ್ ಫರ್ನಾಂಡೀಸ್ ರಾಜಕಾರಣದ ಬಗ್ಗೆ ನಾನು ಏನೂ ಹೇಳಿಲ್ಲವೆಂದೂ ಈ ಗೆಳೆಯರು ಅಪಾದಿಸಿದ್ದಾರೆ. ಅಂದರೆ, ನಾನು ಬಂದು ಈ ಕುರಿತ ನನ್ನ ನಿಲುವುಗಳನ್ನೂ, ಪ್ರತಿಕ್ರಿಯೆಗಳನ್ನೂ ಇವರ ಮುಂದೆ ದಾಖಲಿಸಬೇಕಿತ್ತೆಂದೇ? ವಿಷಯ ಗೊತ್ತಿಲ್ಲದಿದ್ದರೆ ಬಾಯಿ ಮುಚ್ಚಿಕೊಂಡಿರುವುದು ಸೌಜನ್ಯ. ಇಂತಹ ಸೌಜನ್ಯಗಳಿಗೆಲ್ಲ ತಿಲಾಂಜಲಿ ಕೊಟ್ಟವರಂತೆ ತೋರುವ ಈ ಗೆಳೆಯರು ನನ್ನನ್ನು ದಂತಗೋಪುರದ ಸಮಾಜವಾದಿ ಯೆಂದೂ, ಗಾವಿಲನೆಂದೂ, ಪಂಡಿತನೆಂದೂ, ಹೋರಾಟದಿಂದ ವಿಆರ್‌ಎಸ್ ತೆಗೆದುಕೊಂಡವನೆಂದೂ ಜರಿದಿದ್ದಾರೆ. ವೈಯಕ್ತಿಕವಾಗಿ ಹೀಗೆ ಜರಿಯುವ ಭಾಷೆ

ದುರ್ಬಲರದು, ಹೇಡಿಗಳದು ಹಾಗೂ ಅಗ್ಗದ ಜನಪ್ರಿಯತೆಗೆ ಜಿದ್ದವರದು ಎಂದಷ್ಟೆ ನಾನಿಲ್ಲಿ ಹೇಳಬಯಸುವೆ. ಆದರೆ, ಇವರು ತಮ್ಮನ್ನು ಕ್ರಾಂತಿಕಾರಿಗಳೆಂದು ಭಾವಿಸಿಕೊಂಡಿದ್ದಾರೆ. ಅದೇ ವಿಪರ್ಯಾಸ. ನಾನೆಂದೂ ಇವರ ಇಂತಹ 'ಹಾರಾಟ' ರೂಪದ ಹೋರಾಟದಲ್ಲಿ ಭಾಗಿಯಾಗಿಲ್ಲ. ನನಗೆ ಅದರಲ್ಲಿ ನಂಬಿಕೆಯೂ ಇಲ್ಲ. ನನ್ನ ನಂಬಿಕೆ ಏನಿದ್ದರೂ ಗಾಂಧಿ-ಲೋಹಿಯಾ ಪ್ರತಿಪಾದಿಸಿದ, ದೇಹದಲ್ಲಿ ಒಂದೇ ತಲೆ ಇರುವ ಹಾಗೂ ಆ ತಲೆಯಲ್ಲಿ ಒಂದೇ ನಾಲಗೆ ಇರುವ ಮತ್ತು ಆ ಒಂದೇ ತಲೆ ಹಾಗೂ ನಾಲಗೆಯೊಂದಿಗೆ ಜನರ ಮಧ್ಯೆ ಮಾಡುವ ನೇರ ಹಾಗೂ ಸತ್ಯದ ರಾಜಕಾರಣದಲ್ಲಿ. ಅದು ಇಂದು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಮಾತ್ರ ಮಾಡುವ ರಾಜಕೀಯ ವಿವೇಕವನ್ನು ಒಪ್ಪಿಕೊಂಡುವನು.

ಹಾಗಾಗಿಯೇ ನಾನೀಗ ಮೂವತ್ತು ವರ್ಷಗಳ ಸರ್ಕಾರಿ ಸೇವೆಯ ನಂತರ ದೊರೆಯುತ್ತಿರುವ (ನನ್ನ ಹೆಂಡತಿಯದೂ ಸೇರಿದಂತೆ) ೧೨ ಸಾವಿರ ರೂ.ಗಳ ಮಾಸಿಕ ಪಿಂಚಣಿಯ ದಂತ ಗೋಪುರದಲ್ಲಿ ಕೂತು ನಿಮ್ಮ ಕ್ರಾಂತಿಕಾರಕ ರಾಜಕಾರಣವನ್ನು ಗಾಬರಿಯಿಂದ ನೋಡುವ ಪಡಿಪಾಟಲಿನಲ್ಲಿದ್ದೇನೆ. ಏನು ಮಾಡುವುದು ಹೇಳಿ, ತಾವು ಮಾಡಿದ ಕ್ರಾಂತಿಯ ಸುಸ್ತನ್ನು ನಿವಾರಿಸಿಕೊಳ್ಳಲು ಮಧ್ಯಯುಗೀನ ಮಹಾರಾಜರ ವೈಭೋಗವನ್ನೂ ನಾಚಿಸುವಂತಹ ಆಧುನಿಕ ಅರಮನೆಗಳ ವೈಭೋಗ ಕಲ್ಪಿಸಿಕೊಂಡ ನಿಮ್ಮ ಮಾದರಿಗಳಾದ ಮಾವೋ, ಲೆನಿನ್, ಸ್ಟಾಲಿನ್ ಹಾಗೂ ಚೆಸಸ್ಕು (ರುಮೇನಿಯಾ) ಮುಂತಾದ ದುಡಿಯುವ ವರ್ಗಗಳ ಸರ್ವಾಧಿಕಾರಿಗಳು ನನಗೆ ಮಾದರಿಗಳಾಗಿಲ್ಲವಲ್ಲ?

ಅಂದಹಾಗೆ ಈ ಗೋಕಾಕ ಸಮಾವೇಶದಲ್ಲಿ ಪಾಲ್ಗೊಂಡಿರಬಹುದಾದ ಒಬ್ಬ ಲೋಹಿಯಾ ಸಮಾಜವಾದಿಯಿಂದಲೂ ನನ್ನ ಬರಹಕ್ಕೆ ಪ್ರತಿಕ್ರಿಯೆ ಇಲ್ಲವಾಗಿ, ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎಂಬಂತೆ ಎಲ್ಲ ರಾದ್ಧಾಂತವೂ ಈ 'ಕಮ್ಯುನಿಸ್ಟ್' ಗೆಳೆಯರದೇ ಆಗಿದೆಯಲ್ಲ! ಗೆಳೆಯರೇ, ಮೊದಲು ನಿಮ್ಮ ನಿಮ್ಮ ಭ್ರಮೆಗಳಿಂದ ಹೊರಬನ್ನಿ. ಜನರಿಗಾಗಿ ಜನರ ಮಧ್ಯೆ ಮನಬಿಚ್ಚಿ ಮಾತನಾಡಿ. ನೇರ ರಾಜಕಾರಣ ಮಾಡುವ ಧೈರ್ಯ ತೋರಿ. ನಿಮ್ಮ ಬದ್ಧತೆ ಹಾಗೂ ಪರಿಶ್ರಮಗಳ ಬಗ್ಗೆ ಯಾರಿಗೂ ಅನುಮಾನವಿಲ್ಲ. ಅನುಮಾನ ವಿರುವುದು, ನಿಮ್ಮ ಗುರಿ ಮತ್ತು ಮಾರ್ಗಗಳ ಬಗ್ಗೆ. ಆದುದರಿಂದ ಜನರಿಗೆ ಅಗತ್ಯವೆನಿಸಿದರೆ ಒಟ್ಟಿಗೆ ಸೇರಿ ಸಮಾಜವಾದಿ ಆಂದೋಲನವನ್ನು ಇವೊತ್ತಿನ ಸವಾಲುಗಳಿಗೆ ತಕ್ಕಂತೆ ಪುನಃಶ್ಚೇತನಗೊಳಿಸೋಣ. ಭಗತ್‌ಸಿಂಗ್‌ರನ್ನು ಮಾದರಿಯಾಗಿಟ್ಟುಕೊಂಡಲ್ಲ, ಗಾಂಧಿ-ಲೋಹಿಯಾ-ಕಿಷನ್ ಪಟ್ನಾಯಕ್‌ರ ಅಹಿಂಸಾತ್ಮಕ ಮತ್ತು ಸಂಸದೀಯ ಪ್ರಜಾಪ್ರಭುತ್ವವಾದೀ ರಾಜಕಾರಣದ ಆಶಯಗಳನ್ನಿಟ್ಟುಕೊಂಡು. ಏಕೆಂದರೆ ಸತ್ಯ-ಸಮತೆ-ಸೌಂದರ್ಯಗಳನ್ನು ಏಕವಾಗಿ ಪರಿಭಾವಿಸುವ ಭಾರತೀಯ ಸಮಾಜವಾದಕ್ಕೆ ಅಡ್ಡದಾರಿ (shortcut) ಗಳಿಲ್ಲ.

(ಅಗ್ನಿ. ಏಪ್ರಿಲ್ ೧೨, ೨೦೦೭)

ಲೋಹಿಯಾ ಸಮಾಜದವಾದ: ಮುಂದೇನು?

ಲೋಹಿಯಾ ಜಗತ್ತಿನಲ್ಲಿ ಏಳು ರೀತಿಯ ಅನ್ಯಾಯಗಳನ್ನು ಗುರುತಿಸಿದ್ದರು. ಸಮಾಜವಾದದ ಮೂಲಕ ಇವುಗಳ ನಿವಾರಣೆಗಾಗಿ 'ಸಪ್ತಕ್ರಾಂತಿ' ಕಲ್ಪನೆಯನ್ನು ಮುಂದಿಟ್ಟಿದ್ದರು:

೧. ಗಂಡು ಮತ್ತು ಹೆಣ್ಣಿನ ನಡುವೆ ಸಮಾನತೆ.
೨. ಎಲ್ಲ ರೀತಿಯ ರಾಜಕೀಯ ಗುಲಾಮಗಿರಿ ಹಾಗೂ ಸಾಮ್ರಾಜ್ಯಶಾಹಿಯ ನಾಶ.
೩. ದೇಶದ ಜನತೆಯ ನಡುವೆ ಮತ್ತು ದೇಶಗಳ ನಡುವೆ ಆರ್ಥಿಕ ಸಮಾನತೆ.
೪. ಸಾಮೂಹಿಕತೆಯ ಅತಿಗಳ ವಿರುದ್ಧ ಮನುಷ್ಯನ ಖಾಸಗಿತನದ ರಕ್ಷಣೆ.
೫. ವಿಶೇಷ ಪ್ರಾಶಸ್ತ್ಯದ ಮೂಲಕ ಜಾತಿ ನಿರ್ಮೂಲನೆ.
೬. ನಿಶಸ್ತ್ರೀಕರಣ ಮತ್ತು ನಾಗರಿಕ ಅಸಹಕಾರ ಸತ್ಯಾಗ್ರಹದ ಬಳಕೆ.
೭. ಎಲ್ಲ ಬಣ್ಣಗಳ ಜನತೆಯ ನಡುವೆ ಸಮಾನತೆ ಮತ್ತು ಸೌಂದರ್ಯ ಮೀಮಾಂಸೆಯಲ್ಲಿ ಕ್ರಾಂತಿ.

ಈ ಸಪ್ತ ಕ್ರಾಂತಿಯ ಮೂಲಕ ಅವರು ಸಮಾನತೆಯ ಹೊಸ ಜಗತ್ತನ್ನು ಕಟ್ಟುವ ಕನಸು ಕಂಡಿದ್ದರು. ಲೋಹಿಯಾ ನಿಧನರಾಗಿ ೪೦ ವರ್ಷಗಳು ಸಂದಿವೆ. ಅವರು ತಮ್ಮ ಗೆಳೆಯರೊಂದಿಗೆ ಕಟ್ಟಿದ ಸಮಾಜವಾದಿ ಪಕ್ಷ, ಜೆ.ಪಿ. ಮಾರ್ಗದರ್ಶನದಲ್ಲಿ ೧೯೭೭ರಲ್ಲಿ ರಚಿತವಾದ ಜನತಾಪಕ್ಷದಲ್ಲಿ ವಿಸರ್ಜನೆಯಾಗಿ ಸುಮಾರು ೩೦ ವರ್ಷಗಳಾಗಿವೆ. ಆದರೆ ಭಾರತದಲ್ಲಿ ಸಮಾಜವಾದಿ ಅಂದೋಲನದ ತೊರೆ, ತೆಳುವಾಗಿಯಾದರೂ ಇನ್ನೂ ಹರಿಯುತ್ತಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದವನ್ನು ಬಾಯಿ ಮಾತಿನಲ್ಲಾದರೂ ಎತ್ತಿ ಹಿಡಿಯುವ ಸಣ್ಣಪುಟ್ಟ ಪಕ್ಷಗಳು, ಗುಂಪುಗಳು ರಾಷ್ಟ್ರ ರಾಜಕಾರಣದಲ್ಲಿ ಇನ್ನೂ ಕಾರ್ಯನಿರತವಾಗಿವೆ. ಪಕ್ಷೇತರ ನೆಲೆಯಲ್ಲಿ ಸಮಾಜವಾದಿ ಅಧ್ಯಯನ-ಚಟುವಟಿಕೆಗಳಲ್ಲಿ ನಿರತವಾದ ಅನೇಕ ಸಂಘ-ಸಂಸ್ಥೆಗಳಿವೆ. ಲೋಹಿಯಾ ಹೆಸರಲ್ಲದಿದ್ದರೂ ಅವರು ಪ್ರತಿಪಾದಿಸಿದ ಸಮಾಜವಾದಿ ತತ್ವಗಳ ಪ್ರಭಾವದಿಂದಲೋ, ಅಥವಾ ಸಾರ್ವತ್ರಿಕವಾಗಿ ಸಮಾಜವಾದಿ ಅಂದೋಲನ ಉಂಟು ಮಾಡಿದ ವಾತಾವರಣದ ಪ್ರಭಾವದಿಂದಲೋ, ಅಲ್ಲಲ್ಲಿ ಜನಪರ ಅಂದೋಲನಗಳನ್ನು ಸಂಘಟಿಸುತ್ತಿರುವ ಸಾಹಸಿಗಳಿದ್ದಾರೆ. ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್, ಜಲಾನಯನ ಅಭಿವೃದ್ಧಿ ಆಂದೋಲನದ ರಾಜೇಂದ್ರಸಿಂಗ್, ಪಂಚಾಯತ್‌ರಾಜ್ ಆಂದೋಲನದ ಇಳಂಗೋವನ್, ಸಣ್ಣ ಘಟಕ ತಂತ್ರಜ್ಞಾನ ಕ್ಷೇತ್ರದ ಸಂಶೋಧಕ ಪಿ.ವಿ. ಶೇಷಾದ್ರಿ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಇತ್ತೀಚಿನ ಪಾಳೇಕಾರರ ನೈಸರ್ಗಿಕ ಕೃಷಿ ಆಂದೋಲನವನ್ನೂ ಈ ಪಟ್ಟಿಗೆ ಸೇರಿಸಬಹುದು.

ಲೋಹಿಯಾ ಶಿಷ್ಯ ಕಿಷನ್ ಪಟ್ನಾಯಕ್ ತಾವು ನಿಧನರಾಗುವ ಇತ್ತೀಚಿನವರೆಗೂ ಈ ಎಲ್ಲ ಅಧ್ಯಯನ-ಚಟುವಟಿಕೆ- ಆಂದೋಲನಗಳ ನಡುವೆ ಸಮನ್ವಯಯ ಸಾಧಿಸುವ ಕೆಲಸ ಕೈಗೊಂಡಿದ್ದರು. ಇದಕ್ಕಾಗಿ ರಾಷ್ಟ್ರಾದ್ಯಂತ ಸಂಚರಿಸಿ, ವಿವಿಧ ರಾಜ್ಯಗಳಲ್ಲಿ ಸಮಾನ ಮನಸ್ಕ ಗುಂಪುಗಳನ್ನು ಸಂಘಟಿಸುವ ಪ್ರಯತ್ನ ಮಾಡಿದ್ದರು. ಈ ಎಲ್ಲ ಪ್ರಯತ್ನಗಳ ಹಿಂದೆ ಇರುವುದು ಲೋಹಿಯಾ ಪ್ರತಿಪಾದಿಸಿದ ಸಪ್ತ ಕ್ರಾಂತಿಯನ್ನಾಧರಿಸಿದ ಹೊಸ ಜಗತ್ತನ್ನು ಕಟ್ಟುವ ಬತ್ತದ ಆಕಾಂಕ್ಷೆ; ನಿಲ್ಲದ ಹಠ. ಅಂದರೆ, ಲೋಹಿಯಾ ಹಚ್ಚಿಸಿಟ್ಟ ಸಮಾನತೆಯ ಕಿಚ್ಚು ಇಷ್ಟು ವರ್ಷಗಳ ನಂತರವೂ ಇನ್ನೂ ಆರಿಲ್ಲ; ಅವರು ಪ್ರತಿಪಾದಿಸಿದ ಸಮಾಜವಾದಿ ತನ್ನ ಅಪ್ರಸ್ತುತಗೊಂಡಿಲ್ಲ ಎಂದೇ ಅರ್ಥ. ಆದರೆ ಅವರು ರೂಪಿಸಿಕೊಟ್ಟ ಕಾರ್ಯಕ್ರಮಗಳು?

ರಾಷ್ಟ್ರ ಮತ್ತು ಜಗತ್ತುಗಳೆರಡೂ ಈಗ ಲೋಹಿಯಾ ಕಾಲದಲ್ಲಿದ್ದಂತಿಲ್ಲ. ಅವರ ಸೃಜನಶೀಲ ಸಮಾಜವಾದಿ ದೃಷ್ಟಿಕೋನಕ್ಕೆ ಆಧಾರವಾಗಿದ್ದ ಎರಡು ಬಣಗಳ ಜಗತ್ತು ಈಗ ಏಕ-ಧೃವ ಜಗತ್ತಾಗಿದೆ. ಬಂಡವಾಳಶಾಹಿಯು ಇಂದು ವೇಷ ಮರೆಸಿಕೊಂಡು ನಿಗಮ(ಕಾರ್ಪೊರೇಟ್)ಶಾಹಿಯಾಗಿ ತನ್ನ ಆಕರ್ಷಕ ಭಾವಭಂಗಿಗಳಲ್ಲಿ ಜನರನ್ನು ಆಕರ್ಷಿಸುತ್ತಿದೆ. ಲೋಹಿಯಾ ವಾದಿಸಿದಂತೆ ಕಮ್ಯೂನಿಸ್ಟ್ ಕ್ರಾಂತಿ ಹುಸಿ ಎಂದು ಸಾಬೀತಾಗಿದೆ. ಆದರೆ ಅದೇ ವೇಳೆ, ಅವರು ನಂಬಿದ್ದ ಸಮಾಜವಾದಿ ಕ್ರಾಂತಿಯೂ ಗುರಿ ಮುಟ್ಟದೆ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಆದುದರಿಂದ ಇಂದು ಸಮಾಜವಾದಿ ಆಂದೋಲನವನ್ನು ಮುನ್ನಡೆಬಯಸುವ ಜನ ಅನೇಕ ಮೂಲಭೂತ ಪ್ರಶ್ನೆಗಳನ್ನು ಎದುರಿಸಿಯೇ ಮುಂದೆ ಹೋಗಬೇಕಾಗಿದೆ – ಸಮಾಜವಾದದ ಗೊತ್ತು ಗುರಿಗಳ ಬಗೆಗೆ ಮತ್ತು ಸಮಾಜವಾದಿ ಆಂದೋಲನದ ಚಾಲೂ-ಚಹರೆಗಳ ಬಗೆಗೆ. ಮುಖ್ಯವಾಗಿ ಈ ಎರಡು ಪ್ರಶ್ನೆಗಳು : ಸ್ವತಃ ಲೋಹಿಯಾ ಅವರೇ ತಮ್ಮ ಬದುಕಿನ ಕೊನೆಯ ಹೊತ್ತಿಗೆ ತಾವೇ ರೂಪಿಸಿದ ಸಮಾಜವಾದಿ ಆಂದೋಲನ ಮತ್ತು ಕಾರ್ಯಕ್ರಮಗಳಿಂದ ಸುಸ್ತಾಗಿ ಹೋಗಿದ್ದರೇಕೆ? ಜನತೆ, ಲೋಹಿಯಾ ಅಥವಾ ಅವರ ಮಿತ್ರರು ಪ್ರತಿಪಾದಿಸಿದ ಸಮಾಜವಾದಿ ರಾಜಕಾರಣಕ್ಕೆ ಬೆಂಬಲ ನೀಡದೆ, ನೆಹರೂ ಮತ್ತು ಇಂದಿರಾಗಾಂಧಿಯವರ (ಅಥವಾ ಕಾಂಗ್ರೆಸ್) ಮೂಲಕ ವ್ಯಕ್ತವಾದ ಅದರ ದುರ್ಬಲ ಅನುಕರಣೆಗೇಕೆ ಬೆಂಬಲ ವ್ಯಕ್ತಪಡಿಸಿದರು?

ಸಮಾಜವಾದಿ ಆಂದೋಲನದ ಪ್ರಾಮಾಣಿಕತೆಯನ್ನಾಗಲೀ, ಸುದುದ್ದೇಶವನ್ನಾಗಲೀ ಯಾರೂ ಪ್ರಶ್ನಿಸಲಾರರಾದರೂ, ಅದು ನಡೆದ ಮಾರ್ಗವೇನಾದರೂ ಜನರಲ್ಲಿ ಅಪನಂಬಿಕೆ ಹುಟ್ಟಿಸಿತೆ? ಎಂಬ ಪ್ರಶ್ನೆ ಕೇಳಿಕೊಳ್ಳಲು ಅವಕಾಶವಿದೆ. ಲೋಹಿಯಾ ತಮ್ಮ ಉಜ್ವಲ ಪ್ರತಿಭೆಗೆ ತಾವೇ ಮಾರು ಹೋಗಿ, ಇದರಿಂದಾಗಿ ಆಂದೋಲನ ಏಕವ್ಯಕ್ತಿ ಪ್ರದರ್ಶನವಾಗಿ ಮಾರ್ಪಟ್ಟು, ಆಂದೋಲನ ಮತ್ತು ಜನತೆಯ ನಡುವೆ ಹೊಂದಾಣಿಕೆ-ಮರು ಹೊಂದಾಣಿಕೆಗಳನ್ನು ಸಾಧ್ಯಮಾಡಬಹುದಾಗಿದ್ದ ನಾಯಕತ್ವ-ವೈವಿಧ್ಯತೆ ಹಾಗೂ ಸಮಾಲೋಚನಾ ಸಂಪನ್ಮೂಲಗಳ ಕೊರತೆಯುಂಟಾಯಿತೇ? ಗಾಂಧೀಜಿ ಬ್ರಿಟಿಷ್ ಸರ್ಕಾರದ ವಿರುದ್ಧ ರೂಪಿಸಿದ ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಸ್ವತಂತ್ರ ಭಾರತದ ಸಮಾಜವಾದಿ ಹೋರಾಟದ ಅಸ್ತ್ರವನ್ನಾಗಿ ಮಾರ್ಪಡಿಸುವಾಗ, ಅದರಲ್ಲಿನ ಧಾರ್ಮಿಕ ಅಂಶ ಬಹುತೇಕ ಮಾಯವಾಗಿ ಕ್ರೋಧವೇ ಮೇಲುಗೈ ಪಡೆಯಿತೇ? ಈ ಮಾರ್ಪಾಟಿನಲ್ಲಿ

ರೂಪುಗೊಂಡ ಧರಣಿ, ಘೇರಾವೋ, ಬಂದ್ ಮುಂತಾದ ಪ್ರತಿಭಟನೆಯ ಅಸ್ತ್ರಗಳು ಎಷ್ಟರಮಟ್ಟಿಗೆ ಜನತೆಯ ವಿಶ್ವಾಸ ಗಳಿಸಲು ಸಾಧ್ಯವಾಯಿತು?

ಸಮಾಜವಾದವು ಮಾರ್ಕ್ಸ್‌ವಾದದ ಇಲ್ಲವೇ ಬಂಡವಾಳವಾದದ ಪರಿಷ್ಕೃತ ರೂಪವಾಗಿ ಕಾಣಿಸಿಕೊಂಡು, ತನ್ನದೇ ಎನ್ನಬಹುದಾದ ಸ್ಪಷ್ಟ ಚಹರೆಯನ್ನು ಪಡೆದುಕೊಳ್ಳುವಲ್ಲಿ ಸೋಲುತ್ತಿರುವ ಬಗ್ಗೆ ಲೋಹಿಯಾ ಅನೇಕ ಬಾರಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಎಚ್ಚರಿಸಿದ್ದರು. ಆದರೆ ಲೋಹಿಯಾ ಕಾರ್ಯಕ್ರಮಗಳ ಮೂಲಕವಾದರೂ ಅದು ಅಂತಹ ಸ್ಪಷ್ಟ ಚಹರೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಯಿತೇ? ಇಂತಹ ಚಹರೆಗೆ ಮೂಲ ಆಧಾರವಾಗಿ ಅವರು ಪ್ರತಿಪಾದಿಸಿದ ಸಣ್ಣ ಯಂತ್ರ ಘಟಕ ತಂತ್ರಜ್ಞಾನ ಮತ್ತು ದಿನಬಳಕೆ ವಸ್ತುಗಳ ಆಧುನೀಕರಣದ ಮೇಲಿನ ನಿಯಂತ್ರಣ, ಎಷ್ಟರಮಟ್ಟಿಗಿನ ವಾಸ್ತವಿಕ ಪ್ರಜ್ಞೆಯಿಂದ ಕೂಡಿದುದು? ಮನುಷ್ಯನ ಚಿತ್ತವೃತ್ತಿಯ ನಿಯಂತ್ರಣ ಮಾಡದೇ ಇದು ಸಾಧ್ಯವಾದೀತೇ? ಸಾಗರಕ್ಕೆ ಅಣೆಕಟ್ಟು ಕಟ್ಟುವಂತಹ ಈ ಪ್ರಯತ್ನಕ್ಕೆ, ಸಮಾಜವಾದಿ ಆಂದೋಲನ ಎಷ್ಟರಮಟ್ಟಿಗಿನ ಸಿದ್ಧತೆ ಕೈಗೊಂಡಿತ್ತು? ಇದಕ್ಕೆಲ್ಲ ಗಾಂಧೀಜಿ ನಿರ್ಮಿಸಿದ್ದ ಸರಳ ಜೀವನ, ಉನ್ನತ ಚಿಂತನದ ಸ್ಥೂಲ ವಾತಾವರಣವೇ ಸಾಕು ಎಂದು ಅದು ಮುಗ್ಧವಾಗಿ ನಂಬಿತ್ತೆ?

ಲೋಹಿಯಾ ತಾವು ಕಟ್ಟಿದ್ದ ಆಂದೋಲನ ಹೊರಲಾಗದಂತಹ ಆದರ್ಶಗಳನ್ನು ಅದರ ತಲೆಯ ಮೇಲೆ ಇಟ್ಟಿದ್ದರು. ಹಾಗಾಗಿಯೇ ಲೋಹಿಯಾ ಸಮಾಜವಾದ ಹೊರಗೆ ನಿಂತು ನೋಡಿದರೆ ಆಕರ್ಷಕವಾಗಿ ಕಾಣುತ್ತದೆ. ಒಳಹೊಕ್ಕರೆ ತಲೆಭಾರ ಶುರುವಾದಂತೆನಿಸುತ್ತದೆ. ದೊಡ್ಡ ತಾತ್ವಿಕರಾಗಿದ್ದ ಲೋಹಿಯಾ ವಸ್ತು ಮತ್ತು ಪ್ರಜ್ಞೆ, ಕ್ರೋಧ ಮತ್ತು ಕರುಣೆ, ವ್ಯಕ್ತಿ ಮತ್ತು ಸಮಾಜ, ಜಗತ್ತು ಮತ್ತು ರಾಷ್ಟ್ರ ಅನ್ನ ಮತ್ತು ಸ್ವಾತಂತ್ರ್ಯ ಮುಂತಾದ ದ್ವಂದ್ವಗಳನ್ನು ಒಪ್ಪದವರು. ಅವುಗಳನ್ನು ತಮ್ಮ ಸೂಕ್ಷ್ಮ ಚಿಂತನೆಯ ಮೂಲಕ ಏಕತ್ರಗೊಳಿಸಿ ಸಮಾಜವಾದಿ ಆಂದೋಲನದ ತಾತ್ವಿಕತೆ ಕಟ್ಟಿದವರು. ಆದರೆ ಈ ತಾತ್ವಿಕತೆಯ ಸೂಕ್ಷ್ಮತೆಯನ್ನು ಜನಸ್ತೋಮ ಅರಿಯುವ ಬಗೆ ಹೇಗೆ? ಹಾಗಾಗಿಯೇ ಅವರ ಅನೇಕ ತತ್ವ-ಕಾರ್ಯಕ್ರಮಗಳು ಸಮಾಜವಾದಿ ದೃಷ್ಟಿ-ಕೇಂದ್ರವನ್ನು ಕಳೆದುಕೊಂಡು, ಪರಿಣಾಮದಲ್ಲಿ ಚದುರಿಹೋದವು. ಅವರ ಜಾತಿ ವಿನಾಶ ಆಂದೋಲನ, ಬ್ರಾಹ್ಮಣ ವಿರೋಧಿ ಆಂದೋಲನವಾಗಿ ಚದುರಿಹೋದದ್ದು ಹೀಗೇ. ಹಾಗೆ ಅವರ ವಿಶೇಷ ಪ್ರಾಶಸ್ತ್ಯ ತತ್ವ, ಹಿಂದುಳಿದ ಜಾತಿವಾದಕ್ಕೆ ದಾರಿ ಮಾಡಿಕೊಟ್ಟು ಸಮಾಜವಾದದ ರುಚಿಯನ್ನೇ ಕೆಡಿಸಿದೆ. ಆಡಳಿತ ವಿಕೇಂದ್ರೀಕರಣ, ಅಧಿಕಾರ ಹಾಗೂ ಸಂಪನ್ಮೂಲಗಳನ್ನು ಹರಿದು ತಿನ್ನುವ ವ್ಯವಸ್ಥೆಯಾಗಿ ಮಾರ್ಪಾಡಾಗಿದೆ; ಜಾಗತಿಕ ಸರ್ಕಾರದ ಪರಿಕಲ್ಪನೆ, ಜಾಗತೀಕರಣದಲ್ಲಿ ಕೊನೆಗೊಂಡಿದೆ. ಇನ್ನು ಬಾಷಾ ನೀತಿ, ಜಾಗತೀಕರಣದ ಹೊರ ಹೊಡೆತಗಳನ್ನೂ ತಾಳಾಗದಷ್ಟು ದುರ್ಬಲವಾಗಿ ಹೋಗಿದೆ; ಇಂಗ್ಲೀಷ್ ಇಲ್ಲದೆ ಭಾರತ ಬೆಳೆಯದು ಎನ್ನುವ ವಾತಾವರಣ ನಿರ್ಮಾಣವಾಗಿದೆ!

ಹಾಗಾದರೆ ಲೋಹಿಯಾ ಸಮಾಜವಾದಕ್ಕೆ ಭವಿಷ್ಯವಿಲ್ಲವೇ? ಆ ತೀರ್ಮಾನಕ್ಕೆ ಬರುವುದಾದರೆ ಈವರೆಗಿನ ಎಲ್ಲ ಚರ್ಚೆ-ವಿವೇಚನೆಯ ಹಿಂದಿನ ಉತ್ಸಾಹವೇ ಅರ್ಥಹೀನವಾದೀತು. ಹಾಗೇ ಸಮಾಜವಾದಿ ಆಂದೋಲನದಿಂದ ಈವರೆಗೆ ನಾವು ಪಡೆದಿರುವುದನ್ನೆಲ್ಲ ಅಲ್ಲಗಳೆಯುವ ಅಚಾರಿತ್ರಿಕವಾದ ನಿಲುವಾದೀತು. ಸಮಾನತೆ, ಮನುಷ್ಯ

ನಾಗರೀಕತೆಯ ಚಿರಂತನ ತುಡಿತ. ಲೋಹಿಯಾ ತಮ್ಮ ಕಾಲಕ್ಕೆ ಪ್ರಸ್ತುತವೆನಿಸಿದ ಸಮಾನತೆಯ ತತ್ವವೊಂದನ್ನು ರೂಪಿಸಿದರು. ಆ ತತ್ವ ಇಂದೂ ನಮ್ಮ ಚರ್ಚೆಯ ಆಸಕ್ತಿ ಕೇಂದ್ರವಾಗಿದ್ದರೆ, ಅದರಲ್ಲೇನೋ ಅಮೂಲ್ಯವಾದದ್ದಿರಲೇಬೇಕು. ಆದುದರಿಂದ ಅದನ್ನು ಶೋಧಿಸಿ, ಪುನರ್ರೂಪಿಸುವ ಜವಾಬ್ದಾರಿ ನಮ್ಮದು. ಈ ಸಂಬಂಧ ನಾವು ಅವರು ಪ್ರತಿಪಾದಿಸಿದ ತಂತ್ರಜ್ಞಾನ, ಜಾತಿ, ಭಾಷೆ ಮತ್ತು ವಿಕೇಂದ್ರೀಕರಣ ನೀತಿಗಳನ್ನು, ಈವರೆಗಿನ ನಮ್ಮ ಅನುಭವಗಳ ಬೆಳಕಿನಲ್ಲಿ ಪುನರ್ರೂಪಿಸಿ ಪರಸ್ಪರ ಜೋಡಿಸುವ ಅಗತ್ಯವಿದೆ.

ಜಾಗತೀಕರಣ ಸೃಷ್ಟಿಸಿರುವ ವೈವಿಧ್ಯಮಯ ಪದಾರ್ಥ ಪ್ರಪಂಚದ ಮಧ್ಯೆ; ಸಮಾಜವಾದ ಪ್ರತಿಪಾದಿಸಿದ್ದ 'ಸರಳ ಸಭ್ಯ ಜೀವನ ಮಟ್ಟ'ದ ಮಾದರಿ ತನ್ನ ಅರ್ಥ – ಆಕರ್ಷಣೆಗಳೆರಡನ್ನೂ ಕಳೆದುಕೊಂಡು, ಪ್ರಗತಿ ವಿರುದ್ಧವಾದ ಸ್ಥಗಿತತೆಯ ಮಾದರಿ ಎನ್ನಿಸಿಕೊಂಡಿದೆ. ಕಳೆದ ೨೫–೩೦ ವರ್ಷಗಳಲ್ಲಿ ಜಾಗತಿಕ ರಾಜಕಾರಣಕ್ಕೆ ಸಮರ್ಪಕವಾಗಿ ಪ್ರತಿಸ್ಪಂದಿಸದೇ ಹೋದ ಸಮಾಜವಾದಿ ರಾಜಕಾರಣದ ಜಡತೆಯೇ ಇದಕ್ಕೆ ಕಾರಣವಾಗಿದೆ. ಆದುದರಿಂದ ಸಮಾಜವಾದೀ ಆರ್ಥಿಕ ನೀತಿಯನ್ನು ಮೀರಿ ಬೆಳೆದು ನಿಂತಿರುವ ಇಂದಿನ ಜಾಗತಿಕ ಆರ್ಥಿಕ ನೀತಿಯ ಸಂದರ್ಭದಲ್ಲಿ, ಹಳೆಯದೇ ಮಾದರಿಯ ಸರಳ–ಸಭ್ಯ ಜೀವನ ಮಟ್ಟದ ಮಂತ್ರ ಜಪಿಸುವುದು ಹಠ ಮಾತ್ರವಾಗುತ್ತದೆ. ಈ ದೃಷ್ಟಿಯಿಂದ ಸಮಾಜವಾದದ ಆರ್ಥಿಕ ನೀತಿಯನ್ನು ಸಮಕಾಲೀನಗೊಳಿಸಿದ ಕಡೆ ಗಮನ ಹರಿಸಿ, ಖಾಸಗಿ ಬಂಡವಾಳ ಹಾಗೂ ತಂತ್ರಜ್ಞಾನ ಕುರಿತ ನಿಲುವನ್ನು ಪುನರ್ ಪರಿಶೀಲನೆಗೆ ಒಳಪಡಿಸಬೇಕಾಗಿದೆ. ಅಂದರೆ 'ಸರಳ ಸಭ್ಯ ಜೀವನ ಮಟ್ಟ'ವನ್ನು ಬದಲಾದ ಪರಿಸ್ಥಿತಿಯಲ್ಲಿ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ನಿರೂಪಿಸಬೇಕಿ. ಅದಕ್ಕೆ ಸಂಗತವಾಗಿರುವ ಹಾಗೆ ತನ್ನ ಆರ್ಥಿಕ ನೀತಿಯನ್ನು ಮರು ನಿರೂಪಿಸಬೇಕಿದೆ.

ಜಾತಿ ವಿನಾಶ ಪರಿಕಲ್ಪನೆ ಇಂದು ಜಾತಿ ಸಮಾನತೆಯ ಪ್ರತಿಪಾದನೆಗೆ ಬಂದು ನಿಂತಿದೆ. ಇದಕ್ಕೆ ಮತ್ತೆ ಸಮಾಜವಾದಿ ಚಳುವಳಿಯ ಜಡತೆಯೇ ಕಾರಣವಾಗಿದೆ. ಸಾಮಾಜಿಕ ಹಿಂದುಳಿದಿರುವಿಕೆಯ ಪರಿಕಲ್ಪನೆಯನ್ನು ಅದರ ಮಾನದಂಡಗಳನ್ನು ಸಮಕಾಲೀನವಾಗಿ ಪರಿಷ್ಕರಿಸುವ ಮೂಲಕ ಈ ಜಡತೆಯನ್ನು ನೀಗಿ ವಿಶೇಷ ಪ್ರಾಶಸ್ತ್ಯ ತತ್ವವನ್ನು ಸಮಕಾಲೀನ ಪರಿಸ್ಥಿತಿಗನುಗುಣವಾಗಿ ಪ್ರಸ್ತುತಗೊಳಿಸ ಬೇಕಿದೆ. ಖಾಸಗಿ ಬಂಡವಾಳದ ನಿಗಮಗಳು ರಾಷ್ಟ್ರಾದ್ಯಂತ ಸಮಾನಾಂತರ ಸರ್ಕಾರಗಳಂತೆ ಕಾರ್ಯ ನಿರ್ವಹಿಸುತ್ತಾ ಪರೋಕ್ಷವಾಗಿ ಪ್ರಜಾಪ್ರಭುತ್ವದ ಕಲ್ಪನೆಗೆ ಸವಾಲೊಡುತ್ತಿರುವ ಇಂದಿನ ಸಂದರ್ಭದಲ್ಲಿ, ಸ್ವಸಹಾಯ ಗುಂಪುಗಳ ಸಂಘಟನೆಯ ಮೂಲಕ ಸಹಕಾರಿ ಆಂದೋಲನವನ್ನು ಪುನಾರಚಿಸಿ, ಸಾಮಾಜಿಕ ಒಡೆತನದ ಪರಿಕಲ್ಪನೆಗೆ ಜೀವ ತುಂಬಿ, ಸ್ಥಳೀಯ ಸರ್ಕಾರಗಳನ್ನು ಬಲಗೊಳಿಸಬೇಕಿದೆ. ಇದು ಜನಭಾಷಾ ಮಾಧ್ಯಮದ ಶಿಕ್ಷಣದ ಮೂಲಕ ಸಿದ್ಧಗೊಂಡ ಜನತಾ ಸಂಘಟನೆಯಿಂದ ಮಾತ್ರ ಸಾಧ್ಯವಾದ್ದರಿಂದ, ಇಂದಿನ ಅಗತ್ಯಗಳೀಗನುಗುಣವಾಗಿ ವ್ಯಾವಹಾರಿಕ ಇಂಗ್ಲಿಷ್ ಕಲಿಕೆಗೂ ಅವಕಾಶವಿರುವ ಏಕರೂಪದ ಶಿಕ್ಷಣ ನೀತಿಯನ್ನು ಸಮಾಜವಾದಿ ಆಂದೋಲನ ಪ್ರತಿಪಾದಿಸಬೇಕಿದೆ.

ಕಿಷನ್ ಪಟ್ನಾಯಕ್ ಹೇಳುತ್ತಿದ್ದಂತೆ, ಇದು ಸಮಾಜವಾದಿಗಳಿಗೆ ಧ್ಯಾನದ ಕಾಲ, ದೊಡ್ಡ ಹೋರಾಟವೊಂದಕ್ಕೆ ಶಕ್ತಿ ಸಂಚಯನ ಮಾಡಿಕೊಳ್ಳುವ ಕಾಲ. ಆದರೆ ಈ ಹೋರಾಟ ಈವರೆಗಿನ ಸಮಾಜವಾದಿ ಹೋರಾಟದಂತೆ ಹೊರ ಹೋರಾಟವಾಗದೆ,

ಒಳ ಹೋರಾಟವಾಗಿರಬೇಕಾಗಿದೆ. ಏಕೆಂದರೆ ಈ ಹೋರಾಟವಿರುವುದು ನಮ್ಮ ಮೈಮನಗಳೆರಡನ್ನೂ ನಾಶ ಮಾಡಹೊರಟಿರುವ ಜಾಗತೀಕರಣದ ವಿರುದ್ಧ. ಜಾಗತೀಕರಣ ಮತ್ತೇನೂ ಆಗಿರದೆ, ಲೋಹಿಯಾ ಯಾವುದನ್ನು ಸಾಮ್ರಾಜ್ಯಶಾಹಿ ಶೋಷಣೆಯ ಸಾಧನ ಎಂದು ಕರೆದರೋ ಆ ಬಂಡವಾಳವಾದದ ಅಂತಿಮ ರೂಪವಾಗಿದೆ. ಹಾಗಾಗಿ ಝಗಝಗಿಸುವ ಪದಾರ್ಥ ಪ್ರಪಂಚದ ಆಕರ್ಷಣೆ ಒಡ್ಡಿ, ಅತ್ಯಂತಿಕವಾಗಿ ಜಗತ್ತನ್ನೇ ಒಂದು ಷೇರು ಬಂಡವಾಳ ಉದ್ಯಮವನ್ನಾಗಿ ಪರಿವರ್ತಿಸಿ, ಒಂದು ನಿರ್ದಿಷ್ಟ ದಕ್ಷತೆಯನ್ನು ಮಾತ್ರ ರೂಢಿಸಿಕೊಳ್ಳುವಲ್ಲಿ ಯಶಸ್ವಿಯಾಗುವ ಜನ ಮಾತ್ರ ಬದುಕುವ ಹಕ್ಕುಳ್ಳವರು ಎಂಬ ತನ್ನ ತತ್ವವನ್ನು ಸತ್ಯದಂತೆ ಪ್ರತಿಪಾದಿಸುತ್ತಿರುವ ಜಾಗತೀಕರಣದ ವಿರುದ್ಧ ಹೋರಾಟ, ಪ್ರಾಥಮಿಕವಾಗಿ ವೈಯಕ್ತಿಕ ಎಚ್ಚರದ ಹೋರಾಟವೇ ಆಗಿರಬೇಕು. ನಮ್ಮ ಆದ್ಯತೆಗಳನ್ನು ಔಚಿತ್ಯ ಮೀರದಂತೆ ಎಚ್ಚರದಿಂದ ರೂಪಿಸಿಕೊಂಡು, ಬದುಕಿನ ಶುಚಿ ರುಚಿಗಳನ್ನು ಕಾಯ್ದುಕೊಳ್ಳುವ ಹೋರಾಟವಿದು. ಈ ಹೋರಾಟದ ಮೂಲಕ ನಾವು ಸಮಾಜವಾದದ ಹೊಸ ನೀತಿ ಸಂಹಿತೆಯನ್ನೂ ರೂಪಿಸಿಕೊಳ್ಳಬಹುದಾಗಿದೆ.

ಜಗತ್ತಿನಾದ್ಯಂತ ಈ ಜಾಗತೀಕರಣ ವಿರುದ್ಧ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನದ ಮೆಲುದನಿ ಈಗಾಗಲೇ ಕೇಳಿಸುತ್ತಿದೆ. ಲೋಹಿಯಾ ಕಲ್ಪಿಸಿಕೊಟ್ಟ ಹೊಸ ಸಮಾಜವಾದಿ ಜಗತ್ತಿನ ಪ್ರತಿಧ್ವನಿಯಂತಿರುವ ಈ ಇನ್ನೊಂದು ಜಗತ್ತಿನ ಆದ್ಯತೆಗಳನ್ನು ನಿರ್ಧರಿಸುವ ಪ್ರಕ್ರಿಯೆಯಲ್ಲಿ ಭಾರತದ ಸಮಾಜವಾದಿಗಳು ಭಾಗವಹಿಸುವ ಮೂಲಕ ಈ ಹೋರಾಟವನ್ನು ಆರಂಭಿಸಬಹುದು. ಇದು ಸದಾ ಏರುತ್ತಲೇ ಹೋಗುವ ಜೀವನಮಟ್ಟದ ಅನಾಹುತಕಾರಿ ನಾಗರೀಕತೆ ವಿರುದ್ಧ ಲೋಹಿಯಾ ನಿರೂಪಿಸಿದ ಒಂದು ಸಭ್ಯ ಜಿವನ ಮಟ್ಟವನ್ನು ಬದಲಾದ ಸಂದರ್ಭದಲ್ಲಿ ಪುನರನ್ವೇಷಿಸಿಕೊಳ್ಳುವ ಹೊಸ ನಾಗರೀಕತೆಯ ಪ್ರಯೋಗವಾಗಿಯೂ ಪರಿವರ್ತಿತವಾಗಬಹುದು. ಆದರೆ ಇದೆಲ್ಲ ಸಾಧ್ಯವಾಗುವುದು, ಹರಡಿ ಹಂಚಿ ಹೋಗಿರುವ ಸಮಾಜವಾದಿಗಳು ತಮ್ಮ ಚಟುವಟಿಕೆಗಳಿಗಾಗಿ, ಮೊದಲ ಉಪ ಕ್ರಮವಾಗಿ ಒಂದು ಸಮನ್ವಯ ಸಮಿತಿಯನ್ನು ರೂಪಿಸಿಕೊಂಡಾಗ ಮಾತ್ರ. ರಾಜ್ಯಮಟ್ಟದಲ್ಲಾದರೂ ಇದು ಸಾಧ್ಯವಾಗಬೇಕು. ಇಲ್ಲದೇ ಹೋದರೆ ನಾವು ಸಮಾಜವಾದದ ಮಾತಾಡುವುದೇ ಆತ್ಮದ್ರೋಹದ ಕೆಲಸವಾಗುತ್ತದೆ.

ಕರ್ನಾಟಕದಲ್ಲಿ ಸಮಾಜವಾದಕ್ಕೆ ಗೋಪಾಲಗೌಡರಂತಹ ಧೀರರ ನಾಯಕತ್ವವಿತ್ತು. ಆ ಧೀರತೆಯನ್ನು ಕರ್ನಾಟಕದ ಸಮಾಜವಾದಿಗಳು ಸಾಮೂಹಿಕವಾಗಿ ಪ್ರದರ್ಶಿಸುವ ಕಾಲವೀಗ ಬಂದಿದೆ. ಹಳೆಯ ಶೈಲಿಯಲ್ಲಿ ಚಳುವಳಿ ಕಟ್ಟುವ ಅಗತ್ಯವಾಗಲೀ, ಶಕ್ತಿಯಗಲೀ ಸದ್ಯಕ್ಕೆ ಸಮಾಜವಾದಿಗಳಿಗೆ ಇಲ್ಲವಾದರೂ, ತತ್ವ ದ ನೆಲೆಯಲ್ಲಾದರೂ ನಿರ್ದಿಷ್ಟವಾಗಿ ರಾಷ್ಟ್ರಮಟ್ಟದ ಮತ್ತು ಸಾರ್ವತ್ರಿಕವಾಗಿ ಜಗತ್ತಿನ ರಾಜಕಾರಣಕ್ಕೆ ಪ್ರತಿಸ್ಪಂದಿಸುವ ಮೂಲಕ ನಮ್ಮ ಬದುಕಿಗೆ ಒಂದು ಅರ್ಥವನ್ನೂ, ಬೆಡಗನ್ನೂ ನೀಡಿರುವ ಈ ಚಳುವಳಿಯ ಕನಸನ್ನು ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿಯನ್ನಾದರೂ ನಿರ್ವಹಿಸಿದಂತಾಗುತ್ತದೆ. ಸಮಾಜವಾದಿ ಆಂದೋಲನವನ್ನು ಕಾಲಕಾಲಕ್ಕೆ ವಿಮರ್ಶಿಸಿ, ಉಳಿಸಿ ಬೆಳೆಸುವಲ್ಲಿ ಎಚ್ಚರ ತಪ್ಪಿದ ಸಮಾಜವಾದಿಗಳು, ಈಗ ನಿರ್ವಹಿಸಲೇಬೇಕಾದ ಜವಾಬ್ದಾರಿ ಇದು.

(ಇದೇ ಲೇಖಕರ 'ಲೋಹಿಯಾ ಸಮಾಜವಾದ ದರ್ಶನ' ಪುಸ್ತಕದಿಂದ)

ಮರಳಿ ಬರಲಿದೆ ಸಮಾಜವಾದ!

೨೦೦೭ ಮಾರ್ಚ್ ೨೩, ಡಾ॥ ಮನೋಹರ ಲೋಹಿಯಾ ಅವರ ೯೭ನೇ ಹುಟ್ಟು ಹಬ್ಬ. ಲೋಹಿಯಾ ನಿಧನರಾಗಿ ಈಗ್ಗೆ ೪೦ ವರ್ಷಗಳಾಗುತ್ತಾ ಬಂದರೂ, ಲೋಹಿಯಾ ಎಂಬ ಹೆಸರು ಈಗಲೂ ಕರ್ನಾಟಕದ ಸಾಮಾನ್ಯ ಜನತೆಗೂ – ಅವರು ಕರ್ನಾಟಕದವರಲ್ಲವಾದರೂ–ಚಿರಪರಿಚಿತವಾದ ಹೆಸರಾಗಿ ಉಳಿದಿದೆ. ಇದಕ್ಕೆ ಕಾರಣ, ಕರ್ನಾಟಕದ ಅನೇಕ ಪ್ರಮುಖ ರಾಜಕಾರಣಿಗಳು (ದಿ. ಶಾಂತವೇರಿ ಗೋಪಾಲಗೌಡ, ದಿ. ಜೆ.ಎಚ್. ಪಟೇಲ್, ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಕೊಣಂದೂರು ಲಿಂಗಪ್ಪ, ಎಂ.ಪಿ. ಪ್ರಕಾಶ್, ಸಿದ್ಧರಾಮಯ್ಯ, ವೈಜನಾಥ ಪಾಟೀಲ, ಬಿ.ಆರ್. ಪಾಟೀಲ ಇತ್ಯಾದಿ), ಪ್ರತಿಭಾವಂತ ಲೇಖಕ– ಕಲಾವಿದ–ಪತ್ರಕರ್ತರು (ದಿ. ಪಿ. ಲಂಕೇಶ್, ದಿ. ಬೆಸಗರಹಳ್ಳಿ ರಾಮಣ್ಣ, ದಿ. ಶ್ರೀಕೃಷ್ಣ ಆಲನಹಳ್ಳಿ, ದಿ. ಖಾದ್ರಿ ಶಾಮಣ್ಣ, ದಿ. ಕೆ.ವಿ. ಸುಬ್ಬಣ್ಣ, ಯು.ಆರ್. ಅನಂತಮೂರ್ತಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪ. ಮಲ್ಲೇಶ್, ದೇವನೂರ ಮಹಾದೇವ, ರಾಜಶೇಖರ ನೀರಮಾನ್ವಿ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರ, ಕೆ.ಟಿ. ಶಿವಪ್ರಸಾದ್, ಟಿ.ಎನ್. ಸೀತಾರಾಂ, ರಾಜಶೇಖರ ಕೋಟಿ ಇತ್ಯಾದಿ) ಹಾಗೂ ಪ್ರಖ್ಯಾತ ಸಾಮಾಜಿಕ ಚಳುವಳಿಗಾರರು (ದಿ. ಸಿ.ಜಿ.ಕೆ. ರೆಡ್ಡಿ, ದಿ. ಪ್ರೊ॥ ಎಂ.ಡಿ. ನಂಜುಂಡಸ್ವಾಮಿ, ದಿ. ಎನ್.ಡಿ. ಸುಂದರೇಶ್, ಕಡಿದಾಳು ಶಾಮಣ್ಣ, ರವಿವರ್ಮ ಕುಮಾರ್ ಇತ್ಯಾದಿ) ಲೋಹಿಯಾವಾದಿಗಳೆಂದೇ ಹೆಸರಾದವರು, ಹಾಗಾಗಿಯೇ, ಇವರಲ್ಲಿ ಕೆಲವರು ದಾರಿ ತಪ್ಪಿದಾಗಲೆಲ್ಲ, ಲೋಹಿಯಾವಾದಿ ಎನಿಸಿಕೊಂಡೂ ಹೀಗೆ ಮಾಡುವರಲ್ಲ ಎಂದು ಜನರಿಂದ ಆಕ್ಷೇಪಣೆ, ಟೀಕೆ ಹಾಗೂ ಛೀಮಾರಿ ಎದುರಿಸಿದವರು! ಈಚಿನ ದಿನಗಳಲ್ಲಿ ಈ ಲೋಹಿಯಾವಾದಿಗಳು ಹೀಗೆ ಛೀಮಾರಿ ಹಾಕಿಸಿಕೊಳ್ಳುವ ಮೂಲಕವೇ, ಲೋಹಿಯಾ ಹೆಸರನ್ನು ಕರ್ನಾಟಕದ ಜನಮನದಲ್ಲಿ ಉಳಿಸುತ್ತಾ ಹೋಗುತ್ತಿರುವುದು ವಿಪರ್ಯಾಸವೆನಿಸುವುದಾದರೂ, ಇದರ ಹಿಂದೆ ಲೋಹಿಯಾ ಬದುಕಿ ಪ್ರತಿನಿಧಿಸುತ್ತಿದ್ದ ಮೌಲ್ಯಗಳ ಬಗ್ಗೆ ಜನಮನದಲ್ಲಿ ಇನ್ನೂ ಉಳಿದಿರುವ ಪ್ರೀತಿ–ಗೌರವಗಳನ್ನು ನಾವು ಗಮನಿಸದೇ ಇರಲಾಗದು.

ಮಾರ್ಚ್ ೨೩, ಕ್ರಾಂತಿವೀರ ಭಗತ್ ಸಿಂಗ್‌ರನ್ನು ಬ್ರಿಟಿಷ್ ಸರ್ಕಾರ ನೇಣು ಹಾಕಿದ ದಿನ. ಹಾಗಾಗಿ, ಲೋಹಿಯಾ ತಾವು ಬದುಕಿರುವವರೆಗೂ ಅಂದು ತಮ್ಮ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರಲಿಲ್ಲ. ಹಾಗೂ ತಮ್ಮ ಅನುಯಾಯಿಗಳು ಆಚರಿಸಲೂ ಅವಕಾಶ ನೀಡುತ್ತಿರಲಿಲ್ಲ. ಆದರೆ, ತಮ್ಮ ೫೭ನೇ ವಯಸ್ಸಿನಲ್ಲಿ ತೀವ್ರ ಅಸ್ವಸ್ಥರಾದಾಗ, ದೇಶದ ಸಾಮಾನ್ಯ ಜನತೆಗೆ ಪ್ರವೇಶವಿರುವಂತಹ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆಯುವ ಹಠ ಮಾಡಿ, ಈಗ ರಾಮ ಮನೋಹರ ಲೋಹಿಯಾ ಆಸ್ಪತ್ರೆ ಎಂದೇ ಹೆಸರಾಗಿರುವ

ಸರ್ಕಾರಿ ಆಸ್ಪತ್ರೆ ಸೇರಿ, ಅವರು ೧೯೬೭ರ ಅಕ್ಟೋಬರ್ ೧೨ ರಂದು ನಿಧನರಾದ ನಂತರ, ಪ್ರತಿ ಮಾರ್ಚ್ ೨೩ರಂದು ರಾಷ್ಟ್ರಾದ್ಯಂತ ಅನೇಕ ಕಡೆ ಮತ್ತು ಕರ್ನಾಟಕದಲ್ಲಿ ಒಂದಲ್ಲ ಒಂದು ಕಡೆ ಅವರ ಹುಟ್ಟು ಹಬ್ಬದ ನೆಪದಲ್ಲಿ ಲೋಹಿಯಾ ನೆನಪು ಕಾರ್ಯಕ್ರಮ ನಡೆಯುತ್ತಲೇ ಬಂದಿದೆ. ದೇಶದ್ಯಂತ ಹರಡಿ ಹೋಗಿದ್ದ ತನ್ನ ಅನುಯಾಯಿಗಳ ಹೊರತಾಗಿ, ತನ್ನದೆನ್ನುವ ಒಂದು ಕುಟುಂಬವನ್ನಾಗಲಿ, ತಲೆಯ ಮೇಲೆ ಒಂದು ಸೂರನ್ನಾಗಲಿ, ಒಂದಿ ನಿರ್ದಿಷ್ಟ ಅಂಚೆ ವಿಳಾಸವನ್ನಾಗಲಿ ಅಥವಾ ಒಂದು ಬ್ಯಾಂಕ್ ಖಾತೆಯನ್ನಾಗಲಿ ಹೊಂದಿರದಿದ್ದ ಈ ಸಮಾಜವಾದಿ ಹೋರಾಟಗಾರನ ಬಗ್ಗೆ ಇನ್ನೂ ಹೀಗೆ, ಏಕೆ ಆಕರ್ಷಣೆ ಉಳಿದಿದೆ? ಅದೂ, ಸಮಾಜವಾದದ ಹೆಸರೇ ಹಿನ್ನಲೆಗೆ ಸರಿದುಹೋಗುತ್ತಿರುವ ಈ ಕಾಲದಲ್ಲಿ? ಇನ್ನೇನು ರಾಜಕೀಯವಾಗಿ ನಿವೃತ್ತರಾದಂತೆಯೇ ಎಂದು ತೋರುತ್ತಿರುವ ಜಾರ್ಜ್ ಫರ್ನಾಂಡಿಸ್, ರಬಿರಾಯ್ ಹಾಗೂ ಜ್ಞಾನೇಶ್ವರ ಮಿಶ್ರರ ಹೊರತಾಗಿ ಅವರ ಪ್ರಮುಖ ಶಿಷ್ಯರೆಲ್ಲರೂ ಕಣ್ಮರೆಯಾಗಿದ್ದಾರೆ. ಆದರೂ, ಹೊಸ ಹೊಸ ತಲೆಮಾರುಗಳ ಜನ – ಅವರೆಷ್ಟು ಕಡಿಮೆ ಸಂಖ್ಯೆಯವರಾದರೂ – ಏಕೆ ಈ ಚಳುವಳಿಕಾರನ ಬಗ್ಗೆ ಪ್ರತಿ ವರ್ಷ ಸಮಾಜವಾದಿ ಸಮಾವೇಶಗಳನ್ನೋ, ಅಧ್ಯಯನ ಶಿಬಿರಗಳನ್ನೋ, ಪುಸ್ತಕ ಬಿಡುಗಡೆ ಸಮಾರಂಭಗಳನ್ನೋ ಆಯೋಜಿಸುವ ಮೂಲಕ ಇನ್ನೂ ಆಸಕ್ತಿ ತಳೆಯುತ್ತಿದ್ದಾರೆ? ಅದೂ, ಹೋರಾಟ, ಚಳುವಳಿ ಎಂಬುವವೆಲ್ಲ ಇತಿಹಾಸಕ್ಕೆ ಸೇರಿದ ವಿದ್ಯಮಾನಗಳೆಂದು ಹೇಳುತ್ತ, ಇನ್ನು ಮುಂದೆ ಇತಿಹಾಸವಿಲ್ಲವೆಂದು ಏಕಪಕ್ಷೀಯವಾಗಿ ಇತಿಹಾಸದ ಸಾವನ್ನು ಘೋಷಿಸುತ್ತಿರುವ ಜಾಗತೀಕರಣದ ಈ ದಿನಗಳಲ್ಲಿ?

ಕಾರಣವಿದೆ. ಈಗ ಜಗತ್ತಿನಾದ್ಯಂತ ಜಾಗತೀಕರಣದ ವಿವಿಧ ಆವೃತ್ತಿಗಳು ಕಾರ್ಯನಿರತವಾಗಿವೆ. ಅಭಿವೃದ್ಧಿಶೀಲ ದೇಶಗಳಲ್ಲಿ ನವ ಶೀಮಂತಿಕೆಯ ಹಪಾಹಪಿಗೆ ಸಿಕ್ಕಿರುವ ಹೊಸ ಮಧ್ಯಮ ವರ್ಗದ ದಲ್ಲಾಳಿತನದಲ್ಲಿ, ಅವು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಯೂ, ಬಡವರನ್ನು ಮತ್ತಷ್ಟು ಬಡವರನ್ನಾಗಿಯೂ ಮಾಡುತ್ತಿರುವುದು ಈಗ ಎದ್ದು ಕಾಣತೊಡಗಿದೆ. ಜಾಗತೀಕರಣದ ಪರಿಣಾಮವಾಗಿ ಈಗ ೫೦೦ ಬಹುರಾಷ್ಟ್ರೀಯ ಕಂಪನಿಗಳು ಜಗತ್ತಿನ ಶೇ. ೭೦ರಷ್ಟು ವಾಣಿಜ್ಯವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿವೆ. ೩೭೫ ಶ್ರೀಮಂತ ಕುಟುಂಬಗಳು ಜಗತ್ತಿನ ಸಂಪತ್ತಿನ ಶೇ. ೪೦ ರಷ್ಟರ ಮೇಲೆ ಒಡೆತನ ಸಾಧಿಸಿವೆ. ಜಗತ್ತಿನ ಅರ್ಧದಷ್ಟು ಜನಸಂಖ್ಯೆ ಅಂತಾರಾಷ್ಟ್ರೀಯ ಬಡತನ ರೇಖೆ ಕೆಳಗೇ ಬದುಕುತ್ತಿದೆ. ಐದನೇ ಒಂದು ಭಾಗದ ಜನತೆ ದಿನವಹಿ ೪೦ ರೂ.ಗಳಿಗೂ ಕಡಿಮೆ ಆದಾಯದಲ್ಲಿ, ದಟ್ಟ ದಾರಿದ್ರ್ಯವನ್ನು ಎದುರಿಸುತ್ತಿದೆ. ಜಾಗತಿಕ ನಿರುದ್ಯೋಗ ದರ ಹಿಂದೆಂದಿಂಗಿಂತ ಕಡಿದಾಗಿ ಏರುತ್ತಿದೆ. ಇದರಿಂದಾಗಿ ಅಭಿವೃದ್ಧಿಗೊಂಡ ವೆಂದು ಹೇಳಲಾಗುವ ದೇಶಗಳಲ್ಲೂ, ವಲಸೆ ಹಾಗೂ ಹೊರ ಗುತ್ತಿಗೆ ಕಾನೂನುಗಳ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗಳು ಮತ್ತು ಜನಾಂಗೀಯ ಚಳುವಳಿಗಳ ರೂಪದಲ್ಲಿ ಸಾಮಾಜಿಕ ಅಶಾಂತಿ ಆರಂಭವಾಗಿದೆ. ಜಗತ್ತಿನಲ್ಲಿ ಹೆಚ್ಚುವರಿ ಆಹಾರೋತ್ಪಾದನೆ ಆಗುತ್ತಿದ್ದರೂ, ಏಳೂವರೆ ಕೋಟಿ ಮಕ್ಕಳು ಸರಿಯಾದ ಆಹಾರವಿಲ್ಲದೆ ವಿವಿಧ ರೋಗಗಳಿಗೆ ತುತ್ತಾಗಿ ಸಾಯುತ್ತಿದ್ದಾರೆ. ಹತ್ತು ಕೋಟಿ ಮಕ್ಕಳು ಶಾಲೆಯ ಮುಖವನ್ನೇ ಕಂಡಿಲ್ಲವೆಂದು ವಿಶ್ವ ಸಂಸ್ಥೆಯ ವರದಿಯೇ ಹೇಳುತ್ತಿದೆ.

ಇಂತಹ ಅಭಿವೃದ್ಧಿ ಆರ್ಥಿಕತೆಯಿಂದಾಗಿಯೇ, ಜಗತ್ತಿನ ವಾತಾವರಣದ ಶಾಖ ಒಂದೇ ಸಮನೆ ಏರುತ್ತಿದ್ದು (ಕಳೆದ ಐವತ್ತು ವರ್ಷಗಳಲ್ಲಿ ವಾತಾವರಣದ ಶಾಖದ ಏರಿಕೆ ಕಳೆದ ನೂರು ವರ್ಷಗಳ ಏರಿಕೆಗೆ ಹೋಲಿಸಿದರೆ ದುಪ್ಪಟ್ಟಾಗಿದೆ), ಅಕಾಲಿಕ ಹಾಗೂ ಹುಚ್ಚು ಮಳೆ, ಪ್ರವಾಹ, ಭೂಕುಸಿತ, ಕಡಲ ಕೊರೆತ ಹಾಗೂ ಉಬ್ಬರ ಮತ್ತು ಚಲಚರ ಜೀವಿಗಳ ಅನೇಕ ರೀತಿಯ ಸಂಕಷ್ಟಗಳಿಗೆ ಕಾರಣವಾಗಿದೆ. ಅಲ್ಲದೆ, ಜಗತ್ತಿನಲ್ಲಿ ಇಂದು ಮಾನವ ವಿಕಾಸದ ಇತಿಹಾಸದಲ್ಲಿಯೇ ಕಂಡರಿಯದ ಗತಿಯಲ್ಲಿ ಜೀವ ಪ್ರಭೇದಗಳು ನಾಶವಾಗುತ್ತಿವೆ. ಈ ಮೊದಲು, ಅಂದರೆ ಈರೋಪಿನ ಪುನರುಜ್ಜೀವನ ಯುಗದಿಂದಾರಂಭವಾದ ವೈಜ್ಞಾನಿಕ ಅವಿಷ್ಕಾರಗಳಿಂದ ಸ್ಫೂರ್ತಗೊಂಡ 'ಆಧುನಿಕ' ಎಂದು ಕರೆಯಲಾದ ಜೀವನ ದೃಷ್ಟಿ ಹಾಗೂ ಶೈಲಿಗಳು ಜಗತ್ತಿನಾದ್ಯಂತ ರೂಢಿಗೊಳ್ಳುವ ವರೆಗೆ; ಮಾನವ ಅಭಿವೃದ್ಧಿಗೆ ಸಿಕ್ಕಿ ಐದು ವರ್ಷಗಳಿಗೊಂದು ಜೀವ ಪ್ರಭೇದ ನಾಶವಾಗುತ್ತಿದ್ದರೆ, ಈಗ ದಿನವೊಂದಕ್ಕೆ ೧೦೦ ಪ್ರಭೇದಗಳು ನಾಶವಾಗುತ್ತಿವೆಯಂತೆ! ಅಪಾರ ಹಣದ ಬೆಂಬಲ ಪಡೆದ ಗೂಢಚರ್ಯೆ ಹಾಗೂ ರಾಜಕೀಯದ ಮೂಲಕ ಇತರ ಎಲ್ಲ ಅಭಿವೃದ್ಧಿ ಪರ್ಯಾಯಗಳ ವಿಶ್ವಾಸಾರ್ಹತೆಯನ್ನೂ ನಾಶ ಮಾಡಿರುವ ಈ ಮುಕ್ತ ಬಂಡವಾಳವಾದವು, ೧೯೮೯ರಲ್ಲಿ ಸೋವಿಯತ್ ಒಕ್ಕೂಟ ಕುಸಿದು ಬಿದ್ದ ನಂತರ, ಜನಪದ ವಿವೇಕದ ಬಹುಮುಖಿ ಜಗತ್ತನ್ನು ಸರ್ವಜ್ಞ ಗರ್ವದ ಏಕ ಸಂಸ್ಕೃತಿಯ ಆಡಳಿತಕ್ಕೆ ಒಳಪಡಿಸುವ ತನ್ನ ಜಾಗತಿಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಈ ಕಾರ್ಯಕ್ರಮದ ಅಂಗವಾಗಿ, ಈವರೆಗೆ ಜಗತ್ತು ಅನಿಷ್ಟಗಳೆಂದು ಭಾವಿಸುತ್ತಿದ್ದ ಮನುಷ್ಯ ಪ್ರವೃತ್ತಿಗಳಿಗೆ ಹೊಸ ಮಾನ್ಯತೆಯೂ, ಪಾವಿತ್ರ್ಯವೂ ದೊರಕತೊಡಗಿದೆ. ಈ ಪ್ರವೃತ್ತಿಗಳೆಂದರೆ, ಕೆಲವರ ಕೊನೆ ಮೊದಲಿಲ್ಲದ ಭೋಗಕ್ಕೆ ಎಡೆ ಮಾಡಿಕೊಡುತ್ತಿರುವ ಎಣೆಯಿಲ್ಲದ ಲೌಕಿಕ ಶ್ರೀಮಂತಿಕೆ; ಇದಕ್ಕೆ ಅಗತ್ಯವಾದ ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ರೂಪುಗೊಳ್ಳುತ್ತಿರುವ ಅನ್ಯ ಸಮಾಜಗಳ ಮೇಲಿನ ದುರಾಕ್ರಮಣದ ರಾಜಕಾರಣ; ಹಾಗೂ ಇಂತಹ ದುರಾಕ್ರಮಣಗಳನ್ನೆದುರಿಸಲು, ದುರಾಕ್ರಮಣಕ್ಕೊಳಗಾದ ಸಮುದಾಯಗಳು ತಮ್ಮ ಐಕ್ಯತೆಯನ್ನು ಪುನರ್‌ಸಂಘಟಿಸಿಕೊಳ್ಳಲು ಮತವನ್ನು ಬಳಸಿಕೊಳ್ಳುವ ಮೂಲಕ ಬೆಳೆಸುತ್ತಿರುವ ಮೂಲಭೂತವಾದದ ವಿವಿಧ ಅವತಾರಗಳು. ಇವೆಲ್ಲವೂ ಕ್ರಮವಾಗಿ ಮನುಷ್ಯನ ಅದಮ್ಯ ಕ್ರಿಯಾಶೀಲತೆಯ ಅನಾವರಣ, ಈ ಅನಾವರಣಕ್ಕೆ ಅಗತ್ಯವಾದ ಮುಕ್ತ ವಾತಾವರಣಕ್ಕೆ ಅಡ್ಡಿ ಮಾಡುತ್ತಿರುವ ಸಮಾಜಗಳನ್ನು ಆಧುನಿಕ ಪ್ರಜಾಪ್ರಭುತ್ವಗಳಾಗಿ ಪುನರ್ರೂಪಿಸುವ ಪವಿತ್ರ ಕೆಲಸ ಹಾಗೂ ಲೌಕಿಕ ಶ್ರೀಮಂತಿಕೆಯಲ್ಲಿ ಕಳೆದು ಹೋಗುತ್ತಿರುವ ಮನುಷ್ಯನಲ್ಲಿ ಅಲೌಕಿಕ ಶ್ರದ್ಧೆಯ ಪುನಃಸ್ಥಾಪನೆಯ ಘನ ಕಾರ್ಯದ ಹೆಸರಿನಲ್ಲಿ ಮಾನ್ಯತೆ ಹಾಗೂ ಪಾವಿತ್ರ್ಯಗಳನ್ನು ಪಡೆಯುತ್ತಿವೆ. ಆದರೆ ಇವು ಹುಟ್ಟು ಹಾಕುತ್ತಿರುವ ವಿವಿಧ ರೂಪದ ಹಿಂಸಾಚಾರಗಳು, ಜಗತ್ತನ್ನು ಜನ ಸಾಮಾನ್ಯರ ಪಾಲಿಗೆ ನರಕವನ್ನಾಗಿಸುತ್ತಿವೆ. ಚಿಲಿ ಮೊದಲ ನರಕವಾದರೆ, ಇರಾಕ್ ಇತ್ತೀಚಿನ ನರಕವಷ್ಟೇ. ಇರಾನ್ ಮುಂದಿನ ನರಕವಾಗುವ ಎಲ್ಲ ಸಾಧ್ಯತೆಗಳಿವೆ.

ಬೇರು ಮಟ್ಟದ ಪ್ರಜಾಪ್ರಭುತ್ವವಾಗಿ ಬೆಳೆದು ಉಳಿದಿರುವ ಭಾರತಕ್ಕೆ ಇಂತಹ

ಅಪಾಯವೇನೂ ಹತ್ತಿರದಲ್ಲಿದ್ದಂತಿಲ್ಲ. ಆದರೆ ಬಡತನವೆಂಬ 'ವ್ಯಸನ'ಕ್ಕೆ ಸಿಕ್ಕಿರುವ ಭಾರತ, ತನ್ನದೇ ದೇಶೀ ಉದ್ಯೋಗ ನಿರ್ಮಾಣದ ಅಭಿವೃದ್ಧಿ ಮಾದರಿಗೆ ಬದಲಾಗಿ, ಎಲ್ಲೆಗಳಿಲ್ಲದ ಸಂಪದಭಿವೃದ್ಧಿಯ ಪಾಶ್ಚಾತ್ಯ ಮಾದರಿಯ ಮೂಲಕ ಬಡತನ ನಿವಾರಿಸಲು ಹೊರಟಿದೆ. ಹಾಗೂ ತನ್ನ ಈ ಅಭಿವೃದ್ಧಿಯ ಅವಸರದಲ್ಲಿ ಅದು ವಿದೇಶಿ ಸಾಲದ ಸುಳಿಗೆ ಸಿಕ್ಕುವ ಅಪಾಯವನ್ನು ಎದುರಿಸುತ್ತಿದೆ. ಈಗ ದೇಶದಲ್ಲಿ ಪಕ್ಷ ಹಾಗೂ ತತ್ವ ಭೇದವಿಲ್ಲದೆ ವಿದೇಶಿ ಬಂಡವಾಳದ ದೊಡ್ಡ ಪ್ರಚಾರಾಂದೋಲನವೇ ನಡೆಯುತ್ತಿದ್ದು; ಅದೀಗ ಸಗಟು ವಲಯಗಳಾಚೆ ಬೆಳೆದು, ಚಿಲ್ಲರೆ ವಲಯಕ್ಕೂ ಪ್ರವೇಶ ಪಡೆಯುವ ಹಂತ ತಲುಪಿದೆ. ಅಂದರೆ ಈ ದೇಶದ ಚಿಲ್ಲರೆ ಅಂಗಡಿಗಳೂ ವಿದೇಶೀ ಬಂಡವಾಳದ ವಶವಾಗುವ ನಿಚ್ಚಳ ಸಾಧ್ಯತೆ ಕಂಡು ಬರುತ್ತಿದೆ. ಆದರೆ, ಜಾಗತೀಕರಣ ಸೃಷ್ಟಿಸಿರುವ ಮಾರುಕಟ್ಟೆ ವೈವಿಧ್ಯದ ಹೊಸ ಫಲಾನುಭವಿಗಳಾದ ಈ ದೇಶದ ಮಧ್ಯಮ–ಬುದ್ಧಿಜೀವಿ–ವರ್ಗ, ಈ ಸಾಧ್ಯತೆಯ ದೂರಗಾಮಿ ಪರಿಣಾಮಗಳ ಬಗ್ಗೆ ಚಿಂತಿಸುತ್ತಲೇ ಇಲ್ಲ. (ಭಾರತದಲ್ಲಿ ಬುದ್ಧಿಜೀವಿಗಳು ಜನಸಾಮಾನ್ಯರ ಬಗ್ಗೆ ಚಿಂತಿಸುವ ಪರಂಪರೆಯೇ ಇಲ್ಲವೆಂದು ಭಾರತದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಚಿಂತಕ–ಅರ್ಥಶಾಸ್ತ್ರಜ್ಞ ಗುನ್ನರ್ ಮಿರ್ಡಾಲ್ ಬಹು ಹಿಂದೆಯೇ ಹೇಳಿದ್ದಾರೆ.) ಬದಲಿಗೆ ಅದು, ಈ ಬೆಳವಣಿಗೆಗೆ ಕುಮ್ಮಕ್ಕು ಕೊಡುವಂತೆ ವರ್ತಿಸುತ್ತಿರುವುದು ಈ ದೇಶದ ನಿಜವಾದ ದುರಂತವಾಗಿದೆ.

ಈ ಸಾಲದ ಹಣಕಾಸಿನ ಹೊರೆಗಿಂತ, ಅದು ಒತ್ತಾಯಿಸುವ ಅಭಿವೃದ್ಧಿ ಮಾದರಿ ಹಾಗೂ ಆ ಮೂಲಕ ರೂಢಿಗೊಳಿಸುವ ಆಧುನಿಕ ಎಂದು ಕರೆಯಲಾಗುವ ಜೀವನ ಶೈಲಿ ನಮ್ಮ ಸ್ವಾತಂತ್ರ್ಯವನ್ನೇ ಕಸಿಯಬಲ್ಲ ಅಪಾಯವನ್ನು ಒಳಗೊಂಡಿದೆ. ಜಾಗತೀಕರಣ ಸೃಷ್ಟಿ ಮಾಡುತ್ತಿರುವ ಅತಿ ಸಮೃದ್ಧಿಯ ದ್ವೀಪಗಳ ಮೂಲಕ ಜನಸಾಮಾನ್ಯರಲ್ಲಿ ಹೆಚ್ಚಿಸಲಾಗುತ್ತಿರುವ ಲೌಕಿಕ ನಿರೀಕ್ಷೆಗಳು, ನಮ್ಮ ಸಮಾಜವನ್ನು ಉಳ್ಳವರ ತೀರದ ದಾಹ ಹಾಗೂ ವಂಚಿತರ ತಣಿಯದ ಹಪಾಹಪಿಗಳ ನಿತ್ಯದ ರಣರಂಗವನ್ನಾಗಿ ಮಾಡುವ ಎಲ್ಲ ಸಾಧ್ಯತೆಗಳಿವೆ. ಏಕೆಂದರೆ, ಈಗ ಸೃಷ್ಟಿಸಲಾಗುತ್ತಿರುವ ಸಮೃದ್ಧಿಯ ಮಾದರಿ ನಮ್ಮ ಇಡೀ ಸಮಾಜಕ್ಕೆ ವ್ಯಾಪಿಸುವಂತೆ ಮಾಡಲು, ಜಗತ್ತಿನ ಎಲ್ಲ ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಖಾಲಿ ಮಾಡಿದರೂ ಸಾಕಾಗದಾಗುತ್ತದೆ. ಹಾಗಾಗಿ ನಾವು ಸಂಪನ್ಮೂಲಗಳನ್ನು ಸೂರೆ ಮಾಡಲು ಹೊಸ ವಸಾಹತುಗಳನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಮೊದಲು ನಮ್ಮ ದೇಶವೇ, ಒಳಗಿನ ಉಳ್ಳವರ ಸುಪರ್ದಿಯಲ್ಲಿನ ಹೊರಗಿನವರ ವಸಾಹತಾಗಿರುತ್ತದೆ – ಈಗಾಗುತ್ತಿರುವಂತೆ.

ಈ ಅರ್ಥದಲ್ಲೇ ಗಾಂಧೀಜಿ, ಜಾಗತೀಕರಣಕ್ಕೆ ಚಾಲನೆ ನೀಡುತ್ತಿರುವ – ಈಗ ಹೈಟೆಕ್ ಎನ್ನಿಸಿರುವ–ಪಶ್ಚಿಮದ ಆಧುನಿಕತೆಯನ್ನು ವಸಾಹತುಶಾಹಿಯ ಸಾಧನ ಎಂದು ಎಚ್ಚರಿಸಿದ್ದುದು. ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಅಭಿವೃದ್ದಿ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನರು, ಅಭಿವೃದ್ಧಿ ಹೆಸರಿನಲ್ಲೀಗ ಭಾರತದ ಅರ್ಧ ಭಾಗ ಕ್ಯಾಲಿಫೋರ್ನಿಯಾ ಆಗುವ ಆತುರದಲ್ಲಿದ್ದರೆ, ಇನ್ನರ್ಧ ಭಾಗ ಇಥಿಯೋಪಿಯಾ ಆಗುವ ದುರಂತವನ್ನೆದರಿಸುತ್ತಿದೆ ಎಂದಾಗ ಹೇಳಿರುವುದೂ ಇದನ್ನೇ. ಗಾಂಧೀಜಿಯ ಈ ಎಚ್ಚರಿಕೆಯ ಹಿಂದಿನ ಒಳನೋಟವನ್ನು ವಿಸ್ತರಿಸಿಕೊಂಡು, ಭಾರತದ ಸಮಾಜವಾದಿ ಚಳುವಳಿಯು ತನ್ನ

ತತ್ವವನ್ನು ರೂಪಿಸಿಕೊಂಡಿತ್ತು. ಹಾಗಾಗಿ, ಈ ದೇಶದ ಮನಸಾಕ್ಷಿಯಂತಿದ್ದ ಸಮಾಜವಾದಿ ಚಳುವಳಿಯು ಗಾತ್ರದಲ್ಲಲ್ಲದಿದ್ದರೂ, ಗುಣದಲ್ಲಾದರೂ ಕ್ರಿಯಾಶೀಲವಾಗಿರುವವರೆಗೆ; ಈ ಪಶ್ಚಿಮದ ಆಧುನೀಕರಣವೇ ಅಭಿವೃದ್ಧಿ ಎಂಬ, ನಮ್ಮ ಆಡಳಿತಗಾರರಲ್ಲಿ ಬಿತ್ತಲ್ಪಟ್ಟಿದ್ದ ಮೂಢ ನಂಬಿಕೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿರಲಿಲ್ಲ. ನೆಹರೂ ಕಾಲದಿಂದ ನರಸಿಂಹರಾವ್ ಪ್ರಧಾನಿಯಾಗುವವರೆಗೆ ನಮ್ಮ ಅಭಿವೃದ್ಧಿ ಆಡಳಿತವು ಮಿಶ್ರ ಎಂಬ ಗೊಂದಲಮಯ ಅರ್ಥ ವ್ಯವಸ್ಥೆಯ ಆಧಾರದ ಮೇಲೆಯೇ ನಡೆಯುತ್ತಿತ್ತು. ಆದರೆ ಅದನ್ನು ಈಗ ತಪ್ಪಾಗಿ ಮತ್ತು ಉದ್ದೇಶಪೂರ್ವಕವಾಗಿ ಸಮಾಜವಾದಿವ್ಯವಸ್ಥೆ ಎಂದು ಕರೆದು, ಸಮಾಜವಾದದ ವಿಶ್ವಾಸಾರ್ಹತೆಯನ್ನೇ ಹಾಳು ಮಾಡುವ ಪ್ರಯತ್ನ ಮಾಡಲಾಗುತ್ತಿದೆ.

ಅದೇನೇ ಇರಲಿ, ಅಷ್ಟು ದೀರ್ಘಕಾಲದವರೆಗೆ ಜಾರಿಯಲ್ಲಿದ್ದ ಅತ್ತ ಸರಿಯಾದ ಸಮಾಜವಾದವೂ ಇಲ್ಲ; ಇತ್ತ ಸರಿಯಾದ ಬಂಡವಾಳವಾದವೂ ಇಲ್ಲ ಎಂಬ ಅಭಿವೃದ್ಧಿಯ ದ್ವಂದ್ವ ನೀತಿಯಿಂದಾಗಿ, ಈ ಎರಡರ ಮಧ್ಯೆ ಭಾರತ ಕುಸಿದು ಬಿದ್ದುದಂತೂ ಸತ್ಯ. ಆದರೆ ಇದಕ್ಕೋಸ್ಕರವೇ ಕಾಯುತ್ತಿದ್ದಂತೆ, ಭಾರತವನ್ನು ಕೈಹಿಡಿದೆತ್ತಲು ನರಸಿಂಹರಾವ್ ಕಾಲದಿಂದೀಚೆಗೆ ವಿಶ್ವ ಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ನಿಧಿ ಹಾಗೂ ವಿಶ್ವ ವ್ಯಾಪಾರ ಸಂಸ್ಥೆಗಳ ವಕ್ತಾರರಾದ ಜಾಗತೀಕರಣವಾದಿಗಳು ಮುಂದೆ ಬಂದಿರುವುದು ಮಾತ್ರ ಅನೇಕ ಪ್ರಶ್ನೆಗಳನ್ನು ಎತ್ತಿದೆ. ಈ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಆಡಳಿತ ಹಾಗೂ ನೀತಿ ನಿರೂಪಣೆಯಲ್ಲಿ ಬಹು ವರ್ಷಗಳ ಕಾಲ ಭಾಗಿಯಾಗಿದ್ದ ಡಾ॥ ಮನಮೋಹನ ಸಿಂಗ್ ಆ ಬಿಕ್ಕಟ್ಟಿನ ಸಮಯದಲ್ಲಿ ಭಾರತಕ್ಕೆ ಮುಕ್ತಿ ದೊರಕಿಸಿ ಕೊಡುವ ಅರ್ಥಮಂತ್ರಿಯಾಗಿ, ಮೊಂಟೆಕ್ ಸಿಂಗ್ ಅಹ್ಲುವಾಲಿಯ ಮುಂತಾದ ಮುಕ್ತ ಬಂಡವಾಳವಾದಿ ಅರ್ಥಶಾಸ್ತ್ರಜ್ಞರ ಪರಿವಾರದೊಂದಿಗೆ ಬಂದು ಭಾರತದ ಆರ್ಥಿಕ ಪುನಾರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಆಗಿನಿಂದ ಭಾರತ ಪೂರ್ಣವಾಗಿ ಮುಕ್ತಿ ಬಂಡವಾಳವಾದದ ಪ್ರಭಾವಕ್ಕೆ ಸಿಕ್ಕಿದೆ. ಈ ಮಧ್ಯೆ ಬಂದು ಹೋದ, ಎಲ್ಲ ರಂಗಗಳಲ್ಲೂ ಅಪ್ಪಟ 'ಭಾರತೀಯತೆ'ಯನ್ನು ಪ್ರತಿಪಾದಿಸುತ್ತಿದ್ದ ಪಕ್ಷದ ನೇತೃತ್ವದ ಸರ್ಕಾರವೂ ಈ ಮುಕ್ತ ಬಂಡವಾಳವಾದದ ಬೆಂಬಲಕ್ಕೆ ನಿಂತು, ತನ್ನ ಅಪ್ಪಟ ಭಾರತೀಯತೆಯ ಬಣ್ಣವನ್ನು ಬಯಲು ಮಾಡಿಕೊಂಡದ್ದೂ ಆಗಿದೆ.

ಈ ಮುಕ್ತ ಬಂಡವಾಳದ ಯಶಸ್ಸು ಅಡಗಿರುವುದೇ ಲಾಭಾಧಾರಿತವಾದ ಕೈಗಾರಿಕಾ ಸಮಾಜದ ನಿರ್ಮಾಣದಲ್ಲಿ. ಅದೀಗ ಭಾರತದಲ್ಲಿ ಆರಂಭವಾಗಿದೆ. ಪ್ರಧಾನವಾಗಿ ಕೃಷಿ ಸಮಾಜವಾಗಿ ತನ್ನ ಕಷ್ಟ ಸುಖಗಳನ್ನು ತನ್ನ 'ಮರ್ಯಾದೆ'ಯ ಪರಿಮಿತಿಯಲ್ಲೇ ಹೇಗೋ ನಿರ್ವಹಿಸಿಕೊಳ್ಳುತ್ತಿದ್ದ ಭಾರತವೀಗ ವಿದೇಶಿ ಬಂಡವಾಳ ಪ್ರೇರಿತ ಆಧುನೀಕರಣದ ಆಧಾರದ ಮೇಲೆ ಕೈಗಾರಿಕಾ ಸಮಾಜವಾಗ ಹೊರಟಿದೆ. ಇದರ ಪರೋಕ್ಷ ಒತ್ತಡಗಳು ರೈತರನ್ನು ಆತ್ಮಹತ್ಯೆಗೆ ದೂಡುತ್ತಿದ್ದರೆ, ಪ್ರತ್ಯಕ್ಷ ಒತ್ತಡಗಳು ಅವನನ್ನು ನಿರ್ವಸಿತನನ್ನಾಗಿ ಮಾಡುತ್ತಿವೆ. ಈಗ ಎಲ್ಲೆಡೆ ಚಾಲ್ತಿಗೆ ಬರುತ್ತಿರುವ ವಿಶೇಷ ಆರ್ಥಿಕ ವಲಯಗಳ ಯೋಜನೆಯು ಕೃಷಿ ಸಮಾಜದ ಗೋರಿಯ ಮೇಲೆ ಕೈಗಾರಿಕಾ ಸಮಾಜದ ನಿರ್ಮಾಣಕ್ಕೆ ಹಾಕಲಾಗುತ್ತಿರುವ ಆಸ್ತಿವಾರವೇ ಆಗಿದೆ. ತೆರಿಗೆ ರಿಯಾಯಿತಿಯ ಬೃಹತ್ ಖಾಸಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ರೈತರ ಸಾವಿರಾರು ಎಕರೆ ಭೂಮಿಯನ್ನು ಖಾಸಗಿ

ಬಂಡವಾಳಗಾರರಿಗೊಪ್ಪಿಸುವುದೇ ಈ ಯೋಜನೆಯ ಮೊದಲ ಹೆಜ್ಜೆಯಾಗಿದೆ. ಖಾಸಗಿ ಬಂಡವಾಳಗಾರರು ಈ ಭೂಮಿಯ ಒಂದು ಭಾಗವನ್ನು ರಿಯಲ್ ಎಸ್ಟೇಟ್ ವ್ಯಾಪಾರಕ್ಕೆ ಬಳಸಿಕೊಳ್ಳಲು ಈ ಯೋಜನೆಯಲ್ಲಿ ಅವಕಾಶವಿದೆ! ಮನುಷ್ಯ ಮತ್ತು ಭೂಮಿಯ ಸಂಬಂಧವನ್ನು ಪೂರ್ಣವಾಗಿ ವಾಣಿಜ್ಯೀಕರಿಸುತ್ತಿರುವ ಈ ಯೋಜನೆ, ಗ್ರಾಮ ಸಂಸ್ಕೃತಿಯ ಆಧಾರದ ಮೇಲೆ ತನ್ನ ವ್ಯಕ್ತಿತ್ವವನ್ನು ಕಟ್ಟಿಕೊಂಡಿರುವ ಸಾಮಾನ್ಯ ಭಾರತೀಯನ–ಆತ ಗ್ರಾಮ ನಿವಾಸಿಯಾಗಿರದಿದ್ದರೂ–ಮಾನಸಿಕತೆಯನ್ನೇ ಬುಡಮೇಲುಗೊಳಿಸುವಂತಹುದಾಗಿದೆ. ಹಾಗೆ ನೋಡಿದರೆ, ಭಾರತಕ್ಕೆ ಇದೊಂದು ಮಾನಸಿಕ ಪ್ರಳಯವೇ ಆಗಲಿದೆ. ಈ ಪ್ರಳಯದ ಮೊದಲ ಕಂಪನಗಳು ಹರ್ಯಾಣ–ಪಂಜಾಬ್–ಪ.ಬಂಗಾಳ–ಒರಿಸ್ಸಾ–ಮಹಾರಾಷ್ಟ್ರ–ಕರ್ನಾಟಕಗಳಲ್ಲಿ ಮೆಲ್ಲಗೆ ಕೇಳಲಾರಂಭಿಸಿದೆ.

ಭಾರತೀಯ ಸಮಾಜವಾದಿ ಚಳುವಳಿಗೆ ಒಂದು ಸ್ಪಷ್ಟ ತಾತ್ವಿಕ ರೂಪ ನೀಡಿದ್ದ ಡಾ॥ ರಾಮಮನೋಹರ ಲೋಹಿಯಾ ಈ ಪ್ರಳಯವನ್ನು ಮುನ್ನೋಡಿದ್ದರು. ಬಂಡವಾಳ ಬೆಳೆಯುವುದೇ ಅನ್ಯಾಕ್ರಮದ ಮತ್ತು ಮೂಲ ನಿವಾಸಿಗಳ ನಿರ್ವಸತೀಕರಣಗಳ ಮೂಲಕ ಎಂಬುದು ಅವರ ವಾದವಾಗಿತ್ತು. (ರೆಡ್ ಇಂಡಿಯನ್ನರು ಕಾಪಾಡಿಕೊಂಡು ಬಂದಿದ್ದ ಸಮೃದ್ಧ ಪ್ರಾಕೃತಿಕ ಸಂಪನ್ಮೂಲಗಳ ಅಮೆರಿಕಾ ಹೇಗಾಯಿತೆಂಬುದನ್ನು ನೆನಪಿಸಿಕೊಳ್ಳಿ.) ಹಾಗಾಗಿ ಬಂಡವಾಳವಾದವು ಒಂದು ಘಟ್ಟದವರೆಗೆ ಪ್ರಗತಿಶೀಲವಾಗಿದ್ದು, ನಂತರ ತಾನೇ ಸೃಷ್ಟಿಸಿಕೊಳ್ಳುವ ವೈರುಧ್ಯಗಳಿಂದಾಗಿ ಸಾಮ್ಯವಾದ (ಕಮ್ಯುನಿಸಂ)ಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ಮಾರ್ಕ್ಸ್‌ವಾದಿ ವಿಶ್ಲೇಷಣೆಯನ್ನು ಅವರು ತಿರಸ್ಕರಿಸಿದ್ದರು. ಬಂಡವಾಳವಾದವು ಜಗತ್ತಿನ ಒಂದು ಭಾಗವನ್ನು ಶೋಷಿಸುತ್ತಾ, ಇನ್ನೊಂದು ಭಾಗವನ್ನು ಸಮೃದ್ಧಗೊಳಿಸುತ್ತಾ ಹೋಗುತ್ತದೆ. ಅಲ್ಲದೆ ಶೋಷಿತ ಪ್ರದೇಶಗಳಲ್ಲಿ ತನ್ನ ಚೇಲಾ ಬಂಡವಾಳವಾದಿಗಳ ಮೂಲಕ ಬಂಡವಾಳವಾದದ ಪ್ರಗತಿಶೀಲತೆಯ ಪ್ರಚಾರ ಮಾಡುತ್ತಾ ತನ್ನ ಶೋಷಣೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ ಎಂಬುದನ್ನು ಲೋಹಿಯಾ ಅವರ ವಿಶ್ಲೇಷಣೆಯಾಗಿತ್ತು. ಬಂಡವಾಳವಾದದ ಆಧಾರವಾದ ಸಮೂಹ (ಸಾಮೂಹಿಕ ಅಲ್ಲ) ಮತ್ತು ಗ್ರಾಹಕವಾದಿ (ಅಂದರೆ, ಅಗತ್ಯವಲ್ಲದ ಆದರೆ ಶೋಕಿಯ) ಉತ್ಪಾದನೆಯನ್ನು ಪ್ರಚೋದಿಸುವ ತಂತ್ರಜ್ಞಾನವನ್ನೇ ನಂಬಿದ ಸಾಮ್ಯವಾದ ಕೂಡಾ ಪಶ್ಚಿಮದ ಆಧುನೀಕರಣದ ಮಾದರಿಯನ್ನೇ ಅವಲಂಬಿಸಿದೆ. ಆದುದರಿಂದ ಅದು ಕೂಡ ವಸಾಹತುಗಳನ್ನು ಸೃಷ್ಟಿಸಿಕೊಂಡೇ ಬದುಕಬೇಕಾಗುತ್ತದೆ. ಇಲ್ಲವೇ ತನ್ನ ಜನವನ್ನೇ ವಸಾಹತುದಾರರಂತೆ ದುಡಿಸಿಕೊಳ್ಳಬೇಕಾಗುತ್ತದೆ. ಮತ್ತು ಆ ಮೂಲಕ ತನ್ನ ಅತ್ಯಂತಿಕ ಆದರ್ಶವಾದ ಸಮಾನತೆಯನ್ನು ಧಿಕ್ಕರಿಸಬೇಕಾಗುತ್ತದೆ ಎಂಬುದು ಅವರ ಕಾಣ್ಕೆಯಾಗಿತ್ತು. ಈ ಕಾಣ್ಕೆ ನಿಜವಾಗಿ, ಸೋವಿಯತ್ ಒಕ್ಕೂಟ ಪ್ರತಿನಿಧಿಸುತ್ತಿದ್ದ ಸಾಮ್ಯವಾದ (ಸಾಮ್ಯವಾದದ ಇನ್ನೊಂದು ರೂಪದ ಪ್ರತಿನಿಧಿಯಂತಿದ್ದ ಚೀನ ಬಹು ಹಿಂದೆಯೇ – ಮಾವೋ ನಂತರದಲ್ಲೇ – ಬಹಿರಂಗವಾಗಿ ಘೋಷಿಸಿಕೊಳ್ಳದೆ, ತನ್ನ ಸಾಮ್ಯವಾದಿ ಪ್ರಯೋಗವನ್ನು ಕೈಬಿಟ್ಟಿರುವುದು ಎಲ್ಲರಿಗೆ ಗೊತ್ತಿದೆ.) ವಿಫಲವಾಗಿದೆ ಮತ್ತು ಅದು ಬಂಡವಾಳವಾದದ ದಿಗ್ವಿಜಯಕ್ಕೆ ಕಾರಣವಾಗಿದೆ. ಈ ದಿಗ್ವಿಜಯದ ಇನ್ನೊಂದು ಹೆಸರೇ ಜಾಗತೀಕರಣವಾಗಿದೆ.

ಭಾರತ ಈ ದಿಗ್ವಿಜಯಕ್ಕೆ ಬಲಿಯಾಗಬಾರದೆಂದೇ ಲೋಹಿಯಾ ಹೊಸ ಉತ್ಪಾದನಾ

ಸಂಸ್ಕೃತಿಯನ್ನು ಅಳವಡಿಸಿಕೊಂಡು ಬಂಡವಾಳವಾದ ಹಾಗೂ ಸಾಮ್ಯವಾದಗಳ ಅಪಾಯಗಳನ್ನು ಮೀರಿ ನಿಂತು, ಶೋಷಣೆಯಿಂದ ಮುಕ್ತಗೊಳ್ಳಬಹುದೆಂದು ಭಾವಿಸಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸಂಪದಭಿವೃದ್ಧಿಗಳ ಅವಿಭಾಜ್ಯತೆಯೇ (ಒಂದನ್ನು ಬಿಟ್ಟು ಇನ್ನೊಂದು ಇರಲಾಗದ್ದು) ಲೋಹಿಯಾ ಪ್ರತಿಪಾದಿಸಿದ ಸಮಾಜವಾದದ ಹೆಗ್ಗುರುತಾಗಿದ್ದು, ಇದಕ್ಕಾಗಿ ಅವರು ಗಾಂಧೀಜಿಯ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ ಹಾಗೂ ಜರ್ಮನಿಯ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಷುಮೇಕರ್‌ನ 'ಸಣ್ಣದು ಸುಂದರ' ಪರಿಕಲ್ಪನೆಗಳನ್ನು ಬೆಸೆದು, ವಿಸ್ತರಿಸಿದರು. ಈ ಸಂಬಂಧವಾಗಿ, ಹಬೆ ಅಥವಾ ಸ್ಥಳೀಯ ವಿದ್ಯುತ್ತಿನ ಮೇಲೆ ಚಲಿಸುವ ಹಾಗೂ ಸ್ಥಳೀಕರ ನಿಯಂತ್ರಣ ದಾಟಿ ಹೋಗದಂತಹ ಸಣ್ಣ ಘಟಕಗಳ ಯಂತ್ರ ವ್ಯವಸ್ಥೆಯ ಅವಿಷ್ಕಾರಕ್ಕಾಗಿ ಅವರು ಜಾಗತಿಕ ಸಮಾಜವಾದಿ ವೇದಿಕೆಗಳಲ್ಲಿ ಕರೆ ಕೊಟ್ಟಿದ್ದರು. ಈ ಕರೆಯ ಹಿಂದೆ ಬೃಹತ್ ಉತ್ಪಾದನಾ ತಂತ್ರಜ್ಞಾನವು ಸ್ಥಳೀಯ ಜೀವನ ಕ್ರಮವನ್ನು ಹೊರಗಿನಿಂದ ಬುಡಮೇಲುಗೊಳಿಸಿ, ಸಮುದಾಯಗಳನ್ನು ಕ್ರಮೇಣ ಅವರಿಗೇ ಗೊತ್ತಿಲ್ಲದ ರೀತಿಗಳಲ್ಲಿ ಎಲ್ಲ ರೀತಿಯ ದುರಾಕ್ರಮಣಕ್ಕೆ ಈಡು ಮಾಡುವಂತಹದ್ದು ಎಂಬ ಒಳನೋಟವಿತ್ತು. ಹಾಗಾಗಿಯೇ, ವಿಜ್ಞಾನ-ತಂತ್ರಜ್ಞಾನಗಳ ನಿರಂತರ ಅನ್ವಯ ಹಾಗೂ ಅವಿಷ್ಕಾರಗಳನ್ನು ಆಧರಿಸಿದ ಸದಾ ಏರುತ್ತಾ ಹೋಗುವ ಜೀವನಮಟ್ಟದ ಆಸ್ಫೋಟನಕಾರಿ ಸಂಸ್ಕೃತಿಗೆ ಬದಲಾಗಿ, ಸ್ಥಳೀಯ ಇತಿಮಿತಿಗಳುಳ್ಳ ಒಂದು ಸಭ್ಯ ಜೀವನಮಟ್ಟದ ಸಂಸ್ಕೃತಿಯನ್ನಾಧರಿಸಿದ ಹೊಸ ಸಮಾಜವಾದಿ ನಾಗರೀಕತೆಯ ಕನಸನ್ನು ಲೋಹಿಯಾ ಜಗತ್ತಿನ ಮುಂದಿಟ್ಟಿದ್ದರು. ಬಂಡವಾಳವಾದಿ ಸರಕು ಉತ್ಪಾದನಾ ತಂತ್ರವನ್ನೇ ಅನುಸರಿಸುತ್ತಾ, ವಿತರಣೆಯಲ್ಲಿ ಮಾತ್ರ ಸಮಾಜವಾದಿ ತತ್ವವನ್ನು ಅಳವಡಿಸಿಕೊಳ್ಳುವ ಐರೋಪ್ಯ ಸಮಾಜವಾದ, ಒಂದಲ್ಲ ಒಂದು ದಿನ ಬಂಡವಾಳವಾದಕ್ಕೆ ಶರಣಾಗುವುದೆಂದು ಅವರು ಎಚ್ಚರಿಸಿದ್ದರು. ಅವರ ಮಾತು ಇಂದು, ಐರೋಪ್ಯ ದೇಶಗಳಲ್ಲಿ ಸಮಾಜವಾದಿ ಚಳುವಳಿಯೇ ಅವಶೇಷ ರೂಪ ತಾಳಿ, ಜಾಗತೀಕರಣಕ್ಕೆ ಅವಕಾಶ ಮಾಡಿಕೊಡುವ ಮೂಲಕ ನಿಜವಾಗಿದೆ.

ಭಾರತದಲ್ಲಿಯೂ ಸಮಾಜವಾದಿ ಚಳುವಳಿಯು ಅವಶೇಷ ರೂಪದಲ್ಲಿದ್ದರೆ ಅದಕ್ಕೆ ಮುಖ್ಯ ಕಾರಣ, ಸ್ವಾತಂತ್ರ್ಯ ಹೋರಾಟದಲ್ಲಿ ಸಮೂಹ ನಾಯಕರಾಗಿ ಪ್ರತಿಬಿಂಬಿಸಲ್ಪಟ್ಟಿದ್ದ ನೆಹರೂರ ವರ್ಚಸ್ಸಿಗೆ ಬೆರಗಾಗಿದ್ದ ದೇಶಕ್ಕೆ, ಅವರು ಪ್ರತಿಪಾದಿಸಿದ ಪಶ್ಚಿಮದ ಆಧುನೀಕರಣದ ಸಂಭ್ರಮ-ಸಡಗರಗಳಲ್ಲಿ, ಲೋಹಿಯಾ ಇರಲಿ; ಗಾಂಧಿ ದರ್ಶನವನ್ನೂ ಅರ್ಥ ಮಾಡಿಕೊಳ್ಳುವ ವ್ಯವಧಾನವಾಗಲೀ, ಸಂಘಟಿತ ವಿವೇಕವಾಗಲೀ ಇಲ್ಲದಿದ್ದುದು. ಈ ಬಗ್ಗೆ ಧ್ವನಿ ಎತ್ತಬೇಕಾಗಿದ್ದ ಗಾಂಧಿವಾದಿಗಳನ್ನು ನೆಹರೂ, ಖಾದಿ-ಗ್ರಾಮೋದ್ಯೋಗ ಗಳಿಗೂ ಒಂದಷ್ಟು ಹಣ ನೀಡಿ ಸಂತುಷ್ಟಗೊಳಿಸಿದ್ದರು. ಸ್ವಾತಂತ್ರ್ಯಾನಂತರದ ಗಾಂಧಿವಾದಿಗಳಲ್ಲಿ, ನೆಹರೂ ಅನುಯಾಯಿಗಳನ್ನೂ ಸರ್ಕಾರಿ ಗಾಂಧಿವಾದಿಗಳೆಂದು, ವಿನೋಬಾ ಅನುಯಾಯಿಗಳನ್ನು ಆಶ್ರಮ ಗಾಂಧಿವಾದಿಗಳೆಂದು, ತಮ್ಮ ಪಕ್ಷದ ಸಮಾಜವಾದಿಗಳನ್ನು ಬಂಡುಕೋರರ ಗಾಂಧಿವಾದಿಗಳು ಎಂದು ವಿಂಗಡಿಸಿದ್ದ ಲೋಹಿಯಾ; ಮೊದಲಿಬ್ಬರ ಒಕ್ಕೂಟದಲ್ಲಿ ಗಾಂಧಿವಾದ ನಿಂತ ನೀರಾಗಿದ್ದು, ಅದನ್ನು ಚಲನಶೀಲಗೊಳಿಸುವ ಹೊಣೆ ಮೂರನೇ ಗುಂಪಿನದಾಗಿದೆ ಎಂದು ಭಾವಿಸಿದ್ದರು.

ಆದರೆ ಸಮಾಜವಾದಿ ಚಳುವಳಿಯ ದುರಂತವೆಂದರೆ, ೧೯೫೨ರ ಮೊದಲ ಮಹಾ ಚುನಾವಣೆಯಲ್ಲಿ ಅನುಭವಿಸಿದ ದೊಡ್ಡ ಸೋಲಿನ ನಂತರ ಈ ಬಂಡುಕೋರ ಸಮಾಜವಾದಿಗಳಲ್ಲನೇಕರು ಹಂತಾನುಹಂತವಾಗಿ, ಒಂದಲ್ಲ ಒಂದು ವೈಯಕ್ತಿಕ ಅಥವಾ ತಾತ್ವಿಕ ಕಾರಣ ಅಥವಾ ನೆಪವೊಡ್ಡಿ, ಸರ್ಕಾರಿ ಮತ್ತು ಆಶ್ರಮವಾಸಿ ಗಾಂಧಿವಾದಿಗಳ ಒಕ್ಕೂಟದೊಡನೆ ಸಂಪರ್ಕವೇರ್ಪಡಿಸಿಕೊಂಡು, ಸಮಾಜವಾದಿ ಚಳುವಳಿಯ ಅನನ್ಯತೆ–ವಿಶ್ವಾಸಾರ್ಹತೆಗಳಿಗೆ ಧಕ್ಕೆ ತರತೊಡಗಿದರು. ಇವರಲ್ಲಿ ಭಾರತೀಯ ಸಮಾಜವಾದಿ ಚಳುವಳಿಯ ಮೂಲ ಕರ್ತೃಗಳಲ್ಲೊಬ್ಬರೂ ಮತ್ತು ಮುಂದೆ ೧೯೭೫ರಲ್ಲಿ, ಸಂಪೂರ್ಣ ಕ್ರಾಂತಿ ಚಳುವಳಿಯ ನಾಯಕತ್ವವಹಿಸಿಕೊಂಡ ಜಯಪ್ರಕಾಶ್ ನಾರಾಯಣ್ ಕೂಡಾ ಸೇರಿದ್ದರೆಂದ ಮೇಲೆ ಈ ಅಘಾತದ ಪರಿಣಾಮಗಳನ್ನು ಊಹಿಸಿಕೊಳ್ಳಬಹುದಾಗಿದೆ. ಇದರ ಜೊತೆಗೆ ಲೋಹಿಯಾ ಅವರ ತಾತ್ವಿಕ ಹಠಮಾರಿತನವೂ ಮತ್ತು ಅವರ ಬೆಂಬಲಿಗರ ಅನಿರ್ಬಂಧಿತ ಅಶಿಸ್ತೂ ಸೇರಿಕೊಂಡಿತ್ತು. ಹೀಗಾಗಿ ಮುಖ್ಯವಾಹಿನಿ ರಾಜಕಾರಣದೊಂದಿಗೆ ಅಲ್ಲದೆ, ತನ್ನವರೊಡನೆ ಕೂಡಾ ಹೋರಾಡಬೇಕಾಗಿ ಬಂದ ಲೋಹಿಯಾ ಒಂಟಿಯಾಗಿ ಹೋದರು.

ಸ್ವಾತಂತ್ರ್ಯ ಹೋರಾಟದಲ್ಲಿ. ವಿಶೇಷವಾಗಿ ೧೯೪೨ರ 'ದೇಶ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ; ಆ ನಂತರ ದೇಶ ವಿಭಜನೆ ಸಂದರ್ಭದ ಕೋಮು ದಳ್ಳುರಿಯ ಕಾಲದಲ್ಲಿ ತಮ್ಮ ಉಜ್ವಲ ಬೌದ್ಧಿಕ ಸಂವಾದಗಳ ಮೂಲಕ ಹಾಗೂ ವಿರೋಚಿತ ಸಾಹಸಗಳ ಮೂಲಕ ಲೋಹಿಯಾ ಗಾಂಧೀಜಿಯ ಮೆಚ್ಚಿನ ಶಿಷ್ಯರಾಗಿದ್ದರು. (ಸ್ವಾತಂತ್ರ್ಯಾನಂತರ ದೇಶ ಹಿಡಿದಿರುವ ದಾರಿ ಬಗ್ಗೆ ಬಹು ಚಿಂತಿತರಾಗಿದ್ದ ಗಾಂಧೀಜಿ, ತಾವು ಕೊಲೆಯಾದ ಒಂದೆರಡು ದಿನಗಳ ಮುನ್ನ ಲೋಹಿಯಾರೊಂದಿಗೆ ಆಪ್ತ ಸಮಾಲೋಚನೆ ನಡೆಸಿ, ಬಹು ಮುಖ್ಯ ಮಾತುಕತೆಗಾಗಿ ಅವರನ್ನು ಜನವರಿ ೩೦ ರಂದು ತಮ್ಮಲ್ಲಿಗೆ ಆಹ್ವಾನಿಸಿದ್ದರು.) ಆದರೆ ಗಾಂಧೀಜಿಯ ರಾಜಕೀಯ ಉತ್ತರಾಧಿಕಾರಿ ಯೆನಿಸಿದ್ದ ನೆಹರೂ ಬದುಕಿರುವವರೆಗೆ ಅವರು ಸಂಸತ್ತನ್ನು ಪ್ರವೇಶಿಸಲಾಗಲಿಲ್ಲ ಎಂಬ ಸಂಗತಿ, ಒಂದು ಕಾಲದಲ್ಲಿ ಆಪ್ತ ಸಂಗಾತಿಗಳಾಗಿದ್ದ ನೆಹರೂ–ಲೋಹಿಯಾ ನಡುವಣ ಸಂಬಂಧ ಎಷ್ಟು ವಿಷಮಿಸಿತ್ತು ಮತ್ತು ಸರ್ಕಾರಿ ಗಾಂಧಿವಾದ ಹಾಗೂ ಆಶ್ರಮ ಗಾಂಧಿವಾದಗಳ ಒಕ್ಕೂಟ ಲೋಹಿಯಾ ನೇತೃತ್ವದ ಸಮಾಜವಾದಿ ಚಳುವಳಿಯನ್ನು ಹೇಗೆ ಹತ್ತಿಕ್ಕಿತ್ತು ಎಂಬುದನ್ನು ಸೂಚಿಸುತ್ತದೆ.

ಇದೆಲ್ಲದುದರಿಂದಾಗಿ ಹತಾಶರಾದಂತೆ ತೋರಿದ ಲೋಹಿಯಾ, ತಮ್ಮ ಕೊನೆಯ ದಿನಗಳಲ್ಲಿ 'ಕಾಂಗ್ರೆಸ್ಸೇತರವಾದ'ವೊಂದೇ ದೇಶಕ್ಕೆ ಸದ್ಯದ ಪರಿಹಾರವೆಂದು ತೀರ್ಮಾನಿಸಿ, ಅದಕ್ಕಾಗಿ ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸಿ ಯಶಸ್ವಿಯೂ ಆದರು. (ಆ ಪ್ರಯತ್ನಕ್ಕಾಗಿ ಅವರು ದೇಶಾದ್ಯಂತ 'ಶ್ರೀಮಾನ್ ವಿರೋಧ ಪಕ್ಷ' ಎಂದೇ ಪ್ರಸಿದ್ಧರಾಗಿದ್ದರು!) ೧೯೬೭ರ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅನೇಕ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತಲ್ಲದೆ, ಕೇಂದ್ರದಲ್ಲೂ ಬಲ ಕಳೆದುಕೊಂಡಿತು. ಆದರೆ, ಕಾಂಗ್ರೆಸ್ಸೇತರವಾದದ ಈ ಯಶಸ್ಸನ್ನು ಅವರು ಸಮಾಜವಾದಿ ತತ್ವದ ಯಶಸ್ಸಿಗಾಗಿ ಬಳಸಿಕೊಳ್ಳುವ ಮತ್ತು ತಮ್ಮ ಅನುಯಾಯಿ ಗಳನೇಕರು ಅಧಿಕಾರ ರಾಜಕಾರಣಕ್ಕೆ ಸಿಕ್ಕಿ ದಾರಿ ತಪ್ಪುತ್ತಿರುವುದನ್ನು ತಡೆಯುವ

ಪ್ರಯತ್ನಗಳಲ್ಲಿದ್ದಾಗಲೇ ಅಸ್ವಸ್ಥರಾಗಿ ಅಸು ನೀಗಿದರು. ನಂತರ ಅಳಿದುಳಿದಿದ್ದ ಅವರ ಅನುಯಾಯಿಗಳು ನಾಯಕತ್ವವಿಲ್ಲದೆ ಹಲವು ಪಕ್ಷಗಳಲ್ಲಿ ಹರಿದು ಹಂಚಿಹೋಗುತ್ತಾ, ಕೊನೆಗೆ ೧೯೭೭ರಲ್ಲಿ ಜೆ.ಪಿ. ಯವರ ಸಂಪೂರ್ಣ ಕ್ರಾಂತಿಯ ಪ್ರಯೋಗದಲ್ಲಿ ಹುಟ್ಟಿದ ಜನತಾ ಪಕ್ಷದಲ್ಲಿ ತಮ್ಮ ಪಕ್ಷವನ್ನು ಲೀನಗೊಳಿಸಿದರು. ಈ ಪ್ರಯೋಗದ ವೈಫಲ್ಯದ ನಂತರವೂ ಸಮಾಜವಾದದ ಹೆಸರಿನಲ್ಲಿ ಒಂದೆರಡು ಪಕ್ಷಗಳು ಕಾಣಿಸಿಕೊಂಡಿವೆಯಾದರೂ, ಅವು ಲೋಹಿಯಾ ಸಮಾಜವಾದದ ಅಣಕಗಳಿಂತಿವೆಯಷ್ಟೆ.

ಜಾಗತೀಕರಣದ ಭರಾಟೆಯ ಇಂದಿನ ದಿನಗಳಲ್ಲಿ ಕೆಲವರಿಗಾದರೂ ಇನ್ನೂ ಲೋಹಿಯಾ ನೆನಪಾಗುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ, ಭಾರತದ ಸ್ಮತಿಪಟಲದಲ್ಲಿ ಅಚ್ಚೊತ್ತಿರುವ ಪ್ರತಿಭೆ ಮತ್ತು ಪ್ರತಿಭಟನೆಗಳ ಸಂಗಮವಾಗಿದ್ದ ಅವರ ಉಜ್ವಲ ವ್ಯಕ್ತಿತ್ವ. ಈಗಿನ ಉತ್ತರ ಪ್ರದೇಶದ ಸಾಮಾನ್ಯ ವ್ಯಾಪಾರಿ ಕುಟುಂಬದಲ್ಲಿ ಸ್ವಾತಂತ್ರ್ಯ ಹೋರಾಟಗಾರನೊಬ್ಬನ ಮಗನಾಗಿ ಹುಟ್ಟಿ, ೨೨ನೇ ವಯಸ್ಸಿಗೇ ಬರ್ಲಿನ್ ವಿಶ್ವವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಡಾಕ್ಟೋರೇಟ್ ಪಡೆದ ಲೋಹಿಯಾ; ತಮ್ಮ ಮುಂದೆ ತೆರೆದಿಟ್ಟಿದ್ದ ಆರಾಮದಾಯಕ ಜೀವನವನ್ನು ತೊರೆದು, ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ತಮ್ಮ ಇಡೀ ಜೀವನವನ್ನು ಸಮಾಜವಾದ ಚಿಂತನೆ ಹಾಗೂ ಹೋರಾಟಕ್ಕೆ ಮೀಸಲಿಟ್ಟರು. ವ್ಯವಸ್ಥೆಯ ವಿರುದ್ಧದ ಹೋರಾಟದ ಅಂಗವಾಗಿ ಅವರು ನಿರಂತರ ನಾಗರಿಕ ಸತ್ಯಾಗ್ರಹ, ಸಣ್ಣ ಘಟಕ ತಂತ್ರಜ್ಞಾನ ಹಾಗೂ ಭಾರತೀಯ ಪರಂಪರೆಯ ಪರಿಕಲ್ಪನೆಗಳನ್ನು ಕುರಿತ ಸಂಶೋಧನೆಗಾಗಿ 'ಖೋಜ್ ಪರಿಷತ್' ಎಂಬ ಅಧ್ಯಯನ ಸಂಸ್ಥೆ, ಕೃಷಿ ಮತ್ತು ಕೈಗಾರಿಕಾ ಬೆಲೆಗಳ ಸಮನ್ವಯ ಹಾಗೂ ಬೆಲೆ ನಿಯಂತ್ರಣ ಆಯೋಗ, ವರಮಾನ ಹಾಗೂ ಖರ್ಚಿನ ಮೇಲೆ ಮಿತಿ, ನಾಲ್ಕು ಹಂತಗಳಲ್ಲಿನ ಅಧಿಕಾರ ವಿಕೇಂದ್ರೀಕರಣವನ್ನಾಧರಿಸಿದ ಚತುಸ್ತಂಭ ರಾಷ್ಟ್ರ, ವಿಶ್ವ ಸಂಸ್ಥೆಗೆ ಪರ್ಯಾಯವಾಗಿ ಜಾಗತಿಕ ಸರ್ಕಾರ ಮುಂತಾದ ನವ ನವೀನ ತತ್ವ-ಪರಿಕಲ್ಪನೆಗಳನ್ನೂ ಮತ್ತು ಗೋವಾ ವಿಮೋಚನೆ, ನೇಪಾಳದ ಪ್ರಜಾಪ್ರಭುತ್ವೀಕರಣ, ಜಾತಿ ವಿನಾಶ ಸಮ್ಮೇಳನ, ಇಂಗ್ಲೀಷ್ ವಿರೋಧಿ – ಭಾರತೀಯ ಭಾಷಾ ಸಮ್ಮೇಳನ, ಹಿಮಾಲಯ ರಕ್ಷಿಸಿ ಸಮ್ಮೇಳನ ಇತ್ಯಾದಿ ರಾಜಕೀಯ ಕಾರ್ಯಕ್ರಮಗಳನ್ನೂ ಅವಿಷ್ಕರಿಸಿ ಕೊಟ್ಟಿದ್ದರು.

ಸಮಾಜವಾದಿ ಭಾರತದಲ್ಲಿ ರೈತನೇ ಪ್ರಗತಿ ಚಿತ್ರದ ಕೇಂದ್ರ ಬಿಂದುವಾಗಬೇಕು ಎಂದು ನಂಬಿದ್ದ ಲೋಹಿಯಾ, ಐವತ್ತರ ದಶಕದಲ್ಲೇ ಒಂದು ಲಕ್ಷ ಜನ ರೈತರ ಜಾಥಾ ಸಂಘಟಿಸಿ ಸಂಸತ್ತಿನ ಮುಂದೆ ಮತ ಪ್ರದರ್ಶನ ನಡೆಸಿದ್ದರು. ಕರ್ನಾಟಕದಲ್ಲಿ ಭೂ ಸುಧಾರಣೆ ಕಾರ್ಯಕ್ರಮಕ್ಕೆ ಅಸ್ತಿವಾರ ಹಾಕಿದ ಕಾಗೋಡು ಸತ್ಯಾಗ್ರಹಕ್ಕೆ ಬೆಂಬಲವಾಗಿ ಬಂದು ಭಾಗವಹಿಸಿ, ಬಂಧಿತರಾದದ್ದೂ ಉಂಟು. ಹೊರಗಿನ ಆಳುಗಳಿಲ್ಲದೆ ಐದು ಮಂದಿ ಸದಸ್ಯರ ಕುಟುಂಬವೊಂದು ಬೇಸಾಯ ಮಾಡಬಹುದಾದ ಭೂಮಿಯ ಮೂರರಷ್ಟಕ್ಕೆ ಭೂಪರಿಮಿತಿಯನ್ನು ನಿಗದಿಪಡಿಸಬೇಕೆಂದು ಅವರು ಪ್ರತಿಪಾದಿಸಿದ್ದರು. ಎಲ್ಲ ಖಾಸಗಿ ವಲಯದ ಬೃಹತ್ ಕಾರ್ಖಾನೆಗಳನ್ನು ಸರ್ಕಾರ ವಶ ಪಡಿಸಿಕೊಂಡು ಸಹಕಾರಿ ತತ್ವದ ಆಡಳಿತಕ್ಕೆ ಒಳಪಡಿಸಿ ಸಾಮಾಜಿಕರಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ವಿಶೇಷ ಪರಿಣಿತಿ ಬೇಡದ ಎಲ್ಲ ಉದ್ಯೋಗಗಳಲ್ಲಿ ಹಿಂದುಳಿದ ವರ್ಗಗಳಿಗೆ ವಿಶೇಷ ಪ್ರಾಶಸ್ತ್ಯವನ್ನು

ಒತ್ತಾಯಿಸಿದ ಅವರು, ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ್ದರು. ನಮ್ಮ ಹೆಣ್ಣು ಮಕ್ಕಳಿಗೆ ಕೆಚ್ಚು ಮತ್ತು ವಿವೇಕಗಳ ದ್ರೌಪಡಿ ಮಾದರಿಯಾಗಬೇಕೇ ಹೊರತು, ಪತಿ ವಿಧೇಯತೆಯ ಸೀತೆ–ಸಾವಿತ್ರಿಯರಲ್ಲ ಎಂದಿದ್ದ ಅವರು, ಹೆಣ್ಣು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಒದಗಿಸುವುದರೊಂದಿಗೆ ತಂದೆ ತಾಯಿಯವರ ಕರ್ತವ್ಯ ಮುಗಿದು, ಮುಂದೆ ಅವರಿಗೆ ತಮ್ಮ ಜೀವನಕ್ಕೆ ತಾವೇ ಜವಾಬ್ದಾರರಾಗುವ ಅವಕಾಶವಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದರು.

ಇಡೀ ದೇಶಕ್ಕೆ ಒಂದು ಸಾಮಾನ್ಯ ನಾಗರೀಕ ಸಂಹಿತೆ ಇರಬೇಕೆಂದು ನಂಬಿದ್ದ ಲೋಹಿಯಾ, ಮುಸ್ಲಿಮರ ಬುರ್ಖಾ, ಹಿಂದೂಗಳ ಪರದಾಗಳಂತಹ ಮಧ್ಯಯುಗೀನ ಸ್ತ್ರೀ ನಿರ್ಬಂಧ ಪದ್ಧತಿಗಳನ್ನು ನಿಷೇಧಿಸಬೇಕೆಂದರು. ನೈತಿಕ ತರಬೇತಿ ಹಾಗೂ ಧ್ಯಾನ–ಪ್ರಾರ್ಥನೆಗಳಂತಹ ಅತೀತದೊಡನೆಯ ಸಂವಾದದ ರೂಪಗಳಲ್ಲಿ ಮಾತ್ರ ಧರ್ಮವನ್ನು ಮಾನ್ಯ ಮಾಡಬಹುದಾಗಿದೆ ಎಂದ ಅವರು, ಆಸ್ತಿ ಮತ್ತು ಹೆಣ್ಣಿಗೆ ಸಂಬಂಧಪಟ್ಟ ಕಾನೂನು ಕಟ್ಟಳೆಗಳಿಗೆ ಸಂಬಂಧಿಸಿದಂತೆ ಧರ್ಮವನ್ನು ದೂರವಿಡಬೇಕೆಂದು ಸೂಚಿಸಿದರು. ಸ್ವತಃ ತಾವೇ ಭಾರತೀಯ ಪುರಾಣಗಳ ವಿಶಿಷ್ಟ ವ್ಯಾಖ್ಯಾನ ಮಾಡಿ, ರಾಮ–ಕೃಷ್ಣ–ಶಿವ ಹೇಗೆ ತಮ್ಮ ವೈವಿಧ್ಯಮಯ ಆವೃತ್ತಿಗಳಲ್ಲಿ ಭಾರತೀಯ ಜನಜೀವನದ ಅಂತರಂಗಿಕ ಮೂರ್ತಿಗಳಾಗಿ ಕ್ರಿಯಾಶೀಲರಾಗಿದ್ದಾರೆ ಎಂಬುದನ್ನು ನಿರೂಪಿಸಿದ್ದರು. ದೇವರು ಮತ್ತು ಹೆಣ್ಣು ತಮ್ಮ ಬದುಕಿನ ಮುಖ್ಯ ಅನ್ವೇಷಣೆಗಳಾಗಿದ್ದು; ದೇವರು ಸಿಕ್ಕಿಲ್ಲ. ಹೆಣ್ಣು ದಕ್ಕಿಲ್ಲ ಎಂದು ತಮ್ಮ ಜೀವನ ದರ್ಶನವನ್ನು ಲಘು–ಲಲಿತವಾಗಿ ಹೇಳಿದ್ದ ಲೋಹಿಯಾ ಕೆಲವರು ತಿಳಿದಂತೆ ನಾಸ್ತಿಕರಾಗಿರದೆ, ಬುದ್ಧನಂತೆ ಅಜ್ಞೇಯತಾ ವಾದಿಯಾಗಿದ್ದರು. ಹಿಂದು–ಮುಸ್ಲಿಂ ಏಕತೆಯನ್ನು, ಇತಿಹಾಸ ಕಲಿಕೆಯ ಪರಿಷ್ಕರಣೆ ಹಾಗೂ ಇಬ್ಬರು ಪರಸ್ಪರ ಅನುಮಾನಗಳನ್ನು ಹುಟ್ಟಿಸದ ರೀತಿಯಲ್ಲಿ ಪ್ರಜ್ಞಾಪೂರ್ವಕ ಬಾಳುವೆ ಮಾಡುವಂತಹ ವಾತಾವರಣ ನಿರ್ಮಾಣ ಮಾಡುವ ಮೂಲಕ ಮಾತ್ರ ಸಾಧಿಸಬಹುದೆಂದು ಭಾವಿಸಿದ್ದರು. ರಾಷ್ಟ್ರ ವಿಭಜನೆಯನ್ನು ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಗಡಿನಾಡ ಗಾಂಧಿಯೊಂದಿಗೆ ವಿರೋಧಿಸಿದ ಲೋಹಿಯಾ, ಒಂದಲ್ಲ ಒಂದು ದಿನ ಭಾರತ–ಪಾಕಿಸ್ತಾನಗಳು ಒಂದಾಗುತ್ತವೆಂದು ನಂಬಿದ್ದರು. ತಾವು ಸಂಪಾದಿಸುತ್ತಿದ್ದ 'ಮ್ಯಾನ್‌ಕೈಂಡ್' ಎಂಬ ಇಂಗ್ಲಿಷ್ ತ್ರೈಮಾಸಿಕದ ಮೂಲಕ ಅವರು ಜಾಗತಿಕ ಮಟ್ಟದಲ್ಲಿ ಸಮಾಜವಾದಿ ಜಿಜ್ಞಾಸೆಗೆ ವೇದಿಕೆ ಸೃಷ್ಟಿಸಿದ್ದರು.

ಸಮಾನತೆಯ ಮುಖ್ಯ ಆಶಯವನ್ನಾಧರಿಸಿದ ತಮ್ಮ ಸಮಾಜವಾದಿ ತತ್ವದ ವಿಷದೀಕರಣಕ್ಕಾಗಿ ಅವರು ೧೯೬೭ರ ಲೋಕಸಭಾ ಚುನಾವಣೆಯಲ್ಲಿ ಗ್ವಾಲಿಯರ್‌ನ ರಾಣಿ ವಿರುದ್ಧ ಪೌರ ಕಾರ್ಮಿಕ ಮಹಿಳೆಯೊಬ್ಬಳನ್ನು ತಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದರು. ಜಾಗತಿಕ ಸರ್ಕಾರದ ಕನಸಿನ ಪ್ರತೀಕವಾಗಿ ಪಾಸ್‌ಪೋರ್ಟ್ ಇಲ್ಲದೆ – ಕಲ್ಕತ್ತದಿಂದ ರಷ್ಯಾ ಸಮಾಜವಾದಿ ಸಮ್ಮೇಳನಗಳಲ್ಲಿ ಭಾಗವಹಿಸಲು ರಂಗೂನ್‌ಗೆ ವಿದೇಶ ಪ್ರಯಾಣದ ಸಾಹಸ ಮಾಡಿದರು. ಅಮೆರಿಕಾ ಪ್ರವಾಸದ ಸಂದರ್ಭದಲ್ಲಿ ವರ್ಣಭೇದ ನೀತಿಯ ವಿರುದ್ಧ ಪ್ರತಿಭಟನಾರ್ಥವಾಗಿ ವರ್ಣೀಯರಿಗೆ ಪ್ರವೇಶವಿಲ್ಲದ ಉಪಹಾರ ಗೃಹವನ್ನು ಪ್ರವೇಶಿಸಿ ಬಂಧಿತರಾಗಿ, ಅಮೆರಿಕಾ ಸರ್ಕಾರ ಕ್ಷಮೆ ಕೇಳುವಂತೆ ಮಾಡಿದರು.

ಹೀಗಾಗಿ, ರಾಮಮನೋಹರ ಲೋಹಿಯಾ ವ್ಯವಸ್ಥೆಯ ವಿರುದ್ಧದ ನಿರಂತರ ಹೋರಾಟದ ಉಜ್ವಲ ಸಂಕೇತವಾಗಿ ರಾಷ್ಟ್ರದ ಅನೇಕ ಲೇಖಕ-ಕಲಾವಿದ-ಚಿಂತಕರ ಗಮನ ಸೆಳೆದಿದ್ದರು. ಕನ್ನಡದ ಮಟ್ಟಿಗೆ ಮುಖ್ಯವಾಗಿ, ಕುವೆಂಪು, ಪು.ತಿ.ನ., ಅಡಿಗ ಹಾಗೂ ಜಿ.ಎಸ್. ಶಿವರುದ್ರಪ್ಪನವರು ಒಂದಲ್ಲ ಒಂದು ಕಾರಣಕ್ಕೆ ಲೋಹಿಯಾರಿಂದ ಸೆಳೆಯಲ್ಪಟ್ಟಿದ್ದರು. ಈ ಹೋರಾಟದಲ್ಲಿ ಅವರು ಸ್ವತಂತ್ರ ಭಾರತದಲ್ಲಿ ಯಾರೂ ಅನುಭವಿಸದಷ್ಟು ಬಾರಿ-ಹದಿನೆಂಟು ಬಾರಿ-ಸೆರೆಮನೆ ವಾಸ ಅನುಭವಿಸಿದರು ಹಾಗೂ ಈ ಸಂದರ್ಭದಲ್ಲಿ ಅನೇಕ ಬಾರಿ ಬ್ರಿಟಿಷರ ಕಾಲದಲ್ಲೂ ಒಳಗಾಗದಂತಹ ಪೋಲೀಸ್ ದೌರ್ಜನ್ಯಕ್ಕೂ ಒಳಗಾಗಿದ್ದರು.

ಇಂತಹ ಲೋಹಿಯಾ, ಜಾಗತೀಕರಣ ತಂದೊಡ್ಡುತ್ತಿರುವ ಅಪಾಯಗಳ ವಿರುದ್ಧದ ಅಂದೋಲನಕ್ಕೆ ಭಾರತದ ಮಟ್ಟಿಗಾದರೂ, ಸ್ಫೂರ್ತಿ ಕೇಂದ್ರವಾಗದೆ, ಇನ್ನಾರಾದರು? ನಾವು ಹೈ-ಟೆಕ್ ಆಧುನಿಕತೆಯ ಹಾದಿಯಲ್ಲಿ ಎಷ್ಟು ಮುಂದೆ ಹೋಗಿಬಿಟ್ಟಿದ್ದೀವೆಂದರೆ, ಹಿಂದೆ ಬರುವುದು ಅಸಾಧ್ಯ ಎನ್ನುವವರು, ಈ ಹಾದಿ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ವ್ಯವಧಾನದಲ್ಲಿ ಆಲೋಚಿಸಬೇಕು. ಈ ಅಭಿವೃದ್ಧಿ ಎಂತಹುದು, ಎಷ್ಟು, ಏಕೆ ಮತ್ತು ಯಾರಿಗಾಗಿ ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ನಾವು, ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಭವಿಷ್ಯದ ಮಟ್ಟಿಗೆ ಮಾತ್ರ ಆಲೋಚಿಸುವ ಸಮೀಪ ದೃಷ್ಟಿಯ ಸಮಾಜ, ಅವನತಿಯ ಕಡೆಗೆ ಮಾತ್ರ ನಡೆಯಬಲ್ಲದು. ಇಂದಿನ 'ಅಭಿವೃದ್ಧಿ' ಹುಟ್ಟು ಹಾಕುತ್ತಿರುವ ಸಾಮಾಜಿಕ ಅಶಾಂತಿ ಹಾಗೂ ಜೀವ ಪರಿಸರ ನಾಶ ನಮ್ಮಲ್ಲಿ ಅತ್ಯಂತಿಕ ಆತಂಕ ಹುಟ್ಟಿಸದಿದ್ದಲ್ಲಿ, ನಾವು ನಾಗರಿಕ ಜಗತ್ತಿನ ಮಾತ್ರ ಅಲ್ಲ, ಜೀವ ಜಗತ್ತಿನ ಪ್ರಜೆಗಳಿಗಾಗಿ ಉಳಿಯುವ ಎಲ್ಲ ಅರ್ಹತೆಗಳನ್ನೂ ಕಳೆದುಕೊಂಡು ಆಧುನಿಕ ಭಸ್ಮಾಸುರರಾಗುತ್ತಿದ್ದೇವೆ ಎಂದೇ ಅರ್ಥ. ಇದರರ್ಥ, ನಾವು ಕಾಲದಲ್ಲಿ ಹಿಂದಕ್ಕೆ ಹೋಗಬೇಕು ಎಂಬುದಲ್ಲ. ಅದು ಸಾಧ್ಯವೂ ಆಗದು. ಬದಲಿಗೆ, ಹಾದಿಯ ದಿಕ್ಕನ್ನು ಕ್ರಮೇಣ ಬದಲಿಸುವ ಸಂಕಲ್ಪ ಮಾಡಿ, ಅದಕ್ಕೆ ಅಗತ್ಯವಾದ ಮೂಲಭೂತ ತಾಂತ್ರಿಕ ಹಾಗೂ ಆಡಳಿತಾತ್ಮಕ ಬದಲಾವಣೆಗಳಿಗಾಗಿ, ಕಾರ್ಯಕ್ರಮಗಳನ್ನು ಆರಂಭಿಸಲು ಸರ್ಕಾರಗಳ ಮೇಲೆ ಒತ್ತಡ ತರಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಜೀವನ ಕ್ರಮವನ್ನು ಮಿತಿಗಳುಳ್ಳ ಬದುಕಿನ ಶೈಲಿಗೆ ಪರಿವರ್ತಿಸಿಕೊಳ್ಳಬೇಕಾಗಿದೆ.

ಈ ದಿಕ್ಕಿನಲ್ಲಿ ಈಗಾಗಲೇ ಜಗತ್ತಿನಾದ್ಯಂತ ಒಂದು ದೊಡ್ಡ ಆಂದೋಲನವೇ ಆರಂಭವಾಗಿದೆ. ಜಾಗತೀಕರಣದ ಚಾಲಕ ಶಕ್ತಿಯಾಗಿರುವ ಅಮೇರಿಕಾದ ರಾಜಕೀಯ ಪಿತೂರಿ-ದಬ್ಬಾಳಿಕೆಗಳಿಂದ ಬಸವಳಿದು ಹೋಗಿರುವ ಲ್ಯಾಟಿನ್ ಅಮೆರಿಕಾದಿಂದಲೇ 'ವಿಶ್ವ ಸಾಮಾಜಿಕ ವೇದಿಕೆ'ಯಡಿ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನ ಆರಂಭವಾಗಿದೆ. ೨೦೦೧ರಲ್ಲಿ ಜಿ-೮ ಗುಂಪಿನ ಶ್ರೀಮಂತ ದೇಶಗಳು ಜಾಗತೀಕರಣವನ್ನು ಅಧಿಕೃತಗೊಳಿಸಿದ್ದ 'ವಿಶ್ವ ಆರ್ಥಿಕ ಶೃಂಗ ಸಭೆ'ಯನ್ನು ಸ್ವಿಟ್ಜರ್‌ಲೆಂಡ್‌ನ ಡಾವೋಸ್‌ನಲ್ಲಿ ಆಯೋಜಿತಗೊಳಿಸಿದ್ದ ಸಂದರ್ಭದಲ್ಲೇ, ಅದಕ್ಕೆ ಪರ್ಯಾಯವೆಂಬಂತೆ ಬ್ರೆಜಿಲ್‌ನ ಪೋರ್ಟೋ ಅಲೆಗ್ರೆಯಲ್ಲಿ ರೂಪುಗೊಂಡ 'ವಿಶ್ವ ಸಾಮಾಜಿಕ ವೇದಿಕೆ', ಈಗ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಸೇರಿದಂತೆ ಜಗತ್ತಿನ ಬಹುಪಾಲು ದೇಶಗಳ ಜನಗಳ ಬೆಂಬಲ ಗಳಿಸಿದೆ. ಈ

ಆಂದೋಲನ ಆರಂಭವಾದಾಗಿನಿಂದ ಲ್ಯಾಟಿನ್ ಅಮೆರಿಕಾದ ಮೂರು ರಾಷ್ಟ್ರಗಳಲ್ಲಿ – ಬಲಿವಿಯಾ, ವೆನಿಜೂಲ ಹಾಗೂ ನಿಕಾರುಗುವಾ – ಸಮಾಜವಾದಿ ಸರ್ಕಾರಗಳು ಸ್ಥಾಪಿತವಾಗಿರುವುದು ಈ ಆಂದೋಲನದ ಯಶಸ್ಸಿನ ಸಂಕೇತವಾಗಿದೆ. ಇತ್ತೀಚೆಗೆ ತಾನೇ ಮೆಕ್ಸಿಕೊದಲ್ಲಿ ನಡೆದ ಚುನಾವಣೆಗಳಲ್ಲಿ ಸಮಾಜವಾದಿ ಸರ್ಕಾರ ಸ್ಥಾಪಿತವಾಗುವ ಅವಕಾಶ ಕೂದಲೆಳೆ ಅಂತರದಲ್ಲಿ – ಮತ ಎಣಿಕೆ ಕಾಲದಲ್ಲಿ ಗಣಕ ಯಂತ್ರಗಳು ಕೈಕೊಟ್ಟು– ಸಮಾಜವಾದಿಗಳ ಮುನ್ನಡೆ ಆಶ್ಚರ್ಯಕರವಾಗಿ ಹಿನ್ನಡೆಯಾಗಿ ಪರಿವರ್ತಿತವಾಗಿ ತಪ್ಪಿ ಹೋಗಿದೆ.

ಇದೆಲ್ಲದರ ಪರಿಣಾಮ ನಮ್ಮ ದೇಶದ ರಾಜಕೀಯದ ಮೇಲೆ ಆಗದೇ ಇಲ್ಲ. ಜಾಗತೀಕರಣದಿಂದ ಆರ್ಥಿಕವಾಗಿ 'ಹೊಳೆಯುತ್ತಿದ್ದ ಭಾರತ', ಕಳೆದ ಚುನಾವಣೆಗಳಲ್ಲಿ ಸಾಮಾಜಿಕ ವಲಯಕ್ಕೂ ಆದ್ಯತೆ ನೀಡುವುದಾಗಿ ಘೋಷಿಸಿಕೊಂಡ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿದೆ. ಆದರೆ ಬರೀ ಆದ್ಯತೆಯಲ್ಲ, ಸಾಮಾಜಿಕ ವಲಯವೇ ಮೂಲ ಕಾಳಜಿಯಾಗಿರುವ ಜನತಾ ಅರ್ಥಶಾಸ್ತ್ರದ ದಿನಗಳು ಚಾಲ್ತಿಗೆ ಬರಬೇಕಿದೆ. ಆ ಮುನ್ನ, ಈ ಜನತಾ ಅರ್ಥಶಾಸ್ತ್ರ ತನ್ನ ದೌರ್ಬಲ್ಯಗಳನ್ನು ಗುರುತಿಸಿಕೊಂಡು ಮತ್ತು ತನ್ನ ಅತಿಗಳನ್ನು ಕಳೆದುಕೊಂಡು (ಅಂದರೆ, ಅದಕ್ಷತೆಯ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಮುಷ್ಕರ–ಚಳುವಳಿ ಇತ್ಯಾದಿ) ಈಗ ಚಾಲ್ತಿಯಲ್ಲಿರುವ ಸರಕು ಅರ್ಥಶಾಸ್ತ್ರದ ಅಶ್ಲೀಲತೆಯನ್ನು ಎತ್ತಿ ತೋರಿಸುವ ನೈತಿಕ ಸ್ಥೈರ್ಯವನ್ನು ರೂಢಿಸಿಕೊಳ್ಳಬೇಕಿದೆ. ಹಾಗೆ ನೋಡಿದರೆ, ಇಂದು ಮಹಾರಾಷ್ಟ್ರದ ಮಾದರಿಗ್ರಾಮ ಆಂದೋಲನದ ಅಣ್ಣ ಹಜಾರೆ, ಪರ್ಯಾಯ ತಂತ್ರಜ್ಞಾನದ ಪ್ರಯೋಗಶೀಲ ವಿಜ್ಞಾನಿ ಪಿ.ವಿ. ಶೇಷಾದ್ರಿ ಮತ್ತು ಗ್ರಾಮ ಸ್ವರಾಜ್ಯ ಆಂದೋಲನದ ಇಳಂಗೋವನ್ ಭಾರತೀಯ ಸಮಾಜವಾದಿ ಚಳುವಳಿಯಲ್ಲಿ ಕಾಣೆಯಾಗಿದ್ದ ರಚನಾತ್ಮಕ ಕತೆಯ ಮೂರು ಮುಖಗಳಂತಿದ್ದರೆ; ನರ್ಮದಾ ಆಂದೋಲನದ ಮೇಧಾ ಪಾಟ್ಕರ್, ಮಾನವ ಹಕ್ಕುಗಳ ಹೋರಾಟಗಾರ್ತಿ ಅರುಣಾ ರಾಯ್, ಪ್ರಭುತ್ವ ಭಯೋತ್ಪಾದನೆ ವಿರುದ್ಧದ ಚಳುವಳಿಕಾರ್ತಿ ಅರುಂಧತಿ ರಾಯ್ – ಈ ಮಹಿಳಾ ತ್ರಿಮೂರ್ತಿಗಳ ಪ್ರತಿಭಟನೆ, ಸಮಾಜವಾದಿ ಚಳುವಳಿಯ ಪ್ರತಿರೋಧಮುಖದ ಮುಂದುವರಿಕೆಯೇ ಆಗಿದೆ. ಲೋಹಿಯಾ ನೆನಪು ಅರ್ಥಪೂರ್ಣವೆನ್ನಿಸುವುದು ಇಂತಹವರ ಮೂಲಕವೇ.

ಹೀಗಾಗಿ, ಹೇಗೆ ನಂಬುವುದು ಸಮಾಜವಾದದ ಕಾಲ ಮುಗಿದುಹೋಗಿದೆ ಎಂದು? ಹಾಗೆ ನೋಡಿದರೆ, ಭವಿಷ್ಯವಿರುವುದು ಸಮಾಜವಾದಕ್ಕೇ ಎನಿಸುತ್ತದೆ. ಆದರೆ, ಇತಿಹಾಸದಿಂದ ಪಾಠ ಕಲಿತು ರೂಪುಗೊಳ್ಳುವ ಹೊಸ ಸಮಾಜವಾದಕ್ಕೆ. ಏಕೆಂದರೆ, ಅದು ಕರುಣೆ ಮತ್ತು ಕೆಚ್ಚುಗಳು ಸಂಗಮಿಸಿದ ಮೂಲ ಮನುಷ್ಯ ಧರ್ಮವೇ ಆಗಿರುತ್ತದೆ. ಬಹುಶಃ ಹಾಗಾಗಿಯೇ, ಈಚೆಗೆ ನಿಧನರಾದ, ಲೋಹಿಯಾ ಪರಂಪರೆಯ ಕೊನೆಯ ಕೊಂಡಿಯಂತಿದ್ದ ಕಿಷನ್ ಪಟ್ನಾಯಕರು ತಮ್ಮ ಕೊನೇ ದಿನಗಳ ಬಾಷಣಗಳಲ್ಲಿ ಈಶೋಪನಿಷತ್ತಿನ ಅಪರಿಗ್ರಹ ಹಾಗೂ ಬೌದ್ಧ ಧರ್ಮದ ಕರುಣಾ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತಿದ್ದುದು.

(ಸುಧಾ : ಮಾರ್ಚ್ ೨೮, ೨೦೦೭)

'ಲೋಹಿಯಾವಾದದ ಮರುವಿಮರ್ಶೆ': ಶಿವಸುಂದರ್‌ಗೊಂದು ಪತ್ರ

ಪ್ರಿಯ ಶಿವಸುಂದರ್,

ನೀವು ವಿಶ್ವಾಸಪೂರ್ವಕವಾಗಿ ಓದಲು ಕೊಟ್ಟ 'ಲೋಹಿಯಾವಾದದ ಮರುವಿಮರ್ಶೆ' ಎಂಬ ನಮ್ಮ ಸುದೀರ್ಘ ಲೇಖನವನ್ನು ಇದೀಗ ತಾನೇ ಓದಿ ಮುಗಿಸಿದೆ. ಈ ಲೇಖನದ ಹಿಂದೆ ಎದ್ದು ಕಾಣುವ ತಾತ್ವಿಕ ಶ್ರದ್ಧೆ, ಅಪಾರ ಓದು ಮತ್ತು ಬರವಣಿಗೆಯ ಶ್ರಮಕ್ಕಾಗಿ ನಿಮ್ಮನ್ನು ಅಭಿನಂದಿಸ ಬಯಸುವೆ. ಆದರೆ ಸದ್ಯಕ್ಕೆ ನಿಮ್ಮ ಲೇಖನದ ಪ್ರತಿ ಅಂಶವನ್ನೂ ಎತ್ತಿಕೊಂಡು ಚರ್ಚಿಸುವ ವ್ಯವಧಾನ ನನಗಿಲ್ಲ. ಅದರ ಅಗತ್ಯ ಅಥವಾ ಅನಿವಾರ್ಯತೆಯೂ ನನಗೆ ಕಂಡುಬಂದಿಲ್ಲ. ಅದಕ್ಕಾಗಿ ಕ್ಷಮೆ ಇರಲಿ. ಇದೇಕೆ ಎಂದು ವಿವರಿಸುವ ಪ್ರಯತ್ನವನ್ನಷ್ಟೇ ನಾನಿಲ್ಲಿ ಮಾಡಿರುವೆ.

ನೀವು ಲೋಹಿಯಾ ಅವರು ಮಾರ್ಕ್ಸ್‌ವಾದದ ಬಗ್ಗೆ ಎತ್ತಿರುವ ಸರಿ ಸುಮಾರು ಎಲ್ಲ ಆಕ್ಷೇಪಣೆಗಳನ್ನೂ ಗಮನಿಸಿದ್ದೀರಿ. ನಿಮ್ಮ ವ್ಯಾಪಕ ಓದಿನ ಹಿನ್ನೆಲೆಯಲ್ಲಿ ಅದಕ್ಕೆ ತಕ್ಕನಾದ ಉತ್ತರ/ಸ್ಪಷ್ಟೀಕರಣಗಳನ್ನೂ ನೀಡಿದ್ದೀರಿ. ಆದರೆ ಇದು ನಿಮ್ಮ ಬರಹದ ರಚನಾತ್ಮಕ ಮುಖ ಹೇಗೋ, ಹಾಗೆಯೇ ನಿಷೇಧಾತ್ಮಕ ಮುಖವೂ ಆಗಿದೆ ಎಂದು ಆರಂಭದಲ್ಲಿಯೇ ತಿಳಿಸಬಯಸುವೆ. ಏಕೆಂದರೆ ನಿಮ್ಮ ಈ ಇಡೀ ಲೇಖನಕ್ಕೆ ಮಾರ್ಕ್ಸ್‌ವಾವೆಂಬುದು ಒಂದು referenc point ಆಗಿ ಇದ್ದುಕೊಂಡು, ಲೇಖನ ಮಾರ್ಕ್ಸ್‌ವಾದಿಯೊಬ್ಬ ಲೋಹಿಯಾ ವಿಚಾರಗಳಿಗೆ ನೀಡಿದ ಪ್ರತಿಕ್ರಿಯೆಯಂತೆ ಇದೆಯೇ ಹೊರತು, ಲೋಹಿಯಾ ವಿಚಾರಗಳನ್ನು ಯಾವುದೇ ತಾತ್ವಿಕ ಉಪಾಧಿಗಳಿಲ್ಲದ (ಭಾರತದ) ಸಾಮಾನ್ಯ ಮನುಷ್ಯನಾಗಿ ಗ್ರಹಿಸಿದ/ ಪರಿಶೀಲಿಸದ ಪ್ರಯತ್ನವಾಗಿ ಕಾಣುವುದಿಲ್ಲ. ಲೋಹಿಯಾ ವಿಚಾರಗಳನ್ನು ನೀವು ಒಪ್ಪಿ, ಮೆಚ್ಚುವ ಅಂಶಗಳ ವಿಷಯದಲ್ಲೂ ಈ ದೃಷ್ಟಿಕೋನ ಎದ್ದು ಕಾಣುವಂತಿದೆ. ಇದಕ್ಕೆ ಮುಖ್ಯ ಕಾರಣ, ಮಾರ್ಕ್ಸ್‌ವಾದ ಕುರಿತ ಲೋಹಿಯಾ ವಿಮರ್ಶೆಗೆ ಆಧಾರಗಳು ಮಾರ್ಕ್ಸ್‌ವಾದದಲ್ಲೇ ಇವೆಯೆಂಬ ನಿಮ್ಮ ನಂಬಿಕೆ. ಹಾಗೇನಲ್ಲ. ಲೋಹಿಯಾರ ಈ ವಿಮರ್ಶೆಯ ಆಧಾರಗಳು ಅವರ ವಿಭಿನ್ನ ಲೋಕದೃಷ್ಟಿಯಲ್ಲಿರುವ ಸಾಧ್ಯತೆಗಳೂ ಇವೆ ಎಂಬುದನ್ನು ನೀವು ಪರಿಶೀಲಿಸಲೇ ಹೋಗಿಲ್ಲ. ಇದು ಮಾರ್ಕ್ಸ್‌ವಾದದಂತಹ ಏಕಾತ್ಮಕವಾದಗಳು (ನಮ್ಮ ವೈದಿಕ ಅದ್ವೈತದಂತೆ) ಹುಟ್ಟಿಸುವ ಸರ್ವಜ್ಞಗರ್ವದ ಅಪಾಯ! ಈ ಬಗ್ಗೆ ಮುಂದೆ ಹೇಳುವೆ.

ಈ ಮಾತುಗಳನ್ನು ಏಕೆ ಹೇಳುತ್ತಿರುವೆನೆಂದರೆ, ಲೋಹಿಯಾರನ್ನು ಹೀಗೆ ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ನೋಡಿದಾಗ ತಲುಪುವ ತೀರ್ಮಾನಗಳು, ಅವರನ್ನು

ಗಾಂಧಿವಾದಿ ದೃಷ್ಟಿಕೋನದಿಂದ ನೋಡಿದಾಗ ತಲುಪುವ ತೀರ್ಮಾನಗಳಿಂದ ಬಹು ಭಿನ್ನವಾಗಿರಬಲ್ಲವು ಎಂಬುದನ್ನು ನಿಮಗೆ ಸೂಚಿಸಲು. ಲೋಹಿಯಾ, ಗಾಂಧಿ ಮತ್ತು ಮಾರ್ಕ್ಸ್ ಇಬ್ಬರ ಪ್ರಭಾವದ ನಡುವೆ ತಮ್ಮ ವ್ಯಕ್ತಿತ್ವ–ವಿಚಾರಗಳನ್ನು ರೂಪಿಸಿಕೊಂಡವರು. ಹಾಗಾಗಿ ಅವರನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದಲೇ ಪರಿಶೀಲಿಸಲಾಗದು. (ಲೋಹಿಯಾ ತಮ್ಮ ವಿಚಾರಗಳನ್ನು ಮಂಡಿಸುವಾಗ, ಅರಿಸ್ಟಾಟಲ್‌ನಿಂದ ಹಿಡಿದು ಹೆಗಲ್‌ನವರೆಗೆ; ಹಾಗೇ ಬುದ್ಧನಿಂದ ಹಿಡಿದು ಶಂಕರಾಚಾರ್ಯರವರೆಗೆ ತಮ್ಮ ವಿಚಕ್ಷಣ ನೋಟವನ್ನೂ ಬೀರಿದ್ದಾರೆ ಎಂಬುದನ್ನು ನಾವು ಗಮನಸಬೇಕು) ನಿಮ್ಮ ಇಡೀ ಲೇಖನದಲ್ಲಿ ಗಾಂಧಿ ಪ್ರಭಾವದ ದೃಷ್ಟಿಕೋನ ಕಾಣೆಯಾಗಿದೆ ಎಂಬುದು ನಿಮ್ಮ ಪರಿಶೀಲನಾ ವಿಧಾನದ ಸಣ್ಣ ದೋಷವೇನಲ್ಲ.

ಹಾಗೆ ನೋಡಿದರೆ, ನಿಮ್ಮಂತೆ ಲೋಹಿಯಾರನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದಲೇ ಏಕೆ ನೋಡಬೇಕು ಎಂಬ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕಲ್ಲವೆ? ಭಾರತದ ಸಾಮಾನ್ಯ ಮನುಷ್ಯ ನಮ್ಮ ನಿಮ್ಮ ಹಾಗೆ ತನ್ನ ಸಾಮಾನ್ಯ ಪರಿಜ್ಞಾನದ ಹೊರತಾಗಿ ಯಾವುದೇ reference point ಇಟ್ಟುಕೊಂಡು ಲೋಹಿಯಾರಂನ್ನು(ಅಥವಾ ಇನ್ನಾರನ್ನೇ ಅಗಲಿ) ನೋಡುವ ಭಾರಕ್ಕೆ ಒಳಗಾಗಬೇಕಿಲ್ಲ ಅಲ್ಲವೇ? ಏಕೆಂದರೆ, ಲೋಹಿಯಾರ ಮಾರ್ಕ್ಸ್‌ವಾದದ ವಿಮರ್ಶೆಯು, ಅವರ ತತ್ವ ಮತ್ತು ರಾಜಕಾರಣದ ಮೂಲಸ್ಫೂರ್ತಿ ಏನಲ್ಲ. ಅದು ಅವುಗಳ ಒಂದು aspect ಅಥವಾ ಒಂದು ಮುಖ್ಯ aspect ಎಂದಷ್ಟೇ ಹೇಳಬಹುದು. ಮುಖ್ಯವಾಗಿ ಅವರು ಆಧುನಿಕ ನಾಗರೀಕತೆಯ ವಿಮರ್ಶಕರು. ಇದರ ಹಿಂದೆ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ ವಸಾಹತುಶಾಹಿ ಅನುಭವವನ್ನು ಸಾಕ್ಷಾತ್ ಮುಖಮುಖಿಯಾಗಿಸಿಕೊಂಡು ಪಡೆದ ಹರಿತವಾದ ಅರಿವಿದೆ ಎಂಬುದನ್ನು ನಾವು ಗಮನಿಸದಿರಲಾಗದು. ಈ ಅರವಿನ ಭಾಗವಾಗಿ ಅವರು ಬಂಡವಾಳಶಾಹಿಯಂತೆಯೇ ಕಮ್ಯೂನಿಸಂನ್ನೂ ಆಧುನಕ ನಾಗರೀಕತೆಯ ಇನ್ನೊಂದು ಮುಖವೆಂದು ವ್ಯಾಖ್ಯಾನಿಸಿದರು. ಅಷ್ಟೇ ಅಲ್ಲ, ನೀವು ಹೇಳಿದ ಹಾಗೆ ಅವರು, ಇದು ಯೂರೋಪಿನ ಆಧಿಪತ್ಯವನ್ನು ಮುಂದುವರೆಸಿಕೊಂಡು ಹೋಗುವ ರಾಜಕೀಯ ಹುನ್ನಾರ ಮಾತ್ರವಲ್ಲ; ಕಮ್ಯೂನಿಸಂ, ಕ್ರಿಶ್ಚಿಯನ್ ಧರ್ಮದ ನಂತರ ಯೂರೋಪ್ ಏಷ್ಯಾದ ಮೇಲೆ ಪ್ರಯೋಗಿಸಲೆತ್ನಿಸುತ್ತಿರುವ ಇತ್ತೀಚಿನ ಅಸ್ತ್ರವೆಂದೂ ಬಣ್ಣಿಸಿದ್ದರು. ಇದು ಲೋಹಿಯಾರ ಅತಿ ಮುಖ್ಯ ಮಾತುಗಳಲ್ಲೊಂದು ಎಂದು ನಾನು ಭಾವಿಸುವೆ.

ಏಕೆಂದರೆ ಈ ಮಾತು ಲೋಹಿಯಾ, ರಾಜಕಾರಣದ ಉದ್ದೇಶವನ್ನು ಒಂದು ಲೋಕದೃಷ್ಟಿಯ ನೆಲೆಯಲ್ಲಿಯೂ ಅರ್ಥ ಮಾಡಿಕೊಳ್ಳಲು ಯತ್ನಿಸಿದ್ದರ ಸೂಚನೆಯಾಗಿ ನನಗೆ ಕಾಣುತ್ತದೆ. Secualarism ಕ್ರಿಶ್ಚಿಯನ್ ಧಾರ್ಮಿಕ ರಾಜಕಾರಣದ ಕೊಡುಗೆ ಎಂಬುದನ್ನು ತಾವು ಬಲ್ಲಿರಿ. ಅದು (ಪ್ರಾಟೆಸ್ಟಂಟ್ ಎಂಬ ಕ್ರಿಶ್ಚಿಯಾನಟಿಯ ಆಧುನಿಕ ರೂಪ) ಯೂರೋಪ್‌ನ 'ಪುನುರುಜ್ಜೀವನ'ದ ಪ್ರಭಾವದಲ್ಲಿ ಇಡೀ ಸೃಷ್ಟಿಯನ್ನು ಬರೀ ಭೌತಿಕ ವಿದ್ಯಮಾನವಾಗಿ ಕಂಡಿದ್ದರ ಫಲ. ಇದನ್ನು (ಗಾಂಧಿಯಂತೆಯೇ) ಲೋಹಿಯಾ ಒಪ್ಪುವುದಿಲ್ಲ. ಬಹುಶಃ ಇಲ್ಲಿಂದಲೇ ಮಾರ್ಕ್ಸ್‌ವಾದ ಕುರಿತ ಲೋಹಿಯಾರ ಭಿನ್ನಮತ ಆರಂಭವಾಗುತ್ತದೆ. ಅಂದರೆ, ಜಗತ್ತನ್ನು ಗ್ರಹಿಸಲು ಹೆಗಲ್ ಮಾಡಿಕೊಂಡ ಭೌತ–

ಅಭೌತವೆಂಬ ವಿಭಜನೆಯನ್ನು ಆಧರಿಸಿದ ಗತಿ ತಾರ್ಕಿಕ ವಿಧಾನವನ್ನು ಮಾರ್ಕ್ಸ್-ಏಂಗಲ್ಸರು ತಲೆಕೆಳಗು ಮಾಡಿ ಸೃಷ್ಟಿಸಿದ ಭೌತವಾದವನ್ನೇ ಅವರು ಸಂದೇಹಾಸ್ಪದ ಎಂದು ಕರೆಯುತ್ತಾರೆ. ಭೌತ-ಅಭೌತಗಳ ಪ್ರತ್ಯೇಕತೆ ಅಥವಾ ಅವುಗಳ ದ್ವಂದ್ವಮಾಸ ಗ್ರಹಿಕೆ ವಿಧಾನವನ್ನು ಅವರು ಅನುಮಾನದಿಂದ ನೋಡುತ್ತಾರೆ. ಹಾಗಾಗಿ ಅವರಿಗೆ ಮಾನವ ಕುಲದ ಆಧುನಿಕ 'ಇತಿಹಾಸ' ಕಲ್ಪನೆಯ ಬಗೆಗೇ ಅನುಮಾನವಿದೆ. ಹೀಗಿರುವಾಗ ನೀವು ಲೋಹಿಯಾರ ವಿಚಾರಗಳನ್ನು ಮಾರ್ಕ್ಸ್‌ವಾದಿ ಚರ್ಚೆಗಳ ನಿಕಷಕ್ಕೊಡ್ಡಿ ವಿಮರ್ಶಿಸಿ ತಲುಪುವ ತೀರ್ಮಾನಗಳು, ಲೋಹಿಯಾ ವಿಚಾರಗಳಿಗೆ ಮಾಡುವ ಅನ್ಯಾಯಗಳಂತೆಯೇ ನನಗೆ ಕಾಣುತ್ತದೆ. ಇನ್ನು ಮಾರ್ಕ್ಸವಾದವನ್ನು ಒಂದು ಮೆಥಡಾಲಜಿಯಾಗಿಯಾದರೂ ಲೋಹಿಯಾ ಒಪ್ಪದಿದ್ದರ ಬಗೆಗಿನ ನಿಮ್ಮ ಹಳಹಳಿಕೆ, ನಮ್ಮ ಶರಣ ಆಂದೋಲನ, ಭಕ್ತ-ಭವಿ ಎಂಬ ಒಡಕನ್ನು ಸೃಷ್ಟಿಸಿ, ಭವಿಗಳ ಬಗ್ಗೆ ವ್ಯಕ್ತಪಡಿಸಿದ ಹಳಹಳಿಕೆಯನ್ನು ನೆನಪಿಗೆ ತರುತ್ತದೆ!

ಮಾರ್ಕ್ಸ್‌ನ ಬಂಡವಾಳಶಾಹಿ ವಿಶ್ಲೇಷಣೆ ಕುರಿತ ಲೋಹಿಯಾರ ಹಲವು ಟೀಕೆಗಳ ಬಗ್ಗೆ ನೀವು, ಇವಕ್ಕೆ ಲೋಹಿಯಾರಿಗಿಂತ ಮುಂಚಿನಿಂದಲೇ ಚರ್ಚೆ ಆರಂಭವಾಗಿ ಮಾರ್ಕ್ಸ್‌ವಾದಿಗಳಿಂದಲೇ ಉತ್ತರ ಬಂದಿವೆ ಎನ್ನುವಿರಿ.(ಹೀಗೆ ಹೇಳುತ್ತಿರುವವರಲ್ಲಿ ನೀವು ಮೊದಲಿಗರೇನಲ್ಲ!) ಆದರೆ ನೀವೂ ಸೇರಿದಂತೆ ಇವರಾರೂ ಈ ಉತ್ತರಗಳು ಅಥವಾ ವಿಸ್ತರಣೆಗಳು ಮಾರ್ಕ್ಸ್‌ವಾದದ ಇತಿಹಾಸ ನಿರೂಪಣೆ ಮತ್ತು ಬದಲಾವಣೆಯ(ಅಥವಾ ನಿಮ್ಮ ಭಾಷೆಯಲ್ಲಿಯೇ ಹೇಳುವುದಾರೆ, ದುಡಿಯುವ ವರ್ಗದ ಕ್ರಾಂತಿಯ) ಮೂಲ ಸಿದ್ಧಾಂತದ ವಾಸ್ತುಶಿಲ್ಪದೊಂದಿಗೆ; ಅಂದರೆ ಅದರ ತರ್ಕ ಮತ್ತು ಅದು ರೂಪಿಸಿದ ನಿಯಮಾವಳಿಯೊಂದಿಗೆ ಸಾವಯವವಾಗಿ ಹೇಗೆ ಬೆರೆತುಕೊಳ್ಳಬಲ್ಲವು ಎಂಬುದನ್ನು ಹೇಳಿಲ್ಲ. ಅವು ಹೆಚ್ಚೆಂದರೆ ಮೂಲ ಪಠ್ಯಕ್ಕೆ ಜೋತು ಬಿದ್ದ ಬಾಲಂಗೋಚಿಗಳಂತೆ ಕಾಣಬಲ್ಲವಷ್ಟೆ. ಹಾಗಾಗಿಯೇ, ಮಾರ್ಕ್ಸೋತ್ತರ ಮಾರ್ಕ್ಸ್‌ವಾದಿಗಳ ಈ ಉತ್ತರ, ವಿಸ್ತರಣೆ ಹಾಗೂ ಸ್ಪಷ್ಟೀಕರಣಗಳನ್ನು ಸ್ವತಃ ಲೋಹಿಯಾ ಅವರೇ, ಚರಿತ್ರೆಯನ್ನು ತಮ್ಮ ವಾದ ಹಾಗೂ ಅಂಕಿ-ಅಂಶಗಳಿಗೆ ಹೊಂದಿಸಲು ನಡೆಸುವ ಸೈದ್ಧಾಂತಿಕ ಹಿಂಸಾಚಾರ ಎಂದು ಕರೆದಿದ್ದಾರೆ. ಒಟ್ಟಂದದಲ್ಲಿ ನೋಡಿದಾಗ ನಿಮ್ಮ ಲೇಖನ, ಮಾರ್ಕ್ಸ್‌ವಾದದ ಯಜಮಾನಿಕೆಯಲ್ಲಿ ಬರೆಯಲ್ಪಟ್ಟ ಒಂದು ರಾಜಕೀಯ ಷರಾದಂತೆ ಮಾತ್ರ ಕಾಣುತ್ತದೆ.(ಸ್ವಲ್ಪ ಚೇಷ್ಟೆ ಮಾಡಿ ಹೇಳುವುದಾದರೆ, ಇದು ವೈದಿಕತೆಯ ವಿಶಿಷ್ಟಾದ್ವೈತ ವ್ಯಾಖ್ಯಾನದಂತೆ-ಅದ್ವೈತ ಮತ್ತು ದ್ವೈತಗಳಾವುವು ಎಂಬುದು ನಮಗೇ ಗೊತ್ತೇ ಇದೆ-ಕಾಣುತ್ತದೆ!)

ಹಾಗಾಗಿಯೇ ನೀವು ಲೋಹಿಯಾರ ವಿಕೇಂದ್ರೀಕರಣ ತತ್ವವನ್ನು ಇಂದಿನ ಪಂಚಾಯತ್ ರಾಜ್ ವ್ಯವಸ್ಥೆಯೊಂದಿಗೆ ಗೊಂದಲಗೊಳಿಸಿಕೊಂಡು, ಇದರಿಂದಾಗಿರುವ ಅನಾಹುತಗಳ ಜವಾಬ್ದಾರಿಯನ್ನು ಲೋಹಿಯಾರ ಚತುಸ್ತಂಭ ರಾಷ್ಟ್ರ ಕಲ್ಪನೆಗೆ ಕಟ್ಟಲು ಹವಣಿಸುತ್ತೀರಿ. ಲೋಹಿಯಾರ ಈ ಕಲ್ಪನೆ ಅವರ ಇಡೀ ಸಮಾಜವಾದಿ ರಾಜಕಾರಣದ ಅವಿಭಾಜ್ಯ ಅಂಗವಾಗಿದ್ದು, ಅದು ಇತರ ಸಮಾಜವಾದಿ ಕಾರ್ಯಕ್ರಮಗಳ ಜೊತೆ ಜಾರಿಯಾಗಬೇಕಾದ ಕಾರ್ಯಕ್ರಮವೇ ಹೊರತು, ಅದೊಂದು ಬಿಡಿ ಕಾರ್ಯಕ್ರಮವಲ್ಲ ಎಂಬುದು ನಿಮಗೆ ಏಕೆ ಗೊತ್ತಾಗಲಿಲ್ಲ? ಹಾಗೇ ನೀವು ಜಾತಿ, ಧರ್ಮ ಮತ್ತು ಕೃಷಿ

ಮತ್ತು ಕೈಗಾರಿಕಾ ನೀತಿ ಕುರಿತ ಲೋಹಿಯಾ ವಿಚಾರಗಳನ್ನು ಬಿಡಿ ಬಿಡಿಯಾಗಿ, ಸರ್ವತಂತ್ರ ಸ್ವತಂತ್ರ ವಿಷಯಗಳಂತೆ ಪ್ರಸ್ತಾಪಿಸುವ ಮೂಲಕ ಅವನ್ನು ನಿಮ್ಮ ಮುಖ್ಯ ಚರ್ಚೆಯ ಪರಿಧಿಯ ಹೊರಗಿಟ್ಟು, ನಿಮ್ಮ ಈ ಚರ್ಚೆಯ ಮೂಲ ಕಾಳಜಿಯನ್ನೇ ಅನುಮಾನಾಸ್ಪದ ಗೊಳಿಸಿಕೊಂಡಿದ್ದೀರಿ. ‘Truth is either whole or not at all’ ಎಂಬುದು ಲೋಹಿಯಾ ವೈಚಾರಿಕತೆಯ ಮೂಲ ನಂಬಿಕೆ ಎಂಬುದು ನಿಮಗೆ ಗೊತ್ತಿರಬೇಕು. ಇದೇ ರಾಜಕೀಯ ಲಹರಿಯಲ್ಲಿ ನೀವು ಅಂಬೇಡ್ಕರರನ್ನು ಬೇರೆ ಎಳೆದು ತಂದು, ಅವರ ರಾಜ್ಯ ಸಮಾಜವಾದದ ಕಲ್ಪನೆಯನ್ನು ಉದ್ದೇಶಪೂರ್ವಕವಾಗಿ ಎಂಬಂತೆ (ದುಡಿಯುವ ವರ್ಗದ) ಸರ್ವಾಧಿಕಾರವೆಂದು ನಿಮ್ಮ ಮಾರ್ಕ್ಸ್‌ವಾದಿ ಪರಿಭಾಷೆಗೆ ತರ್ಜುಮೆ ಮಾಡಿಕೊಂಡಿದ್ದೀರಿ. ಆ ಮೂಲಕ ಸಂಸದೀಯ ಪ್ರಜಾಪ್ರಭುತ್ವ ಮಾದರಿಯನ್ನು ಕುರಿತ ಅವರ ಪುನರುಚ್ಚರಿತ ಬದ್ಧತೆಯನ್ನು ಹಿನ್ನೆಲೆಗೆ ಸರಿಸುವ ಪ್ರಯತ್ನ ಮಾಡಿದ್ದೀರಿ. ಮತ್ತೆ ಆ ಮೂಲಕ ನಿಮ್ಮ ‘ಕ್ರಾಂತಿಕಾರಿ’ ಮಾರ್ಕ್ಸ್‌ವಾದದ ಪ್ರತಿಪಾದನೆಗೆ ದಾರಿ ಮಾಡಿಕೊಂಡಿದ್ದೀರಿ. ಇದು ಅಂಬೇಡ್ಕರ್ ಚಿಂತನೆಗೆ ಮಾಡಿರುವ ಅನ್ಯಾಯವಲ್ಲದೆ ಮತ್ತೇನಲ್ಲ.

ಇಲ್ಲಿ ಮುಖ್ಯ ಸಂಗತಿ ಎಂದರೆ, ಲೋಹಿಯಾ ನೀವು ಭಾವಿಸಿದಂತೆ, ಮಾರ್ಕ್ಸ್‌ವಾದವನ್ನು ತಮ್ಮ ಮೈ ಮೇಲೆ ಎಳೆದುಕೊಂಡು ತಮ್ಮ ರಾಜಕಾರಣವನ್ನು ಕಟ್ಟಿದವರಲ್ಲ. ಅವರು ಅದರ ಮೂಲ ತಾತ್ವಿಕ ವಿಮರ್ಶೆಗೆ ತೊಡಗಿದ್ದು, ಅವರೇ ಹೇಳಿಕೊಂಡಂತೆ ಮತ್ತು ನೀವೂ ಗುರುತಿಸಿರುವಂತೆ ೧೯೪೨ರಲ್ಲಿ ಕಮ್ಯುನಿಸ್ಟರು ತಮ್ಮ ರಾಜಕೀಯ ಧೋರಣೆಯನ್ನು ಇದ್ದಕ್ಕಿದ್ದಂತೆ ತಿರುಗು ಮುರುಗಾಗಿಸಿಕೊಂಡು ಭಾರತದ ರಾಷ್ಟ್ರೀಯ ಹೋರಾಟವನ್ನು ವಿರೋಧಿಸುತ್ತಾ, ಸ್ವಾತಂತ್ರ್ಯ ಹೋರಾಟಗಾರರ ಬಗೆಗೆ ಬ್ರಿಟಿಷ್ ಸರ್ಕಾರದ ಪರವಾಗಿ ಬೇಹುಗಾರರಾಗಿ ಪರಿವರ್ತಿತರಾದಾಗ. ಮಾರ್ಕ್ಸ್‌ವಾದದ ತಾತ್ವಿಕ ಸಮಗ್ರತೆ ಕುರಿತು ಗಂಭೀರ ಅನುಮಾನ-ಆತಂಕಗಳು ಸೃಷ್ಟಿಯಾದಾಗ. ಆದರೆ ಲೋಹಿಯಾ ಈ ಸಂದರ್ಭದಲ್ಲಿ ಬಂಡುಕೋರತನದ ಆಪಾದನೆಯ ಮೇಲೆ ಕೆಳ ದರ್ಜೆ ಕೈದಿಯಾಗಿ ಸೆರೆಮನೆ ಸೇರಿ ಸತತ ಚಿತ್ರಹಿಂಸೆ ಅನುಭವಿಸಬೇಕಾಗಿ ಬಂದುದರಿಂದಾಗಿ, ಈ ವಿಮರ್ಶೆಯನ್ನು ಪೂರ್ಣಗೊಳಿಸಲಾಗಲಿಲ್ಲ. ಹಾಗಾಗಿ, ಲೋಹಿಯಾರ ಮಾರ್ಕ್ಸ್‌ವಾದದ ವಿಮರ್ಶೆಯನ್ನು ಈ ನೆಲೆಯಲ್ಲಿ ಮತ್ತು ಮಿತಿಗಳಲ್ಲಿ ಅರ್ಥ ಮಾಡಿಕೊಳ್ಳಬೇಕೇ ಹೊರತು, ಅವರು ಮಾರ್ಕ್ಸ್‌ವಾದಕ್ಕೆ ಅಥವಾ ಕಮ್ಯೂನಿಸಂಗೆ ಪ್ರತಿಯಾಗಿ ಒಂದು ಸಿದ್ಧಾಂತ ಅಥವಾ ರಾಜಕಾರಣವನ್ನು ಮಂಡಿಸುವ ಪ್ರಯತ್ನ ಮಾಡಿದರು ಎಂಬ ಗ್ರಹಿಕೆಯಲ್ಲಲ್ಲ.

ಅಂದ ಮಾತ್ರಕ್ಕೆ, ನೀವು ಮತ್ತು ನಿಮ್ಮ ಕೆಲವು ಗೆಳೆಯರು ನಂಬಿರುವಂತೆ, ಲೋಹಿಯಾ ಕಮ್ಯೂನಿಸ್ಟರ ಅಥವಾ ಮಾರ್ಕ್ಸ್‌ವಾದಿಗಳ ಕುರುಡು ವಿರೋಧಿಗಳೇನೂ ಆಗಿರಲಿಲ್ಲ. ಅವರ ಕಾಂಗ್ರೆಸ್ಸೇತರವಾದದ ಫಲವಾಗಿ ೧೯೬೭ರ ನಂತರ ಚುನಾವಣೆಗಳಲ್ಲಿ ವಿವಿಧ ರಾಜ್ಯಗಳಲ್ಲಿ ರಚಿತವಾದ ಸಂಯುಕ್ತ ವಿಧಾಯಕ ದಳ ಸರ್ಕಾರಗಳಲ್ಲಿ ಜನಸಂಘದೊಂದಿಗೆ ಕಮ್ಯೂನಿಸ್ಟ್ ಪಕ್ಷವೂ ಭಾಗವಹಿಸಿತ್ತು ಎಂಬುದನ್ನು ನಾವು ಗಮನಿಸಬೇಕು. ಅಲ್ಲದೆ, ಅವರು ಜಗತ್ತಿನ ಇತರ ಭಾಗಗಳ ಸಮಾಜವಾದಿ ಚಿಂತಕರು ಮತ್ತು ನಾಯಕರ ಜೊತೆ ಮಾತ್ರವಲ್ಲ, ಅರಬ್ ಮತ್ತು ಆಫ್ರಿಕಾದ ಹಾಗೂ ಪೂರ್ವ ಯೂರೋಪಿನ ಅನೇಕ ಕಮ್ಯೂನಿಸ್ಟ್ ನಾಯಕರೊಂದಿಗೆ ಸೌಹಾರ್ದಪೂರ್ಣ ಸಂವಾದದಲ್ಲಿ ತೊಡಗಿದ್ದರು. ರಷ್ಯಾ,

ಚೀನಾ ಮತ್ತು ವಿಯಟ್ನಾಂಗಳಲ್ಲಿನ ರಾಜಕೀಯ ಬೆಳವಣಿಗೆಗಗಳನ್ನು ಕುತೂಹಲದಿಂದ ಗಮನಿಸುತ್ತಾ, ಕಾಲಾನುಕಾಲಕ್ಕೆ ಆ ಬಗ್ಗೆ ತಮ್ಮ ಟೀಕೆ-ಟಿಪ್ಪಣಿಗಳನ್ನು ಮಾಡುತ್ತಿದ್ದರು. ಇಂತಹ ಹಲವಾರು ಉದಾಹರಣೆಗಳನ್ನು ನಾವು ಅವರ ಸಂಪಾದಕತ್ವದ 'ಮ್ಯಾನ್‌ಕೈಂಡ್' ಪತ್ರಿಕೆಯ ಸಂಚಿಕೆಗಳಲ್ಲಿ ನೋಡಬಹುದು. ಇನ್ನು ನೀವು ಚೀನಾ ಆಕ್ರಮಣದ ಸಂದರ್ಭದಲ್ಲಿ ಲೋಹಿಯಾ ಚೀನಾವನ್ನು, ಅದರ ರಾಜಕೀಯ ನಾಯಕರನ್ನು ಟೀಕಿಸಿದ ರೀತಿ-ನೀತಿಗಳ ಬಗ್ಗೆ ಆಕ್ಷೇಪವೆತ್ತಿದ್ದೀರಿ. ಇದಕ್ಕೆ ಕಾರಣ, ಲೋಹಿಯಾ, ಚೀನಾದ ಟಿಬೆಟ್ ಆಕ್ರಮಣ ಕಾಲದಿಂದ ಹಿಡಿದು, ನೇಪಾಳದ ಪ್ರಜಾಪ್ರಭುತ್ವೀಕರಣದ ಹೋರಾಟವೂ ಸೇರಿದಂತೆ ತಮ್ಮ 'ಹಿಮಾಲಯಾ ಬಚಾವೋ' ಆಂದೋಲನ ಆರಂಭಿಸುವವರೆಗೆ ಚೀನಾ ಕುರಿತು ತಮ್ಮ ನಿಲುವನ್ನು ರೂಪಿಸಿಕೊಳ್ಳುತ್ತಾ ಹೋದ ನೆಲೆ ಮತ್ತು ನೀವು ಗಮನಿಸದೇ ಇರುವುದು. ಅದೇನೇ ಇರಲಿ, ಇನ್ನೂ ಜಾಗತಿಕ ಕ್ರಾಂತಿಯ ಕನಸಿನಲ್ಲೇ ಮುಳುಗಿರುವವರಿಗೆ ರಾಷ್ಟ್ರೀಯವಾದಿಗಳ ರಾಜಕೀಯ ಭಾಷೆ ಯಾವಾಗಲೂ ಆಕ್ಷೇಪಾರ್ಹವೇ ಎಂದಷ್ಟೇ ಇಲ್ಲಿ ಹೇಳಬಯಸುವೆ. ಜೊತೆಗೆ, ಮಾರ್ಕ್ಸ್‌ವಾದ ಮತ್ತು ಕಮ್ಯೂನಿಸಂ ಕುರಿತ ಲೋಹಿಯಾ ವಿಶ್ಲೇಷಣೆ ಬಗ್ಗೆ ಆಕ್ಷೇಪವೆತ್ತಿರುವ ನಿಮಗೆ ಇಲ್ಲಿಯೂ ಒಂದಿಷ್ಟು ಉತ್ತರ ದೊರಕೀತು ಎಂಬ ಒಂದು ಮಾತನ್ನೂ ಇಲ್ಲಿ ಸೇರಿಸಬಯಸುವೆ.

ಪ್ರತಿಯೊಂದು ದೇಶವೂ ತನ್ನ ಸ್ಥಳೀಯ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಮತ್ತು ಚಾರಿತ್ರಿಕ ಪರಿಸ್ಥಿತಿಗೆ ತಕ್ಕಂತೆ ತನ್ನ ರಾಜಕಾರಣವನ್ನು ರೂಪಿಸಿಕೊಳ್ಳಬೇಕೆಂದು ನಂಬಿದ್ದ ಲೋಹಿಯಾರ ವಿಶ್ವಾತ್ಮಕ ದೃಷ್ಟಿ, ವಿಶ್ವ ಸರ್ಕಾರ ಕುರಿತ ಅವರ ಪರಿಕಲ್ಪನೆಯ ವಿವರಗಳು ಸೂಚಿಸುವಂತೆ ವಿಕೇಂದ್ರೀಕೃತ ಸ್ವಾಯತ್ತತೆಯ ತತ್ವವನ್ನು ಆಧರಿಸಿತ್ತು. ಇಂದು ಕೆಲವರು ಹೇಳುವಂತೆ, ಲ್ಯಾಟಿನ್ ಅಮೆರಿಕಾದ ಕೆಲವು ದೇಶಗಳು ಮತ್ತು ಅವುಗಳ ನಾಯಕರು ಜಾಗತೀಕರಣದ ವಿರುದ್ಧ ಸೆಡ್ಡು ಹೊಡೆದು ತಮ್ಮದೇ ಸ್ವಾಯತ್ತ ಸರ್ಕಾರಗಳನ್ನು ರಚಿಸಿಕೊಳ್ಳುತ್ತಿರುವುದು ಮಾರ್ಕ್ಸ್‌ವಾದದ ಸ್ಫೂರ್ತಿಯಿಂದಲೇ ಎಂಬುದು ನಿಜವಾಗಿದ್ದರೆ, ಅವರು ಅನುಸರಿಸುತ್ತಿರುವ ಮಾರ್ಕ್ಸ್‌ವಾದ ನಿಜವಾಗಿಯೂ ಎಷ್ಟು ಮಾರ್ಕ್ಸ್‌ವಾದಿ ಎಂಬುದನ್ನು ವಿವರವಾಗಿ ಪರಿಶೀಲಿಸಬೇಕಾಗುತ್ತದೆ. ಬಂಡವಾಳವಾದ ಅಥವಾ ಮುಕ್ತ ಮಾರುಕಟ್ಟೆವಾದಗಳ ವಿರುದ್ಧ ನಡೆಸುವ ಎಲ್ಲ ಹೋರಾಟಗಳೂ ಮಾರ್ಕ್ಸವಾದಿಯೇ ಆಗಬೇಕಿಲ್ಲ; ಮಾರ್ಕ್ಸ್‌ವಾದ ಎಂಬುದು ಒಂದು ಜಾಗತಿಕ ಮಾನ್ಯತೆ ಪಡೆದ ಸಿದ್ಧಾಂತವಾಗಿರುವುದರಿಂದ, ಇಂತಹ ಎಲ್ಲ ಹೋರಾಟಗಳನ್ನೂ ಅದರ ಪರಿಭಾಷೆಯ ಮೂಲಕವೇ ಗುರುತಿಸುವ ಅಭ್ಯಾಸ ಸಹಜವೇ ಆಗಿದೆ. ಹಾಗೆ ನೋಡಿದರೆ, ಭಾರತದ ವಿವಿಧ ಕಮ್ಯೂನಿಸ್ಟ್ ಪಕ್ಷಗಳು ಮಾರ್ಕ್ಸ್‌ವಾದದ ಹೆಸರಿನಲ್ಲಿ ಇಂದು ಮುಕ್ತ ಮಾರುಕಟ್ಟೆವಾದದ ವಿರುದ್ಧ ನಡೆಸಿರುವ ಹೋರಾಟಗಳನ್ನು ಎಷ್ಟರ ಮಟ್ಟಿಗೆ ಮಾರ್ಕ್ಸ್‌ವಾದಿ ಎಂದು ಕರೆಯಬಹುದು ಯೋಚಿಸಿ.

ಅದೇನೇ ಇರಲಿ, ನೀವು ಮತ್ತು ಇನ್ನೂ ಹಲವರು(ಮತ್ತು ಸಾಂದರ್ಭಿಕವಾಗಿ ಅನಿವಾರ್ಯವೆಂಬಂತೆ ನಾನೂ) ಬಳಸುವ ಅರ್ಥದಲ್ಲಿ ಲೋಹಿಯಾವಾದ ಎಂಬುದೊಂದಿದೆ ಎಂಬ ಬಗ್ಗೆ ನನಗೇ ಅನುಮಾನವಿದೆ; 'ವಾದ' ಎಂಬುದರ ಪ್ರಚಲಿತ ಅರ್ಥದ ಹಿನ್ನೆಲೆಯಲ್ಲಿ. ಲೋಹಿಯಾ ಆಧುನಿಕತೆಯ ವೈಚಾರಿಕ ಪರಿಧಿಯೊಳಗೆ

ಇದ್ದುಕೊಂಡೇ ಅದು ಕಟ್ಟಿ ಹೊರಟ ನಾಗರೀಕತೆಯ ವಿಮರ್ಶೆಗೆ ತೊಡಗಿದವರು. ಇದರ ಭಾಗವಾಗಿ ತಮ್ಮ ಕಾಲದ ಎರಡು ಧೃವೀಕೃತ ವೈಚಾರಿಕ ರೂಪಕಗಳಿಂತಿದ್ದ ಗಾಂಧಿ ಮತ್ತು ಮಾರ್ಕ್ಸ್‌ರಿಬ್ಬರಿಗೂ(ಆ ಮೂಲಕ ಅಂಬೇಡ್ಕರ್ ಮತ್ತು ಐರೋಪ್ಯ ಪ್ರಜಾತಾಂತ್ರಿಕ ಸಮಾಜವಾದಿಗಳಿಗೂ) ಪ್ರತಿಸ್ಪಂದಿಸುತ್ತಾ ತಮ್ಮದೇ ವೈಚಾರಿಕ ಕುಲುಮೆಯಲ್ಲಿ ಭಾರತೀಯ ಸಮಾಜವಾದದ ಮಾದರಿಯೊಂದನ್ನು ಮಂಡಿಸಿದರು. ಅವರು ಮೂಲತಃ ಅಲೆಮಾರಿಯಾದ ಅವಧೂತ ವ್ಯಕ್ತಿತ್ವದವರಾಗಿದ್ದು, ಆಕಸ್ಮಿಕವೆಂಬಂತೆ ರಾಜಕೀಯ ಸವಾಲೊಂದನ್ನು ಸ್ವೀಕರಿಸಬೇಕಾಗಿ ಬಂದಾಗ, ಸಕ್ರಿಯ ರಾಜಕಾರಣಿಯೂ ಆಗಬೇಕಾದ ಅನಿವಾರ್ಯತೆಗೆ ಸಿಕ್ಕಿದವರು. ಹಾಗೇ ಅಂದಿನ ಜನಪ್ರಿಯ ನೆಹ್ರೂ ರಾಜಕಾರಣದೆದುರಿಗೆ ಹೊಸ ತಾತ್ವಿಕ ರಾಜಕಾರಣ ಮಾಡಲು ಯತ್ನಿಸಿ ಬಸವಳಿದವರು. ಈ ಹಿನ್ನೆಲೆಯಲ್ಲಿ ತಮ್ಮ ೫೭ನೇ ವಯಸ್ಸಿಗೇ ಅನಾರೋಗ್ಯಕ್ಕೆ ತುತ್ತಾಗಿ ಮರಣಕ್ಕೆ ಈಡಾದವರು. ಈ ಎಲ್ಲ ಕಾರಣಗಳಿಂದಾಗಿ ಅವರು ತಾರ್ಕಿಕವಾಗಿ ಸುಸಂಗತವಾದ ರಾಜಕೀಯ ಸಿದ್ಧಾಂತ 'ವ್ಯವಸ್ಥೆ'ಯೊಂದನ್ನು ರೂಪಿಸಲಾಗಲಿಲ್ಲ. ಅದೇ ಕಾರಣದಿಂದಾಗಿ ಒಂದು ಸುಭದ್ರ ರಾಜಕೀಯ ಪಕ್ಷವನ್ನೂ ಅವರಿಗೆ ಕಟ್ಟಲಾಗಲಿಲ್ಲ. ಎಲ್ಲವೂ ಅರ್ಧಂಬರ್ಧ ಮಾಡಿದ ಕೆಲಸವೇ ಆಗಿತ್ತು.

ಇದನ್ನು ಅವರ ಅನುಯಾಯಿಗಳಾದರೂ ಪೂರ್ಣಗೊಳಿಸಬೇಕಿತ್ತು. ಆದರೆ ಅದಕ್ಕೆ ಬೇಕಾದ ಬೌದ್ಧಿಕ ತಾಕತ್ತಾಗಲೀ ಸಂಘಟನಾ ಸಾಮರ್ಥ್ಯವಾಗಲೀ ಅವರಾರಿಗೂ ಇರಲಿಲ್ಲ. ಲೋಹಿಯಾರ ಕೊನೆಯ ದಿನಗಳಲ್ಲಿ ಒಂದು ಸಾಂದರ್ಭಿಕ ರಾಜಕೀಯ ತಂತ್ರವಾಗಿ ಮಂಡಿಸಿದ 'ಕಾಂಗ್ರೆಸ್ಸೇತರವಾದ'ವೇ ಅವರ ಅನುಯಾಯಿಗಳಲ್ಲಿ ಮುಂದೆ ಒಡಕನ್ನುಂಟು ಮಾಡಿ, ಪಕ್ಷವೇ ಇಲ್ಲವಾಗಲು ಕಾರಣವಾಯಿತು. ಇದಕ್ಕಾಗಿ ಲೋಹಿಯಾರನ್ನು ಈಗ ದೂಷಿಸಿ ಉಪಯೋಗವಿಲ್ಲ. ಏಕೆಂದರೆ, ಅದು ಅಂದಿನ ರಾಜಕೀಯ ಪರಿಸ್ಥಿತಿಯ ಅನಿವಾರ್ಯತೆಯಾಗಿದ್ದರಿಂದಲೇ ಲೋಹಿಯಾ ಆ ತಂತ್ರವನ್ನು ರೂಪಿಸಿದರು. ಅದು ಭಾರತದ ಸ್ವಾತಂತ್ರ್ಯೋತ್ತರ ರಾಜಕೀಯ ಚರಿತ್ರೆಯಲ್ಲಿ ಉಂಟಾದ ಮೊದಲ ಸ್ಥಿತ್ಯಂತರಕ್ಕೆ ಕಾರಣವಾಯಿತು ಎಂಬುದನ್ನು ನಾವು ಮರೆಯಬಾರದು. ಇಂದು ಅದು ಕೋಮುವಾದಿ ರಾಜಕಾರಣಕ್ಕೆ ಕುಮ್ಮಕ್ಕು ನೀಡಿತು ಎಂದು ಹೇಳುವವರನ್ನು, ಆ ಕಾಂಗ್ರೆಸ್ಸೇತರವಾದದ ನಿರ್ಣಾಯಕ ರಾಜಕೀಯ ಪರಿಣಾಮಗಳ ಗತಿತಾರ್ಕಿಕತೆಯ ಮಹತ್ವವನ್ನು ತಮ್ಮ ಸೈದ್ಧಾಂತಿಕ ಪೂರ್ವಾಗ್ರಹಗಳಿಂದಾಗಿ ಮಾನ್ಯ ಮಾಡಲಿಚ್ಚಿಸದ ಮತ್ತು ಅದೇ ಕಾರಣಗಳಿಂದಾಗಿ ಭಾರತದ ಕೋಮುವಾದಿ ರಾಜಕಾರಣದ ಚರಿತ್ರೆಯನ್ನು ಸಮೀಪ ದೃಷ್ಟಿ ದೋಷದಿಂದ ನೋಡುವ ರಾಜಕೀಯ ವಿಕಲತೆಗೆ ತುತ್ತಾಗಿರುವ ಸಂಕುಚಿತ ಬುದ್ಧಿಯವರು ಎಂದೇ ಕರೆಯಬೇಕಾಗುತ್ತದೆ.

ಲೋಹಿಯಾರ ಸ್ಫೂರ್ತಿಯಿಂದ ರಚಿತವಾದ ಪಕ್ಷ ಮತ್ತು ರೂಪುಗೊಂಡ ಆಂದೋಲನ ಇಂದಿಲ್ಲ ಎಂದು ಕೊರಗಬೇಕಿಲ್ಲ. ಅವು ತಮ್ಮ ಯೋಗ್ಯತಾನುಸಾರವಾದ ಕರ್ತವ್ಯಗಳನ್ನು ಮುಗಿಸಿ ಹೋಗಿವೆ. ಇಂದು ಲೋಹಿಯಾ ಬಿಟ್ಟುಹೋದ ವಿಚಾರ ಗುಚ್ಛಗಳು ಮತ್ತು ನೀಡಿ ಹೋದ ಹಲವು ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಹೊಳಹುಗಳು ನಮ್ಮ ಮುಂದಿವೆ. ಅದಕ್ಕಿಂತ ಮುಖ್ಯವಾಗಿ, ಅವು ಇಂದು-ಯಾವುದನ್ನು

ಲೋಹಿಯಾ ಕಟುವಾಗಿ ವಿಮರ್ಶಿಸಿದರೋ, ಆ ಆಧುನಿಕ ನಾಗರೀಕತೆಯ ಕೆಟ್ಟ ಆವೃತ್ತಿ ಜಾಗತೀಕರಣದ ರೂಪದಲ್ಲಿ ನಮ್ಮನ್ನು ನಿರ್ಣಾಯಕವಾಗಿ ಮುಖಾಮುಖಿಯಾಗಿರುವಾಗ– ಅಂದಿಗಿಂತ ಇಂದು ಹೆಚ್ಚು ಅರ್ಥಪೂರ್ಣವಾಗಿ ಮತ್ತು ಚೂಪಾಗಿ ಕಾಣತೊಡಗಿವೆ. ಇಂದು ಅವುಗಳ ವಿಸ್ತರಣೆ, ಮರುನಿರೂಪಣೆ ಮತ್ತು ರಾಜಕೀಯ ಅನ್ವಯದ ಕೆಲಸವಾಗಬೇಕಿದೆ. ಆಗುತ್ತಲೂ ಇದೆ. ಇದೇನೂ ಲೋಹಿಯಾವಾದದ ಹೆಸರಿನಲ್ಲೇ ಆಗಬೇಕಿಲ್ಲ. ಆಗುತ್ತಲೂ ಇಲ್ಲ.

ಆದುದರಿಂದ ಇಂದು ಅಗತ್ಯವಾಗಿರುವುದು ಇಂತಹ ಕೆಲಸಗಳೊಂದಿಗೆ ನಮ್ಮ ಕೈಲಾದ ಮಟ್ಟಿಗೆ ಕೈಜೋಡಿಸುವುದೇ ಅಗಿದೆಯೇ ಹೊರತು, ತಾತ್ವಿಕ ಮತಾಂತರದ ಪ್ರಯತ್ನಗಳಲ್ಲ. ಇದರ ಭಾಗವಾಗಿಯೋ ಎಂಬಂತೆ, ಮೂಲತಃ ಲೋಹಿಯಾವಾದಿಯಾಗಿ ಕಮ್ಯೂನಿಸಂ ಕುರಿತಂತೆ ತಮ್ಮ ಜೀವನಪರ್ಯಂತ ಒಂದು ಸ್ಪಷ್ಟ ನಿಲುವು ಹೊಂದಿದ್ದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಜಾಗತೀಕರಣದ ಬಗ್ಗೆ ಸ್ಪಷ್ಟ ನಿಲುವು ತಾಳಲು ಸಾಧ್ಯವಾದದ್ದು ಅವರು ಮಾರ್ಕ್ಸ್‌ವಾದಿಗಳ ಜೊತೆಗೂಡಿ ಕೆಲಸಮಾಡಿದ್ದರಿಂದ ಎಂಬ ನಿಮ್ಮ ಕೆಲವು ಪಂಥೀಯ ಸ್ನೇಹಿತರು ಚಾಲ್ತಿಗೆ ತಂದಿರುವ ಹಸಿಸುಳ್ಳನ್ನು ನೀವೂ ನಿಮ್ಮ ವಾದಕ್ಕೆ ಬಳಸಿಕೊಂಡಿರುವುದು ವಿಷಾದಕರ ಎಂಬುದನ್ನೂ ಇಲ್ಲಿ ದಾಖಲಿಸಬಯಸುವೆ. ಹಾಗಾಗಿಯೇ, ನೀವು ಲೋಹಿಯಾವಾದದ ಮರುವಿಮರ್ಶೆಯ ನೆಪದಲ್ಲಿ ಕೊನೆಕೊನೆಗೆ ನೆಪಕ್ಕೆ ಮಾತ್ರ ಮಾವೋವಾದದ ವಿಮರ್ಶೆ ಮಾಡಿದಂತೆ ಮಾಡಿ, ಅಂತಿಮವಾಗಿ ಅದನ್ನು ಸಮರ್ಥಿಸಿ ಪ್ರಚುರಪಡಿಸುವ ಪ್ರಯತ್ನ ಮಾಡಿರುವುದು ನಿಮ್ಮ ಈ ಸುದೀರ್ಘ ಲೇಖನದ ಸದುದ್ದೇಶವನ್ನೇ ಭಂಗಗೊಳಿಸುವಂತಿದೆ ಎಂದು ತಿಳಿಸಬಯಸುವೆ.

(ಇದೇ ಲೇಖಕರ 'ಕಂಡದ್ದು ಕಾಡಿದ್ದು' ಸಂಕಲನದಲ್ಲಿ ಪ್ರಕಟ)

ಕರ್ನಾಟಕದ ಲೋಹಿಯಾವಾದಿ ಸಾಂಸ್ಕೃತಿಕ ಪರಂಪರೆಯೂ, ರಹಮತ್ ತರೀಕೆರೆಯವರ ಮೆಳ್ಳೆಗಣ್ಣಿನ ನೋಟವೂ...

ಇತ್ತೀಚೆಗೆ ರಾಯಚೂರಿನ ಭೀಮನಗೌಡ ಇಟಗಿ ಅವರ ಪ್ರಧಾನ ಸಂಪಾದಕತ್ವ ಮತ್ತು ಡಾ॥ ದಸ್ತಗೀರ್ ಸಾಬ್ ದಿನ್ನಿ ಅವರ ಸಂಪಾದಕತ್ವಗಳಲ್ಲಿ 'ಕನಸು ಪ್ರಕಾಶನ'ವು 'ಎಲ್ಲಾ ಕಾಲದ ಬೆಳಕು' ಎಂಬ ಲೋಹಿಯಾ ವ್ಯಕ್ತಿತ್ವ-ವಿಚಾರಗಳನ್ನು ಕುರಿತ ಪುಸ್ತಕವೊಂದನ್ನು ಹೊರತಂದಿದೆ. ಇದರಲ್ಲಿ ಡಾ॥ ರಹಮತ್ ತರೀಕೆರೆ ಅವರ 'ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ' ಎಂಬ ಲೇಖನ ಹಲವು ಕಾರಣಗಳಿಗಾಗಿ ವಿಶೇಷ ಗಮನ ಸೆಳೆಯುತ್ತದೆ. ನಮ್ಮ ನಡುವಿನ ಸೂಕ್ಷ್ಮ ಚಿಂತಕರೂ, ಸಮರ್ಥ ವಿಮರ್ಶಕರೂ ಎಂದು ಹೆಸರಾಗಿರುವ ರಹಮತ್ ಈ ಲೇಖನದಲ್ಲಿ ಪ್ರದರ್ಶಿಸಿರುವ ಬೇಜವಾಬ್ದಾರಿತನ, ಉಡಾಫೆಗಳು, ಮಾಡಿರುವ ಸುಲಭ ತೀರ್ಮಾನಗಳು ಮತ್ತು ನೀಡಿರುವ ತಪ್ಪು ಮಾಹಿತಿ ಗಾಬರಿ ಹುಟ್ಟಿಸುವಂತಿವೆ. ಒಮ್ಮೊಮ್ಮೆ ಇದು ಲೋಹಿಯಾ ಚಿಂತನೆಯನ್ನು ತಮ್ಮ ವಿರೋಧಿ ರಾಜಕೀಯ ಚಿಂತನೆಯೆಂದು ಭಾವಿಸಿ ಮಾಡಲಾಗಿರುವ ಉದ್ದೇಶಪೂರ್ವಕ ಅಪಪ್ರಚಾರವೋ ಎಂಬಷ್ಟು ರೂಕ್ಷವಾಗಿಯೂ, ಜಿಗುಪ್ಸೆಕರವಾಗಿಯೂ ಇದೆ. ಈ ಜಿಗುಪ್ಸೆಯ ಫಲವೇ ಈ ಲೇಖನ.

ರಹಮತ್, ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ಲೋಹಿಯಾವಾದಿಗಳ ಕೊಡುಗೆಯನ್ನು ವಿವರಿಸುವವರ ಹಾಗೆ ಲೇಖನವನ್ನು ಆರಂಭಿಸಿರುವರಾದರೂ, ಯಾವುದೇ ನಿರ್ದಿಷ್ಟ ಕೊಡುಗೆಯನ್ನೂ ಆಳವಾಗಿ ಚರ್ಚಿಸಿ ಗುರುತಿಸದೆ;ಅದು ಹುಟ್ಟು ಹಾಕಿದ್ದೆಂದು ಅವರು ಹೇಳುವ ಕೆಲವು ಗೊಂದಲ-ಜಗಳಗಳನ್ನಷ್ಟೇ ಪ್ರಸ್ತಾಪಿಸುತ್ತಾ, ತಾವು ನಂಬಿದ ರಾಜಕೀಯ ತಾತ್ವಿಕತೆಯ ಆಧಾರದ ಮೇಲೆ ತಮ್ಮದೇ ಆದ ಕೆಲವು ರಾಜಕೀಯ ತೀರ್ಮಾನಗಳಿಗೆ ಬಂದಿದ್ದಾರೆ. ಇದಕ್ಕಾಗಿ, ಲೋಹಿಯಾವಾದದ ವಿಶ್ಲೇಷಣೆಯ ಹೆಸರಿನಲ್ಲಿ ಆಯ್ದ ಕೆಲವು ಲೋಹಿಯಾವಾದಿಗಳ ಅಥವಾ ಅವರು ಹಾಗೆಂದು ಭಾವಿಸಿದವರ ವೈಯುಕ್ತಿಕ ವರ್ತನೆಗಳನ್ನು ಉದಾಹರಣೆಗಳಾಗಿ ನೀಡುತ್ತಾ ತನ್ನ ವಾದವನ್ನು ಕಟ್ಟಿಕೊಂಡಿರುವ ಈ ಲೇಖನ, ಎಲ್ಲೂ ಲೋಹಿಯಾ ಚಿಂತನೆಯನ್ನು ತಾತ್ವಿಕವಾಗಿ ಮುಖಾಮುಖಿ ಮಾಡಿಕೊಂಡಿಲ್ಲ ಎಂಬುದು ವಿಷಾದಕರ ಸಂಗತಿ. ಇದು ಈ ಲೇಖನದ ಟೊಳ್ಳುತನವನ್ನು ತೋರಿಸುವುದಷ್ಟೇ ಅಲ್ಲ, ಅದರ ಪ್ರಾಮಾಣಿಕತೆಯನ್ನೂ ಅನುಮಾನಾಸ್ಪದಗೊಳಿಸಿದೆ.

ಲೋಹಿಯಾವಾದ (ಈ ಪ್ರಯೋಗವನ್ನೇ ನಾನು ಇಷ್ಟ ಪಡುವುದಿಲ್ಲವೆಂಬುದು ಬೇರೆ ಮಾತು) ಅಥವಾ ಲೋಹಿಯಾವಾದಿಗಳನ್ನು ಟೀಕಿಸುವುದು ಅಥವಾ

ವಿಮರ್ಶೆಗೊಳಪಡಿಸುವುದು ಅಪರಾಧವೇನಲ್ಲ. ಅದನ್ನು ನಾನೇ ಹಲವಾರು ಬಾರಿ ಮಾಡಿ, ಸ್ಥಾಪಿತ ಲೋಹಿಯಾವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದೇನೆ. ಯಾವುದೇ ಚಿಂತನೆ ಬೆಳೆಯುವುದು, ಸಕಾಲಿಕವಾಗುತ್ತಾ ಹೋಗುವುದು ಇಂತಹ ಟೀಕೆ ವಿಮರ್ಶೆಗಳಿಂದಲೇ. ಅದರೆ ಎಲ್ಲೋ ಕೇಳಿದ 'ಕಥೆ'ಗಳ ಆಧಾರದ ಮೇಲೆ, ಆಧಾರವಿಲ್ಲದ ಊಹಾಪೋಹಗಳ, ವದಂತಿಗಳ ಆಧಾರದ ಮೇಲೆ, ಯಾರೋ ಯಾವುದೋ ಕಾರಣಕ್ಕೆ ರೂಢಿಸಿದ ಅಭಿಪ್ರಾಯಗಳು ಮತ್ತು ನಿಲುವುಗಳ ಆಧಾರದ ಮೇಲೆ ಸಾರಾಸಗಟಾಗಿ ಕರ್ನಾಟಕದ ಲೋಹಿಯಾ ಸಾಂಸ್ಕೃತಿಕ ಪರಂಪರೆಯ ವೈರುಧ್ಯಗಳೆಂದು ತಾವು ಕರೆಯುವ ವಿದ್ಯಮಾನದ ಬಗ್ಗೆ ಇಲ್ಲಿ ರಹಮತ್ ಬೀದಿ ಬದಿಯ ಹರಟೆಯಂತೆ ಸುಲಭ ಶೈಲಿಯ ಭಾಷಣ ಹೊಡಕೊಂಡು ಹೋಗಿದ್ದಾರೆ. ಇನ್ನು ಇದು ಮೂಲತಃ ಸಾಹಿತ್ಯ ಅಕಾಡೆಮಿಯ ವಿಚಾರ ಸಂಕಿರಣವೊಂದರಲ್ಲಿ ಮಾಡಿದ ಭಾಷಣದ ಬರಹ ರೂಪವೆಂದು ಕೇಳಿ ನಾನು ದಂಗಾಗಿ ಹೋಗಿದ್ದೇನೆ.

ರಹಮತ್ ಕರ್ನಾಟಕದಲ್ಲಿ ಲೋಹಿಯಾ ರಾಜಕೀಯ ಪರಂಪರೆಯ ಚರಿತ್ರೆಯನ್ನು ನಿರೂಪಿಸತೊಡಗುವ ಮೊದಲ ಹೆಜ್ಜೆಯಲ್ಲೇ ತಮ್ಮ ಬೇಜವಾಬ್ದಾರಿತನವನ್ನು ಪ್ರದರ್ಶಿಸಿದ್ದಾರೆ. ಅವರ ಪ್ರಕಾರ ಲೋಹಿಯಾ ಕರ್ನಾಟಕಕ್ಕೆ ಪರಿಚಯವಾದದ್ದು ೫೦ರ ದಶಕದಲ್ಲಿ 'ಕಾಣಿಸಿಕೊಂಡ'(!) ಕಾಗೋಡು ಭೂ ಹೋರಾಟದ ಮೂಲಕ. ನಂತರ ಲೋಹಿಯಾ ಚಿಂತನೆಯನ್ನು ಕರ್ನಾಟಕದಲ್ಲಿ ಪಸರಿಸುತ್ತಾ ಬಂದವರು ಕಿಷನ್ ಪಟ್ನಾಯಕ್! ಕರ್ನಾಟಕದ ಸಮಾಜವಾದಿ ಚರಿತ್ರೆಯ ಬಗ್ಗೆ ಸಂಪೂರ್ಣ ಅಜ್ಞಾನ ಹೊಂದಿದವರು ಮಾತ್ರ ಇಷ್ಟು ಧೈರ್ಯವಾಗಿ ಇಂತಹ ಹೇಳಿಕೆಯನ್ನು ದಾಖಲಿಸಬಲ್ಲರು. ಲೋಹಿಯಾ ಜೊತೆಯಲ್ಲಿಯೇ ಮತ್ತು ಆನಂತರ ಕಮಲಾದೇವಿ ಚಟ್ಟೋಪಾಧ್ಯಾಯ, ಸದಾಶಿವ ಕಾರಂತ, ಗೋಪಾಲ ಗೌಡ, ಎಸ್. ವೆಂಕಟರಾಂ, ಜೆ.ಎಚ್. ಪಟೇಲ್, ನೀಲಗಂಗಯ್ಯ ಪೂಜಾರ, ಪದಕಿ ವಕೀಲರು, ಎಂ.ನಾಗಪ್ಪ, ಕೆ.ಜಿ. ಮಹೇಶ್ವರಪ್ಪ, ಟಿ.ಎನ್. ನಾಗರಾಜ್, ಎಸ್.ಎಸ್. ಕುಮಟಾ, ಸಿ.ಜಿ.ಕೆ. ರೆಡ್ಡಿ, ಪಟ್ಟಾಭಿರಾಮ ರೆಡ್ಡಿ ದಂಪತಿಗಳು, ಎಂ.ಡಿ. ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಯು.ಆರ್. ಅನಂತಮೂರ್ತಿ, ಕೆ. ರಾಮದಾಸ್ ಇತ್ಯಾದಿ ಅನೇಕರು ಕಾಲಾನುಕಾಲಕ್ಕೆ ಕರ್ನಾಟಕದಲ್ಲಿ ಸಂಘಟನೆ, ಹೋರಾಟ, ಚರ್ಚೆ, ಪ್ರಕಟಣೆ ಇತ್ಯಾದಿಗಳ ಮೂಲಕ (ಲೋಹಿಯಾ)ಸಮಾಜವಾದದ ಅಡಿಗಲ್ಲುಗಳನ್ನು ಹಾಕಿದವರು.

ಎಪ್ಪತ್ತರ ದಶಕದಲ್ಲಷ್ಟೇ, ಅದೂ ಲೋಹಿಯ ನಿಧನಾನಂತರ ಸಮಾಜವಾದಿ ಪಕ್ಷದಲ್ಲುಂಟಾದ ಬಿರುಕಿನ ಫಲವಾಗಿ, ಕಿಷನ್ ಪಟ್ನಾಯಕ್ ಪಕ್ಷದ ಒಂದು ತಾತ್ವಿಕ ಧಾರೆಯ ಪ್ರತಿಪಾದಕರಾಗಿ ಕರ್ನಾಟಕದಲ್ಲಿ ಬೆಂಬಲ ಮತ್ತು ನೆಲೆಯನ್ನು ಕಂಡುಕೊಂಡದ್ದು. ಆನಂತರ ಅವರು ಆಗಾಗ್ಗೆ ರಾಜ್ಯಕ್ಕೆ ಭೇಟಿ ನೀಡುತ್ತಾ, ಚದುರಿ ಹೋಗಿದ್ದ ಸಮಾಜವಾದಿಗಳನ್ನೂ, ಸಮಾಜವಾದಿ ಚಿಂತನೆಯನ್ನೂ ಒಗ್ಗೂಡಿಸುವ ಪ್ರಯತ್ನವನ್ನು ತಮ್ಮ ಕೊನೆಯ ದಿನಗಳವರೆಗೂ ಮಾಡಿದರಷ್ಟೆ. ಇನ್ನು ರಹಮತರ ಪ್ರಕಾರ, ಹನುಮಂತ ಎಂಬುವವರು ಲೋಹಿಯಾ ಚಿಂತನೆಗಳನ್ನು ಕನ್ನಡಕ್ಕೆ ಅನುವಾದಿಸುತ್ತಾ ತೆರೆಮರೆಯಲ್ಲಿದ್ದಾರೆ... ಈ ಹನುಮಂತ ಅವರು ಲೋಹಿಯಾ ಅವರ ಯಾವ್ಯಾವ ಚಿಂತನೆಗಳನ್ನು ಕನ್ನಡಕ್ಕೆ ತಂದಿದ್ದಾರೆಂದು ರಹಮತ್ ಅವರು ಹೇಳಿದರೆ ಒಳ್ಳೆಯದು.

ವಾಸ್ತವವಾಗಿ ಹನುಮಂತ ಅವರು, ಭಾರತೀಯ ಸಮಾಜವಾದಕ್ಕೆ ಲೋಹಿಯಾ ಕೊಡುಗೆ ನೀಡಿದ್ದಕ್ಕಿಂತ ಆಘಾತವನ್ನು ಉಂಟುಮಾಡಿದ್ದೇ ಹೆಚ್ಚು ಎಂದು ವಾದಿಸುವ ಮತ್ತು ತಮ್ಮದು ಲೋಹಿಯಾವಾದಕ್ಕಿಂತ ಭಿನ್ನವಾದ 'ಜನತಾಂತ್ರಿಕ ಸಮಾಜವಾದ'ವೆಂದು ಹೇಳಿಕೊಳ್ಳುವ ಗುಂಪಿನ ಜೊತೆ ಗುರುತಿಸಿಕೊಂಡವರು!

'ಜಾತಿ ಪದ್ಧತಿ, ಕಾಂಗ್ರೆಸ್ ಪಕ್ಷದ ಜಡತೆ, ನೆಹರೂ ಆಡಳಿತ ಮತ್ತು ಇಂಗ್ಲಿಷ್ ಹೇರಿಕೆಗಳನ್ನು ವಿರೋಧಿಸುವುದು, ದೇಶೀಭಾಷೆ, ಗಾಂಧೀವಾದಗಳ ಒಲವು, ಸಾಂಸ್ಕೃತಿಕ ಸೂಕ್ಷ್ಮತೆ, ಸಾಹಿತ್ಯ ಸಂಗೀತಗಳ ಅಭಿರುಚಿ ಹೊಂದಿರುವುದು ಲೋಹಿಯಾವಾದಿ ಚಿಂತನೆಯ ಪ್ರಮುಖ ತಾತ್ವಿಕ ರಾಜಕೀಯ ಸಾಮಾಜಿಕ ನಿಲುವುಗಳಾಗಿದ್ದವು' ಎಂದು ಇಡೀ ಲೋಹಿಯಾ ಚಿಂತನೆಯನ್ನು ಬಹು ಸುಲಭವಾಗಿ ಪರಿಚಯಿಸಿಬಿಡುವ ರಹಮತ್ ಅವರ ಧೈರ್ಯ ಅವರು ಬಂಡಾಯದಲ್ಲಿ ಕಲಿತ ಭಂಡತನದಿಂದಲೇ ಬಂದಿರಬಹುದು! ಅವರು ಮುಂದುವರೆದು, 'ಅದರಲ್ಲೂ ಆಗ ಆಧುನಿಕ ಶಿಕ್ಷಣ ಹಾಗೂ ಸಾಮಾಜಿಕ ಎಚ್ಚರವನ್ನು ಪಡೆದು ನಗರವಾಸಕ್ಕೆ ಬಂದಿದ್ದ ಭೂಮಾಲಿಕ ಶೂದ್ರ ಜಾತಿಗಳ ತರುಣರ ತುಡಿತಗಳ ಜತೆ ಲೋಹಿಯಾವಾದವು ಆಪ್ತವಾಗಿ ಬೆರೆಯಿತು' ಎಂದು, ೫೦-೬೦ರ ದಶಕದಲ್ಲಿ ಸಮಾಜವಾದಿ ಚಳುವಳಿಗೆ ಯಾರಾರು ಆಕರ್ಷಿತರಾಗಿದ್ದರು ಎಂಬುದರ ಅರಿವೇ ಇಲ್ಲದೆ ಅಪ್ಪಣೆ ಕೊಡಿಸುತ್ತಾರೆ.

ಆದರೆ ಉದಾಹರಣೆಗೆ ಸಮಾಜವಾದಿಗಳ ತವರೆನಿಸಿದ ಶಿವಮೊಗ್ಗ ಜಿಲ್ಲೆಯನ್ನೇ ತೆಗೆದುಕೊಂಡರೆ, ಗೋಪಾಲಗೌಡರ ಹೊರತಾಗಿ(ಇವರು ಭೂಮಾಲಿಕರೂ ಅಲ್ಲ, ಹಳ್ಳಿ ಬಿಟ್ಟು ನಗರವಾಸಕ್ಕೆ ಹೋದವರೂ ಅಲ್ಲ) ಸಮಾಜವಾದಿ ಪಕ್ಷಕ್ಕೆ ಆಧಾರವಾಗಿದ್ದವರು ಭೂರಹಿತ ಅವಿದ್ಯಾವಂತ ಕೆಳಜಾತಿಗಳವರು. ಮುಂದೆ ಸಮಾಜವಾದಿ ಪಕ್ಷದಿಂದ ಗೆದ್ದು ಶಾಸಕರಾದವರೂ ಇವರೇ. ಇನ್ನು ಬೇರೆ ಜಿಲ್ಲೆಗಳಲ್ಲಿ ಲೋಹಿಯ ಚಿಂತನೆಗಳಿಂದ ಆಕರ್ಷಿತರಾಗಿ ಯಾವ ಪ್ರತಿಫಲ ನಿರೀಕ್ಷೆಯೂ ಇಲ್ಲದೆ, ಸಮಾಜವಾದಿ ಹೋರಾಟಗಳಲ್ಲಿ ಭಾಗವಹಿಸಿದ ರಾಚಪ್ಪ ಬೆಟ್ಟೂರ್, ರಾಚಪ್ಪ ಹಡಪದ, ಅಬ್ಬಿಗೇರಿ ವಿರೂಪಾಕ್ಷಪ್ಪ, ವೀರಣ್ಣ ತಿಮ್ಮಾಜಿ, ಕಣ್ಣನ್, ಮುದ್ದಾಚಾರ್, ಕೃಷ್ಣ ಗೋಪಾಲ, ಶ್ರೀರಾಮಯ್ಯ, ಸಂಜೀವ, ಸುಬ್ರಹ್ಮಣ್ಯ, ಹನುಮಂತಪ್ಪ, ಹೊನ್ನೂರಪ್ಪ, ಮಾಧವನ್, ಮಾಣಿಕ್ಯಂ, ಬಾಬೂ ಸಾಹೇಬ, ಅಮರಸಿಂಗ್ ರಾಠೋಡ, ವಲಿ, ದ್ಯಾವಪ್ಪ, ಮುನಿವೆಂಕಟರಮಣ, ಆರ್.ಬಿ.ಸ್ವಾಮಿ, ವೀರಪ್ಪ ಸವದಿ, ಬಸಪ್ಪ ಸೋಗಿ, ಕಲ್ಲಪ್ಪ ಬಾಳಪ್ಪ ಮುಂತಾದವರು ಯಾವ ಶೂದ್ರ ಜಾತಿಯ ಎಂತಹ ಭೂಮಾಲೀಕರು ಎಂಬುದನ್ನು, ವಿಶ್ವವಿದ್ಯಾಲಯವೊಂದರಲ್ಲಿ ಅನೇಕ ಸಂಶೋಧನಾ ಯೋಜನೆಗಳ ಸೌಲಭ್ಯ ಪಡೆದಿರುವ ರಹಮತ್ ಅವರೇ ಸಂಶೋಧಿಸಿ ಹೇಳಬೇಕು. ನೆಹರೂ ಅವರಂತಹ ಜನಪ್ರಿಯತೆಯ ತುತ್ತ ತುದಿಯಲ್ಲಿದ್ದ ನಾಯಕರ ರಾಜಕಾರಣದ ವಿಶ್ವಾಸಾರ್ಹತೆಯನ್ನೇ ಭಂಗಗೊಳಿಸಿ ಅದು ತತ್ತರಿಸುವಂತೆ ಮಾಡಿದ ರಾಜಕೀಯ ಚಿಂತನೆಯೊಂದನ್ನು, ಅದು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಆಧರಿಸಿದ ರಾಜಕೀಯ ಹೋರಾಟ ಮಾತ್ರವೆಂಬಂತೆ ಸರಳೀಕರಿಸಿ ಇಷ್ಟು ಹಗುರಾಗಿ ಪ್ರಸ್ತುತಪಡಿಸುವುದು ಯಾವುದೇ ರೀತಿಯಲ್ಲೂ ಗಂಭೀರ ಚಿಂತನೆ ಎನಿಸಿಕೊಳ್ಳಲಾರದು ಮತ್ತು ಯಾವುದೇ ಗಂಭೀರ ಚರ್ಚೆಯನ್ನು ಹುಟ್ಟು ಹಾಕಲಾರದು.

ಸಾಕಷ್ಟು ಕಾಲ ವಿಶ್ವವಿದ್ಯಾಲಯವೊಂದರ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರೂ ಆಗಿದ್ದ ರಹಮತ್, ಆ ಕಾರಣಕ್ಕಾದರೂ ಲೋಹಿಯಾ ಚಿಂತನೆಯ ಮತ್ತು ಅದರ ರಾಜಕೀಯ ಚರಿತ್ರೆಯ ಪ್ರಾಥಮಿಕ ಪರಿಚಯದ ಪ್ರಯತ್ನ ಮಾಡಬೇಕಿತ್ತು. ಆದರೆ ಹಾಗೇನೂ ಮಾಡದೆ ಈ ಚಿಂತನೆಯ ಬಗ್ಗೆ ಹಲವು ಕಡೆ ವ್ಯಾಖ್ಯಾನಗಳನ್ನು ಮಾಡಹೋಗಿ ಪ್ರಾಥಮಿಕ ತಪ್ಪುಗಳನ್ನು ಎಸಗಿದ್ದಾರೆ. ನನ್ನ ಗಮನಕ್ಕೆ ಬಂದೆಡೆಯಲ್ಲೆಲ್ಲಾ ನಾನು ಅವನ್ನು ತಿದ್ದಿದ್ದೇನೆ. ಆದರೆ ಇದಾವುದನ್ನೂ ಲೆಕ್ಕಿಸದ ರಹಮತ್ ಇಲ್ಲಿ ತಮ್ಮ ಮನ ಬಂದಂತೆ ವಾದ ಮಾಡುತ್ತಾ, ವ್ಯಾಖ್ಯಾನ ಮಾಡುತ್ತಾ ಹೋಗಿದ್ದಾರೆ. ಅವರ ಪ್ರಕಾರ ಲೋಹಿಯಾವಾದಿಗಳು ಮಾರ್ಕ್ಸ್‌ವಾದವನ್ನು ಟೀಕಿಸುವುದು (ಅದನ್ನು ಬರೀ ಟೀಕೆಯೆಂದಷ್ಟೇ ಪರಿಗಣಿಸುವುದಾದರೆ) ಕಮ್ಯೂನಿಸ್ಟರು ಇಂದಿರಾ ಕಾಂಗ್ರೆಸ್ ಜೊತೆ ಸೇರಿಕೊಂಡ ಕಾರಣಕ್ಕಂತೆ! ಇದನ್ನು ಇವರು ಎಲ್ಲಿ ಏನು ಓದಿ ತಿಳಿದುಕೊಂಡರೋ ಅಥವಾ ಬರೀ ಊಹೆಯೋ ಗೊತ್ತಾಗದು.

ಲೋಹಿಯಾ ಚಿಂತನೆ ಆಧುನಿಕ ನಾಗರೀಕತೆ ಕುರಿತ ಒಂದು ಸೃಜನಶೀಲ ಅನ್ವೇಷಣೆಯಾಗಿದ್ದು, ಅದು ಈ ಮುನ್ನ ಇದೇ ಕೆಲಸ ಮಾಡಿದ ಗಾಂಧೀವಾದವನ್ನು ಆದರ್ಶವಾದಿ ನೆಲೆಯಿಂದ ಕಾರ್ಯಸಾಧ್ಯ ವ್ಯಾವಹಾರಿಕ ನೆಲೆಗೆ(ಅದೂ ಈಗ ಆದರ್ಶವಾದಿ ನೆಲೆಯೇ ಎನ್ನಿಸಿಕೊಂಡುಬಿಟ್ಟಿದೆ ಎಂಬುದು ಬೇರೆ ವಿಷಯ!) ಒಯ್ಯುವ ಪ್ರಯತ್ನ ಮಾಡುತ್ತದೆ. ಆ ಮೂಲಕ ಗಾಂಧೀವಾದವನ್ನು ತನ್ನದೇ ವಿಮರ್ಶೆ ಮತ್ತು ವಿಸ್ತರಣೆಗಳ ಮೂಲಕ ಕ್ರಾಂತಿಕಾರಿಯನ್ನಾಗಿ ಮಾಡುವ ಪ್ರಯತ್ನ ಮಾಡುತ್ತದೆ. ಈ ಅನ್ವೇಷಣೆಯ ಪ್ರಯತ್ನದ ಭಾಗವಾಗಿಯೇ ಅದು ಆಧುನಿಕ ನಾಗರೀಕತೆಯ ಹೊಸ ಅಸ್ತ್ರವೆನಿಸಿದ್ದ ಮಾರ್ಕ್ಸ್‌ವಾದವನ್ನು(ಇದನ್ನು ಲೋಹಿಯಾ, ಪಶ್ಚಿಮವು ಕ್ರಿಶ್ಚಿಯನ್ ಧರ್ಮದ ನಂತರ ಪೂರ್ವದ ಮೇಲೆ ಪ್ರಯೋಗಿಸಿರುವ ಇತ್ತೀಚಿನ ಅಸ್ತ್ರವೆಂದೂ ಬಣ್ಣಿಸುತ್ತಾರೆ) ಕುರಿತಂತೆ ತನ್ನ ತಾತ್ವಿಕ ವಿಮರ್ಶೆಯನ್ನು ಸವಿವರವಾಗಿ ಪ್ರಸ್ತುತಪಡಿಸುತ್ತದೆ. ಇದರಲ್ಲಿ, ಮಾರ್ಕ್ಸ್‌ವಾದ ಜಗತ್ತಿನಾದ್ಯಂತ ಹುಟ್ಟಿಸಿದ ಸಮಾನತೆಯ ಹೊಸ ಹಂಬಲ ಮತ್ತು ಬದಲಾವಣೆಯ ಕ್ರಿಯಾಶೀಲತೆಯ ಉತ್ಸಾಹಗಳನ್ನು ಗುರುತಿಸಿ ತಮ್ಮ ಚಿಂತನೆಯಲ್ಲಿ ಮೇಳವಿಸಿ ಕೊಂಡುದುದೂ ಸೇರುತ್ತದೆ. ಇದೆಲ್ಲದರ ಭಾಗವಾಗಿಯಷ್ಟೇ ಅದು ಜಾತಿ, ಧರ್ಮ, ಲಿಂಗ, ಭಾಷೆ, ಸಂಸ್ಕೃತಿ, ತಂತ್ರಜ್ಞಾನ ಕುರಿತ ತನ್ನ ನಿಲುವುಗಳನ್ನು ರೂಪಿಸಿಕೊಂಡು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದೆ.

ಆದರೆ ಭಾರತೀಯ ರಾಜಕಾರಣದ ಮೇಲ್ಮೈ ಅರಿವನ್ನಷ್ಟೇ ಹೊಂದಿರುವಂತೆ ತೋರುವ ರಹಮತ್, ತಮ್ಮ ಈ ಮೇಲ್ಮೈ ಅರಿವನ್ನೇ ಆಧರಿಸಿ ದೊಡ್ಡ ದೊಡ್ಡ ತಾತ್ವಿಕ ತೀರ್ಮಾನಗಳನ್ನು ಕೊಡಲುದ್ಯುಕ್ತರಾಗುತ್ತಾರೆ. ಉದಾಹರಣೆಗೆ ಇವರ ಪ್ರಕಾರ, ಇಂತಹ 'ಮಾರ್ಕ್ಸ್‌ವಾದದ ವಿರೋಧ'ವು ಲೋಹಿಯಾವಾದಿ ಚಳುವಳಿಗಾರರ ಮತ್ತು ಲೇಖಕರ(ಇವರಿಬ್ಬರ ಬಗ್ಗೆ ಹೀಗೆ ಒಟ್ಟಿಗೆ ಮಾತಾಡುವುದೇ ಅಸೂಕ್ಷ್ಮವಾದರೂ) ರಾಜಕೀಯ ಪ್ರಜ್ಞೆಯನ್ನೇ ಪರಿಮಿತಿಗೆ ಒಳಪಡಿಸಿತಂತೆ! ಇದಕ್ಕೆ ಉದಾಹರಣೆಯಾಗಿ ಅವರು, ತೇಜಸ್ವಿ ಮತ್ತು ಲಂಕೇಶ್ ಜಾಗತೀಕರಣದ ಬಗ್ಗೆ ಗೊಂದಲಕಾರಿ ವಿಶ್ಲೇಷಣೆ ಮಂಡಿಸಿದರೆಂದೂ, ನಂಜುಂಡಸ್ವಾಮಿಯವರು ಮಾತ್ರ ತಮ್ಮ ಮಾರ್ಕ್ಸ್‌ವಾದಿ ಸೈದ್ಧಾಂತಿಕ ತಿಳುವಳಿಕೆಯಿಂದಾಗಿ

ಸರಿಯಾದ ನಿಲುವು ತಳೆದರೆಂದೂ ಹೇಳುತ್ತಾರೆ. ರಹಮತ್ ಅವರ ಜಡ ಮಾರ್ಕ್ಸ್‌ವಾದಿ ಮನಸ್ಸು ತೇಜಸ್ವಿ ಮತ್ತು ಲಂಕೇಶ್ ಮೂಲತಃ ಸೃಜನಶೀಲ ಲೇಖಕರು, ಲೇಖಕರಿಗೆ ತಮ್ಮದೇ ಆದ ವಿಶಿಷ್ಟ ತಳಮಳದ ನೆಲೆಯೊಂದಿರುತ್ತದೆ ಎಂಬುದನ್ನೇ ಮರೆಸಿದಂತೆ ಕಾಣುತ್ತದೆ. ಹಾಗೆ ನೋಡಿದರೆ, ಮಾರ್ಕ್ಸ್‌ವಾದದ ತಲಸ್ಪರ್ಶಿ ಜ್ಞಾನದ, ಪಾಂಡಿತ್ಯದ ನೆಲೆಯಂತಿರುವ ಬಂಗಾಳದ ಮಾರ್ಕ್ಸ್‌ವಾದಿ ರಾಜಕಾರಣಿಗಳೇ ಜಾಗತೀಕರಣ ಕುರಿತು ತಮ್ಮ ನಿಲುವುಗಳನ್ನು ಸ್ಪಷ್ಟಗೊಳಿಸಿಕೊಳ್ಳಲಾಗದೆ, ಸಿಂಗ್ರೂರು ಮತ್ತು ನಂದಿಗ್ರಾಮಗಳಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾರೆ. ಅಭಿವೃದ್ಧಿಯ ವಿವಿಧ ಹಂತಗಳಿಗನುಗುಣವಾಗಿ ವಿದೇಶೀ ಬಂಡವಾಳ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಅಗತ್ಯವೆಂದು ಹೇಳುತ್ತಿದ್ದಾರೆ!

ಹೀಗಿರುವಾಗ ನಂಜುಂಡಸ್ವಾಮಿ ಮಾರ್ಕ್ಸ್‌ವಾದಿ ತಿಳುವಳಿಕೆಯಿಂದಾಗಿ ಜಾಗತೀಕರಣ ಕುರಿತು ಸರಿಯಾದ ನಿಲುವು ತೆಗೆದುಕೊಂಡರೆಂದು ಹೇಳುವುದು ಹಾಸ್ಯಾಸ್ಪದವಾಗಿದೆ. ನಂಜುಂಡಸ್ವಾಮಿ ಅವರಿಗೆ ಬಂಡವಾಳಶಾಹಿ ಕುರಿತ ಮಾರ್ಕ್ಸ್‌ವಾದಿ ವಿಶ್ಲೇಷಣೆಯ ಅಪಾಯಗಳ ಬಗ್ಗೆ ಲೋಹಿಯಾ ಮಾಡಿದ್ದ ಟೀಕೆಗಳ ಅರಿವಿತ್ತು. ಹಾಗಾಗಿಯೇ ಅವರು ಸರಿಯಾದ ನಿಲುವು ತೆಗೆದುಕೊಂಡರು ಎಂದು ಹೇಳಿದರೆ ರಹಮತ್ ಏನು ಹೇಳುವರು? ಬಂಡವಾಳಶಾಹಿ ಮತ್ತು ಮಾರ್ಕ್ಸ್‌ವಾದ ಒಂದೇ ಮನಸ್ಸಿನ ಎರಡು ಕವಲುಗಳು ಎಂಬುದು ಲೋಹಿಯಾ ಚಿಂತನೆಯ ಮುಖ್ಯ ತಿರುಳಾಗಿತ್ತು ಮತ್ತು ಬಂಡವಾಳಶಾಹಿ ತನ್ನ ಭವಿಷ್ಯದ ರೂಪಗಳಲ್ಲಿ(ಉದಾ: ಆಗಲೇ ತಲೆ ಎತ್ತುತ್ತಿದ್ದ ಕಾರ್ಪೋರೇಟ್‌ಶಾಹಿ ರೂಪದಲ್ಲಿ) ಮಾರ್ಕ್ಸ್‌ವಾದಿ ತರ್ಕವನ್ನು ಧಿಕ್ಕರಿಸಿ ಬೆಳೆಯುವ ಅಪಾಯದ ಬಗ್ಗೆ ಲೋಹಿಯಾ ಎಚ್ಚರಿಕೆ ನೀಡಿದ್ದರು ಎಂಬುದನ್ನು ಇಲ್ಲಿ ರಹಮತ್ ಅವರ ಗಮನಕ್ಕೆ ತರಬಯಸುವೆ.

ಇನ್ನು ಲೋಹಿಯಾ ಚಿಂತನೆಯ ಜಾತಿ ನೀತಿಯನ್ನು ರಹಮತ್, ಕರ್ನಾಟಕದಲ್ಲಿ ಮೊದಲಿಂದಲೂ ಇರುವ ದ್ವಿಜ ಶ್ರೇಷ್ಠತೆಯ ನಿರಾಕರಣೆಯ ಜತೆ ಅನ್ಯೋನ್ಯವಾಗಿ ಸೇರಿಕೊಂಡಿತು ಎಂದು ಸುಲಭವಾಗಿ; ಅದನ್ನು ಬ್ರಾಹ್ಮಣ ವಿರೋಧಿ ನೀತಿ ಎಂಬಂತೆ ಪರಿಚಯಿಸುತ್ತಾ, ಮುಂದೆ ತಮ್ಮ ಅನೇಕ ಅಸಂಬದ್ಧ ತೀರ್ಮಾನಗಳಿಗೆ ದಾರಿ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲೇ ದ್ವಿಜ ಶ್ರೇಷ್ಠತೆಯ ವಿರುದ್ಧ ಅನೇಕ ನೆಲೆಗಳ ಆಂದೋಲನಗಳು ನಡೆದಿವೆ. ಆದರೆ ಅದೇ ವೇಳೆಯಲ್ಲಿ ದ್ವಿಜ ಶ್ರೇಷ್ಠತೆಯನ್ನು ಪರೋಕ್ಷವಾಗಿ ಒಪ್ಪಿಕೊಳ್ಳುವುದು (ಅಂದರೆ, ಅವರನ್ನು ಉದಾಹರಣೆಯಾಗಿ ಅನುಸರಿಸುವುದು) ಎಲ್ಲ ಜಾತಿಗಳ ಪಾಡೇ ಆಗಿತ್ತು ಎಂಬುದನ್ನು ಮರೆಯುವಂತಿಲ್ಲ. ಆದರೆ ಜಾತಿ ಕುರಿತ ಲೋಹಿಯಾ ವಿಶ್ಲೇಷಣೆ, ಈ ದ್ವಿಜ ಶ್ರೇಷ್ಠತೆಯ ವ್ಯಸನಕ್ಕೆ ಮತ್ತು ಆಧುನಿಕ ಕಾಲದ ಈ 'ಸಂಸ್ಕೃತೀಕರಣ' ಪ್ರವೃತ್ತಿಗೆ ಜಾತಿವ್ಯವಸ್ಥೆಯ ಹಿಂದಿನ ರಾಜಕೀಯ ತಾತ್ವಿಕತೆಯೇ ಕಾರಣವೆಂಬುದನ್ನು ಜಾಗತಿಕ ಇತಿಹಾಸದ ಹಿನ್ನೆಲೆಯಲ್ಲಿ ಗುರುತಿಸಿತ್ತು. ಹಾಗೇ ಇದನ್ನು ಇಡಿಯಾಗಿ ಜಾತಿವ್ಯವಸ್ಥೆಯನ್ನೇ ಮುಖಾಮುಖಿ ಮಾಡಿಕೊಳ್ಳುವ ಮೂಲಕವೇ ಎದುರಿಸಬೇಕಾಗುತ್ತದೆ ಎಂದು ಪ್ರತಿಪಾದಿಸಿತ್ತು. ಈ ಹಿನ್ನೆಲೆಯಲ್ಲಿಯೇ, ಜಾತಿ ಪದ್ಧತಿಯಿಂದಾಗಿ ದ್ವಿಜ, ಶೂದ್ರರಿಬ್ಬರೂ ಅರೆ ಸತ್ತು ಬಿದ್ದಿದ್ದಾರೆಂದು ಲೋಹಿಯಾ ಹೇಳಿದ್ದುದು.

ಹಾಗಾಗಿಯೇ ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದಾದ್ಯಂತ ಅನೇಕ ಪ್ರಗತಿಶೀಲ

ದ್ವಿಜರು (ಬ್ರಾಹಣ, ಕ್ಷತ್ರಿಯ ಮತ್ತು ವೈಶ್ಯ) ಸಮಾಜವಾದಿ ಪಕ್ಷದ ಸದಸ್ಯರಾಗಿ ಜಾತಿ ವಿರೋಧಿ ಆಂದೋಲನದಲ್ಲಿ ಪಾಲ್ಗೊಂಡರು ಮತ್ತು ವಿಭಿನ್ನ ಶ್ರೇಣಿಗಳ ಶೂದ್ರ ನಾಯಕತ್ವವನ್ನು ಬೆಳೆಸಿದರು. ಇಂತಹ ಬೆಳವಣಿಗೆ ಯಾವ ರಾಜಕೀಯ ಆಂದೋಲನದಿಂದ ಸಾಧ್ಯವಾಗಿದೆ ಎಂಬುದನ್ನು, ಶೂದ್ರ-ದಲಿತರ ಹಿತವನ್ನು ದ್ವಿಜರೇ ನೋಡಿಕೊಳ್ಳಬಲ್ಲರೆಂದು ಇತ್ತೀಚಿನವರೆಗೆ ತಣ್ಣಗೆ ಹೇಳುತ್ತಿದ್ದ ಮಾರ್ಕ್ಸ್‌ವಾದಿ ರಾಜಕಾರಣಿಗಳ ತಾತ್ವಿಕ ವಕ್ತಾರರಂತೆ ವಾದಿಸುವ ರಹಮತ್ ಅವರೇ ಹೇಳಬೇಕು! ಹಾಗೇ ಲೋಹಿಯಾ ಚಿಂತನೆಯ ಭಾಗವಾದ ಜಾತಿ ವಿನಾಶದ ಕಾರ್ಯಕ್ರಮವಾಗಿ ಕರ್ನಾಟಕದಲ್ಲಿ 'ಸಮಾಜವಾದಿ ಯುವಜನ ಸಭಾ' ಆರಂಭಿಸಿದ ಎಲ್ಲ ರೀತಿಯ ಮಿಶ್ರಣಗಳ ಅಂತರ್ಜಾತಿ ಮತ್ತು ಅಂತರ್ಧರ್ಮೀಯ ವಿವಾಹಗಳ ಚಳುವಳಿ, ಕುವೆಂಪು ಅವರ 'ಮಂತ್ರ ಮಾಂಗಲ್ಯ'ದ ಪರಿಕಲ್ಪನೆಯೊಂದಿಗೆ ಸೇರಿ ರಾಜ್ಯಾದ್ಯಂತ ಉಂಟು ಮಾಡಿದ ಸಾಮಾಜಿಕ ತಳಮಳವನ್ನೂ, ಎಚ್ಚರವನ್ನೂ ಇನ್ನಾವ ಆಂದೋಲನ ಮಾಡಿದೆಯೆಂಬುದನ್ನೂ ಹೇಳಬೇಕು.

ಆದರೆ ರಹಮತ್ ಅವರಿಗೆ ಲೋಹಿಯಾವಾದಿಗಳ ಜಾತಿ ನೀತಿ ಮಿತಿಯುಳ್ಳದ್ದಾಗಿ ಕಾಣುತ್ತದೆ. ಅವರ ಪ್ರಕಾರ, 'ದಲಿತರ ಮೇಲಣ ದಮನಕ್ಕಿಂತ ಶೂದ್ರರ ಸಾಂಸ್ಕೃತಿಕ ಹಕ್ಕುಗಳನ್ನು ಬ್ರಾಹ್ಮಣ ವಿರೋಧಿ ನೆಲೆಯಲ್ಲಿ ಮಂಡಿಸುತ್ತಿದ್ದ ಲೋಹಿಯಾವಾದಿಗಳ ಮಿತಿಗಳು ಗೊತ್ತಾಗಿದ್ದೇ ದಲಿತ ಚಳುವಳಿ ಬಂದ ಬಳಿಕ. ಲೋಹಿಯಾವಾದಿಗಳ ಜಾತಿ ವಿನಾಶ ಚಳುವಳಿಯಲ್ಲಿ ದಲಿತರ ಭಾಗವಹಿಸುವಿಕೆಯಿಲ್ಲ ಎಂಬುದು ಗಮನಾರ್ಹ. ಕನಾಟಕದ ಲೋಹಿಯವಾದಿಗಳಲ್ಲಿ ದೇವನೂರ ಮಹದೇವರ ಹೆಸರು ಏಕೈಕವೆಂದು ತೋರುವುದು.' ಇದು ಸಮಾಜವಾದಿ ಮತ್ತು ದಲಿತ ಚಳುವಳಿಯ ಹುಟ್ಟು ಬೆಳವಣಿಗೆಗಳ ಪ್ರಾಥಮಿಕ ಪರಿಚಯವೂ ಇಲ್ಲದವರು ಮಾತ್ರ ಆಡುವಂತಹ ಮಾತು ಎಂದು ವಿಷಾದದಿಂದ ಹೇಳಬೇಕಿದೆ. ಗಾಂಧೀಜಿ ಕಾಲದ ಹರಿಜನೋದ್ಧಾರ ಚಳುವಳಿ ಮತ್ತು ಉತ್ತರ ಕರ್ನಾಟಕದ ಮಹಾರಾಷ್ಟ್ರ ಗಡಿಯ ಕೆಲವೇ ಕೆಲವು ಭಾಗಗಳಲ್ಲಿನ ಅಂಬೇಡ್ಕರ್ ಪ್ರಭಾವದ ಸಣ್ಣಪುಟ್ಟ ಸಂಚಲನಗಳನ್ನು ಬಿಟ್ಟರೆ, ಎಪ್ಪತ್ತರ ದಶಕದವರೆಗೆ ಕರ್ನಾಟಕದಲ್ಲಿ ಯಾವುದೇ ಸಾಮಾಜಿಕ ಚಳುವಳಿಯಲ್ಲಿ ದಲಿತರ ಸಕ್ರಿಯ ಭಾಗವಹಿಸುವಿಕೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಇತ್ತು. ಅಂತಹ ಸಂದರ್ಭದಲ್ಲಿ ಹೆಚ್ಚು ದಲಿತರು ತಮ್ಮ ಅಸ್ಮಿತೆಯ ಎಚ್ಚರದೊಂದಿಗೆ ಭಾಗವಹಿಸಿದ್ದು ಸಮಾಜವಾದಿಗಳ ಜಾತಿ ವಿನಾಶ ಚಳುವಳಿಯಲ್ಲಿ ಮತ್ತು ಇದರ ಫಲವಾಗಿಯೇ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟಿದ್ದು ಕೂಡಾ ಎಂಬುದನ್ನು ಇಲ್ಲಿ ರಹಮತ್ ಅವರ ಗಮನಕ್ಕೆ ತರಬಯಸುವೆ.

ಕರ್ನಾಟಕದ ದಲಿತ ಚಳುವಳಿಯ ದೊಡ್ಡ ಹೆಸರುಗಳಾದ ದೇವನೂರ ಮಹಾದೇವ ಮಾತ್ರವಲ್ಲ, ಎಚ್.ಗೋವಿಂದಯ್ಯ, ಕೆ.ಬಿ. ಸಿದ್ಧಯ್ಯ ಈಗಲೂ ಗುರುತಾಗಿರುವುದು ಲೋಹಿಯಾವಾದಿಗಳೆಂದೇ. ಇವರಲ್ಲದೆ, ದಲಿತ ಚಳುವಳಿಯ ತಂದೆಯಂತಿದ್ದ ಬಿ.ಕೃಷ್ಣಪ್ಪ, ಹಿರಿಯ ನಾಯಕರಾದ ಕೆ. ನಾರಾಯಣಸ್ವಾಮಿ, ಕೋಲಾರದ ವೆಂಕಟೇಶ್, ಹಾಸನದ ಚಂದ್ರಪ್ರಸಾದ ತ್ಯಾಗಿ, 'ಸಂವಾದ' ಪತ್ರಿಕೆಯ ಸಂಪಾದಕರಾದ ಇಂದೂಧರ ಹೊನ್ನಾಪುರ ಮುಂತಾದವರು ಮೂಲತಃ ಲೋಹಿಯಾವಾದದಿಂದ ಪ್ರಭಾವಿತರಾದವರು. ಸಮಾಜವಾದಿ ಚಳುವಳಿ ಮಂಕಾಗುತ್ತಿದೆ ಎನಿಸಿದಾಗ ದಲಿತರ ಹಿತ ಕಾಪಾಡಿಕೊಳ್ಳಲು ಅಂಬೇಡ್ಕರರೆಡೆಗೆ

ಆಕರ್ಷಿತರಾಗಿ ದಲಿತ ಸಂಘ ಕಟ್ಟಿದವರು. ಇತ್ತೀಚೆಗೆ ದಸಂಸದ ಈಚಿನ ತಲೆಮಾರಿನ ನಾಯಕರಾದ ಲಕ್ಷ್ಮೀನಾರಾಯಣ ನಾಗವಾರ ಅವರು ನನ್ನೊಂದಿಗೆ ಮಾತನಾಡುತ್ತಾ, ಕರ್ನಾಟಕದಲ್ಲಿನ ಲೋಹಿಯಾ ಸಮಾಜವಾದದ ದಟ್ಟ ಪ್ರಭಾವವೇ ದಲಿತರನ್ನು ಅವರು ನಕ್ಸಲೀಯರಾಗುವ ಅಪಾಯದಿಂದ ರಕ್ಷಿಸಿದೆ ಎಂದಾಗ ಅದು ನಿಜವಾಗಿ ಆಳದ ಸತ್ಯ ಎನಿಸಿತು.(ಈ ದೃಷ್ಟಿಯಿಂದ ಕೆಲವರ ಕಣ್ಣಲ್ಲಿ ಲೋಹಿಯಾ ಮತ್ತು ಲೋಹಿಯಾವಾದಿಗಳು ಖಳನಾಯಕರಾಗಿದ್ದಲ್ಲಿ ಆಶ್ಚರ್ಯವಿಲ್ಲ!)

ಏಕೆಂದರೆ, ಈ ದಲಿತ ಚಳುವಳಿಯನ್ನು ತಾವು ಹೊರಗಿನವರು ಎಂದು ತಿಳಿಯದೇ, ಹೊರಗಿನಿಂದ ಅನೇಕ ರೀತಿಯಲ್ಲಿ ಪೋಷಿಸಿದವರು, ಪ್ರೋತ್ಸಾಹಿಸಿದವರು ಸಮಾಜವಾದಿಗಳೇ. ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ರಾಮದಾಸ್, ಕೆ.ಎಂ.ಶಂಕರಪ್ಪ, ಕಡಿದಾಳು ಶಾಮಣ್ಣ, ಚಂಪಾ, ರಾಜಶೇಖರ ಕೋಟಿ, ಕಾಳೇಗೌಡ ನಾಗವಾರರಿಂದ ಹಿಡಿದು ಕೆ.ಟಿ.ಶಿವಪ್ರಸಾದ, ಮಂಗ್ಳೂರ ವಿಜಯ, ಎನ್.ಎಸ್.ಶಂಕರ್, ನಟರಾಜ ಹುಳಿಯಾರ್, ವೈ.ಮಹೇಶ್, ಆರ್.ಪಿ.ವೆಂಟೇಶಮೂರ್ತಿ, ಮಂಜುನಾಥ ದತ್ತ, ಅರೇಹಳ್ಳಿ ರಾಜೇಗೌಡ, ಹಿ.ಶಿ. ರಾಮಚಂದ್ರೇಗೌಡ, ಕುಂವೀ, ಎಂ.ಚಂದ್ರಶೇಖರಯ್ಯ, ಬಿ.ರಾಜಣ್ಣ, ನಿಸಾರ್ ಅಹ್ಮದ್, ದಿವಾಕರ ಹೆಗ್ಡೆ, ಬಿ.ಚಂದ್ರೇಗೌಡರವರೆಗೆ ಈ ಹೆಸರುಗಳು ಹಬ್ಬಿವೆ. ಈ ಹಿನ್ನೆಲೆಯಲ್ಲಿ, 'ಗಾಂಧಿಯನ್ನು ಕಟುವಾಗಿ ವಿಮರ್ಶಿಸುವ ಅಂಬೇಡ್ಕರ್ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ಹುಟ್ಟಿ ಬೆಳೆದ ದಲಿತ ಚಳುವಳಿಯು, ಈ ಕಾರಣಕ್ಕಾಗಿ ಲೋಹಿಯಾವಾದಿಗಳ ಜತೆ ಹೆಚ್ಚು ಸಾಮೀಪ್ಯ ಪಡೆಯಲು ಆಗಲಿಲ್ಲ' ಎಂಬ ರಹಮತ್ ಅವರ ಮಾತು, ವಾಸ್ತವ ಗೊತ್ತಿಲ್ಲದಿದ್ದರೂ ಸುಮ್ಮನೆ ಆಡುವ ಉಡಾಫೆಯ ಮಾತು ಎನಿಸುತ್ತದೆ.

ಹಾಗೇ ರಹಮತ್, ದಸಂಸ ಬಹಿಷ್ಕರಿಸಿದ್ದ 'ಗಾಂಧಿ' ಚಿತ್ರವನ್ನು ದೇವನೂರ ಮಹಾದೇವ ನೋಡಿ ಪ್ರಶಂಸಿದ್ದನ್ನು ಅನೇಕ ದಲಿತರು ಒಪ್ಪದಿದ್ದಕ್ಕೂ, ಲೋಹಿಯಾವಾದದ ಗಾಂಧಿವಾದಿ ಸಾಮೀಪ್ಯವೆಂದು ಪರೋಕ್ಷವಾಗಿ ಸೂಚಿಸುತ್ತಾರೆ. ಆದರೆ ದೇವನೂರರು 'ಗಾಂಧಿ' ಚಿತ್ರ ನೋಡಿ ಲೇಖನ ಬರೆದ ಮೇಲೆ, ಕ್ರಮೇಣ ದಸಂಸದ ಸಾಮಾನ್ಯ ಕಾರ್ಯಕರ್ತರಲ್ಲಿ ಹಲವರು ಹೇಗೆ ಕದ್ದು ಮುಚ್ಚಿ ಮತ್ತು ಕೆಲವರು ರಾಜಾರೋಷವಾಗಿ ಆ ಚಿತ್ರವನ್ನು ನೋಡಿ ಬಂದರೆಂಬುದು, ಮೂಲ ದಸಂಸದ ಸಹವಾಸವನ್ನೇ ಮಾಡದಂತೆ ತೋರುವ ರಹಮತ್‌ರಾದರೂ ಹೇಗೆ ಬಲ್ಲರು? ಇನ್ನು ರೈತ ಸಂಘಕ್ಕೆ ದಲಿತರು ಬರಲೇ ಇಲ್ಲವೆಂದು ಹೇಳುವ ಇವರು, ಇದಕ್ಕೆ ಕಾರಣ ಅದು ದಲಿತರ ದಮನಕ್ಕೆ ಕಾರಣರಾಗಿದ್ದ ಭೂಮಾಲಿಕ ಒಕ್ಕಲಿಗ–ಲಿಂಗಾಯಿತ ಜಾತಿಗಳಿಗೆ ಪ್ರಿಯವಾದ ಲೋಹಿಯಾವಾದವೇ ಕಾರಣವೆಂದು ಸೂಚಿಸುತ್ತಾರೆ. ಇದು ವಾಸ್ತವದ ಪರಿವೆಯೇ ಇಲ್ಲದ, ಅಲ್ಲಿಲ್ಲಿ ಓದಿಕೊಂಡ ಮಳ್ಳೆಗಣ್ಣಿನ ಮಾರ್ಕ್ಸ್‌ವಾದಿ ಪುಢಾರಿತನದ ವಿಶ್ಲೇಷಣೆಯ ಪರಿಣಾಮವಲ್ಲದೆ ಮತ್ತೇನಲ್ಲ. ಏಕೆಂದರೆ, ರೈತ ಸಂಘಕ್ಕೆ ದಲಿತರು ಬರಲೇ ಇಲ್ಲ ಎಂದು ಹೇಳಲಾಗುವುದಿಲ್ಲ. ರೈತಸಂಘದ ಪರವಾಗಿ ಕಡಿದಾಳು ಶಾಮಣ್ಣನವರನ್ನೂ, ದಸಂಸದ ಪರವಾಗಿ ಕೆ.ಬಿ.ಸಿದ್ಧಯ್ಯನವರನ್ನೂ ಕೇಳಿದರೆ ವಾಸ್ತವ ಗೊತ್ತಾಗುತ್ತದೆ. ರೈತಸಂಘ ಎಂದೂ ಸಂಪೂರ್ಣವಾಗಿ ಲೋಹಿಯಾ

ವಾದಿಯೂ ಆಗಿರಲಿಲ್ಲ ಮತ್ತು ದಸಂಸ ಎಂದೂ ಸಂಪೂರ್ಣ ಅಂಬೇಡ್ಕರ್‌ವಾದಿಯೂ ಆಗಿರಲಿಲ್ಲ. ಅವುಗಳ ಕೆಲವು ನಾಯಕರ ಮೇಲೆ ಈ ಚಿಂತನೆಗಳ ದಟ್ಟ ಪ್ರಭಾವಪಿತ್ತಷ್ಟೆ.

ರೈತ ಸಂಘ ಶುರುವಾಗುವ ಹೊತ್ತಿಗೆ ದಸಂಸ ಭದ್ರವಾಗಿ ನೆಲೆಯೂರಿದ್ದರಿಂದಾಗಿ, ಸಂಘಟನೆಯ ಗೊಂದಲಗಳು ದಲಿತರು ರೈತಸಂಘದಿಂದ ದೂರವುಳಿಯಲು ಒಂದು ಕಾರಣವೆಂದು ನನಗನ್ನಿಸಿದೆ. ಇನ್ನೊಂದು ಕಾರಣ, ರೈತ ಸಂಘ ಮೂಲತಃ ಭೂಮಿಯುಳ್ಳವರ ಸಮಸ್ಯೆಗಳ ಪರಿಹಾರಕ್ಕಾಗಿ ('ಮಲೆನಾಡು ಕಬ್ಬು ಬೆಳೆಗಾರರ ಸಂಘ'ದಿಂದ) ಹುಟ್ಟಿಕೊಂಡ ಸಂಘಟನೆ. ಹಾಗಾಗಿ ಅದು ಭೂರಹಿತ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಬಹು ಮುಖ್ಯವೆಂಬಂತೆ ಕೈಗೆತ್ತಿಕೊಳ್ಳಲಿಲ್ಲ ಎಂಬುದೂ ಆಗಿದೆ. ಆದರೆ ಅದು ಎಂದೂ ದಲಿತರ ಹಿತಾಸಕ್ತಿಗಳ ವಿರುದ್ಧ ಕೆಲಸ ಮಾಡಲಿಲ್ಲ ಎಂಬುದೂ ಅಷ್ಟೇ ಸತ್ಯ. ಹಲವೆಡೆ ರೈತ ಸಂಘ ಮತ್ತು ದಸಂಸ ಒಟ್ಟಿಗೆ ಸೇರಿ ಹೋರಾಟ ಮಾಡಿವೆ. ಜಾತೀಯತೆ, ಅಸ್ಪೃಶ್ಯತೆ, ದುಂದು ವೆಚ್ಚದ ವಿವಾಹ, ಗಣಿಗಾರಿಕೆ, ಭೂಮಾಲಿಕರ ದೌರ್ಜನ್ಯ ಇತ್ಯಾದಿಗಳ ವಿರುದ್ಧ ಸಾಮಾಜಿಕ ಆಂದೋಲನ ಸಂಘಟಿಸಿವೆ. ಇವರೆಡೂ ಸೇರಿ ಗ್ರಾಮ ಆಂದೋಲನ ಶುರು ಮಾಡಿದರೆ ಅದು ಒಂದು ಸಮಾಜವಾದಿ ಆಂದೋಲನವಾದೀತೆಂದು, ಎರಡೂ ಕಡೆಯ ಕೆಲವು ನಾಯಕರು ಪ್ರಯತ್ನಿಸಿದರಾದರೂ, ಆ ಹೊತ್ತಿಗೆ ಎರಡೂ ಸಂಘಟನೆಗಳಲ್ಲಿ ಬೆಳೆದು ನಿಂತಿದ್ದ ಸ್ಥಾಪಿತ ಹಿತಾಸಕ್ತಿಗಳು ಈ ಪ್ರಯತ್ನ ಸಫಲವಾಗದಂತೆ ನೋಡಿಕೊಂಡವಷ್ಟೆ ಇದು ಎರಡೂ ಸಂಘಟನೆಗಳು ಇನ್ನೂ ಸಾಕಷ್ಟು ಮಾಗಿಲ್ಲ ಎಂಬುದನ್ನು ತೋರಿಸಿತಷ್ಟೆ. ಬಹುಶಃ ಇದನ್ನರಿಯದ ರಹಮತ್ ತಾವು ಅಲ್ಲಿಲ್ಲಿ ಓದಿದ್ದನ್ನು, ಅವರಿವರಿಂದ ಕೇಳಿದ್ದನ್ನು ತಮ್ಮ ಶಾಸ್ತ್ರದ ನಿಯಮಗಳಿಗೆ ಅಳವಡಿಸುವ ಆತುರದಲ್ಲಿ ಕರ್ನಾಟಕದ ಎರಡು ದೊಡ್ಡ ಚಳುವಳಿಗಳ ಚರಿತ್ರೆಯನ್ನೇ ಸರಳೀಕರಿಸುವ ಮೂಲಕ ಅಶ್ಲೀಲೀಕರಿಸಿಬಿಟ್ಟಿದ್ದಾರೆ.

ರಹಮತ್ ಅವರ ಮುಂದಿನ ಆಕ್ಷೇಪಣೆ ಎಂದರೆ, ಲೋಹಿಯಾ ರಾಜಕಾರಣ ಮತ್ತು ಚಳುವಳಿಯಲ್ಲಿ ಮುಸ್ಲಿಮರು ಭಾಗವಹಿಸಲಿಲ್ಲ ಎಂಬುದು. ಆದರೆ ಮುಸ್ಲಿಮರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ರಾಜಕಾರಣಗಳ ಹೊರತಾಗಿ ಇನ್ನಾವ ರಾಜಕಾರಣದಲ್ಲಿ(ಈಗ ಬಿಡಿ, ಅವರು ಭಾಗವಹಿಸುತ್ತಿರುವ ಇನ್ನೂ ಹಲವಾರು ರೀತಿಯ ರಾಜಕಾರಣಗಳು ಹುಟ್ಟಿಕೊಂಡಿವೆ!) ಭಾಗವಹಿಸಿದ್ದಾರೆ? ಮಾರ್ಕ್ಸ್‌ವಾದಿ ರಾಜಕಾರಣ? ಹಾಗೆ ನೋಡಿದರೆ, ರಾಜ್ಯದಲ್ಲಿ ಮುಸ್ಲಿಮರು ಪ್ರತಿಭಟನಾತ್ಮಕ ರಾಜಕಾರಣದಲ್ಲಿ ಭಾಗವಹಿಸಲಾರಂಭಿಸಿದ ಕಾಲಕ್ಕೆ ಯಾವುದಾದರೂ ಪಕ್ಷ ಮುಸ್ಲಿಮನೊಬ್ಬನನ್ನು ತನ್ನ ಅಧ್ಯಕ್ಷನನ್ನಾಗಿ ಆರಿಸಿಕೊಂಡಿದ್ದರೆ, ಅದು ಸಮಾಜವಾದಿ ಪಕ್ಷ. ಅರವತ್ತರ ದಶಕದ ಕೊನೆಯಲ್ಲಿ ಅಜೀಜ್ ಸೇಟ್ ಕರ್ನಾಟಕದ (ಸಂಯುಕ್ತ)ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದರು ಎಂಬುದು ರಹಮತರಿಗೆ ಗೊತ್ತೆ? (ಈ ಸೇಟ್ ಅವರು ನಂತರ ಪಕ್ಷಾಂತರ ಮಾಡಿ, ಗೋಪಾಲಗೌಡರ ಕೈಯಲ್ಲಿ 'ದೊಣ್ಣೆ ಸೇವೆ' ಮಾಡಿಸಿಕೊಂಡರು ಎಂದೂ ಕೇಳಿರುವೆ.)

ಈ ಪುರಾಣವನ್ನೆಲ್ಲ ಬಿಚ್ಚಲು ನನಗೇ ಮುಜುಗರವಾಗುತ್ತದೆಯಾದರೂ, ರಹಮತ್ ಅವರಿಗೆ ನಮ್ಮ ಸಾಂಸ್ಕೃತಿಕ ವಲಯದಲ್ಲಿ ಸಾಕಷ್ಟು ವಿಶ್ವಾಸಾರ್ಹತೆ ಇರುವುದರಿಂದ, ಯುವ ಆಸಕ್ತರ ಪಾಲಿಗೆ ಅವರ ಇಂತಹ ಮಾತುಗಳೇ ಸತ್ಯವಾಗಿ ಮಾರ್ಪಾಡಾಗ

ಬಾರದೆಂದು ಇದನ್ನೆಲ್ಲ ಹೇಳಬೇಕಾಗಿದೆ. ಜೊತೆಗೆ ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಅಥವಾ ಆಂದೋಲನದ ಚರಿತ್ರೆಯೇ ಸಾಕ್ಷ್ಯಗಳೊಂದಿಗೆ ವ್ಯವಸ್ಥಿತವಾಗಿ ದಾಖಲಾಗದೆ ಅಸ್ಪಷ್ಟವಾಗಿರುವುದರಿಂದ, ಇಂತಹ ಅಡ್ಡ ಮಾತುಗಳಿಗೆ ಉತ್ತರ ಕೊಡುವುದು ಕಷ್ಟ. ಅದೂ, ಯಾವುದೇ ಸಂಸ್ಥೆಯ ಅಥವಾ ಯೋಜನೆಯ ಅಥವಾ ಕನಿಷ್ಠ ಸುಸಜ್ಜಿತ ಗ್ರಂಥಾಲಯದ ಸೌಲಭ್ಯವಿಲ್ಲದ ನನ್ನಂಥವನಿಗೆ. ಆದರೂ ಇಷ್ಟು ಹೇಳಬಹುದು: ಸಮಾಜವಾದಿ ಆಂದೋಲನ ಮುಸ್ಲಿಮರನ್ನೂ ಅಪಾರವಾಗಿಯಲ್ಲದಿದ್ದರೂ, ಗಣನೀಯವಾಗಿ ಸೆಳೆದಿತ್ತು. ಇಲ್ಲದೇ ಹೋದರೆ, ಎಪ್ಪತ್ತರ ದಶಕದ ಹೊತ್ತಿಗೆ ಉಮರಬ್ಬ, ನಂತರ ಹಸನಬ್ಬರಂತಹ ಧೀಮಂತ ಮುಸ್ಲಿಂ ಯುವ ನಾಯಕರನ್ನು ಪಡೆಯಲು ಆಗುತ್ತಿರಲಿಲ್ಲ. ಹಾಗೇ ಅಬ್ದುಲ್ ನಜ಼ೀರ್ ಸಾಬರಂತಹ ಲೋಹಿಯಾವಾದಿ ರಾಜಕಾರಣಿಯನ್ನು ಜನಮಧ್ಯದಿಂದ ಹೊಮ್ಮಿಸಲು ಸಾಧ್ಯವಾಗುತ್ತಿರಲಿಲ್ಲ.

ರಹಮತ್ ತಮ್ಮ ವಿಶ್ವದ್ಯಾಲಯದ ಲೋಹಿಯಾ ಅಧ್ಯಯನ ಪೀಠವು ತಮ್ಮ ಸಂಚಾಲಕತ್ವದ ಸಮಯದಲ್ಲೇ ಪ್ರಕಟಿಸಿರುವ(ಮತ್ತು ತಾವೇ ಮುನ್ನುಡಿಯ ಮಾತುಗಳನ್ನು ಬರೆದಿರುವ!) ಬಿ.ಪೀರ್ ಬಾಷ ಅವರ 'ಸಮಾಜವಾದಿ ಹೋರಾಟಗರರ ಸಂದರ್ಶನ' ಪುಸ್ತಕ ಅಥವಾ ಗೋಪಾಲ ಗೌಡರ ದಿನಚರಿ–ಇವುಗಳನ್ನೊಮ್ಮೆ ತಿರುವಿ ಹಾಕಿದರೆ ಸಮಾಜವಾದಿ ಹೋರಾಟಗಳಲ್ಲಿ ಭಾಗವಹಿಸಿದ ಇನ್ನೂ ಹಲವಾರು ಮುಸ್ಲಿಮರ ಹೆಸರುಗಳನ್ನು ಅವುಗಳಲ್ಲಿ ಕಂಡು ಸಂತೋಷ ಅಥವಾ ದುಃಖ ಪಡಬಹುದು! ಏಕೆಂದರೆ, ಇಷ್ಟು ಸಾರಾಸಗಟು ಆಪಾದನೆ ಮಾಡಲು ಮುಂದಾಗುವವರು ಇದನ್ನೆಲ್ಲ ಓದಿ ಮಾತಾಡಿದರೆ ಚೆನ್ನ. ಈ ಸಂಬಂಧ ರಹಮತ್ ಕೊನೆಯಲ್ಲಿ ಮುಟ್ಟುವ ತೀರ್ಮಾನ ಅವರು ಯಾವ ಮನೋಸ್ಥಿತಿಯಲ್ಲಿ ಇದನ್ನೆಲ್ಲ ಬರೆದಿದ್ದಾರೆ ಎಂಬುದನ್ನು ಸೂಚಿಸುತ್ತದೆ: ಮುಸ್ಲಿಮರು ಲೋಹಿಯವಾದದಿಂದ ಆಕರ್ಷಿತರಾಗದಿರಲು, ಲೋಹಿಯಾವಾದಿಗಳೊಡನೆ ಬಲಪಂಥೀಯರಿದ್ದುದಂತೆ! ಹಾಗಾದರೆ ಇವರ ಪ್ರಕಾರ, ಮುಸ್ಲಿಮರು ಹುಟ್ಟು ಎಡಪಂಥೀಯರು! ಇದೀಗ ಎಡಪಂಥೀಯತೆಯನ್ನು ಪುನರ್‌ವ್ಯಾಖ್ಯಾನಿಸುವ ಹೊಣೆ ನಮ್ಮದಾಗಿದೆ!

ಇನ್ನು ಲೋಹಿಯಾ ಅವರ ಭಾಷಾ ಚಿಂತನೆ, ಗಾಂಧಿಯ ಮಾತೃಭಾಷಾ ಚಿಂತನೆಯಿಂದ ಹುಟ್ಟಿದುದು ಎಂದು ಅದನ್ನು ಒಂದೇ ಮಾತಿನಲ್ಲಿ ನಿಕಾಲೆ ಮಾಡುವ ರಹಮತ್ ಅವರಿಗೆ, ಲೋಹಿಯಾ ಅವರ ಭಾಷಾ ಚಿಂತನೆ ಹೇಗೆ ಒಂದು ದೊಡ್ಡ ರಾಜಕೀಯ ಪ್ರಶ್ನೆಯೂ ಆಗಿತ್ತು ಮತ್ತು ಅದು ಅವರ ರಾಷ್ಟ್ರ ಪುನರ್‌ನಿರ್ಮಾಣದ ಕಲ್ಪನೆಯ ಅವಿಭಾಜ್ಯ ಅಂಗವಾಗಿ ಅನೇಕ ಇತರ ರಾಷ್ಟ್ರೀಯ ಸಮಸ್ಯೆಗಳೊಂದಿಗೆ ತಳುಕು ಹಾಕಿಕೊಂಡಿತ್ತು ಎಂಬುದರ ಪರಿವೆ ಇದ್ದಂತಿಲ್ಲ. ಕರ್ನಾಟಕದ ಲೋಹಿಯಾವಾದಿಗಳ ಇಂಗ್ಲಿಷ್ ವಿರೋಧ, ಅವರು ಇಂಗ್ಲಿಷ್ ಕಲಿಯಲು ಮತ್ತು ಅವರಲ್ಲಿ ಕೆಲವರು ಇಂಗ್ಲಿಷ್ ಅಧ್ಯಾಪಕರಾಗಿ ಪಡುತ್ತಿದ್ದ ಕಷ್ಟವೇ ಕಾರಣವಿದ್ದೀತು ಎಂಬ ಪರೋಕ್ಷ ಸೂಚನೆಯ ಮಟ್ಟಕ್ಕೆ ಇಲ್ಲಿಯ ವಿಶ್ಲೇಷಣೆ ಇಳಿದಿದೆ ಎಂದರೆ ಈ ಬಗ್ಗೆ ಮುಂದೆ ಮಾತನಾಡುವ ಅಗತ್ಯವೇನಿದೆ?

ಸ್ತ್ರೀ ಕುರಿತ ಲೋಹಿಯಾ ಚಿಂತನೆ ಬಗೆಗೆ ರಹಮತ್ ಈ ಸಂಬಂಧದ ಲೋಹಿಯಾ

ಅವರು ಎರಡು ಜನಪ್ರಿಯ ಲೇಖನಗಳನ್ನು ಉಲ್ಲೇಖಿಸುತ್ತಾ, ಅವುಗಳ ಬಗ್ಗೆ ಒಳ್ಳೆಯ ಮಾತುಗಳನ್ನಾಡುವ ಅನಿವಾರ್ಯತೆಗೆ ಸಿಕ್ಕಿ ತಳಮಳಿಸಿದವರಂತೆ 'ಕರ್ನಾಟಕದ ಅನೇಕ ಲೋಹಿಯಾವಾದಿಗಳು ಮಹಿಳೆಯರನ್ನು ಸಂಗಾತಿಯನ್ನಾಗಿ ನೋಡುವುದರ ಹಾಗೂ ಅವರನ್ನು ಲೈಂಗಿಕ ವಸ್ತುವಾಗಿ ಗ್ರಹಿಸುವುದರ ನಡುವೆ ವ್ಯತ್ಯಾಸ ಮಾಡಿಕೊಳ್ಳಲಿಲ್ಲ. ಅನೇಕರು ಹೆಣ್ಣನ್ನು ದೇಹಪ್ರಧಾನವಾಗಿ ನೋಡುವ ಮಿತಿಯಿಂದ ತಪ್ಪಿಸಿಕೊಳ್ಳಲಿಲ್ಲ' ಎಂದು ದೂಷಣೆಯ ಧ್ವನಿಯಲ್ಲಿ ಸಾರಾಸಗಟಾಗಿ ಬಡಬಡಿಸುತ್ತಾ ಹೋಗಿದ್ದಾರೆ. ಅವರು ಮುಂದುವರೆದು, ಲೋಹಿಯಾವಾದಿಗಳೆನಿಸಿಕೊಂಡ ಲೇಖಕರಾದ ತೇಜಸ್ವಿ ಮತ್ತು ಅನಂತಮೂರ್ತಿಯಂಥವರು ಸಬಲ ಸ್ತ್ರೀಪಾತ್ರಗಳನ್ನು ಕಡೆಯುವುದಕ್ಕೆ ಆಗಲಿಲ್ಲ ಎಂದು ದೂರುತ್ತಾರೆ. ಪಟೇಲರ ಹೆಣ್ಣಿನ ಹುಚ್ಚು ಒಂದು ದಂತ ಕಥೆಯಾಯಿತೆಂದು ಆರೋಪಿಸುತ್ತಾರೆ.

ಹೀಗೆಲ್ಲ ಬರೆಯುವ ರಹಮತ್ ಎಷ್ಟು ಜನ ಲೋಹಿಯಾವಾದಿಗಳ ವೈಯುಕ್ತಿಕ ಜೀವನವನ್ನು ಹತ್ತಿರದಿಂದ ಕಂಡಿದ್ದಾರೆ? ಇವರರ್ಥದಲ್ಲಿ ಹೆಣ್ಣನ್ನು ಕೀಳಾಗಿ ಕಾಣುವ ಒಬ್ಬ ಲೋಹಿಯಾವಾದಿಯ ಹೆಸರನ್ನು ಹೇಳಿದರೆ, ಅದಕ್ಕೆ ಪ್ರತಿಯಾಗಿ ನಾನು ಮಾರ್ಕ್ಸ್‌ವಾದಿಗಳೂ ಸೇರಿದಂತೆ ಇತರರ ಹತ್ತು ಹೆಸರುಗಳನ್ನು ಹೇಳಬಲ್ಲೆ. ಇದೆಲ್ಲ ಅಗತ್ಯವೇ? ರಹಮತ್ ಎಲ್ಲ ಆದರ್ಶಗಳನ್ನೂ ಲೋಹಿಯಾವಾದಿಗಳಿಂದ ಮಾತ್ರ ನಿರೀಕ್ಷಿಸಿ ಅವರನ್ನು ಯಾವುದೇ ಸಾಕ್ಷಿಯಿಲ್ಲದೆ, ಕಟಕಟೆಯಲ್ಲಿ ನಿಲ್ಲಿಸಬಯಸಿದಂತೆ ಕಾಣುತ್ತದೆ. ಅಂತರ್ಜಾತಿ ವಿವಾಹಗಳನ್ನು ಒಂದು ಆಂದೋಲನವಾಗಿ ಬೆಳೆಸಿ (ಗಂಡಿಗೆ ಹೋಲಿಸಿದಂತೆ ಹೆಚ್ಚಿನ ರೀತಿಯಲ್ಲಿ ಬಂಧನದಲ್ಲಿದ್ದ)ಹೆಣ್ಣಿಗೆ ಒಂದು ನೆಲೆಯ ಬಿಡುಗಡೆ ಹಾದಿಯನ್ನು ತೆರೆದವರು ಲೋಹಿಯಾ ಸಮಾಜವಾದಿಗಳು. ತಂತಮ್ಮ ಜಾತಿ-ಧರ್ಮಗಳಲ್ಲೇ 'ಸುರಕ್ಷಿತ'ವಾಗಿ ಮದುವೆ ಮಾಡಿಕೊಂಡು, ಮಕ್ಕಳನ್ನೂ ಆ ಪರಿಧಿಯಲ್ಲೇ ಸುರಕ್ಷಿತವಾಗಿ ಬೆಳೆಸಿ, ಕ್ರಾಂತಿಯ ಶಾಸ್ತ್ರ ಹೇಳುವ ಬಹಳ ಜನರನ್ನು ಈ ದೇಶ ಕಂಡಿದೆ... ಜೆ.ಎಚ್.ಪಟೇಲ್ ಹೆಣ್ಣಿನ ಹುಚ್ಚನಂತೆ. ಇದನ್ನು ಸಮರ್ಥಿಸದೆ ಹೇಳುವುದಾದರೆ, ಇದನ್ನು ಪ್ರಶ್ನಿಸುವ ಹಕ್ಕು ಅವರ ಪತ್ನಿ ಹಾಗೂ ಈ 'ಹುಚ್ಚಿ'ನ ವ್ಯಾಪ್ತಿಗೆ ಒಳಪಟ್ಟವರೆಂದು ಹೇಳಲಾದ ಹೆಣ್ಣುಗಳ ಹೊರತಾಗಿ ಇನ್ನಾರಿಗೂ ಇಲ್ಲ ಮತ್ತು ಈ ಹುಚ್ಚನ್ನು ಸಾರ್ವಜನಿಕವಾಗಿ ಪ್ರಕಟಪಡಿಸಿದ ಪಟೇಲ್‌ಗೆ ನನ್ನ ನಮನ ಸಲ್ಲುತ್ತದೆ. ಪಟೇಲರಂತೆ ಸಾರ್ವಜನಿಕವಾಗಿ ಪ್ರಕಟಪಡಿಸದೇ ಆ ಹುಚ್ಚಿನಲ್ಲಿ ಒಳಗೊಳಗೇ ಕೊಳೆತು ನಾರುತ್ತಿರುವವರ ಬಗ್ಗೆ ರಹಮತ್ ಸಂಶೋಧನೆ ಮಾಡಿ, ಇವರಲ್ಲಿ ಯಾವ ಯಾವ ರಾಜಕೀಯ ಧಾರೆಯವರು ಎಷ್ಟೆಷ್ಟು ಜನರಿದ್ದಾರೆಂದು ವಿಶ್ಲೇಷಣೆ ಮಾಡಿ ಹೇಳಿಯೇ, ತಮ್ಮ ಅಗ್ಗದ ಮಾತುಗಳ ಕೊಳೆಯುನ್ನು ತೊಳೆದುಕೊಳ್ಳಬಹುದಾಗಿದೆ. ಅವು ಅಷ್ಟು ಅಸಭ್ಯತೆ ಮತ್ತು ಅತಿ ಬೇಜವಾಬ್ದಾರಿತನದಿಂದ ಕೂಡಿವೆ.

ಲೋಹಿಯಾವಾದಿ ಲೇಖಕರೆನಿಸಿಕೊಂಡ ತೇಜಸ್ವಿ ಮತ್ತು ಅನಂತಮೂರ್ತಿ ಸಬಲ ಸ್ತ್ರೀಪಾತ್ರಗಳನ್ನೇ ಕಡೆದಿಲ್ಲ ಎನ್ನುವ ರಹಮತ್‌ರ ಮಾತು ಅವರ ಸಾಹಿತ್ಯ ಓದಿನ ರೀತಿ ನೀತಿಗಳನ್ನೇ ಪ್ರಶ್ನಿಸುವಂತೆ ಮಾಡುತ್ತದೆ. ಹಾಗೇ ತೇಜಸ್ವಿ ಸಾಹಿತ್ಯದಲ್ಲಿ ವರ್ಗ ಹೋರಾಟ ಮಾಡುವವರನ್ನು ವ್ಯಂಗ್ಯ ಚಿತ್ರಗಳಂತೆ ನಿರೂಪಿಸಿದ್ದಾರೆ ಎಂಬ ಅವರ ಮಾತು ಕೂಡಾ.

ಮೊದಲಾಗಿ ಇದು ಯಾರದೇ ಸಾಹಿತ್ಯವನ್ನು ನೋಡುವ ಕ್ರಮವೇ ಅಲ್ಲ. ಶ್ರೇಷ್ಠ ಲೇಖಕರಾರೂ ಬರೆಯುವಾಗ ಯಾವ ವಾದಿಯೂ ಆಗಿರುವುದಿಲ್ಲ ಮತ್ತು ರಾಜಕೀಯ ಸಿದ್ಧಾಂತವಾದಿಗಳ ಲೆಕ್ಕಾಚಾರಕ್ಕೆ ತಕ್ಕಂತೆ ಬರೆಯುವುದೂ ಇಲ್ಲ. ಅವರು ಅನುಭವಿಸಿದ್ದರ ಮೂಲಕ 'ಕಂಡ' ಬದುಕಿನಲ್ಲಿ ಯಾರಾರ ಪಾತ್ರ ಎಷ್ಟೆಷ್ಟಿರುತ್ತದೋ, ಹೇಗೆ ಹೇಗೆ ಇರುತ್ತದೋ ಹಾಗೆ ಅವರ ಪಾತ್ರಗಳು ಕಟ್ಟಲ್ಪಡುತ್ತವೆ. ಇದರ ಹಿಂದಿನ ರಾಚನಿಕತೆ ಒಟ್ಟಾರೆ ಕೃತಿಯಲ್ಲಿ ಸಹಜವಾಗಿ ಮೂಡಿದೆಯೋ ಇಲ್ಲವೋ ಎಂಬುದರ ವಿವೇಚನೆಯಷ್ಟೇ ಸಾಹಿತ್ಯ ವಿಮರ್ಶೆಯ ಮಾನದಂಡಗಳಾಗಬೇಕು. ಏಕೆಂದರೆ, ಆ ಸಹಜತೆಯಲ್ಲಿ ಮೂಡುವ ಸೌಂದರ್ಯದಲ್ಲೇ ನಿಜವಾದ ಮಾನವತೆ ಅರಳುವುದು ಕೂಡಾ. ಮಿಕ್ಕಂತೆ ಅರಳುವುದು ಅಗ್ಗದ ಜನಪ್ರಿಯತೆಯ ಜೀವಪರ, ಜನಪರ ಇತ್ಯಾದಿ ದೊಡ್ಡ ಮಾತುಗಳು ಮಾತ್ರ. ಹಾಗಾಗಿ, ಇಲ್ಲಿ ದುಡಿಯುವ ವರ್ಗಗಳ ಬಗೆಗೆ ಕಾಳಜಿ ಇಲ್ಲ, ವರ್ಗ ಹೋರಾಟವಿಲ್ಲ, ದಲಿತರ ನಾಯಿಯನ್ನು ಸುಂದರವಾಗಿ ಚಿತ್ರಿಸಿಲ್ಲ, ದಲಿತರನ್ನು ಕೊಳಕರಂತೆ ಚಿತ್ರಿಸಲಾಗಿದೆ(ಇಲ್ಲಿ ಕುವೆಂಪು ಕಾದಂಬರಿಗಳ ಬಗ್ಗೆ ಬಿ.ಕೃಷ್ಣಪ್ಪನವರು ಎತ್ತಿದ ಪ್ರಶ್ನೆಗಳು ನೆನಪಿಗೆ ಬಂದರೆ, ಕ್ಷಮೆ ಇರಲಿ) ಇತ್ಯಾದಿ ಚಿಲ್ಲರೆ ಪ್ರಶ್ನೆಗಳು ಸಾಹಿತ್ಯವನ್ನು ಚಿಲ್ಲರೆ ಮಾಡುತ್ತದಷ್ಟೆ. ನಮ್ಮ ಸುತ್ತಮುತ್ತ ನಡೆದ ಮತ್ತು ನಡೆದಿರುವ 'ವರ್ಗ ಹೋರಾಟ'ದ ಮಾದರಿಗಳನ್ನೂ, ಅವುಗಳ ಪರಿಣಾಮಗಳನ್ನೂ ನೋಡಿದರೆ, ಅವನ್ನು ವಿಧಾನಸೌಧದ ಕಡೆ ಮುಖ ಮಾಡಿಕೊಂಡ ಪುಢಾರಿ ಸಾಹಿತಿಗಳ ಹೊರತಾಗಿ ಇನ್ನಾವ ಲೇಖಕರೂ ಗಂಭೀರ ಸಾಹಿತ್ಯದ ವಸ್ತುವನ್ನಾಗಿ ಮಾಡಿಕೊಳ್ಳಲಾರರು.

ತೇಜಸ್ವಿ ಕಾರ್ಮಿಕ ಚಳುವಳಿಗಳಂತಹ ವರ್ಗ ಹೋರಾಟದ ಮಾದರಿಗಳನ್ನಷ್ಟೇ ಅಲ್ಲ, ಸಮಾಜವಾದಿಗಳ ಅಂತರ್ಜಾತಿ ವಿವಾಹ, ವಿಚಾರವಾದಿ ಚಳುವಳಿ ಮತ್ತು ರೈತ ಸಂಘದ ಹೋರಾಟಗಳನ್ನೂ ಕಂಡಿರುವುದೂ ಲಘು ಶೈಲಿಯಲ್ಲೇ. ಅವರ ಬರವಣಿಗೆಯ ತಂತ್ರವದು. ಆ ತಂತ್ರದ ಮೂಲಕವೇ ಅವರು ತಮ್ಮ ಕೃತಿಯ ಆತ್ಯಂತಿಕ ಪರಿಣಾಮವನ್ನೂ ಸೃಷ್ಟಿಸಲು ಪ್ರಯತ್ನಿಸುವುದು. ಹಾಗಾಗಿ ಇದರ ಸಾಧುತ್ವವನ್ನು, ಸೋಲು ಗೆಲವುಗಳನ್ನು ಸಾಹಿತ್ಯಕ ಪರಿಭಾಷೆಯಲ್ಲಿ ಚರ್ಚಿಸಬೇಕೇ ಹೊರತು ಸಾಹಿತ್ಯ ಪಠ್ಯದ ಹೊರಗೆ ನಿಂತಲ್ಲ. ಏಕೆಂದರೆ ಸಾಹಿತ್ಯಕ್ಕೆ ತನ್ನದೇ ಆದ ಸ್ವಾಯತ್ತತೆ ಇದೆ. ಅದೊಮ್ಮೆ ಭಂಗಿತವಾದರೆ, ಚರ್ಚಿಸಲು, ಪ್ರಶ್ನಿಸಲು, ಕಟ್ಟಲು ಅಲ್ಲಿ ಏನೂ ಉಳಿದಿರುವುದಿಲ್ಲ. ಇಷ್ಟೆಲ್ಲ ಹೇಳಿದ ಮೇಲೂ, ಅನಂತಮೂರ್ತಿ ಮತ್ತು ತೇಜಸ್ವಿ ಸಬಲ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿಲ್ಲ ಎಂಬ ರಹಮತ್ ಮಾತನ್ನು ಒಪ್ಪುವುದು ಕಷ್ಟ. ಇಲ್ಲಿ ವಿವರಗಳಿಗೆ ಹೋಗುವುದು ಸಾಧ್ಯವಿಲ್ಲವಾದರೂ, ಈ ಲೇಖಕರ ಕಥೆ-ಕಾದಂಬರಿಗಳಲ್ಲಿ ಆಧುನಿಕ ಸ್ತ್ರೀವಾದಿ ನಾಯಕಿಯರಿಲ್ಲದಿದ್ದರೂ, ಗಂಡು ಪಾತ್ರಗಳಿಗೆ ಸರಿ ಸಮವಾದ, ಕೆಲವೊಮ್ಮೆ ಗಂಡು ಪಾತ್ರಗಳನ್ನು ಎದುರಿಸಿ, ಹೆದರಿಸಿ ಕೂಡಾ ಕಟ್ಟಿಕೊಳ್ಳುವ ಪಾತ್ರಗಳು ಶಕ್ತಿಯುತವಾಗಿಯೇ ಮೂಡಿವೆ. ಆದರೆ ಲೋಹಿಯಾವಾದಿ ಲೇಖಕರ ಸ್ತ್ರೀ ನೀತಿಯನ್ನು ಚರ್ಚಿಸುವಾಗ ರಹಮತ್ ಅವರಿಗೆ ಈ ಇಬ್ಬರು ಲೇಖಕರು ಮಾತ್ರ ನೆನಪಾಗಿರುವುದು ಏಕೋ ತಿಳಿಯದಾಗಿದೆ! ಲಂಕೇಶ್, ದೇವನೂರು, ಶ್ರೀಕೃಷ್ಣ ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕುಂವೀ ಅವರು ಏಕೆ ಇವರ ವಿಶ್ಲೇಷಣೆಗೆ ಒಳಪಡಲಿಲ್ಲವೋ?

ಬಸವಣ್ಣ-ಕುವೆಂಪು ಪರಂಪರೆಯುಳ್ಳ ಕರ್ನಾಟಕದ ಪ್ರಜ್ಞಾವಂತರು ಲೋಹಿಯಾ ಚಿಂತನೆಗಳನ್ನು ಒಪ್ಪಿಕೊಂಡಿದ್ದು ಸಹಜವೇ ಎಂದು ಸರಿಯಾಗಿಯೇ ಹೇಳುವ ರಹಮತ್, ಅದಕ್ಕೆ ಲೋಹಿಯಾ ಚಿಂತನೆಯು ಜಾತಿ ಕುರಿತು ಮಂಡಿಸಿದ ಮೀಮಾಂಸೆ ಮಾತ್ರ ಕಾರಣವೆಂಬಂತೆ ತಮ್ಮ ವಾದವನ್ನು ಪ್ರಸ್ತುತಪಡಿಸುವುದು ವಿಷಾದಕರ. ಇದನ್ನು ಬಳಸಿಕೊಂಡು ಅವರು ಕೆಲವರ ವೈಯುಕ್ತಿಕ ವರ್ತನೆಗಳ ಉದಾಹರಣೆ ನೀಡಿ, ಅವಕ್ಕೆಲ್ಲ ಲೋಹಿಯಾವಾದದ ದೌರ್ಬಲ್ಯವೇ ಕಾರಣವೆಂದು ಹೇಳುವುದು ಕೇವಲ ಅಪಪ್ರಚಾರದ ಪ್ರಯತ್ನವೆನಿಸುತ್ತದೆ. ಹೊರಗಿನಿಂದ ಪ್ರಭಾವಿಸುವ ರಾಜಕೀಯ ಸಿದ್ಧಾಂತವೊಂದು ಮನುಷ್ಯನ ಸಕಲ ಆಳಗಳನ್ನೂ ಆವರಿಸುತ್ತದೆಂದೂ, ಆವರಿಸಬೇಕೆಂದೂ ನಂಬುವುದು ಮನುಷ್ಯ ಚೈತನ್ಯದ ಸ್ವಾಯತತ್ತೆಯನ್ನೇ ಪ್ರಶ್ನಿಸಲು ಮಾಡುವ ಪ್ರಯತ್ನ. ಇದಕ್ಕೆ, ಎಲ್ಲವೂ ಹೊರಗಿನ ಪ್ರಭಾವದಿಂದಲೇ ಆಗುವುದು ಎಂಬ (ದ್ವಂದ್ವಮಾನ)ಭೌತವಾದಿ ನಂಬಿಕೆಯೇ ಕಾರಣವಿರಬಹುದು. ಹಾಗಾಗಿಯೇ ರಹಮತ್, ನಂಜುಂಡಸ್ವಾಮಿ-ಲಂಕೇಶ್, ತೇಜಸ್ವಿ-ಲಂಕೇಶ್ ಮತ್ತು ಅನಂತಮೂರ್ತಿ-ತೇಜಸ್ವಿ ನಡುವಣ 'ಜಗಳ'ಗಳ ಹಿಂದೆ ಲೋಹಿಯವಾದ ವನ್ನಷ್ಟೇ ಕಾಣಲು ಹೋಗುವುದು.

ಹೀಗೇ ಮುಂದುವರೆದ ರಹಮತ್, ನಂಜುಂಡಸ್ವಾಮಿ ಕಟ್ಟಿದ ರೈತಸಂಘದಲ್ಲಿ ಅವರ ಬಹುಕಾಲದ ಸಂಗಾತಿ ಕಡಿದಾಳು ಶಾಮಣ್ಣ ಇರಲಿಲ್ಲ ಎಂಬ ಅಚ್ಚರಿಯ (ತಪ್ಪು)ಮಾಹಿತಿಯನ್ನೂ ನೀಡುವ ಮೂಲಕ, ಇವರು ತಮ್ಮ ಪುಸ್ತಕವೊಂದಕ್ಕಾಗಿ ಈ ಇಬ್ಬರು ಗೆಳೆಯರೊಂದಿಗೆ ನಡೆಸಿದ ಸಂದರ್ಶನಗಳು ಬರೀ ಬುರ್ನಾಸು ಎಂಬುದನ್ನು ಸಾಬೀತು ಪಡಿಸುತ್ತಾರೆ. ಶಾಮಣ್ಣ ಆರಂಭದಿಂದ ಈವರೆವಿಗೂ ರೈತ ಸಂಘದ ಅವಿಭಾಜ್ಯ ಅಂಗವಾಗಿದ್ದು, ರೈತ ಸಂಘ ಮತ್ತು ದಸಂಸ ಒಟ್ಟಿಗೆ ಸೇರಿ ರಾಜಕೀಯ ಶಕ್ತಿಯೊಂದನ್ನು ರೂಪಿಸುವ ವಿಷಯವಾಗಿ ಭಿನ್ನಾಭಿಪ್ರಾಯ ಮೂಡಿದ ಸಂದರ್ಭದಲ್ಲಿ ಮಾತ್ರ ನಂಜುಂಡ ಸ್ವಾಮಿಯವರ ಸಿಟ್ಟಿಗೆ ಸಿಕ್ಕಿ, ಕೆಲ ಕಾಲ ರಾಜ್ಯ ಸಮಿತಿಯಿಂದ ಅಮಾನತ್ತುಗೊಂಡಿದ್ದರಷ್ಟೆ. ಅನತಿ ಕಾಲದಲ್ಲೇ ಎಲ್ಲ ಮಾಮೂಲಾಯಿತಷ್ಟೇ ಅಲ್ಲ, ನಂಜುಂಡಸ್ವಾಮಿ ಶಾಮಣ್ಣನವರನ್ನು ವಿಧಾನಸಭಾ ಚುನಾವಣೆಗಳಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ರೈತ ಸಂಘದ ಅಭ್ಯರ್ಥಿಯನ್ನಾಗಿ ಮಾಡಲು ಪ್ರಯತ್ನಿಸಿದರು! ಇನ್ನು ಗೋಪಾಲಗೌಡರ ಬಗ್ಗೆ ರಹಮತ್ ಹೇಳಿರುವ ಸಂಗತಿ ಆಘಾತಕಾರಿಯಾಗಿದೆ. ಅವರು ಕೊನೆಯ ದಿನಗಳಲ್ಲಿ ಭೂಮಾಲಿಕರ ಸಂಬಂಧ ಹೊಂದಿ ಸಂಗಾತಿಗಳಿಂದ ದೂರವಾಗಬೇಕಾಯಿತಂತೆ! ಗೌರವಾನ್ವಿತ ಹಿರಿಯ ನಾಯಕ ರೊಬ್ಬರ ಬಗ್ಗೆ ಇಂತಹ ಗುರುತರ ಆರೋಪ ಮಾಡುವ ಮುನ್ನ-ಇದನ್ನು ಇವರ ಕಿವಿಗೆ ಯಾರೇ ಹಾಕಿರಲಿ-ರಹಮತ್ ಎರಡು ಬಾರಿ ಯೋಚಿಸಬೇಕಿತ್ತು. ಘಟನೆಯ-ಅಂದರೆ ಯಾವ ಭೂಮಾಲೀಕರ, ಎಂತಹ ಸಂಬಂಧ ಮತ್ತು ದೂರವಾದ ಸಂಗಾತಿಗಳು ಯಾರು ಎಂಬ-ವಿವರ ನೀಡದೆ, ಹೀಗೆ ದುಂಡು ದುಂಡಾಗಿ ಮಾತನಾಡುವುದು, ಆಗದವರ ಮೇಲೆ ಬೀದಿಯಲ್ಲಿ ಕಲ್ಲೆಸದು ಓಣಿಯಲ್ಲಿ ಓಡಿಹೋಗುವ ಕಿಡಿಗೇಡಿತನಕ್ಕಿಂತ ಕಡಿಮೆಯಾದ ಹೀನ ಕೃತ್ಯವೇನಲ್ಲ.

ರಹಮತ್ ಆಧುನಿಕ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು(ಕನಿಷ್ಠ ಇಲ್ಲಿ ವ್ಯಕ್ತವಾಗಿರುವಂತೆ) ಕೇವಲ ವದಂತಿ, ಕಾಡು ಹರಟೆ, ಊಹೆ ಮತ್ತು ರಾಜಕೀಯ

ಚಾಡಿಕೋರರ ಮಾತುಗಳನ್ನಷ್ಟೇ ಕೇಳಿ ಕಲ್ಪಿಸಿಕೊಂಡಂತಿದೆ. ಹಾಗಾಗಿಯೇ ಅವರು ಘಟನೆಗಳನ್ನು ಕಲಸುಮೇಲೋಗರ ಮಾಡಿಕೊಂಡು ತಾವು ಕಲಿತ ರೀತಿಯ ಮಾರ್ಕ್ಸ್‌ವಾದಿ ದೃಷ್ಟಿಕೋನಕ್ಕೆ ತಕ್ಕಂತೆ ಕಥೆ ಹೆಣೆಯುತ್ತಾ ಹೋಗಿದ್ದಾರೆ. ಜಾತಿ ವಿನಾಶ ಸಮ್ಮೇಳನ, ಒಕ್ಕೂಟದ ಸಮಾವೇಶ ನಡೆದದ್ದು, ಅಡಿಗರು ಮೊದಲ ಬಾರಿಗೆ ಜನಸಂಘದಿಂದ ಚುನಾವಣೆಗೆ ನಿಂತು ಸೋತ ಮೇಲೆ. ಅಷ್ಟೇ ಅಲ್ಲ, ಈ ಚುನಾವಣೆ ನಡೆದದ್ದು ಜೆಪಿ ಚಳುವಳಿಯ ಮುನ್ನ, ೧೯೭೧ರಲ್ಲಿ. ಇದನ್ನು ಏಕೆ ಸ್ಪಷ್ಟಪಡಿಸಲಾಗುತ್ತಿದೆಯೆಂದರೆ, ಇದಕ್ಕೂ ೧೯೭೭ರ ಜನತಾ ಪಕ್ಷದ ಸರ್ಕಾರಕ್ಕೂ ಗಂಟು ಹಾಕಿ, ಲೋಹಿಯಾವಾದಿಗಳು ಕೋಮುವಾದಿಗಳೊಂದಿಗೆ ಸೇರಿ ಸರ್ಕಾರ ರಚಿಸಿದರೆಂದು ರಹಮತ್ ಆಪಾದಿಸುತ್ತಾರೆ. ಆದರೆ ಆಗ ಇದ್ದುದು ಸಮಾಜವಾದಿ ಪರಂಪರೆಯ ನಾಯಕ ಜೆಪಿ ರೂಪಿಸಿದ ಜನತಾ ಪಕ್ಷ. ಅದು ಗಾಂಧಿವಾದಿ ಸಮಾಜವಾದವನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದ ಪಕ್ಷ. ನಂತರ ಅದರಲ್ಲಿ ಕೋಮುವಾದಿ ಧೋರಣೆ ಕಾಣಿಸಿಕೊಂಡೊಡನೆ ಅದರಿಂದ ಸಮಾಜವಾದಿಗಳು ಹೊರಬಂದರು. ಇದನ್ನು ರಹಮತ್ ಹೇಳುವುದಿಲ್ಲ. ಏಕೆಂದರೆ ಅವರು ಇದನ್ನು ಮತ್ತೆ ಜಾರ್ಜ್ ಫರ್ನಾಂಡೀಸ್ ಮತ್ತವರ ಕೆಲವು ಗೆಳೆಯರು ಬಿಜೆಪಿಯೊಂದಿಗೆ ಸ್ನೇಹ ಬೆಳೆಸಿದ್ದಕ್ಕೆ ಗಂಟು ಹಾಕಲು ಬಳಸಿಕೊಳ್ಳುತ್ತಾರೆ. ಇಂತಹ ಬಳಕೆದಾರಿಕೆ ಜಾಣತನದ ಪ್ರದರ್ಶನವಾಗ ಬಹುದೇ ಹೊರತು ಸತ್ಯ ಶೋಧನೆಗೆ ನೆರವಾಗುವುದಿಲ್ಲ.

ಜಾರ್ಜ್ ಮತ್ತು ಅವರ ಗೆಳೆಯರ ನಂತರದ ನಿಲುವನ್ನು ಸಮರ್ಥಿಸದೇ ಹೇಳುವುದಾದರೆ, ಅವರು ಬಿಜೆಪಿಯ ಸಖ್ಯ ಮಾಡುವ ಹೊತ್ತಿಗೆ ಸಮಾಜವಾದಿ ಚಳುವಳಿಯು ಪಕ್ಷವಿಲ್ಲದೇ ಹರಿದು ಹಂಚಿಹೋಗಿ ಬಹಳ ದಿನಗಳಾಗಿದ್ದುವು. ಅವರೆಲ್ಲ ಇತರ ಕೆಲವರೊಂದಿಗೆ ಸೇರಿ ಕಟ್ಟಿದ್ದ ಜನತಾ ಪರಿವಾರ ಹಲವರ ಕೌಟುಂಬಿಕ ರಾಜಕಾರಣದ ಪಾಳೆಯವಾಗಿ ಹೋಗಿ, ಅಲ್ಲಿ ಅವರಿಗೆ ಉಸಿರುಗಟ್ಟುವ ವಾತಾವರಣ ಸೃಷ್ಟಿಯಾಗಿತ್ತು. ಅದೇ ಹೊತ್ತಿಗೆ, ಜನಸಂಘವು ಕೆಲವು ಮುಸ್ಲಿಂ ನಾಯಕರೂ ಸೇರಿದಂತೆ ಹಲವು ರಾಜಕೀಯ ಧಾರೆಗಳ ಜನರನ್ನು ತನ್ನೆಡೆಗೆ ಸೆಳೆದುಕೊಂಡು ಬಿಜೆಪಿಯಾಗಿ ಮಾರ್ಪಾಡಾಗಿ ಗಾಂಧಿ ಸಮಾಜವಾದವನ್ನು ತಾತ್ವಿಕವಾಗಿಯಾದರೂ ಒಪ್ಪಿತ್ತು. ಇಂತಹ ದೊಡ್ಡ ಗೊಂದಲದ ಸಂದರ್ಭದಲ್ಲಿ ತಮ್ಮ ರಾಜಕೀಯ ಉಳಿವು ಎಲ್ಲಿ ಸಾಧ್ಯವೋ ಅತ್ತ ಕಡೆ ಕೆಲವರು ಹೋದರು. ಆ ಸಂದರ್ಭದಲ್ಲಿ, ಪಕ್ಷದ ಅಂಕೆಯಿಲ್ಲದ ಅವರು ಎಷ್ಟರ ಮಟ್ಟಿಗೆ ಸಮಾಜವಾದಿಗಳಾಗಿ ಉಳಿದಿದ್ದರು, ಉಳಿಯಲಾಗದಿದ್ದರೆ ಕಾರಣಗಳೇನು ಎಂಬುದನ್ನು ಅವರನ್ನು ವೈಯುಕ್ತಿಕವಾಗಿ ಕೇಳಿಯೇ ಸ್ಪಷ್ಟಪಡಿಸಿಕೊಳ್ಳಬೇಕೇ ಹೊರತು, ಸಾರಾ ಸಗಟು ತೀರ್ಮಾನಗಳನ್ನು ಕೊಡಲಾಗುವುದಿಲ್ಲ. ಏಕೆಂದರೆ, ಸಮಾಜವಾದಿ ಆಂದೋಲನದೊಂದಿಗೆ ಗುರುತಿಸಿಕೊಂಡಿದ್ದ ನಿತೀಶ್ ಕುಮಾರ್ ಈಗ ಬಿಹಾರದಲ್ಲಿ ಬಿಜೆಪಿ ಸಹಯೋಗದಲ್ಲಿ ಮುಖ್ಯಮಂತ್ರಿಯಾಗಿ ಒಳ್ಳೆಯ ಆಡಳಿತಕ್ಕೆ ಹೆಸರುವಾಸಿಯಾಗಿದ್ದಾರೆ. ಬಿಜೆಪಿ ಕೋಮುವಾದಿ ಬಾಲ ಬಿಚ್ಚದಂತೆ ಎಲ್ಲ ಎಚ್ಚರ ಮತ್ತು ಧೈರ್ಯಗಳನ್ನು ತೋರಿಸುತ್ತಿದ್ದಾರೆ. ಹಾಗಾಗಿ, ಎಲ್ಲವೂ ಹಸೆಗೆಟ್ಟು ತಲೆಕೆಳಗಾಗುತ್ತಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ, ಭಾರತದ ರಾಜಕಾರಣವನ್ನು ಹಳೆಯ ತಾತ್ವಿಕ ಎರಕಗಳಲ್ಲಿ ವಿಂಗಡಿಸಿ ನೋಡುವುದಕ್ಕಿಂತ ಅದನ್ನೊಂದು ಪ್ರಕ್ರಿಯೆಯಂತೆ ಗಮನಿಸುತ್ತಾ, ವಿಷಯಾಧಾರಿತವಾಗಿ ವಿಮರ್ಶಿಸುವುದೇ

ಹೆಚ್ಚು ಉಚಿತವೂ, ಪ್ರಯೋಜನಕಾರಿಯೂ ಮತ್ತು ಆರೋಗ್ಯಕರ ರಾಜಕಾರಣವನ್ನು ರೂಪಿಸುವ ಉತ್ತಮ ದಾರಿಯೆಂದೂ ನನಗನ್ನಿಸಿದೆ.

ಹಾಗೆ ನೋಡಿದರೆ, ರಾಜಕೀಯ ತಾತ್ವಿಕತೆ ಉತ್ತುಂಗದಲ್ಲಿದ್ದ ಕಾಲದಲ್ಲೇ ಭಾರತದಲ್ಲಿನ ಮಾರ್ಕ್ಸ್‌ವಾದದ ಸೈದ್ಧಾಂತಿಕ ನಾಯಕರೆನಿಸಿದ್ದ ನಂಬೂದ್ರಿಪಾದರೇ ತಮ್ಮ ಸರ್ಕಾರ ಉಳಿಸಿಕೊಳ್ಳಲು ಕೇರಳದಲ್ಲಿ ಮುಸ್ಲಿಂ ಲೀಗ್‌ನ ಒತ್ತಾಯಕ್ಕೆ ಮಣಿದು ಮುಸ್ಲಿಂ ಪ್ರಾಬಲ್ಯದ ಮಲಪ್ಪುರಂ ಜಿಲ್ಲೆ ನಿರ್ಮಿಸಿದರಲ್ಲದೆ, ಮುಸ್ಲಿಂ ಲೀಗನ್ನು ತಮ್ಮ ಸರ್ಕಾರದಲ್ಲಿ ಸೇರಿಸಿಕೊಂಡು ಅದಕ್ಕೊಂದು ಮಾನ್ಯತೆ ನೀಡಿದರು. ಈಗಲೂ ಕೂಡಾ ಅಲ್ಲಿನ ಮಾರ್ಕ್ಸ್‌ವಾದಿ ಸರ್ಕಾರ ಕಳೆದ ಚುನಾವಣೆಗಳ ಸಂದರ್ಭದಲ್ಲಿ ಕೋಮುವಾದಿ ಭಾಷಣ ಮಾಡಿ ಮೂರು ವರ್ಷಗಳ ಕಾಲ ಚುನಾವಣೆಗಳಿಂದ ಬಹಿಷ್ಕರಿಸಲ್ಪಟ್ಟಿದ್ದ ಕೇರಳ ಕಾಂಗ್ರೆಸ್ ಎಂಬ ಪುಡಿ ಪಕ್ಷದ ನಾಯಕರೊಬ್ಬರನ್ನು ಕ್ರಿಶ್ಚಿಯನ್ ಮತಗಳ ಮೇಲೆ ಕಣ್ಣಿಟ್ಟು ತನ್ನ ಸರ್ಕಾರಕ್ಕೆ ಸೇರಿಸಿಕೊಳ್ಳಲು ಮುಂದಾಗಿದೆ. ಇನ್ನು ಕಾಡು ಸೇರಿರುವ ಅತಿ ಕ್ರಾಂತಿಕಾರಿ ಮಾರ್ಕ್ಸ್‌ವಾದಿಗಳು ಹಲವು ಮುಸ್ಲಿಂ ಉಗ್ರವಾದಿ ಗುಂಪುಗಳೊಂದಿಗೆ ಸಂಪರ್ಕದಲ್ಲಿವೆ ಎಂದು ಅವರ ವಕ್ತಾರರೇ ಬಹಿರಂಗವಾಗಿ ಹೇಳಿಕೊಂಡು, ಈ ಗುಂಪುಗಳ ಚಟುವಟಿಕೆಗಳಿಗೆ ತಮ್ಮ ಬೆಂಬಲವಿದೆಯೆಂದು ಘೋಷಿಸಿದ್ದಾರೆ. ಎಷ್ಟರ ಮಟ್ಟಿಗೆ ಎಂದರೆ, ೨೬/೧೧ ಮುಂಬೈ ದಾಳಿಯನ್ನು ಅವರು ಸ್ವಾಗತಿಸಿದ್ದಾರಲ್ಲದೆ, ಆಗ ಮುಸ್ಲಿಂ ಭಯೋತ್ಪಾದಕರು ಶಿವಾಜಿ ರೈಲ್ವೇ ನಿಲ್ದಾಣದಲ್ಲಿ ಮುಸ್ಲಿಮರನ್ನು ಕೊಲ್ಲಬಾರದಿತ್ತು ಎಂದು ಪರಿತಪಿಸುತ್ತಾ ತಾವು ತಲುಪಿರುವ ರಾಜಕೀಯ ವಿಕ್ಷಿಪ್ತತೆಯ ಪರಿಚಯ ಮಾಡಿದ್ದಾರೆ. ಕೋಮುವಾದವೆಂದರೆ ಬರೀ ಹಿಂದೂ ಕೋಮುವಾದವೆಂದೇನಲ್ಲವಲ್ಲ? ನಮ್ಮ ಎಲ್ಲ ರಾಜಕೀಯ ವಿಶ್ಲೇಷಣೆಗಳ ತೊಂದರೆ ಇರುವುದು ಇಲ್ಲೇ. 'ಸೆಕ್ಯುಲರ್' ಎಂಬ ನೀತಿಗೆ ನಾವು ನಮ್ಮ ರಾಜಕೀಯ ಹಿತಾಸಕ್ತಿಗಳಿಗನುಗುಣವಾಗಿ ಒಂದು ಅರ್ಥ ಕಟ್ಟಿಕೊಂಡು; ಅದರಲ್ಲಿ ನಾವೇ ಬಂಧಿತರಾಗಿ, ಜನರನ್ನು ದಿಕ್ಕೆಡಿಸುವಂತಹ ರಾಜಕೀಯ ಚರ್ಚೆಗಳನ್ನು ಬೆಳೆಸುತ್ತಿದ್ದೇವೆ. ಅದರ ಫಲವನ್ನು ಕರ್ನಾಟಕದಲ್ಲಿ ಇಂದು ಅನುಭವಿಸುತ್ತಿದ್ದೇವೆ.

ಅದೇನೇ ಇರಲಿ, ಇಂತಹ ಸಂದರ್ಭದಲ್ಲಿ ರಹಮತ್ ತರೀಕೆರೆಯವರಂತಹ ವಿದ್ವಾಂಸರಿಂದ, ಬುದ್ಧಿಜೀವಿಗಳಿಂದ ಜನತೆ ಇನ್ನಷ್ಟು ವಿಶ್ವಾಸಾರ್ಹವಾದ, ಗಂಭೀರವಾದ, ಸಮಚಿತ್ತದ ಮತ್ತು ಜವಾಬ್ದಾರಿಯುತವಾದ ರಾಜಕೀಯ ವಿಶ್ಲೇಷಣೆಗಳನ್ನು ನಿರೀಕ್ಷಿಸುತ್ತದೆ ಎಂದಷ್ಟೇ ಕೊನೆಯಲ್ಲಿ ಹೇಳಬಯಸುವೆ.

('ಸಂವಾದ', ಆಗಸ್ಟ್ ೨೦೧೦)

ಲೋಹಿಯಾ ಮತ್ತು ಅಂಬೇಡ್ಕರ್: ಏಕತೆಯ ಪ್ರಶ್ನೆ

ಅಂಬೇಡ್ಕರ್ ಮತ್ತು ಲೋಹಿಯಾ ಅವರ ತಾತ್ವಿಕ ಚಿಂತನೆಗಳ ಹೋಲಿಕೆ ಇಂದಿನ ಪರಿಸ್ಥಿತಿಯಲ್ಲಿ ಅಷ್ಟೇನೂ ಪ್ರಸ್ತುತವಾಗಲಾರದು ಮತ್ತು ಪ್ರಯೋಜನಕಾರಿಯಾಗದು ಎಂದೇ ನನ್ನ ಭಾವನೆ. ಏಕೆಂದರೆ ಪಂಡಿತ ವಲಯಗಳನ್ನು ಬಿಟ್ಟರೆ– ಅಂದರೆ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಶಾಸ್ತ್ರಾಧ್ಯಯನ ಸಂಸ್ಥೆಗಳಲ್ಲಿ ಸಂಶೋಧನೆ ನಡೆಸುತ್ತಿರುವವರು–ಇನ್ನೆಲ್ಲೂ ಇಂತಹ ಹೋಲಿಕೆ ಕೆಲಸಗಳಿಗೆ ಬೆಲೆಯಿಲ್ಲ. ಈ ವಲಯಗಳ ಅಧ್ಯಯನಗಳು ಸಾಮಾನ್ಯ ಜನಜೀವನವನ್ನು ಮುಟ್ಟುವ ಅಥವಾ ಸಾಮಾನ್ಯ ಜನಜೀವನ ಈ ಅಧ್ಯಯನವನ್ನು ಸ್ವೀಕರಿಸುವ ಸಾಮರ್ಥ್ಯವೇ ಈ ದಿನಗಳಲ್ಲಿ ಕುಂದಿದೆ. ಈಗ ಏನಿದ್ದರೂ, ಎಲ್ಲವೂ ಎಲ್ಲರ ಸಂಕೇತಗಳು. ತಾವು ಮುಂದುವರೆಯಲು ಯಾರ್‍ಯಾರಿರದ ಎಷ್ಟೆಷ್ಟು ಸಂಕೇತಗಳನ್ನು ಹಾಗೂ ಘೋಷಣೆಗಳನ್ನು ಪಡೆಯಬೇಕೋ ಅಷ್ಟನ್ನು ಪಡೆದು ಮುನ್ನಡೆಯುವ ದಿನಗಳು. ಅಷ್ಟಿಷ್ಟು ಪಡೆದಿದ್ದನ್ನೂ ಅದರೆಲ್ಲಾ ಸೂಕ್ಷ್ಮಗಳೊಂದಿಗೆ, ಆಯಾಮಗಳೊಂದಿಗೆ ಪಡೆಯುವ ವ್ಯವಧಾನ ಕೂಡ ಇಲ್ಲದಂತಹ ಪರಿಸ್ಥಿತಿ. ಆದಷ್ಟು ಸ್ಥೂಲವಾಗಿರುವುದೇ ಕ್ಷೇಮಕರ ಹಾಗೂ ಲಾಭಕರ. ಇಲ್ಲದೇ ಹೋದಲ್ಲಿ ಬದುಕಿನ ಹೋರಾಟದಲ್ಲಿ ಹಿಂದುಳಿದು ಹೋಗುವ ಆತಂಕ. ಹಿಗಾಗಿ ಇಂದು ಅಂಬೇಡ್ಕರ್ ಮತ್ತು ಲೋಹಿಯಾ, ಎಲ್ಲಾ ಮಹಾನುಭಾವರುಗಳಂತೆಯೇ– ಸಂಕೇತಗಳು ಮತ್ತು ಕೆಲವೊಮ್ಮೆ ಅಸ್ತ್ರಗಳು ಮಾತ್ರ; ಒಂದು ಹೆಜ್ಜೆ ಮುಂದೆ ಇಡುವುದಕ್ಕೆ ಮತ್ತು ಎದುರಾದ ಮೊದಲ ಶತ್ರುವನ್ನು ಹೊಡೆದುರುಳಿಸುವುದಕ್ಕೆ.

ನನ್ನ ಮೇಲಿನ ಮಾತುಗಳಲ್ಲಿ ವ್ಯಂಗವಿದ್ದರೆ ಅದು ಸಮಕಾಲಿನ ರಾಜಕೀಯ ಪರಿಸ್ಥಿತಿಯಿಂದ ಬಂದಿರುವಂತಹದು. ಇದಕ್ಕಾಗಿ ಈ ಇಬ್ಬರ ಅನುಯಾಯಿಗಳನ್ನು ಅಥವಾ ಹಾಗೆಂದು ಹೇಳಿಕೊಳ್ಳುವವರನ್ನು ಪೂರ್ಣ ಹೊಣೆಗಾರರನ್ನಾಗಿ ಮಾಡಲಾಗದು. ಏಕೆಂದರೆ ಅಂಬೇಡ್ಕರ್ ಹಾಗೂ ಲೋಹಿಯಾರಂತಹವರು ಈಗಾಗಲೇ ಚರಿತ್ರೆಯ ಒಂದು ಭಾಗವಾಗಿ ಹೋಗುತ್ತಿದ್ದಾರೆ. ಇಂದಿನ ಬಹಳಷ್ಟು ರಾಜಕೀಯ–ಇದರಲ್ಲಿ ಆರ್ಥಿಕ ಹಾಗೂ ಸಾಮಾಜಿಕವೂ ಸೇರಿದೆ–ಸವಾಲುಗಳಿಗೆ ಅಂಬೇಡ್ಕರ್ ಮತ್ತು ಲೋಹಿಯಾ ಚಿಂತನೆಗಳಲ್ಲಿ ಉತ್ತರ ಹುಡುಕ ಹೊರಡುವುದು ಕೇವಲ ಅಂಧಾಭಿಮಾನ ಮಾತ್ರವಾಗುತ್ತದೆ. ಉದಾಹರಣೆಗೆ ಅಂಬೇಡ್ಕರ್ ಹೇಳುವ ಸಾಮೂಹಿಕ ಕೃಷಿ ಪದ್ಧತಿಯನ್ನಾಗಲೀ, ಲೋಹಿಯಾ ಹೇಳುವ ಸಣ್ಣ ಪ್ರಮಾಣದ ತಂತ್ರ ಜ್ಞಾನವನ್ನು ಆಧರಿಸಿದ ಕೈಗಾರಿಕಾ ನೀತಿಯನ್ನಾಗಲೀ ಈಗ ಹೇಳ ಹೊರಡುವುದು ಹುಚ್ಚುತನವೆನ್ನಿಸಿಕೊಳ್ಳುತ್ತದೆ. ಈ ತತ್ವ ಮತ್ತು ಆದರ್ಶಗಳಿಂದ ನಾವು ಎಷ್ಟು ದೂರ ನಡೆದುಬಂದಿದ್ದೇವೆಂದರೆ ಮತ್ತೆ ಆ ಕಡೆ ತಿರುಗಿ ನೋಡುವುದೂ ರಾಜಕೀಯವಾಗಿ ಮುಜುಗರದ ಕೆಲಸವೆನ್ನಿಸುತ್ತದೆ. ಅಂಬೇಡ್ಕರ್ ಅಥವಾ ಲೋಹಿಯಾ

ಮೂಲಕ ಯಾರನ್ನು ನಾವು ಮುಟ್ಟಬಯಸುತ್ತಿದ್ದೇವೋ ಅವರೇ ನಮ್ಮನ್ನು ಕನಸುಗಾರರೆಂದಲ್ಲ, ಭ್ರಮಾಧೀನರೆಮದು ಕರೆಯುವಷ್ಟು ವಾಸ್ತವವಾದಿಗಳಾಗಿದ್ದಾರೆ. ಈ ಎಚ್ಚರಿಕೆಯೊಂದಿಗೆ ನಾವಿಂದು ಅಂಬೇಡ್ಕರ್ ಮತ್ತು ಲೋಹಿಯಾರನ್ನು ಅರ್ಥೈಸಿಕೊಳ್ಳಬೇಕಾಗಿದೆ.

ಲೋಹಿಯಾ ಮತ್ತು ಅಂಬೇಡ್ಕರ್ ಇಬ್ಬರೂ ಜನತಂತ್ರವಾದಿಗಳು ಎಂಬಲ್ಲಿಗೇ ಅವರ ಹೋಲಿಕೆ ಮುಗಿಯುತ್ತದೆ. ಲೋಹಿಯಾ ಅವರ ಜನತಂತ್ರದ ಕಟ್ಟಡ ಮೂಲಭೂತವಾಗಿ ಗಾಂಧಿವಾದಿ ಅರ್ಥಶಾಸ್ತ್ರದ ತತ್ವಗಳ ಮೇಲೆ ನಿಂತಿದ್ಧರೆ, ಅಂಬೇಡ್ಕರ್ ಅವರ ಜನತಂತ್ರದ ಕಟ್ಟಡ ಪಾಶ್ಚಿಮಾತ್ಯ ಅರ್ಥಶಾಸ್ತ್ರದ ತತ್ವಗಳ ಮೇಲೆ ನಿಂತಿರುವಂತಹುದು. ಲೋಹಿಯಾ ಸಣ್ಣ ಪ್ರಮಾಣದ ಘಟಕಗಳ ತಂತ್ರಜ್ಞಾನ ಹಾಗೂ ಗ್ರಾಮ ಕೇಂದ್ರಿತ ರಾಜಕೀಯ ವ್ಯವಸ್ಥೆಯ ಪ್ರತಿಪಾದಕರಾದರೆ ಅಂಬೇಡ್ಕರ್ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ನಗರ ಕೇಂದ್ರಿತ ರಾಜಕೀಯ ವ್ಯವಸ್ಥೆಯನ್ನು ಪ್ರತಿಪಾದಿಸಿದವರು. ಲೋಹಿಯಾ ಇಂಗ್ಲೀಷ್ ತೊಲಗಿಸಬೇಕೆಂದರೆ ಅಂಬೇಡ್ಕರ್ ಇಂಗ್ಲೀಷ್ ಇಲ್ಲದೆ ಹಾಳಾಗುವೆವು ಎಂದರು.

ಈ ಎಲ್ಲ ವ್ಯತ್ಯಾಸಗಳಿಗೆ ಮುಖ್ಯ ಕಾರಣ ಎಂದರೆ ಲೋಹಿಯಾ ಗಾಂಧೀಜಿಯಂತೆ ಅಸ್ಪೃಶ್ಯರಿಗೆ ವಿಶೇಷ ಗಮನಕೊಡಬೇಕೆಂದರೂ, ಅವರನ್ನು ಜನಜೀವನದ ಮುಖ್ಯ ಪ್ರವಾಹದಿಂದ ಪ್ರತ್ಯೇಕಿಸಿ ನೋಡಲಿಲ್ಲ. ಅಂಬೇಡ್ಕರರಾದರೋ ತಮ್ಮ ಕೇಂದ್ರ ಗಮನವನ್ನಿಟ್ಟಿದ್ದುದು ಅಸ್ಪೃಶ್ಯರ ಮೇಲೆ. ಅವರ ಎಲ್ಲ ಸಾಮಾಜಿಕ- ಆರ್ಥಿಕ-ರಾಜಕೀಯ ಚಿಂತನೆಗಳು ಹುಟ್ಟುತ್ತಿದ್ದುದೂ ಈ ಕೇಂದ್ರ ಕಳಕಳಿಯಿಂದಲೇ. ಈ ಹಿನ್ನೆಲೆಯಲ್ಲೆ ಲೋಹಿಯಾ, ಅಂಬೇಡ್ಕರರೊಟ್ಟಿಗೆ ರಾಜಕೀಯ ಮಾಡುವ ಪ್ರಯತ್ನದ ಸಂದರ್ಭದಲ್ಲಿ ಅವರಿಗೆ ಬರೆದ ಪತ್ರವೊಂದರಲ್ಲಿ "ನೀವು ಅಸ್ಪೃಸ್ಯರ ನಾಯಕರಷ್ಟೇ ಅಲ್ಲ, ಇಡೀ ನಾಡಿನ ನಾಯಕರಾಗಬೇಕು" ಎಂದು ಸೂಚಿಸಿದ್ದುದು. ಆದರೆ ಅಂಬೇಡ್ಕರರಿಗಿದ್ದ ಒತ್ತಡಗಳು ಅವರು ಮಾತ್ರ ಅರ್ಥ ಮಾಡಿಕೊಳ್ಳುವಂತಹವು. ಅವರು ಎರಡು ಬಾರಿ ನಾಡಿನ ನಾಯಕರಾಗುವ ಸಾಹಸ ಮಾಡಿದ್ದರು. ಎರಡು ಬಾರಿಯೂ ಸೋತಿದ್ದರು. ಒಮ್ಮೆ ನೆಹರೂ ಮಂತ್ರಿಮಂಡಲದಲ್ಲಿ ಕಾನೂನು ಮಂತ್ರಿಯಾಗಿ ಕಾಂಗ್ರೆಸ್‌ನ್ನು ಟೀಕಿಸಿದ್ದಕ್ಕಾಗಿ ರಾಜನಾಮೆ ನೀಡಬೇಕಾಯಿತು. ಇನ್ನೊಮ್ಮೆ ಸಂವಿಧಾನ ಶಿಲ್ಪಿಯಾಗಿ ಮಾಡಿದ ಕೆಲಸವನ್ನು "ಇದು ಹೇಳಿ ಮಾಡಿಸಿದ ಕೆಲಸ; ಅದನ್ನು ನಾಶಮಾಡಲೂ ನಾನೂ ಹಿಂಜರಿಯುವುದಿಲ್ಲ" ಎಂದು ಹೇಳುವಷ್ಟರಮಟ್ಟಿಗೆ ನಿಸ್ಸಹಾಯಕರಾಗಬೇಕಾಯಿತು. ಅಂಬೇಡ್ಕರ್ ಅಧಿಕಾರದ ಒಂದೆರಡು ಪಕ್ಕಗಳನ್ನು ಮುಟ್ಟಿ ಕೈ ಸುಟ್ಟುಕೊಂಡಿದ್ದರು. ಲೋಹಿಯಾ ಅಧಿಕಾರವನ್ನು ಮುಟ್ಟಬೇಕಾದದ್ದು ಇಡಿಯಾಗಿ ಎಂದು ಗ್ರಹಿಸಿ ಅದಕ್ಕಾಗಿ ಹೋರಾಟ ನಡೆಸಿ ನವೆದುಹೋದರು.

ಇಂದು ಅಂಬೇಡ್ಕರ್ ಮತ್ತು ಲೋಹಿಯಾ ಅವರನ್ನು ತಾತ್ವಿಕ ವ್ಯಕ್ತಿತ್ವಗಳನ್ನಾಗಿ ಅಲ್ಲದಿದ್ದರೂ ಸಂಕೇತಗಳಾಗಿ ಮಾತ್ರ ನೋಡುವವರು ಈ ವ್ಯತ್ಯಾಸಗಳನ್ನು ಗಮನಿಸಿ ಮುಂದುವರಿಯಬೇಕಾಗಿದೆ. ಇಂದಿನ ಎಲ್ಲ ಸವಾಲುಗಳೂ ಅತ್ಯವಶ್ಯಕವಾಗಿ ಹಾಗೂ ಮೂಲಭೂತವಾಗಿ ಅಸ್ಪೃಶ್ಯರ ಸವಾಲುಗಳು ಎಂದು ಗ್ರಹಿಸಿ ಹೋರಾಡುವವರು ಅಂಬೇಡ್ಕರರಂತೆಯೇ ಯಶಸ್ಸಿನ ಒಂದೆರಡು ಪಕ್ಕಗಳನ್ನು ಮುಟ್ಟಿ ಧನ್ಯರಾಗಬಹುದು. ಇಲ್ಲವೇ ಲೋಹಿಯಾರಂತೆ ಎಲ್ಲವನ್ನೂ ಇಡಿಯಾಗಿ ಎದುರಿಸಲು ಹೋಗಿ ಚೂರು

ಚೂರಾಗುವ ವಿನಾಶಾನಂದರಾಗಬಹುದು. ಈ ಎರಡೂ ಪ್ರಯತ್ನಗಳ ಮಿತಿಗಳನ್ನು ಗುರುತಿಸಲು ಮೊದಲು ನಾವು ಈ ಇಬ್ಬರ ಚಿಂತನೆಗಳು ಇಂದಿನ ಪರಿಸ್ಥಿತಿಯಲ್ಲಿ ಪಡೆದುಕೊಳ್ಳುವ ಮಿತಿಗಳನ್ನು ಗುರುತಿಸುವ ರಾಜಕೀಯ ಪ್ರಬುದ್ಧತೆಯನ್ನು ತೋರಬೇಕು.

ಕಮ್ಯೂನಿಸಂ ಕುಸಿಯುತ್ತಿದೆ. ಎಡ ಪಂಥೀಯ ರಾಜಕಾರಣ ಜಗತ್ತಿನಾದ್ಯಂತ ಹುಸಿಯೆನ್ನಿಸಿಕೊಳ್ಳುತ್ತಿದೆ. ಸರ್ಕಾರಿ ಆಸ್ತಿ ಹಾಗೂ ವೈಯುಕ್ತಿಕ ಆಸ್ತಿಗಳ ನಡುವಣ ದ್ವಂದ್ವ ಯುದ್ಧ ಅಂತಿಮ ಘಟ್ಟ ತಲುಪಿದ್ದು, ಸರ್ಕಾರಿ ಆಸ್ತಿಯ ಸೋಲು ಖಚಿತವೆನಿಸತೊಡಗಿದೆ. ಮನುಷ್ಯರ ಕಣ್ಣು, ಕೈಗಳಿಗಿಂತ ಕಂಪ್ಯೂಟರ್‌ಗಳ ಕಣ್ಣು, ಕೈಗಳು ಹೆಚ್ಚು ದಕ್ಷ ಹಾಗೂ ನಂಬಿಕೆಗೆ ಅರ್ಹ ಎಂಬ ನಂಬಿಕೆ ಬಲವಾಗತೊಡಗಿದೆ. ಹಿಂದುಳಿದ ಜಾತಿಗಳು ಆದಷ್ಟೂ ಹೆಚ್ಚು ಕಾಲ ಹಿಂದುಳಿದೇ ಇರಲು ಬಯಸತೊಡಗಿವೆ. ಹೆಣ್ಣಿಗೆ ತಾನು ಗಂಡಾಗುವ ಇಂಗಿತ ಕಾಣುತ್ತಿದೆ. ಲೋಹಿಯಾ– ಅಂಬೇಡ್ಕರ್ ಕಾಲದ ಆದರ್ಶಗಳು ಅಲುಗಾಡತೊಡಗಿ ಹೊಸ ಆದರ್ಶಗಳು ಘನೀಭವಿಸತೊಡಗಿವೆ.

ಈ ಹಿನ್ನೆಲೆಯಲ್ಲಿ ೧೯೫೦ರ ಅಂಬೇಡ್ಕರರನ್ನು, ೧೯೬೦ರ ಲೋಹಿಯಾರನ್ನು, ೧೯೯೦ರಿಂದ ೨೦೦೦ ಇಸವಿಗೆ ಕೊಂಡೊಯ್ಯಬಯಸುವವರು ಅರಿವಿನ ಹೊಸ ಎರಕಗಳನ್ನು ಸಿದ್ಧಗೊಳಿಸಬೇಕಿದೆ. ಹೊಮ್ಮುತ್ತಿರುವ ಹೊಸ ಸಾಮಾಜಿಕ ಹಾಗೂ ತಾಂತ್ರಿಕ ಶಕ್ತಿಗಳ ಆಳ ಅಗಳಗಳನ್ನು ಯಾವುದೇ ಸೈದ್ಧಾಂತಿಕ ಪೂರ್ವಾಗ್ರಹಗಳಿಲ್ಲದೇ, ಮೌಲ್ಯಮಾಪನ ಮಾಡಿ ಅಂಬೇಡ್ಕರ್ ಮತ್ತು ಲೋಹಿಯಾ ಅವರ ಮೂಲ ಚಿಂತನೆಗಳಿಗೆ ಹೊಸ ಅರ್ಥ ಕೊಡಬೇಕಾಗಿದೆ. ಅನುಪಮ ಸೃಜನಶೀಲತೆಯನ್ನು ಬೇಡುವ ಈ ಸಾಹಸದಲ್ಲಿ ಅಂಬೇಡ್ಕರ್– ಲೋಹಿಯಾ ನಡುವಣ ವ್ಯತ್ಯಾಸಗಳು ಕರಗಿ ಈವರೆಗೆ ನಮಗೆ ಗೋಚರವಾಗದಿದ್ದ ಇವರಿಬ್ಬರ ನಡುವಣ ಬಹು ಅಮೂಲ್ಯವಾದ ಏಕತೆಗಳು ಮೂಡತೊಡಗಿ ಹೊಸ ದಿಕ್ಕಿನಲ್ಲಿ ನಮಗೆ ದಾರಿ ತೋರಿಸಬಹುದು.

(‘ಸಮನ್ವಯ’ ವಾರ್ಷಿಕ ವಿಶೇಷಾಂಕ–೧೯೯೦)

ದಲಿತ ಸಂಘಟನೆ: ಶಕ್ತಿ ಮತ್ತು ಸಮತೋಲನ

ಒಮ್ಮೆ ನಾನು ಸಣ್ಣ ಊರೊಂದರಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದ ಸ್ಥಳೀಯ ಶಾಖೆಯಲ್ಲಿ ಮಾತಾಡುತ್ತಾ, ದಲಿತ ವಿದ್ಯಾರ್ಥಿಗಳು ಕಾಲೇಜಿಗೆ ಸರಿಯಾಗಿ ಬರುವುದಿಲ್ಲ; ಬಂದವರೂ ತರಗತಿಗಳಲ್ಲಿ ತರಲೆ ಮಾಡುತ್ತಾರೆ; ಊರ ತುಂಬಾ ಪೋಲಿ ಅಲೆದುಕೊಂಡು ತಿರುಗುತ್ತಾರೆ ಎಂಬ ಅಭಿಪ್ರಾಯ ಕೇಳಿದೆ. ಈ ತರಹದ ಅಭಿಪ್ರಾಯ ಬರದ ಹಾಗೆ ದಲಿತ ವಿದ್ಯಾರ್ಥಿಗಳು ನೋಡಿಕೊಳ್ಳಬೇಕು. ಈ ಬಗ್ಗೆ ದಲಿತ ವಿದ್ಯಾರ್ಥಿ ಒಕ್ಕೂಟ ಯೋಚನೆ ಮಾಡಬೇಕು. ಒಕ್ಕೂಟದ ಮೊದಲ ಕೆಲಸ ಇದನ್ನು ಸರಿ ಮಾಡುವುದಾಗಬೇಕು ಎಂದೆ. ಸಭೆಯ ನಂತರ ಸ್ಥಳೀಯ ದಲಿತ ನಾಯಕರು ನನ್ನನ್ನು ದುರುಗುಟ್ಟಿಕೊಂಡು ನೋಡಲಾರಂಭಿಸಿದ್ದರು. ಸಭೆಗೆ ಮುನ್ನ ಅವರ ಮಾತುಗಳಲ್ಲಿದ್ದ ಆತ್ಮೀಯ ಕಾಣೆಯಾಗಿ, ಕಹಿ ಬೇಡವೆಂದರೂ ಇಣುಕುತ್ತಿತ್ತು.

ಇನ್ನೊಮ್ಮೆ ದಲಿತ ಸಂಘದ ಶಿಬಿರದಲ್ಲಿ ಮಾತಾಡುತ್ತಾ ಅಂಬೇಡ್ಕರ್ ರಾಜಕೀಯ ದಾರ್ಶನಿಕರಲ್ಲ, ನಾಯಕ ಮಾತ್ರ ಎಂದೆ. ಕಹಿ ನೋಟಗಳು ಮತ್ತು ಮಾತುಗಳು ನನ್ನನ್ನು ಮುತ್ತಿದವು. ಅವರು ದಲಿತ ನಾಯಕ ಮಾತ್ರವಲ್ಲ, ನಮ್ಮೆಲ್ಲರ ನಾಯಕ ಎಂದು ಮಾತು ಮುಂದುವರಿಸಿದಾಗ ಪರಿಸ್ಥಿತಿ ತಕ್ಕಮಟ್ಟಿಗೆ ತಹಬಂದಿಗೆ ಬಂತು.

ಇತ್ತೀಚೆಗೆ ಭ್ರಷ್ಟ ದಲಿತ ಅಧಿಕಾರಿಯೊಬ್ಬರನ್ನು ಜಾಗೃತ ದಳದವರು 'ಮಾಲು' ಸಮೇತ ಹಿಡಿದು ಅಮಾನತುಗೊಳಿಸಿದರು. ಸಂಘದವರು ಊರ ತುಂಬಾ ಪ್ರತಿಭಟನಾ ಮೆರವಣಿಗೆ ಮಾಡಿದರು. ನಾನು ಅಕಸ್ಮಾತ್ ಸಿಕ್ಕ ಓರ್ವ ಕಾರ್ಯಕರ್ತನೊಡನೆ ಇದು ನಾಚಿಕೆಗೇಡು ಎಂದೆ. ಆತ ಮುಖವೆಲ್ಲಾ ಕಹಿಮಾಡಿಕೊಂಡು 'ದಲಿತ ಅಫಿಷಿಯಲ್ಲು ಭ್ರಷ್ಟಗೊಳ್ಳುವಂತಹ ಒಟ್ಟು ವ್ಯವಸ್ಥೆಯನ್ನು ಇನ್ನೂ ಇಟ್ಟುಕೊಂಡಿದ್ದೀವಲ್ಲಾ, ಅದು ಮೊದಲು ನಾಚಿಕೆಗೇಡು.' ಎಂದ. ನಾನು ಸುಮ್ಮನಾದೆ.

ಸುಮ್ಮನಾಗದೆ ಇನ್ನೇನು ಮಾಡುವುದು? ಆ ಕ್ಷಣಗಳಲ್ಲಿ ಅವರೊಂದಿಗೆ ವಾದ ಮಾಡಿ ನನ್ನ ದೃಷ್ಟಿಕೋನವನ್ನು ವಿವರಿಸುವ ಸಾಧ್ಯತೆಯೇ ನನಗೆ ಕಾಣುತ್ತಿರಲಿಲ್ಲ.

ಇಂತಹ ಸಂದರ್ಭಗಳಲ್ಲೆಲ್ಲಾ ದಲಿತ ಸಂಘರ್ಷ ಸಮಿತಿಯೊಡನೆಯ ನನ್ನ ಒಡನಾಟದ ಪುನರಾವಲೋಕನ ಮಾಡಿಕೊಳ್ಳುತ್ತೇನೆ: ನಾನು ಅಥವಾ ನನ್ನಂತಹ ದಲಿತರಲ್ಲ ದವರು ಸಂಘದೊಂದಿಗೆ ಅಷ್ಟಿಷ್ಟು ಸಂಪರ್ಕವಿರಿಸಿಕೊಂಡಿರುವುದು ಖಂಡಿತ ದಲಿತರ ಮೇಲಿನ ಕರುಣೆ ಅಥವಾ ಅನುಕಂಪದಿಂದಲ್ಲ. ಅಥವಾ ಅವರನ್ನು 'ವಿಮೋಚನೆ'ಗೊಳಿಸುವ ಉದ್ಧಾರಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕೃತಾರ್ಥರಾಗುವುದಕ್ಕೂ ಅಲ್ಲ. ದಲಿತ ಸಂಘದವರೊಡನೆ ನನ್ನಂತಹವರ ಒಡನಾಟ ನಮ್ಮ ವಿಮೋಚನೆಗಾಗಿಯೇ– ಇಡಿಯ ಸಮಾಜ ಜಾತಿ ಸಂಕೋಲೆಗಳಿಂದ ಬಿಡುಗಡೆ ಹೊಂದುವವರೆಗೂ ದಲಿತನಿಗೂ

ದಲಿತತ್ವದಿಂದ ಬಿಡುಗಡೆಯಿಲ್ಲ; ಹಾಗೇ ದಲಿತ ದಲಿತತ್ವದಿಂದ ಬಿಡುಗಡೆ ಹೊಂದುವರೆಗೂ ಇಡೀ ಸಮಾಜಕ್ಕೆ ಜಾತಿ ಸಂಕೋಲೆಗಳಿಂದ ಬಿಡುಗಡೆ ಇಲ್ಲ ಎಂಬ ನಂಬಿಕೆಯೇ ನಮ್ಮಂಥವರನ್ನು ದಲಿತ ಸಂಘದೆಡೆಗೆ ನೂಕಿರುವುದು. ಸಂಘಕ್ಕೆ ಆ ನೋಟವೇ ಇಲ್ಲ ಎಂದು ಅನ್ನಿಸತೊಡಗಿದೊಡನೆಯೇ ನನ್ನಂತಹವರಿಗೆ ಅಲ್ಲೇನು ಕೆಲಸ? ಆದುದರಿಂದಲೇ ಮೇಲೆ ಸೂಚಿಸಿದ ಸಂದರ್ಭಗಳಲ್ಲೆಲ್ಲಾ ನಾನು ಒಂದು ಕ್ಷಣ ವಿಚಲಿತಗೊಳ್ಳುತ್ತೇನೆ. ಸಂಘದ ಕಾರ್ಯಕರ್ತರೇಕೆ ಸಂಘವನ್ನು ಒಂದು ಜಾತೀಯ ಸಂಘವೆಂದು ಗ್ರಹಿಸಿ ಪ್ರತಿಕ್ರಿಯಿಸುತ್ತಾರೆ ಎಂದು ನನ್ನನ್ನು ನಾನೆ ಕೇಳಿಕೊಳ್ಳುತ್ತೇನೆ. ಒಂದು ವೇಳೆ ಸಂಘ ಜಾತೀಯ ಸಂಘವಾಗಿಯೇ ಬೆಳೆಯಲು ನಿರ್ಧಾರ ಮಾಡಿಕೊಂಡಿದ್ದರೆ? ಎಂಬ ಪ್ರಶ್ನೆಯನ್ನೂ ಎದುರುಗೊಂಡು ಹತಾಶನಾಗಿದ್ದೇನೆ.

ದಲಿತ ಸಂಘ ಅಥವಾ ಸಂಘರ್ಷ ಸಮಿತಿ ಯಾರದ್ದು? ಅದು ಪೂರ್ಣವಾಗಿ ದಲಿತರಿಗೇ ಸೇರಿದ್ದೆ? ಹಾಗೆಂದು ಸಂಘದ ಹೊರಗಡೆಯ ಜನರಷ್ಟೇ ಒಳಗಡೆಯ ಜನವೂ ನಂಬಿದಂತಿದೆ. ಹೊರಗಡೆಯ ಜನರ ನಂಬಿಕೆಯ ಬಗ್ಗೆ ನಿಷ್ಠುರವಾಗಿ ಮಾತಾಡುವುದು ಸಾಧುವೆಂದು ನನಗೆ ತೋರುವುದಿಲ್ಲ. ಏಕೆಂದರೆ ಒಳಗಡೆಯ ಜನರ ನಂಬಿಕೆಯ ಮೇಲೇ ಹೊರಗಡೆಯ ಜನರ ನಂಬಿಕೆಯೂ ಅರ್ಧಪಾಲು ನಿಂತಿರುತ್ತದೆ. ಆದರೆ ಒಳಗಡೆಯ ಜನರ ನಂಬಿಕೆಯಾದರೂ ಏನು? ಅವರು ಸಂಘವನ್ನು ಒಂದು ಅಥವಾ ಎರಡು ಅಥವಾ ಹತ್ತು ಜಾತಿಗಳ 'ಕಲ್ಯಾಣ ಸಂಘ'ವನ್ನಾಗಿ ಕಟ್ಟ ಹೊರಟಿದ್ದಾರೆಯೆ? ಬ್ರಾಹ್ಮಣರ ಸಂಘ, ವೀರಶೈವರ ಸಂಘ, ಕುರುಬರ ಸಂಘದ ಥರಹ? ಹಾಗೇನಾದರೂ ಇದ್ದಲ್ಲಿ ಅದು ಬೆಂಬಲಕ್ಕಾಗಿ ದೃಷ್ಟಿ ಹಾಯಿಸಬೇಕಾಗಿರುವುದು ಧರ್ಮಾರ್ಥ ಸಂಸ್ಥೆಗಳು ಹಾಗೂ ಮುಖಾರಿಗಳ ಕಡೆಗೇ ಹೊರತು ನಮ್ಮಂತಹವರ ಕಡೆಗಲ್ಲ.

ದಲಿತ ಸಂಘರ್ಷ ಸಮಿತಿಯ ನಾಯಕತ್ವ ಎಷ್ಟೇ ದಾರ್ಶನಿಕವಾಗಿ ಮಾತನಾಡಿದರೂ, ಅದು ಬಹು ಮೂಲಭೂತವಾದ ಈ ತಾತ್ವಿಕ ಸಂದಿಗ್ಧತೆಯನ್ನು ಎದುರಿಸುತ್ತಿರುವುದನ್ನು ನಾನು ಗುರುತಿಸಿದ್ದೇನೆ. ಮೇಲ್ಜಾತಿ ಹಾಗೂ ಮಧ್ಯಮ ಜಾತಿಗಳ ಸಂಘಟನೆಗಳು ಜಾತೀಯವಾಗುವವೆಂದೂ, ಆದರೆ ದಲಿತ ಸಂಘಟನೆ ಜಾತೀಯವಾಗುವ ಅಪಾಯವಿರುವುದಿಲ್ಲ- ಏಕೆಂದರೆ ಜಾತೀಯವಾಗಲು ಆ ಜಾತಿಗಳಿಗೆ ಆಸ್ತಿ ಅಧಿಕಾರಿಗಳೇ ಇಲ್ಲವೆಂದೂ ಕೆಲವರು ವರ್ಷಗಟ್ಟಲೆ ವಾದಿಸಿಕೊಂಡು ಬರುತ್ತಿರುವುದನ್ನೂ ಗಮನಿಸಿರುವೆ. ಆದರೆ ಈ ವಾದವನ್ನು ಪೂರ್ಣವಾಗಿ ಒಪ್ಪಿಕೊಳ್ಳುವ ದಿನಗಳು ಮುಗಿದುವೆಂದೇ ನನ್ನ ಭಾವನೆ. ಏಕೆಂದರೆ ಇಂತಹ ವಾದದ ಹಿಂದೆ ಕಾಡನ್ನು ನೋಡುವ ನೋಟದಲ್ಲಿ ಮರವೇ ಇಲ್ಲವಾಗುವ ಹಾಗೆ, ದಲಿತ ಸಂಘಟನೆಯನ್ನಷ್ಟೇ ನೋಡುತ್ತಾ ದಲಿತನನ್ನೇ ಮರೆಯುವ ಭೋಳೆಯಾದ ಆವೇಶವಿದೆ. ಕೆಟ್ಟ ಅನುಕಂಪೆಯಿಂದ ಹುಟ್ಟಿರಬಹುದಾದ ಈ ಆವೇಶದಲ್ಲಿ ದಲಿತನನ್ನು ಸಾಮಾನ್ಯ ಮನುಷ್ಯನಂತೆ ನೋಡುವ, ಆತನಿಗೂ ಸಮಾಜದ ಇತರೆಲ್ಲಾ ಮನುಷ್ಯರಂತೆ ಅರಿಷಡ್ವರ್ಗಗಳಿವೆ ಎಂಬ ಸಾಮಾನ್ಯ ತಿಳುವಳಿಕೆಯೂ ಇಲ್ಲವಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅವಕಾಶ, ಆಸ್ತಿ ಹಾಗೂ ಅಧಿಕಾರ ಪಡೆದ ದಲಿತ ಇತರ ಜಾತಿಯ ಮನುಷ್ಯರನ್ನು ಮೀರಿಸದಿದ್ದರೂ ಅವರಷ್ಟೇ ಭ್ರಷ್ಟ, ಕ್ರೂರಿ ಹಾಗೂ ವಂಚಕನಾಗಬಲ್ಲ ಎಂಬುದು ಕ್ರಮೇಣ ಸಾಬೀತಾಗುತ್ತದೆ.

ಇಲ್ಲಿ ನಾನು ಹೇಳುತ್ತಿರುವುದು ಇಷ್ಟೇ: ದಲಿತರೂ ಎಲ್ಲರಂತೆ ಮನುಷ್ಯರು, ಅವರೂ ಇತರ ಜಾತಿಯವರಂತೆ ಒಳ್ಳೆಯರಾಗುವಂತೆ ಕೆಟ್ಟವರೂ ಆಗಬಲ್ಲರು ಎಂದು. ದಲಿತ ಸಂಘಟನೆ ನಾನು ಈ ಮೊದಲು ತಿಳಿಸಿದ ಸಂದಿಗ್ಧತೆಯನ್ನು ಪರಿಹರಿಸಿಕೊಳ್ಳದಿದ್ದರೆ ಇಂತಹ ಒಳ್ಳೆಯ ಕೆಟ್ಟವರೆಲ್ಲರನ್ನೂ ಸಲಹುವ ಬ್ರಾಹ್ಮಣ, ಒಕ್ಕಲಿಗ ಸಂಘಗಳ ತರಹವೇ ಒಂದು ಜಾತೀಯ ಸಂಘಟನೆಯಾಗಿ ಬೆಳೆಯುವ ಅಪಾಯವನ್ನು ಎದುರಿಸುತ್ತದೆ.

ದಲಿತ ಸಂಘರ್ಷ ಸಮಿತಿಗೆ ಈ ಅಪಾಯದ ಸೆಲೆ ಇರುವುದೇ ಅದರ ಜಡ ಸಾಮಾಜಿಕ ದೃಷ್ಟಿಕೋನದಲ್ಲಿ. ಸಮಾಜದ ಇತರ ಜಾತಿಗಳನ್ನು ೪೦ ವರ್ಷಗಳ ಹಿಂದೆ ಅಂಬೇಡ್ಕರ್ ಅವರು ನೋಡಿದ ಕ್ರಮದಲ್ಲೇ ಇಂದಿನ ದಲಿತನೂ ನೋಡಬೇಕೆ? ಅಂಬೇಡ್ಕರ್‌ರ ಅಂದಿನ ಆವೇಶ, ಸಿಟ್ಟು ಹಾಗೂ ಕಹಿಗಳನ್ನು ಇವೊತ್ತಿನ ದಲಿತನೂ ಅವಾಹಿಸಿಕೊಳ್ಳಬೇಕೆ? ಮಾರ್ಕ್ಸಿಸ್ಟರಿಗೆ ಮಾರ್ಕ್ಸ್‌ವಾದ, ಸೋಶಲಿಸ್ಟರಿಗೆ ಲೋಹಿಯಾವಾದ ನುಂಗಲಾರದ ತುತ್ತಾಗಿರುವಂತೆ ದಲಿತರಿಗೆ ಅಂಬೇಡ್ಕರ್‌ವಾದವೆಂಬುದು ನುಂಗಲಾದ ತುತ್ತಾಗಿದೆ. ನಿಜ, ಪ್ರತಿಯೊಂದು ಸಂಘಟನೆಗೂ ಒಂದು ಸಿದ್ಧಾಂತ ಹಾಗೂ ಓರ್ವ ಸಾಂಕೇತಿಕ ನಾಯಕ ಬೇಕು. ಆದರೆ ಆ ಸಿದ್ಧಾಂತ ಸಂಕೇತಗಳು ಕಾಲದ ಪೊರೆ ಕಳಚಿಕೊಳ್ಳದಿದ್ದಲ್ಲಿ ಅವು ಬಂಧನಗಳಾಗುತ್ತವೆ – ಈಗ ಆಗಿರುವುದೂ ಹಾಗೇ ಎಂದು ನನಗನ್ನಿಸುತ್ತದೆ.

ದಲಿತ ಆದಷ್ಟು ಬೇಗ ತನ್ನನ್ನು ಸಮಾಜದಿಂದ ಬೇರ್ಪಡಿಸಿಕೊಳ್ಳುವ ಪ್ರವೃತ್ತಿಯನ್ನು ಬಿಡಬೇಕಾಗಿದೆ. ಆಗಲೇ ಅವನಿಗೆ ಸಮಾಜ ತನ್ನನ್ನು ಬೇರ್ಪಡಿಸಿ ನೋಡುವ/ನೋಡುತ್ತಿರುವ ಪ್ರವೃತ್ತಿಯನ್ನು ಸಕಲ ಸೂಕ್ಷ್ಮಗಳೊಂದಿಗೆ ಅರ್ಥ ಮಾಡಿಕೊಂಡು ಎದುರಿಸುವ ಶಕ್ತಿ, ಸಮತೋಲನ ದೊರೆಯುತ್ತದೆ. ದಲಿತ ಸಂಘ ದಲಿತನಲ್ಲಿ ಈ ಮಾನಸಿಕ ಶಕ್ತಿ, ಸಮತೋಲನವನ್ನು ರೂಢಿಸುವತ್ತ ತನ್ನ ಗಮನವನ್ನು ಹರಿಸಬೇಕಾಗಿದೆ. ಆಗ ನನ್ನಂತಹವರು ಆಡಬಾರದ ಮಾತನ್ನು ಆಡಿದರೂ, ಅದನ್ನು ಸಿಟ್ಟಿನಿಂದ, ಕಹಿಯಿಂದ ನೋಡದೆ ಸಹಾನುಭೂತಿಯಿಂದ, ಪ್ರೀತಿಯಿಂದ ತಿಳಿಹೇಳುವ ಆರೋಗ್ಯ ದಲಿತನಿಗೆ ಬರುತ್ತದೆ. ಆಗ ನನ್ನಂತಹವರಿಗೂ ಸಾಮಾಜಿಕ ಪರಿವರ್ತನೆಯ ನಾಯಕತ್ವವನ್ನು ದಲಿತರು ಮಹಿಸಬಲ್ಲರು ಎಂಬ ನಂಬಿಕೆ ಬಂದು ನಿಸೂರಾಗಲು ಸಾದ್ಯವಾಗುತ್ತದೆ. ಅಂತಹ ದಿನವನ್ನೇ ನನ್ನಂತಹವರು ನಮ್ಮ ವಿಮೋಚನೆಯ ದಿನವೆಂದು ತಿಳಿಯುತ್ತೇವೆ. ಆದರೆ ಅಲ್ಲಿಯವರೆಗೆ ಯಾರಿಗೂ ಯಾರಿಂದಲೂ ಯಾವುದರಿಂದಲೂ ವಿಮೋಚನೆಯಿಲ್ಲ ವೆಂಬುದು ಬೇರೆ ಮಾತು.

('ಸಮಾವೇಶ'–ಅಂಬೇಡ್ಕರ್ ಸ್ಮರಣ ಸಂಚಿಕೆ, ದ.ಕ. ದಲಿತ ಸಂಘರ್ಷ ಸಮಿತಿ ಪ್ರಕಟಣೆ–೧೯೮೮)

‘ಬಹಿಷ್ಕೃತ’: ಅಂಬೇಡ್ಕರ್ ಜೀವಂತವಾಗುವ ಬಗೆಗಳು

ದಲಿತ ಮಧ್ಯಮ ವರ್ಗದಲ್ಲಿ ಈಚೀನ ದಿನಗಳಲ್ಲಿ ಸಂಚಲನ ಉಂಟು ಮಾಡಿರುವ ಒಂದು ಸಂಗತಿಯೆಂದರೆ ‘ದಲಿತ ಬಂಡವಾಳ’ದ ಕಲ್ಪನೆ. ಕೆ.ಪಿ. ಸಿಂಗ್, ದೇವೇಶ್‌ಕಪೂರ್, ರಾಮಕೃಷ್ಣ ಭೂಪತಿ ಮುಂತಾದ ಅನಿವಾಸಿ ಭಾರತೀಯರಿಂದ ಒಂದು ಚಳುವಳಿಯಾಗಿ ಬೆಳೆಯುವ ತವಕದಲ್ಲಿರುವ ಈ ಕಲ್ಪನೆಗೆ ಭಾರತದಲ್ಲಿ ಈಗ ಬೆಂಬಲವಾಗಿ ನಿಂತು ಅದರ ತಾತ್ವಿಕತೆಯನ್ನು ವಿವರಿಸುತ್ತಿರುವವರು, ಜಗತ್ತಿನ ಬಹುಶಃ ಏಕೈಕ ದಲಿತ ಅಂಕಣಕರರಾದ ಚಂದ್ರಭಾನ್‌ಪ್ರಸಾದ್ ಅವರು. ಅವರ ಪ್ರಕಾರ ದಲಿತ ಬಂಡವಾಳವು ಒಂದು ವಿಶಾಲವಾದ ಎಲ್ಲ ದೌರ್ಬಲ್ಯಗಳನ್ನು ಮೀರಿ, ಕನಿಷ್ಟ ದಲಿತ ಸಮುದಾಯಕ್ಕೆ ಈಗಿನ ಸಂಕಷ್ಟಗಳಿಂದ ಮುಕ್ತಿ ದೊರಕಿಸಿಕೊಡಬಲ್ಲದು ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಇದು ಅಂಬೇಡ್ಕರ್ ಅರ್ಥಶಾಸ್ತ್ರ ಕಲ್ಪನೆಗಳಿಗೆ ವಿರುದ್ಧವೇನೂ ಅನಿಸುವುದಿಲ್ಲ. ಈ ನಂಬಿಕೆಗೆ ಪುಷ್ಠಿಕೊಡುವಂತೆ ಈಗ ದಲಿತ ಮಧ್ಯಮವರ್ಗದ ಪ್ರತಿನಿಧಿಯಾಗಿ ಖಾಸಗಿ ಬಂಡವಾಳ, ಮುಕ್ತ ಮಾರುಕಟ್ಟೆ ಹಾಗೂ ಸ್ಪರ್ಧೆಗಳನ್ನು ಪ್ರತಿಪಾದಿಸುತ್ತಿರುವವರಲ್ಲಿ ಪ್ರಮುಖರೆಂದು ಹೆಸರಾದವರು ಡಾ॥ ನರೇಂದ್ರ ಜಾಧವ್. ಭಾರತದ ರಿಸರ್ವ್ ಬ್ಯಾಂಕ್‌ನ ಆರ್ಥಿಕ ಸಲಹಾಕಾರರಲ್ಲೊಬ್ಬರಾದ ಡಾ॥ ಜಾಧವ್ ಈ ಹಿಂದೆ, ಭಾರತದಲ್ಲಿನ ಆರ್ಥಿಕ ‘ಸುಧಾರಣೆ’ಗಳಿಗೆ ಬೆಂಬಲವಾಗಿ ನಿಂತಿರುವ ‘ಅಂತರರಾಷ್ಟ್ರೀಯ ಹಣಕಾಸು ನಿಧಿ’ (ಐ.ಎಂ.ಎಫ್)ಯಲ್ಲಿ ಅಧಿಕಾರಿಯಾಗಿದ್ದವರು. ಇವರನ್ನೀಗ ‘ಉದಾರವಾದಿ ನವ ಭಾರತ’ದ ವಿಮೋಚಿತ ದಲಿತ ಮಾದರಿಯನ್ನಾಗಿಯೂ ಪ್ರಸ್ತುತಪಡಿಸಲಾಗುತ್ತಿದೆ. ಅವರೀಗ ತಮ್ಮ ತಂದೆ ತಾಯಿಗಳ ಮತ್ತು ತಮ್ಮ ನೆನಪುಗಳನ್ನು ತಮ್ಮ ಮಗಳ ಹಿನ್ನುಡಿಯೊಂದಿಗೆ ಸಂಕಲಿಸಿ, ‘ಬಹಿಷ್ಕೃತ’ ಎಂಬ ನೆನಪುಗಳ ಸಂಗ್ರಹವೊಂದನ್ನ ಪ್ರಕಟಿಸಿದ್ದಾರೆ. ಇದು ಮೊದಲು ಮರಾಠಿಯಲ್ಲಿ ಪ್ರಕಟಗೊಂಡ ನಂತರ ಇಂಗ್ಲಿಷ್‌ನಲ್ಲಿ, ತದನಂತರ ಫ್ರೆಂಚ್ ಭಾಷೆಯಲ್ಲಿ ಅನುವಾದಗೊಂಡು ಪ್ರಕಾಶಿತವಾಗಿದೆ. ಈಗ ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡು ‘ಹೊಸ ದಲಿತ ಘನತೆ’ಯ ಪಠ್ಯವೆಂಬಂತೆ ಪ್ರಸ್ತುತಗೊಳ್ಳುತ್ತಿದೆ.

ಈಗ ಬಹು ಜನಪ್ರಿಯವಾಗಿರುವ ಮತ್ತು ಮೌಲಿಕವೂ ಎಂದು ಪರಿಗಣಿಸಲ್ಪಟ್ಟಿರುವ ಅನೇಕ ಮರಾಠಿ ದಲಿತ ಆತ್ಮಚರಿತ್ರೆಗಳಿಗಿಂತ ಈ ಕೃತಿ ಭಿನ್ನವಾಗಿ ನಿಲ್ಲುವುದು, ಇದು ಆತ್ಮಚರಿತ್ರೆಯಾಗಿರದೆ, ಒಂದು ಕುಟುಂಬದ ಮೂರು ತಲೆಮಾರುಗಳ ನೆನಪುಗಳ ಸಂಗ್ರಹವೆಂಬ ಕಾರಣಕ್ಕೆ ಮಾತ್ರವಲ್ಲ; ಈ ನೆನಪುಗಳ – ವಿಶೇಷವಾಗಿ ಮೊದಲ ತಲೆಮಾರಿನ ದಾಮು ಮತ್ತು ಸೋನಾ (ನರೇಂದ್ರ ಜಾಧವರ ತಂದೆ ತಾಯಿ)ರ ನಿವೇದನೆಗಳು –

ನಿರೂಪಣೆಗಳಲ್ಲಿನ ಅತ್ಯುತ್ತಮ ಕಥನ ಗುಣದಿಂದ ಕೂಡಾ. ಮೂಲತಃ ಅನಕ್ಷರಸ್ಥರಾದ – ನಂತರ ಅನೌಪಚಾರಿಕವಾಗಿ ಅಕ್ಷರಸ್ಥರಾದರೂ–ದಂಪತಿಗಳು ತಮ್ಮ ಅನುಭವಗಳನ್ನು ಆಯ್ದು ವಿನ್ಯಾಸಗೊಳಿಸಿ ಮಂಡಿಸಿರುವ ರೀತಿ (ಇದರಲ್ಲಿ ಅವರ ವಿದ್ಯಾವಂತ ಮಕ್ಕಳ ಸಾಕಷ್ಟು ಕೈವಾಡವಿದೆಯಾದರೂ) ಒಂದು ಸೃಜನಶೀಲ ಸಾಹಿತ್ಯ ಕೃತಿಯ ಎಲ್ಲ ಮಾರ್ದವತೆಯನ್ನು ಪ್ರಕಟಪಡಿಸುತ್ತದೆ. ಇದು ಸಾಧ್ಯವಾಗಿರುವುದು,ಕೃತಿ ದಲಿತ ಲೋಕವನ್ನು ಒಳಗೊಂಡಿದ್ದರೂ (ಈಗ ಇಂತಹ ಕೃತಿಗಳ ಬಂಡವಾಳವಾಗಿ, ಕ್ಲೀಷೆಯಾಗಿ ಹೋಗಿ ಬಿಟ್ಟಿರುವ) ಶೋಷಣೆ – ಬಂಡಾಯಗಳ ಬಗ್ಗೆ ಅನಗತ್ಯವಾಗಿ ಆರ್ಭಟಿಸದೆ, ಸ್ವಪ್ರಜ್ಞೆಯ ಮೂಲಕ ಎಲ್ಲ ಅಡೆತಡೆಗಳನ್ನು ದಾಟಿ ಗುರಿ ಮುಟ್ಟಬಲ್ಲ ಮನುಷ್ಯ ಛಲದ ಸಾಧ್ಯತೆಯನ್ನು ಸಾರ್ವತ್ರಿಕವಾಗಿ ಅನಾವರಣಗೊಳಿಸುವ ತನ್ನ ಉದ್ದೇಶದೆಡೆಗೆ, ಏಕಾಗ್ರತೆಯಿಂದ ಸಾಗುವುದರಿಂದ.

ಬಾಬಾ ಸಾಹೇಬ ಅಂಬೇಡ್ಕರರ ಇಡೀ ಹೋರಾಟವನ್ನು, ಹುಟ್ಟಿನಿಂದ ಕುಲವನ್ನು ವಿಂಗಡಣೆ ಮಾಡುವ ಜಾತಿ ಎಂಬುದು ಎಷ್ಟು ದೊಡ್ಡ ಸುಳ್ಳು ಎಂಬುದನ್ನು ಸಾಬೀತುಪಡಿಸಿ, ಆ ಸುಳ್ಳಿನಿಂದಾದ ಅನ್ಯಾಯಗಳ ಚರಿತ್ರೆಯನ್ನು ಪುನರ‍್ರೂಪಿಸುವುದೇ ಆಗಿದೆ ಎಂದು ಬಣ್ಣಿಸಬಹುದಾದರೆ; ಈ ಪುಸ್ತಕವೂ ತನ್ನದೇ ಮಿತಿಯಲ್ಲಿ ಅದನ್ನೇ ಮಾಡುತ್ತದೆ. ಅಂಬೇಡ್ಕರ್‌ರಂತೆಯೇ ಅಸ್ಪೃಶ್ಯ ಮಹರ್ ಕುಲಕ್ಕೆ ಸೇರಿದ ಈ ಕೃತಿಯ ವಾರಸುದಾರ – ನಾಯಕನಲ್ಲ; ನಾಯಕನೇನಿದ್ದರೂ ನರೇಂದ್ರ ಜಾಧವ್‌ರೇ – ಕೂಲಿಕಾರ ದಾಮು. ಈತ ಅಂಬೇಡ್ಕರ್ ಚಳುವಳಿಯ ಪ್ರಭಾವಕ್ಕೆ ಸಿಕ್ಕಿ ತನ್ನ ಕುಟುಂಬವನ್ನು ಜಾತಿ – ಅಸ್ಪೃಶ್ಯತೆಗಳೆಂಬ ಶಾಪಗಳಿಂದ ಪಾರಾಗಿಸಿಕೊಂಡು, ಕುಲೀನ ಮನೆತನದ ಬ್ರಾಹ್ಮಣ ಕನ್ಯೆಯೊಬ್ಬಳನ್ನು, ಸಹಜವೆಂಬಂತೆ ತನ್ನ ಮನೆಯ ಸೊಸೆಯಾಗಿಸಿಕೊಳ್ಳಬಲ್ಲ ರೀತಿಯಲ್ಲಿ ಕಟ್ಟಿ ನಿಲ್ಲಿಸಿದ ಕೌಶಲ್ಯ, ಇಲ್ಲಿ Best of Ambedkar ಎನ್ನುವಂತೆ ಚಿತ್ರಿತವಾಗಿದೆ. ಜಾತಿ ಮೀರಿರುವುದೆಂದರೆ – ಅದರ ಎಲ್ಲ ನೆಲೆಗಳಲ್ಲಿ – ಹೀಗೆ; ಚರಿತ್ರೆಯನ್ನು ಮುರಿದು ಕಟ್ಟುವುದು ಎಂದರೆ ಹೀಗೆ, ಎಂಬಷ್ಟರ ಮಟ್ಟಿಗೆ ಈ ಕಥನ authentic ಆದ ವಿವರಗಳೊಂದಿಗೆ ಗಮನ ಸೆಳೆಯುತ್ತದೆ.

ಈ ದೇಶದಲ್ಲಿ ಪ್ರತಿಯೊಂದು ಜಾತಿಗೂ ಅದರ ಚರಿತ್ರೆ ಇದ್ದಂತಿದೆ– ಅದರದೇ ಆದ ಕಾವ್ಯ, ಪುರಾಣ, ನಂಬಿಕೆ, ಮೌಲ್ಯಗಳೊಂದಿಗೆ, ಅಸ್ಪೃಶ್ಯ ಜಾತಿಗಳು ಇದಕ್ಕೆ ಹೊರತಲ್ಲ. ಹಾಗಾಗಿಯೇ ಜಾತಿ ಮೀರುವುದೆಂದರೆ ಈ ಚರಿತ್ರೆಯನ್ನು ಮೀರುವುದು, ಅದನ್ನು ಮುರಿದು ಕಟ್ಟುವುದು. ಆಧುನಿಕ ವಿದ್ಯೆಯಿಂದ ಪ್ರಚೋದಿತವಾಗಿ ಪ್ರಜ್ಞಾಪೂರ್ವಕವಾಗಿ ಇದನ್ನು ಮಾಡ ಹೊರಡುವುದು ಸಾಹಸದ ಕೆಲಸವೇ ಸರಿ. ದಾಮು ತನ್ನ ಮಹರ್ ಜಾತಿಯ 'ಎಸ್ಕಾರ್ ಡ್ಯೂಟಿ'(ಹಳ್ಳಿಗೆ ಸಂಬಂಧಿಸಿದ ಜಾತಿ ಕರ್ತವ್ಯ – ಜವಾಬ್ದಾರಿಗಳು) ಯಿಂದ ಅವಮಾನಿತವಾಗಿ ಮಾಡ ಹೊರಡುವುದೂ ಇದನ್ನೇ. ಇದಕ್ಕೆ ಪ್ರಜ್ಞಾಪೂರ್ವಕತೆ ಯನ್ನು ಒದಗಿಸುವುದು ಅಂಬೇಡ್ಕರ್‌ರ ಚಳುವಳಿ. 'ಮಹರ್ ಧರ್ಮ'ದ ಹೆಸರಲ್ಲಿ, ಜಾತಿ ಚರಿತ್ರೆಯ ಭಾಗವಾಗಿಯೇ ಉಳಿಯುವುದೇ ಕ್ಷೇಮಕರವೆಂಬ ತನ್ನ ತಾಯಿ, ಹೆಂಡತಿ, ನೆಂಟರು ಎಲ್ಲರ ಒತ್ತಡದ ಮಧ್ಯೆಯೂ; ಯಾವುದೋ ದೂರದ ನಕ್ಷತ್ರದ ಗುರುತ್ವಾಕರ್ಷಣೆಗೆ ಸಿಕ್ಕ ಗ್ರಹದಂತೆ ತನ್ನ ಕಕ್ಷೆ ಬಿಟ್ಟು ಹಾರುವ ದಾಮು, ಎಂತಹ

ಪ್ರತಿಕೂಲ ಪರಿಸ್ಥಿತಿಯಲ್ಲೂ ತನ್ನ ಗುರಿ ಕಳೆದುಕೊಳ್ಳದಂತಹ ವಿವೇಕ ಪ್ರದರ್ಶಿಸುವ ಪರಿಯೇ ಈ ಕೃತಿಯ 'ಶೀಲ'ವನ್ನೂ ನಿರೂಪಿಸುತ್ತದೆ. ಇದೇ ಈಪುಸ್ತಕದ ಹೆಗ್ಗಳಿಕೆ ಕೂಡ. ದಾಮು ಪ್ರಮಾಣಿಕನಷ್ಟೇ ಅಲ್ಲ, ಜಾಣನಾದ ದುಡಿಮೆಗಾರ; ಭೂಮಿ ಅಗೆಯುವ, ಗೋಡೆ ಒಡೆಯುವಂತಹ ಅಥವಾ ರೈಲ್ವೆ ಕೂಲಿಕಾರನ ಕೆಲಸದಲ್ಲೂ ತನ್ನದೇ ಕೌಶಲ ಪ್ರದರ್ಶಿಸಬಲ್ಲ ಪ್ರತಿಭಾವಂತ; ಪ್ರತಿಫಲ ಕೊಡುವಲ್ಲಿ ಮೋಸ ಮಾಡುವೆಡೆಯಿಂದ ಕೂಡಲೆ ಕೆಲಸ ತ್ಯಾಗ ಮಾಡುವ ಸ್ವಾಭಿಮಾನಿ; ಹೆಂಡತಿಗೆ ಒಮ್ಮೆ ಮನೆಯ ಹಿಂದಿನ ಕಪ್ಪು ಬೆಟ್ಟದಂತೆ, ಮಗದೊಮ್ಮೆ ದೂರದ ಗೋಪುರದಂತೆ ಕಾಣುವ ಪ್ರೀತಿಯ ಗಂಡ; ಜಾತಿ ಚರಿತ್ರೆಗೆ ಅರ್ಪಿಸಿಕೊಂಡ ತಾಯಿಯನ್ನು ಪ್ರೀತಿ-ಸಿಟ್ಟುಗಳ ಮೂಲಕ ಚರಿತ್ರೆಯ ಎಲ್ಲೆಗಳನ್ನು ದಾಟಿಸಬಲ್ಲ ಪ್ರೀತಿಯ ಮಗ; ಮಕ್ಕಳಿಗೆ ಸುಳ್ಳು- ಕಪಟಗಳ ಬಗ್ಗೆ ಸದಾ ಎಚ್ಚರಿಕೆ ನೀಡುವುದರ ಜೊತೆಗೆ ಬೂಟು ಮತ್ತು 'ಬೆಣ್ಣೆ ಬಿಸ್ಕತ್' ತಂದುಕೊಡುವ caring ಅಪ್ಪ. ಇದೆಲ್ಲದರ ಹಿಂದೆ, ತಾವೂ ಮಾಸ್ತರ್ ಹಾಗೂ ಉಪಶಮುನ್ ಗುರೂಜಿ ಮಾರ್ಗದರ್ಶನದಲ್ಲಿ ಪಡೆದ ಅಂಬೇಡ್ಕರ್ ಶಿಷ್ಯತ್ವ – 'ಶಿಕ್ಷಣ, ಸಂಘರ್ಷ, ಐಕ್ಯತೆ'ಗಳ ಮೂಲಕ ಮಕ್ಕಳನ್ನು ತನ್ನ ಸ್ಥಿತಿಗಿಂತ ಮೇಲಕ್ಕೆ ಒಯ್ಯಲಾರದ ತಂದೆ ಮನುಷ್ಯನೇ ಅಲ್ಲ ಎಂಬ, ಕಿವಿಯಲ್ಲಿ ಸದಾ ಮೊರೆಯುವ ಸಂದೇಶ.

ಹಾಗೆಂದ ಮಾತ್ರಕ್ಕೆ ಇದೊಂದು ಆದರ್ಶ ಹೋರಾಟಗಾರನೊಬ್ಬನ ಜೀವನ ಪಥದ ಧೀರಗಂಭೀರ ಚಿತ್ರಣವಾಗಿ ಮಾತ್ರ ಉಳಿದಿಲ್ಲ. ದಲಿತ ಕುಟುಂಬವೊಂದರ ಸಾಂಸ್ಕೃತಿಕ ಚಿತ್ರಣವೂ ಇಲ್ಲಿ ಅದರೆಲ್ಲ ಬಣ್ಣ ಬೆಡಗುಗಳೊಂದಿಗೆ ಸಜೀವವಾಗಿ ಮೂಡಿಬಂದಿದೆ. ದಾಮು ಮತ್ತು ಸೋನು ಪರಸ್ಪರ ಪ್ರೀತಿಸುವ ಗಂಡ ಹೆಂಡತಿಯರಾಗಿ 'ಎಸ್ಕಾರ್ ಡ್ಯೂಟಿ'ಯ ಕ್ರೌರ್ಯವನ್ನು ಪ್ರತಿಭಟಿಸಿ ಹಳ್ಳಿ ಬಿಟ್ಟು ಹೊಸ ಸ್ವಾತಂತ್ರ್ಯ ಅರಸಿಕೊಂಡು ಮುಂಬೈ ಕಡೆಗೆ 'ಹೆಗಲಿಗೆ ಹೆಗಲು ಕೊಟ್ಟು' ನಡೆಸುವ ಪಯಣದ ಜೊತೆಯಲ್ಲೇ ಈ ಸಾಂಸ್ಕೃತಿಕ ಕಥನವು ಆರಂಭವಾಗುತ್ತದೆ. ಇಬ್ಬರ ಬಾಲ್ಯದ ಸಿಹಿ-ಕಹಿ ನೆನಪುಗಳ ಉಲ್ಲಾಸ-ವಿಷಾದಗಳು; ವಿವಾಹದ ರೀತಿ ರಿವಾಜುಗಳು, ಸಂಭ್ರಮ; ಮೊದಲ ಸಮಾಗಮದ ಆತಂಕ, ಮುಂಬೈ ನಗರ ಬದುಕಿನ ರೇಜಿಗೆಗಳು; ಕುಲದೇವರ ಜಾತ್ರೆಯ ಆಚರಣೆಗಳಲ್ಲಿನ ಶ್ರದ್ಧಾ-ಭಕ್ತಿಗಳು; ಬಹುಕಾಲ ಮಕ್ಕಳಾಗದುದರ ದುಃಖ ದುಮ್ಮಾನಗಳು; ಗಂಡನ ಬಾಲ್ಯ 'ಬಿಳಿ ಗೆಳತಿ'ಯ ಪ್ರಸ್ತಾಪ ಹೆಂಡತಿಯಲ್ಲಿ ಉಂಟುಮಾಡುವ ತಲ್ಲಣಗಳು; ಸತಿ ಧರ್ಮದ ವಿವರಗಳು ('...ಅದಕ್ಕೋಸ್ಕರವೇ ನಮಗೆ ಉದ್ದವಾದ ಸೆರಗು ಕೊಟ್ಟಿರೋದು. ಗಂಡಸರು ತಪ್ಪನ್ನೆಲ್ಲಾ ಒಳಗಾಕ್ಕೊಂಡು, ಅವರನ್ನು ಅರ್ಥಮಾಡಿಕೊಳ್ಳೋಕೆ'). ಹೋಟೆಲ್‌ಗೆ ಮೊದಲ ಭೇಟಿ – ಸಮೋಸದ ರುಚಿ ಕಂಡು ಬೆರಗಾದ ಬಗೆ; ಗಂಡ ಹೆಂಡತಿ ಮೊದಲ ಬಾರಿಗೆ ಹೊರ ಹೋಗಿ ಎಳನೀರು ಕುಡಿದು ಜಿಲೇಬಿ ತಿಂದುದರ ರೋಮಾಂಚನದ ಕ್ಷಣಗಳು; ಹೆಂಡತಿ ಗರ್ಭಿಣಿಯಾದುದನ್ನು ಸೂಚ್ಯವಾಗಿ ತಿಳಿಯಲಾರದ ಗಂಡನ ಪೆದ್ದುತನ ಇತ್ಯಾದಿ ವಿವರಗಳೊಂದಿಗೆ ಮೈದುಂಬಿ ಸ್ಫೋಟಕ ಹಂತ ತಲುಪುವುದು, ಕುಟುಂಬವು ಅಂಬೇಡ್ಕರ್‌ರೊಂದಿಗೆ ಬೌದ್ಧ ಮತಕ್ಕೆ ಮತಾಂತರಕ್ಕೆ ಸಿದ್ಧವಾಗಬೇಕಾದಾಗ. ಲೌಕಿಕ ವಿಷಯಗಳಲ್ಲಿ ಗಂಡನೊಡನೆ ಅಂಬೇಡ್ಕರ್ ವಿಚಾರಗಳ ವಿಷಯದಲ್ಲಿ ಸಹಮತ ತೋರುತ್ತಾ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಸೋನು, ತನ್ನ ದೇವರುಗಳ ವಿಷಯಕ್ಕೆ

ಬಂದಾಗ ಅವನೇ ಕಲಿಸಿಕೊಟ್ಟ ವಿಚಾರ ಸ್ವಾತಂತ್ರ್ಯವನ್ನು ಬಳಸಿಕೊಂಡು ಸಿಡಿದು ನಿಲುತ್ತಾಳೆ. ಜೀವನದಲ್ಲಿ ಮೊದಲ ಬಾರಿಗೆ ಗಂಡನಿಗೆ ಎದುರು ನಿಲ್ಲುತ್ತಾಳೆ.

ಅವಳಿಗೆ ತನ್ನ ಪೂರ್ವಜರ ಧರ್ಮ–ದೇವರುಗಳನ್ನು ಬಿಡುವುದು ಅಷ್ಟು ಸುಲಭದ ಕೆಲಸವಾಗಿ ಕಾಣುವುದಿಲ್ಲ. ತನ್ನನ್ನು ತನ್ನ ಕುಟುಂಬದವರೊಂದಿಗೆ ಪೊರೆದಿರುವರೆಂದು ನಂಬಿರುವ ತನ್ನ ದೇವರುಗಳನ್ನು–ಅವುಗಳ ಮೂರ್ತಿಗಳನ್ನು–ಹೊರಗೆಸೆಯಲು ಅವಳಿಗೆ ಸಾಧ್ಯವಾಗುವುದಿಲ್ಲ: "ಹೌದು, ಬಾಬಾ ಸಾಹೇಬರು ಹೇಳಿದಂತೆ ನಾವು ನಮ್ಮ ಹಕ್ಕಿಗಾಗಿ, ಗೌರವಕ್ಕಾಗಿ ಹೋರಾಡಬೇಕು. ಆದರೆ ದೇವರು ಧರ್ಮದ ಗೋಜಿಗೆ ಹೋಗುವುದೇ? ಇದು ತೀರಾ ಅತಿಯಾಯಿತು ನಾನು ಈ ಧರ್ಮ ದ್ರೋಹ ಮಾಡಲು ಬಿಡುವುದಿಲ್ಲ. ನಾನೇನು ಮಾಡಬಹುದು?" ವಿಪರ್ಯಾಸವೆಂದರೆ, ಅವಳು ತನ್ನ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದೂ ತನ್ನ ಆ ಪೂರ್ವಜರ ಧರ್ಮದೊಳಗಿನಿಂದಲೇ: "ನನ್ನೊಳಗೇ ಹೆದರಿದೆ. ಎಂದಿನಂತೆ ನನ್ನ ಗಂಡನನನ್ನು ಅನುಸರಿಸೋದು ಬಿಟ್ಟು ನನಗೆ ಆಯ್ಕೆಯಿರಲಿಲ್ಲ. ನಾನು ಮೌನವಾಗೇ ಮಾರಿ ಆಯಿಗೆ ಪ್ರಾರ್ಥಿಸಿದೆ. ನನಗೆ ಸರಿಯಾದ ಹಾದಿಯಲ್ಲಿ ನಡೆಯುವ ಶಕ್ತಿ ಕೊಡು ಎಂದು. ನನ್ನವನು ನನ್ನನ್ನು ಮುಂಬೈಗೆ ಕರೆದುಕೊಂಡು ಹೋಗಲು ಬಂದಾಗ, ನಮ್ಮ ಆಯಿ ಹೇಳಿದ್ದ ಮಾತುಗಳನ್ನು ನೆನಪಿಸಿಕೊಂಡೆ – 'ಸೋನೆ, ನಿನ್ನ ಗಂಡನೇ ನಿನ್ನ ದೇವರು. ನಿರ್ವಿವಾದವಾಗಿ ಅವನಿಗೆ ವಿಧೇಯಳಾಗಿರು. ಅವನೇನೆ ಮಾಡಲಿ, ಅವನನ್ನು ಪೂರ್ತಿಯಾತಿ ಸ್ವೀಕರಿಸು, ನಿನಗೆ ಅವನೇ ಸರ್ವಸ್ವ ನಿನ್ನ ಸಾವಿನೊಂದಿಗೇ ಅವನ ಬಿಡುಗಡೆ'. ಈಗ ನಾನೇನು ಮಾಡುವುದು?" ಒಲ್ಲದ ಮನಸ್ಸಿನಿಂದಲೇ ಅವಳು ಗಂಡನೊಂದಿಗೆ ನಾಗಪುರಕ್ಕೆ ಹೋಗಿ ಬೌದ್ಧ ಮತದ ದೀಕ್ಷೆ ಪಡೆಯುತ್ತಾಳೆ. ಆ ಜನಸಾಗರದ ಸಂಭ್ರಮದ ಆಚರಣೆಗಳ ಮಧ್ಯೆ ತನ್ನ ಆತಂಕಗಳನ್ನು ಕಳೆದುಕೊಳ್ಳುತ್ತಾಳೆ.

ಇದಾದ ಅನತಿ ಕಾಲದಲ್ಲೇ ಅಂಬೇಡ್ಕರ್ ಕೊನೆಯುಸಿರೆಳೆಯುತ್ತಾರೆ. ಇದರೊಂದಿಗೆ ಪುಸ್ತಕ ೧೯೫೬ರಿಂದ ೧೯೭೦ಕ್ಕೆ ಜಿಗಿಯುತ್ತದೆ. ಅಲ್ಲಿಂದ ದಾಮುವಿನ ಮಗನ (ನರೇಂದ್ರ ಜಾಧವ್) ನೆನಪುಗಳು ಆರಂಭವಾಗುತ್ತವೆ: ಘೋಷಣೆಗಳ ಕೋಲಾಹಲದ ಮಧ್ಯೆ ಗಾಬರಿಗೊಂಡ ಮಕ್ಕಳ ಕೈ ಹಿಡಿದು ಸಭೆಯೊಂದರಲ್ಲಿ ಭಾಗವಹಿಸಿದ್ದ ದಾಮುಗೆ ಒಂದರೆಕ್ಷಣ ಎದುರಾದ ಅಂಬೇಡ್ಕರ್ ಹೇಳುವುದು – 'ದಾಮು, ಮಕ್ಕಳನ್ನು ಚೆನ್ನಾಗಿ ಓದಿಸು'. ದಾಮು ಅದನ್ನು ಆಶೀರ್ವಾವೆಂಬಂತೆ ಸ್ವೀಕರಿಸಿ ಮಕ್ಕಳನ್ನು ಓದಿಸುತ್ತಾನೆ. ಅಭಿಮಾನದಿಂದ ಅವರಿಗೆ ಅಂಬೇಡ್ಕರ್ ಓದಿದ ಶಾಲಾ – ಕಾಲೇಜುಗಳನ್ನೇ ಆಯ್ಕೆ ಮಾಡುತ್ತಾನೆ. ತಾನು ವಾಸಿಸುತ್ತಿದ್ದ ಪ್ರದೇಶದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ರೌಡಿಗಳ ಮಧ್ಯೆ ಮಕ್ಕಳು ಹಾಳಾಗದಂತೆ ಸಕಲ ನೈತಿಕ ಎಚ್ಚರದಿಂದ ಅವರನ್ನು ಬೆಳೆಸುತ್ತಾನೆ. ಅವರಿಗೆ ಎರಡನೆಯ ಭಾಷೆಯಾಗಿ ಸಂಸ್ಕೃತ ಕೊಡಿಸುತ್ತಾನೆ. ಮಗ ಸಂಸ್ಕೃತದಲ್ಲಿ ಅತಿ ಹೆಚ್ಚು ಅಂಕ ಪಡೆದಾಗ, ಬ್ರಾಹ್ಮಣರ ಗರ್ವ ಮುರಿದಂತೆ ಬೀಗುತ್ತಾನೆ. ಹಾಗೇ ಮಕ್ಕಳು ಪಡೆದ ಪದವಿಗಳ ಸಾರ್ಥಕತೆಯನ್ನು ಅನುಮಾನದಿಂದ ನೋಡುತ್ತಾನೆ: 'ನೀನು ಓದಿದ್ದೆಲ್ಲವೂ ಬೀದಿಯಲ್ಲಿರೋ ಮನುಷ್ಯನ ಉದ್ಧಾರಕ್ಕಲ್ಲದಿದ್ದರೆ ಅದು ನಿಷ್ಪ್ರಯೋಜಕ' ಎಂದು ಅವರನ್ನು ಛೇಡಿಸುತ್ತಾನೆ. ಒಬ್ಬ ಮಗ ಐ.ಎ.ಎಸ್. ಮಾಡಿ ಜಿಲ್ಲಾ ಕಲೆಕ್ಟರಾದರೆ, ಇನ್ನೊಬ್ಬ ಮಗ ಅಂತರರಾಷ್ಟ್ರೀಯ

ಮನ್ನಣೆ ಪಡದ ಅರ್ಥಶಾಸ್ತ್ರಜ್ಞನಾಗುತ್ತಾನೆ. ಆದರೆ ಅಪ್ಪನಿಗೆ ಅವರು ಪ್ರೀತಿಯ 'First Class scouderlಗಳೇ! (ಅದು ಅವು ಬಾಲ್ಯದಲ್ಲಿ ಬಿಳಿ ಅಧಿಕಾರಿಯೊಬ್ಬನ ಬಳಿ ಕೆಲಸ ಮಾಡುತ್ತಿದ್ದಾಗ ಕಿವಿ ಮೇಲೆ ಪದೇ ಪದೇ ಬಿದ್ದು ಪರಿಚಿತವಾದ ಪ್ರಿಯ ಬೈಗುಳ) ಏಕೆಂದರೆ ಸ್ಥಳೀಯ ಶಿವಾಜಿ ಬೀಡಿ ಸೇದಿ ಗಂಟಲು ಕೆಡಿಸಿಕೊಂಡ ಈ ಅಪ್ಪನಿಗೆಂದು 'ವಿಕ್ಟೋರಿಯಾ ರಾಣಿಗಾಗಿಯೇ ವಿಶೇಷವಾಗಿ ತಯಾರಿಸಿದ' ಟ್ರಿಪಲ್ ಫೈವ್ ಸಿಗರೇಟನ್ನು ಪ್ರೀತಿಯಿಂದ ತಂದುಕೊಡುವ ಆ ಮಕ್ಕಳಿಗೆ, ವಿಕ್ಟೋರಿಯಾ ರಾಣಿ ಶಿವಾಜಿ ಬೀಡಿಯ ರುಚಿ ನೋಡಿಲ್ಲವೆಂಬುದೇ ಗೊತ್ತಿಲ್ಲ! ಹಾಗೇ ನರೇಂದ್ರ ಜಾಧವ್ ತನ್ನ ಅಪ್ಪನ ವ್ಯಕ್ತಿತ್ವವನ್ನು ನಿರೂಪಿಸುವ ಈ ಸ್ವಾರಸ್ಯಕರ ಪ್ರಸಂಗ:

ದಾದಾ ಒಂದು ದಿನ ನನ್ನನ್ನು ಕರೆದು 'ನಿನ್ನ ನಡವಳಿಕೆ ಸರಿಯಿಲ್ಲ'ವೆಂದು ಹೇಳಿದರು. 'ಬಾಬಾ ಸಾಹೇಬರು ವಿದೇಶಿ ಡಿಗ್ರಿಯನ್ನು ಹಿಡಿದು ಭಾರತಕ್ಕೆ ಬಂದಾಗ ಅವರಿಗೆ ಬೇಕಾದ ಯಾವುದಾದರೂ ಸರಕಾರಿ ನೌಕರಿ ಹಿಡಿಯಬಹುದಿತ್ತು ಅವರು ನಮ್ಮ ಮಂದಿಯನ್ನು ಒಗ್ಗೂಡಿಸಲು ಸಾಮಾಜಿಕ ಕ್ರಾಂತಿಯನ್ನು ಆಯ್ಕೆ ಮಾಡಿದರು. ನಿನ್ನ ಹತ್ತಿರ ಅಮೆರಿಕನ್ ಡಿಗ್ರಿಯಿದೆ. ನೀನ್ಯಾಕೆ ರಿಸರ್ವ್ ಬ್ಯಾಂಕಿನಲ್ಲಿ ಕೆಲಸ ಮಾಡಬೇಕು?'

'ಬಾಬಾ ಸಾಹೇಬರ ಮಾತು ಬೇರೆ. ನಾನು ಒಬ್ಬ ಸಾಮಾನ್ಯ ಮನುಷ್ಯ.'

'ನಾನು ಒಪ್ಪುವುದಿಲ್ಲ. ನಿನ್ನಂಥ ವಿದ್ಯಾವಂತ ಯುವಕರು ರಾಜಕೀಯಕ್ಕೆ ಹೋಗಿ ಜನಗಳ ಸೇವೆ ಮಾಡಬೇಕು.'

ಕೊನೆಗೆ ನಾನೇ ಮಾತು ಮುಗಿಸುವ ಸಲುವಾಗಿ ಹೇಳಿದೆ, 'ಈಚಿನ ದಿನಗಳಲ್ಲಿ ಯಾರೂ ಜನರ ಸೇವೆಗಾಗಿ ರಾಜಕೀಯದಲ್ಲಿ ಉಳಿದಿಲ್ಲ. ಆ ದಿನಗಳು ಹೋಯಿತು. ಈಗಿನ ರಾಜಕಾರಣದಲ್ಲಿ ಬರಿ ಮೋಸಗಾರರು, ಗೂಂಡಾಗಳೇ ಇರುವುದು.'

ದಾದಾ ಎಂದಿಗೂ ಬಿಟ್ಟುಕೊಡುತ್ತಿರಲಿಲ್ಲ – 'ಆದ್ರೇನು, ನೀನು ಫಸ್ಟ್ ಕ್ಲಾಸ್ ಸ್ಕೌಂಡ್ರಲ್ ತಾನೇ!'

ನನಗೆ ಮಾತೇ ಹೊರಡಲಿಲ್ಲ.

ಇಂತಹ ವರ್ಗ ವಿಶಿಷ್ಟವಾದ ಹಾಸ್ಯಪ್ರಜ್ಞೆಯಿಂದಾಗಿಯೇ, ತನ್ನ ಮಕ್ಕಳ ಅಭ್ಯುದಯ ದಿಂದ ದೊರೆತ ಸುಖ-ಸೌಲಭ್ಯಗಳಿಂದ ಎಂದೂ ತಲೆ ತಿರುಗಿ (ಒಮ್ಮೊಮ್ಮೆ ಸ್ವಭಾವ ದೋಷದಿಂದಾಗಿ ಕಲೆಕ್ಟರನೆಂಬ ಅಧಿಕಾರದಿಂದ ತನ್ನನ್ನು ದಬಾಯಿಸ ಬಂದ ಅಧಿಕಾರಿಗೆ, ತಾನು ಕಲೆಕ್ಟರನ ತಂದೆ ಎಂದು ಪ್ರತಿ ದಬಾಯಿಸುವುದೂ ಉಂಟು!) ದಾಮು ತನ್ನ ಬೇರುಗಳನ್ನು ಮುರಿದುಕೊಳ್ಳುವುದಿಲ್ಲ. ಹಾಗಾಗಿಯೇ, ಮಗನನ್ನು ಕಲೆಕ್ಟರನನ್ನಾಗಿ ಮಾಡಿದ ಸಾಧನೆಯ ಗೌರವಾರ್ಥ ತಾನು ಕೆಲಸ ಮಾಡುತ್ತಿದ್ದ ಬಂದರು ಪ್ರಾಧಿಕಾರದ ಮೇಲಾಧಿಕಾರಿ ತನಗೆ ಸೇವಾ ವಿಸ್ತರಣೆ ಕೊಡಲು ಮುಂದಾದಾಗ, ಆತ ಹೀಗೆ ಹೇಳಲು ಸಾಧ್ಯವಾಗುವುದು – 'ಸಾಹೇಬ್, ನೀವು ಬೇರೆ ಇನ್ಯಾರಿಗಾದರೂ ಒಂದು ವರ್ಷದ ವಿಸ್ತರಣೆ ಕೊಡಲು ಸಾಧ್ಯವೇ ನೋಡಿ..... ಯಾರ ಮಕ್ಕಳು ಇನ್ನೂ ಓದುತ್ತಿದ್ದಾರೋ, ಯಾರ ಶಿಕ್ಷಣ ಅವರ ತಂದೆಯ ನಿವೃತ್ತಿಯಿಂದ ನಿಂತು ಹೋಗುವಂತಾಗುತ್ತದೋ, ಅಂತಹವರ ಅವಶ್ಯಕತೆ ನೋಡಿ ಕೊಡಿ....'

ದಾಮುವಿನ ತಲೆಮಾರಿನವರು 'ಜೈ ಭೀಮ್' ಘೋಷಣೆಗಳ ಮೂಲಕ ಕಂಡುಕೊಂಡ

ವಿವೇಕ ಇಂತಹುದು. ಇಂತಹ ವಿವೇಕಕ್ಕೆ ಮತ್ತೊಂದು ಉದಾಹರಣೆ, ಪೂನಾ ಒಪ್ಪಂದದ ಸಂದರ್ಭದಲ್ಲಿ ಗಾಂಧಿ ಅಂಬೇಡ್ಕರ್ ಮುಖಾಮುಖಿ ಕುರಿತು ದಾಮು ಸೇರಿದಂತೆ ಅಂಬೇಡ್ಕರ್ ಅನುಯಾಯಿಗಳ ನಡುವೆ ನಡೆಯುವ ಚರ್ಚೆ. ಈ ಮುಖಾಮುಖಿ ದೇಶಾದ್ಯಂತ ಹುಟ್ಟುಹಾಕಿದ್ದ ಕಹಿಯಿಂದ ಕಂಗೆಟ್ಟಿದ್ದ ದಾಮುವಿನ 'ಈ ಇಬ್ಬರು ಮಹಾನ್ ನಾಯಕರು ತಮ್ಮ ಭಿನ್ನಾಭಿಪ್ರಾಯಗಳನ್ನು ಖಾಸಗಿಯಾಗಿ ಕೂತು ಏಕೆ ಪರಿಹರಿಸಿಕೊಳ್ಳ ಬಾರದು?' ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಈ ಚರ್ಚೆ ಮುಗಿಯುವುದು, 'ಇವೆಲ್ಲ ಕುಶಲತೆಯ – ಸೂಕ್ಷ್ಮವಾಗಿ ನಿರ್ವಹಿಸಬೇಕಾದ ವಿಷಯಗಳು. ಅದನ್ನು ನಾವು ನಮ್ಮ ನಾಯಕರಿಗೆ ಬಿಡೋಣ' ಎಂಬ ಕೊನೆಯ ಮಾತುಗಳೊಂದಿಗೆ. ಗಾಂಧಿ–ಅಂಬೇಡ್ಕರ್ ಮುಖಾಮುಖಿಯ ವಿಷಯವಾಗಿ ಇಂದೂ ಮುಂದುವರಿದಿರುವ ಚರ್ಚೆ ಹುಟ್ಟುಹಾಕುತ್ತಿರುವ ಕಹಿಯ ಹಿನ್ನೆಲೆಯಲ್ಲಿ, ಈ ಮಾತುಗಳನ್ನು ತೂಗಿ ನೋಡಬೇಕಾಗಿದೆ.

ಇಂತಹ ವಿಶಿಷ್ಟ ವಿವೇಕ ಪ್ರಕಟವಾಗುವುದು, ಜಾಗೃತಿಯ ದಾಂಧಲೆ ನಡುವೆ ಮುಗ್ಧತೆಯನ್ನು ಕಳೆದುಕೊಳ್ಳದಿದ್ದಾಗ ಮಾತ್ರ ಎಂದು ಕಾಣುತ್ತದೆ. ನರೇಂದ್ರ ಜಾಧವ್ ಅವರು ಆ ಮುಗ್ಧತೆಯ ಹಸಿ ಸೌಂದರ್ಯವನ್ನು ಉಲ್ಲಾಸಮಯವಾಗಿ ಪ್ರಕಟಿಸುವ ತಮ್ಮ ತಂದೆ ತಾಯಿಗಳ ನೆನಪುಗಳನ್ನು ಎಷ್ಟು ಆತ್ಮೀಯವಾಗಿ ಕಟ್ಟಿಕೊಡುತ್ತಾರೆಂದರೆ, ಆ ತಂದೆ ತಾಯಿಗಳ ಭಾವಚಿತ್ರಗಳಿಲ್ಲದಿರುವುದು ಈ ಪುಸ್ತಕದ ದೊಡ್ಡ ಕೊರತೆಯೆನ್ನಿಸಿ ಬಿಡುತ್ತದೆ. ಏಕೆಂದರೆ ಆ ನೆನಪುಗಳಲ್ಲಿ ಮೂಡಿ ಬರುವ ತಂದೆ ತಾಯಿಗಳು ಜಾಧವರ ತಂದೆ ತಾಯಿ ಮಾತ್ರವಲ್ಲ, ಭಾರತದ ನವೋದಯದ ಆ ಕಾಲದಲ್ಲಿ 'ಜಾಗೃತ'ಗೊಂಡು ತಮ್ಮ ಮಕ್ಕಳನ್ನು 'ಬೆಳಕಿಗೆ ತಂದ' ಎಲ್ಲಾ ತಂದೆ ತಾಯಿಗಳು ಆಗಿದ್ದಾರೆ. ಹಾಗಾಗಿಯೇ ನವೋದಿತ ಭಾರತದಲ್ಲಿ ಅತಿಗಣ್ಯ ವ್ಯಕ್ತಿಯಾಗಿ ಫಂಡರಾಪುರ ವಿಠಲ ಮಂದಿರಕ್ಕೆ ಬಂದು, ಮಂದಿರದ ಪುರೋಹಿತರು ಹಾಗೂ ಅಧಿಕಾರಿಗಳಿಂದ ವಿಶೇಷ ಮರ್ಯಾದೆಗೆ ಬಾಧ್ಯರಾಗುವ ನರೇಂದ್ರ ಜಾಧವ್, ಈ ಹಿಂದೆ ಭಕ್ತಿ ತುಂಬಿ ಹಾಡುತ್ತಾ ಕುಣಿಯುತ್ತಾ ಬರುತ್ತಿದ್ದ ತನ್ನ ಜನರ ಮಂದಿರ ಪ್ರವೇಶ(ನಿಷೇಧ)ಕ್ಕೆ ಗಡಿಕಲ್ಲಿನಂತಿದ್ದ ಕಪ್ಪು ಬಂಡೆಯ ಬಳಿಗೆ ಓಡಿ ಭಾರವಾದ ನೆನಪುಗಳಲ್ಲಿ ಒದ್ದೆಯಾಗಿ ನಿಲ್ಲುವ ಪ್ರಸಂಗ ನಮ್ಮೆಲ್ಲರನ್ನೂ ಆರ್ದ್ರಗೊಳಿಸಬಲ್ಲುದಾಗಿದೆ. ಆದರೆ ಎಲ್ಲಾ ನೆನಪುಗಳೂ ಹಾಗಲ್ಲ.... ಮನೆಯಲ್ಲಿ ಧ್ರುವನೆಂದು ಕರೆಯಲ್ಪಡುತ್ತಿದ್ದ ನರೇಂದ್ರ ಜಾಧವ್ ತಾನು ಓದುತ್ತಾ, ಆಡುತ್ತಾ, ಬೆಳೆದಿದ್ದ ಮುಂಬೈನ ದೌಲತ್ ಉಸ್ತಾದ್‌ರಂತಹ ಗೂಂಡಾಗಳನ್ನು ಸಲುಹಿದ್ದ – ಆ ಹಳೆಯ ಜಾಗಗಳಿಗೆ ಈಗ ತನ್ನ ಮಗನೊಂದಿಗೆ ನೆನಪುಗಳನ್ನು ಹಂಚಿಕೊಳ್ಳಲು ಹೋದಾಗ ಕಂಡದ್ದು : "ಹೊಲಸು ಮತ್ತು ಗುಂಪು ನಮ್ಮನ್ನು ಮುತ್ತಿದ್ದವು. ತೂರಾಡುತ್ತಿದ್ದ ಆತ್ಮಗಳು ಕೆಂಪಾದ ಕಣ್ಣುಗಳಿಂದ ತಮ್ಮಷ್ಟಕ್ಕೆ ತಾವು ತೊದಲುತ್ತಿದ್ದವು. ಅವರಲ್ಲೂ ದೌಲತ್ ಉಸ್ತಾದ್‌ಗಳು ತುಂಬಾ ಇರಬಹುದು. ಆದರೆ ಆ ಸಣ್ಣ ಮಕ್ಕಳಲ್ಲಿ ಧ್ರುವನಂತಹವರನ್ನು ನಾನು ಹುಡುಕುತ್ತಿದ್ದೆ......"

ಆದರೆ ನಿಜವಾದ ಹುಡುಕಾಟ ಧ್ರುವನ ಅಮ್ಮನದು–ಸೋನುಳದು. ಈ ಪುಸ್ತಕದ ನಿಜವಾದ – ಆತ್ಯಂತಿಕವಾದ–ತಾತ್ವಿಕ ಬಿಕ್ಕಟ್ಟು ಅರ್ಥಪೂರ್ಣವಾಗಿ ಬಿಚ್ಚಿಕೊಳ್ಳುವುದು 'ನೀನೇನು ಮಾಡು. ಆದರೆ ಮಾಡುವುದರ ಎತ್ತರಕ್ಕೇರು. ನೀನು ಕಳ್ಳನಾಗಬೇಕೇನು?

ತೊಂದರೆ ಇಲ್ಲ, ಅದರಲ್ಲಿ ಪರಿಣಿತಿ ಪಡೆ; ಪ್ರಪಂಚವೇ ನಿನಗೆ ಸಲಾಂ ಮಾಡುತ್ತದೆ. ಪ್ರಪಂಚವೇ ನಿನ್ನ ಕಡೆ ನೋಡಿ "ಓ ಎಂಥ ಕಳ್ಳ! ಎಂಥ ಕೈ ಚಳಕ" ಎನ್ನಬೇಕು..... ಯಾವತ್ತೂ ಕಡಿಮೆಯಿಂದ ತೃಪ್ತನಾಗಬೇಡ" ಎಂಬ ಆದೇಶದ ಮೇರೆಗೆ ಅಪ್ಪನ ಮಗನಾಗಿ, ನರೇಂದ್ರ ಜಾಧವ್ ಅರ್ಥಶಾಸ್ತ್ರ ಆಡಳಿತಗಾರನಾಗಿ ಮೆಟ್ಟಿಲು ಮೆಟ್ಟಿಲು ಏರುತ್ತಾ, ೧೯೯೭ರಲ್ಲಿ 'ಅಂತರಾಷ್ಟ್ರೀಯ ಹಣಕಾಸು ನಿಧಿ' ಸೇರಲು ಅಮೆರಿಕಾಕ್ಕೆ ಪ್ರಯಾಣಕ್ಕಾಗಿ ಹೊರಟ ಮುಂಬೈ ವಿಮಾನ ನಿಲ್ದಾಣದಲ್ಲಿ ಜನ ಜಂಗುಳಿಯ ನಡುವೆ ತನ್ನನ್ನು ಹುಡುಕುತ್ತಾ ಬಂದ ತನ್ನ ಅಮ್ಮನ ಮಗನಾಗಿ, ಅವಳ ರೋದನವನ್ನು ಎದುರಿಸಬೇಕಾಗಿ ಬಂದಾಗ–

'ನಂಗೆ ಹೋಗೋಕೆ ಬಿಡಿ....ಧ್ರುವನನ್ನು ಕರೀರಿ..... ಅರ್ರೇ, ನನ್ನ ಮಗನ ಜೊತೆ ಸ್ವಲ್ಪ ಹೊತ್ತಾದ್ರೂ ಇರಕ್ಕೆ ಬಿಡಿ..... ಅವನು ಏಳು ಸಮುದ್ರ ದಾಟಿ ಹೋಗ್ತಿದಾನೆ.... ನಾನು ಸಾಯೋ ಮುದುಕಿ.......'

'ಬಾಯಿ.....' ನಾನು ಕರೆದೆ. ನನ್ನ ಅಮ್ಮನ ಹತ್ರ ಹೋಗಿ ಕಾಲು ಮುಟ್ಟಿ ನಮಸ್ಕಾರ ಮಾಡಿ ಆಶೀರ್ವಾದ ಪಡೆಯಲು ಹೋದೆ. ಅದೆಲ್ಲ ಅವಳಿಗೆ ಬೇಡವಾದ್ರಿಂದ ಅವಳು ಜೋರಾಗಿ ಕಿರುಚಿದಳು. 'ನೀನಿಲ್ಲಿ ಕಷ್ಟಪಟ್ಟು ದುಡಿದಿದ್ದು ಯಾಕೆ? ಊರು ಬಿಟ್ಟು ಹೋಗಾಕಾ? ನಂಗಂತೂ ಅರ್ಥವೇ ಆಗೊಲ್ಲ. ಈಗ ನೀನೇನು ಹುಡ್ಕುತಾ ಇದ್ದಿ....? ಇಲ್ಲಿ ಸಿಕ್ಕದ್ದು ಏಳು ಸಮುದ್ರದಾಚೆ ಸಿಗುತ್ತಾ? ನಿನ್ನ ಹೊಟ್ಟೆಗೆ ಎರಡು ಹೊತ್ತು ಊಟಕ್ಕಿಂತ ಎಷ್ಟು ಹೆಚ್ಚು ಬೇಕು? ನಿನಗೆ ಇನ್ನೂ ಹೆಚ್ಚು ಬೇಕು..... ನಿನಗಿನ್ನೆಷ್ಟು ಬೇಕು?', ಅವಳು ಬಡಬಡಿಸುತ್ತಲೇ ಇದ್ದಳು.

'ನೀನು ಸಣ್ಣೋನಿದ್ದಾಗಿಂದ ಹೀಗೆ.... ಯಾವಾಗ್ಲೂ ಹುಡುಕೋದು' ಅವಳು ಹೇಳಿದಳು, 'ಇದ್ದುದರಲ್ಲಿ ನಿನಗೆಂದೂ ಸಂತೋಷವಿಲ್ಲ. ನನ್ನ ನೋಡು, ನಾನು ಯಾವಾಗ್ಲೂ ಇರ್ತೀನಿ ಅಂದ್ಕೋಬೇಡ.... ನಾಳೆ ನಿನ್ನ ಕಣ್ಣಿರೇನು ಪ್ರಯೋಜನ?.......... ನನ್ನ ಹೆಣದ ಮೇಲೆ ಕಣ್ಣೀರು ಸುರಿಸೋಕೂ ನೀನಿರೋಲ್ಲ'. ಈಗ ಕಿರುಚೋಕೆ ಶುರು ಮಾಡಿದ್ಲು, 'ನನ್ನ ಮುದುಕ ಸತ್ತು ಬಿಟ್ಟ.... ಈಗ ನೀನು ನನ್ನ ಬಿಟ್ಟು ಹೋಗ್ತಿದ್ದೀಯಾ! ದ್ರುವಾ, ಯಾಕೆ ಹೀಗೆ ಮಾಡ್ತೀದಿಯಾ......?'

ನಾನು ಅವಳಿಗೆ ಹೇಗೆ ವಿವರಿಸಲಿ? ನಾನು ಶಬ್ದಗಳಿಗೆ ತಡಕಾಡುತ್ತಿರುವಾಗ, ನಾನೂ ಯಾಕೆ ನಮ್ಮೋರನ್ನೆಲ್ಲಾ ಬಿಟ್ಟು ಹೊರಟಿದ್ದೇನೆ ಎಂದು ಆಶ್ಚರ್ಯವಾಯಿತು. ನನ್ನವರ ರಕ್ತ ಮಾಂಸ ಹಂಚಿಕೊಂಡು ಹುಟ್ಟಿದ ನಾಡನ್ನು ಬಿಟ್ಟು, ನನ್ನ ವೃತ್ತಿಗೆ ಭರವಸೆ ನೀಡಿದ ದೇಶಕ್ಕೆ ಹೋಗಲು ನನ್ನ ವ್ಯರ್ಥ ಪ್ರಯತ್ನ ಯಾಕೆ? ನಾನು ಅಮ್ಮನಿಗೆ ತಿಳಿಸಲು ಶಬ್ದಗಳನ್ನು ಹುಡುಕುತ್ತಿರುವಾಗಲೇ, ನನಗೆ ಏನೂ ಸಿಕ್ಕಲಿಲ್ಲ...ನನ್ನ ಮನಸಿನಲ್ಲಿ ಬಂದ ಶಬ್ದಗಳಲ್ಲಿ ಆಳವೇ ಇಲ್ಲದಿರುವುದನ್ನು ಕಂಡೆ.

ಇದು ಇಂದಿನ ಜಾಗತಿಕ ರಾಜಕಾರಣದ ಸಂದರ್ಭದಲ್ಲಿ ಒಬ್ಬ ತಾಯಿ – ಮಗನ ನಡುವಣ ಮುಖಾಮುಖಿ ಎನ್ನಿಸದೆ, 'ಉದಾರವಾದಿ ನವ ಭಾರತ'ವು ಇಂದು ಎದುರಿಸುತ್ತಿರುವ ನಿರ್ಣಾಯಕ ತಾತ್ವಿಕ ದ್ವಂದ್ವದ ಹಿನ್ನೆಲೆಯಲ್ಲಿ ಆಳವಾದ ರೂಪಕಾರ್ಥವನ್ನು ಪಡೆಯುತ್ತದೆ. ಆದರೆ 'ಶಬ್ದ'ಗಳ ಆಳಕ್ಕಿಂತ ಹೆಚ್ಚಾಗಿ 'ಅರ್ಥ'ದ ಎತ್ತರಗಳ ಹುಡುಕಾಟದಲ್ಲಿರುವಂತೆ ತೋರುವ ನರೇಂದ್ರ ಜಾಧವ್, ಹೆಂಡತಿ ಮಕ್ಕಳೊಂದಿಗೆ

ಅಮೇರಿಕಾಕ್ಕೆ ಹೋಗುತ್ತಾರೆ. ಅಲ್ಲಿ ಶಾಲೆಗೆ ಸೇರುವ ಮಗಳು ಅಪೂರ್ವ, ಭಾರತದಲ್ಲಿ ಕೇಳಲ್ಪಡುತ್ತಿದ್ದ 'ನೀನು ದಲಿತ ವಿದ್ವಾಂಸ ಡಾ॥ ನರೇಂಧ್ರ ಜಾಧವರ ಮಗಳೇ? ಎಂಬ ಪ್ರಶ್ನೆಯಿಂದ ವಿಮೋಚಿತಳಾಗಿ, ಈ ಇಡೀ ಕೃತಿಗೆ ತನ್ನ ಹಿನ್ನುಡಿಯಲ್ಲಿ ಹೀಗೆ ಭಾಷ್ಯ ಬರೆಯುತ್ತಾಳೆ.

'..........ಈಗ ನಾನು ಯಾರು ಎಂದು ಮನಗಂಡಿದ್ದೇನೆಂದು ನನಗನ್ನಿಸುತ್ತಿದೆ. ನಾನೀಗ ಕೇವಲ ಅಪೂರ್ವ, ಅಷ್ಟೇ. ನನಗೆ ಯಾವ ಕುಲ, ಮತಧರ್ಮ ಅಥವಾ ಜಾತಿಯ ಬಂಧನಗಳೂ ಇಲ್ಲ. ನನ್ನ ಹಿರಿಯರು ತಾವು ದಲಿತರೆಂಬ ಹೊರೆ ಹೊತ್ತು, ಭಾರತ ಸ್ವತಂತ್ರವಾದ ನಂತರವೂ ಅತ್ಯಂತ ಹೀನಾಯದ ಕೆಲಸ ಕಾರ್ಯಗಳನ್ನು ತಲೆಬಾಗಿ ನಡೆಸಿಕೊಂಡು ಬಂದಿದ್ದಾರೆ. ಆದರೆ ನನ್ನ ವಿಷಯವೇ ಬೇರೆ. ಅವರು ನನಗಾಗಿ ಹಚ್ಚಿಕೊಟ್ಟ ದೀವಟಿಗೆಯನ್ನು ನಾನೀಗ ಕೈಲಿ ಹಿಡಿದಿದ್ದೇನೆ. ನನ್ನ ಯಾವ ಶಕ್ತಿಯೂ ತಡೆ ಹಿಡಿಯಲಾಗದು.'

ನನ್ನ ವಿಷಯ ಬೇರೆ?! ಇದೇ, ಈ ಪುಸ್ತಕ ಕುರಿತ, ಅದರೊಳಗಿನಿಂದಲೇ ಒಡಮೂಡಿ ಬರುವ ವ್ಯಾಖ್ಯಾನ ಕೂಡ. ಅಂಬೇಡ್ಕರ್‌ವಾದವು ಗಾಂಧಿವಾದದಂತೆಯೇ, ಅದರ ಇವೊತ್ತಿನ ಅನುಯಾಯಿಗಳ ಮೂಲಕ ಅನೇಕ ದೌರ್ಬಲ್ಯಗಳಿಂದ ನರಳಿದಂತೆ ಕಾಣುತ್ತಿರಬಹುದು. ಆದರೆ ಅದು ಗಾಂಧಿವಾದದಂತೆಯೇ ತನ್ನ ಉದಯದ ಕಾಲದಲ್ಲಿ ಅಂದಿನ ಅನುಯಾಯಿಗಳ ಬಾಳಿನಲ್ಲಿ ಉಂಟು ಮಾಡಿದ ಮಹಾಪರಿವರ್ತನೆಯ ದೃಷ್ಟಿಯಿಂದ ಎಷ್ಟು ನಿಜವೂ, ಋಜುವೂ ಮತ್ತು ಪರಿಣಾಮಕಾರಿಯೂ ಆಗಿತ್ತು ಎಂಬುದನ್ನು ಇಂತಹ ಕೃತಿಗಳು ನಮಗೆ ಮನಗಾಣಿಸುತ್ತವೆ. ಹಾಗೆ ನೋಡಿದರೆ, ಭಾರತದ ಆಧುನಿಕ ಸಾಮಾಜಿಕ ಚರಿತ್ರೆಗೆ ಅಂಬೇಡ್ಕರರ ಕೊಡುಗೆಯನ್ನು ಇಂದಿನ ಪರಿಪ್ರೇಕ್ಷ್ಯದಲ್ಲಿ ಸರಿಯಾಗಿ ಹಾಗೂ ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಅವರನ್ನು ಕುರಿತ ಜೀವನ ಚರಿತ್ರೆಯ ಅಥವಾ ತಾತ್ವಿಕ ಪಸ್ತಕಗಳಿಗಿಂತ ಇಂತಹ ವೈಯಕ್ತಿಕ ನಿರೂಪಣೆಯ ಪುಸ್ತಕಗಳೇ ಹೆಚ್ಚು ಉಪಯುಕ್ತವೆಂದು ತೋರುತ್ತದೆ.

ಸುಮಾ ದ್ವಾರಕಾನಾಥ್ ಅವರ ಅನುವಾದ ನಿಷ್ಕಾರಣವಾಗಿ ಒಮ್ಮೆ ಉತ್ತರ ಕರ್ನಾಟಕದ ಆಡುಭಾಷೆಗೂ, ಮತ್ತೊಮ್ಮೆ ಹಳೆ ಮೈಸೂರಿನ ಹಳ್ಳಿಗಾಡಿನ ಭಾಷೆಗೂ ಹೊರಳುತ್ತಾ, ಕೆಲವೆಡೆ ಜಾಯಮಾನಕ್ಕೊಗ್ಗದ ವಾಕ್ಯ ರಚನೆ ಹಾಗೂ ಪದಗುಚ್ಛಗಳ ಮೂಲಕ ಗೊಂದಲ ಹುಟ್ಟಿಸುತ್ತಾದಾದರೂ, ಒಟ್ಟಾರೆಯಾಗಿ ಅಭಿನಂದನೀಯವಾಗಿಯೇ ಇದೆ.

('ಸಂವಾದ'–ಅಕ್ಟೋಬರ, ೨೦೦೬)

ದಲಿತ ಚಳುವಳಿ: ಎಲ್ಲಿ ಆ ಹಾಡುಗಳು? ಎಲ್ಲಿ ಹೋಯಿತು ಆ ಮಾರ್ದವತೆ?

ಸುಮಾರು ೨೫-೩೦ ವರ್ಷಗಳಿಂದ ದಲಿತ ಚಳುವಳಿಯೊಂದಿಗೆ ನನ್ನ ಸಂಪರ್ಕವಿದೆ. ಆದರೆ ಈಗ ಆ ಸಂಪರ್ಕವಿದೆಯೆಂದು ನಾನು ನಿಜವಾಗಿ ಹೇಳಲಾರೆ. ಯಾಕೆಂದರೆ, ಮುಖ್ಯವಾಗಿ ಈಗ ದಲಿತ ಚಳುವಳಿ ಎಂಬುದೇ ನನಗೆ ಕಾಣುತ್ತಿಲ್ಲ. ಹಾಗೇನಾದರೂ ಅದು ಕಣ್ಣಿಗೆ ಕಾಣುವಂತಿದ್ದರೆ, ಈಗ ಬಹುಜನ ಸಮಾಜ ಪಕ್ಷದ ಸಂಘಟನೆಯ ರೂಪದಲ್ಲಷ್ಟೇ ಕಾಣುತ್ತಿದೆ. ಆದರೆ ಎರಡು-ಮೂರು ದಶಕಗಳಿಂದಲೂ ದಲಿತ ಚಳುವಳಿಯನ್ನು ಸಹಾನುಭೂತಿಯಿಂದ ಗಮನಿಸುತ್ತಾ ಬಂದಿರುವ ನನಗೆ, ಬಹುಜನ ಸಮಾಜ ಪಕ್ಷದ ಯುವ ಸಂಘಟಕರ ಶಿಸ್ತು, ಬದ್ಧತೆ, ಅಂಬೇಡ್ಕರ್‌ವಾದವೆಂದು ಹೇಳಲಾಗುವ ವಿಚಾರಧಾರೆಯ ಉಗ್ರ ಪ್ರತಿಪಾದನೆ ಮತ್ತು ಪೆರಿಯಾರ್, ಜ್ಯೋತಿಬಾ ಪುಲೆ, ಶಾಹು ಮಹಾರಾಜ್ ಹಾಗೂ ಇತ್ತೀಚೆಗೆ ನಾಲ್ವಡಿ ಕೃಷ್ಣರಾಜ ಒಡೆಯರರ ಉಲ್ಲೇಖಗಳ ಹೊರತಾಗಿಯೂ, ಅದನ್ನು ದಲಿತ ಚಳುವಳಿಯೆಂದು ಪರಿಗಣಿಸಲು ಸಾಧ್ಯವಾಗುತ್ತಿಲ್ಲ. ಏಕೆ? ಈ ಪ್ರಶ್ನೆಯ ಹಿಂದೆಯೇ ಅಡಗಿದೆ 'ದಲಿತ ಚಳುವಳಿ: ಮುಂದೇನು?' ಎಂಬ ಪ್ರಶ್ನೆಗೆ ಉತ್ತರ ಎಂದು ನಾನು ಭಾವಿಸಿದ್ದೇನೆ.

೨

ಆಗ –

ದಲಿತ ಸಂಘರ್ಷ ಸಮಿತಿಯ ತಾತ್ವಿಕ ಉದಾರತೆಯ ಉತ್ತುಂಗ ಕಾಲದಲ್ಲಿ ನಿರೂಪಿಸಿರಬಹುದಾದ 'ದಲಿತ' ಪದದ ಅರ್ಥ ವ್ಯಾಪ್ತಿಯ ಯಾವ ಅಳತೆಗೂ ಸಿಗದಂತಹ ಸಾಮಾಜಿಕ ಹಿನ್ನೆಲೆಯುಳ್ಳ ನನಗೆ ದಲಿತ ಚಳುವಳಿ, ನನ್ನ ಚಳುವಳಿ ಅನ್ನಿಸಿತ್ತು. ತಾತ್ವಿಕವಾಗಿ ಸಮಾಜವಾದಿ ಹಿನ್ನೆಲೆಗೆ ಸೇರಿದ ನನಗೆ ಅಂದಿನ ಆ ದಲಿತ ಚಳುವಳಿ ಲೋಹಿಯಾ ನಿಧನಾನಂತರ ಅವನತಿಗೊಂಡಿದ್ದ ಸಮಾಜವಾದಿ ಚಳುವಳಿಯ ಪುನರುಜ್ಜೀವಿತ ರೂಪವಾಗಿ ಕಂಡಿತ್ತು. ಅಸಮಾನತೆಗಳಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೊಂದಿರುವ ಎಲ್ಲ ಚಹರೆಯ 'ದಲಿತ'ರ ಲೌಕಿಕ ಹಾಗೂ ಆಧ್ಯಾತ್ಮಿಕ ನೆಮ್ಮದಿಯ ಗುರಿ ಇಟ್ಟುಕೊಂಡಿದ್ದ ಸಮಾಜವಾದಿ ಚಳುವಳಿಯು ತನ್ನ ಮಧ್ಯಮ ಜಾತಿ-ವರ್ಗಗಳ ಚಹರೆಗಳನ್ನು ಮೀರಿ ಬೆಳೆಯಲಾಗದೆ ಸ್ಥಗಿತಗೊಂಡಿದ್ದ ಸಮಯದಲ್ಲಿ ಹುಟ್ಟಿದ್ದ ಕರ್ನಾಟಕ ದಲಿತ ಚಳುವಳಿ, ನಿಜವಾದ ಸಮಾಜವಾದಿ ಚಳುವಳಿಯಾಗಿ ಬೆಳೆಯುವ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸತೊಡಗಿತ್ತು. ಈ ದಲಿತ ಚಳುವಳಿಯ ನಾಯಕರು ಎಂದೂ

ಜಾತಿವಾದಿಗಳಾಗಿರಲಿಲ್ಲ. ಅವರು ಅಂಬೇಡ್ಕರ್ ಎಂದು ಮಾತನಾಡುತ್ತಿದ್ದರೂ, ಅವರ ಅಂಬೇಡ್ಕರರ ಹಿಂದೆ ಗಾಂಧೀಜಿ, ಲೋಹಿಯಾ, ಮಾರ್ಕ್ಸ್ ಎಲ್ಲರೂ ಇರುತ್ತಿದ್ದರು. ಹಾಗಾಗಿ ಅವರು ನಿಜವಾದ ಸಮಾಜವಾದಿ ಚಳುವಳಿಯ ನಾಯಕರಾಗಲು ಎಲ್ಲ ಅರ್ಹತೆ ಪಡೆದಿದ್ದರು. ಆ ಅರ್ಹತೆಯಲ್ಲಿ ಅಂಬೇಡ್ಕರರ ನೋವು, ಗಾಂಧೀಜಿಯ ವಿಷಾದ, ಲೋಹಿಯಾರ ಪ್ರತಿಭಾ ಶಕ್ತಿ ಹಾಗೂ ಮಾರ್ಕ್ಸ್‌ನ ಕನಸು ಎಲ್ಲ ಸೇರಿದ್ದವು. ಅವರು ಈ ಎಲ್ಲ ಆಯಾಮಗಳೊಂದಿಗೆ ರಾಜ್ಯಾದ್ಯಂತ ಸಂಘಟನೆ ಕಟ್ಟಿದರು. ನಮ್ಮಂತಹವರು ಅವರನ್ನು ಟೀಕಿಸುತ್ತಾ, ವಿಮರ್ಶಿಸುತ್ತಾ, ಬೆಂಬಲಿಸುತ್ತಾ ನಮ್ಮ ಕೈಲಾದ ರೀತಿಯಲ್ಲಿ ಅವರೊಂದಿಗೆ ಕೈಜೋಡಿಸಿದೆವು. ಯಾಕೆಂದರೆ ಜಾತಿ ವ್ಯವಸ್ಥೆ ಮೂಲವಾದ ಎಲ್ಲ ಸಾಮಾಜಿಕ-ಆರ್ಥಿಕ ಪಾಪಗಳಿಂದ ನಮ್ಮೆಲ್ಲರ ಮುಕ್ತಿಯನ್ನೂ ದಲಿತ ಚಳುವಳಿಯ ಯಶಸ್ಸಿನಲ್ಲಿ ನಮ್ಮಂತಹವರು ಕಾಣತೊಡಗಿದ್ದರು. ಸಂಘಟನೆ ಕಟ್ಟುವಾಗ ಅವರು ಕಟ್ಟಿಕೊಂಡು ಹಾಡುತ್ತಿದ್ದ ಹಾಡುಗಳ ಮಾರ್ದವತೆಗೆ ಸೋಲದವನೇ ಪರಮಪಾಪಿ ಎಂದು ನನಗೆ ಆಗ ಎಷ್ಟೋ ಸಲ ಅನ್ನಿಸುತ್ತಿತ್ತು.

'ಕೊಲೆ ಸುಲಿಗೆ ನಾಡಿನಲಿ ಕುಡಗೋಲು, ಅತ್ಯಾಚಾರ; ನಾಡಲ್ಲವೋ ಇದು, ವಿಷದ ಸಮುದ್ರ...!'

ಈಗ-

ಎಲ್ಲಿವೆ ಆ ಹಾಡುಗಳು? ಎಲ್ಲಿ ಹೋಯಿತು ಆ ಮಾರ್ದವತೆ?

೩

೧೯೮೫ರ ಆಸುಪಾಸಿನಲ್ಲಿ ಇರಬೇಕು. ಕೆಮ್ಮಣ್ಣುಗುಂಡಿಯ ಮಂಜಿನ ಮಧ್ಯೆ ಐದಾರು ದಿನಗಳ ದಲಿತ ಶಿಬಿರವೊಂದು ಏರ್ಪಾಡಾಗಿತ್ತು. ಎಂತಹ ಶಿಬಿರವದು! ಲೋಹಿಯಾರಾಗಲೀ, ಅಂಬೇಡ್ಕರರಾಗಲೀ ಅಂತಹ ಶಿಬಿರ ನಡೆಸಿರಲಾರರು... ಅಲ್ಲಿ ಊಟಕ್ಕೆ ಕೊರತೆಯಿತ್ತು, ವಸತಿಗೆ ಕೊರತೆಯಿತ್ತು: ವಿಚಾರಕ್ಕೆ, ವಿಶ್ವಾಸಕ್ಕೆ ಕೊರತೆಯಿರಲಿಲ್ಲ. ಅಲ್ಲಿ ನಾವೆಲ್ಲ ಹೊಚ್ಚ ಹೊಸ ಕರ್ನಾಟಕದ ಕನಸು ಕಂಡೆವು.

ಆದರೆ ಅದೇ ಕೊನೆ... ಮತ್ತೆ ಆ ಕನಸು ಕಾಣದಾಯಿತು... ಆ ಹೊತ್ತಿಗೆ ಸರಿಯಾಗಿ ರೈತ ಸಂಘ ತಲೆ ಎತ್ತಿತ್ತು. ಅದು ತಲೆ ಎತ್ತಿತ್ತಾದರೂ ಹೇಗೆಂದರೆ ಇಡೀ ಕರ್ನಾಟಕ ಅದರ ಕೂಗಿಗೆ ದಂಗು ಬಡಿದಿತ್ತು. ಹಾಗೆ ಬಡಿದ ದಂಗು ದಲಿತ ಚಳುವಳಿಯನ್ನು ವಿಚಲಿತಗೊಳಿಸಿತ್ತು - ಎಷ್ಟರ ಮಟ್ಟಿಗೆ ಅಂದರೆ, ಆ ದಲಿತ ಚಳುವಳಿಯಲ್ಲಿದ್ದ ಪ್ರಮುಖ ನಾಯಕರೊಬ್ಬರು ದಲಿತ ಚಳುವಳಿಯನ್ನು ಮಟ್ಟ ಹಾಕಲೆಂದೇ ರೈತ ಚಳುವಳಿಯನ್ನು ಹುಟ್ಟು ಹಾಕಲಾಯಿತು ಎಂದು, ಇಂದು ಕಾಲದೂರದಲ್ಲಿ ನಿಂತು. ಅರ್ಧ ವಿಷಾದ, ಅರ್ಧ ಸಿಟ್ಟಿನಿಂದ ಆರೋಪಿಸುವಷ್ಟು. ಈ ಆರೋಪಕ್ಕೆ ಇಂದು ಪುರಾವೆಗಳು ಸುಲಭಕ್ಕೆ ಸಿಗಲಾರವು. ಸಿಕ್ಕರೂ ಅವು ಇನ್ನಷ್ಟು ವಾದ-ವಿವಾದಗಳಿಗೆ ಕಾರಣವಾದಾವು. ಆದರೆ ಇಂದು ರೈತ ಚಳುವಳಿಯೊಂದಿಗೆ ಕೈ ಹಿಡಿದು ನಡೆಯಬಯಸಿರುವ ದಲಿತ ಚಳುವಳಿ ಹಾಗೂ ದಲಿತ ಚಳುವಳಿಯೊಂದಿಗೆ ಕೈ ಹಿಡಿದು ನಡೆಯುಬಯಸಿರುವ ರೈತ ಚಳುವಳಿ ಈ ಆರೋಪಕ್ಕೆ ಪುರಾವೆಗಳನ್ನು ಹುಡುಕತೊಡಗುವುದರ ಬದಲಾಗಿ. ಈ ಆರೋಪದ ಹಿಂದಿರುವ ಕಹಿಯ ಮೂಲ ಯಾವುದು ಎಂಬುದನ್ನು ಮುಖ್ಯವಾಗಿ ಪರಿಶೀಲಿಸಬೇಕಾಗಿವೆ.

ಇಪ್ಪತ್ತು ವರ್ಷಗಳ ಹಿಂದೆ ಈ ಚಳುವಳಿಗಳ ಪರ್ವ ಕಾಲದಲ್ಲಿ ನಡೆದ ಪರಸ್ಪರ ತಾತ್ವಿಕ ಮುಖಾಮುಖಿ ಅಮೃತವನ್ನು ಕಡೆಯದೆ ವಿಷವನ್ನೇಕೆ ಕಡೆಯುವಂತಾಯಿತು? ಎರಡೂ ಚಳುವಳಿಗಳನ್ನು ಒಗ್ಗೂಡಿಸಿ ಒಂದು ಗ್ರಾಮ ಚಳುವಳಿಯನ್ನಾಗಿ ರೂಪಿಸುವ ಅಂದಿನ ಆ ಪ್ರಯತ್ನದ ಸಂದರ್ಭದಲ್ಲಿ ಎರಡೂ ಚಳುವಳಿಗಳ ಕೆಲವೇ ಕೆಲವು ನಾಯಕರುಗಳ ಹೊರತಾಗಿ ಮಿಕ್ಕವರೆಲ್ಲರೂ ಈ ಎರಡೂ ಚಳುವಳಿಗಳ ಆಸಕ್ತಿಗಳೇ, ಕಾಳಜಿಗಳೇ, ಗುರಿಗಳೇ, ಕಾರ್ಯಕ್ರಮಗಳೇ ಬೇರೆ ಎಂಬಂತೆ ವರ್ತಿಸಿದುದರ ಹಿಂದಿನ ಕಾರಣವೇನು? ಈ ವಿಫಲ ಪ್ರಯತ್ನದ ನಂತರ ಕ್ರಮೇಣ ಈ ಎರಡೂ ಚಳುವಳಿಗಳು ಛಿದ್ರ–ವಿಚ್ಛಿದ್ರವಾಗುತ್ತಾ ಹೋದವು ಏಕೆ?

ಈ ಬಹು ಮುಖ್ಯ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಈ ಎರಡೂ ಚಳುವಳಿಗಳ ಹಿಂದೆ ಕೆಲಸ ಮಾಡುತ್ತಿದ್ದ ಕರ್ನಾಟಕದ ಸಮಾಜವಾದಿ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕರ್ನಾಟಕದ ಮಟ್ಟಿಗಾದರೂ ಸಮಾಜವಾದಿ ಚಳುವಳಿಯು ನಮ್ಮ ಸಮಾಜದ ಎಲ್ಲ ವಿಷಮತೆಗಳ ಮೂಲವನ್ನು ಜಾತಿಪದ್ಧತಿಯೊಳಗೇ ಇರುವ ವಿಷಮತೆಯಲ್ಲಿ ಗುರುತಿಸಿತ್ತು. ಆದರೆ ಅಂತಹ ಜಾತಿ ಪದ್ಧತಿಗೆ ಚಾರಿತ್ರಿಕವಾಗಿ ಎಲ್ಲರೂ ಸಮಾನ ಉತ್ತರಾಧಿಕಾರಿಗಳಾಗಿದ್ದು; ಹಾಗಾಗಿ ಅದನ್ನು ಎಲ್ಲರೂ ಸಮಾನ ಸಂಕಲ್ಪದೊಡನೆ ಕಿತ್ತು ಹಾಕಲು ಪ್ರಯತ್ನಿಸಿದಾಗ ಮಾತ್ರ ಅದು ಬುಡ ಸಮೇತ ನಾಶವಾಗಬಲ್ಲುದು ಎಂಬ ರಾಜಕೀಯ ವಿವೇಕವನ್ನು ಸಮಾಜವಾದಿ ಚಳುವಳಿ ತೋರಲೇ ಇಲ್ಲ. ಬದಲಾಗಿ ಈ ಜಾತಿ ಪದ್ಧತಿಯಿಂದಾಗಿ ಅನುಭವಿಸಿದ ಚಾರಿತ್ರಿಕ ಲಾಭ ನಷ್ಟಗಳ ಲೆಕ್ಕಾಚಾರವೇ ಸಮಾಜವಾದಿಗಳ ಜಾತಿ ವಿರೋಧಿ ಹೋರಾಟದ ನೀತಿ ಸಂಹಿತೆಯಾಗಿ ರೂಪುಗೊಂಡಿತು. ಜಾತಿ ಪದ್ಧತಿ ಕುರಿತಂತೆ ಲೋಹಿಯಾ ಅವರು ವಿಶ್ವಾತ್ಮಕ ಪರಿಭಾಷೆಯಲ್ಲೇ ಮಂಡಿಸಿದ್ದ ತತ್ವ ಮೀಮಾಂಸೆಯನ್ನು ವಿಚಾರ ಸಂಕಿರಣಗಳಿಗಷ್ಟೇ ಮೀಸಲಿಟ್ಟ ಸಮಾಜವಾದಿಗಳು ತಮ್ಮ ಜಾತಿ ವಿರೋಧಿ ಕಾರ್ಯಕ್ರಮಗಳಿಗೆ, ಬ್ರಾಹ್ಮಣ ವಿರೋಧವನ್ನೇ ಮುಖ್ಯ ನೆಲೆಯನ್ನಾಗಿ ಮಾಡಿಕೊಂಡರು. ಜಾತಿ ಪದ್ಧತಿಯ ಮೂಲದಲ್ಲಿ ಬ್ರಾಹ್ಮಣನಿರುವನೆಂದೂ, ಆ ಬ್ರಾಹ್ಮಣನನ್ನು ನಿರ್ಮೂಲ ಮಾಡಿದರೆ ಜಾತಿ ಪದ್ಧತಿ ನಾಶವಾಗುವುದೆಂಬ ಪೆರಿಯಾರ್ ಚಳುವಳಿಯ ಸುಲಭ–ಸರಳವಾದ ಮತ್ತು ಕೇವಲ ಭಾವನಾತ್ಮಕವಾದ ನಿಲುವಿಗೆ ಸಮಾಜವಾದಿ ಚಳುವಳಿ ಬಲಿಯಾಯಿತು. ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿನ ಪೆರಿಯಾರ್ ಮೂಲದ 'ವಿಚಾರವಾದಿ ಚಳುವಳಿ'ಯ ಬಹುತೇಕ ನಾಯಕರು ಸಮಾಜವಾದಿ ಚಳುವಳಿಯ ನಾಯಕರೇ ಆಗಿದ್ದುದು ಆಕಸ್ಮಿಕವೇನಲ್ಲ. ಇದು ಸಮಾಜವಾದವನ್ನು ಬ್ರಾಹ್ಮಣೇತರವಾದವನ್ನಾಗಿ ಕುಬ್ಜಗೊಳಿಸುವಲ್ಲಿ ಮಾತ್ರ ಯಶಸ್ವಿಯಾಯಿತು. ಇದರಿಂದಾದ ದೊಡ್ಡ ದುರಂತವೆಂದರೆ ಸಮಾಜವಾದಿ ಚಳುವಳಿಯೊಳಗೆ ಜಾತಿ ಪದ್ಧತಿಯು ಗಾಯಗೊಂಡ ಕ್ರೂರ ಮೃಗದಂತೆ ಅಡ್ಡಾಡುತ್ತಾ ಸಮಾಜವಾದಿಗಳನ್ನು ಘಾಸಿಗೊಳಿಸತೊಡಗಿತು. ಬ್ರಾಹ್ಮಣ ವಿರೋಧವು ಬ್ರಾಹ್ಮಣ ವಿರೋಧವಾಗಿ ಮಾತ್ರ ಉಳಿಯದೆ ಪ್ರತಿಯೊಂದು ಕೆಳ ಜಾತಿಯೂ ತನ್ನ ಮೇಲಿನ ಪ್ರತಿಯೊಂದು ಜಾತಿಯನ್ನೂ ಶತ್ರು ಪಾಳೆಯದಂತೆ ನೋಡುವ ಪ್ರವೃತ್ತಿಗೆ ದಾರಿ ಮಾಡಿಕೊಟ್ಟಿತು. ಸಮಾಜವಾದಿ ಚಳುವಳಿ ಸಮಗ್ರ ನೋಟವನ್ನೇ ಕಳೆದುಕೊಂಡು ತನ್ನ ಮನಸ್ಸನ್ನು ಒಡೆದುಕೊಂಡಿತು. ಈ ಒಡಕುಗಳಲ್ಲೇ ದಲಿತ ಚಳುವಳಿ, ಹಿಂದುಳಿದ

ವರ್ಗಗಳ ಚಳುವಳಿ, ಕನ್ನಡ ಚಳುವಳಿ ಹಾಗೂ ರೈತ ಚಳುವಳಿಗಳು ಹುಟ್ಟಿಕೊಂಡಿದ್ದು. ಗತಿಗೆಟ್ಟ ಕೆಲವು ಸಮಾಜವಾದಿಗಳು ಇವೆಲ್ಲವನ್ನೂ ಸಮಾಜವಾದಿ ಚಳುವಳಿಗಳು ಎಂದು ಗುರುತಿಸಿಕೊಂಡು ಹೆಮ್ಮೆ ಪಡುವುದುಂಟು.

೪

ಈ ಎಲ್ಲ ವಿಪರ್ಯಾಸಗಳ ನಡುವೆ ನನ್ನಂತಹವರನ್ನು ಕಾಡುವ ಬಹು ಮುಖ್ಯ ಪ್ರಶ್ನೆ ಎಂದರೆ, ಮೂಲತಃ ಲೌಕಿಕವಾಗಷ್ಟೇ – 'ವೈಜ್ಞಾನಿಕ'ವೆಂದು ಹೇಳಲಾಗುವ ಬೆಲೆಯ ಆಗ್ರಹದ ಸುತ್ತ – ಬೆಳೆದ ರೈತ ಚಳುವಳಿಯು ದಲಿತ ಚಳುವಳಿಯನ್ನು ಪರಸ್ಪರ ಆ ಮುಖಾಮುಖಿಯಲ್ಲಿ ತನ್ನ ದಾರಿಗೆ ಅಡ್ಡಬಿದ್ದಿದ್ದ ಆಂಜನೇಯನ ಬಾಲವನ್ನು ನೋಡಿ ಅಸಹನೆಗೊಂಡ ಭೀಮನಂತೆ ವರ್ತಿಸಿದ್ದು ಆಶ್ಚರ್ಯಕರವಲ್ಲವಾದರೂ; ಪರಂಪರೆಯ ನೋವು–ವಿಷಾದಗಳನ್ನು ತುಂಬಿಕೊಂಡೇ ಬೆಳೆದ ದಲಿತ ಚಳುವಳಿಯು ರೈತ ಚಳುವಳಿಯೊಂದಿಗೆ ಆಂಜನೇಯನಂತೆ ಹಿರಿಯನ ಮಾರ್ದವತೆಯೊಂದಿಗೆ ಏಕೆ ವರ್ತಿಸಲಾಗಲಿಲ್ಲ ಎಂಬುದು. ದಲಿತ ಸಂಘರ್ಷ ಸಮಿತಿಯು ರೈತ ಸಂಘದೊಂದಿಗೆ ಜಗಳಕ್ಕಿಳಿಯದೆ ಅದನ್ನು ಪಳಗಿಸುವ ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನೇಕೆ ಪ್ರದರ್ಶಿಸಲಾಗಲಿಲ್ಲ? ನನ್ನ ಅನುಮಾನ, ತನ್ನೆಲ್ಲ ಹಾಡು–ಹೋರಾಟಗಳ ಹೊರತಾಗಿಯೂ ದಲಿತ ಚಳುವಳಿಗೆ ಆತ್ಯಂತಿಕವಾಗಿ ಜಾತಿ ಪದ್ಧತಿಯ ಭಯದಿಂದ ಬಿಡುಗಡೆ ಸಿಕ್ಕಿರಲಿಲ್ಲ. ಹಾಗಾಗಿಯೇ ಅದು ಈ ನಿರ್ಣಾಯಕ ಸಂದರ್ಭದಲ್ಲಿಯೂ ರೈತ ಸಂಘದ ಆರ್ಭಟಕ್ಕೆ ತಲ್ಲಣಗೊಂಡು ಅದನ್ನು ಗುಮಾನಿಯಿಂದ ನೋಡುವಂತಾಯಿತು. ಇದು ಜಾತಿ ಪದ್ಧತಿಯ ಸಮಸ್ಯೆಯನ್ನು ಇಡಿಯಾಗಿ ಮುಖಾಮುಖಿಯಾಗಿಸಿಕೊಂಡು ಅದನ್ನು ಸಂಪೂರ್ಣವಾಗಿ ಪರಿಹರಿಸಿಕೊಳ್ಳುವಲ್ಲಿ ಗಂಭೀರ ಪ್ರಯತ್ನ ಮಾಡದ ಸಮಾಜವಾದಿ ಚಳುವಳಿಯ ಸೋಲೆಂದೇ ನಾನು ಗುರುತಿಸ ಬಯಸುವೆ. ಅರ್ಧಂಬರ್ಧ ಹೊಡೆದು ಹಾಕಲ್ಪಟ್ಟಿರುವ ಜಾತಿ ಪದ್ಧತಿಯೆಂಬ ಹಾವು, ಇಂದು ಟಿಸಿಲು ಟಿಸಿಲಾಗಿ ಒಡೆದು ಹೋಗಿರುವ ಸಮಾಜವಾದಿ ಚಳುವಳಿಯನ್ನು ಆಗಾಗ–ನಿರ್ಣಾಯಕ ಸಂದರ್ಭಗಳಲ್ಲಿ–ಕಚ್ಚುತ್ತಾ ಎಚ್ಚರ ತಪ್ಪಿಸುತ್ತಲೇ ಇದೆ. ಆದರೆ ಒರಟಾದ ಸಮಕಾಲೀನ ರಾಜಕಾರಣದಲ್ಲಿ ತಮ್ಮ ಸೂಕ್ಷ್ಮತೆಯನ್ನೇ ಕಳೆದುಕೊಂಡಂತಿರುವ ಸಮಾಜವಾದಿಗಳು ಪ್ರತಿ ಬಾರಿ ಎಚ್ಚರ ತಪ್ಪಿದಾಗಲೂ ಬೇರೇನನ್ನೋ ಕಾರಣಗಳನ್ನು ಹುಡುಕುತ್ತಾ ಕ್ರಮೇಣ ಸ್ವತಃ ತಾವೇ ಕಳೆದು ಹೋಗುತ್ತಿದ್ದಾರೆ. ದಲಿತ–ರೈತ ಚಳುವಳಿಗಳು ಕಳೆದು ಹೋಗಿರುವುದೂ ಹೀಗೇ– ಎಚ್ಚರ ತಪ್ಪಿ, ತಪ್ಪಿ, ದಿಕ್ಕೆಟ್ಟು ಅಲೆಯುತ್ತಿವೆ. ದಲಿತ ಚಳುವಳಿಗೆ ರೈತ ಚಳುವಳಿಯೇ ದಿಕ್ಕು, ರೈತ ಚಳುವಳಿಗಳಿಗೆ ದಲಿತ ಚಳುವಳಿಯೇ ದಿಕ್ಕು ಎಂಬ ಅರಿವು ಮೂಡಿದಾಗ ಮಾತ್ರ ಇವೆರಡೂ ಒಂದಾಗಿ ಜನರ ಕಣ್ಣಿಗೆ ಕಾಣಿಸಬಲ್ಲವು. ಈ ಎರಡೂ ಚಳುವಳಿಗಳ ಮನಸ್ಸುಗಳು ಜಾತಿ ಪದ್ಧತಿಯ ಒಳಸುಳಿಗಳಿಂದ ಬಿಡುಗಡೆಗೊಂಡಾಗ ಮಾತ್ರ ಈ ಅರಿವು ಮೂಡಬಲ್ಲುದು. ಜಾಗತೀಕರಣದ ಸವಾಲುಗಳನ್ನು ಎದುರಿಸಲು ಒಗ್ಗಟ್ಟಾಗಿ ಹೊರಟಿರುವ ಈ ಚಳುವಳಿಗಳು ಈ ಒಗ್ಗಟ್ಟಾಗುವ ಕ್ರಮದಲ್ಲೇ ಈ ಬಿಡುಗಡೆಗೂ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕು. ಇವಕ್ಕಾಗಿ ಎರಡೂ

ಚಳುವಳಿಗಳಿಗೂ ಗಾಂಧಿ–ಲೋಹಿಯಾ–ಅಂಬೇಡ್ಕರ್ ಸಮಾನ ಹಾಗೂ ಸಾಮಾನ್ಯ ನಾಯಕರಾಗಬೇಕು.

೫

ಈ ಹಿನ್ನೆಲೆಯಲ್ಲಿ ನೋಡಿದಾಗ ಬಹುಜನ ಸಮಾಜ ಪಕ್ಷದ ನಿಲುವು – ಸಂಘಟನೆಗಳ ಮಿತಿಗಳು ಗೊತ್ತಾಗುತ್ತವೆ. ದುರಂತವೆಂದರೆ ಸಮಾಜವಾದಿ ಚಳುವಳಿಗೆ ಯಾವ ಜಾತಿ ಪದ್ಧತಿ ಉರುಳಾಗಿ ಪರಿಣಮಿಸಿದೆಯೋ ಅದನ್ನೇ ಬಹುಜನ ಸಮಾಜ ಪಕ್ಷ ಆಭರಣವೆಂಬಂತೆ ಧರಿಸಿಕೊಳ್ಳುತ್ತಿರುವುದು. ಹಾಗೆ ನೋಡಿದರೆ ದಲಿತ ಚಳುವಳಿ ಎಚ್ಚರ ತಪ್ಪಿದುದರ ಒಂದು ಪರಿಣಾಮವಾಗಿಯೇ ಕರ್ನಾಟಕದಲ್ಲಿ ಬಹುಜನ ಪಕ್ಷದ ಸಂಘಟನೆ ಆರಂಭವಾಯಿತೆಂದು ಹೇಳಬೇಕು. ಜಾತಿ ಪದ್ಧತಿಯ ಚರಿತ್ರೆಯನ್ನೇ ತನ್ನ ಸಿದ್ಧಾಂತವನ್ನಾಗಿ ಸ್ವೀಕರಿಸಿ ಆ ಕಹಿ ಚರಿತ್ರೆಯ ಮೇಲೇ ಬಹುಜನರ ಭವಿಷ್ಯವನ್ನು ನಿರ್ಮಿಸಹೊರಟಿರುವ ಈ ಸಂಘಟನೆಗೆ ಮನುಷ್ಯನು ಚರಿತ್ರೆಗೆ ಮಾತ್ರ ಸೇರಿದವನಲ್ಲ, ಅವನು ವರ್ತಮಾನದಲ್ಲೂ ಇರುತ್ತಾ ಅವೆರಡನ್ನೂ ಮೀರುವುದರಲ್ಲೇ ಭವಿಷ್ಯವನ್ನು ನಿರ್ಮಿಸುತ್ತಿರುತ್ತಾನೆ ಎಂಬ ಪ್ರಾಥಮಿಕ ಅರಿವೂ ಇದ್ದಂತಿಲ್ಲ. ನೆನಪುಗಳು – ಅವು ಕಹಿಯಾಗೇ, ಸಿಹಿಯಾಗೇ ಇರಲಿ – ಅವುಗಳನ್ನಷ್ಟೇ ಆಧರಿಸಿ ಒಂದು ರಾಜಕೀಯ ತತ್ವಜ್ಞಾನವನ್ನು ರೂಪಿಸಲಾಗುವುದಿಲ್ಲ. ಹಾಗೆ ರೂಪಿಸಹೊರಟವರು ವರ್ತಮಾನದ ನಿಷ್ಠುರ ಹೆಜ್ಜೆಗಳ ತೊತ್ತಳದುಳಿತಕ್ಕೆ ಸಿಕ್ಕಿ ಭವಿಷ್ಯವನ್ನೇ ಕಾಣದ ದುರಂತಕ್ಕೀಡಾಗುವರು. ಹಾಲು ಕುಡಿದ ಮಕ್ಕಳೇ ಬದುಕುತ್ತಿಲ್ಲ; ಇನ್ನು ವಿಷ ಕುಡಿಯಲೆಳಸುವ ಮಕ್ಕಳು? ಹೀಗಿರುವಾಗ ಪ್ರಜ್ಞಾಪೂರ್ವಕವಾಗಿಯೇ ಒಂದು ಜನಸಮೂಹವನ್ನು ದುರಂತದೆಡೆಗೆ ಒಯ್ಯಲಾಗುತ್ತಿರುವ ಪ್ರಯತ್ನವನ್ನು ದಲಿತ ಚಳುವಳಿಯೆಂದೋ ಮತ್ತೊಂದು ಚಳುವಳಿಯೆಂದೋ ಹೇಗೆ ಕರೆಯಲಾದೀತು?

(ಮೈಸೂರಿನ ಲೀಗಲ್ ಫೋರಂನ ವಾರ್ಷಿಕ ಸ್ಮರಣ ಸಂಚಿಕೆ 'ಪಯಣ'ಕ್ಕಾಗಿ ಬರೆದ ಲೇಖನ– ೨೦೦೫; ಶಿವಮೊಗ್ಗದಲ್ಲಿ ನಡೆದ ದಲಿತ ಲೇಖಕ ಕಲಾವಿದರ ಸಂಘದ ಸಮಾವೇಶದ ಸ್ಮರಣ ಸಂಚಿಕೆ 'ಮೈತ್ರಿ'ಯಲ್ಲೂ ಪ್ರಕಟವಾಗಿದೆ)

ಮಾರ್ಕ್ಸ್, ಗಾಂಧಿ ಮತ್ತು ಲೋಹಿಯಾ

ಅಣುಬಾಂಬು ಮತ್ತು ಗಾಂಧೀಜಿ ಈ ಶತಮಾನದ ಎರಡು ಅದ್ಭುತಗಳೆಂದು ತಾವು ಪರಿಗಣಿಸುವುದಾಗಿ ಲೋಹಿಯಾ ಒಂದು ಕಡೆ ಹೇಳಿದ್ದಾರೆ.. ಯಾರಾದರೊಮ್ಮೆ ಅವರನ್ನು ಈ ಹಿಂದಿನ ಶತಮಾನದ ಅದ್ಭುತಗಳ ಬಗ್ಗೆ ಕೇಳಿದ್ದರೆ, ಅವರು ಬಹುಶಃ ಮಾರ್ಕ್ಸ್‌ನನ್ನು ಹೆಸರಿಸುತ್ತಿದ್ದರೇನೋ. ಲೋಹಿಯಾ ತತ್ವ ಪ್ರಣಾಳಿಕೆಯ ಪ್ರಮುಖ ಪ್ರಚೋದನಾ ಶಕ್ತಿ ಮಾರ್ಕ್ಸ್‌ವಾದವೇ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಈ ಊಹೆಯಷ್ಟೆ. ಲೋಹಿಯಾ ಪ್ರಕಾರ ಅಣುಬಾಂಬು ಒಂದು ನಾಗರೀಕತೆಯ ಅವನತಿಯ ಪ್ರತೀಕವಾದರೆ, ಗಾಂಧೀಜಿ ಅಲ್ಲೇ ಹೊಸ ಚಿಗುರು ಕಾಣಿಸಿಕೊಂಡಿರುವುದರ ಸಂಕೇತ. ಇಲ್ಲಿ ಮಾರ್ಕ್ಸ್‌ನ ಸ್ಥಾನ, ಈ ಅವನತಿಗೊಳ್ಳುತ್ತಿರುವ ನಾಗರೀಕತೆಯಲ್ಲಿನ ದುರಂತ ನಾಯಕನದ್ದು, ತನ್ನನ್ನು ರೂಪಿಸಿದ ಅವನತಿಶೀಲ ನಾಗರೀಕತೆಗೆ ಪುನಶ್ಚೇತನ ನೀಡುವ ಅವನ ಪ್ರಯತ್ನವು ಅವನ ಕಾಲ ಮತ್ತು ಭೂ-ಖಂಡ ಅವನ ಮೇಲೆ ಹೇರಿದ ಪರಿಮಿತಿಗಳಿಂದಾಗಿ ಹಾಗೂ ಅವನಲ್ಲಿ ಉಂಟುಮಾಡಿದ ದೃಷ್ಟಿದೋಷಗಳಿಂದಾಗಿ ವಿಕೃತಗೊಂಡು ವಿಫಲವಾಗಿದೆ. ಆದರೆ ಅವನ ಈ ವೈಫಲ್ಯವೂ ಪರೋಕ್ಷವಾಗಿ ಅನೇಕ ಅನನ್ವೇಷಿತ ಜಾಗತಿಕ ನಿಜಗಳನ್ನು ಅರಿತುಕೊಳ್ಳಲು ಸಹಾಯಕವಾಗಿದೆ ಎಂಬ ಮಟ್ಟಿಗೆ ಬಹು ಮುಖ್ಯದ್ದಾಗಿದೆ.

ಹಾಗೆ ನೋಡಿದರೆ ಗಾಂಧೀಜಿಯದ್ದೂ ಸಂಪೂರ್ಣ ಯಶಸ್ಸೇನಲ್ಲ. ಅವರ ಹಿಂದೂ ಮನಸ್ಸಿನ ಸಾರ್ವತ್ರಿಕ ಮೌಲ್ಯಗಳ ವಲಯ ಅವರಿಗೆ ಹೇಗೆ ಯಶಸ್ಸು ತಂದು ಕೊಟ್ಟಿತೋ ಹಾಗೆ ಅದರ ಸಂಕುಚಿತ ಮೌಲ್ಯಗಳ ವಲಯ, ಆ ಯಶಸ್ಸನ್ನು ಸಂದೇಹದ ಕಣ್ಣುಗಳಿಂದ ನೋಡುವಂತೆ ಮಾಡಿದೆ. ಮಾರ್ಕ್ಸ್, ಯುರೋಪಿನ ಮಟ್ಟಿಗೆ ಕ್ರಾಂತಿಕಾರಿಯಾಗಿಯೂ, ಜಗತ್ತಿನ ಮಟ್ಟಿಗೆ ಸುಧಾರಣಾವಾದಿಯಾಗಿಯೂ ಕಂಡರೆ; ಗಾಂಧೀಜಿ ಜಗತ್ತಿನ ಮಟ್ಟಿಗೆ ಕ್ರಾಂತಿಕಾರಿಯಾಗಿಯೂ ಇಂಡಿಯಾದ ಮಟ್ಟಿಗೆ ಸುಧಾರಣಾವಾದಿಯಾಗಿಯೂ ಕಾಣುತ್ತಾರೆ. ಮಾರ್ಕ್ಸ್‌ನ ಸುಧಾರಣಾವಾದಿ ಬಿಂಬಕ್ಕೆ ಆತ ವಸಾಹತುಶಾಹಿಯ ಶೋಷಣೆಯನ್ನು ಅದರೆಲ್ಲಾ ಆಯಾಮಗಳೊಡನೆ ಅರ್ಥಮಾಡಿಕೊಳ್ಳಲಾಗದೇ ಹೋದದ್ದೇ ಕಾರಣವಾದರೆ,* ಗಾಂಧೀಜಿಯ ಸುಧಾರಣಾವಾದಿ ಬಿಂಬಕ್ಕೆ ಅವರು ಜಾತಿ ಶೋಷಣೆಯನ್ನು ಅದರೆಲ್ಲಾ ಆಯಾಮಗಳೊಂದಿಗೆ ಅರ್ಥಮಾಡಿಕೊಳ್ಳದೇ ಹೋದದ್ದೇ ಕಾರಣವಾಗಿದೆ.

ಆದರೆ ಈ ಕಾರಣಗಳು ಈ ಇಬ್ಬರು ಮಹಾನ್ ವ್ಯಕ್ತಿಗಳಲ್ಲಿನ ಭಾಗಶಃ ಸುಧಾರಣಾವಾದಿತ್ವವನ್ನು ವಿವರಿಸುತ್ತವೆಯೇ ಹೊರತು, ಇವರಿಬ್ಬರೊಳಗಿನ ಕ್ರಾಂತಿಕಾರೀ ಸುಧಾರಣಾವಾದೀ ವಿಭಜನೆಯ ಆ ನೆಲೆಗಳನ್ನು ಗುರುತಿಸುವುದಿಲ್ಲ. ದ್ವಂದ್ವಗಳ ಬಗ್ಗೆ ಸೂಚನೆ ಕೊಡುವುದಿಲ್ಲ. ಈ ವಿಭಜನೆಯ ನೆಲೆಗಳನ್ನು ಗುರುತಿಸಿ, ಈ ದ್ವಂದ್ವಗಳನ್ನು ಹತ್ತಿಕ್ಕುವ ಸಂಯೋಜನೆಯ ಒಂದು ಪ್ರಯೋಗ ನಡೆಸಿದ್ದೇ ಡಾ॥ ಲೋಹಿಯಾ ಅವರ

ಹೆಗ್ಗಳಿಕೆಯಾಗಿದೆ. ಈ ಪ್ರಯೋಗದ ಆರಂಭದಲ್ಲೇ ಅವರು ಈ ಮಾತುಗಳನ್ನು ಆಡಿದ್ದು: "ನಾನು ಗಾಂಧಿವಾದಿ ಎಂದಾಗಲಿ ಅಥವಾ ಮಾರ್ಕ್ಸ್‌ವಾದಿ ಎಂದಾಗಲಿ ಹೇಳಿಕೊಳ್ಳುವುದು ಬರೀ ಹುಂಬತನ; ಹಾಗೆಯೇ ಗಾಂಧಿ ವಿರೋಧಿ ಅಥವಾ ಮಾರ್ಕ್ಸ್ ವಿರೋಧಿ ಎಂದು ಹೇಳಿಕೊಳ್ಳುವುದು ಕೂಡಾ. ಕಲಿಯಲು ಮಾರ್ಕ್ಸ್‌ನಿಂದಷ್ಟೇ ಗಾಂಧಿಯಿಂದಲೂ ಅಮೂಲ್ಯ ವೈಚಾರಿಕ ರಾಶಿ ಇದೆ ನಿಜ, ಆದರೆ ಕಲಿಯುವುದು, ಕಲಿಯುವವನ ದೃಷ್ಟಿ ಚೌಕಟ್ಟು ಒಂದು ಕಾಲ ಅಥವಾ ಒಂದು ವ್ಯಕ್ತಿಗಷ್ಟೇ ಸೀಮಿತವಾಗದಿದ್ದಾಗ ಮಾತ್ರ ಸಾಧ್ಯ. ಸಂಶೋಧಕರು ಯಾವುದೇ ಒಂದು ವ್ಯಕ್ತಿಯ ವಿಚಾರಗಳ್ನು ಸದಾ ವಿಮರ್ಶೆಗೆ ಒಳಪಡಿಸುತ್ತಲೇ ಇರಬೇಕು. ವಿಶೇಷತಃ ಆ ಒಂದು ವ್ಯಕ್ತಿ ಮಾರ್ಕ್ಸ್ ಅಥವಾ ಗಾಂಧಿ ಆಗಿದ್ದಲ್ಲಿ"

ಮಾರ್ಕ್ಸ್‌ವಾದದ ಜಾಗತಿಕ ಸ್ವರೂಪದ ವೈಫಲ್ಯ ಇರುವುದು ಬಂಡವಾಳಶಾಹಿ ಕುರಿತ ಅದರ ವಿಶ್ಲೇಷಣೆಯಲ್ಲಿ. ಮಾರ್ಕ್ಸ್‌ನ ಪ್ರಕಾರ ಬಂಡವಾಳಶಾಹಿಯು ವಿಕಾಸ ಹಂತದಲ್ಲಿ ಪ್ರಗತಿಪರವಾಗಿತ್ತು. ಏಕೆಂದರೆ ಅದು ತಂತ್ರಜ್ಞಾನ ಹಾಗೂ ಬೃಹತ್ ಕೈಗಾರಿಕೆಗಳ ಆವಿಷ್ಕಾರ ರೂಪದಲ್ಲಿ ಮನುಷ್ಯನನ್ನು ನಾಗರೀಕನನ್ನಾಗಿ ಮಾಡತೊಡಗಿತ್ತು. ಅಪಾರ ಕ್ರತುಶಕ್ತಿಯ ಈ ತಂತ್ರಜ್ಞಾನ ಮನುಷ್ಯನ ಸಂಪೂರ್ಣ ಅಗತ್ಯಗಳನ್ನು ಈಡೇರಿಸಿ ಸಂತೃಪ್ತಗೊಳಿಸುತ್ತದೆಂದು ಮಾರ್ಕ್ಸ್ ಬಗೆದಿದ್ದ. ಆದರೆ ನಿಜ ವಾಸ್ತವವಾದರೂ ಏನು? ಮಾರ್ಕ್ಸ್ 'ಅಪಾರ ಕೃತುಶಕ್ತಿಯ ತಂತ್ರಜ್ಞಾನ' ಹಾಗೂ 'ಸಂತೃಪ್ತ ಮನುಷ್ಯ' ಎಂದೆಲ್ಲಾ ಮಾತಾಡುತ್ತಿದ್ದಾಗ ಅವನ ಕಲ್ಪನೆಗಳಲ್ಲಿ ತೇಲಾಡುತ್ತಿದ್ದ ತಂತ್ರಜ್ಞಾನ ಹಾಗೂ ಮನುಷ್ಯ ಎಲ್ಲಿಯವು? ಈವರೆಗೆ ಇಂಡಿಯಾದ ಯಾವ ಘನ ಕಮ್ಯೂನಿಸ್ಟನನ್ನೂ ಈ ಪ್ರಶ್ನೆಗಳನ್ನು ಕಾಡಿಲ್ಲವೆಂಬ ಅಂಶ (ಕೈ ಬೆರಳೆಣಿಕೆಯಷ್ಟಿರುವ ಮತ್ತು ತಮ್ಮನ್ನು ನವ ಮಾರ್ಕ್ಸವಾದಿಗಳೆಂದು ಕರೆದು ಕೊಳ್ಳುವ ಒಂದು ಗುಂಪು ಇತ್ತೀಚೆಗೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳತೊಡಗಿದೆ.) ಇಂಡಿಯಾದ ಕಮ್ಯುನಿಸಂನ ಭೌದ್ಧಿಕ ಘನವಂತಿಕೆ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಜಾಗತಿಕ ಆಶಯದ ಮಾರ್ಕ್ಸನನ್ನು ಬರೀ ಯುರೋಪಿನ ವಾಸ್ತವಕ್ಕಷ್ಟೇ ಕಟ್ಟಿ ಹಾಕಿದ ಅಂಶವೆಂದರೆ, ಆತ ಬಂಡವಾಳಶಾಹಿಯನ್ನು ಒಂದು ಆರ್ಥಿಕ ವಿದ್ಯಮಾನವೆಂದಷ್ಟೇ ಅರ್ಥ ಮಾಡಿಕೊಂಡನೇ ಹೊರತು ಆತನಿಗೆ ಅದರ ರಾಜಕೀಯ ಸ್ವರೂವನ್ನು ಕಾಣಲಾಗಲೇ ಇಲ್ಲ ಎಂಬುದು. ಬಂಡವಾಳಶಾಹಿಯ ಪ್ರತ್ಯಕ್ಷ ಪ್ರಚಂಡಶಕ್ತಿಗೆ ಮಾರುಹೋದ ಮಾರ್ಕ್ಸ್,

---

* ಮಾರ್ಕ್ಸ್‌ನ ಸೈದ್ಧಾಂತಿಕ ಉತ್ತರಾಧಿಕಾರಿಗಳೆಂದು ಹೇಳಲಾಗುವ ಲೆನಿನ್, ಸ್ಟಾಲಿನ್ ಮತ್ತು ಮಾವೋ ಅವರುಗಳು ಮಾರ್ಕ್ಸ್‌ನ ಈ ಕೊರತೆಗಳನ್ನು ತುಂಬಿದ್ದಾರೆ ಎಂದು ಹೇಳುವ ಕೆಲವು ಜನ ಒಂದು ವಿಷಯವನ್ನು ಮರೆಯುತ್ತಾರೆ. ಲೆನಿನ್, ಸ್ಟಾಲಿನ್ ಮತ್ತು ಮಾವೋ ತಂತಮ್ಮ ರಾಷ್ಟ್ರೀಯ ಸೀಮೆಗಳೊಳಗೆ ತಮ್ಮದೇ ಆದ ತಂತ್ರಗಳ ಮೂಲಕ ಸಾಧಿಸಿದ ಜಯಗಳಿಗೆ ಸೈದ್ಧಾಂತಿಕ ಸಮರ್ಥನೆಗಳಿಗಾಗಿ ಪ್ರಚುರ ಪಡಿಸಿದ 'ವಿಚಾರಗಳು' ನಿಜವಾದ ಅರ್ಥದಲ್ಲಿ ಹುಟ್ಟಿಕೊಂಡ ಈ ವಿಚಾರವೇಷದ ಸಮರ್ಥನೆಗಳು, ಕೇವಲ ರಾಷ್ಟ್ರೀಯ ಹಿತಾಸಕ್ತಿಗಳ ಚೌಕಟ್ಟಿನಲ್ಲಿ ಹುಟ್ಟಿಕೊಂಡ ಈ ವಿಚಾರವೇಷದ ಸಮರ್ಥನೆಗಳು ಜಾಗತಿಕ ಹಿತದ 'ಆಶಯವುಳ್ಳ ಮಾರ್ಕ್ಸ್‌ವಾದದೊಡನೆ ಸಾವಯವವಾಗಿ ಬೆರೆಯಲಾರೆವು.

ಈ ಪ್ರಚಂಡ ಶಕ್ತಿಯ ಮೂಲ ಯಾವುದು, ಈ ಪ್ರಚಂಡ ಶಕ್ತಿ ತಂತಾನೇ ಉದ್ಭವವಾಯಿತೇ ಅಥವಾ ಇದರಲ್ಲಿ ಪರೋಕ್ಷ ಸುಲಿಗೆಯೇನಾದರೂ ಅಡಗಿದೆಯೋ ಎಂಬ ವಿಮರ್ಶೆಗೆ ಹೋಗಲಿಲ್ಲ. ಬಹುಶಃ ಈ ವಿಮರ್ಶಾಹೀನತೆಗೆ ಕಾರಣ, ಮಾರ್ಕ್ಸನು ಮೂಲತಃ ಯುರೋಪಿನ ವಿದ್ಯಮಾನವಾಗಿದ್ದ ಬಂಡವಾಳಶಾಹಿಯನ್ನು ಒಂದು ಜಾಗತಿಕ ವಿದ್ಯಮಾನವೆಂದು ಹಿಗ್ಗಲಿಸಿ ವಿಶ್ಲೇಷಣೆಗೆ ತೊಡಗಿದ್ದು. ಆದರೆ ನಿಜ ವಾಸ್ತವ ಎಂದರೆ, ಬಂಡವಾಳಶಾಹಿಯು ತನ್ನ ಮೊದಲ ಸಾಧನೆ ಯಾದ ಬ್ರಿಟನ್ನಿನಬಟ್ಟೆ ಗಿರಣಿಯಿಂದ ಹಿಡಿದು ಕೊನೆಯ ಸಾಧನೆಯಾದ ಅಮೇರಿಕಾದ ಅಣುಬಾಂಬಿನವರೆಗೂ ವಸಾಹತುಶಾಹಿ ಪೂರೈಸಿದ ರಕ್ತವನ್ನು ಕುಡಿದೇ ಬೆಳೆದಿದೆ. ಲೋಹಿಯಾ ಪ್ರಕಾರ ವಸಾಹತುಶಾಹಿ ಇಲ್ಲದ ಬಂಡವಾಳಶಾಹಿ ಎಂಬುದೇ ಇಲ್ಲ; ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗಳದ್ದು ಅವಳಿ ಜವಳಿ ಜನನ. ಬಂಡವಾಳ ಶಾಹಿಯ ಉಗಮದ ಬಗ್ಗೆ ಅವರು ಹೀಗೆ ಬರೆಯುತ್ತಾರೆ;

"ಬಂಡವಾಳಶಾಹಿ ಮೊದಲು ತಲೆ ಎತ್ತಿದ್ದು ೧೮ನೇ ಶತಮಾನದ ಉತ್ತರಾರ್ಧದಲ್ಲಿ. ಇಂಗ್ಲೆಂಡ್‌ನಲ್ಲಿ. ಸ್ಪ್ಯಾನಿಷ ಹಡಗುಗಳ ಕೊಳ್ಳೆ, ಬಂಗಾಳದಿಂದ ವರಮಾನ ಮತ್ತು ಸ್ವತಃ ಬ್ರಿಟನ್‌ನಲ್ಲೇ ರೈತರನ್ನು ಸಾರ್ವಜನಿಕ ಭೂಮಿಯಿಂದ ಹೊಡೆದೋಡಿಸಿದ್ದು-ಇವೆಲ್ಲಾ ಸೇರಿ ಬಂಡವಾಳಶಾಹಿ ಪೂರ್ವಸಂಪತ್ತು ಶೇಖರಣೆಯಾಗಿತ್ತು. ಬಂಡವಾಳಶಾಹಿ ತಾಂತ್ರಿಕ ಆಧಾರವಾದ ಯಂತ್ರಜ್ಞಾನವನ್ನು ಬಳಸಿದ ಮೊದಲ ಕೈಗಾರಿಕೆ ಎಂದರೆ ಜವಳಿ ಗಿರಣಿಗಳು. ಈ ಲ್ಯಾಂಕಾಷ್ಯೆರ್ ಕೈಗಾರಿಕೆ ಆರಂಭವಾಗುತ್ತಿದ್ದಂತೆ ತನ್ನ ಚೈತನ್ಯಕ್ಕಾಗಿ ಹೊರಕ್ಕೆ ಕಣ್ಣಾಡಿಸಿತ್ತು ಹಾಗೂ ಅದನ್ನು ಭಾರತದಲ್ಲಿ ದೊರಕಿಸಿಕೊಂಡಿತು. ಅಂದರೆ, ಬ್ರಿಟಿಷ್ ಗಿರಣಿಗಳು ಇಂಡಿಯಾದ ನೇಕಾರರನ್ನು ಅರ್ಥಿಕ ಪೈಪೋಟಿಯಿಂದ ಮಾರುಕಟ್ಟೆಗಳಲ್ಲಿ ಹಿಂದೆ ಬೀಳಿಸಿದವು ಎಂದರ್ಥವಲ್ಲ. ಈಸ್ಟ್ ಇಂಡಿಯಾ ಕಂಪನಿಯೂ ಅದರ ನಿಷ್ಠ ಸೇವಕರೂ ಭರತ ಖಂಡದ ಆಂತರಿಕ ವ್ಯವಹಾರಗಳನ್ನು ತಮ್ಮ ರಾಜಕೀಯ ಏಕಸ್ವಾಮ್ಯಕ್ಕೆ ಒಳಪಡಿಸಿ ಕೊಂಡು, ಆ ಮೂಲಕ ಯಾವುದು ಭಾರತದ ಮಾರುಕಟ್ಟೆಗಳಲ್ಲಿ ಮಾರಾಟವಾಗಬೇಕು, ಯಾವುದು ಆಗಬಾರದು ಎಂದು ನಿರ್ಧರಿಸತೊಡಗಿದರು. ಆದ್ದರಿಂದ ಬ್ರಿಟನ್-ಭಾರತದ ಪೈಪೋಟಿ ಭಾರತದ ನೇಕಾರನಿಗೆ ಸಂಬಂಧಿಸಿದಂತೆ ಬರೀ ವ್ಯಾಪಾರ-ವ್ಯವಹಾರದ ಪ್ರಶ್ನೆಯನ್ನು ಮೀರಿ ನಿಂತ ರಾಜಕೀಯ ಪ್ರಶ್ನೆಯಾಗಿತ್ತು. ಲ್ಯಾಂಕಾಶೈರ್‌ನ ಬಟ್ಟೆಗಿರಣಿಗಳ ಚೈತನ್ಯ ಅದರ ಆರಂಭರೂಪದಲ್ಲೇ ಭಾರತದಿಂದ ಶೋಷಿಸಿದುದಾಗಿತ್ತು. ಹಾಗೂ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಇದು ಭಾರತದ ಮೇಲಿನ ಬ್ರಿಟಿಷ್ ಆಳ್ವಿಕೆಯ ದೆಸೆಯಿಂದಲೇ ಸಾಧ್ಯವಾಯಿತು."

ಮುಂದುವರಿದು ಲೋಹಿಯಾ, ಹೀಗೆ ಆರಂಭವಾದ ಬ್ರಿಟಿಷ್ ಬಂಡವಾಳಶಾಹಿಯು ತನ್ನ ಹೊಸ ಘಟ್ಟಗಳನ್ನು ಮುಟ್ಟಬೇಕಾದ (ಉದಾ: ಭಾರಿ ಕೈಗಾರಿಕೆಯ-ರೈಲ್ವೇಸ್ ಆರಂಭ) ಹಾಗೂ ಬಿಕ್ಕಟ್ಟುಗಳನ್ನು ಹಾದು ಹೋಗಬೇಕಾ (ಉದಾ: ೧೯ ನೇ ಆತಮಾನದ ಎರಡನೇ ದಶಕದಲ್ಲಿನ ಸಾರ್ವತ್ರಿಕ ಕೈಗಾರಿಕಾ ಸ್ಥಗಿತತೆ) ಸಂದರ್ಭಗಳಲ್ಲೆಲ್ಲಾ ಕೂಡಾ ಹೇಗೆ ವಸಾಹತುಶಾಹಿಯೊಂದಿಗೆ ಕೈ ಕೈ ಹಿಡಿದುಕೊಂಡು ನಡೆಯಿತು ಎಂಬುದಕ್ಕೂ ಪುರಾವೆಗಳನ್ನು ಒದಗಿಸುತ್ತಾರೆ. ಹಾಗೆಯೇ ಫ್ರಾನ್ಸ್, ಜರ್ಮನಿ, ಅಮೇರಿಕಾ ಹಾಗೂ ಜಪಾನ್‌ಗಳ ಬಂಡವಾಳಶಾಯಿಗಳೂ ಎಂತೆಂತಹ ರೂಪಗಳಲ್ಲಿ ಅನಾವರಣಗಳೊಂದಿಗೆ (ಉದಾ:

ಚೀನಾ, ಆಗ್ನೇಯ ಏಷ್ಯಾ, ಲ್ಯಾಟಿನ್ ಅಮೇರಿಕಾ, ಆಫ್ರಿಕಾ ರೆಡ್ ಇಂಡಿಯನ್ನರ ಅಮೇರಿಕಾ) ಹುಟ್ಟಿದವು ಅನ್ನುವುದನ್ನು ಅವರು ವಿವರಿಸುತ್ತಾರೆ.**

ಹೀಗೆ ಬಂಡವಾಳಶಾಹಿಯ ವಿಕಾಸ ಎಂದರೆ ವಸಾಹತುಶಾಹಿಯ ವಿಕಾಸವೂ ಆಗಿದೆ. ಈ ಹಿನ್ನೆಲೆಯಲ್ಲಿ, ಮಾಜಿ ವಸಾಹತುವೊಂದಾದ ಇಂಡಿಯಾ, ಬಂಡವಾಳಶಾಹಿಯ ತನ್ನ ವಿಕಾಸಹಂತದಲ್ಲಿ ಪ್ರಗತಿಪರವಾಗಿತ್ತು ಎಂಬ ಮಾರ್ಕ್ಸ್‌ನ ಅಭಿಪ್ರಾಯವನ್ನು ಯಾವ ಅರ್ಥದಲ್ಲಿ ಮಾನ್ಯ ಮಾಡಬೇಕು? ಕನಿಷ್ಟ ಪಕ್ಷ ಏಷ್ಯಾದ ದೇಶಗಳು ತಂತಮ್ಮ ಆರ್ಥಿಕ ಅವಸ್ಥೆಗಳನ್ನು ಅರ್ಥಮಾಡಿಕೊಳ್ಳಬೇಕಾದಲ್ಲಿ, "ವಸಾಹತುಶಾಹಿ ಬಂಡವಾಳಶಾಹಿಯನ್ನು ನಾವು ಚರಿತ್ರೆಯಲ್ಲಿ ಎಲ್ಲೂ ಕಾಣಲಾರೆವು... ಬಂಡವಾಳಶಾಹಿ ವಿಕಾಸದ ಚರಿತ್ರೆಯು ಮತ್ತೇನೂ ಆಗಿರದೆ, ವಸಾಹತುಶಾಹಿ ಜನಾಂಗಗಳ ಬಡತನದ, ಹಸಿವಿನ, ಭೂಹೀನ ರೈತರ ಗೋಳಿನ ಕಥೆಯಾಗಿದೆ" ಎಂಬ ಚಾರಿತ್ರಿಕ, ಸತ್ಯವನ್ನು ಮೊದಲು ಮನದಟ್ಟು ಮಾಡಿಕೊಳ್ಳಬೇಕೆನ್ನುವ ಲೋಹಿಯಾ ಅವರು, "ಬಂಡವಾಳ ಶಾಹಿಯು ಉತ್ಪಾದನಾ ಶಕ್ತಿಗಳು ಹಾಗೂ ಉತ್ಪಾದನಾ ಸಂಬಂಧಗಳ ನಡುವೆ ಬಿಕ್ಕಟ್ಟನ್ನು ಉಂಟುಮಾಡುತ್ತದೆ" ಎಂಬ ಕಮ್ಯುನಿಸ್ಟ್ ಹೇಳಿಕೆಯನ್ನು ನಾವು, ಅದೇ ಸಮಯದಲ್ಲಿ ಅದು ಪ್ರಪಂಚವನ್ನು ಎರಡಾಗಿ ಸೀಳಿತ್ತು–ಒಂದು ಭಾಗಕ್ಕೆ ತನ್ನ ಕ್ರಾಂತಿಕಾರೀ ತಂತ್ರಜ್ಞಾನದ ಸವಲತ್ತುಗಳ ವರದಾನ ಮಾಡಿದರೆ ಇನ್ನೊಂದು ಭಾಗಕ್ಕೆ ಬಡತನ, ಹತಾಶೆ ಹಾಗೂ ಊಹಾತೀತ ಸಂಕಷ್ಟಗಳನ್ನು ಕೊಡುಗೆಯಾಗಿ ನೀಡಿತು; ಒಂದು ಭಾಗಕ್ಕೆ ಹೊಸ ಉತ್ಪಾದನಾ ಉಪಕರಣಗಳನ್ನು ನೀಡುತ್ತಾ ಹೋದರೆ, ಇನ್ನೊಂದು ಭಾಗಕ್ಕೆ ಬಾಳಿಕೆ ಕಳೆದುಕೊಂಡ ಉಪಕರಣಗಳನ್ನು ಬಿಟ್ಟು ಹೋಗಿದೆ' ಎಂದು ಪೂರ್ಣಗೊಳಿಸಿಕೊಳ್ಳಬೇಕು ಎಂದು ಎಚ್ಚರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಬಂಡವಾಳಶಾಹಿಯ ವಿನಾಶವನ್ನು ಕುರಿತ ಮಾರ್ಕ್ಸ್‌ನ ತೀರ್ಮಾನವನ್ನು ಹೀಗೆ ತಿದ್ದುತ್ತಾರೆ. "ಬಂಡವಾಳಶಾಹಿಯ ಗೋರಿಯನ್ನು ತೋಡುವವರು ಸಾಮ್ರಾಜ್ಯಶಾಹಿ ದೇಶಗಳ ದುಡಿಮೆಗಾರರಲ್ಲ; ವಸಾಹತುಶಾಹಿ ಜನತೆ ಹಾಗೂ ದುಡಿಮೆಗಾರರು."

ಇಡೀ ಜಗತ್ತನ್ನು ಸಮರೂಪಿಯಾದ ಒಂದೇ ಅರ್ಥವ್ಯವಸ್ಥೆಯೆಂದು ಮಾರ್ಕ್ಸ್ ಪರಿಭಾವಿಸಿದುದರಿಂದ ಉಂಟಾದ ಇನ್ನೊಂದು ಮೂಲಭೂತ ದೋಷವೆಂದರೆ ಜಾತಿ ಮತ್ತು ವರ್ಗದ ನಡುವಣ ಅಂತರ್ಗತ ಸಂಬಂಧದ ಅನ್ವೇಷಣೆ ಲೋಹಿಯಾ ಪ್ರಕಾರ ಸಮಾಜವೊಂದರಲ್ಲಿನ ವರ್ಗ ಹೋರಾಟ ಉತ್ಕಟ ಘಟ್ಟ ಮುಟ್ಟಿದಾಗ ಆ ಸಮಾಜ ಹೊರಗಿನ ಸಮಾಜವೊಂದರ 'ಆಕ್ರಮಣ'ದ ಒತ್ತಡಕ್ಕೆ ಸಿಗುತ್ತದೆ. ಆಗ ಈ ಒತ್ತಡವನ್ನು ಎದುರಿಸುವುದಕ್ಕೆ ಅಗತ್ಯವಾದ ಸ್ಥಿರತೆಯನ್ನು ಗಳಿಸಿಕೊಳ್ಳುವುದಕ್ಕಾಗಿ ಸಮಾಜ, ವರ್ಗ–ಹೋರಾಟದ ಶಮನ ರೂಪವಾಗಿ ಜಾತಿಗಳನ್ನು ಸೃಷ್ಟಿಗೊಳಿಸಿಕೊಳ್ಳುತ್ತದೆ. ಮತ್ತೆ ಹೊರಗಿನ ಒತ್ತಡ ಕಡಿಮೆಯಾಗತೊಡಗಿದಂತೆ ಸಮಾಜ ಜಾತಿಗಳ ಸ್ಥಗಿತತೆಯನ್ನು ಸಹಿಸಿಕೊಳ್ಳದೇ ವರ್ಗಗಳಾಗಿ ಅರಳಿಕೊಳ್ಳತೊಡಗುತ್ತದೆ. ಹೀಗೆ ಜಾತಿಗಳು ಸ್ಥಗಿತಗೊಂಡ ವರ್ಗಗಳೂ, ವರ್ಗಗಳು ಅರಳಿಕೊಂಡ ಜಾತಿಗಳೂ ಆಗಿವೆ. ಈ ಹಿನ್ನೆಲೆಯಲ್ಲಿ ಮಾನವನ ಇತಿಹಾಸ

** ಈ ವಿವರಗಳಿಗಾಗಿ ಲೋಹಿಯಾ ಅವರ 'ಮಾರ್ಕ್ಸ್‌ಗಾಂಧಿ ಎಂಡ್ ಸೋಶಲಿಸಂ'ನ ಮೊದಲ ಅಧ್ಯಾಯ– 'ಎಕನಾಮಿಕ್ಸ್ ಆಫ್ಟರ್ ಮಾರ್ಕ್ಸ್' ನೋಡಿರಿ.

ಎಂದರೆ ವರ್ಗ ಹೋರಾಟಗಳ ಇತಿಹಾಸ ಎಂಬ ಮಾರ್ಕ್ಸ್‌ವಾದೀ ವ್ಯಾಖ್ಯಾನ ಅಪೂರ್ಣ ಮತ್ತು ಆ ಮೂಲಕ ಅಸಮಂಜಸವಾಗಿದ್ದು; ಸ್ಥೂಲವಾಗಿ ಮಾನವ ಇತಿಹಾಸವು ಜಾತಿಗಳು ಮತ್ತು ವರ್ಗಗಳ ನಡುವಣ ಆಂತರಿಕ ತುಯ್ದಾಟಗಳ ಮತ್ತು ಅಧಿಕಾರ ಹಾಗೂ ಸಮೃದ್ಧಿಗಳಲ್ಲಿನ ಬಾಹ್ಯ ಪಲ್ಲಟಗಳ ಇತಿಹಾಸವಾಗಿದೆ ಎಂದು ಲೋಹಿಯಾ ವಿವರಿಸುತ್ತಾರೆ. (ಹಾಗೆ ನೋಡಿದರೆ ಮಾನವ ಇತಿಹಾಸಕ್ಕೆ ಇತಿಹಾಸವೇ ಇಲ್ಲದಿರುವ ಸಂಭವವೂ ಉಂಟೆಂದು ಅವರು ಅಭಿಪ್ರಾಯಪಡುತ್ತಾರೆ)

ಉತ್ಪಾದನಾ ಸಂಬಂಧಗಳ ನೆಲೆಯಿಂದಲೇ ಜನಜೀವನದ ಸ್ವರೂಪವನ್ನು ಅರ್ಥ ಮಾಡುವುದು ತಪ್ಪು ಎಂಬ ನಿಲುವಿಗನುಗುಣವಾಗಿಯೇ ಲೋಹಿಯಾ, ಒಂದು ಕಾಲದ ಜನಜೀವನವನ್ನು ಅದು ವಿಕಾಸಗೊಳಿಸುವ ನಾಗರೀಕತೆಯನ್ನು ಅಧ್ಯಯನ ಮಾಡುವುದರಿಂದ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ಬಂಡವಾಳಶಾಹಿ ಹಾಗೂ ಕಮ್ಯೂನಿಸಂ ಎರಡರ ಆಟಾಟೋಪಗಳೂ ಇರುವ ಇಂದಿನ ನಾಗರೀಕತೆಯನ್ನು ಅಧ್ಯಯನ ಮಾಡುತ್ತಾರೆ. ಈ ಅಧ್ಯಯನದಿಂದ ಕಂಡು ಬರುವುದೆಂದರೆ, ಬಂಡವಾಳಶಾಹಿಯೇ ಆಗಲಿ ಕಮ್ಯುನಿಸಮ್ಮೇ ಆಗಲಿ ಸೃಷ್ಟಿಸುತ್ತಿರುವುದು ಒಂದೇ ರೀತಿಯ ಮನುಷ್ಯನನ್ನು ಎಂಬುದು. ಈ ದೃಷ್ಟಿಯಿಂದ ಈ ಎರಡೂ ಒಂದೇ ನಾಗರೀಕತೆಯ ಎರಡು ಅಲುಗುಗಳು. ಏಕೆಂದರೆ ಈ ಎರಡೂ ಯುರೋಪಿನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಪರಿಣಾಮಗಳೇ. ಹೊಸ ಹೊಸ ಬೃಹತ್ ಉತ್ಪಾದನೆಯ ಉಪಕರಣಗಳ ಆವಿಷ್ಕಾರಗಳೇ ಈ ಎರಡೂ ವಿದ್ಯಮಾನಗಳ ಹಿಂದಿರುವ ಚೈತನ್ಯಶಕ್ತಿಗಳು. ಮಾರ್ಕ್ಸ್‌ನೇ ಹೇಳಿದ ಹಾಗೆ, ಬಂಡವಾಳದ ಕೇಂದ್ರೀಕರಣವೇ ಹೊಸ ಹೊಸ ಉತ್ಪಾದನಾ ಉಪಕರಣಗಳ ಆವಿಷ್ಕಾರದ ಬೆಂಬಲ ಶಕ್ತಿ. ಬಂಡವಾಳಶಾಹಿ ಸಮಾಜವೇ ಆಗಲಿ, ಕಮ್ಯೂನಿಸ್ಟ್ ಸಮಾಜವೇ ಆಗಲಿ ನಿಂತಿರುವುದು ಈ ಬೆಂಬಲ ಶಕ್ತಿಯ ಮೇಲೆ. ಇದು ಇನ್ನಷ್ಟು ಸ್ಪಷ್ಟವಾಗುವುದು ಸುಪ್ರಸಿದ್ಧ ಕಮ್ಯೂನಿಸ್ಟ್ ಹೇಳಿಕೆಯಾದ 'ಪ್ರತಿಯೊಬ್ಬನಿಂದಲೂ ಅವನವನ ಸಾಮಾರ್ಥ್ಯಕ್ಕನುಗುಣವಾಗಿ ಮತ್ತು ಪ್ರತಿಯೊಬ್ಬನಿಗೂ ಅವನವನ ಅಗತ್ಯಕ್ಕನುಗುಣವಾಗಿ' ಎಂಬುದು ಕಮ್ಯೂನಿಸ್ಟ್ ಸಮಾಜಗಳ ನೇತಾರರೇ ಒಪ್ಪಿಕೊಂಡಂತೆ ಸದ್ಯಕ್ಕೆ (ಆರ್ಥ ವ್ಯವಸ್ಥೆಯ ಸ್ಥಿರತೆಯ ದೃಷ್ಟಿಯಿಂದ ಇದು ಅನಿವಾರ್ಯವೆಂದು ಅವರು ಹೇಳುತ್ತಾರೆ) 'ಪ್ರತಿಯೊಬ್ಬನಿಂದಲೂ ಅವನವನ ಸಾಮರ್ಥ್ಯಕ್ಕನುಗುಣವಾಗಿ ಮತ್ತು ಪ್ರತಿಯೊಬ್ಬನಿಂದಲೂ ಅವನವನ ಸಾಮರ್ಥ್ಯಕ್ಕನುಗುಣವಾಗಿ' ಎಂದು ಮಾರ್ಪಾಡಾಗಿರುವ ವಾಸ್ತವ ಸತ್ಯವನ್ನು ಪರಿಶೀಲಿಸಿದಾಗ, ಇದು ಅಕ್ಷರಶಃ ಬಂಡವಾಳಶಾಹಿ ತತ್ವ ಪ್ರಣಾಳಿಕೆಯೇ ಆಗಿ ಕಾಣುತ್ತದೆ. ದೂರ ದೂರವಿದ್ದೂ ಬಂಡವಾಳಶಾಹಿ ಅಮೆರಿಕನ್ ವ್ಯವಸ್ಥೆಯ ಅರ್ಥಶಾಸ್ತ್ರಜ್ಞ ಗಾಲಬ್ರೇತ್ ಹಾಗೂ ಕಮ್ಯುನಿಸ್ಟ್ ರಷ್ಯನ್ ವ್ಯವಸ್ಥೆಯ ಭೌತ ವಿಜ್ಞಾನಿ ಸಖಾರೋವ್ ಇಬ್ಬರೂ, ಈ ಎರಡೂ ವ್ಯವಸ್ಥೆಗಳು ಕ್ರಮೇಣ ಒಂದು ಸಂಗಮದೆಡೆಗೆ (ಸಾಮಾನ್ಯ ಗುರಿಯೆಡೆಗೆ) ಸಾಗುತ್ತಿವೆ ಎಂದು ವ್ಯಕ್ತ ಪಡಿಸಿರುವ ಏಕಾಭಿಪ್ರಾಯದ ಸೂಚನೆಯೂ ಇದೇ. ಕುತೂಹಲದ ಸಂಗತಿ ಎಂದರೆ, ಅಮೇರಿಕಾ ಮತ್ತು ರಷ್ಯಾಗಳೆರಡರಲ್ಲೂ ಆಯಾ ಅರ್ಥ ವ್ಯವಸ್ಥೆಗಳ ಬೆಳವಣಿಗೆಗಳು ಕ್ರಮೇಣ ತಂತಮ್ಮ ತಾರ್ಕಿಕ ಅಂತ್ಯದ ಅಂಚಿಗೆ ಹತ್ತಿರವಾಗುತ್ತಿರುವುದರಿಂದ ಅಲ್ಲಿ ಸಾಮಾಜಿಕ ಶ್ರೇಣೀಕರಣ ರೂಪದಲ್ಲಿ ಮತ್ತೆ ಜಾತಿವ್ಯವಸ್ಥೆ(ಘನಗೊಳ್ಳುವ ಪ್ರವೃತ್ತಿಯ

ಶ್ರೇಣೀಕರಣ) ಮೆಲ್ಲಗೆ ತಲೆ ಎತ್ತಲಾರಂಭಿಸಿದೆ. ಅವುಗಳದೇ ಲಕ್ಷಣಗಳೊಂದಿಗೆ. ಏಕೆ ಹೀಗೆ? ಬಂಡವಾಳಶಾಹಿಯನ್ನು ಒಂದು ಐತಿಹಾಸಿಕ ಪರಿಘಟನೆಯೆಂದು ಅದರೆಲ್ಲಾ ಆಯಾಮಗಳೊಂದಿಗೆ ಅರ್ಥ ಮಾಡಿಕೊಳ್ಳದೇ ಕೇವಲ ಒಂದು ಆರ್ಥಿಕ ಪರಿಘಟನೆಯೆಂದಷ್ಟೇ ಪರಿಗಣಿಸಿದ್ದೇ, 'ಈ ದೂರ ದೂರ ಆದರೂ ಎಷ್ಟು ಹತ್ತಿರ!'ದ ಆಕಸ್ಮಿಕಕ್ಕೆ ಕಾರಣವಾಗಿವೆ. ಇದೇ ಹಿನ್ನೆಲೆಯಲ್ಲಿನ ಡಾ॥ ಲೋಹಿಯಾ ಅವರ ಮಾತುಗಳು ಗಮನಾರ್ಹವಾಗಿವೆ: "ಅಮೇರಿಕಾ, ರಷ್ಯಾವನ್ನು ದೂಷಿಸಬಹುದು ಮತ್ತು ರಷ್ಯಾ, ಅಮೇರಿಕಾವನ್ನು ದೂಷಿಸಬಹುದು. ಬಂಡವಾಳಶಾಹಿಯು ಕಮ್ಯೂನಿಸಮ್ಮನ್ನು ದೆವ್ವದಂತೆ ಚಿತ್ರಿಸಬಹುದು; ಹಾಗೆಯೇ ಕಮ್ಯೂನಿಸಂ ಕೂಡಾ ಬಂಡವಾಳಶಾಹಿಯನ್ನು ದೆವ್ವದಂತೆ ಚಿತ್ರಿಸಬಹುದು. ಆದರೆ ಮಾನವ ಜನಾಂಗದ ಮೂಲ ವಿಷಮ 'ಬೆಳವಣಿಗೆಗಳಾಗಿರುವ ಬಡತನ, ಯುದ್ಧ ಹಾಗೂ ಭಯಗಳನ್ನು ಒಂದಿಷ್ಟಾದರೂ ಶಮನ ಮಾಡಲು ಈ ಎರಡು ವ್ಯವಸ್ಥೆಗಳು ಅಸಮರ್ಥವಾಗಿವೆ ಎಂಬ ವ್ಯಕ್ತ ವಾಸ್ತವಾಂಶ ಮಾತ್ರ ನಮ್ಮ ಮುಂದೆ ಸ್ಥಿರವಾಗಿ ನಿಂತಿದೆ.' ಕಮ್ಯುನಿಸಂನ ಅತ್ಯಂತ ಜಿಗುಪ್ಸೆಕರ ಅವಸ್ಥೆಯೆಂದರೆ ಅದು ಸಾರತಃ ತನ್ನನ್ನು ಒಂದು ದೇಶದೊಂದಿಗೆ– ರಷ್ಯಾದೊಂದಿಗೆ–ಗುರುತಿಸಿಕೊಳ್ಳಬೇಕಾದ ಅವನತಿಗೆ ಈಡಾಗಿರುವುದು ಎಂದು ಲೋಹಿಯಾ ಸೂಚಿಸುತ್ತಾರೆ.

ಇಷ್ಟೆಲ್ಲವನ್ನೂ ಗಮನಿಸಿದ ಮೇಲೆ 'ಇಂಡಿಯಾದಲ್ಲಿ ಕಮ್ಯೂನಿಸಂ' ಎಂಬುದರ ಅರ್ಥವಾದರೂ ಏನು? ಇಂಡಿಯಾದಲ್ಲಿ ಬಂಡವಾಳದ ಕೇಂದ್ರೀಕರಣ ಎಷ್ಟು ನಡೆದಿದೆ? ಇಂಡಿಯಾದ ದುಡಿಮೆಗಾರರಿಂದ ಸುಲಿಯಲಾದ 'ಹೆಚ್ಚುವರಿ ಮೌಲ್ಯ'ದ ಮೂಲಕ ಕೇಂದ್ರಿಕೃತಗೊಂಡ ಬಂಡವಾಳವೆಲ್ಲವೂ ಇಂಡಿಯಾದಲ್ಲೇ ಉಳಿದಿದೆಯೇ? ಬಂಡವಾಳದ ಕೇಂದ್ರೀಕರಣದ ಫಲವಾದ ಹೊಸ ಉತ್ಪಾದನಾ ಉಪಕರಣಗಳ ಅವಿಷ್ಕಾರ ಇಂಡಿಯಾದಲ್ಲಿ ಯಾವ ಮಟ್ಟದಲ್ಲಿ ನಡೆದಿದೆ? (ಇಂಡಿಯಾದ ರೈತನ ನೇಗಿಲು ಎರಡು ಸಾವಿರ ವರ್ಷಗಳಿಂದಲೂ ಸುಧಾರಣೆಯೇ ಇಲ್ಲದಂತೆ ಹಾಗೇ ಉಳಿದಿದೆ!) ಇಂಡಿಯಾದ ದುಡಿಮೆಗಾರರ ಅಗ್ಗದ ದುಡಿಮೆಯ ಪರಿಣಾಮವೆಲ್ಲವೂ ಬ್ರಿಟನ್ ಹಾಗೂ ಇತರ ಮಾಜಿ ಪ್ರಭು ದೇಶಗಳಲ್ಲಿ ಯಂತ್ರಗಳ ರೂಪದಲ್ಲಿ ಮಾರ್ಪಟಾವಾಗಿ ನಿಂತಿದೆ ಅಲ್ಲವೇ? ಈ ಕಾರಣದಿಂದಾಗಿಯೇ ಲೋಹಿಯಾ ಇಂಡಿಯಾ ಹಾಗೂ ಅಭಿವೃದ್ಧಿಗೊಂಡ ದೇಶಗಳ ನಡುವಣ ವ್ಯಾಪಾರ ವಿನಿಮಯ ಶೋಷಣೆಯ ಮುಂದುವರಿಕೆಯಾಗಿದೆ ಎಂದು ಸೂಚಿಸುತ್ತಾರೆ. ಇಂಡಿಯಾದ ದುಡಿಮೆಗಾರನೊಬ್ಬ ನಾಲ್ಕು ತಾಸುಗಳಲ್ಲಿ ಉತ್ಪಾದಿಸಿದ ಸರಕನ್ನು ಅಮೇರಿಕಾ ಅಥವಾ ರಷ್ಯಾದ ದುಡಿಮೆಗಾರನೊಬ್ಬ ತನ್ನ ಆಧುನಿಕ ಉಪಕರಣಗಳ ನೆರವಿನಿಂದಾಗಿ ಕೇವಲ ಅರ್ಧ ತಾಸಿನಲ್ಲಿ ಉತ್ಪಾದಿಸಿದ ಸರಕಿನೊಡನೆ ವಿನಿಮಯ ಮಾಡಿಕೊಳ್ಳುವುದು ಸಾಮ್ರಾಜ್ಯಶಾಹಿಯ ಹೊಸ ರೂಪ ತಾನೆ?

ಈ ಹಿನ್ನೆಲೆಯಲ್ಲಿ ಇನ್ನೂ ನಿರ್ಣಾಯಕ ಅಂಶವೆಂದರೆ, ಇಂಡಿಯಾದ ಬಹುಸಂಖ್ಯಾತ ಜನರ ಮನಸ್ಸನ್ನು ಒಂದಲ್ಲ ಒಂದು ಹಂತದಲ್ಲಿ ಆಳುತ್ತಿರುವುದು ಜಾತಿ ಪ್ರಜ್ಞೆಯೇ ಅಲ್ಲವೆ? ಜಾತಿಗಳಾಗಿ ಗಟ್ಟಿಗೊಂಡಿದ್ದ ವಿಶ್ವದ ಇತರೆ ಸಮಾಜಗಳು ಒಂದಿಷ್ಟು ಅವಧಿಗಳ ನಂತರ ವರ್ಗಗಳಾಗಿ ಅರಳಿಕೊಂಡಿರುವಾಗ ಇಂಡಿಯಾ ಮಾತ್ರ ಮುವತ್ತು ಶತಮಾನಗಳಿಂದಲೂ ಜಾತಿಗಳಾಗಿಯೇ ಗಟ್ಟಿಗೊಂಡಿರುವುದರ ಹಿಂದಿರುವ ಸಾಮಾಜಿಕ,

ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸೂಕ್ಷ್ಮಗಳನ್ನು ಕಮ್ಯೂನಿಸ್ಟ್ ಪ್ರಣಾಲಿಯು ಅರ್ಥ ಮಾಡಿಕೊಳ್ಳಬಲ್ಲುದೇ? (ಇಂಡಿಯಾದ ಕಮ್ಯೂನಿಸಂ ಕೊಸರಾಡಿಕೊಂಡಾದರೂ ಜಾತಿಯನ್ನು ಒಂದು ವಾಸ್ತವವೆಂದು ಒಪ್ಪಿಕೊಳ್ಳುವುದಕ್ಕೇ ಐದು ದಶಕಗಳನ್ನು ತೆಗೆದುಕೊಂಡಿತು.) ಇಂಡಿಯಾದಲ್ಲಿ ವರ್ಗಗಳನ್ನು ಗುರುತಿಸುವ ಒರೆಗಲ್ಲಾದರೂ ಯಾವುದು?

ಹೀಗೆ ಕಮ್ಯೂನಿಸಂನ ತಾತ್ವಿಕ ಅಪೂರ್ಣತೆ ಹಾಗೂ ವಿರೋಧಾಭಾಸಗಳ ಆಚೆಯೂ ಇಂಡಿಯಾ, ಕಮ್ಯೂನಿಸ್ಟ ಚೌಕಟ್ಟಿಗೆ ಸವಾಲಾಗಿಯೇ ನಿಲ್ಲುತ್ತದೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳದೇ ಇಂಡಿಯಾದಲ್ಲಿ ಕಮ್ಯೂನಿಸಂ ಬಗ್ಗೆ ಮಾತನಾಡುವುದು ಕೇವಲ ಬೌದ್ಧಿಕ ಕಸರತ್ತು ಮತ್ತು ಅಂತಿಮ ಪರಿಣಾಮವಾಗಿ ಆತ್ಮವಂಚನೆಯಷ್ಟೇ ಆಗುತ್ತದೆ ಎಂದು ಡಾ॥ ಲೋಹಿಯಾ ಅಭಿಪ್ರಾಯಪಡುತ್ತಾರೆ. "ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿ ಹಾಗೂ ಅನಂತರದ ವಿದ್ಯಮಾನ ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಪುನರಾವರ್ತನೆಗೊಳ್ಳಲಸಾಧ್ಯವಾದ ಒಂದು ಅನನ್ಯ ಚಾರಿತ್ರಿಕ ಪರಿಸ್ಥಿತಿಗೆ ಸೇರಿದುದು. ಬಹಳ ಕಡಿಮೆ ನೆಲ ಮತ್ತು ಬಹಳ ಹೆಚ್ಚು ಜನ ಹಾಗೂ ಕೆಲವೇ ಕೆಲವು ಉಪಕರಣಗಳು ಏಷ್ಯಾದ ಹೆಗ್ಗುರುತಾದ್ದರಿಂದ ಬೃಹತ್ ಉತ್ಪಾದನೆ ತಂತ್ರದ ಅನ್ವಯವು ತೀರಾ ಅಸಾಧ್ಯ" ಎಂದು ಅವರು ವಿಶ್ಲೇಷಿಸುತ್ತಾರೆ. (ಮಾವೋ ಅವರ ಮರಣಕ್ಕೇ ಕಾಯುತ್ತಿದ್ದಂತೇ ಚೀನಾ ಕಮ್ಯೂನಿಸ್ಟ್ ಅಭಿವೃದ್ಧಿ ವಿಧಾನದ ಬಗ್ಗೆ ಇಡಿಯಾಗಿ ಪುನರಾಲೋಚನೆ ಶುರು ಮಾಡಿರುವುದು ನಿಷ್ಕಾರಣವಾಗಿ ಅಲ್ಲ) ಇಷ್ಟೆಲ್ಲದರ ಹಿನ್ನೆಲೆಯಲ್ಲೇ ಲೋಹಿಯಾ ಅವರು ಕಮ್ಯೂನಿಸಂ ಅನ್ನು ಬಂಡವಾಳಶಾಹಿಯ ನಂತರ ಯುರೋಪ್ ಏಷ್ಯಾದ ಮೇಲೆ ಪ್ರಯೋಗಿಸಿರುವ ಇತ್ತೀಚಿನ ಅಸ್ತ್ರ ಎಂದು ಗುರುತಿಸಿದ್ದು, ಮತ್ತು ಏಷ್ಯಾ, ಯುರೋಪಿನ ಈ ಅಸ್ತ್ರರೂಪದ ನಾಗರಿಕತೆಯಲ್ಲೇ ತನ್ನ ಹಿತಗಳನ್ನೂ ಗುರುತಿಸಿಕೊಳ್ಳುವ ಬುದ್ಧಿವಿಹೀನತೆಗೆ ಈಡಾಗದೆ ತನ್ನದೇ ಸ್ವಂತ ಗುರುತನ್ನು ಹುಡುಕಿಕೊಳ್ಳುವ ಮೂಲಕ ಬೆಳೆದು ಬಾಳುವ ಆತ್ಮವಿಶ್ವಾಸವನ್ನು ರೂಢಿಸಿಕೊಳ್ಳಬೇಕು ಅಂತ ಕರೆಕೊಟ್ಟದ್ದು.

–೨–

ಬಂಡವಾಳಶಾಹಿ ಮತ್ತು ಕಮ್ಯೂನಿಸಂಗಳೆರಡರ ಕೊಡುಗೆಯಾದ ಅಣುಬಾಂಬು ಸೂಚಿಸುವ ಮಾನವ ಜನಾಂಗದ ಆತ್ಮವಿನಾಶದ ದುರಂತ ಹಾಗೂ ಏಷ್ಯಾದ ಆತ್ಮ ನಿರೀಕ್ಷಣೆಯ ಫಲವಾದ ಮಹಾತ್ಮ ಗಾಂಧಿ ಸೂಚಿಸುವ ಆತ್ಮ ವಿಕಾಸದ ಆಶಯ – ಇವುಗಳ ದ್ವಂದ್ವ ಮನುಷ್ಯ ಪರವಾದ ಕ್ರಿಯಾಶೀಲತೆಯ ಹೊಸದೊಂದು ಬಾಗಿಲನ್ನೇ ಜಗತ್ತಿಗೆ ತೆರೆಯಬಲ್ಲುದೆಂದು ಡಾ. ರಾಮಮನೋಹರ ಲೋಹಿಯಾ ಪ್ರತಿಪಾದಿಸಿದರು.

ಲೋಹಿಯಾ ಗಾಂಧೀಜಿಯನ್ನು ತಮ್ಮ ಒಂಬತ್ತನೇ ವಯಸ್ಸಿನಲ್ಲಿಯೇ ತಮ್ಮ ತಂದೆಯವರ ಜೊತೆ ಹೋಗಿ ಕಂಡಿದ್ದರು. ತಂದೆ ಹೀರಾಲಾಲ್ ಗಾಂಧೀಜಿಯವರಿಂದ ಪ್ರಭಾವಿತರಾದ ಕೆಲವೇ ಮೊದಲಿಗರ ಪೈಕಿ ಒಬ್ಬರು ಎಂಬುದು ಇಲ್ಲಿ ಗಮನಾರ್ಹ. ಲೋಹಿಯಾ ತಮ್ಮ ಡಾಕ್ಟೊರೇಟ್ ಪ್ರಬಂಧಕ್ಕಾಗಿ ಆರಿಸಿಕೊಂಡ ವಿಷಯವೂ ಗಾಂಧೀಜಿ

ನೇತೃತ್ವದ ದಂಡಿ ಉಪ್ಪಿನ ಸತ್ಯಾಗ್ರಹವನ್ನೇ. ಈ ಸತ್ಯಾಗ್ರಹದಲ್ಲಿ ಹೀರಾಲಾಲರನ್ನು ಪೋಲೀಸರು ಪ್ರಜ್ಞೆ ತಪ್ಪುವವರೆಗೂ ಹೊಡೆದು ಉರುಳಿಸಿದ್ದರು. ಈ ಪ್ರಬಂಧದ ಮುಖ ಶೀರ್ಷಿಕೆಯಾದ 'ಭೂಮಿಯ ಉಪ್ಪು' ಎಂಬಲ್ಲಿ ಲೋಹಿಯಾ, ಉಪ್ಪಿನ ಹಿಂದಿರುವ ಭಾವನಾತ್ಮಕ ಕಲ್ಪನೆಯಲ್ಲಿ ಆರ್ಥಿಕ ಮತ್ತು ರಾಜಕೀಯ ಅಂಶಗಳು ಹೇಗೆ ಮಿಳಿತವಾಗಿವೆ ಎಂಬುದನ್ನು ವಿವರಿಸುತ್ತಾರೆ. ಜರ್ಮನಿಯಿಂದ ಡಾಕ್ಟೊರೇಟ್ ಪದವಿ ಪಡೆದು ಬಂದ ಕೂಡಲೇ ರಾಮಮನೋಹರರು ಸೇರಿದ್ದು ಗಾಂಧೀಜಿಯ ಶಾಲೆಯನ್ನೇ; ಆದರೆ ಬರೀ ಬರೀ ವಿದ್ಯಾರ್ಥಿಯಾಗಿ ಅಲ್ಲ;ವಿಮರ್ಶಕರಾಗಿ ಕೂಡ.

ಮಹಾನ್ ವ್ಯವಸ್ಥಾ ಅವಿಧೇಯರಾಗಿದ್ದ(Non conformist) ಆಗಿದ್ದ ಲೋಹಿಯಾ ಅತಿ ಬೇಗನೇ ಗಾಂಧೀಜಿಯವರ ಗಮನ ಸೆಳೆದರು. ಹಾಗೇ ಹೋರಾಟದ ಹೊಸ ಹೊಸ ರೂಪಗಳ ಆವಿಷ್ಕಾರದ ಚಿಂತನೆಯಲ್ಲಿ ತೊಡಗುತ್ತಿದ್ದ ಗಾಂಧೀಜಿ, ಲೋಹಿಯಾರ ಸೃಜನಶೀಲ ಚಿಂತನೆಯ ಪ್ರಮುಖ ವಸ್ತುವಾದರು. ಲೋಹಿಯಾ ಮೂಲಕ ಗಾಂಧೀಜಿ ಯುವ ಸಮಾಜವಾದಿಗಳಿಗೆ ಎಷ್ಟು ಹತ್ತಿರದವರಾದರೆಂದರೆ, ಒಮ್ಮೆ ಅಶೋಕ ಮೆಹ್ತಾರಿಗೆ, ಅವರ ಚರ್ಚೆಯನ್ನು ಮೊಟಕುಗೊಳಿಸುತ್ತಾ ಹೀಗೆ ಹೇಳಿದರು: 'ನೀವು ಅಹಿಂಸಾ ಮಾರ್ಗವನ್ನು ಒಪ್ಪಿಕೊಳ್ಳುವುದೇ ಆದರೆ ನಾನು ಇಂದೇ ಸಮಾಜವಾದಿಯೆಂದು ಘೋಷಿಸಿಕೊಳ್ಳುವೆ'. ಆದರೆ ದುರಂತವೆಂದರೆ, ಸಮಾಜವಾದಿಗಳ ಹೋರಾಟದ ಮಾರ್ಗದ ಬಗ್ಗೆ ಸಂದೇಹವನ್ನು ಉಳಿಸಿಕೊಂಡು ಬಂದ ಗಾಂಧೀಜಿಗೆ, ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ದೇಶಾದ್ಯಂತ ತಲೆ ಎತ್ತಿದ ಕೋಮುವಾರು ದಂಗೆಗಳ ಪರಿಹಾರದಲ್ಲಿ ನೆರವಾದವರು ಲೋಹಿಯಾ ಮತ್ತು ಇತರ ಸಮಾಜವಾದಿ ಗೆಳೆಯರೇ.

ಸ್ವತಂತ್ರ ಇಂಡಿಯಾಕ್ಕಾಗಿ ತಮ್ಮದೇ ಸ್ವತಂತ್ರ ಆರ್ಥಿಕ ಚಿಂತನೆಗಳನ್ನು ರೂಪಿಸಿಕೊಳ್ಳುತ್ತಿದ್ದ ಲೋಹಿಯಾ, ಹೋರಾಟದ ಮಾರ್ಗದ ವಿಷಯದಲ್ಲಿ ಗಾಂಧೀಜಿಯವರ ಚಿಂತನೆಯಲ್ಲಿ ಹೊಸದನ್ನು ಕಂಡರು. ಸಾಕ್ರಟೀಸ್ ಮತ್ತು ಥೋರೋ ಪರಂಪರೆಯ ಹೋರಾಟದ ಮಾರ್ಗ ಗಾಂಧೀಜಿ ಮೂಲಕ ನಾಗರಿಕ ಅಸಹಾಕಾರ ಸತ್ಯಾಗ್ರಹದ ಹೆಸರಿನಲ್ಲಿ ಜನಸಾಮಾನ್ಯರ ಪ್ರತಿಭಟನಾ ಅಸ್ತ್ರವಾಗಿ ಬಳಕೆಗೆ ಬಂದುದನ್ನು ಅವರು ಕಂಡರು. "ನಾಗರಿಕ ಅಸಹಕಾರ ವಿವೇಚನೆಯ ಭರವಸೆ ಇದ್ದಂತೆ... ವಿವೇಚನೆ ತನ್ನ ಗುಣವನ್ನು ಉಳಿಸಿಕೊಂಡೂ ಆದೇಶಾತ್ಮಕವಾಗಬೇಕಾದಲ್ಲಿ ವಿವೇಚನಾಹೀನತೆಯ ಆಜ್ಞೆಗಳ ಪಾಲನೆಯ ನಾಗರಿಕ ನಿರಾಕರಣೆಯ ಹೊರತಾಗಿ ಬೇರೆ ಮಾರ್ಗವಿಲ್ಲ." ಎಂಬುದು ಅವರ ನಂಬಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಹಿಂಸಾತ್ಮಕ ಮತ್ತು ಅಹಿಂಸಾತ್ಮಕ ಹೋರಾಟ ಮಾರ್ಗಗಳ ತುಲನೆಯನ್ನು ಅವರು ಮಾಡಿದರು. ಹಿಟ್ಲರನ ನೇತೃತ್ವದ ನಾಜಿ ರಾಷ್ಟ್ರೀಯವಾದ ಹಾಗೂ ಸ್ಟಾಲಿನ್ ನೇತೃತ್ವದ ಮಾರ್ಕ್ಸ್-ಲೆನಿನ್‌ವಾದ ಅವರ ಕಣ್ಮುಂದಿದ್ದವು. ಹಿಂಸೆಯನ್ನು ವೈಭವೀಕರಿಸುವ ಯಾವುದೇ ವಾದ ವರ್ಗರಹಿತ ಮತ್ತು ಜಾತಿರಹಿತ ಸಮಾಜವನ್ನು ಕಟ್ಟಲಾರದು ಎಂಬುದು ಅವರ ಈ ತುಲನಾತ್ಮಕ ಅಧ್ಯಯನ ತೀರ್ಮಾನವಾಗಿತ್ತು. ಹಿಂಸೆ ಯಾವಾಗಲೂ ಹೇಡಿಯ ಸಾಧನವಾಗಿರುತ್ತದೆ. ಅದು ಯಾವಾಗಲೂ ತನಗಿಂತ ದುರ್ಬಲನಾದವನನ್ನು ಹುಡುಕಿಕೊಂಡು ಹೋಗುತ್ತದೆ. ತನಗಿಂತ ಸಬಲನಾದವನನ್ನು

ಕಂಡೊಡನೆ ಅದು ಪಲಾಯನ ಮಾಡುತ್ತದೆ ಎಂದು ಹಿಂಸೆ ಕುರಿತ ಅವರ ವಿಶ್ಲೇಷಣೆಯಾಗಿತ್ತು.***

ಹಿಂಸೆ ಅಹಿಂಸೆಯ ವಿಷಯದಲ್ಲಿ ಲೋಹಿಯಾ ಗಾಂಧೀಜಿಯವರಿಂದ ಭಿನ್ನವಾಗುವುದು ಹಿಂಸೆ ಅಹಿಂಸೆಗಳ ನಿರಪೇಕ್ಷ ರೂಪದ ವಿಷಯದಲ್ಲಿ. ಗಾಂಧೀಜಿಗೆ ಅಹಿಂಸೆ ಎನ್ನುವುದು ಎಲ್ಲ ಕಾಲಕ್ಕೂ ನಿರಪೇಕ್ಷವಾದುದಾಗಿದ್ದರೆ ಲೋಹಿಯಾಗೆ ಅಹಿಂಸೆ ಅನಿವಾರ್ಯ ಸಹಜವಾದ ಹೋರಾಟದ ಮಾರ್ಗ ಮಾತ್ರವಾಗಿತ್ತು. ಹಿಂಸೆ ಅಹಿಂಸೆ ಕುರಿತು ಸಮಾಜವಾದೀ ಚಳುವಳಿಯಲ್ಲಿನ ಜಿಜ್ಞಾಸೆ ಕುರಿತು ಅವರು ಹೇಳುವುದು:

"ಬಲಪ್ರಯೋಗದ ಸಮಸ್ಯೆಯೊಂದನ್ನು ಸಮಾಜವಾದಿಗಳು ಜಿಜ್ಞಾಸೆ ಮಾಡುತ್ತಿದ್ದಾರೆ. ಕೆಲವು ಸಮಾಜವಾದಿಗಳು ಕೊಟ್ಟ ಕೊನೆಯ ಹಂತದಲ್ಲಿ ಹಳೆಯ ವ್ಯವಸ್ಥೆಯನ್ನು ಕಿತ್ತೊಗೆಯಲು ಸಮಾಜವಾದಿಗಳು ಹಿಂಸೆಗಿಳಿಯಬೇಕಾಗಬಹುದೆಂದು ಹೇಳುತ್ತಾರೆ. ಈ ಬಗೆಯ ಜಿಜ್ಞಾಸೆ ಸಮಾಜವಾದಿ ಸಂಘಟನೆಯ ಬೆಳವಣಿಗೆಗೆ ಹಾನಿಯುಂಟುಮಾಡುತ್ತದೆ. ಕೊನೆಯ ಹಂತಗಳಲ್ಲಿ ನಾವು ಹಿಂಸಾ ಮಾರ್ಗಕ್ಕೆ ಇಳಿಯಬೇಕೋ ಬೇಡವೋ ಎಂಬುದು ಅನುಷಂಗಿಕ ಪ್ರಶ್ನೆ. ಪ್ರಸ್ತುತ ಪ್ರಶ್ನೆ ಎಂದರೆ ಜನಗಳನ್ನು ಅಹಿಂಸಾತ್ಮಕ ಹೋರಾಟದ ಆಧಾರದ ಮೇಲೆ ಸಂಘಟಿಸಬೇಕೋ ಅಥವಾ ಹಿಂಸೆಯನ್ನು ಆಧಾರಿಸಿಯೋ ಎಂಬುದು. ಒಂದು ಜನತಾ ಹೋರಾಟದ ಅಂತಿಮ ಹಂತದಲ್ಲಿ ಹಳೆಯ ವ್ಯವಸ್ಥೆಯೊಂದು ಕೇವಲ ಬಂದೂಕುಗಳನ್ನಾಧರಿಸಿಯೇ ಹೋರಾಡಲು ನಿಂತಾಗ, ದಮನ ಮಾಡಲು ನಿಂತಾಗ, ಆ ಹಂತದಲ್ಲಿ ಮಹಾಜನಸ್ತೋಮವು ತನ್ನ ಅಖಂಡ ಶಕ್ತಿಯಿಂದ ಅದನ್ನು ಕಿತ್ತೆಸೆಯಲು ನಿರ್ಧರಿಸಿ ನವೀನ ಹೋರಾಟ ವಿಧಾನವೊಂದಕ್ಕೆ ಜನ್ಮವೀಯಬಹುದು. ಆದರೆ ಇದು ಯಾವಾಗಲೂ ಸಮಯಸ್ಫೂರ್ತಿ ಅಲ್ಪಾವಧಿ ಹಿಂಸೆಯಾಗಿರುತ್ತದೆ. ಈ ಅಲ್ಪಾವಧಿ ಸಮಯಸ್ಫೂರ್ತಿ ಹಿಂಸೆಯನ್ನು ಕಲ್ಪಿಸಿಕೊಂಡು ಇಡೀ ಒಂದು ಸಿದ್ಧಾಂತ ಹಾಗೂ ಸಂಘಟನೆಯ ನಿರ್ಮಾಣಕ್ಕೆ ತೊಡಗುವುದು ತಪ್ಪಾಗುತ್ತದೆ."

ನಾಗರಿಕ ಅಸಹಕಾರ ಸತ್ಯಾಗ್ರಹವು ವೈಯಕ್ತಿಕ ಅಭ್ಯಾಸವಾಗಿ ಹಾಗೂ ಸಾಮೂಹಿಕ ಸಾಧನವಾಗಿ ಒಂದು ಆಯುಧ ಸನ್ನದ್ಧ ತರ್ಕವಾಗಿದೆ. ಇದನ್ನುಳಿದ ಇನ್ನೇನೇ ಅದರೂ ಅದೊಂದು ನಿರ್ಬಲ ತರ್ಕವೋ ಅಥವಾ ತರ್ಕಾತೀತ ಮೃಗೀಯ ಶಕ್ತಿಯೋ ಆಗುತ್ತದೆ. ಇದು ಇಡೀ ಮಾನವ ಜನಾಂಗಕ್ಕೆ ಗಾಂಧೀಜಿ ನೀಡಿದ ಕೊಡುಗೆ–ಎಂಬ ವಿಶ್ಲೇಷಣಾತ್ಮಕ ನಂಬಿಕೆಯೇ ಲೋಹಿಯಾ ಹಿಂಸೆ–ಅಹಿಂಸೆ ಕುರಿತು ಭಾವಾತಿರೇಕಕ್ಕೆ ಹೊರತಾದ ವಿವೇಚನಾಶೀಲ ನಿಲವು ತಳೆಯಲು ಸಾಧ್ಯಮಾಡಿದ್ದು.

ಆದರೆ ಲೋಹಿಯಾ ಹಿಂಸೆಯನ್ನು ಒಂದು ಮುಟ್ಟಬಾರದ ವಸ್ತುವಿನಂತೆ ಇಡಿಯಾಗಿ ತಳ್ಳಿ ಹಾಕಲಿಲ್ಲ. ಹಿಂಸೆ ಹೇಡಿತನಕ್ಕೆ ಬದಲಾಗಿ ಪ್ರತಿರೋಧ ರೂಪವಾಗಿ ಮತ್ತು ಹಿಮ್ಮೆಟ್ಟದೆ ಕೊನೆವರೆಗೂ ಹೋರಾಡುವ ಮನುಷ್ಯ ಛಲವಾಗಿ ಮೂಡಿಬಂದಲ್ಲಿ ಅದು ಸ್ವೀಕಾರಾರ್ಹವೇ

*** ಹಿಂಸೆಯನ್ನು ಪ್ರತಿಪಾದಿಸುವ ಇಂಡಿಯಾದ ಕೆಲವು ಕಮ್ಯೂನಿಸ್ಟ್ ನಾಯಕರು, ನಾವು ನಡೆಸುದುದಕಿಂತ ಜೋರಾದ ಹಿಂಸೆ ಪೋಲೀಸರ ಕಡೆಯಿಂದ ಬರತೊಡಗಿದಾಗ ಅದಕ್ಕೆ ಬಲಿಯಾಗಲು ಬರೀ ಜನಸಾಮಾನ್ಯರನ್ನು ಬಿಟ್ಟು ತಾವು ತಲೆತಪ್ಪಿಸಿಕೊಂಡು ಸುರಕ್ಷಿತ ಸ್ಥಳಗಳಿಗೆ ಪಲಾಯನ ಮಾಡಿದುದನ್ನು ಈ ಸಂದರ್ಭದಲ್ಲಿ ನೆನೆಯಬಹುದಾಗಿದೆ.

ಎಂಬುದು ಲೋಹಿಯಾದ ಅಭಿಪ್ರಾಯವಾಗಿತ್ತು. ಇಂಡಿಯಾದ ಆಳುವ ವರ್ಗಗಳ ಪ್ರತೀಕವಾಗಿದ್ದ ಕಾಂಗ್ರೆಸ್ಸಿನ ರಾಕ್ಷಸೀಯ ಪ್ರವೃತ್ತಿಗಳಿಂದ ಬೇಸತ್ತ ಲೋಹಿಯಾ ತಾವು ಸ್ಥಗಿತತೆಗೆ ಬದಲಾಗಿ ಅರಾಜಕತೆಯನ್ನು ಬಯಸುವುದಾಗಿ ಘೋಷಿಸಿದರು. ೧೯೬೬ರ ಏಪ್ರಿಲ್‌ನಲ್ಲಿ ರಾಜಸ್ತಾನದ ಕೋಟಾ ಎಂಬಲ್ಲಿ ಸಾರ್ವಜನಿಕವಾಗಿ ಭಾಷಣ ಮಾಡುತ್ತಾ ಹಿಂಸೆ ಕುರಿತ ತಮ್ಮ ಕಲ್ಪನೆಯನ್ನು ಹೀಗೆ ವಿವರಿಸಿದರು: "...ಆದರೆ ಹಸಿವು ಮತ್ತು ಕ್ರೌರ್ಯ ಮಿತಿಮೀರಿದ ಎತ್ತರಗಳನ್ನು ಮುಟ್ಟಿದಲ್ಲಿ, ಸರ್ಕಾರವನ್ನು ಬೇರೆ ಮಾರ್ಗಗಳಿಂದ ಕೂಡಾ ಬದಲಿಸಬೇಕಾಗಬಹುದು. ಕಾಂಗ್ರೆಸ್ ಪಕ್ಷ ಭಯೋತ್ಪಾದನೆ ಹಾಗೂ ಆಮಿಷಗಳಿಂದ ಹಣ ಸಂಗ್ರಹಣೆಗೆ ತೊಡಗುವ, ಚುನಾವಣಾ ಕಾಲದಲ್ಲಿ ಜನಗಳ ಮನಸ್ಸನ್ನು ಕ್ಷಣಿಕ ಆಕರ್ಷಣೆಗಳಿಗೆ ಒಳಗಾಗಿಸುವ, ರಾಜಕೀಯ ಚರ್ಚೆಗಳನ್ನು ವಿಕೃತಗೊಳಿಸುವ, ಲೋಕಸಭೆ ಹಾಗೂ ವಿಧಾನಸಭೆಗಳನ್ನು ಅಪ್ರಾಮಾಣಿಕವಾಗಿ ಶಕ್ತಿಹೀನಗೊಳಿಸುವ ಪ್ರವೃತ್ತಿಗಿಳಿಯುವಷ್ಟು ಪರಿಸ್ಥಿತಿ ಕೆಟ್ಟರೆ, ನಮ್ಮ ಸ್ವಯಂಸೇವಕರು ಜನಸಮೂಹಕ್ಕೆ ಸಚಿವಾಲಯಗಳು, ಸಂಸತ್ತು, ಆಕಾಶವಾಣಿ ಕೇಂದ್ರಗಳು ಹಾಗೂ ಶಸ್ತ್ರಾಗಾರಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮುಂದಾಳುತ್ವ ನೀಡಲು ಸಿದ್ಧರಾಗಬೇಕು. ಈ ನಡುವೆ ನಾನು ಹಿಂಸೆಯನ್ನು ಪ್ರಚುರಪಡಿಸುತ್ತರುವೆನೆಂದು ಅಪಾದಿಸಲಾಗುತ್ತಿದೆ. ಇಲ್ಲ, ಅಹಿಂಸಾ ವಿಧಾನದ ಅನುಸರಣೆಗೇ ಬದ್ಧನಾಗಲು ನಾನು ಇಷ್ಟಪಡುವೆ. ಆದರೆ ಈ ಕ್ರೂರ, ಅಮಾನವೀಯ, ರಾಕ್ಷಸ ಹಿಂಸಾಚಾರದಿಂದ ನಾವು ಉಳಿದುಕೊಳ್ಳುವುದು ಸಂಘಟಿತ ಹಿಂಸೆಗಿಳಿಯುವ ಮೂಲಕ ಮಾತ್ರ ಎನ್ನುವಂತಾದರೆ, ಆಗ ನಾನು ಸಂಘಟಿತ ಹಿಂಸೆಯ ಬಳಕೆಗೆ ಇಚ್ಛಿಪಡುವೆ."

ಲೋಹಿಯಾರ ನಾಗರಿಕ ಅಸಹಕಾರದ ಪರಿಕಲ್ಪನೆಯ ಹಿಂದಿರುವ ಅಹಿಂಸೆಯ ಕಲ್ಪನೆ ಹಾಗೂ ಹಿಂಸೆ ಕುರಿತ ಈ ಮೇಲಿನ ಅವರ ಮಾತಿನ ನಡುವೆ ಮೇಲ್ನೋಟಕ್ಕೆ ವಿರೋಧಭಾಸ ಕಾಣಬಹುದು. ಆದರೆ ಇಲ್ಲಿ ಬಹುಜನರು ಗುರುತಿಸದೇ ಹೋಗುವ ಅಂಶವೆಂದರೆ, ಜನತೆಗೆ ಅಹಿಂಸೆಯೇ ಹಿಂಸೆಯಾಗಿ ಸಾಕ್ಷಾತ್ಕಾರವಾಗುವ 'ಸತ್ಯ'ದ ಕ್ಷಣವೇ ನಿರ್ಣಾಯಕ. ಆಗ ನಿರ್ಣಾಯಕವಾಗುವುದು ಈ ಸತ್ಯವೇ ಹೊರತು ಹಿಂಸೆಯೂ ಅಲ್ಲ ಅಹಿಂಸೆಯೂ ಅಲ್ಲ – ಆ ಕ್ಷಣದೊಳಗೆ ಈ ಎರಡೂ ಜನತಾ ಹೋರಾಟದೊಳಗೆ transcend ಆಗಿರುತ್ತವೆ ಎಂಬ ಲೋಹಿಯಾರ ತತ್ವ ಮೀಮಾಂಸೆ.

ಹೀಗೆ ಗಾಂಧೀಜಿಯ ಅಹಿಂಸಾ ತತ್ವದ ಹಿಂದಿನ ಭಾವವನ್ನು ಮಾತ್ರ ಸೆಳೆದುಕೊಳ್ಳುವ ಲೋಹಿಯಾ ಇಡೀ ಗಾಂಧೀವಾದದ ಬಗ್ಗೆ ತಳೆಯುವೂ ಈ ವಿಮರ್ಶಾತ್ಮಕ ನಿಲುವನ್ನೇ. ರಾಷ್ಟ್ರೀಯ ಸ್ವಾತಂತ್ರಕ್ಕಾಗಿ ಗಾಂಧೀಜಿ ರೂಪಿಸಿದ ಸತ್ಯಾಗ್ರಹದ ಅಸ್ತ್ರವನ್ನು ಸಾಮಾಜಿಕ ಹಾಗೂ ಆರ್ಥಿಕ ಸ್ವಾತಂತ್ರ್ಯಕ್ಕಾಗಿಯೂ ನಡೆಸುವ 'ಸಮಾಜವಾದೀ ವರ್ಗ ಹೋರಾಟ'ದ ನಿರಂತರ ಅಸ್ತ್ರವನ್ನಾಗಿ ('ನಾಗರಿಕ ಅಸಹಕಾರ ಸತ್ಯಾಗ್ರಹ' ಎಂಬ ಹೆಸರಿನಲ್ಲಿ) ಪರಿಷ್ಕರಿಸಿದ ಲೋಹಿಯಾ, ಗಾಂಧಿವಾದದ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳನ್ನೂ ತಮ್ಮ ಚಿಕಿತ್ಸಕ ನೋಟದ ಮೂಲಕ ಪರಿಷ್ಕರಣೆಗೆ ಒಳಪಡಿಸಿದರು. ಗಾಂಧೀಜಿ ಆತ್ಮ ಪರಿಶುದ್ಧಿಗಾಗಿ ಪ್ರತಿಪಾದಿಸಿದ ಬ್ರಹ್ಮಚರ್ಯ ಪಾಲನೆ, ವರ್ಣ ವ್ಯವಸ್ಥೆ ಕುರಿತ ವಾಖ್ಯಾನ ಹಾಗೂ ಆಸ್ತಿ ಸಂಬಂಧ ಕುರಿತ ಟ್ರಸ್ಟೀಷಿಪ್ ವ್ಯವಸ್ಥೆಯ ನಿರೂಪಣೆ–ಇವನ್ನು ಲೋಹಿಯಾ ಒಪ್ಪಲಿಲ್ಲ. ಮನುಷ್ಯರ ನಡುವಣ ಲೈಂಗಿಕ ಸಂಬಂಧ ಸಾಮಾಜಿಕ ಸಂಬಂಧ ಹಾಗೂ ಆರ್ಥಿಕ

ಸಂಬಂಧ ಈ ಮೂರೂ ಸಂಬಂಧಗಳ ಬಗ್ಗೆಯೂ ಲೋಹಿಯಾ ಗಾಂಧೀಜಿಯ ವಿರುದ್ಧವಾಗಿದ್ದೂ, ಕೊನೆ ಕ್ಷಣದವರೆಗೆ ಅವರ ನೆರಳಿನಂತೆ ಅನುಸರಿಸಿದ್ದು ಒಂದು ಚೋದ್ಯವಾಗಿ ಕಾಣಬಹುದು. ಆದರೆ ಹಾಗೇನಿಲ್ಲ. ಮನುಷ್ಯ ಸಂಬಂಧಗಳ ವಿಷಯದಲ್ಲಿ ಇಬ್ಬರ ಗುರಿ ಒಂದೇ ಆಗಿದ್ದರೂ, ಈ ಸಂಬಂಧಗಳ ಅರ್ಥೈಸುವಿಕೆಗೆ ಗಾಂಧೀಜಿ ಪರಿಶುದ್ಧವಾದಿ ಹಿಂದೂ ಧರ್ಮವನ್ನು ನೆಲಮಾಡಿ ಕೊಂಡರೆ ಲೋಹಿಯಾ ಎಲ್ಲ ರೀತಿಯ ಧರ್ಮೀಯತೆಯನ್ನೂ transcend ಮಾಡಿಕೊಂಡ ಸಮಾಜವಾದಿ ತತ್ವ ಚಿಂತನೆಯನ್ನು ನೆಲಮಾಡಿಕೊಂಡರು. ಈ ನೆಲೆ ಗಾಂಧೀಜಿಯನ್ನು ನಿರಪೇಕ್ಷ ಲೈಂಗಿಕ ಪರಿಶುದ್ಧತೆ, ಸನಾತನ ವರ್ಣ ವ್ಯವಸ್ಥೆ ಹಾಗೂ ಟ್ರಸ್ಟೀಷಿಪ್ ಪರಿಕಲ್ಪನೆಗಳಿಗೆ ಕೊಂಡೊಯ್ದಿದ್ದರೆ; ಲೋಹಿಯಾರ ತತ್ವ ಚಿಂತನೆ ಅವರನ್ನು ಶೋಷಣೆ ಇಲ್ಲದಂತಹ ಲೈಂಗಿಕ ಸಂಬಂಧ, ಜಾತಿವಿನಾಶ ಹಾಗೂ ಆಸ್ತಿಯ ಸಾಮಾಜೀಕರಣದ ಕಲ್ಪನೆಗಳಿಗೆ ಕರೆದೊಯ್ದಿತು. ಗಾಂಧೀಜಿ ಹಾಗೂ ಲೋಹಿಯಾ ನಡುವಣ ಏಕತೆಯಲ್ಲಿನ ಈ ಭಿನ್ನತೆಯಿಂದಾಗಿಯೇ ಗಾಂಧೀಜಿ ಸಾವಿನ ನಂತರ ಲೋಹಿಯಾ ಗಾಂಧೀವಾದವನ್ನು ಎರಡು ಭಾಗಗಳಾಗಿ ನೋಡುವಂತಾದದ್ದು. ಗಾಂಧೀವಾದ ತನ್ನ ಸಮಗ್ರತೆಯನ್ನು ಕಳೆದುಕೊಂಡಿತ್ತು: "ಗಾಂಧೀವಾದ ಇಂದು ತನ್ನ ಎರಡು ಉತ್ಪತ್ತಿಗಳ ರೂಪದಲ್ಲಿ ವ್ಯಕ್ತಗೊಳ್ಳುತ್ತಿದೆ – ಸರ್ಕಾರಿ ಗಾಂಧೀವಾದ ಹಾಗೂ ಮಠೀಯ ಗಾಂಧೀವಾದ. ಈ ಎರಡು ಉತ್ಪತ್ತಿ ರೂಪಗಳ ಜೋಡಣೆಯನ್ನೇ ಇಂದು ಅಧಿಕಾರಯುತವಾಗಿ ಗಾಂಧೀವಾದ ಎಂದು ಕರೆಯಲಾಗುತ್ತಿರುವುದು. ಈ ಅಧಿಕಾರಯುತ ಗಾಂಧೀವಾದ ವಿಜಯದ ನಂತರ ಹೇಳಲಾದ ತತ್ವಜ್ಞಾನವಾಗಿ ಹೋಗಿದೆ. ಅದಕ್ಕೆ ಹಲ್ಲುಗಳೇ ಇರಲಿಲ್ಲವೋ ಎನ್ನುವಂತೆ ಅವನ್ನು ಕಳಚಿಸಲಾಗಿದೆ. ಮಠೀಯ ಗಾಂಧಿವಾದ ತನ್ನ ಜೀವನೋಪಾಯಕ್ಕಾಗಿ ಇಡಿಯಾಗಿ ಸರ್ಕಾರೀ ಗಾಂಧೀವಾದವನ್ನು ಅವಲಂಬಿಸಿದೆ. ಸರ್ಕಾರೀ ಗಾಂಧೀವಾದ ಏನೂ ಮಾಡದೆ ಕೂತಿದೆ. ಈ ಎರಡೂ, ಸ್ತರೀಕರಣದ ವೈಭವದೊಂದಿಗೆ ಆನಂದದ, ಸಂತೃಪ್ತಿಯ ನಿರಾಂತಕ ಬಾಳುವೆ ನಡೆಸಿವೆ."

ಗಾಂಧೀವಾದದ ಈ ಅವನತಿಗೆ ಕಾರಣ ಅದರ ಭಾವವನ್ನೇ ನಿರ್ಲಕ್ಷಿಸಿ ಬರೀ ಅದರ ಹಂದರವನ್ನಷ್ಟೇ ಜಗ್ಗುತ್ತಿರುವುದೇ ಆಗಿದೆ ಎಂಬುದನ್ನು ಲೋಹಿಯಾ ಗುರುತಿಸಿದ್ದರು. ಮನುಷ್ಯನ ಪ್ರಜ್ಞೆ ವಿಘಟನೆಗೊಳ್ಳದಂತೆ. ಆತನನ್ನು ಕೇಂದ್ರವಾಗುಳ್ಳ ಸಾಮಾಜಿಕ ಘಟಕಗಳನ್ನು ರೂಪಿಸುವುದೇ ಗಾಂಧೀವಾದದ ಹಿಂದಿನ ಭಾವವಾಗಿತ್ತು. ಚರಕಾ ಈ ಭಾವದ ಸಂಕೇತ ಮಾತ್ರ; ಅದು ಮನುಷ್ಯನ ಘಟನೆಯನ್ನು ಕಾಪಿಡಬಲ್ಲ ತಂತ್ರಜ್ಞಾನದ ಪ್ರತೀಕ ಮಾತ್ರ. ಈ ಹಿನ್ನಲೆಯಲ್ಲೇ ಲೋಹಿಯಾ ಗಾಂಧೀವಾದ ಮತ್ತೆ ಕ್ರಾಂತಿಕಾರವಾಗಬಹುದಾದ ಮಾರ್ಗವೊಂದನ್ನು ಸೂಚಿಸಿದ್ದು. "ಪ್ರಸಕ್ತ ಪ್ರಗತಿಶೀಲ ತಂತ್ರಜ್ಞಾನವನ್ನು ಗಾಂಧೀವಾದದ ಸಹಾಯದೊಡನೆ ಪರಿಷ್ಕರಿಸಿ ಒಂದು ಹೊಸ ಸ್ವರೂಪದ ಅರ್ಥವ್ಯವಸ್ಥೆಗೆ ಬುನಾದಿ ಹಾಕುವುದಾದರೆ ಆಗ ಗಾಂಧೀವಾದವು ಸರ್ಕಾರದ ಮೂಲಕ ಕ್ರಾಂತಿಕಾರಕವಾಗಿ ಕಾರ್ಯಪ್ರವೃತ್ತವಾದೀತು. ಅದು ಗಾಂಧೀವಾದದ ಭಾವವನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಸಾಧ್ಯವೇ ಹೊರತು ಅದನ್ನು ಅಕ್ಷರಶಃ ಅನುಕರಿಸಿ ನೂಲುತ್ತಾ ಕೂರುವುದ ರಿಂದಲ್ಲ."

(ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ: ೧೯೮೦)

ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್: ಆಧುನಿಕ ಭಾರತವನ್ನು ರೂಪಿಸಿದ ಚಿಂತಕರು: ಒಂದು ಮರುನೋಟ

ಸ್ನೇಹಿತರೇ,

ಮೊದಲಿಗೆ ನಾನು ಇಂತಹ ಮಹತ್ವದ ಮತ್ತು ವ್ಯಾಪಕ ಚರ್ಚೆಗೆ ಕಾರಣಬಹುದಾದ ವಿಚಾರ ಸಂಕಿರಣವನ್ನು ಹೊನ್ನಾವರದಂತಹ ಸಣ್ಣ ಊರೊಂದರಲ್ಲಿ ಆಯೋಜಿಸಿರುವ 'ಮಂಥನ' ಬಳಗದ ಡಾ.ಕೃಷ್ಣ ಮತ್ತು ಡಾ.ಅನುಪಮಾ ದಂಪತಿಗಳನ್ನು ಮತ್ತು ಇವರಿಗೆ ಮಾರ್ಗದರ್ಶನ ಮತ್ತು ಸಹಕಾರ ನೀಡುತ್ತಿರುವ ಶಿವಮೊಗ್ಗ ಮುನೀರ್ ಹಾಗೂ ಡಾ.ಎಸ್. ರವೀಂದ್ರನಾಥ್ ಅವರನ್ನು ಅಭಿನಂದಿಸಬಯಸುವೆ. ಯಾಕೇಂದ್ರೆ ಇಂತಹ ವಿಚಾರ ಸಂಕಿರಣಗಳನ್ನು ಇಂದು ಬೆಂಗಳೂರು, ಮಂಗಳೂರು, ಮೈಸೂರು ಅಥವಾ ಧಾರವಾಡ–ಹುಬ್ಬಳ್ಳಿಗಳಂತಹ ಮಹಾನಗರಗಳಲ್ಲಿ ಏರ್ಪಡಿಸಿದರೆ, ಅವು ಹೀಗೆ ಜನರ ಆಸಕ್ತಿ, ಗಮನ ಸೆಳೆಯುವ ಅವಕಾಶ ಕಡಿಮೆ. ಇದೇನಿದು ಬಿಲ್ ಗೇಟ್ಸ್, ನಾರಾಯಣ ಮೂರ್ತಿ, ಲಕ್ಷ್ಮಿ ಮಿತ್ತಾಲ್ ಅಥವಾ ಅಂಬಾನಿಗಳ ಬಗ್ಗೆ ಚರ್ಚೆ ಮಾಡಬೇಕಾದ ಸಮಯದಲ್ಲಿ ಇವರು, ಈಗ ಅಪ್ರಸ್ತುತವಾಗಿ ಜನ ಮರೆತೇ ಬಿಟ್ಟಿರುವವವರ ಬಗ್ಗೆ ಚರ್ಚೆ ಮಾಡಹೊರಟಿರುವರಲ್ಲ ಎಂದು ಆಶ್ಚರ್ಯ ಪಡುವುದಷ್ಟೇ ಅಲ್ಲ, ಇದು ಇಂದಿನ ಅಭಿವೃದ್ಧಿ ಯುಗದ ಬಗ್ಗೆ ಸುಮ್ಮನೆ ತಕರಾರು ತೆಗೆಯುವುದನ್ನೇ ಚಟ ಮಾಡಿಕೊಂಡಿರುವ ಹತಾಶ ಎಡಪಂಥೀಯರ ಹಳಹಳಿಕೆ ಮಾತ್ರವಾಗಿದೆ ಎಂದು ಅವರು ದೂಷಿಸಿಯಾರು ಕೂಡಾ. ಮಹಾ ನಗರಗಳ ಜನ, ಅವರು ಯಾವುದೇ ವರ್ಗಕ್ಕೆ ಸೇರಿರಲಿ, ಅವರಲ್ಲಿ ಬಹುಪಾಲು ಜನ ಈ 'ಅಭಿವೃದ್ಧಿ ಯುಗ'ದ ಬಹು ದೊಡ್ಡ ಫಲಾನುಭವಿಗಳಾದ ಮಧ್ಯಮ ವರ್ಗದ ಅನುಯಾಯಿಗಳೇ ಆಗಿಬಿಟ್ಟಿದ್ದಾರೆ. ಹಾಗಾಗಿ ಇಂತಹ ವಿಚಾರ ಸಂಕಿರಣಗಳು ಮಧ್ಯಮ ವರ್ಗಗಳು ಇನ್ನೂ ಅಷ್ಟಾಗಿ ಭ್ರಷ್ಟಗೊಳ್ಳದ ಇಂತಹ ದೂರದ ಸಣ್ಣ ಊರುಗಳಲ್ಲೇ ನಡೆಯುವುದು ಸಹಜವೂ, ಉಚಿತವೂ ಆಗಿದೆ.

ಇನ್ನು ಇಂದಿನ ವಿಚಾರ ಸಂಕಿರಣದ ವಿಷಯಕ್ಕೇ ಬಂದರೆ, 'ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್: ಆಧುನಿಕ ಭಾರತವನ್ನು ರೂಪಿಸಿದ ಚಿಂತಕರು: ಒಂದು ಮರುನೋಟ' ಎಂಬ ಶೀರ್ಷಿಕೆಯೇ ಇಂದು ಚರ್ಚೆಯಾಗಬೇಕಾದ ನಾಲ್ಕೈದು ಮುಖ್ಯ ಅಂಶಗಳನ್ನು ಮುನ್ನೆಲೆಗೆ ತರುವಂತಿದೆ ಎಂಬುದನ್ನು ನಾವು ಗಮನಿಸಬೇಕು. ಆ ಅಂಶಗಳೆಂದರೆ,

೧. ಈಗ ನಮ್ಮ ಮುಂದಿರುವುದು ಆಧುನಿಕ ಭಾರತ.
೨. ಈ ಆಧುನಿಕ ಭಾರತಕ್ಕೆ ಈ ನಾಲ್ವರ ಚಿಂತನೆಗಳೂ ಆಧಾರವಾಗಿವೆ.
೩. ಆದರೆ ಈ ಆಧುನಿಕ ಭಾರತ ಇಂದು ಒಂದು ಸಮಸ್ಯಾತ್ಮಕ ವಿದ್ಯಮಾನವಾಗಿದೆ.
೪. ಈ ಸಮಸ್ಯಾತ್ಮಕತೆಗೆ ಈ ಚಿಂತಕರ ಚಿಂತನೆಗಳಲ್ಲಿನ ಸಮಸ್ಯೆಗಳು ಎಷ್ಟರ ಮಟ್ಟಿಗೆ ಕಾರಣ?
೫. ಈ ಸಮಸ್ಯೆಗಳನ್ನು ಇವರ ಚಿಂತನೆಗಳನ್ನು ಇವೊತ್ತಿಗೆ ವಿಸ್ತರಿಸಿಕೊಂಡು ಪರಿಹರಿಸಿಕೊಳ್ಳಬಹುದೇ, ಹೇಗೆ?

ನೀವು ಗಮನಿಸಿರಬಹುದಾದಂತೆ, ಈ ಮೇಲಿನ ಐದು ಅಂಶ ಅಥವಾ ಪ್ರಶ್ನೆಗಳ ಹಿಂದಿರುವ ಮುಖ್ಯ ವಸ್ತು ಆಧುನಿಕತೆ. ಹಾಗಾಗಿ, ಇವೊತ್ತಿನ ಚರ್ಚೆಯ ಕೇಂದ್ರ ಬಿಂದು ಆಧುನಿಕತೆಯೇ ಆಗಬೇಕಿದೆ. ಆದರೆ, ಇಂದು ಭಾರತವನ್ನು ಮಾತ್ರ ಆಧುನಿಕವೆಂದು ಕರೆಯಲಾಗುತ್ತಿಲ್ಲ. ಇಡೀ ಜಗತ್ತೇ ಆಧುನಿಕವಾಗಿದೆ. ಅಥವಾ ಜಗತ್ತು ಆಧುನಿಕವಾಗುವ ಪ್ರಕ್ರಿಯೆಯಲ್ಲಿ ಭಾರತವೂ ಆಧುನಿಕವಾಗಿದೆ. ಬಹುಶಃ ಇವೊತ್ತಿನ ಚರ್ಚೆ ಈ ಪ್ರಕ್ರಿಯೆಯ ವಿವರವಾದ ಪರಿಶೀಲನೆಯೇ ಆಗಿರುತ್ತದೆಂದು ನಾನು ಭಾವಿಸುವೆ. ಅಥವಾ ಭಾರತದ ಆಧುನಿಕತೆಯನ್ನು ಪರಿಶೀಲಿಸುವ ಮೂಲಕವೇ ಜಗತ್ತಿನ ಆಧುನಿಕತೆಯನ್ನು ಪರಿಶೀಲಿಸುವ ಕೆಲಸವೂ ಇದಾಗಬಹುದು. ಅಂದರೆ ಇವೊತ್ತು ಚರ್ಚೆಯಾಗಬೇಕಾದುದು, ಆಧುನಿಕತೆ ಮತ್ತು ಅದನ್ನು ಈ ಐವ್ವರು ಚಿಂತಕರು ಗ್ರಹಿಸಿ, ತಮ್ಮ ಚಿಂತನೆ ಮತ್ತು ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡ ರೀತಿ–ನೀತಿಗಳು. ಹಾಗೆ ನೋಡಿದರೆ, ಇವೊತ್ತಿನ ಅಂದರೆ ಸಮಕಾಲೀನ ಜಗತ್ತನ್ನು ಬಾಧಿಸುತ್ತಿರುವ ಎರಡು ಮುಖ್ಯ ಸಮಸ್ಯೆಗಳ ಹಿಂದೆ ಇರುವುದು ಈ ಆಧುನಿಕತೆಯ ಪ್ರಶ್ನೆಯೇ ಆಗಿದೆ:

೧. ಇವೊತ್ತಿನ ಜಗತ್ತಿನ ಮುಖ್ಯ ಯುದ್ಧ, ಹಿಂಸಾಚಾರ ನಡೆದಿರುವುದು ಇಸ್ಲಾಂ ಧರ್ಮದ ರಕ್ಷಣೆಯ ಹೆಸರಿನಲ್ಲಿನ ಭಯೋತ್ಪಾದನೆಯ ಸಂಬಂಧವಾಗಿ. ಇದರ ಹಿಂದೆ ಇರುವುದು ಇಸ್ಲಾಂ ಸಂಸ್ಕೃತಿ ಮತ್ತು ಆಧುನಿಕತೆಯ ನಡುವಣ ಅನುಸಂಧಾನದ ಸಮಸ್ಯೆ.

೨. ಹವಾಮಾನ ವೈಪರೀತ್ಯ ಸಮ್ಮೇಳನದ ಹಿಂದಿರುವುದೂ ಈ ಆಧುನಿಕತೆ ಸೃಷ್ಟಿಸಿರುವ ಸಮಸ್ಯೆಯೇ. ಏಕೆಂದರೆ ಹವಾಮಾನ ವೈಪರೀತ್ಯಕ್ಕೆ ಕಾರಣವಾಗಿರುವ ಅತಿಯಾದ ಇಂಗಾಲ ಪ್ರಸರಣದ ಸಮಸ್ಯೆ ಇರುವುದು ಈ ಆಧುನಿಕತೆ ಸೃಷ್ಟಿಸಿಕೊಟ್ಟ ಅಭಿವೃದ್ಧಿ ಮಾದರಿಯಲ್ಲೇ.

ಹಾಗಾಗಿ ಇಂದಿನ ನಮ್ಮ ಚರ್ಚೆಯನ್ನು ಆರಂಭಿಸಬೇಕಾದ್ದು, ಆಧುನಿಕತೆ ಎಂದರೇನು ಎಂಬ ಪ್ರಾಥಮಿಕ ಪಶ್ನೆಯಿಂದಲೇ. ಈಗ ಪ್ರಸ್ತಾಪಿಸಿದ ಜಗತ್ತಿನ ಎರಡು ಸಮಕಾಲೀನ ಸಮಸ್ಯೆಗಳಿಗೂ ಆಧುನಿಕತೆಗೂ ಇರುವ ಸಂಬಂಧದ ಸ್ವರೂಪವೇ ಬಹುಶಃ ಈ ಆಧುನಿಕತೆಯ ಸ್ವರೂಪವನ್ನೂ ಪರಿಚಯ ಮಾಡಿಕೊಡುವಂತಿದೆ ಎಂದು ನಾನು ಭಾವಿಸಿದ್ದೇನೆ. ಆಧುನಿಕತೆ ಎಂಬುದು ನಾವು ಪಶ್ಚಿಮದ modernityಗೆ ಸಂವಾದಿಯಾಗಿ ಬಳಸುತ್ತಿರುವ ಶಬ್ದ. ಈ modernity ನಮ್ಮನ್ನು ತಾಕುವ ಮುನ್ನ ಆಧುನಿಕತೆ ಎಂಬ ಶಬ್ದ ನಮ್ಮಲ್ಲಿ ಬಳಕೆಯಲ್ಲಿತ್ತೋ ಇಲ್ಲವೋ ನಾನರಿಯೆ. ಆದರೆ ಒಂದಂತೂ ನಿಜ. ಈ ಸಂವಾದಿ ಆಧುನಿಕತೆಯಿಂದ ನಮ್ಮ ಭಾಷೆ, ಆಲೋಚನೆ, ನಂಬಿಕೆ ಮತ್ತು ಬದುಕುವ

ಕ್ರಮಗಳೇ ನಿರ್ಣಾಯಕವಾಗಿ ಬದಲಾಗಿ ಹೋಗಿವೆ. ಸ್ಥೂಲವಾಗಿ ಹೇಳುವುದಾದರೆ, ನಮ್ಮ 'ಧರ್ಮ'ವೇ ಅಲ್ಲಾಡಿ ಹೋಗಿದೆ! ಆದರೆ ಇದಕ್ಕೆ ಇಸ್ಲಾಂ ಮಾತ್ರ ಕಟುವಾಗಿ ಪ್ರತಿಕ್ರಿಯಿಸುತ್ತಿರುವುದೇಕೆ ಎಂಬುದೂ ಚರ್ಚಾರ್ಹ ವಿಷಯವಾಗಿದೆ.

Modernityಗೆ ಸಂವಾದಿಯಾದ ಆಧುನಿಕತೆಯ ಅಕ್ಷರಶಃ ಅರ್ಥ, ಇಂದಿಗೆ ತಕ್ಕ ನಡೆ(The right way for today) ಎಂದು. ಅಂದರೆ ಈ ಕಲ್ಪನೆ ಹುಟ್ಟುವ ಹಿಂದಿನವರೆಗೆ ಕಾಲ ಜಡಗಟ್ಟಿತ್ತೆಂದೇ ಇದರ ಅರ್ಥವಾಗಿರುತ್ತದೆ. ಹಾಗಾಗಿ ಆಧುನಿಕತೆ ಎಂದರೆ, ಚರಿತ್ರೆ ಜಡವಾಗಿದ್ದ ಕಾಲದಿಂದ ಬಿಡುಗಡೆ ಎಂದೂ ಅರ್ಥವಾದೀತು. ಮೂಲತಃ ಇದು ೧೫ನೇ ಶತಮಾನದಲ್ಲಿ ಯೂರೋಪ್‌ನಲ್ಲಿ ಸಂಭವಿಸಿತೆಂದು ಹೇಳಲಾದ 'ಪುನರುಜ್ಜೀವನ' (Renaissance)ದಿಂದ ಮೂಡಿದ ಕಲ್ಪನೆ. ಇದು ಯೂರೋಪಿನ 'ಜ್ಞಾನಯುಗ' ಕೂಡಾ. ಏಕೆಂದರೆ ಇದು ಆವರೆಗೆ ಇದ್ದ ಆಲೋಚನಾ ಕ್ರಮ ಮತ್ತು ಅದನ್ನಾಧರಿಸಿದ ವ್ಯವಸ್ಥೆಯನ್ನು ಪ್ರಶ್ನಿಸಿದ ಯುಗ. ಮನುಷ್ಯ ತನ್ನನ್ನು ಮತ್ತು ಜಗತ್ತನ್ನು ನೋಡುವ ಕ್ರಮವನ್ನೇ ಬದಲಾಯಿಸಿಕೊಂಡ ಯುಗ. ವಿಜ್ಞಾನ ಹೊಸ ಅರ್ಥ ಪಡೆದ ಯುಗ. ೧೭ನೇ ಶತಮಾನದ Des'Cartes ಎನ್ನುವ ತತ್ವಜ್ಞಾನಿಯ cogito ergo sum ಅಂದರೆ, 'ನಾನು ಯೋಚಿಸುತ್ತೇನೆ– ಹಾಗಾಗಿ ನಾನು ಇದ್ದೇನೆ' ಎಂಬ ತತ್ವದ ಮೂಲಕ ಮನುಷ್ಯನ ಗ್ರಹಿಕೆಯ ನೆಲೆಗಳನ್ನೇ ಬದಲಾಯಿಸಿದ ಯುಗ.

ಅಂದರೆ, ಆವರೆಗೆ ದೈವ–ಧರ್ಮ ಕೇಂದ್ರಿತವಾಗಿದ್ದ ಜಗತ್ತು ಜ್ಞಾನಯುಗದ ಅನೇಕ ವೈಜ್ಞಾನಿಕ ತತ್ವಗಳ ಅವಿಷ್ಕಾರದ ಮೂಲಕ ವೈಚಾರಿಕ ಜಗತ್ತಾಯಿತು. ಅಂದರೆ, ಒಂದು ಅಖಂಡ ಅವಿಭಾಜ್ಯ ನಂಬಿಕೆಯಾಗಿದ್ದ ಜಗತ್ತು ಹಲವು ವಿದ್ಯಮಾನಗಳ–ಶಕ್ತಿಗಳ–ಚಿಂತನೆಗಳ ಜೋಡಣೆಯಾಗಿ ಕಾಣತೊಡಗಿತು. ಅಂದರೆ, ನಂಬಿಕೆಗೆ ಬದಲಾಗಿ ವಿಶ್ಲೇಷಣೆಯ ಮೂಲಕ (ಇದನ್ನು ಕಾರ್ಟೇಸಿಯನ್ ತರ್ಕ ಎಂದೂ ಕರೆಯಲಾಗುವುದು) ಜಗತ್ತನ್ನು ಅರಿಯಬಹುದೆಂಬ ಭಾವನೆ ಉಂಟಾಯಿತು. ಹಾಗಾಗಿ, ಜಗತ್ತು ಒಂದು ವೈಚಾರಿಕ ಆಕೃತಿಯಾಯಿತು. ದೈವ–ಧರ್ಮಗಳ ಅರ್ಥ–ಉದ್ದೇಶಗಳ ಬಗೆಗಿನ ನಂಬಿಕೆ ಅಲ್ಲಾಡತೊಡಗಿತು. ಹಾಗೇ ಇದರ ಉತ್ಪನ್ನಗಳಾಗಿದ್ದ ಊಳಿಗಮಾನ್ಯಶಾಹಿ ಮತ್ತು ರಾಜಶಾಹಿ ರಾಜಕೀಯ ವ್ಯವಸ್ಥೆಗಳೂ ಅಲ್ಲಾಡತೊಡಗಿದವು. ವ್ಯವಸ್ಥೆಯ ಎದುರು ವ್ಯಕ್ತಿಯ ಶಕ್ತಿ ಮುನ್ನೆಲೆಗೆ ಬರತೊಡಗಿತು. ಇದರಿಂದಾಗಿ ವ್ಯಕ್ತಿಯ ಘನತೆಯ ಕಲ್ಪನೆಯೂ ಮೂಡತೊಡಗಿತು. ಇದು ಸಹಜವಾಗಿಯೇ ಮನುಷ್ಯನಲ್ಲಿ ಸಾಮಾಜಿಕ 'ಸಮಾನತೆ'ಯ ಪರಿಕಲ್ಪನೆಯನ್ನೂ ಉದ್ದೀಪಿಸಿತು. ಆವರೆಗೆ ದೇವರು–ಧರ್ಮಗಳ ಜಿಜ್ಞಾಸೆ ಮನುಷ್ಯನ ಅಧ್ಯಾತ್ಮಿಕ ಸಮಾನತೆಯನ್ನಷ್ಟೇ ಚರ್ಚಿಸಿದ್ದರೆ, ಈಗ ಲೌಕಿಕ ಸಮಾನತೆಯ ಪ್ರಶ್ನೆಯೂ ಮುಂದಕ್ಕೆ ಬಂತು.

ಇದಕ್ಕೆ ಮುಖ್ಯ ಕಾರಣ, ಜ್ಞಾನಯುಗವು ಅಧ್ಯಾತ್ಮಮೂಲ ನಂಬಿಕೆಯ ಜಗತ್ತನ್ನು ಲೌಕಿಕಮೂಲ ವಿಜ್ಞಾನ ಜಗತ್ತನ್ನಾಗಿ ಮಾಡಿದ್ದು. ಇದನ್ನು ಅದು ತನ್ನ ಕ್ರಿಶ್ಚಿಯನ್ ಧರ್ಮದೊಳಗಿನ ಬಂಡಾಯದ ಮೂಲಕ ಸಾಧಿಸಿತು. ಅದು ಪ್ರತಿಭಟನೆಯ, Protestant ಧರ್ಮ ಎನಿಸಿಕೊಂಡಿತು. ಅದು ಜಗತ್ತನ್ನು ಮನುಷ್ಯನ ಸುಖ ಸವಲತ್ತುಗಳಿಗಾಗಿ ಇರುವ ದೇವರ ಕೊಡುಗೆ ಎಂದು ಸಾರಿತು. ಅಂದರೆ ಜಗತ್ತೆನ್ನುವುದು ದೇವರ ಹೊರಗಿರುವುದು; ಅದನ್ನು ಮನುಷ್ಯ ತನ್ನ ಸುಖ ಸವಲತ್ತುಗಳಿಗಾಗಿ ಬಳಸಿಕೊಳ್ಳಬಹುದು ಎಂಬ ಹೊಸ

ಸ್ವಾತಂತ್ರ್ಯಕ್ಕೆ ಕಾರಣವಾಗಿ, ವಿಜ್ಞಾನ ಹಳೆಯ ಧರ್ಮದ ನೈತಿಕ ಕಟ್ಟಳೆಗಳನ್ನು ಕಳಚಿಕೊಂಡು ದಾಪುಗಾಲುಗಳನ್ನಿಟ್ಟಿತು. ಬಂಡವಾಳವೆಂಬ ಹೊಸ ಸಂಪತ್ತಿನ ಹೊಸ ಪರಿಕಲ್ಪನೆ ಜಾರಿಗೆ ಬಂದು ಅದರ ಆಸರೆಯಲ್ಲಿ ತಂತ್ರಜ್ಞಾನದ ಬಾಗಿಲುಗಳು ತೆರೆಯುತ್ತಲೇ ಹೋದವು. ಜಗತ್ತೆನ್ನುವುದು ಬಂಡವಾಳವಾದಿ ಕೈಗಳಿಗೆ ಸಿಕ್ಕ ಒಂದು ಗ್ರಾಹಕ ವಸ್ತುವೇ ಆಗಿ ಹೋಯಿತು. ಇದರ ಹಿಂದಿನ ವೈಚಾರಿಕತೆ ಮತ್ತು ಇದು ಕೊಡುತ್ತಾ ಹೋದ ಫಲಗಳ ರುಚಿಯು ಮನುಷ್ಯನಲ್ಲಿ ಸಾಹಸ ಮತ್ತು ಸ್ಪರ್ಧೆಗಳ ಮೂಲಕ ಸಾಧ್ಯವಾಗುವ ಲೌಕಿಕ ಸಮಾನತೆ ಮತ್ತು ಅದನ್ನು ಎತ್ತಿ ಹಿಡಿಯುವ ಪ್ರಜಾಪ್ರಭುತ್ವವಾದಿ ಆಡಳಿತದ ಪರಿಕಲ್ಪನೆಗೆ ದಾರಿ ಮಾಡಿಕೊಟ್ಟಿತು. ಹಾಗಾಗಿ, ಆಧುನಿಕತೆಯನ್ನು ಉತ್ಪಾದನೆ ಮತ್ತು ಆಡಳಿತ –ಈ ಎರಡೂ ನೆಲೆಗಳಲ್ಲಿ ಸಮಾನತೆಯ ಹರಿಕಾರ ಎಂದೂ ಕರೆಯಲಾಗುತ್ತದೆ. ಆಧುನಿಕ ನಾಗರೀಕತೆಯ ಚಾಲನ ಶಕ್ತಿ ಸಮಾನತೆ ಎಂದೂ ಹೇಳಲಾಗುತ್ತದೆ. ಇದರ ಹಿಂದೆ, ಹಿಂದಿನ ದಿನಗಳ ಶಕ್ತಿಗಳಿಗೆ ಧಿಕ್ಕಾರದ, ಹಿಂದಿನ ದಿನಗಳ ಮಿತಿಗಳ ಉಲ್ಲಂಘನೆಯ ಮತ್ತು ಹೊಸ ಸಾಹಸಗಳ ಹುಮ್ಮಸ್ಸಿನ ರೋಮಾಂಚನವಿದೆ.

ಹಾಗಾಗಿಯೇ ಇದು ಕಳೆದ ಎರಡು ಮೂರು ಶತಮಾನಗಳಲ್ಲಿ ಜಗತ್ತಿನಾದ್ಯಂತ ಹರಡಿತು. ಬಹು ಬೇಗ ರೋಗದಂತೆ ಹರಡಿತು ಎಂದು ಗಾಂಧಿ ಹೇಳುತ್ತಾರೆ. ಅದನ್ನು ಆಮೇಲೆ ನೋಡೋಣ. ಆದರೆ ಗಾಂಧೀಜಿಯ ಮಾತನ್ನು ಅಧ್ಯಾತ್ಮವಾದಿಯ ಅತಿರೇಕದ ಮಾತು ಎಂದು ಸರಿಸಿಟ್ಟು ಯೋಚಿಸಿದರೂ, ಈ ಆಧುನಿಕತೆ ಈ ಎರಡು–ಮೂರು ಶತಮಾನಗಳಲ್ಲಿ ಅದು ವರವೋ ಶಾಪವೋ ಎಂದು ಆತಂಕ ಪಡುವಷ್ಟು ಅನಾಹುತಗಳನ್ನೂ ಮಾಡಿದೆ ಎಂಬುದು ಇಂದಿನ ಜಗತ್ತನ್ನು ಸುಮ್ಮನೆ ಒಮ್ಮೆ ನೋಡಿದರೇ ಗೊತ್ತಾಗುವಂತಿದೆ. ಅದು ಪ್ರಜಾಪ್ರಭುತ್ವ ಮತ್ತು ಸಮಾನತೆಯನ್ನು ಸಾಧಿಸುವ ದಿಸೆಯಲ್ಲಿಯೇ ಬೆಳೆದಿದ್ದರೆ, ಜಗತ್ತು ದಿನೇ ದಿನೇ ಶಾಂತಿಯನ್ನೇಕೆ ಕಳೆದುಕೊಳ್ಳುತ್ತಿದೆ? ಮುಗಿಯದ ಯುದ್ಧಗಳ, ದಿನೇ ದಿನೇ ವೈವಿಧ್ಯಮಯವಾಗುತ್ತಿರುವ ಹಿಂಸಾಚಾರಗಳ ವಿಷವ್ಯೂಹದಲ್ಲೇಕೆ ಸಿಕ್ಕಿಹಾಕಿಕೊಂಡು ನರಳುತ್ತಿದೆ? ಹೆಚ್ಚೆಚ್ಚು ಪ್ರಮಾಣದ ಮತ್ತು ಮಾರಕತೆಯ ಶಸ್ತ್ರಾಸ್ತ್ರಗಳನ್ನೇಕೆ ತಯಾರಿಸುತ್ತಿದೆ? ಈ ಶಸ್ತ್ರಾಸ್ತ್ರ ತಯಾರಿಕೆ ಮತ್ತು ಮಾರಾಟವೇ ಏಕೆ ಮತ್ತು ಹೇಗೆ ಇಂದಿನ ಜಗತ್ತಿನ ಅತಿ ದೊಡ್ಡ ವಾಣಿಜ್ಯ ವ್ಯವಹಾರವಾಗಿದೆ? ಈ ಪ್ರಶ್ನೆಗಳಿಗೆ ನಾವು ಉತ್ತರ ಕಂಡುಕೊಳ್ಳುವ ಪ್ರಯತ್ನದಲ್ಲೇ ಇಂದಿನ ವಿಚಾರ ಸಂಕಿರಣದ ಸಾರ್ಥಕತೆಯೂ ಅಡಗಿದೆ ಎಂದು ನಾನು ಭಾವಿಸಿದ್ದೇನೆ.

ಏಕೆಂದರೆ, ಇಂದಿನ ಭಾರತ ಈ ಪ್ರಶ್ನೆಗಳನ್ನು ಎದುರಿಸುತ್ತಿರುವ ಜಗತ್ತಿನ ಒಂದು ಭಾಗವೇ ಆಗಿದೆ. ಅಷ್ಟೇ ಅಲ್ಲ, ಜಾಗತೀಕರಣದ ಫಲವಾಗಿ ಅದರ ಅವಿಭಾಜ್ಯ ಭಾಗವೇ ಆಗಿ ಹೋಗಿದೆ ಎಂದೂ ಹೇಳಬಹುದು. ಅಥವಾ ಹಾಗೆ ಹೇಳುವ ಮೂಲಕವೇ ಇಂದಿನ ವಿಚಾರ ಸಂಕಿರಣ ಚರ್ಚಿಸಲು ಉದ್ದೇಶಿಸಿರುವ ವಿಷಯವನ್ನು ನಾವು ಪ್ರಸ್ತುತಗೊಳಿಸಿಕೊಳ್ಳ ಬಹುದು. ಏಕೆಂದರೆ, ಇಂದು ನಾವು ಯಾವ ಐವ್ವರು ಚಿಂತಕರತ್ತ ಮರುನೋಟ ಅಗತ್ಯವೆಂದು ಭಾವಿಸಿರುವೆವೋ ಆ ಐವ್ವರ ಚಿಂತನೆಗಳೂ ಒಂದಲ್ಲ ಒಂದು ರೂಪದಲ್ಲಿ ಮತ್ತು ಒಂದಲ್ಲ ಒಂದು ಮಟ್ಟದಲ್ಲಿ, ಆಧುನಿಕವೆಂದು ಕರೆಯಲ್ಪಡುವ ಈ ದೇಶವನ್ನು ಕಟ್ಟಿವೆ. ಆದರೆ ಹಾಗೆಯೇ, ಈ ಚಿಂತನೆಗಳು ನಿರೀಕ್ಷಿತ ಫಲ ಕೊಡುವಲ್ಲಿ ವಿಫಲವಾಗಿವೆ

ಯೆಂದು, ಅವುಗಳನ್ನಾಧರಿಸಿದ ರಾಜಕಾರಣವನ್ನು 'ಅಪ್ರಸ್ತುತ'ವೆಂದು ಸಾರಿ, ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ 'ಸುಧಾರಣೆ'ಗಳ ಹೆಸರಿನಲ್ಲಿ ಹೊಸ ರಾಜಕಾರಣವನ್ನು ಆರಂಭಿಸಿದ್ದೇವೆ. ಆದರೆ, ಜಾಗತೀಕರಣವೆಂಬ ಈ ಹೊಸ ರಾಜಕಾರಣ ಈಗ ದೇಶವನ್ನು ಎಲ್ಲಿಗೆ ತಂದು ಮುಟ್ಟಿಸಿದೆ? ಈ ಪ್ರಶ್ನೆಯೇ ಇಂದು ನಮ್ಮಲ್ಲಿ ಈ ಐವ್ವರು ಚಿಂತಕರ ಚಿಂತನೆಗಳ ಬಗ್ಗೆ ಮರುನೋಟದ ಅಗತ್ಯವನ್ನೂ ಉಂಟು ಮಾಡಿರುವುದು ಎಂಬುದನ್ನಿಲ್ಲಿ ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಇಂದು ಭಾರತ ಅಭೂತಪೂರ್ವ ಎರಡಂಕಿ ಪ್ರಗತಿ ದರದತ್ತ ಮತ್ತು ಅದರಿಂದಾಗಿ ಕೆಲವೇ ವರ್ಷಗಳಲ್ಲಿ ಜಾಗತಿಕ ಶಕ್ತಿಯಾಗುವತ್ತ ದಾಪುಗಾಲಿಡುತ್ತಿರುವ ಮಾತುಗಳನ್ನಾಡಲಾಗುತ್ತಿದೆ. ಅದಕ್ಕೆ ತಕ್ಕಂತೆ ಇಲ್ಲಿ ಶ್ರೀಮಂತರ ಸಂಖ್ಯೆಯೂ ಹೆಚ್ಚುತ್ತಿದೆ. ಜಗತ್ತಿನ ಅತಿ ಶ್ರೀಮಂತರ ಲೆಕ್ಕ ತೆಗೆದುಕೊಂಡರೆ ಭಾರತ ಎರಡನೆಯದೋ, ಮೂರನೆಯದೋ ಸ್ಥಾನದಲ್ಲಿದೆ ಎಂದು ಹೇಳಲಾಗುತ್ತಿದೆ. ಆದರೆ ತೊಂದರೆ ಎಂದರೆ, ಬಡವರ ಸಂಖ್ಯೆಯಲ್ಲಿ ಈ ದೇಶ ಮೊದಲ ಸ್ಥಾನದಲ್ಲಿದೆ! ಅಷ್ಟೇ ಅಲ್ಲ, ದೇಶದಲ್ಲಿ ಇಂತಹ ಶ್ರೀಮಂತಿಕೆಯ ಸಾಧನೆ ಮತ್ತು ಪ್ರದರ್ಶನ, ಸಮಾಜದಲ್ಲಿ ಎಂತಹ ಹಪಾಹಪಿ ಅಥವಾ ತೀರದ ದಾಹ ಹುಟ್ಟಿಸಿದೆ ಎಂದರೆ, ಬಡತನದ ವ್ಯಾಖ್ಯೆ ದಿನೇ ಬದಲಾಗುತ್ತಿದ್ದು, ಅದು ನಿರ್ಮೂಲನವಾಗಲಾರದಂತಹ ಒಂದು ಸಮಸ್ಯೆಯಾಗಿ ಬೆಳೆಯುತ್ತಿದೆ. ಇದರ ಜೊತೆಗೇ ಬಡವ ಮತ್ತು ಶ್ರೀಮಂತರ ನಡುವಣ ಅಂತರವೂ ಎಷ್ಟು ಘರ್ಷಣಾತ್ಮಕವಾಗಿ ಬೆಳೆಯುತ್ತಿದೆಯೆಂದರೆ, ಮಕ್ಕಳ ಆತ್ಮಹತ್ಯೆಗಳೂ ಸೇರಿದಂತೆ ಹಿಂಸಾಚಾರವು ಊಹೆಗೂ ನಿಲುಕದ ವೈವಿಧ್ಯಮಯ ರೂಪಗಳನ್ನು ತಳೆದು; ಸಮಾಜದ ಮತ್ತು ಅದರಲ್ಲಿನ ಮನುಷ್ಯನ ಸೂಕ್ಷ್ಮಗಳೇ ಕಳೆದುಹೋಗುತ್ತಿವೆ. ಕಳೆದು ಐದು ವರ್ಷಗಳಿಂದ ದೇಶಾದ್ಯಂತ ನಡೆಯುತ್ತಿರುವ ರೈತರ ಸರಣಿ ಆತ್ಮಹತ್ಯೆ ಮತ್ತು ದೇಶ ಅದಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿ ಇದಕ್ಕೊಂದು ಉದಾಹರಣೆಯಾಗಿದೆ. ದೇಶದ ಪ್ರತಿ ಮಹಾನಗರವೂ ಪ್ರತಿದಿನ, ಪ್ರತಿಕ್ಷಣ ಮತೀಯ ಭಯೋತ್ಪಾದನೆಯ ವಿರುದ್ಧ ಕಟ್ಟೆಚ್ಚರದಲ್ಲಿರಬೇಕಾದ ಶಿಕ್ಷೆಗೆ ಒಳಗಾಗಿದೆ. ಇದೆಲ್ಲದರ ಪರಿಣಾಮವೆಂಬಂತೆ ಸಮಾಜದ ಅಧ್ಯಾತ್ಮಿಕತೆಯೇ ವಿಕ್ಷಿಪ್ತಗೊಂಡು, ಮಠ-ಆಶ್ರಮಗಳು ದೊಡ್ಡ ವಾಣಿಜ್ಯ ಮತ್ತು ಮನರಂಜನಾ ಕೇಂದ್ರಗಳಾಗಿ ಪರಿವರ್ತಿತವಾಗಿ, ಎಂದೂ ಇಲ್ಲದಷ್ಟು ಅಪಾರ ಜನಮನ್ನಣೆ ಪಡೆಯಲಾರಂಭಿಸಿವೆ.

ಈ ದುರಂತದ ಒಟ್ಟು ಚಿತ್ರ ಸೂಚ್ಯವಾಗಿ ನಮಗೆ ದೊರೆಯುವುದು, ನಮ್ಮ ದೇಶದ ಸ್ಥಾನ ಜಗತ್ತಿನ ಅತಿ ದೊಡ್ಡ ಆರ್ಥಿಕತೆಗಳ ಪಟ್ಟಿಯಲ್ಲಿ ಕ್ರಮೇಣ ಮೇಲೇರುತ್ತಿದ್ದರೆ, ಜಾಗತಿಕ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯಲ್ಲಿ ಕ್ರಮೇಣ ಕೆಳಗಿಳಿಯುತ್ತಿದೆ ಎಂಬ ಸಂಗತಿಯನ್ನು ಗಮನಿಸಿದಾಗ. ಆಹಾರ, ಆರೋಗ್ಯ, ಶಿಕ್ಷಣ ಇತ್ಯಾದಿ ಪ್ರಜೆಗಳ ಮೂಲಭೂತ ಅಗತ್ಯಗಳ ಲಭ್ಯತೆಯನ್ನಾಧರಿಸಿದ ಈ ಸೂಚ್ಯಂಕ, ಭಾರತವನ್ನು ಜಗತ್ತಿನ ಅತಿ ದರಿದ್ರ ದೇಶಗಳೆಂದು ಕರೆಯಲ್ಪಡುವ ಆಫ್ರಿಕಾದ ಸಹಾರಾ ಮರುಭೂಮಿ ದೇಶಗಳ ಕೆಳಕ್ಕೆ ತಳ್ಳಿದೆ! ಆದರೂ ನಾವು ದೇಶ ಅಭೂತಪೂರ್ವ ಪ್ರಗತಿಯ ಹಾದಿಯಲ್ಲಿದೆ ಎಂದು ಹೇಳುತ್ತೇವೆ. ಈ ಪ್ರಗತಿಯ ಸಾರಥ್ಯವನ್ನು ವಹಿಸಿದ ಮನಮೋಹನ ಸಿಂಗ್ ಅವರನ್ನು ಈ ದೇಶ ಕಂಡ ಅತ್ಯುತ್ತಮ ಪ್ರಧಾನ ಮಂತ್ರಿ ಎನ್ನುತ್ತೇವೆ... ಆದರೆ ಇವರು ರಾಜಕಾರಣವನ್ನು

ಪ್ರವೇಶಿಸಿದ್ದೇ, ಪಂಜಾಬ್‌ನ ಅಧಿಕೃತ ನಿವಾಸಿಯಾಗಿದ್ದರೂ ತಾವು ಅಸ್ಸಾಂನ ನಿವಾಸಿ ಎಂದು ಸುಳ್ಳು ಪ್ರಮಾಣ ಪತ್ರ ನೀಡಿ ರಾಜ್ಯಸಭಾ ಸದಸ್ಯರಾಗುವ ಮೂಲಕ.(ಅದಕ್ಕೆ ನಮ್ಮ ಸುಪ್ರೀಂ ಕೋರ್ಟು ತನ್ನ ಜಾಣತನವನ್ನೆಲ್ಲ ಪ್ರದರ್ಶಿಸಿ 'ತಾಂತ್ರಿಕ' ಅನುಮೋದನೆ ನೀಡಿತೆಂಬುದು ಬೇರೆ ವಿಚಾರ!) ಹಾಗೇ ಅವರು ಎರಡು ಬಾರಿ ಪ್ರಧಾನ ಮಂತ್ರಿಯಾಗಿರುವುದೂ, ಜನತೆಯನ್ನು ಎದುರಿಸಿ ಆಯ್ಕೆಯಾದ ನೇರ ಪ್ರತಿನಿಧಿಯಾಗಲ್ಲ, ಹಿಂಬಾಗಿಲಿನ ರಾಜ್ಯಸಭಾ ಸದಸ್ಯತ್ವದ ಮೂಲಕವೇ! ಆದರೂ ಇದನ್ನೆಲ್ಲ ನಾವು ಪ್ರಗತಿಶೀಲ ಪ್ರಜಾಪ್ರಭುತ್ವದ ದಿಗ್ವಿಜಯ ಎನ್ನುತ್ತೇವೆ. ಇದು ವಿಕ್ಷಿಪ್ತತೆ. ಸಂಪೂರ್ಣ ವಿಕ್ಷಿಪ್ತತೆ.

ಇದು ವಿಕಿಪ್ತತೆ ಏಕೆಂದರೆ, ಖೈರ್ಲಾಂಜಿಯಂತಹ ಅಮಾನುಷ ಜಾತಿ ದೌರ್ಜನ್ಯವನ್ನು, ಪಂಜಾಬ್-ಹರ್ಯಾಣಾ-ಉತ್ತರ ಪ್ರದೇಶಗಳ ಗ್ರಾಮಗಳಲ್ಲಿ ಜಾತಿ ಬಿಟ್ಟು ಅಥವಾ ಗೋತ್ರದಲ್ಲೇ ಪ್ರೀತಿಸಿ ಮದುವೆಯಾದ ತಮ್ಮ ಮಕ್ಕಳನ್ನು ಅವರ ತಂದೆ ತಾಯಿಗಳೇ 'ಮರ್ಯಾದಾ ಹತ್ಯೆ' ಎಂಬ ಹೆಸರಲ್ಲಿ ನಿರ್ಭಯರಾಗಿ ಮತ್ತು ನಿಷ್ಕರುಣೆಯಿಂದ ಕೊಲ್ಲಬಲ್ಲರೆಂಬುದನ್ನು, ಚಿಲ್ಲರೆ ಬೀದಿಕಳ್ಳನೊಬ್ಬನನ್ನು ಪೋಲೀಸು ಪೇದೆಯೊಬ್ಬ ತನ್ನ ಮೋಟರು ಸೈಕಲ್ಲಿಗೆ ಕಟ್ಟಿಕೊಂಡು ಜನರ ಸಮ್ಮುಖದಲ್ಲೇ ರಸ್ತೆಯಲ್ಲಿ ಎಳೆದಾಡಿ ಹಿಂಸಿಸಬಲ್ಲನೆಂಬುದನ್ನು, ಎಳೆಯ ಹೆಣ್ಣು ಮಗಳೊಬ್ಬಳು ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರೇಪಿಸಿದ ಪೋಲೀಸ್ ಉನ್ನತ ಅಧಿಕಾರಿಯೊಬ್ಬನ ಲೈಂಗಿಕ ಚೇಷ್ಟೆಯ ಅಪರಾಧಕ್ಕೆ ೬ ತಿಂಗಳುಗಳ ಸಾದಾ ಸಜೆಯ ಶಿಕ್ಷೆ ವಿಧಿಸಲು ನಮ್ಮ ನ್ಯಾಯಾಂಗಕ್ಕೆ ೧೯ ವರ್ಷಗಳು ಬೇಕಾಗುತ್ತದೆಂಬುದನ್ನು, ಗಣಿ ಕಾರ್ಮಿಕನೊಬ್ಬನ ಅದೃಷ್ಟ ಖುಲಾಯಿಸಿ ಆತ ರಾಜ್ಯವೊಂದರ ಮುಖ್ಯಮಂತ್ರಿಯಾದ ಎರಡು ಮೂರು ವರ್ಷಗಳಲ್ಲೇ ಖಜಾನೆಗೆ ೪೦೦೦ ಕೋಟಿ ರೂಪಾಯಿಗಳ ವಂಚನೆ ಮಾಡಬಲ್ಲನೆಂಬುದನ್ನು, ನಾವು ದೇಶಕ್ಕೆ ಬಡಿದಿರುವ ದೊಡ್ಡ ರೋಗವೊಂದರ ಲಕ್ಷಣಗಳೆಂದು ಭಾವಿಸಲು ಸಾಧ್ಯವಾಗುವುದೇ ಇಲ್ಲ!

ಈ ಸಂಬಂಧ ನಾನು ಕಣ್ಣಾರೆ ಕಂಡು ಗಾಬರಿಯಾದ ಒಂದು ಉದಾಹರಣೆಯೆಂದರೆ, ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣಕ್ಕೆ, ಹಣ ಹೆಚ್ಚು ಕೊಡುತ್ತಾರೆಂದು ನಮ್ಮ ರೈತರು-ಹೋರಾಟ ಮಾಡಿ ಬಗ್ಗೈರ್ ಹುಕಂ ಕೃಷಿ ಮಾಡುತ್ತಿದ್ದವರೂ ಸೇರಿದಂತೆ-ಮುಗಿಬಿದ್ದು ತಮ್ಮ ಕೃಷಿಭೂಮಿಯನ್ನು ಕೊಡಲು ಮುಂದಾದದ್ದು. ಶಿವಮೊಗ್ಗಕ್ಕೆ ವಿಮಾನ ನಿಲ್ದಾಣ ಏಕೆ, ಯಾರಿಗಾಗಿ; ಅದರ ನಿರ್ಮಾಣದ ಹಿಂದೆ ಇರುವ ಉದ್ದೇಶ ಮತ್ತು ಹಿತಾಸಕ್ತಿಗಳು ಎಂತಹವು, ಯಾವುವು ಎಂಬ ಪ್ರಶ್ನೆಗಳೇ ಇಲ್ಲಿ ಅಪ್ರಸ್ತುತವಾದ ಪರಿ, ಈ ವಿಕ್ಷಿಪ್ತತೆ ಇಡೀ ಸಮಾಜವನ್ನೇ ಹೇಗೆ ಆವರಿಸಿದೆ ಎಂಬುದನ್ನು ಸೂಚಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಹಾಗೇ ಇತ್ತೀಚೆಗೆ ಶಿವಮೊಗ್ಗದ ಕೆಲವು ರೈತರು, ಭೂಮಿ ಕೊಡದಿದ್ದರೆ ಕೈಗಾರಿಕೀಕರಣವಾಗಿ ದೇಶ ಉದ್ಧಾರವಾಗುವುದಾರೂ ಹೇಗೆ ಎಂದು ಪ್ರಶ್ನಿಸುತ್ತಾ, ಮುಖ್ಯಮಂತ್ರಿಯವರೇ ಮಧ್ಯಸ್ಥಿಕೆ ವಹಿಸುವುದಾರೆ(ಇದರ ಹಿಂದಿನ ಕಾರಣವನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ.) ತಾವು ಭೂಮಿ ಕೊಡಲು ಕಾತುರರಾಗಿರುವುದಾಗಿ ಘೋಷಿಸಿದ್ದಾರೆ! (ಆದರೀಗ, ಎಲ್ಲ ಭೂಸ್ವಾಧೀನ ಮುಗಿದ ಮೇಲೆ ಇಲ್ಲಿ ವಿಮಾನ ನಿಲ್ದಾಣ ಲಾಭದಾಯಕ ಅಲ್ಲ ಎಂಬ ತಾತ್ವಿಕ ತೀರ್ಮಾನಕ್ಕೆ ಬರಲಾಗಿದ್ದು, ಸ್ವಾಧೀನಪಡಿಸಿಕೊಂಡ ಭೂಮಿಯನ್ನು ರಿಯಲ್ ಎಸ್ಟೇಟ್ ವ್ಯವಹಾರಕ್ಕಾಗಿ ವರ್ಗಾಯಿಸುವ

ಪ್ರಯತ್ನಗಳು ನಡೆದಿವೆ ಎಂಬ ಗುಸು ಗುಸು ಕೇಳಿ ಬರುತ್ತಿದೆ!) ಇದು ನಮ್ಮ ರೈತ ಚಳುವಳಿ ಹುಟ್ಟಿದ ಜಿಲ್ಲೆಯಲ್ಲಿನ ಬೆಳವಣಿಗೆ... ಕಾರ್ಪೋರೇಟ್ ಬಂಡವಾಳವಾದ ನಮ್ಮ ಪ್ರಜಾಸತ್ತಾತ್ಮಕ ಸಂಘಟನಾ ಶಕ್ತಿಯ ಮೂಲ ಬೇರುಗಳನ್ನೇ ತಿಂದುಹಾಕ ಹೊರಟಿದೆ. ಮುಖ್ಯಮಂತ್ರಿ ತಮ್ಮ ಆಡಳಿತದ ಮೂಲ ಮಂತ್ರ ಇನ್ನು ಅಭಿವೃದ್ಧಿ, ಅಭಿವೃದ್ಧಿ ಅಭಿವೃದ್ಧಿ ಎನ್ನುತ್ತಿದ್ದರೆ, ಜನರಿಗೆ ಅದು ೪೦%, ೪೦%, ೪೦%(ಕಮೀಷನ್) ಎಂದು ಕೇಳಿಸುತ್ತಿದೆ!

ಈ ವಿಕ್ಷಿಪ್ತತೆಯ ಮೂಲ ಎಲ್ಲಿದೆ? ಜಾಗತೀಕರಣ ಎಂಬ ನವ ವಸಾಹತುಶಾಹಿ ರಾಜಕಾರಣದಲ್ಲಿದೆ ಎಂದು ಸುಲಭವಾಗಿ ಹೇಳಿಬಿಡಬಹುದು. ಆದರೆ ಈ ಜಾಗತೀಕರಣ ವಾದರೂ ಯಾವುದರ ಫಲ? ರಾಷ್ಟ್ರೀಯ ಎಲ್ಲೆಗಳನ್ನು ಮೀರಿದ ಮುಕ್ತ ಮಾರುಕಟ್ಟೆ ಆರ್ಥಿಕತೆಯನ್ನು ಪ್ರತಿಪಾದಿಸುವ ಅದನ್ನು, ಆಧುನಿಕತೆಯ ಬಾಗಿಲು ತೆರೆದ ಬಂಡವಾಳ ವಾದದ ಆತ್ಯಂತಿಕ ಘಟ್ಟ ಎಂದು ವರ್ಣಿಸಲಾಗುತ್ತಿದೆ. ಆದರೆ ಈ ಬಂಡವಾಳವಾದ ತನ್ನ ಗೋರಿಯನ್ನು ತಾನೇ ತೋಡಿಕೊಂಡು ಸಮತಾವಾದಕ್ಕೆ ದಾರಿ ಮಾಡಿಕೊಡುತ್ತದೆ ಎಂದು ವಾದಿಸಿದ ಮಾರ್ಕ್ಸ್ ಇಂದಿನ ರಾಜಕೀಯ ಚರ್ಚೆಗಳಲ್ಲಿ ಎಲ್ಲಿ ನಿಲ್ಲುತ್ತಾನೆ? ಜಾಗತಿಕ ಕ್ರಾಂತಿಯ ಕಹಳೆಯೂದಿದ ಮಾರ್ಕ್ಸ್‌ವಾದವೆಂಬುದೇಕೆ ಇಂದು ಭಾರತದಲ್ಲಿ ಮಾರ್ಕ್ಸ್‌ವಾದಿ ಎಂದು ಕರೆದುಕೊಳ್ಳುವ ರಾಜಕಾರಣಿಗಳ ನಡುವೆಯೇ ತನ್ನ ರಾಜಕೀಯ ಚಲನಶೀಲತೆಯನ್ನು ಕಳೆದುಕೊಂಡು ಕೆಲವು ಪಂಡಿತ ವಲಯಗಳ ಚರ್ಚಾವಸ್ತು ಮಾತ್ರ ಆಗಿ ಹೋಗಿದೆ? ಹಾಗೇ, ಬಂಡವಾಳವಾದದ ಬಾಗಿಲು ತೆರೆದ ಆಧುನಿಕತೆಯನ್ನೇ, ಅದು ರಾಕ್ಷಸೀಯವಾಗಿ ಹರಡುತ್ತಾ ಹೋಗುವ ಭೌತ ನಾಗರೀಕತೆಯ ಹರಿಕಾರನೆಂದು ಗುರುತಿಸಿ, ಅದನ್ನು ಆತ್ಮಬಲದಿಂದಷ್ಟೇ ವಿರೋಧಿಸಲು ಸಾಧ್ಯವೆಂದು ಹೇಳಿ; ಅದಕ್ಕೆ ಪರ್ಯಾಯವಾಗಿ ಸ್ವಾವಲಂಬಿ ಗ್ರಾಮ ಸಂಸ್ಕೃತಿಯನ್ನು ಪ್ರತಿಪಾದಿಸಿದ ಗಾಂಧಿ ಇಂದು ಅಧ್ಯಯನ ಮತ್ತು ಹೋರಾಟಗಳೆರಡರ ನೆಲೆಗಳಲ್ಲೂ ಕೇವಲ ಪ್ರತಿರೋಧದ ಸಂಕೇತವಾಗಿಬಿಟ್ಟು, ಪ್ರತಿಭಟನೆಗಳ ಸಂದರ್ಭದಲ್ಲಿ ಮಾತ್ರ ಏಕೆ ನೆನಪಿಗೆ ಬರುತ್ತಾರೆ? ಅದೂ ಆಧುನಿಕ ನಾಗರೀಕತೆಯ ಫಲಗಳಿಗಾಗಿ ನಡೆಯುವ ಪ್ರತಿಭಟನೆಯ ಸಂದರ್ಭಗಳಲ್ಲಿ!

ಇನ್ನು ಆಧುನಿಕ ನಾಗರೀಕತೆಯನ್ನು ಗಾಂಧಿಯಂತೆ ಇಡಿಯಾಗಿ ಪ್ರಶ್ನಿಸದೆ, ಮಾರ್ಕ್ಸ್‌ನಂತೆಯೇ ಅದರಲ್ಲಿನ ಸಮಾನತೆಯ ತುಡಿತದಲ್ಲಿ ಮನುಷ್ಯನ ಬಿಡುಗಡೆಯ ಸಾಧ್ಯತೆಯನ್ನು ಕಂಡು; ವಿಕೇಂದ್ರಿತ ಉತ್ಪಾದನಾ ಮತ್ತು ಆಡಳಿತ ತಂತ್ರಗಳ ಮೂಲಕ ಅದರ ವೇಗ ಮತ್ತು ಆಕ್ರಮಣಶೀಲತೆಗಳನ್ನು ಪಳಗಿಸಬಲ್ಲ ಸರಳ ಸಭ್ಯ ಜೀವನಮಟ್ಟದ ನವೀನ ಸಿದ್ಧಾಂತವೊಂದನ್ನು ಮಂಡಿಸಿದ ಲೋಹಿಯಾ ಇಂದು ಸಮಕಾಲೀನ ರಾಜಕೀಯ ಚರ್ಚೆಗಳ ಮಧ್ಯದಿಂದಲೇ ಕಾಣೆಯಾಗಿದ್ದಾರೆ ಏಕೆ? ಕಂಡರೂ ಜಾರ್ಜ್, ಮುಲಾಯಂ, ಲಾಲೂ ಇತ್ಯಾದಿ ಭಂಡ ರಾಜಕಾರಣಿಗಳ ಮೂಲಕವಷ್ಟೇ ಕಾಣುವ ದುಸ್ಥಿತಿಗೆ ಈಡಾಗಿದ್ದಾರೇಕೆ? ಇದು ನಮ್ಮ ತಾತ್ವಿಕ ಚರ್ಚೆಗಳು ಸೃಜನಶೀಲತೆಯನ್ನು ಕಳೆದುಕೊಂಡು ಭಂಡ ದಾರಿ ಹಿಡಿದಿರುವ ಸಂಕೇತವೇ? ಇವರ ಮಧ್ಯೆ, ಭಾರತದ ಪರಂಪರಾಗತ ದುಡಿಯುವ ಮತ್ತು ಅಪಮಾನಿತ ವರ್ಗವಾಗಿದ್ದ ದಲಿತರ ಶಾಪವಿಮೋಚನೆಯನ್ನು ಆಧುನಿಕ ನಾಗರೀಕತೆಯ ವಿಸ್ತರಣೆಯಲ್ಲಿ ಕಂಡು, ಅದನ್ನು ಉದಾರವಾದಿ ಪ್ರಜಾಪ್ರಭುತ್ವದ ಮೂಲಕ ಜನತೆಯ ಉಳಿದ ಭಾಗದೊಡನೆ ಸೇರಿ ಸಾಧಿಸುವ ಕನಸು ಕಂಡ ಅಂಬೇಡ್ಕರ್‌ರ

ಚಿಂತನೆಗಳು ನಮ್ಮ ಮುಖ್ಯ ರಾಜಕೀಯ ಚರ್ಚೆಗಳ ಅಂಚಿನಲ್ಲೇ ಉಳಿದು, ಇಂದಿನ ಬಹುಜನ ಸಮಾಜ ಪಕ್ಷದ ರೂಪದಲ್ಲಿ ಅಶ್ಲೀಲಗೊಳ್ಳುವ ಅಪಾಯವನ್ನು ಎದುರಿಸುತ್ತಿದೆ ಏಕೆ?

ಈ ಪ್ರಶ್ನೆಗಳಿಗೆ ನಾವು ಕಂಡುಕೊಳ್ಳುವ ಉತ್ತರಗಳೇ ಬಹುಶಃ ಈ ಐವ್ವರು ಚಿಂತಕರತ್ತ ಮರುನೋಟದ ಸಾಧುತ್ವ ಮತ್ತು ಸಾಧ್ಯತೆಗಳನ್ನು ತೆರೆಯಬಲ್ಲವು. ಇವರು ಆಧುನಿಕತೆ ಸೃಷ್ಟಿಸಿದ ಹೊಸ ಸಂಪತ್ತು ಮತ್ತು ಅಧಿಕಾರ ಕೇಂದ್ರಗಳ ಅಧ್ಯಯನ ಮಾಡಿ, ಅವುಗಳನ್ನು ಸಮಾನತೆಯ ಗುರಿಯತ್ತ ಪುರ್ನಸಂಘಟಿಸುವ ಪ್ರಯತ್ನ ಮಾಡಿದವರು. ಹಾಗಾಗಿ, ಇವರೆಲ್ಲ ಇಂದು ಅಪ್ರಸ್ತುತಗೊಂಡಿರುವುದೆಂದು ಹೇಳಲಾದ ಸಮಾಜವಾದಿ ಚಿಂತನಾ ಕ್ರಮಕ್ಕೆ ಸೇರಿದವರು ಎಂದು ಹೇಳಬಹುದು. ಇವರಲ್ಲಿ ಮಾರ್ಕ್ಸ್ ವೈಜ್ಞಾನಿಕ ಸಮಾಜವಾದಿ ಎನಿಸಿಕೊಂಡರೆ, ಲೋಹಿಯಾ ಪ್ರಜಾಸತ್ತಾತ್ಮಕ ಸಮಾಜವಾದಿ ಎನಿಸಿಕೊಂಡವರು. ಅಂಬೇಡ್ಕರ್ ಸಂವೈಧಾನಿಕ ಸರ್ಕಾರಿ ಸಮಾಜವಾದವನ್ನು ಪ್ರತಿಪಾದಿಸಿದವರು. ಗಾಂಧೀಜಿ, ಔಪಚಾರಿಕವಾಗಿ ಸೈದ್ಧಾಂತಿಕ ನೆಲೆಯಲ್ಲಿ ಸಮಾಜವಾದಿ ಎಂದೆನಿಸಿಕೊಳ್ಳದಿದ್ದರೂ, ತಮ್ಮದೇ ಅನೌಪಚಾರಿಕ ರೀತಿಯಲ್ಲಿ ಸಾರ್ವತ್ರಿಕ ಸಮಾನತೆಯ ಪ್ರತಿಪಾದಕರಾಗಿ, ತಮ್ಮನ್ನು ಹೆಮ್ಮೆಯಿಂದ ಹುಟ್ಟು ಸಮಾಜವಾದಿ ಎಂದು ಕರೆದುಕೊಂಡವರು. ಆದರೆ ಇವರ ಮಧ್ಯೆ ಕೆಲವು ಮೂಲಭೂತ ಭಿನ್ನಾಭಿಪ್ರಾಯಗಳಿದ್ದವು. ಅವುಗಳ ವಿವರಗಳಿಗೆ ನಾನಿಲ್ಲಿ ಹೋಗುವುದಿಲ್ಲವಾದರೂ, ಇಂತಹ ಭಿನ್ನಾಭಿಪ್ರಾಯಗಳ ಮೂಲ ನೆಲೆಯೊಂದನ್ನು ಗುರುತಿಸುವುದು ಇವೊತ್ತಿನ ಚರ್ಚೆಯ ದೃಷ್ಟಿಯಿಂದ ಮುಖ್ಯ ಎಂದು ನಾನು ಭಾವಿಸಿದ್ದೇನೆ. ಅದು ಇತಿಹಾಸವನ್ನು ಅರ್ಥ ಮಾಡಿಕೊಳ್ಳುವ ನೆಲೆ.

ಮಾರ್ಕ್ಸ್ ಮಾನವ ಇತಿಹಾಸವನ್ನು ವರ್ಗ ಹೋರಾಟಗಳ ಇತಿಹಾಸವೆಂದು ನಿರೂಪಿಸಿದ. ಆದರೆ, ಇದಕ್ಕಾಗಿ ಆತ ಕಟ್ಟಿದ ವರ್ಗ ಹೋರಾಟದ ಸಿದ್ಧಾಂತವನ್ನು ಗಾಂಧೀಜಿ 'ಕಟ್ಟು ಕಥೆ' ಎಂದು ತಳ್ಳಿ ಹಾಕಿದರು. ಹಾಗೇ ಆತ ಪ್ರತಿಪಾದಿಸಿದ ತಂತ್ರಜ್ಞಾನ ಪ್ರಧಾನವಾದ ವಿಮೋಚನೆಯ ಹಾದಿಯನ್ನು 'ಭ್ರಾಂತಿ' ಎಂದು ತಿರಸ್ಕರಿಸಿದರು. 'ದಾಸ್ ಕ್ಯಾಪಿಟಲ್'ನ್ನು ಓದಿದ್ದ ಗಾಂಧಿ, ಮಾರ್ಕ್ಸ್‌ನಿಗೆ ಆ ಎಲ್ಲ ಪರಿಶ್ರಮಕ್ಕೆ ದೊರೆತ ಬಿಡುವು ತಮಗೆ ದೊರೆತಿದ್ದರೆ ತಾವು ಅದನ್ನು ಇನ್ನೂ ಚೆನ್ನಾಗಿ ಬರೆಯುತ್ತಿದ್ದುದಾಗಿ ಹೇಳುತ್ತಾರೆ. ಬಹುಶಃ ಅವರು, ಅದು ಎಷ್ಟಾದರೂ ಬರವಣಿಗೆ ಎಂಬ ಸಣ್ಣ ವ್ಯಂಗ್ಯದೊಂದಿಗೆ ಈ ಮಾತನ್ನಾಡಿದರೋ ಏನೋ ಎನಿಸುತ್ತದೆ! ಅವರ ಪ್ರಕಾರ ಮಾನವ ಇತಿಹಾಸ ಎಂದರೆ, ಕೆಲವು ಘರ್ಷಣೆಗಳ 'ಬಿಡುವು'ಗಳುಳ್ಳ ಮಾನವ ಪ್ರೇಮದ ನಿರಂತರ ಕಥೆ. ಲೋಹಿಯಾ ಕೂಡಾ ಮಾರ್ಕ್ಸ್‌ನ ವರ್ಗ ಹೋರಾಟದ ಸಿದ್ಧಾಂತವು ಯೂರೋಪ್ ಕೇಂದ್ರಿತವಾದ ಇತಿಹಾಸದ ಸರಳೀಕರಣ ಎಂದು ಪ್ರತಿಪಾದಿಸಿ; ಆಧುನಿಕ ನಾಗರೀಕತೆ ಸೃಷ್ಟಿಸಿದ ವಸಾಹತುಶಾಹಿಯನ್ನು ಪರಿಗಣಿಸದೆ 'ಸಮಾಜವಾದಿ ಸಮಾನತೆ'ಯನ್ನು ಅರ್ಥೈಸಲಾಗುವುದಿಲ್ಲ ಎಂದು ವಾದಿಸಿದರು. ಹಾಗಾಗಿ ಪಶ್ಚಿಮದ ತಂತ್ರಜ್ಞಾನವನ್ನು ಸಂದೇಹದಿಂದಲೇ ನೋಡಿ, ಹೊಸ ಜಾಗತಿಕ ತಂತ್ರಜ್ಞಾನದ ಪರಿಕಲ್ಪನೆಯನ್ನು ಮುಂದಿಟ್ಟರು. ಇದು ಒಂದು ರೀತಿಯಲ್ಲಿ ಆಧುನಿಕ ನಾಗರೀಕತೆ ಕುರಿತ ಗಾಂಧಿ ಚಿಂತನೆಯ ರಾಜಕೀಯ ವಿಸ್ತರಣೆಯೇ ಆಗಿತ್ತು. ಇನ್ನು ಅಂಬೇಡ್ಕರ್ ವರ್ಗ ವೈರುಧ್ಯಗಳನ್ನು ಭಾರತದ ಸಂದರ್ಭದಲ್ಲಿ ಜಾತಿ

ಪರಿಭಾಷೆಯ ನೆಲೆಯಲ್ಲಿ ಒಪ್ಪಿದರಾದರೂ, ಅದು ಮಾರ್ಕ್ಸ್ ಹೇಳಿದ 'ಕ್ರಾಂತಿಕಾರಿ' ಮಾರ್ಗದ ಮೂಲಕ ಅಲ್ಲ; ಸಂಸದೀಯ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಪರಿಹರಿಸಲ್ಪಡಬೇಕು ಎಂದು ನಂಬಿದ್ದರು.

ಹೀಗಾಗಿ ಆಧುನಿಕ ನಾಗರೀಕತೆ ಮತ್ತು ಅದರ ಚಲನಶೀಲತೆ ಕುರಿತಂತೆ ಮಾರ್ಕ್ಸ್ ಒಂದು ನೆಲೆಯಲ್ಲಿ ನಿಂತು ಚರ್ಚಿಸಿದರೆ, ಮಿಕ್ಕ ಮುವ್ವರು ಇನ್ನೊಂದು ನೆಲೆಯಲ್ಲಿ ನಿಂತು ಚರ್ಚಿಸಿದಂತೆ ತೋರುತ್ತದೆ. ಇದಕ್ಕೆ ಮುಖ್ಯ ಕಾರಣ, ಇಡೀ ಜಗತ್ತು ಮನುಷ್ಯ ಶ್ರಮದಿಂದ ಸೃಷ್ಟಿಯಾಗಿದೆ ಎಂಬ ಭೌತ ನಿಲುವನ್ನು ತಳೆಯುವ ಮೂಲಕ ಮಾರ್ಕ್ಸ್, ಮನುಷ್ಯನನ್ನು ಮೂಲತಃ ಇತಿಹಾಸದ ಉಪಕರಣ ಮಾತ್ರವಾಗಿ ನೋಡಿದನೇನೋ ಎಂಬ ಅನುಮಾನ ಮಿಕ್ಕ ಮೂವರು ಚಿಂತಕರಲ್ಲಿದ್ದಂತಿರುವುದು. ಈ ಮೂವರ ಪ್ರಕಾರ, ಮನುಷ್ಯ ಒಮ್ಮೆಗೇ ಉಪಕರಣವೂ ಹೌದು, ಗುರಿಯೂ ಹೌದು;ಅವನು ಉಪಕರಣ ವಾಗಿರುವುದು ಗುರಿಯಾಗುವ ಪ್ರಕ್ರಿಯೆಯ ಭಾಗವಾಗಿಯೇ. ಇದು ಮಾರ್ಕ್ಸ್‌ನ ಆಲೋಚನಾ ಕ್ರಮದಲ್ಲಿ ದೂರ ತರ್ಕದ ಭಾಗವಾಗಿ ಮತ್ತು ಆನುಷಂಗಿಕ ಮಾತ್ರವಾಗಿ ಕಾಣಲು ಕಾರಣ, ಆತ ಯೂರೋಪಿನ ಜ್ಞಾನಯುಗ ಮೂಲವಾದ ಭೌತವಾದಿ ನಾಗರೀಕತೆಯ ಉತ್ಪನ್ನ ಎಂಬುದೇ ಆಗಿರಬಹುದು. ಈ ಒಡಕನ್ನು ಅರಿಯದೇ ಭಾರತದಲ್ಲಿ ಸಮಾಜವಾದಿ ಸಿದ್ಧಾಂತಗಳು ಮತ್ತು ಹೋರಾಟಗಳು ತಮ್ಮ ತಮ್ಮಲ್ಲೇ ಕಟುವಾಗಿ ಹೊಡೆದಾಡಿಕೊಂಡಿದ್ದ ರಿಂದಲೇ, ಅವು ಗುರಿ ಕಾಣದಾಗಿ ಸೋತು, ಅಂತಿಮವಾಗಿ ಜಾಗತೀಕರಣ ಎಂಬ ನವ ಬಂಡವಾಳವಾದಿ ಮತ್ತು ನವವಸಾಹತುವಾದಿ ರಾಜಕಾರಣಕ್ಕೆ ಸುಲಭವಾಗಿ ದಾರಿ ಮಾಡಿ ಕೊಟ್ಟವೆಂದು ಹೇಳಬಹುದು.

ದುಃಖದ ಸಂಗತಿಯೆಂದರೆ, ಈ ಐವ್ವರು ಚಿಂತಕರ ನಡುವಣ ತಾತ್ವಿಕ ಭಿನ್ನಾಭಿಪ್ರಾಯಗಳು ಈ ಚಿಂತನೆಗಳನ್ನಧಾರಿಸಿದ ಚಳುವಳಿಗಳ ಸಂದರ್ಭದಲ್ಲಿ ವಿಪರೀತಕ್ಕೆ ಹೋಗಿ, ಪರಸ್ಪರ ಶತ್ರುತ್ವ ರೂಪವನ್ನು ತಾಳಿಬಿಟ್ಟವೆ. ಈ ಭಿನ್ನಾಭಿಪ್ರಾಯಗಳು ತುಂಬಾ ಸಂಕೀರ್ಣ ನೆಲೆಯವಾಗಿದ್ದು, ಅವು ಶೋಷಣೆ ಮತ್ತು ಅಸಮಾನತೆಗಳೆಂಬ ಜೋಡಿ ಶತ್ರುವಿನೆದುರಿಗೆ ಪೂರ್ಣವಾಗಿ ಪರಸ್ಪರ ವಿರುದ್ಧವಾದವುಗಳೇನಲ್ಲ ಎಂಬ ವಿವೇಕವೇ ಈ ಚಳುವಳಿಗಳ ಸ್ಪರ್ಧಾತ್ಮಕತೆಯ ಕಾವಿನಲ್ಲಿ ಕಾಣೆಯಾಗಿದೆ. ಈ ಹಿನ್ನೆಲೆಯಲ್ಲಿ, ಒಂದು ಕಡೆ ಮಾರ್ಕ್ಸ್‌ನ ಇತಿಹಾಸ ತತ್ವ ಮತ್ತು ಅದರ ನೀತಿ ನಿರಪೇಕ್ಷತೆಯನ್ನು ಪ್ರಶ್ನಿಸುವ ಲೋಹಿಯಾ, ಮಾರ್ಕ್ಸ್‌ನನ್ನು ಆತನ ಚಿಂತನೆಯ ಮೂಲಭೂತ ಕ್ರಾಂತಿಕಾರಕತ್ವಕ್ಕಾಗಿ ಇತಿಹಾಸದ ಮಹಾಪುರುಷರಲ್ಲೊಬ್ಬ ಎಂದು ವರ್ಣಿಸುತ್ತಾರೆ. ಹಾಗೇ, ಇನ್ನೊಂದು ಕಡೆ ಖಾದಿ ಮತ್ತು ಗ್ರಾಮೋದ್ಯೋಗವನ್ನು ಗಾಂಧಿಯ ಪ್ರೇತವೆಂದು ಖಂಡಿಸುವ ಲೋಹಿಯಾ, ಗಾಂಧೀಜಿ ಆಧುನಿಕ ನಾಗರೀಕತೆಯನ್ನು ವಿಮರ್ಶಿಸುವ ಸೃಜನಶೀಲ ಪರಿಯಲ್ಲಿ ಅವರನ್ನು ಹೊಸ ವಿಶ್ವ ನಾಗರೀಕತೆಯ ಹರಿಕಾರರನ್ನಾಗಿ ಕಂಡು ಬುದ್ಧ ಮತ್ತು ಕ್ರಿಸ್ತನ ನಂತರದ ಮಾನವತೆಯ ಮಹಾ ಪ್ರತೀಕ ಎಂದು ಗುರುತಿಸುತ್ತಾರೆ. ಆ ಮೂಲಕ ಅವರನ್ನು ತಮ್ಮ ಸಮಾಜವಾದಿ ಹೋರಾಟದ ಮೂಲಸ್ಫೂರ್ತಿಯನ್ನಾಗಿ ಮಾಡಿಕೊಂಡಿದ್ದರು ಎಂಬುದನ್ನೂ ನಾವು ಗಮನಿಸಬೇಕು.

ಹಾಗೇ, ಗಾಂಧೀಜಿಯ 'ಮಹಾತ್ಮ'ತನವನ್ನು ಗೇಲಿ ಮಾಡುವಂತೆ ತೋರುವ

ಅಂಬೇಡ್ಕರ್, ಪೂನಾ ಒಪ್ಪಂದಕ್ಕೆ ಸಹಿ ಹಾಕುವ ಸಂದರ್ಭದಲ್ಲಿ ಗಾಂಧೀಜಿಯನ್ನು 'ಮಹಾತ್ಮಾಜಿ' ಎಂದೇ ಸಂಬೋಧಿಸಿ ಆಡುವ ಈ ಮಾತುಗಳನ್ನೂ ನಾವು ಈ ಸಂದರ್ಭದಲ್ಲಿ ಗಮನಿಸಬೇಕು: 'ಅವರನ್ನು ಮುಖತಃ ಭೇಟಿಯಾಗಿ ಮಾತನಾಡಿದಾಗ ನನ್ನ ಮತ್ತು ಅವರ ನಡುವೆ ಎಷ್ಟೊಂದು ಸಾಮ್ಯಗಳಿವೆ ಎಂಬುದು ನನ್ನ ಅರಿವಿಗೆ ಬಂದು ನಾನು ಆಶ್ಚರ್ಯ, ಪರಮಾಶ್ಚರ್ಯಗೊಂಡೆ. ಅವರು ಈ ಸಂದರ್ಭದಲ್ಲಿ ದುಂಡು ಮೇಜಿನ ಪರಿಷತ್ ಸಂದರ್ಭದಲ್ಲಿದ್ದುದಕ್ಕಿಂತ ಎಷ್ಟು ಭಿನ್ನರಾಗಿದ್ದರೆಂದರೆ, ಅವರು ತಮ್ಮ ಶಿಷ್ಯರಗಿಂತ ನನ್ನ ಕಡೆಗೇ ಹೆಚ್ಚು ಒಲವು ತೋರಿದ್ದಾರೆ... ಆ ಮೂಲಕ ನನ್ನನ್ನು ದೊಡ್ಡ ಸಂಕಟದಿಂದ ಪಾರು ಮಾಡಿದ್ದಾರೆ. ಹಳೆಯದೆಲ್ಲಾ ಹಳೆಯದೇ. ಹಾಗಾಗಿ ಅದನ್ನೆಲ್ಲ ಮರೆತು ನಾನು ಇಂದು ಸಂತೋಷದಿಂದ ಈ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದೇನೆ'. ಅಲ್ಲದೆ, ಗಾಂಧೀಜಿ 'ಸ್ವಾತಂತ್ರ್ಯ ಹೋರಾಟ' ಎಂಬ ತಮ್ಮ ಬದುಕಿನ ಅರ್ಥದ ಅನ್ವೇಷಣೆಯ ಹೋರಾಟದ ಆಧಾರದ ಮೇಲೆ 'ದೇವರು ಸತ್ಯ' ಎಂಬ ಸಾಂಪ್ರದಾಯಿಕ ಸತ್ಯವನ್ನು 'ಸತ್ಯವೇ ದೇವರು' ಎಂದು ತಲೆಕೆಳಗು ಮಾಡುವ ಮೂಲಕ ಹಿಂದೂ ಧರ್ಮವನ್ನು ಮರಳಿ ಬೌದ್ಧ ಧರ್ಮದೆಡೆಗೆ ಒಯ್ಯುವ ಪ್ರಯತ್ನ ಮಾಡಿದರೆ, ಅಂಬೇಡ್ಕರ್ ತಮ್ಮ ಹೋರಾಟದ ಬದುಕಿನ ಸಾರ್ಥಕತೆ ಕಂಡುಕೊಳ್ಳಲು ತಮ್ಮ ಬದುಕಿನ ಅಂತಿಮ ದಿನಗಳಲ್ಲಿ ಬೌದ್ಧ ಧರ್ಮವನ್ನು ಸೇರಿಕೊಂಡರು ಎಂಬ ಸಂಗತಿ ಮೂಲತಃ ಇವರಿಬ್ಬರದೂ ಸಾಮಾಜಿಕ ನೆಲೆಗಳ ಭಿನ್ನತೆಯ ಹೊರತಾಗಿ, ಒಂದೇ ಎರಕದ ವ್ಯಕ್ತಿತ್ವಗಳು ಎಂಬುದನ್ನು ಶ್ರುತಪಡಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಇಲ್ಲಿ ನಾವು ಗಮನಿಸಬೇಕಾದ ಇನ್ನೂ ಒಂದು ಕುತೂಹಲದಾಯಕ ಸಂಗತಿ ಎಂದರೆ, ಅಂಬೇಡ್ಕರ್ ಮಾರ್ಕ್ಸ್‌ವಾದವನ್ನು ಅದು ಹಿಂಸೆಯನ್ನು ಇತಿಹಾಸದ ಸೂಲಗಿತ್ತಿ ಎಂದು ವರ್ಣಿಸುತ್ತಾ ಕ್ರಾಂತಿಯನ್ನು ಪ್ರತಿಪಾದಿಸಿದ್ದಕ್ಕಾಗಿ ಅದರಿಂದ ದೂರ ಸರಿದವರಾದರೂ, ತಾವು ಮಾನವನ ಅಂತಿಮ ಬಿಡುಗಡೆಯ ಸಾಧನವೆಂದು ಒಪ್ಪಿದ ಬೌದ್ಧ ಧರ್ಮವನ್ನು ವ್ಯಾಖ್ಯಾನಿಸಿದ್ದು ಮಾತ್ರ ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿಯೇ! ಇದನ್ನು ಬೌದ್ಧ ವಿದ್ವಾಂಸರು ಒಪ್ಪುವುದಿಲ್ಲ ಎಂಬುದು ಬೇರೆ ಮಾತು.

ಇಂತಹ ಅಂಬೇಡ್ಕರರನ್ನು ಲೋಹಿಯಾ, ಗಾಂಧೀಜಿಯ ನಂತರದ ಯಾವುದೇ ಸವರ್ಣೀಯ ನಾಯಕನಿಗೂ ಸಮನಾಗಬಲ್ಲ ಧೀಮಂತ ನಾಯಕ ಎಂದು ಗುರುತಿಸುತ್ತಾರೆ. ಐವತ್ತರ ದಶಕದಲ್ಲಿ ತಮ್ಮ ಪ್ರಜಾ ಸಮಾಜವಾದಿ ಪಕ್ಷ ತನ್ನ ತಾತ್ವಿಕ ದಿಕ್ಕನ್ನು ಕಳೆದುಕೊಂಡು ನೆಹ್ರೂವಾದಿಯಾಗುತ್ತಿದೆಯೆಂದು ಅದನ್ನು ಬಿಟ್ಟು ತಮ್ಮದೇ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿಕೊಂಡ ಸಂದರ್ಭದಲ್ಲಿ ಲೋಹಿಯಾ, ಅನೇಕ ರಾಜಕೀಯ ಪ್ರಯೋಗಗಳನ್ನು ಮಾಡಿ ಹಣ್ಣಾಗಿದ್ದ ಅಂಬೇಡ್ಕರರನ್ನು ತಮ್ಮ ಪಕ್ಷದ ಕಕ್ಷೆಗೆ ತರುವ ಪ್ರಯತ್ನ ಮಾಡುತ್ತಾರೆ. ಆದರೆ ಆ ಪ್ರಯತ್ನ ನಡೆಯುತ್ತಿರುವ ಸಂದರ್ಭದಲ್ಲೇ ಅಂಬೇಡ್ಕರ್ ವಿಧಿವಶರಾದಾಗ, ಲೋಹಿಯಾ ತಮ್ಮ ಕಿರಿಯ ಸಮಾಜವಾದಿ ಗೆಳೆಯ ಮಧು ಲಿಮಯೆಗೆ ಪತ್ರವೊಂದರಲ್ಲಿ ಹೀಗೆ ಬರೆಯುತ್ತಾರೆ: 'ಅಂಬೇಡ್ಕರ್ ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿಯನ್ನು ಒಂದಲ್ಲ ಒಂದು ದಿನ ನಾಶಪಡಿಸಬಹುದೆಂಬ ನನ್ನ ಆತ್ಮವಿಶ್ವಾಸದ ಹಾಗೂ ನೆಮ್ಮದಿಯ ಪ್ರತೀಕವಾಗಿದ್ದರು. ಮಹಾ ವಿದ್ವಾಂಸರೂ, ಮಹಾ ಪ್ರಾಮಾಣಿಕರೂ, ಬಹು ಸ್ವತಂತ್ರ ಬುದ್ಧಿಯವರೂ ಆಗಿದ್ದ ಸಮಗ್ರ ವ್ಯಕ್ತಿತ್ವದ ಅಂಬೇಡ್ಕರ್, ಬಾಹ್ಯ ಜಗತ್ತಿನ ಎದುರು

ಭಾರತದ ಪ್ರತೀಕವಾಗಿ ನಿಲ್ಲಬಲ್ಲವರಾಗಿದ್ದರು. ಆದರೆ ಅವರ ಮನಸ್ಸು ಕಹಿಯಾಗಿತ್ತು ಮತ್ತು ಯಾವಾಗಲೂ ಅವರು ಪ್ರತ್ಯೇಕತೆಯನ್ನು ಬಯಸುತ್ತಿದ್ದರು. ದಲಿತೇತರ ನಾಯಕರಾಗಲು ಅವರು ನಿರಾಕರಿಸಿದರು. ಕಳೆದ ಐದು ಸಾವಿರ ವರ್ಷಗಳಲ್ಲಿ ದಲಿತರು ಅನುಭವಿಸಿರುವ ನೋವು ಮತ್ತು ಅಪಮಾನಗಳ ಅರಿವು ನನಗಿದೆ. ಆದರೆ ಅಂಬೇಡ್ಕರರಂತಹ ಅಪೂರ್ವ ವ್ಯಕ್ತಿತ್ವದ ನಾಯಕ ಇದನ್ನು ಮೀರಬಲ್ಲರೆಂದು ಆಶಿಸಿದ್ದೆ. ನನ್ನ ಆಸೆ ಈಡೇರುವುದರೊಳಗೇ ಅವರನ್ನು ಸಾವು ಒಯ್ದಿದೆ...'

ಇಂದು ಮರುನೋಟಕ್ಕೆ ಆಯ್ಕೆ ಮಾಡಿಕೊಂಡಿರುವ ಐವ್ವರು ಚಿಂತಕರ ಚಿಂತನೆಗಳಲ್ಲಿದ್ದ ಇಂತಹ ಸೂಕ್ಷ್ಮ ಮತ್ತು ನಿರ್ಣಾಯಕ ಅಂತರ್ಸಂಬಂಧಗಳನ್ನು ನಾವು ಇಂದು ಗುರುತಿಸಿ ವಿಸ್ತರಿಸಬೇಕಿದೆ. ಇಂದಿನ ಸಂದರ್ಭಕ್ಕೆ ತಕ್ಕ ಹಾಗೆ ವ್ಯಾಖ್ಯಾನಿಸಬೇಕಿದೆ. ಏಕೆಂದರೆ ಈ ಎಲ್ಲ ಚಿಂತನೆಗಳಲ್ಲಿನ ಅಂತರ್ವಿರೋಧಗಳ ಲಾಭ ಪಡೆದು ಅವನ್ನು ಅಪ್ರಸ್ತುತೀಕರಿಸುವ ಮೂಲಕ ಜಾರಿಗೆ ಬಂದಿರುವ ಇಂದಿನ ಹೊಸ ರಾಜಕಾರಣದ ಚಾಲನಾ ಶಕ್ತಿ ಯಾರಿಗೂ, ಯಾವುದಕ್ಕೂ ಉತ್ತರದಾಯಿಯಾಗಿರದ;ಹಾಗಾಗಿ ಯಾವುದೇ ನೈತಿಕ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡದ ಮುಕ್ತ ಮಾರುಕಟ್ಟೆ ಆರ್ಥಿಕತೆ ಎಂಬುದೂ ಈ ಸಂದರ್ಭದಲ್ಲಿ ನಮಗೆ ನೆನಪಿರುವುದು ಒಳ್ಳೆಯದು. ಏಕೆಂದರೆ, ಆಧುನಿಕ ನಾಗರೀಕತೆಯ ಇಂದಿನ ಒಂದು ದೊಡ್ಡ ಬಿಕ್ಕಟ್ಟಿನ ಪ್ರತೀಕವಾಗಿರುವ ಹವಾಮಾನ ಬದಲಾವಣೆ ಕುರಿತ ಈಚಿನ ಕೋಪೆನ್‌ಹೆಗನ್ ಸಮ್ಮೇಳನದ ಸಂದರ್ಭದಲ್ಲಿ, ತನ್ನ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಲಾರೆ ಎಂದು ಮತ್ತೆ ಘೋಷಿಸುವ ಮೂಲಕ ಪರೋಕ್ಷವಾಗಿ ಯುದ್ಧ ಸಂಸ್ಕೃತಿಯನ್ನು ಎತ್ತಿ ಹಿಡಿದ ಅಮೆರಿಕಾದ ನಿಲುವಿಗೆ; ಇತರ ದೇಶಗಳ ವಿರೋಧದ ಮಧ್ಯೆಯೂ, ಭಾರತ ಚೀನಾದ ಜೊತೆ ಸೇರಿ(ಈ ಎರಡೂ ಜಾಗತಿಕ ಮಟ್ಟದ ಹೊಸ ಮಾರುಕಟ್ಟೆಗಳು) ಪೂರಕವೆನ್ನಿಸುವ ಪಾತ್ರ ವಹಿಸಿತೆಂಬುದನ್ನು ನಾವಿಲ್ಲಿ ಗಮನಿಸಬೇಕು. ಇದು ಈ ನಾಗರೀಕತೆಯ ತಲೆ ಸಂಪೂರ್ಣ ಕೆಟ್ಟಿದೆ ಎನ್ನುವುದರ ದ್ಯೋತಕವಲ್ಲದೆ ಮತ್ತೇನು?

ಹಾಗಾಗಿ, ಇಂದಿನ ಚರ್ಚೆ ಮುಖ್ಯವಾಗಿ ಈ ನೆಲೆಯಲ್ಲಿ, ಅಂದರೆ ಇತಿಹಾಸದ ಭೌತ–ಅಭೌತ ವ್ಯಾಖ್ಯಾನಗಳ ನೆಲೆಯಲ್ಲಿ ನಡೆದು, ಆಧುನಿಕ ನಾಗರೀಕತೆ ಆತ್ಯಂತಿಕವಾಗಿ ಎಂತಹ ಮನುಷ್ಯನನ್ನು ಸೃಷ್ಟಿಸಹೊರಟಿದೆ ಎಂಬುದರ ಪರಿಶೀಲನೆಯ ಮೂಲಕ ಹೊಸ ಸಮಾಜವಾದಿ ಚಿಂತನೆಗೆ ದಾರಿ ಮಾಡಿಕೊಡುವಂತಾಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(೨೦೧೦ರ ಜನವರಿ ಹತ್ತರಂದು ಹೊನ್ನಾವರದಲ್ಲಿ 'ಮಂಥನ' ಸಾಹಿತ್ಯಿಕ–ಸಾಂಸ್ಕೃತಿಕ ಬಳಗ ಇದೇ ವಿಷಯದ ಬಗ್ಗೆ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಆಡಿದ ಆಶಯ ಮಾತುಗಳ ವಿಸ್ತೃತ ರೂಪ. 'ಸಂವಾದ' ಫೆಬ್ರುವರಿ ೨೦೧೦ರಲ್ಲಿ ಪ್ರಕಟ)

ಗಾಂಧಿ ಮತ್ತು ಸಮಾಜವಾದಿಗಳು

ಸ್ನೇಹಿತರೇ,

ಇಂದಿಗೆ ಡಾ॥ರಾಮಮನೋಹರ ಲೋಹಿಯಾ ನಿಧನರಾಗಿ ೪೧ ವರ್ಷಗಳು ತುಂಬುತ್ತಿವೆ. ಅವರು ಹೇಗೆ ಮತ್ತು ಏಕೆ ನಿಧನರಾದರು ಎಂಬುದು ನಿಮಗೆಲ್ಲ ಗೊತ್ತೇ ಇದೆ. ಬ್ರಿಟಿಷ್ ಪ್ರಭುತ್ವದ ವಿರುದ್ಧ ತಮ್ಮದೇ ರೀತಿಯಲ್ಲಿ ದಿಟ್ಟವಾಗಿ–ಧೀರರಾಗಿ ಹೋರಾಡಿ ಹಿಂಸೆ ಅನುಭವಿಸಿದ ಅವರು, ಸ್ವತಂತ್ರ ಭಾರತದಲ್ಲಿ ಅದಕ್ಕಿಂತ ಹೆಚ್ಚು ಹಿಂಸೆ ಅನುಭವಿಸಿದರು. ಬ್ರಿಟಿಷ್ ಪ್ರಭುತ್ವದ ವಿರುದ್ಧ ಯಾವ ಉದ್ದೇಶಗಳಿಂದ ತಾವು ಹೋರಾಡಿದ್ದರೋ ಅವುಗಳಿಗೆ ತದ್ವಿರುದ್ಧ ತತ್ವಗಳ ಆಧಾರದ ಮೇಲೆ ಸ್ವತಂತ್ರ ಭಾರತವನ್ನು ಕಟ್ಟುತ್ತಿರುವುದರ ಬಗ್ಗೆ ದನಿ ಎತ್ತಿದ್ದಕ್ಕಾಗಿ, ಪ್ರತಿಭಟಿಸಿದ್ದಕ್ಕಾಗಿ ಅವರು ಯಾವ ರಾಜಕೀಯ ನಾಯಕನೂ ಹೋಗದಿದ್ದಷ್ಟು ಬಾರಿ ಸೆರೆಮನೆಗೆ ಹೋಗಬೇಕಾಯಿತು. ಅವರಷ್ಟು ಮಹತ್ವದ ಸ್ವಾತಂತ್ರ್ಯ ಹೋರಾಟಗಾರ ನಾರೂ ಎದುರಿಸದಂತಹ ರಾಜಕೀಯ ಮತ್ತು ಪೋಲೀಸ್ ದುರ್ವರ್ತನೆಯನ್ನು ಅವರು ಎದುರಿಸಬೇಕಾಯಿತು. ಅದರ ಪರಿಣಾಮವಾಗಿ ಅವರ ಇಡೀ ದೇಹ ಮತ್ತು ಅದರೊಳಗಿನ ಚೈತನ್ಯ ಘಾಸಿಗೊಂಡಿತ್ತು. ಈ ಸ್ಥಿತಿಯಲ್ಲಿ ಅವರು ರೂಪಿಸಿದ 'ಕಾಂಗ್ರೇಸ್ಸೇತರವಾದ' ಬಿಜೆಪಿಯನ್ನು ಇಂದು ಭಾರತದ ರಾಜಕಾರಣದ ಮುನ್ನೆಲೆಗೆ ತಂದು ನಿಲ್ಲಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ! ಲೋಹಿಯಾ ತಮ್ಮ ೫೭ನೇ ವಯಸ್ಸಿನಲ್ಲಿ ಅವರು ತಾವು ನಂಬಿದ್ದ ಸಮಾಜವಾದಿ ರಾಜಕಾರಣಕ್ಕೆ ತಕ್ಕಂತೆ, ಭಾರತದ ಶ್ರೀಸಾಮಾನ್ಯನಿಗೆ ದಕ್ಕದ ಯಾವುದೇ ವಿಶೇಷ ವೈದ್ಯೋಪಚಾರ ತಮಗೂ ಬೇಡವೆಂದು ಹಠ ಮಾಡಿ ಸರ್ಕಾರಿ ಆಸ್ಪತ್ರೆ ಸೇರಿದರು. ಅಲ್ಲಿನ ವೈದ್ಯೋಪಾಚರದ ಮಿತಿಗಳಿಂದಾಗಿ ಅವರು ಅಕ್ಟೋಬರ್ ೧೨ರಂದು ಅಸು ನೀಗಿದರು.

ಲೋಹಿಯಾ ಅಸು ನೀಗಿದ ನಂತರದ ಈ ನಾಲ್ಕು ದಶಕಗಳಲ್ಲಿ ಸಾರ್ವಜನಿಕ ಜೀವನದ ದಿಕ್ಕು ದೆಸೆಗಳೇ ಬದಲಾಗಿವೆ. ಅವರು ಪ್ರತಿಪಾದಿಸಿದ ರಾಜಕೀಯ ತಾತ್ವಿಕತೆ ಮತ್ತು ಕಾರ್ಯಾಚರಣೆಯ ರೀತಿ ನೀತಿಗಳೇ ಅಪ್ರಸ್ತುತವೆನ್ನಿಸತೊಡಗಿವೆ. ಆದರೂ ಲೋಹಿಯಾ ಎಂದೊಡನೆ ಕಿವಿ ಅರಳಿಸುವ ಸಾಕಷ್ಟು ಜನ ನಮ್ಮಲ್ಲಿ ಈಗಲೂ ಇದ್ದಾರೆ. ಅವರಲ್ಲಿ ಎಲ್ಲರೂ ಲೋಹಿಯಾ ರಾಜಕಾರಣವನ್ನು ಈಗಲೂ ನಂಬಿರುವವರೇನಲ್ಲ. ಅವರಲ್ಲಿ ಅರ್ಧ ಜನ ಇಂದಿನ ಜಾಗತೀಕರಣ ಸೃಷ್ಟಿಸುತ್ತಿರುವ ಸಂದಿಗ್ಧಗಳಿಗೆ ಲೋಹಿಯಾ ಚಿಂತನೆಯಲ್ಲಿ ಏನಾದರೂ ಪರಿಹಾರದ ಬೀಜಗಳಿರಬಹುದೇ ಎಂಬ ಕುತೂಹಲ ಇರುವವರೂ, ಇನ್ನರ್ಧ ಜನ ತಾವು ಲೋಹಿಯಾ ರಾಜಕಾರಣದಿಂದ ದೂರ ಸರಿದಿದ್ದರಿಂದಾಗಿಯೇ ಈ ಸಂದಿಗ್ಧತೆಗಳು ಉಂಟಾಗಿವೆಯೇನೋ ಎಂಬ ಅನುಮಾನದಲ್ಲಿ ಪಾಪ ಪರಿಹಾರಾರ್ಥವಾಗಿ ಲೋಹಿಯಾ ಹೆಸರು ಜಪಿಸುತ್ತಿರುವವರು. ಲೋಹಿಯಾ

ತಮ್ಮ ಕಾಲದಲ್ಲೇ ಭಾರತದ ಅತ್ಯುತ್ತಮ ಮನಸ್ಸುಗಳನ್ನು ತಮ್ಮೆಡೆಗೆ ಆಕರ್ಷಿಸಿದ್ದರು. ಅವರ ಕಾಫಿ ಹೌಸ್ ಬೈಠಕ್‌ಗಳಲ್ಲಿ ಭಾಗವಹಿಸದ ಲೇಖಕ, ಕಲಾವಿದ, ಬುದ್ಧಿಜೀವಿಗಳೇ ಇರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಲೋಹಿಯಾ ತಮ್ಮ ರಾಜಕಾರಣದಲ್ಲಿ ಗೆದ್ದರೆ ಎಂದು ಕೇಳಿದರೆ, ಹೌದು ಎಂದು ಹೇಳುವುದು ಕಷ್ಟವಾಗುತ್ತದೆ.

ಲೋಹಿಯಾರನ್ನು ಇಂದು ನೆನಪಿಸಿಕೊಳ್ಳುವುದೆಂದರೆ, ಈ ಪ್ರಶ್ನೆಯನ್ನು ಪದೇ ಪದೇ ಕೇಳೀಕೊಳ್ಳುವುದೇ ಆಗಿದೆ. ಗಾಂಧಿ ನಂತರ ಅತ್ಯುತ್ತಮ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಪ್ರತಿಪಾದಿಸಿ, ಅತ್ಯುತ್ತಮ ಮನಸ್ಸುಗಳನ್ನು ಆಕರ್ಷಿಸಿ, ಭಾರತದ ಅತ್ಯುತ್ತಮ ರಾಜಕೀಯ ಹೋರಾಟಗಳನ್ನು ಮಾಡಿದ ಲೋಹಿಯಾ ಅತ್ಯುತ್ತಮ ರಾಜಕೀಯ ಪರ್ಯಾಯವನ್ನೇಕೆ ಸೃಷ್ಟಿಸಲಾಗಲಿಲ್ಲ? ಅವರು ತಮ್ಮ ರಾಜಕೀಯ ಜೀವನದ ಅತ್ಯುತ್ತಮ ದಿನಗಳನ್ನು ತಲುಪಲಾರಂಭಿಸಿದ ಘಟ್ಟದಲ್ಲಿ ನಿಧನರಾದದ್ದೇ ಇದಕ್ಕೆ ಕಾರಣ ಎನ್ನುವುದು ಬಹು ಸುಲಭದ ಉತ್ತರ. ಆಗ ಅವರು ಅತ್ಯುತ್ತಮ ರಾಜಕೀಯ ವಾರಸುದಾರಿಕೆಯನ್ನು ನಿರ್ಮಿಸದೇ ಹೋದ ಆರೋಪಕ್ಕೆ ಗುರಿಯಾಗಬೇಕಾಗುತ್ತದೆ! ಇಂದು ಸಮಾಜವಾದ ಅಥವಾ ಸಮಾಜವಾದಿಗಳೆಂದರೆ, ಜನ ಸಾಮಾನ್ಯರು ವಿಚಿತ್ರ ಜಿಗುಪ್ಸೆಯಿಂದ ನೋಡುವುದು ಇಂತಹ ವಾರಸುದಾರಿಕೆಯ ಲೋಪದಿಂದಲೇ ಎಂದರೆ ತಪ್ಪಾಗಲಾರದು.

ಆದರೂ ನಮ್ಮಂತಹವರು 'ಮರಳಿ ಬರಲಿದೆ ಸಮಾಜವಾದ!' ಎಂದು ಹಲವರ ಕಿಚಾವಣೆ ಮತ್ತು ವ್ಯಂಗ್ಯಗಳ ನಡುವೆಯೂ ಧೈರ್ಯವಾಗಿ ಘೋಷಿಸಲು ನಮ್ಮದೇ ಆದ ಕಾರಣಗಳಿವೆ. ಏಕೆಂದರೆ, ಸಮಾಜವಾದವೆಂಬುದು ಕೇವಲ ಒಂದು ರಾಜಕೀಯ ಸಿದ್ಧಾಂತವಾಗಿರದೆ, ಅದೊಂದು ಜೀವನ ದೃಷ್ಟಿಯೂ ಆಗಿದೆ ಎಂಬುದು ನಮ್ಮ ತಿಳುವಳಿಕೆಯಾಗಿದೆ. ದೀರ್ಘಕಾಲಿಕವಾದ ಈ ತಿಳುವಳಿಕೆಯಿಲ್ಲದೆ, ಸಮಾಜವಾದದ ಹೆಸರು ಹೇಳಿಕೊಂಡು ಅಲ್ಪಕಾಲಿಕವಾದ ಮತ್ತೇನನ್ನೋ ಮಾಡಿದ ಕೆಲವರ ರಾಜಕಾರಣದಿಂದಾಗಿ ಅದಕ್ಕೆ ಕೆಟ್ಟ ಹೆಸರು ಬಂದುದರಿಂದ, ಅದರ ಕಾಲ ಮುಗಿಯಿತೆಂದು ಘೋಷಿಸಿದವರೇ ಇಂದು ಬಂಡವಾಳಷಾಹಿ ರಾಜಕಾರಣ ಸಮಾಜವಾದಿ ರಾಜಕಾರಣದಿಂದ ಕೆಲವು ಪಾಠಗಳನ್ನಾದರೂ ಕಲಿಯಬೇಕಾಗಿದೆ ಎಂದು ಹೇಳುವಂತಾಗಿದೆ. ಅಮೆರಿಕಾ ಮತ್ತದರ ಮಿತ್ರ ದೇಶಗಳು ಇಂದು ಕಾಣುತ್ತಿರುವ ಭಯಂಕರ ಆರ್ಥಿಕ ಕುಸಿತದ ಸಂದರ್ಭದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಮುಕ್ತ ಮಾರುಕಟ್ಟೆವಾದಿ ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ಅವರ ಬಾಯಿಂದಲೇ ಈ ಮಾತು ಹೊರಬಂದಿದೆ! ಅಷ್ಟೇ ಅಲ್ಲ, ಈ ವರ್ಷದ ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಪಾಲ್ ಕ್ರುಗಮನ್ ಕೂಡಾ ಈ ಮಾತನ್ನು ಪುನರುಚ್ಚರಿಸುತ್ತಿದ್ದಾರೆ. ಇದು ಸಮಾಜವಾದ ಮರಳಿ ಬರಲಿರುವುದರ ಮುನ್ಸೂಚನೆ ಎಂದೇ ನಾನು ಭಾವಿಸಿದ್ದೇನೆ.

ಹಾಗೆ ನೋಡಿದರೆ, ಸಮಾಜವಾದ ಭಾರತದ ಮಟ್ಟಿಗಾದರೂ ಇನ್ನೂ ಜೀವಂತವಿದೆ ಎಂದು ನಂಬಿದವನು ನಾನು. ಮನಮೋಹನ ಸಿಂಗ್ ಮತ್ತು ಮೊಂಟೆಕ್ ಸಿಂಗ ಅಹ್ಲೂವಾಲಿಯಾರಂತಹ ಅಪ್ಪಟ ಮುಕ್ತ ಮಾರುಕಟ್ಟೆವಾದಿಗಳೂ 'ಆವೃತ' ಅಭಿವೃದ್ಧಿಯ ಮಾತನಾಡಿಯೇ ತಮ್ಮ ರಾಜಕಾರಣವನ್ನು ಮುಂದುವರೆಸಿಕೊಂಡು ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ ಎಂದರೆ ಇನ್ನೇನರ್ಥ? ನಿರ್ದಿಷ್ಟ ರೂಪದ–ಸೂತ್ರಗಳ–

ಕಾರ್ಯಕ್ರಮಗಳ ಸಮಾಜವಾದ ಅಪ್ರಸ್ತುತಗೊಂಡಿರಬಹುದು. ಆದರೆ ಭಾರತದಂತಹ ಅತೀವ ಮತ್ತು ಹಲವು ನೆಲೆಗಳ ಅಸಮಾನತೆಗಳ ರಾಷ್ಟ್ರದಲ್ಲಿ ಸಮಾಜವಾದ ಒಂದು ಭಾವನೆಯಾಗಿ, ಆದರ್ಶವಾಗಿ, ಹುರುಪಾಗಿ ಕಣ್ಮರೆಯಾಗಲು ಸದ್ಯಕ್ಕಂತೂ ಕಾರಣಗಳೇ ಇಲ್ಲ. ಇದರ ಮೂಲಕ ನಾನು ಏನು ಹೇಳುತ್ತಿದ್ದೇನೆಂದರೆ, ಸಮಾಜವಾದವನ್ನು ನಮ್ಮ ಕಾಲಕ್ಕೆ ನಾವೇ ಪುನರನ್ವೇಷಿಸಿಕೊಳ್ಳಬೇಕಾಗಿದೆ. ಇದನ್ನು ಮಾಡಲಾಗದ ಸಮಾಜವಾದಿಗಳು ಇಂದು ಅವಶೇಷಗಳ ರೂಪದಲ್ಲಿ, ವ್ಯಂಗ್ಯಚಿತ್ರಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವುದು ಆಶ್ಚರ್ಯವೇನಲ್ಲ.

ಇಂತಹ ಪುನರನ್ವೇಷಣೆಯ ಸಣ್ಣ ಪ್ರಯತ್ನವನ್ನು ನಾನು ನನ್ನ ಮಿತಿಯಲ್ಲೇ ಮಾಡುತ್ತಾ ಬರುತ್ತಿದ್ದೇನೆ. ಅದಕ್ಕಾಗಿ, ದಿವಾಳಿಯೆದ್ದಿರುವ ಸಮಾಜವಾದಿ ಸಾಮ್ರಾಜ್ಯದ ಯಜಮಾನರುಗಳಿಂದ ಟೀಕೆಗೊಳಪಡುತ್ತಲೇ ಬಂದಿದ್ದೇನೆ. ಆದರೂ, ಇಂದು ಬಿಡುಗಡೆಯಾದ 'ರೈತಭಾರತ: ಅವಸಾನದ ಅಂಚಿನಲ್ಲಿ' ಮತ್ತು 'ಆ ಗಣರಾಜ್ಯ–ಈ ಕರ್ನಾಟಕ' ಪುಸ್ತಕಗಳಲ್ಲಿ ನಾನು ಇದನ್ನು ಮುಂದುವರಿಸಿದ್ದರೆ ಅದಕ್ಕೆ ಕಾರಣ, ಸಮಾಜವಾದವನ್ನು ಜೀವಂತವಾಗಿಡುವ ರೀತಿಯೇ ಇದು ಎಂಬ ನನ್ನ ದೃಢ ನಂಬಿಕೆ. 'ರೈತ ಭಾರತ: ಅವಸಾನದ ಅಂಚಿನಲ್ಲಿ' ಕಿರು ಪುಸ್ತಕದಲ್ಲಿ, ಜಾಗತೀಕರಣ ಒಂದು ಜೀವನ ಕ್ರಮದ ನಾಶದ ಪ್ರಕ್ರಿಯೆಯಾಗಿ ಒಂದು ರಾಷ್ಟ್ರದ ನಾಶಕ್ಕೆ ಹೇಗೆ ಕಾರಣವಾಗಬಲ್ಲುದು ಎಂಬುದರ ವಿಷದೀಕರಣವಿದ್ದರೆ, 'ಈ ಗಣರಾಜ್ಯ–ಆ ಕರ್ನಾಟಕ' ಕೃತಿಯು ಭಾಷಾ ರಾಷ್ಟ್ರೀಯತೆಗಳನ್ನು ಹತ್ತಿಕ್ಕುವ ನಮ್ಮ ಆಧುನಿಕ ರಾಷ್ಟ್ರೀಯತೆಯ ಪರಿಕಲ್ಪನೆ ಹೇಗೆ ಇಂದು ಇಂತಹ ಜಾಗತೀಕರಣಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಸೂಚಿಸುವ ಪ್ರಯತ್ನ ಮಾಡುತ್ತದೆ. ಜೊತೆಗೆ ಐವತ್ತು ವರ್ಷಗಳ ಕರ್ನಾಟಕದಲ್ಲಿ ಕನ್ನಡ ಭಾಷಾ ರಾಷ್ಟ್ರೀಯತೆ ತನ್ನ ಈ ಪರಿಮಿತಿಗಳಲ್ಲೇ ತನ್ನನ್ನು ತಾನು ಹೇಗೆ ಅಭಿವ್ಯಕ್ತಿಸಿಕೊಳ್ಳುವ ಪ್ರಯತ್ನ ಮಾಡಿದೆ ಎಂಬುದರ ಒಂದು ಸ್ಥೂಲ ಚಿತ್ರವನ್ನೂ ಕೊಡುತ್ತದೆ. ಈ ದೃಷ್ಟಿಯಿಂದ ಇವೆರಡೂ ಸಮಾಜವಾದಿ ಕೃತಿಗಳೇ! ಮತ್ತು ಇವು ಈ 'ಲೋಹಿಯಾ ನೆನಪು' ಕಾರ್ಯಕ್ರಮದ ಭಾಗವಾಗಿ ಬಿಡುಗಡೆಯಾಗಿದ್ದು ಉಚಿತವೇ ಆಗಿದೆ ಎಂದು ನಾನು ಭಾವಿಸಿದ್ದೇನೆ

ಸಮಾಜವಾದ, ನಿರ್ದಿಷ್ಟವಾಗಿ ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಏಕೆ ನಮ್ಮ ರಾಜಕಾರಣವನ್ನು ಅದರ ವಿಚಾರಗಳ ಮತ್ತು ಹೋರಾಟಗಳ ತೀವ್ರತೆಯ ಲೆಕ್ಕದಲ್ಲಿ, ಆಳವಾಗಿ ಪ್ರಭಾವಿಸಲಿಲ್ಲ ಎಂಬ ಪ್ರಶ್ನೆಯನ್ನು ಆರಂಭದಲ್ಲಿ ಎತ್ತಿದ್ದೆ. ಇಲ್ಲ, ಅದು ನಮ್ಮ ರಾಜಕಾರಣವನ್ನು ಆಳವಾಗಿ ಪ್ರಭಾವಿಸಿದೆ ಎಂದು ವಾದಿಸುವವರೂ ಇದ್ದಾರೆ ಎಂಬ ಅರಿವಿನಲ್ಲೇ ನಾನು ಈ ಪ್ರಶ್ನೆಯನ್ನು ಎತ್ತಿದ್ದೇನೆ. ಇಂದು, ಬಿಜೆಪಿ, ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ ರಾಷ್ಟ್ರದ ಸರಿಸುಮಾರು ಎಲ್ಲ ಪಕ್ಷಗಳಲ್ಲೂ ಸಮಾಜವಾದಿಗಳು ಹರಡಿಕೊಂಡಿದ್ದಾರೆ ಎಂಬುದು ಹೀಗೆ ವಾದಿಸುವವರು ತಮ್ಮ ವಾದಕ್ಕೆ ನೀಡುವ ಸಮರ್ಥನೆ. ಆದರೆ ಈ ಸಮರ್ಥನೆಯೇ ನನ್ನ ಈ ಮೇಲಿನ ಪ್ರಶ್ನೆಯ ಹುಟ್ಟಿಗೆ ಕಾರಣವೂ ಆಗಿದೆಯಲ್ಲವೆ? ಏಕೆಂದರೆ, ಇವರು ಹೀಗೆ ಏಕೆ ಹರಡಿ ಹೋಗುವಂತಾಯಿತು ಹಾಗೆ ಹರಡಿ ಹೋದವರು ಏಕೆ ಅವುಗಳಲ್ಲೇ ಲೀನವಾಗಿ ಹೋಗುವಂತಾಯಿತು ಎಂಬುದು ಸಮಾಜವಾದಿ ಚಳುವಳಿಯ ಇತಿಹಾಸವನ್ನು ಗಮನಿಸಿದವರಿಗೆ ಎದುರಾಗುವ ಮುಖ್ಯ

ಪ್ರಶ್ನೆ. ಈ ಪ್ರಶ್ನೆಗೆ ಸಮಗ್ರವಾಗಿ ಉತ್ತರ ಕೊಡಬಹುದಾದ್ದೆಂದು, ಕಳೆದ ಹತ್ತು ವರ್ಷಗಳಲ್ಲಿ ಈ ಬಗ್ಗೆ ಯೋಚಿಸುತ್ತಿರುವ, ಅಧ್ಯಯನ ಮಾಡುತ್ತಿರುವ ಮತ್ತು ಅಳಿದುಳಿದ ಸಮಾಜವಾದಿಗಳೆಯರ ನಡಾವಳಿಯನ್ನು ಗಮನಿಸುತ್ತಿರುವ ನನಗೆ ತೋಚಿರುವ ಸಂಗತಿ ಎಂದರೆ, ಅದು ತಾನು ರೂಪುಗೊಂಡ ಮೂಸೆಯ ನೆನಪನ್ನೇ ಕ್ರಮೇಣ ಅಳಿಸಿಕೊಳ್ಳುವಂತಹ ರಾಜಕಾರಣ ಮಾಡುತ್ತಾ ಹೋದದ್ದು.

ಸಮಾಜವಾದದ ಪರಿಕಲ್ಪನೆಯ ಹುಟ್ಟು ಎಲ್ಲೇ ಆಗಿರಲಿ, ಭಾರತೀಯ ಸಮಾಜವಾದ ತನ್ನ ಚೈತನ್ಯವನ್ನು ಪಡೆದುಕೊಂಡದ್ದು ಗಾಂಧಿ ರಾಜಕಾರಣದ ಮೂಸೆಯಲ್ಲಿ. ಆರಂಭದಲ್ಲಿ ಭಾರತೀಯ ಸಮಾಜವಾದ ಮಾರ್ಕ್ಸ್‌ವಾದಿ ತಾತ್ವಿಕತೆಯನ್ನು ನಂಬಿ ಬೆಳೆಯಿತಾದರೂ, ಅದೊಂದು ಚಳುವಳಿಯಾಗಿ–ಕಾಂಗ್ರೆಸ್‌ನ ಅಡಿಯಲ್ಲಿಯೇ ಅದರ ಒಂದು ಒಳ ಪಕ್ಷವಾಗಿ–ರೂಪುಗೊಂಡುದು ಗಾಂಧೀಜಿಯ ಪ್ರಭಾವದಲ್ಲಿಯೇ. ಭಾರತದ ಸಮಾಜವಾದಿಗಳು, ಮುಖ್ಯವಾಗಿ ಜೆಪಿ, ಲೋಹಿಯಾ, ಆಚಾರ್ಯ ನರೇಂದ್ರದೇವ, ಅಚ್ಯುತ ಪಟವರ್ಧನ್, ಅಶೋಕ ಮೆಹ್ತಾ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರು ಗಾಂಧೀಜಿಯೊಂದಿಗೆ 'ಜಗಳ' ಮಾಡಿಕೊಂಡೇ ತಮ್ಮ ಸಮಾಜವಾದಿ ಪಾಠಗಳನ್ನು ಕಲಿಯುತ್ತಾ ಹೋದದ್ದು ಮತ್ತು ತಮ್ಮ ಸಮಾಜವಾದಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುತ್ತ ಹೋದದ್ದು! ಕೊನೆಗೆ ಗಾಂಧಿ ಹತ್ಯೆಯ ನಂತರ ಕಾಂಗ್ರೆಸ್, ಇವರ ಭಿನ್ನಾಭಿಪ್ರಾಯಗಳ 'ಗಲಾಟೆ' ತಾಳಲಾರದೆ ಇವರು ಹೊರ ಹೋಗಿ ಸ್ವತಂತ್ರವಾದ ತಮ್ಮದೇ ಸಮಾಜವಾದಿ ಪಕ್ಷ ಸ್ಥಾಪಿಸಿಕೊಳ್ಳುವಂತಹ ಪರಿಸ್ಥಿತಿಯನ್ನುಂಟು ಮಾಡಿದಾಗ, ಅದು ತನ್ನ ತಾತ್ವಿಕ ಸ್ಫೂರ್ತಿಯೆಂದು ಒಪ್ಪಿಕೊಂಡದ್ದು ಗಾಂಧಿವಾದವನ್ನೇ. ಮೊದಲ ಸಾರ್ವತ್ರಿಕ ಚುನಾವಣೆಗಳ ಭಾರಿ ಸೋಲೂ ಇಲ್ಲಿ ಕೆಲಸ ಮಾಡಿರಲೂಬಹುದು! ಅದೇನೇ ಇರಲಿ, ಇದನ್ನವರು ತಮ್ಮನ್ನು ಬಂಡಾಯ ಗಾಂಧಿವಾದಿಗಳೆಂದು ಕರೆದುಕೊಂಡು ಸಮರ್ಥಿಸಿಕೊಂಡರು. ತಮ್ಮ ಮೂಲ ವಂಶಸ್ಥರಾದ ಕಾಂಗ್ರೆಸ್ಸಿಗರನ್ನು ಸರ್ಕಾರಿ ಗಾಂಧಿವಾದಿಗಳೆಂದೂ, ಅವರೊಂದಿಗೆ ಅನುಸಂಧಾನದಲ್ಲಿದ್ದ ಸರ್ವೋದಯ ಕಾರ್ಯಕರ್ತರನ್ನು ಮಠೀಯ ಗಾಂಧಿವಾದಿಗಳೆಂದು ಕರೆದು ತಮ್ಮ ವಿಶಿಷ್ಟತೆಯನ್ನು ಮೆರೆದುಕೊಂಡರು!

ಅದಕ್ಕೆ ತಕ್ಕ ಹಾಗೇ, ಸಮಾಜವಾದಿಗಳು ಗಾಂಧಿ ಸಿದ್ಧಾಂತವನ್ನು ವಿಮರ್ಶೆಗೆ ಒಳಪಡಿಸಿದರು. ಅದರ ಮೂಲ ಭಾವನೆಯನ್ನುಳಿಸಿಕೊಂಡೇ ಅದರ ಕಾರ್ಯಕ್ರಮಗಳನ್ನು ಆಧುನಿಕ ಸಂದರ್ಭಕ್ಕೆ ಅಳವಡಿಸುವ ಪ್ರಯತ್ನ ಮಾಡಿದರು. ಸ್ವಯಂ ಸಂಕಷ್ಟದ ಮತ್ತು ಶುದ್ಧೀಕರಣದ ಅಹಿಂಸಾ ತತ್ವವನ್ನಾಧರಿಸಿದ ಸತ್ಯಾಗ್ರಹಕ್ಕೆ, ಸಾತ್ವಿಕ ಕ್ರೋಧದ ಹೆಸರಿನಲ್ಲಿ ಸಾಮೂಹಿಕ ಪ್ರತಿಭಟನೆಯ ರೂಪ ನೀಡಿದರು. ಚರಕಾ ಪ್ರತಿನಿಧಿಸುವ ಅತಿ ವೈಯುಕ್ತಿಕ ಸ್ತರದ ದೈಹಿಕ ದುಡಿಮೆಯ ಸಂಸ್ಕೃತಿಯನ್ನು ವಿಸ್ತರಿಸಿ, ವಿದ್ಯುತ್ ಮತ್ತು ಇತರೆ ನೈಸರ್ಗಿಕ ಇಂಧನಗಳಿಂದ ಚಾಲಿತವಾಗುವ ಸಣ್ಣ ಪ್ರಮಾಣದ ಸ್ಥಳೀಯ ಯಂತ್ರ ಸಂಸ್ಕೃತಿಯನ್ನು ಪ್ರತಿಪಾದಿಸಿದರು. ಆದರೆ ಹೀಗೆ ಪ್ರತಿಪಾದಿಸುವಾಗ, ಆ ಪ್ರತಿಪಾದನೆಯ ಸರ್ವಶ್ರೇಷ್ಠತೆಯ ಹಮ್ಮಿನಲ್ಲಿ ತಮ್ಮನ್ನು ತಾವೇ ಕಳೆದುಕೊಂಡರು. ಹಾಗೇ, ತಮ್ಮ ಪ್ರಜ್ಞೆಯ ಗಾಂಧಿ ಕೇಂದ್ರವನ್ನೂ. ಇದು ಅವರು ತಮಗೆ ತಾವೇ ವಿಧಿಸಿಕೊಂಡ ಆಧುನಿಕತೆಯ ಶಾಪ. ಇದು ಆಧುನಿಕ ಜ್ಞಾನದಲ್ಲೇ ಅಂತರ್ಗತವಾಗಿರುವ ಹಮ್ಮಿನ ಪರಿಣಾಮ. ಗಾಂಧಿ ದೇವರಲ್ಲಿನ ತಮ್ಮ

ನಂಬಿಕೆಯ ಮೂಲಕ ರಕ್ಷಣೆ ಪಡೆಯಲೆತ್ನಿಸಿದ್ದು ಇಂತಹ ಪರಿಣಾಮಗಳ ವಿರುದ್ಧವೇ. ಈ ರಕ್ಷಣೆಗಾಗಿ ಅವರು ರೂಪಿಸಿಕೊಂಡ ನಿಯಮಗಳನ್ನೇ ಅವರು ಧರ್ಮ ಎಂದು ಕರೆದದ್ದು. ಆಧುನಿಕತೆಯ ವೈಚಾರಿಕ ಶಿಶುಗಳಾದ ಫ್ಯಾಸಿಸ್ಟರಿಗೆ ಮತ್ತು ಕಮ್ಯುನಿಸ್ಟರಿಗೆ ಉತ್ತರವಾಗಹೋದ ಸಮಾಜವಾದಿಗಳೂ ಈ ಶಿಶುತ್ವಕ್ಕೆ ಬಲಿಯಾದದ್ದೊಂದು ವಿಪರ್ಯಾಸ!

ಆದರೆ ಸಮಾಜವಾದಿಗಳು ಗಾಂಧೀಜಿಯ ಈ ದೇವರನ್ನೂ, ಧರ್ಮವನ್ನೂ ನಂಬದೇ ಹೋದರು. ಇವುಗಳ ಬಗ್ಗೆ ಅವರ ಔದಾಸೀನ್ಯ ಎಷ್ಟಿತ್ತೆಂದರೆ, ಈ ದೇವರು ಮತ್ತು ಧರ್ಮಗಳನ್ನು ಸಮಾಜವಾದಿ ರಾಜಕಾರಣಕ್ಕೆ ತಮ್ಮದೇ ರೀತಿಯಲ್ಲಿ ಅಳವಡಿಸಿಕೊಳ್ಳುವ ಎಚ್ಚರವನ್ನೂ ವಹಿಸದೇ ಹೋದರು. ಇದು ಗಾಂಧಿ ಕಂಡುಕೊಂಡಿದ್ದ, ರಾಜಕಾರಣಕ್ಕೆ ಅಗತ್ಯವಾದ ಅಧ್ಯಾತ್ಮಿಕತೆಯ ನಾಶವೇ ಆಗಿತ್ತು. ಈ ಬಗ್ಗೆ ಗಾಂಧಿ ಸಮಾಜವಾದಿಗಳಿಗೆ ವೈಯುಕ್ತಿಕವಾಗಿ ಮತ್ತು ಸಾಮಾಜಿಕವಾಗಿ 'ಬುದ್ಧಿ' ಹೇಳುತ್ತಲೇ ಇದ್ದರೂ, ಅವರು ತಾವು ಬೆಳೆಸಿಕೊಂಡಿದ್ದ ಕಾಂಗ್ರೆಸ್ ವೈರದ ಅಂಧತೆಯಲ್ಲೋ ಅಥವಾ ತಮ್ಮ ತಾತ್ವಿಕ ವಿಶಿಷ್ಟತೆಯ ಹುರುಪಿನಲ್ಲೋ ಅದನ್ನು ಆಳದಲ್ಲಿ ಅರ್ಥ ಮಾಡಿಕೊಳ್ಳದೇ ಹೋದರು. ಉದಾಹರಣೆಗೆ, ಗಾಂಧಿ-ಲೋಹಿಯಾರ ಮೊದಲ ವೈಚಾರಿಕ ಮುಖಾಮುಖಿ ಯಲ್ಲೇ ಸಮಾಜವಾದಿಗಳಿಗೆ ಒಂದು ದೊಡ್ಡ ಪಾಠವಿತ್ತು. ೧೯೩೫ರಲ್ಲಿ ಲೋಹಿಯಾ ತಾವು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷಕ್ಕಾಗಿ ಸಂಪಾದಿಸುತ್ತಿದ್ದ ಅದೇ ಹೆಸರಿನ ಪತ್ರಿಕೆಯಲ್ಲಿ, ಗಾಂಧಿ ಆಗ ತಮ್ಮ ಚಳುವಳಿಗೆ ಆಗಿದ್ದ ಹಿನ್ನಡೆಯನ್ನು ತುಂಬಿಕೊಳ್ಳಲು ಬಲವಾಗಿ ಪ್ರತಿಪಾದಿಸುತ್ತಿದ್ದ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಕ್ರಮವನ್ನು ಕಟುವಾಗಿ ಟೀಕಿಸಿ ಬರೆದ ಲೇಖನದ ಪ್ರತಿಯೊಂದನ್ನು ಗಾಂಧೀಜಿಗೆ ಕಳಿಸಿ ಅವರ ಪ್ರತಿಕ್ರಿಯೆಯನ್ನು ಕೋರಿದ್ದರು. ಆದರೆ ಗಾಂಧಿ ಉತ್ತರಿಸಲಿಲ್ಲ. ಗಾಬರಿಯಾದ ಲೋಹಿಯಾ ಏಕೆಂದು ವಿಚಾರಿಸಿದಾಗ ಗಾಂಧಿ ಪ್ರತಿಕ್ರಿಯಿಸಿದ್ದು ಹೀಗೆ: 'ಎದುರು ಪಕ್ಷದ ವಾದವನ್ನು ಆಲಿಸುವ ತಾಳ್ಮೆ ಇಲ್ಲದವರೊಂದಿಗೆ ನನ್ನಂಥವರಿಗೆ ಸಂವಾದ ಅಸಾಧ್ಯ'.

ಲೋಹಿಯಾ ತಮ್ಮ ಲೇಖನದಲ್ಲಿ ಬಳಸಿದ್ದ ಒರಟು ಭಾಷೆಗಾಗಿ ವಿಷಾದ ವ್ಯಕ್ತಪಡಿಸಿ ನಂತರದ ದಿನಗಳಲ್ಲಿ ಗಾಂಧೀಜಿಯ ಆಪ್ತ ಶಿಷ್ಯರಾದರು. ಇದಷ್ಟೇ ಅಲ್ಲ, 'ಕಾಂಗ್ರೆಸ್ ಸೋಶಲಿಸ್ಟ್' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ತಮ್ಮ ಲೇಖನಗಳನ್ನು ಗಾಂಧೀಜಿ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಪುನರ್ಮುದ್ರಿಸತೊಡಗಿದಾಗ ಲೋಹಿಯಾ ವ್ಯಕ್ತಪಡಿಸಿದ ಸಂತೋಷ ಮತ್ತು ಆಶ್ಚರ್ಯಗಳಿಗೆ ಗಾಂಧಿ ಪ್ರತಿಕ್ರಿಯಿಸಿದ್ದು ಹೀಗೆ: 'ಕಲಿಯಬೇಕಾದ್ದು ರಾವಣನಲ್ಲೂ ಸಾಕಷ್ಟಿದೆ. ಎಷ್ಟಾದರೂ ರಾವಣ ಮಹಾ ವಿದ್ಯಾವಂತ!' ಲೋಹಿಯಾ ಇದರಿಂದ ಸ್ವಲ್ಪ ಮುಜುಗರಕ್ಕೊಳಗಾದರೂ, ಗಾಂಧಿಯಿಂದ ವಿದ್ಯಾವಂತನೆಂದೆನಿಸಿಕೊಂಡ ಹೆಮ್ಮೆಯಲ್ಲಿಯೇ ಮುಳುಗಿ ಹೋದರೆಂದು ಕಾಣಿಸುತ್ತದೆ. ಏಕೆಂದರೆ ಸಮಾಜವಾದಿಗಳಲ್ಲಿ-ವಿಶೇಷವಾಗಿ ಲೋಹಿಯಾ ಶಿಷ್ಯರಲ್ಲಿ-ಈ ತಾಳ್ಮೆಗೇಡಿತನ ಸುಧಾರಿಸಲೇ ಇಲ್ಲ.

ಸ್ವಾತಂತ್ರ್ಯಪೂರ್ವದಲ್ಲೇ ನೆಹರೂ ನೇತೃತ್ವದ ಕಾಂಗ್ರೆಸ್ ಉಸ್ತುವಾರಿ ಸರ್ಕಾರ ಕೋಮು ಹಿಂಸಾಚಾರವನ್ನು ಹತ್ತಿಕ್ಕುವಲ್ಲಿ ಮತ್ತು ಸಾಮಾನ್ಯ ಆಡಳಿತದಲ್ಲಿ ಅನುಸರಿಸ ತೊಡಗಿದ್ದ ನೀತಿಗಳನ್ನು ಕಂಡು ಗಾಂಧೀಜಿ ವಿಚಲಿತರಾಗಿದ್ದರು. ಆ ಸಂದರ್ಭದಲ್ಲಿ ಅವರ ಬಳಿ ಹೋದ ಸಮಾಜವಾದಿಗಳ ನಿಯೋಗವೊಂದು, ತಮ್ಮ ನೇತೃತ್ವವನ್ನು

ಅವರು ವಹಿಸಿಕೊಳ್ಳುವಂತೆ ಕೋರಿತ್ತು. ನಿಜ, ಕಾಂಗ್ರೆಸ್ಸಿಗರ ಬಗ್ಗೆ ನಂಬಿಕೆ ಕಳೆದುಕೊಳ್ಳಲಾರಂಭಿಸಿದ್ದ ಗಾಂಧಿ ಆಗ ಸಮಾಜವಾದಿಗಳೊಂದಿಗೆ ಹಲವು ನೆಲೆಗಳಲ್ಲಿ ಮಾತುಕತೆ ಆರಂಭಿಸಿದ್ದರು. ಆದರೆ ಈ ಸಂದರ್ಭದಲ್ಲಿ ಅವರು ಸಮಾಜವಾದಿಗಳಿಗೆ ಹೇಳಿದ್ದು:'ನಾನು ಹುಟ್ಟಾ ಸಮಾಜವಾದಿ. ೧೯೪೨ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ನೀವು ತೋರಿದ ಧೀರತೆಯನ್ನು ಮೆಚ್ಚುವೆನಾದರೂ, ನೀವು ತಲೆಮರೆಸಿಕೊಂಡು ನಡೆಸಿದ ವಿಧ್ವಂಸಕ ಕೃತ್ಯಗಳ ಮೂಲಕ ಹಿಂಸೆಗೆ ನೀಡಿದ ಮಾನ್ಯತೆಯೇ ಇಂದು ಕೋಮು ಹಿಂಸಾಚಾರಕ್ಕೆ ಅವಕಾಶ ನೀಡಿರುವುದು ಎಂಬುದು ನನ್ನ ಖಚಿತ ನಂಬಿಕೆ. ಇದನ್ನರ್ಥ ಮಾಡಿಕೊಂಡು ನೀವು ಅಹಿಂಸೆಗೆ ಬದ್ಧರಾಗಿ, ದೇವರಲ್ಲಿ ನಂಬಿಕೆಯಿಟ್ಟು ಹಳ್ಳಿಗಳಿಗೆ ತೆರಳಿ. ಅಸ್ಪೃಶ್ಯರು ಮತ್ತು ಮಹಿಳೆಯರ ನಡುವೆ ಕೆಲಸ ಮಾಡಲಾರಂಭಿಸಿ. ಅಂದೇ ನಾನು ನಿಮ್ಮ ಪಕ್ಷದ ಅಧ್ಯಕ್ಷನಾಗುವೆ'

ಆಗಲೂ, ತಮ್ಮನ್ನು ಸಮಾಜವಾದಿ ಎಂದು ಕರೆದುಕೊಳ್ಳುವಷ್ಟು ಬದಲಾಗಿದ್ದ ಗಾಂಧಿ ಏನು ಹೇಳುತ್ತಿದ್ದಾರೆಂದು ಸಮಾಜವಾದಿಗಳು ತಾಳ್ಮೆಯಿಂದ ಕೇಳುವ ಮತ್ತು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಲೇ ಇಲ್ಲ. ಅವರಿಗೆ ಇವೆಲ್ಲ ತಮ್ಮ 'ವಿಶಿಷ್ಟತೆ'ಯನ್ನು ಹಾಳು ಮಾಡುವ ಸನಾತನಿ ಮುದುಕನೊಬ್ಬನ ಅರಳು ಮರುಳು ಮಾತುಗಳಾಗಷ್ಟೆ ಕೇಳಿಸಿರಬೇಕು. ನಂತರವೂ ಅಷ್ಟೆ, ತಮ್ಮ ಅಂತಿಮ ದಿನಗಳ ನೌಖಾಲಿ ಯಾತ್ರೆಯ ಹೊತ್ತಿಗೆ ಗಾಂಧಿ ಲೋಹಿಯಾರೊಂದಿಗೆ ನಡೆಸಿದ ಖಾಸಗಿ ಮಾತುಕತೆಗಳೂ, ಸಮಾಜವಾದಿಗಳು ಗಾಂಧೀಜಿಯ ಅಧ್ಯಾತ್ಮಿಕತೆಯನ್ನು ಅನುಮಾನದಿಂದಲೇ ನೋಡುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಗಾಂಧಿ ಲೋಹಿಯಾರಲ್ಲಿ ದೊಡ್ಡ ಜನನಾಯಕನಾಗುವ ಲಕ್ಷಣಗಳನ್ನು ಗುರುತಿಸಿ, ಅದಕ್ಕಾಗಿ ದೇವರಲ್ಲಿ ನಂಬಿಕೆ ಇರಬೇಕು, ಸಿಗರೇಟ್-ಚಹಾ-ಕಾಫಿ ಸೇವನೆಯನ್ನು ಬಿಡಬೇಕು ಎಂದು ಈ ಮಾತುಕತೆಯಲ್ಲಿ ಅವರಿಗೆ ಸೂಚಿಸಿದ್ದರು. ಸಮಾಜವಾದಿಯೊಬ್ಬ ಜನರೊಂದಿಗೆ ಗುರುತಿಸಿಕೊಳ್ಳಲು ಇವೆಲ್ಲ ಅಗತ್ಯವೆಂದು ಗಾಂಧಿ ಭಾವಿಸಿದ್ದರು. ಲೋಹಿಯಾಗೆ ಗಾಂಧಿ ದೇವರೆಂದು ನಂಬಿದ್ದುದು ಏನನ್ನು ಮತ್ತು ಸಿಗರೇಟ್ ಇತ್ಯಾದಿಗಳ ಸೇವನೆಯ ತ್ಯಾಗದ ಸೂಚನೆಯ ಹಿಂದಿನ ಸಂದೇಶವೇನು ಎಂಬುದೂ ಗೊತ್ತಿತ್ತು. ಅದರೂ ಅಸ್ತಿತ್ವವಾದಿ ದ್ವಂದ್ವಕ್ಕೆ ಸಿಕ್ಕ ಅವರು ಈ ವಿಷಯವಾಗಿ ಗಾಂಧಿಗೆ ಉತ್ತರ ಕೊಡಲು ಮೂರು ದಿನಗಳ ಕಾಲಾವಕಾಶ ಕೇಳಿದರು. ಆದರೆ ಆ ಮೂರು ದಿನಗಳಲ್ಲಿ ಗಾಂಧೀಜಿಯ ಕೊಲೆಯಾಗಿತ್ತು...

ಗಾಂಧೀಜಿಯೇ ಇಲ್ಲವಾದ ನಂತರ, ಈ ವಿಷಯಗಳ ಬಗೆಗೆಲ್ಲ ಯಾರಿಗಾಗಿ ಯೋಚಿಸಬೇಕು ಎಂಬ ಹತಾಶೆಯಲ್ಲಿ ಲೋಹಿಯಾ 'ನನ್ನಂತೆ ನಾನು' ಎಂಬ ಅಸ್ತಿತ್ವವಾದಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದರು! ಅದನ್ನು ತಮ್ಮ ಸಮಾಜವಾದಿ ಚಳುವಳಿಯ ಒಂದು ಭಾಗವಾಗಿ ಅಳವಡಿಸಿ, ಮನುಷ್ಯನ ಖಾಸಗಿತನದ ರಕ್ಷಣೆಯನ್ನು ಒಂದು ಆಧುನಿಕ ಮೌಲ್ಯವಾಗಿ ಪ್ರತಿಪಾದಿಸಿದರು. ಗಾಂಧೀಜಿಯೂ ಮನುಷ್ಯನ ಖಾಸಗಿತನವನ್ನು ಗೌರವಿಸುತ್ತಿದ್ದರು. ಆದರೆ ಅವರು ಈ ಸ್ವಾತಂತ್ರ್ಯವನ್ನು ತಮ್ಮ 'ಸ್ವರಾಜ್ಯ' ಕಲ್ಪನೆಯ ಭಾಗವನ್ನಾಗಿ ನಿರೂಪಿಸಿದ್ದರು: ಮನುಷ್ಯ ತನ್ನ ಸಾಮಾಜಿಕ ಧರ್ಮವನ್ನು ಅನುಸರಿಸುವ

ಕರ್ತವ್ಯದ ಭಾಗವಾಗಿಯೇ ಇಂತಹ ವೈಯುಕ್ತಿಕ ಹಕ್ಕುಗಳನ್ನು ಕಂಡುಕೊಂಡು ಆನಂದಿಸಬೇಕು ಎಂದವರು ನಂಬಿದ್ದರು.

ಸಮಾಜವಾದಿಗಳಿಗೆ ಇದು ಅರ್ಥವಾದಂತೆ ತೋರಲಿಲ್ಲ. ಹಾಗಾಗಿಯೇ ಅವರು ಕೆಟ್ಟದ್ದನ್ನು ಕೆಡವಲು ಯತ್ನಿಸಿದರೇ ಹೊರತು, ಒಳ್ಳೆಯದನ್ನು ಕಟ್ಟುವುದರ ಭಾಗವಾಗಿಯೇ ಕೆಟ್ಟದ್ದನ್ನು ಕೆಡವಬೇಕೆಂಬ ಎಂಬ ಅರಿವು ಅವರಲ್ಲಿ ಮೂಡಲಿಲ್ಲ. ನಮಗಾದರೂ ಇದು ಅರ್ಥವಾಗುತ್ತಿರುವುದು ಇಷ್ಟು ವರ್ಷಗಳ ನಂತರ: ಗಾಂಧಿ ಇದನ್ನು ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಹೇಳಿದ ನೂರು ವರ್ಷಗಳ ನಂತರ! ನಮ್ಮ ಒಟ್ಟು ಬದುಕು, ಈ ಜಾಗತೀಕರಣದ ಹಲವು ಸುಖಗಳ ಮಧ್ಯೆಯೂ ಮೂಲತಃ ದುಃಖಮಯವೇ ಆಗಿದೆ ಏಕೆ ಎಂಬ ಪ್ರಶ್ನೆಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ.

ಹಾಗಾಗಿ ಅಳಿದುಳಿದಿರುವ ಸಮಾಜವಾದಿಗಳು ಇಂದು ತಮ್ಮಲ್ಲಿ ಅಳಿದುಳಿದಿರುವ ಸಮಾಜವಾದಿ ನಂಬಿಕೆಯನ್ನು ಪುರ್ನಸಂಘಟಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಗಾಂಧಿಯನ್ನು ಇಂದಿನ ಸಂದರ್ಭಕ್ಕೆ ಪುನರನ್ವೇಷಿಸಿಕೊಳ್ಳುವುದೇ ಆಗಿದೆ.

(೨೦೦೮ರ ಅಕ್ಟೋಬರ್ ೧೨ರಂದು ಮೈಸೂರಿನಲ್ಲಿ ನಡೆದ 'ಲೋಹಿಯಾ ನೆನಪು' ಮತ್ತು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಆಡಿದ ಮಾತುಗಳು.)

ಮತ್ತೆ ನೆನಪಾಗುತ್ತಿರುವ ಗಾಂಧಿ

ನಮ್ಮ ಪುರಾತನರೊಬ್ಬರು ನಮ್ಮ ಸದ್ಯದ ಬದುಕಿನ ರೀತಿ ನೀತಿಗಳನ್ನು ನೋಡುವ ಕುತೂಹಲದಿಂದ ಈಗ ನಮ್ಮ ಮಧ್ಯೆ ಬಂದಿಳಿದರೆನ್ನಿ. ಅವರು ಆಶ್ಚರ್ಯ ಪಡುವುದು, ಇವುಗಳಲ್ಲಿ ಯಾವುದನ್ನು ಕಂಡು?: ನಮ್ಮ ದಂತ ವೈದ್ಯರ ಕೌಶಲ್ಯ-ಪರಿಣಿತಿಗಳನ್ನೋ ಅಥವಾ ನಮ್ಮ ಹಲ್ಲುಗಳ ವ್ಯಾಪಕ ಹುಳುಕುತನವನ್ನೋ? ನಮ್ಮ ಸಾರಿಗೆ-ಸಾಧನಗಳ ವೇಗ ವೈವಿಧ್ಯವನ್ನೋ ಅಥವಾ ನಾವು ನಮ್ಮ ಕೆಲಸದ ಸ್ಥಳಕ್ಕೆ ಹೋಗಿ ಬರಲು ತೆಗೆದುಕೊಳ್ಳುವ ಕಾಲ ಹಾಗೂ ಪಡುವ ಪಾಡನ್ನೋ? ನಮ್ಮ ಔಷಧ ಪದ್ಧತಿಯ ವೈವಿಧ್ಯಮಯ ಅವಿಷ್ಕಾರಗಳನ್ನೋ ಅಥವಾ ಆಸ್ಪತ್ರೆಗಳಲ್ಲಿನ ಜನ-ಜಂಗುಳಿಯನ್ನೋ? ಚಂದ್ರನ ಮೇಲೆ ಕಾಲಿಡುವಂತಾದ ನಮ್ಮ ವೈಜ್ಞಾನಿಕ ಸಾಮರ್ಥ್ಯವನ್ನೋ ಅಥವಾ ಕೆಲಸ ಮಾಡಬಯಸುವ ಜನರಿಗೆ ಉದ್ಯೋಗ ಒದಗಿಸಿಕೊಡಲಾಗದ ನಮ್ಮ ತಾಂತ್ರಿಕ ಅಸಾಮರ್ಥ್ಯವನ್ನೋ? ನಮ್ಮ ಯಂತ್ರಗಳ ದಕ್ಷತೆಯನ್ನೋ ಅಥವಾ ನಮ್ಮ ಇಡೀ ವ್ಯವಸ್ಥೆಯ ಅದಕ್ಷತೆಯನ್ನೋ?

ಈ ಪ್ರಶ್ನೆಯನ್ನು ಕೇಳಿದಾತ ಶತಮಾನದ ಮಧ್ಯಭಾಗದಲ್ಲಿ ತನ್ನ 'ಸಣ್ಣದು ಸುಂದರ' (Small is Beautiful) ಎಂಬ ಬಹು ಆಯಾಮಗಳ ಅರ್ಥಶಾಸ್ತ್ರೀಯ ಕೃತಿಯ ಮೂಲಕ ವಿಶ್ವದ ಗಮನ ಸೆಳೆದಿದ್ದ ಜರ್ಮನಿಯ ಅರ್ಥಶಾಸ್ತ್ರಜ್ಞ, ಷುಮೇಕರ್, ವಿಜ್ಞಾನ ಮತ್ತು ತಂತ್ರಜ್ಞಾನಗಳ ಅವಿಷ್ಕಾರಗಳ ನಿರಂತರ ಅನ್ವಯಗಳನ್ನಾಧರಿಸಿದ ಬೃಹತ್ ಯಾಂತ್ರಿಕ ಉತ್ಪಾದನೆಯ ಮೂಲಕ ಸದಾ ಏರುತ್ತಲೇ ಹೋಗುವ ಜೀವನ ಮಟ್ಟದ ಆದರ್ಶವನ್ನು, ತನ್ನ ಸ್ಫೂರ್ತಿ ಶಕ್ತಿಯನ್ನಾಗಿ ಮಾಡಿಕೊಂಡಿರುವ ಪ್ರಚಲಿತ ಆಧುನಿಕ ನಾಗರೀಕತೆಯನ್ನು ವಿಮರ್ಶಿಸುತ್ತಾ, ಆತ ಕೇಳಿದ ಪ್ರಶ್ನೆಯಿದು. ಸುಮಾರು ಮುವ್ವತ್ತೈದು ವರ್ಷಗಳ ಹಿಂದೆ, ವಾರಣಾಸಿಯ ಗಾಂಧಿ ಅಧ್ಯಯನ ಕೇಂದ್ರದಲ್ಲಿ ಷುಮೇಕರ್ ನೀಡಿದ ಗಾಂಧಿ ಸ್ಮಾರಕ ಉಪನ್ಯಾಸದ ಭಾಗವಾಗಿ ಕೇಳಲಾದ ಈ ಪ್ರಶ್ನೆ, ಇಂದೂ ಪ್ರಸ್ತುತವೆನಿಸುವುದಿಲ್ಲವೇ? ಅಥವಾ ಅಂದಿಗಿಂತ ಇಂದು ಪ್ರಸ್ತುತವೆನಿಸುವುದೋ?

ಉತ್ತರ ಹೇಳಲು ಕಷ್ಟವೆನಿಸುತ್ತಿದೆಯೇ? ಇರಬಹುದು-ಏಕೆಂದರೆ, ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ದೇಶ ಸಾಧಿಸಿದೆಯೆಂದು ಹೇಳಲಾದ 'ಅದ್ಭುತ ಪ್ರಗತಿ'ಯ ಆಕರ್ಷಣೆ-ಆವೇಗಗಳಲ್ಲಿ ನಾವು ಎಷ್ಟರ ಮಟ್ಟಿಗೆ ಸಿಲುಕಿಕೊಂಡಿದ್ದೇವೆಂದರೆ, ಇದೇ ಅವಧಿಯಲ್ಲಿ ದೇಶಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಅದು ಇನ್ನೂ ಎಡೆಬಿಡದೆ ಮುಂದುವರೆಯುತ್ತಿದೆ ಎಂಬ ಸಂಗತಿ ನಮ್ಮ ಆತ್ಮ ಸಾಕ್ಷಿಯನ್ನು ಕೆಣಕಲು ಸಾಧ್ಯವೇ ಆಗಿಲ್ಲ. ಇದು ದೇಶಕ್ಕೆ ತಗುಲಿರುವ ಯಾವ ರೋಗದ ಲಕ್ಷಣ ಎಂದು ಯೋಚಿಸುವ ವ್ಯವಧಾನವೂ ನಮಗಿಲ್ಲ. ಪ್ರಗತಿ

ಪ್ರಕ್ರಿಯೆಯ ಈ ತುರಾತುರಿಯಲ್ಲಿ, ರೋಗ ಲಕ್ಷಣವನ್ನೇ ರೋಗವೆಂದು ಬಗೆದು – ಇವೆಲ್ಲಾ ಪ್ರಸ್ತುತ ಕ್ಷಿಪ್ರ ಆಧುನೀಕರಣದ ಹಾದಿಯಲ್ಲಿನ ಅನಿವಾರ್ಯ ಅನಾಹುತಗಳೆಂಬಂತೆ – ಅದಕ್ಕೆ ಚಿಕಿತ್ಸೆಯ ರೂಪದಲ್ಲಿ ಒಂದಷ್ಟು ಸರ್ಕಾರಿ ರಿಯಾಯಿತಿಗಳನ್ನು ಘೋಷಿಸಿ ನಿರಾಳಗೊಂಡಿದ್ದೇವೆ. "ಮನೆಯಲ್ಲಿ ಹೆಣ್ಣು ಮಕ್ಕಳು ಮದುವೆಗೆ ಬೆಳೆದು ನಿಂತಿದ್ದಾರೆ, ಭೂಮಿಯಲ್ಲಿ ನೀರು ಬತ್ತಿ ಹೋಗಿದೆ. ಅಷ್ಟೋ ಇಷ್ಟೋ ಬೆಳೆದ ಬೆಳೆಗೆ ಸ್ಥಿರವಾದ ಬೆಲೆಯಿಲ್ಲ, ಸಾಲ ಕೊಟ್ಟ ಲೇವಾದೇವಿಯವರು ನಮ್ಮ ಹಿಂದೆ ಬಿದ್ದಿದ್ದಾರೆ ಮತ್ತು ಬ್ಯಾಂಕುಗಳು ಹರಾಜು ನೋಟೀಸು ಕಳಿಸಿ ಹೆದರಿಸುತ್ತಿದ್ದಾರೆ. ನಾವಿನ್ನೇನು ಮಾಡಬೇಕು ಹೇಳಿ?" ಎಂದು ಕೇಳುವ ವಿದರ್ಭದ ರೈತನ ಆರ್ತ ಅಸಹಾಯಕತೆಯ ಹಿಂದಿರುವ ದುರಂತ ಕಥೆಯನ್ನು, ಇದು ನಮಗೆ ಸಂಬಂಧವೇ ಪಡದ ಕಥೆಯೆಂಬಂತೆ, ನಿಂತು ಆಲಿಸಲು ನಿರಾಕರಿಸುವಷ್ಟು ಅಸೂಕ್ಷ್ಮರಾಗಿದ್ದೇವೆ.

ಹಾಗಾಗಿಯೇ, ದೇಶ ಶೇಕಡಾ ಎಂಟರ ವಾರ್ಷಿಕ ಬೆಳವಣಿಗೆ ದರದತ್ತ ದಾಪುಗಾಲು ಹಾಕುತ್ತಿದೆ; ನಮ್ಮ ಒಟ್ಟು ವಿದೇಶಿ ಸಾಲ ಯಾವ ಗತಿಯಲ್ಲಿ ಮತ್ತು ಯಾವ ಷರತ್ತುಗಳ ಮೇಲೆ ಬೆಳೆಯುತ್ತಿದೆ ಎಂಬುದರ ಪರಿವೆಯೇ ಇಲ್ಲದೆ, ದೇಶದ ವಿದೇಶಿ ವಿನಿಮಯ ಮೀಸಲು ದಾಖಲೆ ಮಟ್ಟವನ್ನು ಮುಟ್ಟುತ್ತಿದೆ; ಒಟ್ಟಾರೆ ರಾಷ್ಟ್ರೀಯ ಉತ್ಪನ್ನ ಹಾಗೂ ತಲಾ ಸರಾಸರಿ ಆದಾಯ ಹೊಸ ಎತ್ತರಗಳಿಗೆ ಜಿಗಿಯುತ್ತಿದೆ; ಎಲ್ಲಕ್ಕಿಂತ ಹೆಚ್ಚಾಗಿ, ಅತ್ಯಂತ ಹೆಚ್ಚು ಕೋಟ್ಯಾಧೀಶ್ವರರನ್ನು ಹೊಂದಿರುವ ದೇಶಗಳಲ್ಲಿ ಭಾರತ ಎಂಟನೇ ಸ್ಥಾನದಲ್ಲಿದೆ ಎಂದೆಲ್ಲಾ ನಮ್ಮ ಕ್ಷಿಪ್ರ ಪ್ರಗತಿಯ ದಾಖಲೆ ಪತ್ರವನ್ನು ಹೆಮ್ಮೆಯಿಂದ ಮುಂದಿಡುತ್ತಾ, ಈ ಎಲ್ಲಾ ಅಂಕಿ ಅಂಶಗಳನ್ನು ಒಮ್ಮೆಗೇ ಅಸಂಗತಗೊಳಿಸಿಬಿಡುವ ಈ ದಾಖಲೆ ಪತ್ರದ ಇನ್ನೊಂದು ಆಂಶದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೇ ಹೋಗಿದ್ದೇವೆ: ಜಗತ್ತಿನ ೧೭೭ ದೇಶಗಳ ಬಡತನ, ನಿರುದ್ಯೋಗ, ಶಿಕ್ಷಣ, ಲಿಂಗ ಸಮಾನತೆ ಕುಡಿಯುವ ನೀರು–ಆರೋಗ್ಯ ಸೌಲಭ್ಯಗಳ ಲಭ್ಯತೆ, ಶಿಶು ಮರಣ ದರ ಇತ್ಯಾದಿ ಪ್ರಮಾಣ ಗಳನ್ನಾಧರಿಸದ ಮಾನವ ಸಂಪನ್ಮೂಲ ಅಭಿವೃದ್ಧಿ ಸೂಚಿ ತಃಖ್ತೆಯಲ್ಲಿ ನಾವು ೧೨೭ನೇ ಸ್ಥಾನದಲ್ಲಿದ್ದೇವೆ. ಅಲ್ಲದೆ, ಕಳೆದ ಎರಡು ಮೂರು ವರ್ಷಗಳಿಂದೀಚೆಗೆ ಬಾಂಗ್ಲಾದೇಶ ಮತ್ತು ಉಗಾಂಡಾಗಳಂತಹ ದೇಶಗಳು ಈ ತಃಖ್ತೆಯಲ್ಲಿ ನಮ್ಮನ್ನು ದಾಟಿ ಮೇಲೇರಿ ಹೋಗಿದ್ದರೆ, ನಾವು ಮೂರು ಸ್ಥಾನಗಳನ್ನು ಕೆಳಗಿಳಿದಿದ್ದೇವೆ!

ಇನ್ನೊಂದು ವಿಶೇಷವೆಂದರೆ, ನಿರುದ್ಯೋಗ ದರ ವರ್ಷೇ ವರ್ಷೇ ಏರುತ್ತಲೇ ಇದೆ. ಖಾಸಗೀ ಉದ್ಯಮದಲ್ಲಿ ತಿಂಗಳಿಗೆ ೧೦ ಲಕ್ಷ ರೂಪಾಯಿಗಳವರೆಗೆ ಸಂಬಳ ಕೊಡಲು ಅವಕಾಶವಿರುವಷ್ಟರ ಮಟ್ಟಿಗೆ ನಮ್ಮ ಅರ್ಥ ವ್ಯವಸ್ಥೆಯನ್ನು 'ಉದಾರೀ'ಕರಿಸಿರುವ ನಾವು ಬಡತನ ರೇಖೆಯನ್ನು ನಿರ್ಧರಿಸುವಾಗ ಮಾತ್ರ ದಿನವಹಿ ಆದಾಯವನ್ನು ೪೫ ರೂಪಾಯಿಗಳಿಗೆ ನಿಗದಿಪಡಿಸುವಷ್ಟರ ಮಟ್ಟಿಗೆ ಅಶ್ಲೀಲರಾಗಿ, ಸ್ವಾತಂತ್ರ್ಯ ಬಂದಾಗಿನಿಂದೀಚೆಗೆ ಬಡತನವನ್ನು ಶೇಕಡಾ ೫೪ರಿಂದ ೨೫ಕ್ಕೆ ಇಳಿಸಿದ್ದೇವೆ ಎಂದು ನಮ್ಮನ್ನು ನಾವೇ ನಂಬಿಸಿಕೊಳ್ಳತೊಡಗಿದ್ದೇವೆ. ಈ 'ಬಡತನ'ದ ಈ ಲೆಕ್ಕಾಚಾರದ ಪ್ರಕಾರವೇ, ಈಗಲೂ ನಮ್ಮ ಸುತ್ತಮುತ್ತಲೇ ೩೦ ಕೋಟಿಯಷ್ಟು ಬೃಹತ್ ಜನಸ್ತೋಮವು ದಿನವಹಿ ೪೫ ರೂ.ಗಳ ವೈದೃಶ ಬಡತನದಲ್ಲಿ ಆಕ್ರಾಂತವಾಗಿ ನಮ್ಮನ್ನು ಗಮನಿಸುತ್ತಿದೆ ಎಂಬುದರ

ಪರಿವೆಯೇ ಇಲ್ಲದ. ಇನ್ನ ಕೆಲವೆ ವರ್ಷಗಳಲ್ಲಿ ನಾವು ಜಗತ್ತಿನ ಅಡಿ ದೊಡ್ಡ ಮೂರೋ ನಾಲ್ಕೋ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿ ಒಡಮೂಡುವ ಅತ್ಮ ವಿಶ್ವಾಸದಿಂದ ವೈವಿಧ್ಯಮಯ ಗ್ರಾಹಕ ವಸ್ತುಗಳಿಂದ ಝಗಝಗಿಸುವ ಮಾರು ಕಟ್ಟೆಗಳನ್ನು ವಿಸ್ತರಿಸುತ್ತಾ 'ನಡೆ ಮುಂದೆ ನಡೆ ಮುಂದೆ' ಎಂದು ಮುನ್ನುಗ್ಗುತ್ತಿದ್ದೇವೆ. ಈ ಮುನ್ನಡೆಯ ನಮ್ಮ ಕಣ್ಮುಂದಿನ ಒಂದು ಪ್ರತೀಕದಂತಿರುವ ಬೆಂಗಳೂರಿನಲ್ಲಿ, ರಾಜಕುಮಾರ್ ಎಂಬ 'ಬಡವರ ಬಂಧು' ರೂಪಕವು ಸಾವು ಕಂಡಾಗ ಜನವೇಕೆ ಸಮುದ್ರದಂತೆ ಉಕ್ಕೇರಿ ಬೀದಿಗಳನ್ನು ತುಂಬಿಕೊಳ್ಳುತ್ತದೆ ಎಂದು ಯೋಚಿಸುವ ಗೋಜಿಗೆ ಹೋಗದೆ; ಮತ್ತು ಆ ಜನ ಮಧ್ಯದಿಂದ ಹರಕು ಸೀರೆಯ ಮುದುಕಿಯೊಬ್ಬಳು ದೊಡ್ಡ ಕಲ್ಲೆನ್ನೆತ್ತಿಕೊಂಡು ಪೋಲಿಸರತ್ತ ಅರ್ಥಾತ್ ಅವರು ಕಾಪಾಡಲು ನಿಂತಿರುವ ವ್ಯವಸ್ಥೆಯತ್ತ ಬೀಸುವ, ವಾಸ್ತವ ಚಿತ್ರದ ಸಂದೇಶವನ್ನು ಲೆಕ್ಕಿಸದೆ!

ಇದನ್ನು ಆಧುನೀಕರಣದ ಮಾಯೆ ಎನ್ನೋಣವೇ? ತಾತ್ವಿಕವಾಗಿಯಷ್ಟೇ ನೋಡಿದಾಗ ಮಾಯೆ ಎನಿಸುತ್ತದೆ. ಆದರೆ ಅದರ ತೊತ್ತಳದುಳಿತಕ್ಕೆ ಸಿಕ್ಕ ಅಭ್ಯಾಗತರ ನೋವು ನಿಟ್ಟುಸಿರುಗಳಿಗೆ ಸ್ಪಂಧಿಸುವ ಹೃದಯವಿದ್ದವರಿಗೆ ಅದು ಕ್ರೌರ್ಯವೆನಿಸುತ್ತದೆ. ಅಂತಹ ಹೃದಯವಿದ್ದ ಗಾಂಧೀಜಿಗೆ ಸಹಜವಾಗಿಯೇ, ಈ ಆಧುನೀಕರಣವನ್ನು ಪ್ರತಿನಿಧಿಸುವ ಪಶ್ಚಿಮದ ನಾಗರೀಕತೆ ಕ್ರೌರ್ಯದಿಂದ ಕೂಡಿದೆ ಎಂದೆನಿಸಿತ್ತು. ಅದು, ಸ್ವತಃ ತಾನೇ ನಿಜವಾಗಿ ಏನನ್ನೂ ಉತ್ಪಾದಿಸದೆ, ಒಬ್ಬರಿಂದ ಕದ್ದು ಇನ್ನೊಬ್ಬರಿಗೆ ಕೊಡುವ ತರ್ಕದ ಮೇಲೆ ನಿಂತ ಲೋಭದ ನಾಗರೀಕತೆಯಾಗಿದೆ. ಹಾಗಾಗಿ ಅದು ಜಗತ್ತಿನಲ್ಲಿ ಬಡತನ ಮತ್ತು ಶ್ರೀಮಂತಿಕೆ ಎಂಬ ಎರಡು ಪರಸ್ಪರ ವಿರೋಧಿ ಸ್ಥಿತಿಗಳನ್ನು ಸ್ಥಾಯಿಗೊಳಿಸುತ್ತದೆ; ಮತ್ತು ಆ ಮೂಲಕ ಜಗತ್ತಿನ ಜನಸ್ತೋಮವನ್ನು ಸದಾ ಎರಡಾಗಿ ಒಡೆದಿಟ್ಟು, ಸಮಾಜದಲ್ಲಿ ನಿರಂತರ ಸಂಘರ್ಷವೇರ್ಪಡಿಸುತ್ತದೆ ಎಂದವರು ವಿಶ್ಲೇಷಿಸಿದ್ದರು. ಹೀಗಾಗಿ ಈ ನಾಗರೀಕತೆಯ ಶೀಲವೇ ಹಿಂಸೆಯಾಗಿದ್ದು, ಇದರ ಮಧ್ಯೆ ಅಶಾಂತವಾದ ಮನುಷ್ಯ ತನ್ನನ್ನು ತಾನು ಕಂಡುಕೊಳ್ಳುವ ಆಧ್ಯಾತ್ಮಿಕ ಗುರಿಯಿಂದ ವಂಚಿತನಾಗುತ್ತಾನೆ ಹಾಗೂ ಇದರ ಅತ್ಯಂತಿಕ ಪರಿಣಾಮವೆಂದರೆ ಮಾನವತೆಯ ನಾಶ ಎಂಬುದು ಗಾಂಧೀಜಿಯ ಕಾಣ್ಕೆಯಾಗಿತ್ತು. ಗಾಂಧೀಜಿಯ ಕೊಲೆಯಾದ ದಿನದಿಂದಲೂ ಈ ಕಾಣ್ಕೆ ನಮಗೆ ಹೆಚ್ಚೆಚ್ಚು ಪ್ರಸ್ತುತವೆನಿಸುತ್ತಿದೆ – ಎರಡು ವಿಶ್ವ ಯುದ್ಧಗಳು ಆರಂಭಿಸಿದ ಜಾಗತಿಕ ಹಿಂಸೆ ಒಂದಲ್ಲ ಒಂದು ರೂಪದಲ್ಲಿ ನಿರಂತರವಾಗಿ ಜಗತ್ತನ್ನು ಕಾಡುತ್ತಲೇ ಬಂದಿದೆ. ಸದ್ಯಕ್ಕೆ ಅದು ಜಾಗತಿಕ ಭಯೋತ್ಪಾದನೆಯ ರೂಪ ತಾಳಿ ನಿಂತಿದೆ. ಮೇಲ್ನೋಟಕ್ಕೆ ಇದು ಧರ್ಮ ಸಂಬಂಧಿ ಹಿಂಸೆಯಾಗಿ ಕಾಣುತ್ತಿದ್ದರೂ, ಅದು ಜಗತ್ತಿನ ಒಂದು ನಿರ್ದಿಷ್ಟ ನಾಗರೀಕತೆಯ ಪ್ರಭುತ್ವ ಸ್ಥಾಪನೆಯ ಪ್ರಯತ್ನಗಳು, ಜಗತ್ತಿನಾದ್ಯಂತ ಉಂಟು ಮಾಡುತ್ತಿರುವ ಹಲವು – ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ–ನೆಲೆಗಳಲ್ಲಿನ ಒತ್ತಡಗಳು ಪಡೆದುಕೊಂಡಿರುವ ಹಿಂಸಾತ್ಮಕ ಅಭಿವ್ಯಕ್ತಿಯೇ ಆಗಿದೆ.

ಆಧುನಿಕತೆಯ ಅರ್ಥದ ಮೂಲ ನೆಲೆಗಳನ್ನು ಗಮನಿಸಿದರೆ, ಗಾಂಧೀಜಿ ಆಧುನಿಕರಲ್ಲಿ ಆಧುನಿಕರು–ಅತ್ಯಾಧುನಿಕರು ಎಂಬುದು ಗೊತ್ತಾಗುತ್ತದೆ: ಯುರೋಪಿನ ೧೯ನೇ ಶತಮಾನದ ಉಳಿಗಮಾನ್ಯ ವ್ಯವಸ್ಥೆ ಜನತೆಯ, ನಿರ್ದಿಷ್ಟವಾಗಿ ಭಾರತದ ಸಮಸ್ತ ಜನತೆಯ ಲೌಕಿಕ ಹಾಗೂ ಅಧ್ಯಾತ್ಮಿಕ ಅಭಿವೃದ್ಧಿಗಳೆರಡಕ್ಕೂ ಮಾರಕವಾಗುವುದೆಂದು ಅವರು ವಿಶ್ಲೇಷಿದರು.

ಅದಕ್ಕಾಗಿ ಅಲ್ಪ ಸಂಖ್ಯಾತ ಉಳ್ಳವರ, ಪ್ರತಿಷ್ಠರ ಅಧಿಕಾರ ಹಂಚಿಕೆಯ ಸಂಧಾನ ವೇದಿಕೆ ಮಾತ್ರವಾಗಿದ್ದ ಕಾಂಗ್ರೆಸ್ಸನ್ನು, ರೈತ ಕೂಲಿಕಾರರು, ಅಸ್ಪೃಶ್ಯರು ಮತ್ತು ಮಹಿಳೆಯರನ್ನೂ ಕೂಡಿಸಿಕೊಂಡು ಸಮಸ್ತ ಭಾರತೀಯರ ಆತ್ಮ ಗೌರವದ ಅಳಿವು-ಉಳಿವುಗಳ ಪ್ರಶ್ನೆಯನ್ನಾಧರಿಸಿದ, ಜನತಾ ಆಂದೋಲನವನ್ನಾಗಿ ಪರಿವರ್ತಿಸಿದರು. ಈ ಪರಿವರ್ತನೆಯ ಪ್ರಯತ್ನದಲ್ಲಿ, ಜಡಗೊಂಡಿದ್ದ ಎಲ್ಲ ಆರ್ಥಿಕ-ಸಾಮಾಜಿಕ-ಧಾರ್ಮಿಕ ನಿಲುವುಗಳನ್ನೂ, ಸಂರಚನೆಗಳನ್ನೂ ಪ್ರಶ್ನಿಸಿದರು ಮತ್ತು ವರ್ತಮಾನದ ಆಗತ್ಯಗಳಿಗೆ ತಕ್ಕಂತೆ ಅವನ್ನು ಪುರ್ನರೂಪಿಸಿದರು. ಹೀಗೆ, ಆಧುನಿಕತೆಯ ಅರ್ಥವನ್ನು, ಅದರ ಭೌತಿಕ ಆವರಣದಾಚೆಗೆ ತಂದು, ವಿಶ್ವದ ನೆಲೆಯಲ್ಲಿ ಒಂದು ಸಮಾನತೆಯ ಮೌಲ್ಯವಾಗಿ ಕಂಡರಿಸಿದರು.

ಪಶ್ಚಿಮದ ಯಂತ್ರ ನಾಗರೀಕತೆಯನ್ನು ಪ್ರತಿನಿಧಿಸುವ ಆಧುನಿಕತೆಯು ಸಾರ್ವತ್ರಿಕವಾಗಿ ಮನುಷ್ಯನ ಅಸ್ತಿತ್ವದ ಘನತೆಯನ್ನೇ, ನಿರ್ದಿಷ್ಟವಾಗಿ ಭಾರತೀಯನ ಅಸ್ಮಿತೆಯನ್ನೇ ಬುಡಮೇಲುಗೊಳಿಸುವಂತಹುದು ಎಂಬುದನ್ನವರು ಅರಿತಿದ್ದರು. ೧೯೦೮ರ ಹೊತ್ತಿಗೇ, ಇಂಗ್ಲೆಡ್‌ನಿಂದ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣಿಸುತ್ತಿದ್ದಾಗ ಬರೆದ ಗಾಂಧೀವಾದದ 'ಬೈಬಲ್' ಎಂದೇ ಪರಿಗಣಿಸಲ್ಪಟ್ಟಿರುವ – 'ಹಿಂದ್ ಸ್ವರಾಜ್' ನಲ್ಲಿಯೇ ಅದನ್ನವರು ವಿವರಿಸಿದ್ದರು. ಆಗ ಅವರಿಗೆ ಭಾರತದ ಸ್ವಾತಂತ್ರ್ಯಾಂದೋಲನದ ಮುಂಚೂಣಿಯಲ್ಲಿ ತಾವು ನಿಲ್ಲಬೇಕಾಗುತ್ತದೆ ಎಂಬುದರ ಕಲ್ಪನೆಯೂ ಇರಲಿಲ್ಲ. ಹಾಗಾಗಿಯೇ ಅವರು ಆ ಕೃತಿಯಲ್ಲಿ ನಾಗರೀಕತೆ ಎಂದರೇ, ಶರೀರ ಸುಖ ವರ್ಧನೆಯಷ್ಟೇ ಅದರ ಗುರಿಯಾಗಿರುವುದರಿಂದ, ಅದೊಂದು ರೋಗವಾಗಿದೆ ಎಂದು ಗುರುತಿಸಿದ್ದರು. ಆದರೆ ಸ್ವಾತಂತ್ರ್ಯಾಂದೋಲನದ ಮಧ್ಯದಲ್ಲಿ, ದೇಶವನ್ನು ಅದರೆಲ್ಲ ನೆಲೆಗಳಲ್ಲಿ ಪುನಾರಚಿಸುವ ಅಗತ್ಯ-ಜವಾಬ್ದಾರಿಗಳು ಮೂಡತೊಡಗಿದಾಗ, ಗಾಂಧೀಜಿ ಅದರಲ್ಲಿ– ಆ ಪುನಾರಚನೆಯ ಅವಕಾಶದಲ್ಲಿ – ಹೊಸ ನಾಗರೀಕತೆಯೊಂದರ ಆಸ್ತಿವಾರದ ಹೊಳಹು ಕಂಡರು. ಅದೇಗ್ರಾಮ ಸ್ವರಾಜ್ಯದ ಮೂಲ ಕಲ್ಪನೆ. ಆ ಕಲ್ಪನೆಯ ವಿಕಾಸದ ಹಿನ್ನಲೆಯಲ್ಲೇ ಅವರು ತಮ್ಮ ಸಾವಿನ ದಿನಗಳ ಹೊತ್ತಿಗೆ, ಯಂತ್ರ ಪರಿಕಲ್ಪನೆ ಕುರಿತಂತೆ 'ಶರೀರವೆಂಬುದೇ ಒಂದು ಯಂತ್ರ, ಹಾಗಾಗಿ ನಾನು ಯಂತ್ರ ವಿರೋಧಿಯಲ್ಲ. ಮನುಷ್ಯ ಆತ್ಮ ಕಳೆದುಹೋಗುವಂತಹ ಯಂತ್ರ ವ್ಯವಸ್ಥೆಯನ್ನು ವಿರೋಧಿಸುತ್ತೇನೆ. ವಾಸ್ತವವಾಗಿ, ನಮ್ಮ ಹಳ್ಳಿಗಳ ಪ್ರತಿ ಮನೆಯಲ್ಲೂ ಹಬೆಯಿಂದಲೋ, ವಿದ್ಯುತ್ತಿನಿಂದಲೋ ಚಲಿಸಬಲ್ಲ ಯಂತ್ರಗಳ ಅನುರಣವನ್ನು ನಾನು ಕೇಳಬಯಸುತ್ತೇನೆ' ಎಂದು ಹೇಳುವಷ್ಟು ವಾಸ್ತವಾದಿಯಾಗಿದ್ದರು.

ಗಾಂಧೀಜಿ ಕಲ್ಪಿಸಿಕೊಂಡಿದ್ದ ಹೊಸ ನಾಗರೀಕತೆಗೆ ಭಾರತೀಯ ಸಂಸ್ಕೃತಿಯೇ ಮೂಲ ದ್ರವ್ಯವಾಗಿತ್ತು. ಅದನ್ನು ಅವರು 'ದೇಶಿ' ಎಂದು ಕರೆದರು. ಪ್ರತಿಯೊಂದು ಸಮುದಾಯವೂ ತಾನು ವಾಸಿಸುವ ಪ್ರದೇಶದ ಧಾರಣ ಶಕ್ತಿ(Carrying power)ಗೆ ತಕ್ಕಂತೆ ಬದುಕುವ ಕ್ರಮವದು. ಭಾರತೀಯರು ಬಹು ಪುರಾತನ ಕಾಲದಿಂದಲೂ, ಸುತ್ತಲಿನ ಜನ ಮತ್ತು ನಿಸರ್ಗದೊಂದಿಗೆ ಸಮರಸದಲ್ಲಿರುವ ಇಂತಹುದೊಂದು ಜೀವನ ಕ್ರಮವನ್ನು ರೂಪಿಸಿಕೊಂಡು, ತಮ್ಮ ನೆಮ್ಮದಿಯಲ್ಲಿ ತಾವಿದ್ದರು. ಅವರು ಪರಾಕ್ರಮಣಕ್ಕೆ ಒಳಗಾಗುತ್ತಾ ಬಂದಿದ್ದೇ ಈ ಜೀವನ ಕ್ರಮವನ್ನು ಉಲ್ಲಂಘಿಸಿ, ಪರಾಕರ್ಷಣೆಗಳಿಗೆ ತಮ್ಮನ್ನು ತಾವು ತೆತ್ತುಕೊಳ್ಳುತ್ತಾ ಹೋದುದರ ದೌರ್ಬಲ್ಯದಿಂದಾಗಿ. ಇದರ ಪರಿಣಾಮ

ವಾಗಿಯೇ ಈ ಜೀವನ ಕ್ರಮದ ಆಧಾರಗಳಾಗಿದ್ದ ಉತ್ಪಾದನಾ ತಂತ್ರಕೌಶಲ್ಯಗಳು, ಸಾಮಾಜಿಕ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಪ್ರತೀಕಗಳು ವಿಕೃತಿಗೊಂಡದ್ದು ಮತ್ತು ಆ ಮೂಲಕ ಎಲ್ಲ ಸಾಂಸ್ಥಿಕ ಸ್ವಾಯತ್ತತೆ ಹಾಗು ವೈಯಕ್ತಿಕ ಸ್ವಾತಂತ್ರ್ಯಗಳನ್ನು ಕಳೆದುಕೊಂಡದ್ದು. ಹಾಗಾಗಿ, ಈಗ ಸ್ವಾತಂತ್ರ್ಯವೆಂದರೆ ನಮ್ಮ ಅಗತ್ಯಗಳಿಗೆ ಒಂದು ಮಿತಿ ಹಾಕಿಕೊಳ್ಳುವುದು ಮತ್ತು ಆ ಮಿತಿಯನ್ನು ತನ್ನ ಸಮುದಾಯದ ಒಟ್ಟಾರೆ ಒಳಿತಿನ ಒರೆಗಲ್ಲಿನಲ್ಲಿ ನಿರ್ಧರಿಸಿಕೊಳ್ಳುವ ನೈತಿಕತೆಗೆ ಬದ್ಧವಾಗುವುದು ಎಂದೇ ಅರ್ಥ. ಮನುಷ್ಯನ ನೈತಿಕತೆ ವಿಕಾಸಗೊಳ್ಳಬೇಕಾದ್ದು ಈ ನೆಲೆಯಿಂದಲೇ ಎಂದು ಗಾಂಧೀಜಿ ನಂಬಿದ್ದರು. ಅವರ ಪ್ರಕಾರ ಇಂತಹ ನೈತಿಕತೆಯಿಂದ ಪುಟಿಯುವ ಸ್ವಾತಂತ್ರ್ಯದ ಲೌಕಿಕ ರೂಪವೇ ಸ್ವರಾಜ್ಯ: "ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯ: ಸ್ವಯಂ ನೀತಿಯನ್ನು ಪಾಲಿಸುವವನು, ಇತರರನ್ನು ವಂಚಿಸದವನು, ತಾಯಿ–ತಂದೆ–ಹೆಂಗಸರು–ಮಕ್ಕಳು–ಆಳುಕಾಳು–ನೆರೆಹೊರೆ ಎಲ್ಲರ ಬಗ್ಗೆಯೂ ತನ್ನ ಕರ್ತವ್ಯವನ್ನು ಪಾಲಿಸುವವನು. ಇಂಥವನಿಗೆ ಮಾತ್ರ ಅದು ಲಭ್ಯ. ಇಂಥವನು ಎಲ್ಲೇ ಇರಲಿ, ಯಾವ ದೇಶದಲ್ಲೇ ಇರಲಿ, ಅವನು ಯಾವಾಗಲೂ ಸ್ವರಾಜ್ಯದ ಪ್ರಜೆಯೇ! ಇಂಥವರು ಎಲ್ಲಿ ಎಷ್ಟು ಜನರಿದ್ದಾರೋ ಅಲ್ಲಿ ಅಷ್ಟು ಸ್ವರಾಜ್ಯ."

ಇಂಥಹ ಸ್ವರಾಜ್ಯದ ಕಲ್ಪನೆಯ ಮೂಸೆಯಲ್ಲಿಯೇ ಅವರ 'ದೇಶೀ' ಆಶಯವು ಸ್ವಾತಂತ್ರ್ಯಾಂದೋಲನವನ್ನು ಕಟ್ಟಿದ ಅಹಿಂಸಾತ್ಮಕ ಸತ್ಯಾಗ್ರಹ, ಹಿಂದೂ ಮುಸ್ಲಿಂ ಏಕತೆ, ಅಸ್ಪೃಶತಾ ನಿವಾರಣೆ ಮುಂತಾದ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಒಂದು ಅತ್ಯಂತಿಕ ಗುರಿಯೆಡೆಗೆ ಸಂಘಟಿಸುವ 'ಸ್ವದೇಶಿ' ಎಂಬ ಒಂದು ಚಳುವಳಿಯಾಗಿ ರೂಪು ತಳೆದದ್ದು. ಅದರ ಪರಿಣಾಮ ಸ್ವರೂಪವಾಗಿಯೇ ಗ್ರಾಮ ಸ್ವರಾಜ್ಯದ ಚಿತ್ರ ಮೂಡಿ ನಿಂತದ್ದು. ಗಾಂಧೀಜಿ ಸ್ವದೇಶಿ ಎಂಬುದನ್ನು. ಬ್ರಿಟಿಷ್ ವಸಾಹತುಶಾಹಿಯ ಚೇತನವನ್ನು – ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಯ ಪ್ರೇರಕ ಶಕ್ತಿಯಾಗಿದ್ದ ಅಲ್ಲಿನ ಆಧುನಿಕ ಕೈಗಾರಿಕೆಗಳ, ವಿಶೇಷವಾಗಿ ಹತ್ತಿ ಗಿರಣಿಗಳ ಗಡಿಯಾಚೆಯ ಮಾರುಕಟ್ಟೆಯನ್ನು – ಅಡಗಿಸುವ ಆರ್ಥಿಕ ಅಸ್ತ್ರವನ್ನಾಗಿ ರೂಪಿಸಿದ್ದರು. ಇನ್ನು ಗ್ರಾಮ ಸ್ವರಾಜ್ಯವನ್ನು ವಸಾಹತುಶಾಹಿಯ ಮುಂದಿನ ಎಲ್ಲ ಅವತಾರಗಳ ಆಕರ್ಷಣೆಗಳಿಂದ ಸ್ವತಂತ್ರ ಭಾರತವನ್ನು ರಕ್ಷಿಸುವ, ಸ್ವಸಂಪೂರ್ಣ ರಾಜಕೀಯ ಅಸ್ತ್ರವನ್ನಾಗಿ ರೂಪಿಸಿದ್ದರು. ತನ್ನ ಅಗತ್ಯಗಳನ್ನು ಸಮುದಾಯದ ವ್ಯವಸ್ಥಿತ ಬದುಕಿಗೆ ಪೂರಕವಾಗಿರುವ ಮಟ್ಟಿಗೆ ಮಾತ್ರ ನಿರೂಪಿಸಿಕೊಂಡು, ಅವನ್ನು ಅದಷ್ಟೂ ಮಟ್ಟಿಗೆ ನೆರೆಹೊರೆಯ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡೇ ಪೂರೈಸಿಕೊಳ್ಳುವ ಮತ್ತು ಅತ್ಯಗತ್ಯವಾದಾಗ ಮಾತ್ರ ಸಮುದಾಯದ ಹೊರ ಘಟಕಗಳೊಂದಿಗೆ – ಹತ್ತಿರದ ಹಳ್ಳಿಯೋ ಪಟ್ಟಣವೋ – ಸರಕು ಅಥವಾ ಸೇವೆಯನ್ನು ವ್ಯಾಪಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಬದ್ಧವಾದ ವ್ಯವಸ್ಥೆಯದು.

ಹಳ್ಳಿಯನ್ನು ಮೂಲ ಘಟಕವನ್ನಾಗಿ ಹೊಂದಿರುವ ಈ ವ್ಯವಸ್ಥೆ, ನಿಸರ್ಗವನ್ನು ಕೊಳ್ಳೆಹೊಡೆದು ಹೆಚ್ಚುವರಿ ಸರಕು ಉತ್ಪಾದನೆ ಮಾಡಿ, ಜನರ ಬಯಕೆಗಳನ್ನು ಕೆರಳಿಸುವ ಮೂಲಕ ಅನಗತ್ಯ ಮಾರುಕಟ್ಟೆ ಸೃಷ್ಟಿಸುವ; ಹಾಗೂ ಆ ಮೂಲಕ ಮನುಷ್ಯನ ಬದುಕನ್ನು ಅನಗತ್ಯವಾಗಿ ಜಟಿಲಗೊಳಿಸಿ ಅವನನ್ನು ಅಶಾಂತನನ್ನಾಗಿ ಮಾಡುವಂತಹ ಸರಕು

ಆರ್ಥಿಕತೆಗೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಗಾಂಧೀಜಿ ನಂಬಿದ್ದರು. ಈ ಹಿನ್ನಲೆಯಲ್ಲಿ ಅವರು ಒಂದು ಸಮಾಜದ ಭೌತಿಕ ಅಗತ್ಯಗಳು ಹಾಗೂ ಅವುಗಳ ಉತ್ಪಾದನೆ ನಡುವಣ ತಾರ್ಕಿಕ ಸಂಬಂಧವನ್ನು ಕಡಿದು ಹಾಕಿ, ಹೆಚ್ಚುವರಿ ಉತ್ಪಾದನೆಗೆ ಅವಕಾಶ ಮಾಡಿಕೊಡುವ ಯಂತ್ರಗಳನ್ನು, ಸಾಮಾಜಿಕ ಅಗತ್ಯಗಳಗನುಸಾರ ಪುರ್ನವಿನ್ಯಾಸಗೊಳಿಸುವ ಅನಿವಾರ್ಯತೆಯನ್ನು ಮನಗಂಡರು. ಆಗ ಕಣ್ಮುಂದೆ ಬಂದದ್ದೇ ಚರಕಾ– ಸಾಂಪ್ರದಾಯಿಕ ರಾಟೆಯ ಪರಿಷ್ಕೃತ ರೂಪ. ಸಮೂಹ ಉತ್ಪಾದನೆಯನ್ನಾಧರಿಸಿದ ಪಶ್ಚಿಮದ ಸರಕು ಅರ್ಥಶಾಸ್ತ್ರಕ್ಕೆ ಪ್ರತಿಯಾಗಿ, ಸಮೂಹದಿಂದ ಉತ್ಪಾದನೆಯನ್ನು ಆಧರಿಸಿ ಜನತಾ ಅರ್ಥಶಾಸ್ತ್ರವನ್ನು ರೂಪಿಸಲು ಆಧಾರವಾದ ಈ ಚರಕಾ, ಗಾಂಧೀಜಿ ಮಾತುಗಳಲ್ಲೇ ಹೇಳುವುದಾದರೆ, ಗ್ರಾಮ ಸ್ವರಾಜ್ಯದ ಕಾರ್ಯಶೀಲತೆಗೆ ಒಂದು ಸಂಕೇತವಾಗುಳಿದಿದೆ. “ಚರಕದ ಮೂಲಕ ಭಾರತ ತನ್ನ ಸಂಕೋಲೆಗಳನ್ನು ಕಿತ್ತೊಗೆಯಲು ಪ್ರಯತ್ನಶೀಲವಾಗಿದೆ. ಈ ಪ್ರಯತ್ನದಲ್ಲಿ ಮಾನವ ಕೋಟಿಯ ವಿಮೋಚನೆಯ ತಿಳುವಳಿಕೆಯೂ ಇದೆ. ಭಾರತದ ಆತ್ಮ ವಿಕಾಸವೂ ಆಗುತ್ತದೆ. ಚರಕದ ದಿವ್ಯ ಸಂಗೀತ, ಆತ್ಮಕ್ಕೆ ಸಾಂತ್ವನ ಅಮೃತ. ನೂಲಲು ಪ್ರಾರಂಭಿಸಿ ನೋಡಿ – ಮನಃಶಾಂತಿಗೆ ಅದೆಷ್ಟು ಸಹಾಯಕ ಎಂದು ತಿಳಿದೀತು. ನಮ್ಮ ಜೀವನದದ ಅಸ್ತವ್ಯಸ್ತತೆಗಳೆನ್ನೆಲ್ಲ ಹಾಸುಹೊಕ್ಕು ತಿಳಿಯಾಗಿಸುವ ಶಕ್ತಿ ಆ ನೂಲು ಮತ್ತು ಆ ನೂಲುವ ಕ್ರಿಯೆಯಲ್ಲಡಗಿದೆ. ಸಮಸ್ತ ಜೀವರಾಶಿಯೂ ಅಹಿಂಸೆಯ ಆಧಾರದ ಮೇಲೆಯೇ ನಿಂತಿದೆ. ಚರಕ ಆ ಬೃಹತ್ ಜೀವನ ಚಕ್ರದ ಸಂಕೇತ”

ಮನುಷ್ಯ ತನ್ನ ದೈವತ್ವವನ್ನು ಕಂಡುಕೊಳ್ಳುವುದೇ ಜೀವನದ ಪರಮೋದ್ದೇಶವೆಂದು ನಂಬಿದ್ದ ಗಾಂಧೀಜಿ, ಅವನು ಈ ದೈವತ್ವದ ಅರಿವಿನಲ್ಲೇ ಸೃಷ್ಟಿಯ ಏಕತೆ ಕಾಣಬಲ್ಲ ಹಾಗೂ ಸರ್ವಸಮತೆಯಲ್ಲಿರಬಲ್ಲನಾದ್ದರಿಂದ, ಅದಕ್ಕೆ ಪೂರಕವಾದ ದುಡಿಮೆಯ ಪದ್ಧತಿಯನ್ನು ಅಳವಡಿಸಿಕೊಳ್ಳುವುದೇ ಮನುಷ್ಯ ಧರ್ಮವಾಗಿದೆ ಎಂದು ಪ್ರತಿಪಾದಿಸಿದರು. ಈ ಹಿನ್ನಲೆಯಲ್ಲಿಯೇ ಅವರು ನಿಜವಾದ ಅರ್ಥಪೂರ್ಣ ಜೀವನಕ್ಕೆ – ವಿಶೇಷವಾಗಿ ಜನಬಲವೇ ಬಂಡವಾಳವಾಗಿರುವ ಭಾರತದ ಸಂದರ್ಭದಲ್ಲಿ – ಯಾವ ಪ್ರಮಾಣದ ಕೈಗಾರಿಕೆ ಸೂಕ್ತ ಎಂಬ ಚರ್ಚೆಗೆ ಉತ್ತರ ನೀಡಿದ್ದು, ‘ಮನುಷ್ಯ ಪ್ರಮಾಣ’ದ ಕೈಗಾರಿಕೆಯ ಪ್ರತಿಪಾದನೆಯ ಮೂಲಕ ಮನುಷ್ಯನ ದೇಹ ಮತ್ತು ಅತ್ಮಗಳೆರಡರೊಂದಿಗೆ ಸಮರಸದಲ್ಲಿರಬಹುದಾದ ಇಂತಹ ಯಂತ್ರಗಳಿಂದ ಸಾಮಾಜಿಕವಾಗಿ ಸಜ್ಜಾದ ಗ್ರಾಮಗಳು, ಭಾರತವನ್ನು ಒಂದು ಗ್ರಾಮ ಗಣರಾಜ್ಯವನ್ನಾಗಿ ರೂಪಿಸಿ, ಹೊರಗಿನ ಯಾವುದೇ ತೆರನ ದಾಳಿಯ–ಮಿಲಿಟರಿ ದಾಳಿಯೂ ಸೇರಿದಂತೆ–ವಿರುದ್ಧ ಸ್ವಯಂ ರಕ್ಷಣೆ ಒದಗಿಸಬಲ್ಲುದು ಎಂದು ಅವರು ನಂಬಿದ್ದರು: ಆರ್ಥಿಕ ಶಕ್ತಿ ಕೇಂದ್ರಗಳು ಭೌಗೋಳಿಕವಾಗಿ ಹರಡಿ ಹೋಗಿರುವುದರಿಂದ ಯಾವುದೇ ತೆರನ ಅಥವಾ ಪ್ರಮಾಣದ ಶಸ್ತ್ರಾಸ್ತ್ರ ದಾಳಿ ರಾಷ್ಟ್ರವನ್ನು ನಿಶ್ಶೇಷಿತಗೊಳಿಸಲಾಗುವುದಿಲ್ಲ. ಅಲ್ಲದೆ ಬಡತನವೆಂಬುದು ಸರಕು ಆಧಾರಿತ ಪಶ್ಚಿಮದ ಅರ್ಥಶಾಸ್ತ್ರದ ಅವಿಷ್ಕಾರವಾಗಿದ್ದು, ಜನತಾ ಅರ್ಥಶಾಸ್ತ್ರ ಅದನ್ನು ಕೆಲಸದಿಲ್ಲದಿರುವಿಕೆ ಎಂದು ನಿರೂಪಿಸಿಕೊಂಡು, ಅದರ ಪರಿಹಾರವನ್ನಷ್ಟೇ ತನ್ನ ಗುರಿಯನ್ನಾಗಿಸಿಕೊಳ್ಳಬೇಕು; ಇಲ್ಲದೇ ಹೋದರೆ ದೇಶ, ಪರಿಹಾರವಾದಷ್ಟೂ, ಹೆಚ್ಚುತ್ತಾ ಹೋಗುವ – ಸರಕು ಅರ್ಥಶಾಸ್ತ್ರದ ರಾಜಕಾರಣ ಸೃಷ್ಟಿಸುವ – ನಿರಂತರ ಬಡತನದ ಚಕ್ರಕ್ಕೆ ಸಿಲುಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ವೈವಿಧ್ಯಮಯ ಆಕರ್ಷಣೆಗಳೊಂದಿಗೆ ಮುನ್ನುಗ್ಗುತ್ತಿದ್ದ ಪಶ್ಚಿಮದ ಯಂತ್ರ ನಾಗರೀಕತೆಯ ಎದುರು– ಅದೂ ಶತಮಾನಗಳ ದಾರಿದ್ರ್ಯದಿಂದ ತಪ್ತವಾಗಿದ್ದ ಭಾರತೀಯ ಸಮಾಜದ ಮಧ್ಯೆ – ಇಂತಹ ಅಭಿವೃದ್ಧಿ ಮಾದರಿಯನ್ನಿಡಲು ಯಾರಿಗಾದರೂ ಎಂಟೆದೆಯೇ ಬೇಕು. ಆದರೆ ಗಾಂಧೀಜಿಗೆ ಆಳದ ಸತ್ಯದ ಅರಿವಿತ್ತು; ಅದರ ಕೇಂದ್ರದಿಂದಲೇ ಹೊರಹೊಮ್ಮಿದ ನೈತಿಕ ಸ್ಥೈರ್ಯವೂ ಅವರ ಬೆಂಬಲಕ್ಕಿತ್ತು. ಹಾಗಾಗಿಯೇ ಅವರು ಪಶ್ಚಿಮದ ನಾಗರೀಕತೆ ಬಗ್ಗೆ ಖಚಿತ ಶಬ್ದಗಳಲ್ಲಿ ಹೀಗೆ ಹೇಳಲು ಸಾಧ್ಯವಾಯಿತು: “ಮನುಷ್ಯನಿಗೆ ಒಂದು ಮಟ್ಟದ ಸುಖ–ಸೌಲಭ್ಯಗಳು ಅಗತ್ಯವೇ ನಿಜ. ಆದರೆ ಒಂದು ನಿರ್ದಿಷ್ಟ ಮಟ್ಟದಾಚೆಗೆ ಅವು ಸೌಲಭ್ಯವಾಗುಳಿಯದೇ ಬಂಧನಗಳೇ ಆಗುತ್ತವೆ. ಹಾಗಾಗಿ ಮಿತಿಯಿಲ್ಲದ ಅಗತ್ಯಗಳನ್ನು ಸೃಷ್ಟಿಸಿಕೊಳ್ಳುತ್ತಾ ಮತ್ತು ಅವುಗಳನ್ನು ಪೂರೈಸಿಕೊಳ್ಳುತ್ತಾ ಹೋಗುವ ಆರ್ಥಿಕತೆಯ ಆದರ್ಶವು ಒಂದು ಭ್ರಮೆ ಹಾಗೂ ವ್ಯೂಹದಂತಷ್ಟೇ ನನಗೆ ತೋರುತ್ತದೆ. ಮನುಷ್ಯನ ಭೌತಿಕ ಆಗತ್ಯಗಳ ಪೂರೈಕೆ ವ್ಯವಸ್ಥೆಯ ಭೌತಿಕ ಆಶ್ಲೀಲತೆಯಾಗಿ ಅವನತಿಗೊಳ್ಳುವ ಮುನ್ನ, ಒಂದಲ್ಲ ಒಂದು ಹಂತದಲ್ಲಿ ಪೂರ್ಣಾಂತ್ಯಕ್ಕೆ ಬರಬೇಕು. ಯೂರೋಪಿಯನ್ನರು ತಾವು ಗುಲಾಮರಾಗುತ್ತಿರುವ ಐಷಾರಾಮಗಳ ಭಾರದಡಿಯಲ್ಲಿ ಕುಸಿದು ಹೋಗಬಾರದೆಂದಿದ್ದರೆ ಅವರು ತಮ್ಮ ಜೀವನ ದೃಷ್ಟಿಯನ್ನು ಪುನರ್ರೂಪಿಸಿ ಕೊಳ್ಳಬೇಕು.”

ಈ ಮಾತುಗಳನ್ನು ಯೂರೋಪಿಯನ್ನರಾದರೂ, ತಮ್ಮ ಧ್ಯಾನಸ್ಥ ಸ್ಥಿತಿಯಲ್ಲಿ ಸಸಹಾನುಭೂತಿಯಿಂದ ಕೇಳಿರಬಹುದು. ಆದರೆ ಗಾಂಧೀಜಿಯ ಆಪ್ತ ಶಿಷ್ಯರಲ್ಲೊಬ್ಬರಾದ ರಾಷ್ಟ್ರದ ಪ್ರಥಮ ಪ್ರಧಾನ ಮಂತ್ರಿಯಾದ ಜವಹರಲಾಲ್ ನೆಹ್ರೂ ಅವರಿಗೆ, ಇದೆಲ್ಲ ಅಂದಿನ ಜಾಗತಿಕ ಸಂದರ್ಭದಲ್ಲಿ ಅಸಂಗತವೂ ಅಪ್ರಸ್ತುತವೂ ಆಗಿ ಕಂಡಿತು. ಅರ್ಥಶಾಸ್ತ್ರ ಹಾಗೂ ರಾಜಕಾರಣಗಳ ಗುರಿಗಳೆಂದರೆ, ಮನುಷ್ಯನ ಭೌತಿಕ ಅಗತ್ಯಗಳನ್ನು ಪೂರೈಸುತ್ತಾ ಜೀವನ ಮಟ್ಟವನ್ನು ಸುದಾರಿಸುವುದೇ ಆಗಿದೆ ಎಂಬ ‘ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್’ನ ಐರೋಪ್ಯ ಅರ್ಥಶಾಸ್ತ್ರೀಯ ನಂಬಿಕೆಗಳಿಗೆ ಮಾರು ಹೋಗಿದ್ದ ಅವರು, ಆಧುನಿಕ ತಂತ್ರಜ್ಞಾನದ ದಕ್ಷತೆ ಮಾತ್ರ ಭಾರತದ ‘ಹಿಂದುಳಿದಿರುವಿಕೆ’ಯ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲುದೆಂದು ದೃಡವಾಗಿ ನಂಬಿದ್ದರು. ಹಾಗಾಗಿಯೇ ಅವರು ೧೯೪೫ರಲ್ಲಿ ಗಾಂಧೀಜಿ, ತಮ್ಮಿಬ್ಬರಲ್ಲಿ ದೇಶ ಕಟ್ಟುವ ವಿಷಯದಲ್ಲಿ ಭಿನ್ನಮತ ಹೆಚ್ಚುತ್ತಿದೆಯೆಂಬ ಆತಂಕದಿಂದ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಕಡೆ ಗಮನ ಸೆಳೆದು ತಮಗೆ ಬರೆದ ಪತ್ರಕ್ಕೆ ಉತ್ತರವಾಗಿ, ಸದಾ ಹಿಂದಕ್ಕೆ ನೋಡುವ ಮನೋಧರ್ಮದ ಗ್ರಾಮ ಸಂಸ್ಕೃತಿಯ ಆಧಾರದ ಮೇಲೆ ಆಧುನಿಕ ರಾಷ್ಟ್ರವನ್ನು ಕಟ್ಟಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದರು.

ಆದರೆ ಐರೋಪ್ಯ ಮಾದರಿಯ ಆಧುನೀಕರಣದ ಅವರಸರದಲ್ಲಿದ್ದ ನೆಹ್ರೂಗೆ ತಮ್ಮ ಗುರು ಬಹು ಹಿಂದೆಯೇ, “ನನ್ನ ಆದರ್ಶ ಗ್ರಾಮದಲ್ಲಿ ಅತ್ಯಂತ ಬುದ್ಧಿವಂಥ ಮಾವನಜೀವಿಗಳಿರುತ್ತಾರೆ. ಸ್ವತಂತ್ರ ಸ್ತ್ರೀ ಪುರುಷರಾಗಿ ಜಗತ್ತಿನ ಮಾನವರೆಲ್ಲರ ಸರಿಸಮಾನರಾಗಿ ಬಾಳುತ್ತಾರೆ. ಅಲ್ಲಿ ಆಧುನಿಕ ಸೌಕರ್ಯಗಳಾದ ಅಂಚೆ–ತಂತಿ–ಸಾರಿಗೆ ಮುಂತಾದವು ಇರುವ ಸಾಧ್ಯತೆಯನ್ನೂ ನಾನು ಊಹಿಸಿಕೊಳ್ಳಬಲ್ಲೆ. ನನ್ನ ಆದರ್ಶ ಗ್ರಾಮ ಅತ್ಯುತ್ತಮ ಸ್ವಚ್ಚತಾ ವ್ಯವಸ್ಥೆ ಹೊಂದಿರುತ್ತದೆ. ಗಾಳಿ ಬೆಳಕು ಧಾರಾಳವಾಗಿರುವಂತೆ

ಸ್ಥಳೀಯ ಸಾಮಗ್ರಿಗಳಿಂದ ಕಟ್ಟಲ್ಪಟ್ಟ ಪ್ರತಿ ಕುಟೀರವೂ ಹಿತ್ತಲು, ಕೊಟ್ಟಿಗೆ, ತರಕಾರಿ ಬೆಳೆಯಲು ಜಾಗ ಹೊಂದಿರುತ್ತದೆ. ನಿರ್ಮಲವಾದ ಅಗಲ ರಸ್ತೆಗಳು, ಸರ್ವರಿಗೂ ತೆರದಿರುವ ಬಾವಿಗಳು, ಸರ್ವಧರ್ಮ, ಪ್ರಾರ್ಥನಾ ಮಂದಿರ, ಸಾರ್ವಜನಿಕ ಸಭಾಂಗಣ, ಗೋಮಾಳ, ಸಹಕಾರಿ ಗೋಶಾಲೆ, ಔದ್ಯೋಗಿಕ ಶಿಕ್ಷಣ ನೀಡುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮತ್ತು ಸ್ಥಳೀಯ ನ್ಯಾಯ ಪಂಚಾಯ್ತಿ ಇರುತ್ತದೆ..." ಎಂದು ತಮ್ಮ ಗ್ರಾಮ ಸ್ವರಾಜ್ಯದ ಕಲ್ಪನೆ ನಿಜವಾದ ಭಾರತದ ಅವಶೇಷ ಮಾತ್ರಗಳಂತಿರುವ ಸದ್ಯದ ಹಳ್ಳಿಗಳನ್ನು ಆಧರಿಸಿದ್ದಲ್ಲ; ಬದಲಿಗೆ ಈ ಹಳ್ಳಿಗಳು ಹೀಗೇಕಾದವು ಎಂಬ ಧ್ಯಾನದಲ್ಲಿ ಹುಟ್ಟಿದುದು ಎಂದು ಸ್ಪಷ್ಟಪಡಿಸಿದ್ದರ ಕಡೆ ಗಮನವೇ ಇದ್ದಂತಿರಲಿಲ್ಲ.

ಇದೆಲ್ಲದರ ಪರಿಣಾಮ, ಇಂದು ಹಲವು ಹಿಂಸಾತ್ಮಕ ರೂಪಗಳಲ್ಲಿ ನಮ್ಮ ಕಣ್ಮುಂದೆಯೇ ಇದೆ: ಭವಿಷ್ಯ ಭಾರತದ ಭವ್ಯ ದೇಗುಲಗಳೆಂದು ನೆಹ್ರೂ ವರ್ಣಿಸಿ, ನಿರ್ಮಿಸಿದ ಭಾಕ್ರಾ–ನಂಗಲ್ ಬೃಹತ್ ಅಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶಗಳು, ಅವು ಒತ್ತಾಯಿಸಿದ ಕೃಷಿ ಪದ್ಧತಿಗಳು ಸೃಷ್ಟಿಸಿದ ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ವಿರೋಧಾಭಾಸ ಗಳಿಂದಾಗಿ ಇಂದು ರೈತ ಸಮುದಾಯದ ಪಾಲಿಗೆ ಅಕ್ಷರಶಃ ರುದ್ರಭೂಮಿಗಳಾಗಿ ಪರಿವರ್ತಿತವಾಗುತ್ತಿವೆ. ಆಧುನೀಕರಣದ ಚಕ್ರ ಒಂದು ಸುತ್ತನ್ನು ಪೂರ್ಣಗೊಳಿಸುತ್ತಿರು ವಂತಿದೆ: ಮತ್ತೆ ಗಾಂಧೀಜಿ ನೆನಪಾಗುತ್ತಿದ್ದಾರೆ. ನೆನಪಾಗುವುದೇನು, ರಾಷ್ಟ್ರ ಜೀವನದ ಸುಪ್ತ ಮನಸ್ಸಿನಲ್ಲಿ ಒಂದು ಕೈಗೂಡದ ಆಶಯದ ಪ್ರತೀಕವಾಗಿ ಎಂದೆಂದೂ ನೆಲೆಸಿಯೇ ಇದ್ದಾರೆಂದು ತೋರುತ್ತದೆ. ಹಾಗಾಗಿಯೇ ಈ ಆಧುನೀಕರಣದ ಗೌಜು ಗದ್ದಲಗಳ ನಡುವೆಯೂ ಮೌನದ ಮಣಿಗಳಂತೆ ಅಲ್ಲಲ್ಲಿ ಹಲವರು ತಮ್ಮದೇ ರೀತಿ ಹಾಗೂ ಮಿತಿಗಳಲ್ಲಿ ಗಾಂಧೀಜಿಯ ಪುನರನ್ವೇಷಣೆಯಲ್ಲಿ ತೊಡಗಿದ್ದಾರೆ. ಈಗ ತನ್ನ ಸ್ವಯಂ ವಿರೋಧಗಳನ್ನು ಮೀರಿ ಬೆಳೆಯಲಾಗದೆ, ಗಂಭೀರ ಬಿಕ್ಕಟ್ಟಿನಲ್ಲಿರುವಂತೆ ತೋರುತ್ತಿರುವ ಆಧುನಿಕ ನಾಗರೀಕತೆಯನ್ನು ಪ್ರತಿನಿಧಿಸುವ ನಗರೀಕರಣಕ್ಕೆ ಪರ್ಯಾಯವಾದ ರಾಷ್ಟ್ರ ನಿರ್ಮಾಣದ ಮಾದರಿಗಳ ಪ್ರಾಯೋಗಿಕತೆ, ಹಲವು ರೂಪಗಳಲ್ಲಿ – ಸಂಶೋಧನೆ, ಸಂಘಟನೆ, ಪ್ರತಿಭಟನೆ–ಇವರಿಂದ ನಡೆದಿವೆ. ಅವುಗಳಲ್ಲಿ ನಮ್ಮ ಹತ್ತಿರದ ಮತ್ತು ಕುತೂಹಲಕಾರಿ ಪ್ರಯೋಗವೆಂದರೆ ಭೀಮನಕೋಣೆಯ ಚರಕ.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಹೆಗ್ಗೋಡಿನ ಬಳಿಯ ಭೀಮನಕೋಣೆ ಯಲ್ಲಿರುವ ಚರಕ ಮೂಲತಃ ಒಂದು ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ. ಇದನ್ನು ೧೯೯೬ರಲ್ಲಿ ಸ್ಥಾಪಿಸಿದವರು ಈಗ ಗಾಂಧಿವಾದದೆಡೆಗೆ ತಿರುಗಿರುವ ಹಿರಿಯ ರಂಗಕರ್ಮಿ ಪ್ರಸನ್ನ ಅವರು. ಹೆಗ್ಗೋಡಿನ ಸುತ್ತಮುತ್ತಲ ಗ್ರಾಮಗಳ ಸುಮಾರು ೧೫೦ಕ್ಕೂ ಮಹಿಳೆಯರನ್ನು ನೇಯ್ಗೆ, ಬಣ್ಣಗಾರಿಕೆ, ಹೊಲಿಗೆ ಮತ್ತು ಮಾರಾಟದಲ್ಲಿ ತೊಡಗಿಸಿಕೊಂಡಿರುವ ಈ ಸಂಸ್ಥೆ ಈ ಭಾಗದ ಮಹಿಳೆಯರು ಕೆಲಸ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುವುದನ್ನು ಮತ್ತು ಕೃಷಿ ವಿಸ್ತರಣೆ ಮತ್ತು ಒತ್ತುವರಿಗಳಿಂದಾಗಿ ಕಾಡು ನಾಶವಾಗುತ್ತಿದ್ದುದನ್ನು ಹೊಸ ಉದ್ಯೋಗದ ಸಾಧ್ಯತೆಗಳನ್ನು ತೆರೆಯುವ ಮೂಲಕ ತನ್ನ ಮಿತಿಗಳಲ್ಲೇ ತಡೆದಿದೆ ಎಂದು ಹೇಳಬಹುದು. 'ದೇಸಿ' ಟ್ರಸ್ಟ್‌ನ ಮುದ್ರೆಯೊಂದಿಗೆ ಮಾರಾಟವಾಗುವ ಇದರ ಜುಬ್ಬಾ, ಪೈಜಾಮಾ, ಅಂಗಿ, ಚೂಡಿದಾರ, ಕೌದಿ, ಚೀಲ

ಮುಂತಾದ ವೈವಿಧ್ಯಮಯ ಕೈಮಗ್ಗದ ಉತ್ಪನ್ನಗಳು ತನ್ನ ಅನನ್ಯ ವಿನ್ಯಾಸ, ಬಣ್ಣಗಾರಿಕೆ ಹಾಗೂ ಕಟ್ಟುನಿಟ್ಟಾದ ಗುಣಮಟ್ಟ ನಿಯಂತ್ರಣದಿಂದಾಗಿ ರಾಜ್ಯ ಮತ್ತು ರಾಜ್ಯದ ಹೊರಗೂ ಪ್ರಸಿದ್ಧವಾಗಿದ್ದು, ಚರಕ ತನಗಿರುವ ಬೇಡಿಕೆಯನ್ನು ಪೂರೈಸಲಾದ ಸ್ಥಿತಿಯಲ್ಲಿದೆ! ಈ ಉತ್ಪಾದನಾ ಚಟುವಟಿಕೆಗಳ ಜೊತೆಗೇ ಇದು ತನ್ನ ಸದಸ್ಯರಲ್ಲಿ ಹಸೆ ಕಲೆ, ಜಾನಪದ ಹಾಡುಗಾರಿಕೆ, ಯಕ್ಷಗಾನ, ನಾಟಕ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ತೊಡಗಿಸಿ ತನ್ನದೇ ರೀತಿಯಲ್ಲಿ ಮಹಿಳಾ ಸಬಲೀಕರಣದ ಕಾರ್ಯಕ್ರಮವನ್ನೂ ಕೈಗೊಂಡಿದೆ. ಈ ಚರಕ ಸಂಸ್ಥೆ ಗಾಂಧಿ ವಿಚಾರಧಾರೆ ಈಗಲೂ ಸೃಜನಶೀಲವಾಗಿ ಸಕ್ರಿಯವಾಗಬಲ್ಲುದರ ಮಾದರಿಯಾಗಿ ನಮ್ಮ ಕಣ್ಮುಂದೆ ಇದೆ.

ಗಾಂಧಿ ನಮ್ಮಿಂದ ಕಣ್ಮರೆಯಾದ ಈ ಅರವತ್ತು ವರ್ಷಗಳಲ್ಲಿ ಆಧುನಿಕ ನಾಗರೀಕತೆಯ ಪ್ರತೀಕತೆ ಯೂರೋಪ್‌ನಿಂದ ಅಮೆರಿಕಾಕ್ಕೆ ಸ್ಥಾನಾಂತರಗೊಂಡಿದೆ. ಯೂರೋಪಿಗೆ ಒಂದು ದೀರ್ಘ ಪರಂಪರೆಯೊಂಬುದೊಂದಿದ್ದು, ಅದರಲ್ಲಿ ಅನೇಕ ವಿಶಿಷ್ಟ ಸಂಸ್ಕೃತಿಗಳು ಅಂತರ್ಗತವಾಗಿದ್ದುದರಿಂದ ಅಲ್ಲಿ ಆಧುನಿಕ ನಾಗರೀಕತೆಯು ವಿಪರೀತಗಳಿಗೆ ಹೋಗದೆ ತನ್ನ ಸಾಂಸ್ಕೃತಿಕ ವಿವೇಕದಲ್ಲಿ ಒಂದು ಸಂಯಮದಲ್ಲಿರಲು ಸಾಧ್ಯವಾಗಿದೆ. ಆದರೆ ಇಂಥ ದೀರ್ಘ ಪರಂಪರೆಯಾಗಲೀ, ಆಳವಾದ ಸಂಸ್ಕೃತಿಯಾಗಲೀ ಇಲ್ಲದ– ಇದ್ದ ಮೂಲ ನಿವಾಸಿ ಸಂಸ್ಕೃತಿಯನ್ನು ನಾಶ ಮಾಡಿ ಕೂತಿರುವ–ಅಮೆರಿಕಾ, ಆಧುನಿಕ ನಾರೀಕತೆಯ ಆಕ್ರಮಣಕಾರಿ ಪ್ರವೃತ್ತಿಯನ್ನು ಸಹಜವೆಂಬಂತೆ ಅಳವಡಿಸಿಕೊಂಡು, ತನ್ನೆಲ್ಲಾ ಸೃಜನಶೀಲತೆಯನ್ನು ಅಸಭ್ಯ ಸೀಮೋಲ್ಲಂಘನೆಗಳಲ್ಲೇ ವ್ಯಯಿಸುತ್ತಿದೆ. ಈ ಸೀಮೋಲ್ಲಂಘನೆ ಗಳು ಮೇಲ್ನೋಟಕ್ಕೆ ಕಾಣುವಂತೆ ಉದ್ಯಮಶೀಲತೆಯ ಸಾಹಸಗಳಾಗಿರದೆ, ಜಗತ್ತಿನ ಒಟ್ಟು ಜನಸಂಖ್ಯೆಯ ಶೇ. ೫.೬ರಷ್ಟಿರುವ ಈ ದೇಶದ ಜನ ಸಮುದಾಯವು ಜಗತ್ತಿನ ಶೇ. ೪೦ರಷ್ಟು ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವ ಜೀವನ ಶೈಲಿಯನ್ನು ಉಳಿಸಿಕೊಂಡು ಹೋಗಲು ನಡೆಸುತ್ತಿರುವ ಹಿಂಸಾಚಾರವೇ ಆಗಿದೆ. ಇದು ಗಾಂಧೀಜಿ ಮುನ್ನೋಡಿದ್ದ ಆಧುನಿಕ ನಾಗರೀಕತೆ ತಲುಪಬಹುದಾದ ವಿಕ್ಷಿಪ್ತತೆ. ಹಾಗಾಗಿಯೇ ಅವರು ಈ ಆಧುನಿಕತೆಯನ್ನು ವಸಾಹತುಶಾಹಿಯ ಉಪಕರಣ ಎಂದು ಕರೆದಿದ್ದರು. ಇಂದು ಬಹುವಾಗಿ ಚರ್ಚಿತವಾಗುತ್ತಿರುವ ಜಾಗತೀಕರಣವು ಜಗತ್ತಿನ ಅಮೆರಿಕನ್ನೀಕರಣದ ಈ ಪ್ರಯತ್ನವೇ ಆಗಿರುವುದರಿಂದ, ಜಗತ್ತಿನಾದ್ಯಂತ ಈ ಜೀವನ ಶೈಲಿಯ ಅಳವಡಿಕೆಯ ಸದ್ಯದ ರಾಜಕೀಯ ಪ್ರಯತ್ನ ಹಾಗೂ ಅದಕ್ಕೆ ಸಿಗುತ್ತಿರುವ ಸಾರ್ವತ್ರಿಕ ಮಾನ್ಯತೆಯು; ಇನ್ನೆಂತಹ ಭಯಂಕರ ಜಾಗತಿಕ ರಾಜಕಾರಣವನ್ನು ಹುಟ್ಟು ಹಾಕಬಹುದು ಮತ್ತು ಅದರ ಪರಿಣಾಮಗಳು ಯಾವ ಪ್ರಮಾಣದ ಮತ್ತು ಯಾವರೀತಿಯ ಹಿಂಸಾಚಾರಕ್ಕೆ ಕಾರಣವಾಗಬಹುದು ಎಂಬುದನ್ನು ಊಹಿಸಲೂ ಅಸಾಧ್ಯವಾಗಿದೆ.

ಈಗಲಾದರೂ ಮಾನವತೆ, ಗಾಂಧೀಜಿ ಕಂಡ ಹೊಸ ಜಗತ್ತಿನ ಕಾಣ್ಕೆಯನ್ನು ಸಾವಧಾನದಿಂದ ಪರಿಶೀಲಿಸಬೇಕಿದೆ. ಈ ದೃಷ್ಟಿಯಿಂದ, ಇಷ್ಟು ವರ್ಷಗಳ ಕಾಲ ಅಲ್ಲಲ್ಲಿ ಹರಡಿಕೊಂಡಿದ್ದ ಗಾಂಧಿ ಚಿಂತನೆ ಕುರಿತ ಕುತೂಹಲ, ಈಗ ಜಾಗತಿಕ ಮಟ್ಟದಲ್ಲಿ ಒಂದು ಕೇಂದ್ರ ಬಿಂದುವಿಗೆ ಬರುತ್ತಿರುವಂತೆ ಕಾಣುತ್ತಿದೆ. 'ವಿಶ್ವ ಸಾಮಾಜಿಕ ವೇದಿಕೆ(World Social Form) ಯೆಂಬ ಹೊಸ ಸಮಾಜವಾದಿ ಆಂದೋಲನದ ಪ್ರಭಾವ ವಲಯದಲ್ಲೇ,

'ಇನ್ನೊಂದು ಜಗತ್ತು ಸಾಧ್ಯ' (Another World is Possible) ಎಂಬ ಚಳುವಳಿಯೊಂದು ಲ್ಯಾಟಿನ್ ಅಮೆರಿಕಾದಲ್ಲಿ ಆರಂಭವಾಗಿ, ಜಗತ್ತಿನಾದ್ಯಂತ ಸಮಾನ ಮನಸ್ಕ ಸಣ್ಣಪುಟ್ಟ ಗುಂಪುಗಳ ರೂಪದಲ್ಲಿ ಹರಡುತ್ತಾ 'ಸಾಮಾಜಿಕ ಶೃಂಗ ಸಭೆ' (Social Summit) ಗಳನ್ನು ನಡೆಸುತ್ತಾ ಬೆಳೆಯುತ್ತಿದೆ. ಮುಖ್ಯವಾಗಿ ಜಗತ್ತಿನ ನೆಲ-ನೀರು-ಆಕಾಶಗಳನ್ನು ನಿಗಮೀಕರಿಸುವ-ಲಿಮಿಟೆಡ್ ಕಂಪನಿಗಳ ವಶಕೊಪ್ಪಿಸುವ-ವಿನಾಶಕಾರಿ ಆರ್ಥಿಕ ನೀತಿಯ ಹಿಂದಿರುವ ಜಾಗತಿಕ ರಾಜಕಾರಣವನ್ನು ವಿರೋಧಿಸುವ ಪ್ರಯತ್ನವಾಗಿ ಆರಂಭವಾದ ಈ ಆಂದೋಲನ; ಆಧುನೀಕರಣದ ಪರಮೋಚ್ಚ ಘಟ್ಟದಂತೆ ತೋರುವ ಜಾಗತೀಕರಣದ ಆಧಾರ ಸ್ತಂಭಗಳಾದ ಜಾಗತಿಕ ವ್ಯಾಪಾರ ಹಾಗೂ ಪರಿಸರ ಒಪ್ಪಂದಗಳ ಸಂಬಂಧ ನಡೆಯುವ ಸಭೆಗಳ ವಿರುದ್ಧ, ಜಗತ್ತಿನಾದ್ಯಂತ ಬೃಹತ್ – ಆದರೆ ಅಹಿಂಸಾತ್ಮಕವಾದ– ಪ್ರತಿಭಟನೆಗಳನ್ನು ನಡೆಸುತ್ತಾ ತನ್ನ ರಾಜಕೀಯ ದರ್ಶನವನ್ನು ರೂಪಿಸಿಕೊಳ್ಳುತ್ತಿದೆ. ಆ ಮೂಲಕ ಅದು, ಮಾನವತೆಯ ಈಗ ನಾಗರೀಕತೆಗಳ ಸಂಘರ್ಷದ ಹಿಂಸಾಚಾರಕ್ಕೆ ಸಿಲುಕಿರುವುದಕ್ಕೆ ಕಾರಣವಾಗಿರುವ ಇಂದಿನ ಜೀವನ ದೃಷ್ಟಿ, ಶೈಲಿ ಹಾಗೂ ಮೌಲ್ಯಗಳಿಗೆ ಪರ್ಯಾಯವಾದ ದೃಷ್ಟಿ, ಶೈಲಿ ಹಾಗೂ ಮೌಲ್ಯಗಳಿಗೆ ಪರ್ಯಾಯವಾದ ದೃಷ್ಟಿ, ಶೈಲಿ ಹಾಗೂ ಮೌಲ್ಯಗಳನ್ನು ಅನ್ವೇಷಿಸುತ್ತಾ, ಸಾರತಃ ಗಾಂಧೀಜಿಯನ್ನು ಪುನರನ್ವೇಷಿಸುವ ಆಂದೋಲನವಾಗಿ ರೂಪುಗೊಳ್ಳುತ್ತಿದೆ.

ಈಗ ಹೇಳಿ, ಯಾರು ಹೇಳಿದರು ಗಾಂಧಿ ಅವಾಸ್ತವಿಕ, ಅಪ್ರಸ್ತುತ ಎಂದು? ಹಾಗೆ ನೋಡಿದರೆ, ಗಾಂಧೀಜಿಯೇ ಹೇಳಿದ್ದರು: ನನ್ನ ಗ್ರಾಮ ಸ್ವರಾಜ್ಯದ ಕಲ್ಪನೆ ಯೂಕ್ಲೀಡ್‌ನ ಜಾಮಿತಿಯ ಬಿಂದು ಇದ್ದಂತೆ; ಯಾವ ಜ್ಯಾಮಿತೀಯ ಉಪಕರಣದಿಂದಲೂ ಅದನ್ನು ಮೂಡಿಸಲಾಗುವುದಿಲ್ಲ. ಹಾಗಾಗಿ ಅದೊಂದು ಕಲ್ಪನೆ; ಅವಾಸ್ತವಿಕ. ಆದರೆ ಆ ಬಿಂದುವಿಲ್ಲದಿದ್ದರೆ ಜ್ಯಾಮಿತಿಯೇ ಇಲ್ಲ! ಬಹುಶಃ ಜಗತ್ತು ಸಹ ತನ್ನ ಜ್ಯಾಮಿತಿಯನ್ನು – ಸಹಜ ಸುಸ್ಥಿರತೆಯನ್ನು–ಕಂಡುಕೊಳ್ಳುವವರೆಗೂ ಗ್ರಾಮ ಸ್ವರಾಜ್ಯವೂ ಅವಾಸ್ತವಿಕ ಕಲ್ಪನೆಯೇ!

(ಸುಧಾ, ೫ ಅಕ್ಟೋಬರ್, ೨೦೦೯)

ಒಂದು ರಾಜಕೀಯ ಅಜೆಂಡಾ ಆಗಿರುವ ಗಾಂಧಿ ಅವಹೇಳನ!

'ಚಾರ್ವಾಕ'ದ ಕಳೆದ ಸಂಚಿಕೆಯಲ್ಲಿ ಡಾ॥ ವಾಸು ಅವರು ಪೌರ ಕಾರ್ಮಿಕರಿಗೆ ನಿಗದಿಯಾಗಿರುವ ಕನಿಷ್ಟ ವೇತನದ ಸಂಬಂಧವಾಗಿ ಬರೆದಿರುವ ಲೇಖನದ ಹಿಂದಿನ ಕಾಳಜಿ ಮೆಚ್ಚುವಂತಹುದೇ ಆಗಿದೆ. ಆದರೆ ಲೇಖನಕ್ಕೆ ಪೀಠಿಕೆಯಾಗಿ ಅವರು ಗಾಂಧೀಜಿ ಒಮ್ಮೆ ಮಾತ್ರ ಭಂಗಿ ಕಾಲೋನಿಯಲ್ಲಿ ವಾಸ ಮಾಡಿದ್ದರು ಎಂಬುದು ಮಹತ್ವದ ಸಂಗತಿ ಎಂದು ಹೇಳುತ್ತಾ, ದೆಹಲಿಗೆ ಬಂದಾಗಲೆಲ್ಲ ಅವರು ಬಿರ್ಲಾ ಭವನದಲ್ಲೇ ಇರುತ್ತಿದ್ದರೆಂದೂ ಸೂಚಿಸಿದ್ದಾರೆ! ಅಷ್ಟೇ ಅಲ್ಲ, ಗಾಂಧೀಜಿಯನ್ನು ಭಂಗಿ ಕಾಲೋನಿಯ ಗುಡಿಸಲಿನಲ್ಲಿಡಲು, ಅವರು ಬಿರ್ಲಾ ಭವನದಲ್ಲಿದ್ದರೆ ಆಗುತ್ತಿದ್ದ ಖರ್ಚಿಗಿಂತ ಹೆಚ್ಚಿನ ಖರ್ಚಾಗಿತ್ತೆಂದೂ ಹೇಳಿದ್ದಾರೆ.

ಈ ಎಲ್ಲ ಲೆಕ್ಕಾಚಾರಗಳನ್ನೊಳಗೊಂಡ ಮಾಹಿತಿಯನ್ನು ಅವರು ಎಲ್ಲಿಂದ ಪಡೆದರೋ ತಿಳಿಯದು. ಗಾಂಧೀಜಿಯ ಚಲನ-ವಲನ ಮತ್ತು ವಾಸ್ತವ್ಯಗಳನ್ನು ಕುರಿತಂತೆ 'ಹರಿಜನ' ಪತ್ರಿಕೆ ಮತ್ತು ಮಹದೇವ ದೇಸಾಯಿಯವರ ಬರಹಗಳೂ ಸೇರಿದಂತೆ ಗಾಂಧೀಜಿ ಕುರಿತ ಸಾಹಿತ್ಯದಲ್ಲಿ ದೊರಕುವ ಮಾಹಿತಿ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಅವರ ಅಥೆಂಟಿಕ್ ಜೀವನ ಚರಿತ್ರೆಯೆಂದು ಜಾಗತಿಕವಾಗಿ ಮನ್ನಣೆ ಪಡೆದಿರುವ ಲೂಯಿ ಫಿಷರ್ ಅವರ 'The Life of Mahatma Gandhi' ಪ್ರಕಾರ ಗಾಂಧೀಜಿ ದೆಹಲಿಗೆ ಬಂದಾಗಲೆಲ್ಲ ಹೆಚ್ಚಾಗಿ ವಾಸ್ತವ್ಯ ಹೂಡುತ್ತಿದ್ದುದು KingsWay Camp ಬಳಿಯ ಭಂಗಿ ಕಾಲೋನಿಯಲ್ಲಿಯೇ. ಯಾವುದಾದರೂ ಔಪಚಾರಿಕ ಕಾರ್ಯ-ಕಲಾಪಗಳಿದ್ದಲ್ಲಿ ಅಥವಾ ಆರೋಗ್ಯ ಸಂಬಂಧಿ ವಿಶ್ರಾಂತಿ ಅಗತ್ಯವಿದ್ದಾಗ ಮಾತ್ರ ಅವರು ಬಿರ್ಲಾ ಭವನದಲ್ಲಿ ತಂಗುತ್ತಿದ್ದರು. ಗಾಂಧಿ ದ.ಆಫ್ರಿಕಾದಿಂದ ಕೊನೆಯ ಬಾರಿಗೆ ಹಿಂದಿರುಗಿದಾಗ ಅವರ ಕೂತಿದ್ದ ಗಾಡಿಯನ್ನು ಬೀದಿಯಲ್ಲಿ ಎಳೆದು ಸಂತೋಷಿಸಿದ ಹಲವರಲ್ಲಿ ಒಬ್ಬರಾದ ಬಿರ್ಲಾ, ಗಾಂಧೀಜಿಗೆ ಅವರ ಬದುಕಿನ ಕೊನೆಯವರೆಗೆ ನೀಡಿದ್ದ ಸೌಲಭ್ಯವಿದು. (ಗಾಂಧೀಜಿಯ ಕೊಲೆಯ ನಂತರ ಬಿರ್ಲಾ ಅದನ್ನು ಗಾಂಧಿ ಸ್ಮಾರಕ ಮಾಡಲು ಸರ್ಕಾರಕ್ಕೆ ಬಿಟ್ಟುಕೊಟ್ಟರು.) ಗಾಂಧೀಜಿ ಬಿರ್ಲಾ ಭವನದಲ್ಲಿ ತಂಗಿದ್ದಾಗ, ಅವರಿಗಾಗಿ ವಿಶೇಷ ಖರ್ಚು ಮಾಡುವ ಅಗತ್ಯವೇನೂ ಇದ್ದಿರಲಾರದು. ಏಕೆಂದರೆ, ಅವರ ಊಟ-ಉಪಹಾರಗಳು ಸರಳವಾಗಿದ್ದವು ಹಾಗೂ ಅವರಿಗೆ ಭದ್ರತೆಯ ವ್ಯವಸ್ಥೆ ಎಂಬುದೇನೂ ಇರಲಿಲ್ಲ. ಆದರೆ ಗಾಂಧೀಜಿ ಭಂಗಿ ಕಾಲೋನಿಯಲ್ಲಿದ್ದಾಗಲೆಲ್ಲ ಅವರಿಗೆ ಪ್ರತ್ಯೇಕ ಕುಟೀರವನ್ನು ಸಿದ್ಧಪಡಿಸಬೇಕಾಗುತ್ತಿತ್ತು-ಅವರ ಪ್ರಾರ್ಥನಾ ಸಭೆಗಾಗಿ, ಜನರನ್ನು ಭೇಟಿ

ಮಾಡುವ ಸೌಕರ್ಯ ಮತ್ತು ಅತಿಥಿಗಳ ಉಪಚಾರಗಳಿಗಾಗಿ. ಏಕೆಂದರೆ ಗಾಂಧೀಜಿ ಕೇವಲ ಒಬ್ಬ ವ್ಯಕ್ತಿಯಾಗಿರದೆ, ಒಮ್ಮೆಗೇ ಹಲವು ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿದ್ದ ರಾಷ್ಟ್ರೀಯ ಪ್ರಾಮುಖ್ಯತೆಯ ನಾಯಕರಾಗಿದ್ದರು. ಲೂಯಿ ಫಿಷರ್ ಪ್ರಕಾರ, ಇದಕ್ಕೆಲ್ಲ ದಿನವಹಿ ಖರ್ಚಾಗುತ್ತಿದ್ದ ಹಣ ಐವತ್ತು ರೂಪಾಯಿಗಳು. ಅದರ ಒಂದು ಪಾಲನ್ನಾದರೂ ಅವರು ಆ ಇಡೀ ಭಂಗಿ ಕಾಲೋನಿಯ ಬೀದಿಗಳು ಮತ್ತು ಶೌಚ ಸ್ಥಳಗಳನ್ನು ಪ್ರತಿ ದಿನವೂ ಇತರರೊಂದಿಗೆ ಸೇರಿ ಚೊಕ್ಕಟಗೊಳಿಸುವ ಮೂಲಕ ತೀರಿಸುತ್ತಿದ್ದರೆಂದೇ ಹೇಳಬಹುದು.

ಆದೇನೇ ಇರಲಿ, ಗಾಂಧೀಜಿಯ ಭಂಗಿ ಕಾಲೋನಿ ವಾಸ್ತವ್ಯವನ್ನು ಪೌರ ಕಾರ್ಮಿಕರ ಪರವಾದ ತಮ್ಮ ವಾದ ಮಂಡಿಸಲು ಬಳಸುತ್ತಿರುವಾಗಲೇ, ಆ ವಾಸ್ತವ್ಯವನ್ನು ಲೇವಡಿ ಮಾಡಲೂ ಯತ್ನಿಸಿರುವುದು ಡಾ॥ ವಾಸು ಅವರ ಇಡೀ ಲೇಖನದ ಉದ್ದೇಶವನ್ನೇ ಸಂಕುಚಿತಗೊಳಿಸಿದೆ. ಮುವ್ವತ್ತರ ದಶಕದಲ್ಲಿ, ತಮ್ಮ ಆಶ್ರಮ ದೇಶದ ಮಧ್ಯ ಭಾಗದಲ್ಲಿರಲೆಂದು ಅದನ್ನು ವಾರ್ಧಾದಲ್ಲಿ ಸ್ಥಾಪಿಸಿಕೊಂಡ ಗಾಂಧೀಜಿ(ಇದರ ಆಂತರಿಕ ನಿರ್ವಹಣೆಗಾಗಿ ಬಿರ್ಲಾ ಪ್ರತಿ ವರ್ಷ ಐವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು ಹಾಗೂ ಈ ಖರ್ಚಿನ ಪ್ರತಿ ಕಾಸಿನ ವಿವರವನ್ನೂ ಗಾಂಧಿ ಲೆಕ್ಕ ಇಟ್ಟು ಬಿರ್ಲಾಗೆ ಒಪ್ಪಿಸುತ್ತಿದ್ದರು), ಸಬರ್ಮತಿಯಲ್ಲಿ ಈ ಮೊದಲು ತಾವೇ ಕಟ್ಟಿಕೊಂಡಿದ್ದ ವಿಶಾಲ ಆಶ್ರಮವನ್ನು ಅಸ್ಪೃಶ್ಯರ ಗುಂಪೊಂದಕ್ಕೆ ಬಿಟ್ಟುಕೊಟ್ಟು ಬಂದಿದ್ದರು ಎಂಬುದನ್ನೂ ನಾವಿಲ್ಲಿ ಗಮನಿಸಬೇಕು. ವಾರ್ಧಾ, ಬೇಸಿಗೆಯಲ್ಲಿ ಉಷ್ಣಾಂಶ ಯಾವಾಗಲೂ ೪೫-೫೦ ಡಿಗ್ರಿ ಸೆಂ. ಇರುವ ಬಿರು ಬಿಸಲಿನ ಜಾಗ. ಅಲ್ಲಿ ಈ ಬಿರು ಬಿಸಿಲಿನಲ್ಲಿ, ಅರ್ಧ ಬರಿ ಮೈನ ಗಾಂಧೀಜಿ ಗಂಟೆಗಟ್ಟಲೆ ನಡೆಯುತ್ತಿದ್ದರು! ಬಿಸಿಲಿನ ತಾಪದಿಂದ ದೇಹವನ್ನು ರಕ್ಷಿಸಿಕೊಳ್ಳಲು ತಲೆಯ ಮೇಲೆ ಯಾವಾಗಲೂ ಒದ್ದೆ ಬಟ್ಟೆ ಹರಡಿಕೊಂಡಿರುತ್ತಿದ್ದರು ಮತ್ತು ಆಗಾಗ್ಗೆ ಬಚ್ಚಲು ಮನೆಗೆ ಹೋಗಿ ಸ್ವಲ್ಪ ಹೊತ್ತು ತಣ್ಣೀರಲ್ಲಿ ಕೂತು ಬರುತ್ತಿದ್ದರು ಎಂದು ಅವರೊಡನೆ ಆ ಆಶ್ರಮದಲ್ಲಿ ಸ್ವಲ್ಪ ಕಾಲ ತಂಗಿದ್ದ ಫಿಷರ್ ಬರೆಯುತ್ತಾರೆ. ಇನ್ನು ಅವರ ದೈಹಿಕ ಶ್ರಮದ ಇತರೆ ವಿವರಗಳನ್ನು ಇಲ್ಲಿ ಹೇಳುವ ಅಗತ್ಯವಿಲ್ಲವೆಂದು ತೋರುತ್ತದೆ. ಹೀಗಿರುವಾಗ ದೆಹಲಿಯ ಭಂಗಿ ಕಾಲೋನಿಯಲ್ಲಿ ಅವರನ್ನು 'ತಣ್ಣಗೆ ಇಡಲು' ವಿಶೇಷ ಖರ್ಚು ಮಾಡಲಾಗುತ್ತಿತ್ತು ಎಂದರೆ ಏನೆಂದು ಅರ್ಥ ಮಾಡಿಕೊಳ್ಳಬೇಕು? ಅಲ್ಲಿ ಹವಾ ನಿಯಂತ್ರಿತ ಅಥವಾ ವಿಶೇಷ ಪಂಖ ವ್ಯವಸ್ಥೆ ಮಾಡಲಾಗಿತ್ತೇ ಅಥವಾ ಅವರ ಗುಡಾರ ರೂಪದ ಕುಟೀರದ ತುಂಬಾ ಮಂಜಿನ ಗಡ್ಡೆಗಳನ್ನು ಇರಿಸಲಾಗಿತ್ತೇ? ವಿವರಗಳನ್ನು ತಿಳಿಸಿದ್ದರೆ ಅದು ಎಷ್ಟರ ಮಟ್ಟಿಗೆ ಸರಿ ಅಥವಾ ತಪ್ಪು ಅಥವಾ ಹಾಸ್ಯಾಸ್ಪದ ಎಂಬುದನ್ನು ಇಂದಾದರೂ ಅಂದಾಜು ಮಾಡಿ, ತೀರ್ಪು ನೀಡಬಹುದಾಗಿತ್ತು!

ಗಾಂಧೀಜಿ ಭಂಗಿ ಕಾಲೋನಿಯಲ್ಲಿ ವಾಸ ಮಾಡುತ್ತಾರೆಂದರೆ, ಅವರ ಭಂಗಿಯೊಬ್ಬರ ಮನೆಯಲ್ಲಿ ಅದಿದ್ದ ಸ್ಥಿತಿಯಲ್ಲೇ ಇರಬೇಕಾಗಿತ್ತೆಂದು ವಾಸು ಅವರು ನಿರೀಕ್ಷಿಸಿದ್ದರೆಂದು ಕಾಣುತ್ತದೆ! ಹಾಗಿದ್ದಲ್ಲಿ ಅವರ ಇಂತಹ ವಾಸ್ತವ್ಯಕ್ಕೆ ಸಾಂಕೇತಿಕ ಅರ್ಥಕ್ಕಿಂತ ಹೆಚ್ಚಿನ ಮಹತ್ವವೇನೂ ಇರುತ್ತಿರಲಿಲ್ಲ. ಏಕೆಂದರೆ, ಅವರು ಭಂಗಿ ಕಾಲೋನಿಗೆ ಈಗಿನ ಜನದೂರವಾದ ರಾಜಕಾರಣಿಗಳ ತರಹ ಅಲ್ಲಿನ ಸ್ಥಿತಿ-ಗತಿಗಳನ್ನು ಅರಿಯಲು ಮತ್ತು

ಅವಕಾಶಗಳನ್ನು ನೀಡಲು ಬರುತ್ತಿರಲಿಲ್ಲ. ಬದಲಿಗೆ, ಅವರ ಮಧ್ಯೆ ಇದ್ದು ಅವರ ಆತ್ಮ ವಿಶ್ವಾಸವನ್ನು ಹೆಚ್ಚಿಸಲು ಮತ್ತು ಅವರಿಗೆ ತಮ್ಮ ಕಲ್ಪನೆಯ ಬದುಕಿನ ಹೊಸ ಮಾದರಿಯನ್ನು ವಿಷದೀಕರಿಸಲು ಹಾಗೂ ಅದಕ್ಕಿಂತ ಹೆಚ್ಚಾಗಿ ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಸಮಾಜದ ಇತರ ವರ್ಗಗಳಿಗೆ ಉದಾಹರಣೆಯಾಗಲು ಅವರು ಈ ಮೂಲಕ ಯತ್ನಿಸುತ್ತಿದ್ದರು. ಈ ಸಂಬಂಧವಾಗಿ ಅಂಬೇಡ್ಕರರ ಹೋಲಿಕೆಯನ್ನು ತಂದು ಗಾಂಧೀಜಿ ಬಗ್ಗೆ ವ್ಯಂಗ್ಯವಾಡುವುದು ಅನುಚಿತವಷ್ಟೇ ಅಲ್ಲ, ಅಸಂಗತ ಕೂಡ. ಏಕೆಂದರೆ ಅಂಬೇಡ್ಕರರ ಜೀವನ ಶೈಲಿ, ಹೋರಾಟದ ಮಾರ್ಗ ಮತ್ತು ನೆಲೆಗಳೇ ಬೇರೆಯಾಗಿದ್ದವು. 'ಗಾಂಧೀಜಿಯನ್ನು ಕಡು ಬಡತನದಲ್ಲಿಡಲು ಸಾಕಷ್ಟು ಖರ್ಚಾಗುತ್ತದೆ!' ಎಂಬಂತಹ ಸರೋಜಿನಿ ನಾಯ್ಡು ಅವರ ಅರ್ಧ ತಮಾಷೆ ಮತ್ತು ಅರ್ಧ ಸಿನಿಕತೆಯ ಮಾತುಗಳೇ ಇಂತಹ ವ್ಯಂಗ್ಯಗಳಿಗೆ ಸ್ಫೂರ್ತಿ ಎಂದು ಕಾಣುತ್ತದೆ. ಆದರೆ ಸರೋಜಿನಿ ನಾಯ್ಡು ಅವರ ಈ ಹೇಳಿಕೆಯನ್ನು ಅವರ ಮತ್ತು ಅವರು ಹತ್ತಿರವಿದ್ದ ನೆಹರೂ ಕುಟುಂಬದ ಜೀವನ ಶೈಲಿಯ ಬಗೆಗಿನ ಕ್ಷಮಾಪಣಾ(ತಪ್ಪೊಪ್ಪಿಗೆಯ) ಹೇಳಿಕೆಯನ್ನಾಗಿಯೂ ಅರ್ಥಮಾಡಿಕೊಳ್ಳ ಬಹುದಾಗಿದೆ ಎಂಬುದನ್ನು ನಾವು ಮರೆಯಬಾರದು!

ಎಲ್ಲವನ್ನೂ ತಾವು ನಂಬಿದ ರಾಜಕೀಯ ದೃಷ್ಟಿಕೋನಕ್ಕೆ ಒಗ್ಗಿಸಿಯೇ ನಿರೂಪಿಸ ತೊಡಗುವುದರ ಸಮಸ್ಯೆ ಇದು. ಇದರಿಂದ ಎಂತಹ ರಾಜಕಾರಣವೂ ಸಾಧ್ಯವಿಲ್ಲ–ಪೌರ ಕಾರ್ಮಿಕರ ಬಗೆಗಿನ ಸಾರಾ ಸಗಟಾದ ಸಹಾನುಭೂತಿಯನ್ನು ವ್ಯಕ್ತಪಡಿಸಿ ನಮ್ಮ 'ಪ್ರಗತಿಪರತೆ'ಯನ್ನು ಮೆರೆಯುವುದರ ಹೊರತಾಗಿ. ಪೌರ ಕಾರ್ಮಿಕರಿಗೆ ಈಗ ನಿಗದಿಯಾಗಿರುವ ಕನಿಷ್ಠ ವೇತನ ಅನ್ಯಾಯದ್ದು ಎಂಬುದು ನಿಜ. ಹಾಗೇ ಈ ವೃತ್ತಿಗೆ ಬೇಕಾದ ಆರೋಗ್ಯ ರಕ್ಷಣಾ ಪರಿಕರಗಳನ್ನು ಒದಗಿಸದ ಸರ್ಕಾರದ ಧೋರಣೆ ಕೂಡ ಅಕ್ಷಮ್ಯ. ಅಲ್ಲದೆ, ಈ ವೃತ್ತಿಗೆ ಇನ್ನೂ ಅಸ್ಪೃಶ್ಯರೇ ಹೆಚ್ಚಾಗಿ ಬರುವಂತಹ ಸ್ಥಿತಿ ಏಕುಳಿದಿದೆ ಎಂಬುದೂ ಆಳವಾಗಿ ಯೋಚಿಸಬೇಕಾದ ವಿಚಾರ. ಆದರೆ ಇಂದಿನ ಪೌರ ಕಾರ್ಮಿಕರಲ್ಲಿ ಅರ್ಧಕ್ಕೂ ಹೆಚ್ಚಿನ ಸಿಬ್ಬಂದಿ ಬೇರೆ ಕೆಲಸಗಳಲ್ಲಿ ತೊಡಗಿದ್ದು, ತಮ್ಮ ಕೆಲಸಗಳನ್ನು ಕಡಿಮೆ (ಗುತ್ತಿಗೆ)ದರದಲ್ಲಿ ಇತರರಿಗೊಪ್ಪಿಸಿ ಅವರನ್ನು ಶೋಷಣೆ ಮಾಡುತ್ತಿರುವರೆಂದು ಡಾ॥ ವಾಸು ಅವರಿಗೆ ಗೊತ್ತೆ? ಮುಖ್ಯವಾಗಿ ಬೆಂಗಳೂರು–ಮೈಸೂರು–ಧಾರವಾಡ–ಹುಬ್ಬಳ್ಳಿ ಮುಂತಾದೆಡೆ ಇದೊಂದು ದೊಡ್ಡ ದಂಧೆಯೇ ಆಗಿದ್ದು, ಈ ಸಂಬಂಧ 'ದಾದಾ'ಗಳ ಜಾಲವೂ ಸೃಷ್ಟಿಯಾಗಿದೆ ಎಂಬುದು ತಿಳಿದಿದೆಯೇ? ಇಲ್ಲಿ ಬಹುಪಾಲು ಕಾರ್ಮಿಕ ಸಂಘಗಳ ಕೆಲಸವೆಂದರೆ ಇವನ್ನೆಲ್ಲ 'ಸಮರ್ಥ'ವಾಗಿ ನಿರ್ವಹಿಸಿ ಪಾಲು ಪಡೆಯುವುದೇ ಆಗಿದೆಯಲ್ಲವೆ?

ದುಷ್ಟತನ ಮತ್ತು ಭ್ರಷ್ಟತೆಗಳು ಬಡವ–ಶ್ರೀಮಂತರೆನ್ನದೆ ಯಾರನ್ನೂ ಬಿಡದ ವಿಪ್ಲವಕಾರಿ ಜಾಗತೀಕರಣದ ದಿನಗಳಲ್ಲಿ ನಾವು ಬದುಕುತ್ತಿದ್ದೇವೆ ಎಂಬುದನ್ನು ಅರಿಯದ ಹೊರತು, ನಮ್ಮ ಎಲ್ಲ ವಿಶ್ಲೇಷಣೆಗಳೂ ಸುಲಭ–ಸಿದ್ಧ 'ಪ್ರಗತಿಪರ' ಮಾದರಿಗಳಿಗೆ ಬೀಳತೊಡಗುತ್ತವೆ. ಗಾಂಧೀಜಿ ಇಂತಹ ಮಾದರಿಗಳಿಗೆ ಸುಲಭ ಬಲಿಯಾಗಿ ಒದಗಿ ಬರುತ್ತಾರೆ. ಇಲ್ಲಿ ಆಗಿರುವುದೂ ಹಾಗೆಯೇ. ಆದರೆ 'ಚಾರ್ವಾಕ' ಇದಕ್ಕೆ ಬಲಿಯಾಗದಿರಲಿ.

-೨-

ಪೌರ ಕಾರ್ಮಿಕರ ಕನಿಷ್ಠ ವೇತನ ಕುರಿತು ಎಚ್.ವಿ. ವಾಸು ಅವರು ಬರೆದ ಲೇಖನದ ಎರಡು ಮೂರು ಸಾಲುಗಳಿಗೆ ಸಂಬಂಧಿಸಿದಂತೆ ನಾನು ಬರೆದಿದ್ದ ಮೇಲಿನ ಪ್ರತಿಕ್ರಿಯೆಗೆ ಅವರು ಕಳೆದ ಸಂಚಿಕೆಯಲ್ಲಿ 'ನಮ್ಮ ಮಾದರಿ ಯಾವುದಿರಲಿ?' ಶೀರ್ಷಿಕೆಯಲ್ಲಿ ಬರೆದ ಉತ್ತರವನ್ನು ನೋಡಿದೆ.

ಓದುಗರು ಗಮನಿಸಿರಬಹುದಾದಂತೆ, ನಾನು ಅವರ ಲೇಖನದ ಮುಖ್ಯ ಉದ್ದೇಶದ ಬಗ್ಗೆ ಸಹಮತವನ್ನೇ ಹೊಂದಿದ್ದೆ. ಅದನ್ನು ನನ್ನದೇ ಒಂದೆರಡು ಪೂರಕ ಅಂಶಗಳೊಂದಿಗೆ ದಾಖಲಿಸಿಯೂ ಇದ್ದೆ. ಆದರೆ ಅವರು ತಮ್ಮ ಲೇಖನಕ್ಕೆ ಸಂಬಂಧವೇ ಇರದಂತೆ, ಗಾಂಧೀಜಿಯನ್ನು ಅಂಬೇಡ್ಕರ್‌ಗೆ ಹೋಲಿಸಿ ಮಾಡಿದ್ದ ಅನಗತ್ಯ ವ್ಯಂಗ್ಯಪೂರಿತ ಟೀಕೆಯ ಬಗ್ಗೆ ನಾನು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದೆ. ಜೊತೆಗೆ ಇಂದಿನ ಜಾಗತೀಕರಣದ ದಿನಗಳಲ್ಲಿ ಯಾವುದೇ ಸಮುದಾಯದ ಬಗ್ಗೆಯಾಗಲೀ ಸಾರಾಸಗಟಾದ ಸಹಾನುಭೂತಿಯನ್ನು ವ್ಯಕ್ತಪಡಿಸುವ, ಸಂಘಟಿಸುವ ಅಪಾಯ ಕುರಿತು ನನ್ನ ಮಿತಿಗಳಲ್ಲೇ ಎಚ್ಚರಿಸಿದ್ದೆ.(ನನ್ನ ಲೇಖನದಲ್ಲಿ ಈ ಬಗೆಗಿನ ಒಂದು ವಾಕ್ಯವನ್ನು ತೆಗೆಯಿರಿ ಎಂದರೆ; ಸಂಪಾದಕರು ತಮ್ಮ ವಿವೇಕ ಬಳಸಿ, ಎರಡು ವಾಕ್ಯಗಳನ್ನು ತೆಗೆದು ಪ್ರಕಟಿಸಿದ್ದಾರೆ. ಆದರೆ ಅದಾವುದನ್ನೂ ತೆಗೆಯದ ಮೂಲ ಲೇಖನವನ್ನು ವಾಸು ಅವರಿಗೆ, ಪ್ರತಿಕ್ರಿಯೆಗಾಗಾಗಿ ಈ ಮೇಲ್ ಮಾಡಿದ್ದಾರೆ!) ಆದರೆ ದುರದೃಷ್ಟಕರ ಸಂಗತಿ ಎಂದರೆ, ವಾಸು ಅವರು ತಮ್ಮ ಈ ಉತ್ತರದಲ್ಲೂ ತಾವು ಓದಿದ ಪುಸ್ತಕವೊಂದರಿಂದ ಆಯ್ದ ಉಲ್ಲೇಖಗಳ ಮೂಲಕ ಗಾಂಧಿ ಕುರಿತಂತೆ ಉದ್ದೇಶಪೂರ್ವಕ ಅವಹೇಳನವನ್ನು ಮುಂದುವರೆಸಿದ್ದಾರೆ.

ತಮ್ಮ ಮೂಲ ಲೇಖನದಲ್ಲಿ ಗಾಂಧಿ ಒಮ್ಮೆ ಮಾತ್ರ ಭಂಗಿ ಕಾಲೋನಿಯಲ್ಲಿ ವಾಸಿಸಿದ್ದರು ಎಂದು ಹೇಳುತ್ತಾ ಅದರ ಬಗ್ಗೆ ವ್ಯಂಗ್ಯವನ್ನೂ ಸೃಷ್ಟಿಸಿದ್ದ ವಾಸು ಅವರು ಈಗ ನನ್ನ ಪ್ರತಿಕ್ರಿಯೆಯ ನಂತರ ತಮ್ಮ ಈ ಹೇಳಿಕೆ 'ಸರಿಯಲ್ಲ' ಎಂದು ಒಪ್ಪಿಕೊಂಡಿದ್ದಾರೆ. ಸಂತೋಷ. ಆದರೆ ಆಶ್ಚರ್ಯವೆಂದರೆ, ತಮ್ಮ ಈ ಉತ್ತರದಲ್ಲಿ ಇನ್ನಷ್ಟು 'ಸರಿಯಲ್ಲ'ದ ವಿವರಗಳನ್ನು ನೀಡುತ್ತಾ ಹೋಗಿದ್ದಾರೆ! ತಾವು ಈಗ ಉಲ್ಲೇಖಿಸಿರುವ ಬರ್ಕ್‌ವೈಟ್ ಮಾತುಗಳಲ್ಲೇ ಗಾಂಧಿ ಒಂದಲ್ಲ, ಅನೇಕ ಬಾರಿ ಅಸ್ಪೃಶ್ಯರ ನಡುವೆ ವಾಸಿಸಿದ್ದರು ಎಂಬ ಮಾಹಿತಿ ಇದ್ದರೂ, ವಾಸು ಅವರು ಒಮ್ಮೆ ಮಾತ್ರ ಗಾಂಧಿ ಭಂಗಿ ಕಾಲೋನಿಯಲ್ಲಿ ವಾಸಿಸಿದ್ದರು ಎಂದು ಹೇಳಿದ್ದರ ಉದ್ದೇಶವಾದರೂ ಏನು? (ಗಾಂಧೀಜಿಯ ಜೀವನ ಚರಿತ್ರೆಕಾರ ಲೂಯಿ ಫಿಷರ್ ಪ್ರಕಾರ, ನಾನು ಈ ಹಿಂದೆಯೇ ತಿಳಿಸಿದಂತೆ, ಗಾಂಧೀಜಿ ದೆಹಲಿಗೆ ಬಂದಾಗಲೆಲ್ಲ ವಿಶೇಷ ಸಂದರ್ಭಗಳ ಹೊರತಾಗಿ ಉಳಿದುಕೊಳ್ಳುತ್ತಿದ್ದುದು ಭಂಗಿ ಕಾಲೋನಿಯಲ್ಲಿಯೇ.) ನಾನು ಪ್ರಶ್ನಿಸಿದ್ದುದು ಇಂತಹ ದುರುದ್ದೇಶಪೂರಿತ ಮಾನಸಿಕತೆಯನ್ನಷ್ಟೇ. ಆದರೆ ಅವರು ತಮ್ಮ ಉತ್ತರವನ್ನು ಈ ಮಾನಸಿಕತೆಯಲ್ಲೇ ಮುಂದುವರೆಸಿರುವುದು ವಿಷಾದನೀಯ. ಇದಕ್ಕೆಲ್ಲ ನಾನು ಗಾಂಧೀಜಿಯ ವಕ್ತಾರನಂತೆ ಪ್ರತಿಕ್ರಿಯಿಸುವ ಸಂದರ್ಭಕ್ಕೆ ಸಿಕ್ಕಿರುವುದು ನನ್ನ ಪಾಲಿಗೆ ಇನ್ನಷ್ಟು ವಿಷಾದನೀಯ ಸಂಗತಿಯಾಗಿದೆ. ಏಕೆಂದರೆ ವಾಸು ಅವರು ಬರ್ಕ್‌ವೈಟ್ ಮಾತುಗಳನ್ನು ಅವುಗಳ ಒಟ್ಟಾರೆ ಉದ್ದೇಶದಿಂದ, ಪುಸ್ತಕದ ಒಟ್ಟಾರೆ ಆಶಯದಿಂದಲೇ ಹೊರತೆಗೆದು

ಉಲ್ಲೇಖಿಸಿರುವುದನ್ನು ಮತ್ತು ಅದರ ಹಿಂದಿರುವ ರಾಜಕಾರಣವನ್ನೂ ನಾನಿಲ್ಲಿ ಸ್ವಲ್ಪ ವಿವರವಾಗಿಯೇ ಹೇಳಬೇಕಾಗಿದೆ. (ಪ್ರಿಯ ಸಂಪಾದಕರೇ, ಇದೇ ಕೊನೆ; ಇಂತಹ ಲೇಖನಗಳಿಗೆ ಇನ್ನು ಮುಂದೆ ನೀವೇ ಜವಾಬ್ದಾರರು!)

ಬರ್ಕ್ ವೈಟ್ ಗಾಂಧೀಜಿ ಬದುಕಿನ ಕೊನೆಯ ಘಟ್ಟದಲ್ಲಿ 'ಲೈಫ್' ಪತ್ರಿಕೆಯ ಛಾಯಾಚಿತ್ರ ಪತ್ರಕರ್ತರಾಗಿ ಸ್ವಲ್ಪ ಕಾಲದ ಮಟ್ಟಿಗೆ ಭಾರತಕ್ಕೆ ಬಂದವರು. ವಾಸು ಅವರು ಉಲ್ಲೇಖಿಸಿರುವ ಅವರ 'ಹಾಫ್ ವೇ ಟು ಫ್ರೀಡಂ' ಪುಸ್ತಕವನ್ನು ಅವರು ತಮ್ಮ ಪತ್ರಿಕಾ ಒಡೆಯರ ಸೂಚನೆಯಂತೆ ಒಂದು ವೃತ್ತಿ-ಭಾಗವಾಗಿ ಬರೆದದ್ದು, ಭಾರತದ ವಿಭಜನೆಯ ಸಂದರ್ಭದಲ್ಲಿ ಭುಗಿಲೆದ್ದ ಹಿಂಸಾಚಾರವನ್ನು ಚಿತ್ರಿಸಿ ಅರ್ಥೈಸುವ ಮುಖ್ಯ ಉದ್ದೇಶದಿಂದ. ವಾಸು ಅವರ ಆಯ್ದ ಉಲ್ಲೇಖಗಳು ಸೂಚಿಸುವ ಹಾಗೆ, ಗಾಂಧೀಜಿಯ ವ್ಯಕ್ತಿ ಚಿತ್ರವನ್ನು ನಿರೂಪಿಸುವ ಉದ್ದೇಶದಿಂದಲ್ಲ. ಗಾಂಧೀಜಿಗೆ ಸಂಬಂಧಿಸಿದಂತೆ ಅವರು ತಮ್ಮ ಛಾಯಾಚಿತ್ರಗಳ ಸಂಪುಟದ ಮೂಲಕ ಪ್ರತ್ಯೇಕ ವ್ಯಕ್ತಿಚಿತ್ರ ನೀಡಿದ್ದಾರೆ. ಹೀಗಾಗಿ ಅವರು ಗಾಂಧಿ ಬಗ್ಗೆ ಭಾವನಾತ್ಮಕವಾಗಿಯೂ ಬರೆದಿದ್ದಾರೆ ಎಂಬ ವಾಸು ಅವರ ಶಿಫಾರ್ಸು ಇಲ್ಲದೆಯೇ, ಭಂಗಿ ಕಾಲೋನಿಯಲ್ಲಿ ಗಾಂಧೀಜಿಯನ್ನು ಹೇಗೆ 'ತಣ್ಣಗೆ ಇಡಲಾಗಿತ್ತು' ಎಂದು ಸೂಚಿಸಲು 'ಹಾಫ್ ವೇ ಟು ಫ್ರೀಡಂ' ಪುಸ್ತಕದಿಂದ ಅವರು ಆಯ್ದು ನೀಡಿರುವ ಭಾಗಗಳನ್ನು ಮುಕ್ತ ಮನಸ್ಸಿನಿಂದಲೇ ಓದಬಹುದಾಗಿದೆ!

ಆದರೆ ಮುಖ್ಯ ಸಂಗತಿ ಎಂದರೆ, ಈ ಸಾಲುಗಳನ್ನು ಬರ್ಕ್‌ವೈಟ್ ಬರೆದಿರುವುದು, ವಾಸು ಅವರು ಇಲ್ಲಿ ಅವನ್ನು ಪ್ರಸ್ತುತಪಡಿಸಲು ಬಯಸಿರುವಂತೆ ಭಂಗಿ ಕಾಲೋನಿಯಲ್ಲಿನ ಸ್ವತಃ ಗಾಂಧೀಜಿಯ ವಾಸದ 'ವೈರುಧ್ಯ'ಗಳನ್ನು ಹೇಳಲಲ್ಲ. ಏಕೆಂದರೆ, ಬರ್ಕ್ ವೈಟ್ ಅವರೇ ವಿವರಿಸಿರುವಂತೆ ಭಂಗಿ ಕಾಲೋನಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಅದನ್ನು ಕುಸ್‌ಕುಸ್ ನಾರಿನ ಪರದೆಗಳಿಗೆ ನೀರು ಚಿಮುಕಿಸುವ ಮೂಲಕ ತಣ್ಣಗೆ ಇಡುವ ಮತ್ತು ಪಂಖಗಳು, ಫೋನ್‌ಗಳು ಹಾಗೂ ಟೈಪ್‌ರೈಟರ್‌ಗಳಿಂದ ಸಜ್ಜುಗೊಂಡ 'ವೈಭವೋಪೇತ' ವ್ಯವಸ್ಥೆಯನ್ನು ಮಾಡಿದ್ದುದು, ಗಾಂಧೀಜಿಯೊಂದಿಗೆ ಮಾತುಕತೆಗೆ ಕ್ಯಾಬಿನೆಟ್ ಮಿಷನ್ ಸದಸ್ಯರು ಬರಲಿದ್ದ ವಿಶೇಷ ಸಂದರ್ಭದಲ್ಲಿ. ಆದರೆ ಇದನ್ನು ಗಾಂಧೀಜಿಯವರ ಬಯಕೆಯಂತೆ ಅವರ ಅನುಕೂಲಕ್ಕಾಗಿ ಮಾಡಲಾಗಿತ್ತೋ ಅಥವಾ ಕ್ಯಾಬಿನೆಟ್ ಮಿಷನ್‌ಗೆ ಸಂಬಂಧಿಸಿದ ಕಾರ್ಯಕಲಾಪಗಳ ಅನುಕೂಲಕ್ಕಾಗಿ ಸರ್ಕಾರದ ಆದೇಶದಂತೆ ಮಾಡಲಾಗಿತ್ತೋ ಎಂಬುದನ್ನು ವಾಸು ಅವರು (ಅವರಿಗೆ ಗೊತ್ತಿದ್ದರೆ) ಸ್ಪಷ್ಟವಾಗಿ ಹೇಳದೆ ಬಿಟ್ಟು, ಇದೆಲ್ಲವನ್ನೂ ಗಾಂಧೀಜಿಗಾಗಿಯೇ, ಪ್ರತಿಸಲದಂತೆಯೇ ಮಾಡಲಾಗಿತ್ತು ಎಂಬಂತೆ ನಿರೂಪಿಸಿದ್ದಾರೆ. ಅಲ್ಲದೆ ಗಾಂಧೀಜಿಯ ಭಂಗಿ ಕಾಲೋನಿ ವಾಸ್ತವ್ಯದ ಚಿತ್ರ ನೀಡಲು ನಿರ್ದಿಷ್ಟವಾಗಿ ಇದೇ ವಾಸ್ತವ್ಯದ ವಿವರವನ್ನೇ ಏಕೆ ಅವರು ಆಯ್ದುಕೊಂಡಿದ್ದಾರೆ? ಇದು ದುರುದ್ದೇಶಪೂರ್ವಕವಲ್ಲದಿದ್ದರೆ ಮತ್ತೇನು?

ಅದೇನೇ ಇರಲಿ, ಈ ಸಂದರ್ಭದಲ್ಲಿ ವಾಸು ಉಲ್ಲೇಖಿಸದೇ ಬಿಟ್ಟಿರುವ ಬರ್ಕ್‌ವೈಟ್ ಅವರ ಒಂದು ವಾಕ್ಯ ಎಲ್ಲವನ್ನೂ ಸ್ಪಷ್ಟಪಡಿಸುವಂತಿದೆ. ಅದೆಂದರೆ, 'ಆ ಇಡೀ ಆವರಣದಲ್ಲಿ ಗಾಂಧಿ ಒಂದು ದೊಡ್ಡ ಅಣಬೆಯಂತೆ ಕಾಣಿಸಿಕೊಳ್ಳುತ್ತಿದ್ದರು. ಅವರು ಸದಾ ತಲೆ ಮತ್ತು ಮೈ ಮೇಲೆ ಒದ್ದೆಯಾದ ಟರ್ಕಿ ಟವಲ್‌ಗಳನ್ನು ಸುತ್ತಿಕೊಂಡು ಓಡಾಡುತ್ತಿದ್ದರು!'

ಇನ್ನು, ಅಲ್ಲಿ ಯಂತ್ರಗಳ ವಿರುದ್ಧ ಮಾತನಾಡುತ್ತಿದ್ದ ಗಾಂಧೀಜಿ ಧ್ವನಿವರ್ಧಕವನ್ನು ಬಳಸುತ್ತಿದ್ದ ಬಗ್ಗೆ ವ್ಯಂಗ್ಯಪೂರ್ಣ ಆಶ್ಚರ್ಯವನ್ನು ಬರ್ಕ್‌ವೈಟ್ ವ್ಯಕ್ತಪಡಿಸಿರುವುದನ್ನು ವಾಸು ಬಹು ಅರ್ಥಪೂರ್ಣವೆಂದು ಉಲ್ಲೇಖಿಸಿದ್ದಾರೆ. ಇದು, ಈ ಇಬ್ಬರೂ ಯಂತ್ರ ಕುರಿತ ಗಾಂಧಿ ಚಿಂತನೆಗಳನ್ನು–ಅವುಗಳ ಮೇಲೆ ಎಷ್ಟೊಂದು ಚರ್ಚೆಯಾಗಿ, ಸ್ವತಃ ಗಾಂಧಿ ಆ ಬಗ್ಗೆ ಎಷ್ಟೆಲ್ಲ ಸ್ಪಷ್ಟೀಕರಣಗಳನ್ನು ನೀಡಿದ್ದರೂ–ಯಾವ ಮಟ್ಟದಲ್ಲಿ ಅರ್ಥೈಸಿಕೊಂಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಮತ್ತು ಗಾಂಧಿ ಕುರಿತ ಇವರ ಮಾತುಗಳನ್ನು ನಾವು ಎಷ್ಟರಮಟ್ಟಿಗೆ ಸ್ವೀಕರಿಸಬೇಕು ಎಂಬುದನ್ನೂ ಸ್ಪಷ್ಟಪಡಿಸುತ್ತದೆ ಎಂದು ನಾನು ಭಾವಿಸಿದ್ದೇನೆ.

ಇನ್ನು ವಾಸು ಅವರು ತಮ್ಮ ವಾದಕ್ಕೆ ಪೂರಕವಾಗಿ ಆಯ್ದು ನೀಡಿರುವ ಗಾಂಧೀಜಿಯ ಮೂರನೇ ದರ್ಜೆಯ ರೈಲು ಪ್ರಯಾಣ ಕುರಿತ ವಿವರಗಳನ್ನೊಳಗೊಂಡ ಉಲ್ಲೇಖಗಳು. ಇವು ಈ ಮೂರನೇ ದರ್ಜೆಯ ಬೋಗಿಯಲ್ಲಿ ಗಾಂಧಿ ಕುಡಿಯುವ ಹಾಲಿಗಾಗಿ ಮೇಕೆಗಳನ್ನೂ ಒಯ್ಯಲಾಗುತ್ತಿತ್ತು ಮತ್ತು ಅವರ ಪರಿವಾರಕ್ಕಾಗಿ ಒಮ್ಮೊಮ್ಮೆ ಇಡೀ ರೈಲೇ ಸಾಕಾಗುತ್ತಿರಲಿಲ್ಲವೆಂದು ಹೇಳುತ್ತವೆ. ಆದರೆ ಹೀಗೆಲ್ಲ ಸಾರಾಸಗಟಾದ ಶೈಲಿಯಲ್ಲಿ ಬರೆಯಲ್ಪಟ್ಟಿರುವ ಈ ಉಲ್ಲೇಖಗಳಲ್ಲಿ, ಇಂತಹ ರೈಲು ಪ್ರಯಾಣ ಎಷ್ಟು ಬಾರಿ ಮತ್ತು ಯಾವ ಯಾವ ಸಂದರ್ಭಗಳಲ್ಲಿ ನಡೆದಿತ್ತು ಎಂಬ ಮಾಹಿತಿ ಮಾತ್ರ ಇಲ್ಲ. ಇದ್ದರೆ ಚೆನ್ನಿತ್ತು! ಏಕೆಂದರೆ, ಈಗ ಎಲ್ಲ ರಾಜಕೀಯ ಪಕ್ಷಗಳೂ ಮತ್ತು ಆಂದೋಲನಗಳೂ ಸಮಾವೇಶ, ರ್‍ಯಾಲಿಗಳಂತಹ ವಿಶೇಷ ಸಂದರ್ಭಗಳಿಗಾಗಿ ಎಲ್ಲ ದರ್ಜೆಗಳ ಹಲವು ಬೋಗಿಗಳನ್ನೋ ಅಥವಾ ಇಡೀ ರೈಲನ್ನೋ ಮುಂಗಡ ಕಾದಿರಿಸಿ; ಕೆಲವೊಮ್ಮೆ ಕಾದಿರಿಸದೆಯೇ ದಾದಾಗಿರಿ ಮೂಲಕ ಟಿಕೆಟ್ ರಹಿತವಾಗಿಯೇ ಪ್ರಯಾಣ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ರಾಷ್ಟ್ರೀಯ ಚಳುವಳಿಯ ಮುಖ್ಯ ಸಂದರ್ಭಗಳಲ್ಲಿ, ಅದರ ನೇತೃತ್ವ ವಹಿಸಿದ್ದ ಗಾಂಧೀಜಿಯವರ ರೈಲು ಪ್ರಯಾಣ ಇವರು ಹೇಳುವ ರೀತಿಯಲ್ಲಿ ಇದ್ದಲ್ಲಿ ಅದರಲ್ಲಿ ವಾಸು ಅವರು ಸೂಚಿಸುತ್ತಿರುವಂತೆ, ಖಂಡನಾರ್ಹವಾದದ್ದು ಏನಿದೆಯೋ ತಿಳಿಯದಾಗಿದೆ! ಇದನ್ನೆಲ್ಲ ಗಾಂಧೀಜಿಯ ವೈಯುಕ್ತಿಕ ಅನುಕೂಲಕ್ಕಾಗಿ ಮಾಡಲಾಗುತ್ತಿತ್ತೆಂದು ವಾಸು ಅವರು ಸೂಚಿಸುತ್ತಿದ್ದಾರೆಯೇ? ಗಾಂಧಿ ಮತ್ತು ಅವರ ಪರಿವಾರಕ್ಕೆ ಬ್ರಿಟಿಷ್ ಸರ್ಕಾರ ಪುಕ್ಕಟೆ ಪ್ರಯಾಣದ ಸೌಲಭ್ಯವನ್ನೇನೂ ಒದಗಿಸುತ್ತಿರಲಿಲ್ಲ ವೆಂದು ನಾನು ಭಾವಿಸಿದ್ದೇನೆ. ಹಾಗೇ ಗಾಂಧಿ ತಮ್ಮ ಪ್ರಯಾಣದ ಸಂದರ್ಭದಲ್ಲಿ ಅಗತ್ಯಕ್ಕಿಂತ ಹೆಚ್ಚು ಜನರನ್ನು ತಮ್ಮೊಡನೆ ಕರೆದುಕೊಂಡು ಹೋಗುವ ಬೇಜವಾಬ್ದಾರಿಯ ಮನುಷ್ಯರಾಗಿರಲಿಲ್ಲ ಮತ್ತು ಅವರಿಗೆ ಪ್ರತಿದಿನ ತಮ್ಮದೇ ಆದ ಖಾಸಗಿ ಕ್ಷಣಗಳೂ ಇದ್ದವು ಹಾಗೂ ಅವನ್ನು ಜೋಪಾನವಾಗಿ ಕಾಪಾಡಿಕೊಳ್ಳುತ್ತಿದ್ದರು ಎಂಬುದು, ಹಲವರಿಂದ ದಾಖಲಾಗಿರುವ ಅವರ ಸಾರ್ವತ್ರಿಕ ಜೀವನ ಶೈಲಿಯ ವಿವರಗಳನ್ನು ಬಲ್ಲ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಗಾಂಧಿಯವರ ರೈಲು ಪ್ರಯಾಣಗಳ ಸಂದರ್ಭದಲ್ಲಿ ಪ್ರತಿ ನಿಲ್ದಾಣದಲ್ಲೂ ಜನ ಸಾಮಾನ್ಯರು ಹೇಗೆ ಅವರ ನಿದ್ರೆ–ವಿಶ್ರಾಂತಿಗಳ ಅಗತ್ಯವನ್ನೂ ಲೆಕ್ಕಿಸದೆ ಬೋಗಿಯನ್ನು ಮುತ್ತುತ್ತಿದ್ದರು, ಅವರ ಸ್ಪರ್ಶಕ್ಕಾಗಿ, ದರ್ಶನಕ್ಕಾಗಿ ಹಾತೊರೆಯು ತ್ತಿದ್ದರು ಎಂಬುದರ ವಿವರಗಳನ್ನು ಬಲ್ಲ ಯಾರೂ ಅವರ ರೈಲು ಪ್ರಯಾಣವನ್ನು ಹೀಗೆ

ಹೀಗಳೆಯಲಾರರು. ಅಮೆರಿಕಾದ ಬರ್ಕ್‌ವೈಟ್ ಅವರಿಗೆ ಇಂತಹುದೆಲ್ಲ ವಿಚಿತ್ರವಾಗಿಯೋ, ಹಾಸ್ಯಾಸ್ಪದವಾಗಿಯೋ ಕಂಡಿರಬಹುದು. ಆದರೆ ದುಡಿಯುವ ವರ್ಗಗಳ ನೇರ ಪ್ರತಿನಿಧಿ ಎಂದು ಹೇಳಿಕೊಳ್ಳುವ ವಾಸು ಅವರಿಗೂ ಹಾಗೆ ಕಂಡಿದ್ದರೆ, ಅದಕ್ಕೆ ಬೇರೇನೋ ಕಾರಣವಿರಬೇಕು!

ಗಾಂಧಿ ತಮ್ಮ ಬದುಕಿನ ಕೊನೆಯ ಎರಡು ವರ್ಷಗಳ ಬಹುಭಾಗವನ್ನು ಭಂಗಿ ಕಾಲೋನಿಗಳಲ್ಲೇ(ಉಳಿದ ಕಾಲವನ್ನು ನೌಖಾಲಿಯಲ್ಲಿ) ಕಳೆದರೆಂಬುದು ಅವರ ಜೀವನ ಚರಿತ್ರೆಗಳನ್ನು(ಕನಿಷ್ಠ 'ಹಿಂದೂ' ಪತ್ರಿಕೆ ಹೊರತಂದಿರುವ ಗಾಂಧೀಜಿಯ ಕೊನೆಯ ದಿನಗಳ ಪತ್ರಿಕಾ ವರದಿಗಳನ್ನೊಳಗೊಂಡ ಸಂಪುಟವನ್ನಾದರೂ) ಓದಿದ ಎಲ್ಲರೂ ಬಲ್ಲರು. ಗೃಹ ಮಂತ್ರಿಯಾಗಿದ್ದ ಪಟೇಲರು ಕೊಲೆ ಸಂಚಿನ ಗುಪ್ತಚರ ವರದಿಗಳನ್ನು ಉಲ್ಲೇಖಿಸಿ, ಭದ್ರತೆಯ ದೃಷ್ಟಿಯಿಂದ ಭಂಗಿ ಕಾಲೋನಿಯನ್ನು(ಆಗ ಭಂಗಿ ಕಾಲೋನಿಗೆ ರಾಷ್ಟ್ರ ವಿಭಜನೆಯ ನಿರಾಶ್ರಿತರ ಪ್ರವಾಹವೇ ಹರಿದು ಬಂದಿತ್ತು) ಬಿಟ್ಟು ಬರಬೇಕೆಂದು ಗಾಂಧಿಯವರನ್ನು ಎಷ್ಟೇ ಆಗ್ರಹಿಸಿದರೂ, ಗಾಂಧೀಜಿ ಸ್ವಲ್ಪ ಕಟುವಾಗಿಯೇ ಅವರ ಆಗ್ರಹವನ್ನು ತಿರಸ್ಕರಿಸಿದರು ಮತ್ತು ಭಂಗಿ ಕಾಲೋನಿಯನ್ನು ಬಿಟ್ಟು ಬರಲು ನಿರಾಕರಿಸಿದರು. ಪ್ರತಿದಿನ ಸಂಜೆ ಅವರು ಸಾರ್ವತ್ರಿಕ ಪ್ರಾರ್ಥನೆಗಾಗಿ ಬಿರ್ಲಾ ಭವನಕ್ಕೆ ಹೋಗುತ್ತಿದ್ದರು. ಈ ಪ್ರಯಾಣವನ್ನು ಅವರು ಬಿರ್ಲಾನ ಹಾಲು ಬಿಳುಪಿನ ಪೆಕಾರ್ಡ್ ಕಾರಿನಲ್ಲಿ ಮಾಡುತ್ತಿದ್ದರೆಂದು ಬರ್ಕ್‌ವೈಟ್‌ಳನ್ನು ಉಲ್ಲೇಖಿಸಿ ವ್ಯಂಗ್ಯವಾಡುವ ವಾಸು ಅವರು, ಗಾಂಧಿ ಆ ೧೦-೧೫ ಕಿ.ಮೀ. ದೂರವನ್ನು ನಡೆದು ಅಥವಾ ಆಗ ಪ್ರಚಲಿತವಿದ್ದ ಅತಿ ಕಡಿಮೆ ವೆಚ್ಚದ ಮನುಷ್ಯರೆಳೆಯುವ ಗಾಡಿಯಲ್ಲಿ ಕ್ರಮಿಸಬೇಕಿತ್ತೆಂದು(ಈ ಮನುಷ್ಯರೆಳೆಯುವ ಗಾಡಿ ವ್ಯವಸ್ಥೆ ವಿರುದ್ಧ ಗಾಂಧಿ ವೈಸ್‌ರಾಯ್ ಭವನದವರೆಗೆ ಆರು ಕಿ.ಮೀ. ನಡೆದು ಪ್ರತಿಭಟಿಸಿದ್ದನ್ನು ಬರ್ಕ್‌ವೈಟ್ ಅವರೇ ಚಿತ್ರೀಕರಿಸಿ ತಮ್ಮ ಚಿತ್ರ ಸಂಪುಟದಲ್ಲಿ ಸೇರಿಸಿದ್ದಾರೆ.) ನಿರೀಕ್ಷಿಸಿದ್ದರೆಂದು ಕಾಣುತ್ತದೆ! ತಾವೀಗ ಪೌರ ಕಾರ್ಮಿಕರ ನಡುವೆಯೇ ಬಾಳುತ್ತಿರುವುದಾಗಿ ಹೆಮ್ಮೆಯಿಂದ ಬರೆದುಕೊಂಡಿರುವ ವಾಸು ಅವರು ಬಹುಶಃ ಗಾಂಧೀಜಿಯನ್ನು ತಮ್ಮ ಸ್ಥಾನದಲ್ಲಿ ಕಲ್ಪಿಸಿಕೊಂಡು ಹೀಗೆಲ್ಲ ನಿರೀಕ್ಷಿಸುತ್ತಿದ್ದಾರಾನೇನೋ ತಿಳಿಯದು! ಆದರೆ ಗಾಂಧೀಜಿ ಪೂರೈಸಬೇಕಾಗಿದ್ದ ನಿರೀಕ್ಷೆಗಳು ಇಷ್ಟು ಸರಳವಾಗಿರದೆ, ನಮ್ಮ ಕಲ್ಪನೆಗೂ ಮೀರಿದ ಪ್ರಮಾಣದಲ್ಲಿ ಬಹುಮುಖವಾಗಿದ್ದುವೆಂದು ಕಾಣುತ್ತದೆ. ಹಾಗೇ, ಗಾಂಧಿ ಯಾವುದೇ ಗುಪ್ತ Political Agenda ಇಲ್ಲದೆ ತಮ್ಮದೇ ಆಳದ ಬದ್ಧತೆಯ ಕಾರಣದಿಂದಾಗಷ್ಟೇ ಭಂಗಿಗಳು ಮತ್ತು ಅಸ್ಪೃಶ್ಯರ ನಡುವೆ ವಾಸ ಮಾಡುತ್ತಿದ್ದುದರಿಂದ, ಅವರು ತಮ್ಮ ಆಯ್ಕೆಗಳ ಮೂಲಕ ಯಾರನ್ನಾದರೂ ಮೆಚ್ಚಿಸುವ ಅಥವಾ ಓಲೈಸುವ ಅಗತ್ಯವಿರಲಿಲ್ಲ ವೆಂದೂ ತೋರುತ್ತದೆ.

ವಾಸುರಂತಹವರು ಒಪ್ಪಲಿ ಬಿಡಲಿ, ಗಾಂಧಿ ಜಗತ್ತೇ ಮಾನ್ಯ ಮಾಡಿದಂತೆ ಒಬ್ಬ ಯುಗ ಪುರುಷ. ಬಹುಶಃ ಕಳೆದ ಶತಮಾನದಲ್ಲಿ ಈತನಷ್ಟು ಚರ್ಚೆಯಾದ ವ್ಯಕ್ತಿ ಮತ್ತು ಈತನ ಬಗ್ಗೆ ಜಗತ್ತಿನ ವಿವಿಧ ಭಾಗಗಳಿಂದ ಬಂದಷ್ಟು ಸಾಹಿತ್ಯ ಇನ್ನಾವ ವ್ಯಕ್ತಿತ್ವದ ಬಗ್ಗೆಯೂ ಬಂದಂತಿಲ್ಲ. ಅವರದು ಸದಾ ವಿಕಾಸವಾಗುತ್ತಾ ಹೋದ ಬಹುಮುಖ ವ್ಯಕ್ತಿತ್ವ. ಹಾಗಾಗಿಯೇ, ತಮ್ಮ Agendaಗೆ ದೊಡ್ಡ ಅಡ್ಡಿಯಾಗಿದ್ದಾರೆಂದು ಅವರನ್ನು

ಟೀಕಿಸಲೆಂದೇ ಹೊಂಚು ಹಾಕುತ್ತಿರುವವರಿಗೆ ಅವರಲ್ಲಿ ಅನೇಕ ವಿರೋಧಾಭಾಸಗಳು ಕಾಣುತ್ತವೆ. ಅವರು ತಮ್ಮ ಬದುಕಿನ ನಾಲ್ಕೂ ದಿಕ್ಕುಗಳಿಂದ–ಹಿಂದೂ ಸಂಪ್ರದಾಯ ವಾದಿಗಳು, ಮುಸ್ಲಿಂ ಕೋಮುವಾದಿಗಳು, ಕಮ್ಯುನಿಸ್ಟರು ಮತ್ತು ಒಳಗಿನಿಂದಲೇ ಕಾಂಗ್ರೆಸ್ಸಿಗರು–ವಿರೋಧ ಹಾಗೂ ಟೀಕೆಗಳನ್ನು ಎದುರಿಸುತ್ತಾ ತಮ್ಮ ವ್ಯಕ್ತಿತ್ವನ್ನು ಸಾಧಿಸಿಕೊಂಡವರು. ಇವೆಲ್ಲವನ್ನೂ ಸಮಗ್ರತೆಯಲ್ಲಿ ಅರಿತೇ ಗಾಂಧಿ ವಿಮರ್ಶೆ ಮಾಡಬೇಕಾಗುತ್ತದೆ. ಯಾವುದೋ ಪುಸ್ತಕದ ನಾಲ್ಕಾರು ಸಾಲುಗಳನ್ನು ಆಯ್ದು ಉಲ್ಲೇಖಿಸಿ, ತಮ್ಮ ಅಗತ್ಯಕ್ಕೆ ತಕ್ಕಂತೆ ಅರ್ಥೈಸುವ ಮೂಲಕ ಅಲ್ಲ. ಏಕೆಂದರೆ, ಗಾಂಧಿ ವ್ಯಕ್ತಿತ್ವವನ್ನು 'ಬಯಲು'ಗೊಳಿಸುವ ಪ್ರಯತ್ನವಾಗಿ ವಾಸು ಅವರು ಉಲ್ಲೇಖಿಸುವ ಬರ್ಕ್‌ವೈಟ್ ಅವರ ಈ ಎಲ್ಲ ಆಯ್ದ ಮಾತುಗಳ ಇಡೀ ಗುಚ್ಛವನ್ನು ನಾನು ಅಂತರ್ಜಾಲದಲ್ಲಿನ Marxist Internet Archives ಎಂಬ ಚರ್ಚಾ ವೇದಿಕೆಯಲ್ಲಿ ಯಥಾವತ್ ಕಂಡು ದಂಗಾಗಿ ಹೋದೆ! ನಾನು ಹೇಳಿದ ಸುಲಭಸಿದ್ಧ 'ಪ್ರಗತಿಪರ' ಮಾದರಿ ಎಂದರೆ ಇದೇ! ಆದರೆ ಇದು ಜಾಗತಿಕ ಮಟ್ಟದಲ್ಲಿಯೂ ಲಭ್ಯವಿದೆ ಎಂದು ನನಗೆ ಗೊತ್ತಾದದ್ದು ಮಾತ್ರ ಈಗಲೇ!

ಗಾಂಧಿ ಬಗ್ಗೆ, ಅವರೊಂದಿಗೇ ಇದ್ದವರು ಮತ್ತು ಹತ್ತಿರದಿಂದ ಕಂಡವರೂ ಸೇರಿದಂತೆ ಅನೇಕ ಬಗೆಯ ಜನರಿಂದ ವಿಫುಲ ಸಾಹಿತ್ಯ ಬಂದಿದೆ. ಅವರನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ವಿಶ್ಲೇಷಿಸಲಾಗಿದೆ. ಅವನ್ನು ಒಂಚೂರೂ ಗಮನಿಸದೆ, ಗಾಂಧಿ ಅಂತಿಮವಾಗಿ ಇಡಿಯಾಗಿ ಹೇಗೆ ಕಾಣುತ್ತಾರೆ ಎಂಬುದರ ಕಲ್ಪನೆಯೂ ಇಲ್ಲದೆ, ಕೆಲವು ತಿಂಗಳುಗಳ ಕಾಲ ಪ್ರವಾಸಿಯಾಗಿ–ಅದೂ ಒಂದು assaignment ಮೇಲೆ–ಬಂದ ಪತ್ರಕರ್ತೆಯ ಮಾತುಗಳನ್ನೇ ವೇದವಾಕ್ಯಗಳೆಂಬಂತೆ ನಂಬಿ ಅಥವಾ ಅವರ ಬಗ್ಗೆ ನಿರ್ಣಯಾತ್ಮಕ ಮಾತುಗಳನ್ನು ಆಡುವುದು ಕೆಟ್ಟ ವೃತ್ತಿ ರಾಜಕಾರಣ ಮಾತ್ರವಾಗುತ್ತದೆ. ಈ ಅರ್ಥದಲ್ಲೇ, ಗಾಂಧೀಜಿ ಬಿರ್ಲಾ ಭವನದ ಹತ್ತಿರವೇ ಇದ್ದ (ನಿಜವಾಗಿ?) ಬಿರ್ಲಾನ ಕಾರ್ಖಾನೆಯ ಕಾರ್ಮಿಕರ ನಿವಾಸಗಳತ್ತ ಏಕೆ ವಾಯು ವಿಹಾರ(ಗಾಂಧೀಜಿಗೆ ವಾಯು ವಿಹಾರದ ಹವ್ಯಾಸವಿತ್ತೆ ಎಂಬುದು ಬೇರೆ ಪ್ರಶ್ನೆ!) ಕೈಗೊಳ್ಳಲಿಲ್ಲ ಎಂದು ಕೇಳುವುದು ಬಾಲಿಷತನ ಮಾತ್ರವೆನಿಸುತ್ತದೆ. ಮೇಲೆ ಪ್ರಸ್ತಾಪಿಸಿದ ಜಾಲ ತಾಣದಲ್ಲಿ ಬಿರ್ಲಾ ಕಾರ್ಮಿಕರು ಬಿರ್ಲಾ ವಿರುದ್ಧ ದೂರು ಸಲ್ಲಿಸಿದರೂ, ಗಾಂಧಿ ಆ ಕಡೆ ಗಮನವನ್ನೇ ಹರಿಸಲಿಲ್ಲ ಎಂದೂ ಆಪಾದಿಸಲಾಗಿದೆ. ಗಾಂಧಿ ವ್ಯಕ್ತಿತ್ವವನ್ನು ಸಮಗ್ರವಾಗಿ ಅರಿತ ಯಾರೂ ಇದನ್ನು ಅದರ ಮುಖ ಬೆಲೆಯಲ್ಲಿ ಒಪ್ಪಿಕೊಳ್ಳಲಾರರು. ಏಕೆಂದರೆ, ಬಿರ್ಲಾರಂತೆಯೇ ಗಾಂಧೀಜಿಯ ಚಟುವಟಿಕೆಗಳಿಗೆ ಹಣಕಾಸು ಒದಗಿಸುತ್ತಿದ್ದ ಅಹಮದಾಬಾದ್‌ನ ಅಂಬಾಲಾಲ್ ಸಾರಾಭಾಯ್ ಮೆಹ್ತಾರ ಗಿರಣಿ ಕಾರ್ಮಿಕರ ಕರೆಗೆ ಓಗೊಟ್ಟು ಅವರು ಆತನ ವಿರುದ್ಧವೇ ಮುಷ್ಕರದ ನೇತೃತ್ವ ವಹಿಸಲು ಹಿಂಜರಿಯಲಿಲ್ಲ. ಅಂದ ಮಾತ್ರಕ್ಕೆ ನಾನು ಗಾಂಧಿ–ಬಿರ್ಲಾ ಸಂಬಂಧವನ್ನು ಅವಿಮರ್ಶಾತ್ಮಕವಾಗಿ ಒಪ್ಪಬೇಕೆಂದೇನೂ ಇಲ್ಲಿ ಹೇಳುತ್ತಿಲ್ಲ. ಆದರೆ ಈ ಸಂಬಂಧವನ್ನು ಸಾರಾಸಗಟಾಗಿ ಗಾಂಧಿ ವ್ಯಕ್ತಿತ್ವದ ಪ್ರಾಮಾಣಿಕತೆಯನ್ನೇ ಪ್ರಶ್ನಿಸಲು ಬಳಸಿಕೊಳ್ಳುವುದು ಉಚಿತವಲ್ಲವೆಂದಷ್ಟೇ ನನ್ನ ಅಭಿಪ್ರಾಯ.

ಗಾಂಧಿ ಯಾರದೇ ಒಡನಾಟದಿಂದ ತಮ್ಮ ವ್ಯಕ್ತಿತ್ವ ಕಲುಷಿತವಾಗುತ್ತವೆಂದು ಭಾವಿಸುವಷ್ಟು ದುರ್ಬಲರಾಗಿರಲಿಲ್ಲ. ಬದುಕಿನುದ್ದಕ್ಕೂ ಅವರು ಬಂಡವಾಳಶಾಹಿಗಳು.

ಸಮಾಜವಾದಿಗಳು, ಮಾರ್ಕ್ಸ್‌ವಾದಿಗಳು, ಧಾರ್ಮಿಕ ಸಂಪ್ರದಾಯವಾದಿಗಳು, ವಿಚಾರವಾದಿಗಳು ಎಲ್ಲರೊಡನೆಯೂ ಮುಕ್ತ ಮನಸ್ಸಿನಿಂದ ಬೆರೆಯುತ್ತಿದ್ದರು, ಸಂವಾದಿಸುತ್ತಿದ್ದರು. ಅವರಿಂದ ಕಲಿಯುತ್ತಿದ್ದರು, ಆರ್ಥಿಕ-ಸಾಮಾಜಿಕ-ರಾಜಕೀಯ-ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ತಮಗನ್ನಿಸಿದ್ದನ್ನು ಅವರಿಗೆ ನೇರವಾಗಿ ಹೇಳುತ್ತಿದ್ದರು. ಏಕೆಂದರೆ, ಅವರು ಈ ಎಲ್ಲ ವರ್ಗೀಕರಣಗಳನ್ನು ಮೀರಿ ತಮ್ಮದೇ ನಿಜದ ಹಾದಿ ತುಳಿದಿದ್ದರು. ಅವರ ಈ ಹಾದಿಯನ್ನು, ಅದರ ಹಿಂದಿನ ಚಿಂತನೆಗಳನ್ನು ಒಪ್ಪುವುದು ಬಿಡುವುದು ಬೇರೆ ವಿಷಯ. (ಹಾಗೇ ನೋಡಿದರೆ, ಅವರ ಚಿಂತನೆಗಳ ಬಗ್ಗೆ ವಸ್ತುನಿಷ್ಠ ಟೀಕೆ ವ್ಯಕ್ತವಾಗಿರುವುದು ಸಮಾಜವಾದಿಗಳಿಂದಲೇ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ, ಲೋಹಿಯಾ ತಮ್ಮ Guilty Men of India's Partition ಪುಸ್ತಕದಲ್ಲಿ ಮತ್ತು ಕಿಷನ್ ಪಟ್ನಾಯಕ್ ಅವರು ತಮ್ಮ 'ಪ್ರತಿ ಚಿಂತನೆ'ಯಲ್ಲಿ ಗಾಂಧಿಯವರ ಕೆಲವು ಚಿಂತನೆ ಮತ್ತು ಕಾರ್ಯಕ್ರಮಗಳ ಬಗ್ಗೆ ಆಡಿರುವ ಮಾತುಗಳು.) ಆದರೆ ಅವರ ವ್ಯಕ್ತಿತ್ವದ ಒಟ್ಟು ಪ್ರಾಮಾಣಿಕತೆಯನ್ನೇ ಪ್ರಶ್ನಿಸುವುದು ಮಾತ್ರ ದುರುದ್ದೇಶಪೂರ್ವಕ ಎನಿಸಿಕೊಳ್ಳುತ್ತದೆ. ಇದಕ್ಕಾಗಿ ಅಂಬೇಡ್ಕರರನ್ನು reference point ಆಗಿ ಬಳಸಿಕೊಳ್ಳುವುದು ಗಾಂಧಿ ಮತ್ತು ಅಂಬೇಡ್ಕರರಿಬ್ಬರಿಗೂ ಮಾಡುವ ದ್ರೋಹ ಕೂಡ ಆಗುತ್ತದೆ. ಏಕೆಂದರೆ ಹೀಗೆ ಅಂಬೇಡ್ಕರರನ್ನು ಬಳಸಿಕೊಳ್ಳುವವರು ಅಂತಿಮವಾಗಿ ಅಂಬೇಡ್ಕರರ ಚಿಂತನೆಗಳಿಗೇನೂ ಬದ್ಧರಾದವರೇನಲ್ಲ. ಅವರ ಅಜೆಂಡಾ ಮತ್ತು ಅದರ ಮಾರ್ಗ ತೀರಾ ಬೇರೆಯೇ ಇರುತ್ತದೆ. ಅಂಬೇಡ್ಕರ್ ಇಲ್ಲಿ ಅವರಿಗೆ ಒಂದು ಸಾಧನ ಮಾತ್ರ.

ವಾಸು ಅವರು ನಾನು ಸಾರ್ವಜನಿಕ ಜೀವನವನ್ನು ಪ್ರವೇಶಿಸಿ ಬರೆಯತೊಡಗಿದಾಗ ತಾವಿನ್ನೂ ಹುಟ್ಟಿಯೇ ಇರಲಿಲ್ಲವೆಂದಿದ್ದಾರೆ. ಮೊದಲಾಗಿ ನಾನು ಅವರಿಗೆ ತಿಳಿಸುವುದೇನೆಂದರೆ, ನಾನೆಂದೂ ಸಾರ್ವಜನಿಕ ಜೀವನದಲ್ಲಿ ಇರಲಿಲ್ಲ. ನಾನು ನನ್ನ ಕಾಲದ ಎಲ್ಲ ಚಳುವಳಿಗಳನ್ನೂ, ಸಾಮಾಜಿಕ-ಸಾಂಸ್ಕೃತಿಕ ಸಂಚಲನಗಳನ್ನೂ(ಮುಖ್ಯವಾಗಿ ಎಪ್ಪತ್ತರ ದಶಕದ ಸಮಾಜವಾದಿ, ಆನಂತರ ದಲಿತ ಮತ್ತು ರೈತ ಚಳುವಳಿಗಳನ್ನು; ಹಾಗೂ ದಲಿತ ಮತ್ತು ಬಂಡಾಯ ಸಾಹಿತ್ಯ ಚಳುವಳಿಗಳನ್ನು) ಅಂಚಿನಲ್ಲಿ ನಿಂತು ನೋಡಿದವನು, ಅವುಗಳಿಗೆ ಕಾಲಾನುಕಾಲಕ್ಕೆ ಪ್ರತಿಕ್ರಿಯಿಸುವ ಮೂಲಕ ಅವುಗಳೊಂದಿಗೆ ಸಂವಾದಿಸಿದವನು. ಆ ಮಟ್ಟಿಗೆ ಅವುಗಳೊಂದಿಗೆ ವಿಶಿಷ್ಟವೆನ್ನಬಹುದಾದ 'ಆತ್ಮೀಯ' ಸಂಬಂಧ ಬೆಳೆಸಿಕೊಂಡವನು. ಹಾಗಾಗಿ ಅವುಗಳ ಬಗ್ಗೆ ಸಹಾನುಭೂತಿಯಿಂದಲೇ, ಒಮ್ಮೊಮ್ಮೆ ಕಟುವಾಗಿ ಬರೆದವನು ಕೂಡ. ಅದರಿಂದಾಗಿ, ಸ್ವಯಂ ಮಹತ್ವದಿಂದ ನರಳುತ್ತಿದ್ದ ಚಿಲ್ಲರೆ ಪುಡಿಯಿಂದ ಕಟುವಾಗಿ ಅನ್ನಿಸಿಕೊಂಡವನು ಕೂಡಾ! ಇದರಿಂದಾಗಿ ಅವುಗಳ ಬಗ್ಗೆ ನನ್ನ ನಿಲುವುಗಳೇನೂ ಬದಲಾದಂತೆ ತೋರುವುದಿಲ್ಲ. ಹಾಗಾಗಿ, ವಾಸು ಅವರಂತೆ ಪೌರ ಕಾರ್ಮಿಕರ ನಡುವೆ ಬದುಕುತ್ತಿರುವ ಒಂದು ಕಾರಣದಿಂದಾಗಿಯೇ, ಯಾರಾದರೂ ಆ ಸಮುದಾಯದ ಬಗ್ಗೆ ಯಾರೂ ಹೇಳದಿದ್ದ ಸತ್ಯವನ್ನು ಈಗ ಹೇಳಿಯಾರು ಎಂದು ನಾನು ನಂಬುವುದಿಲ್ಲ. ಏಕೆಂದರೆ, ಒಂದು ಅಜೆಂಡಾ ಇಟ್ಟುಕೊಂಡು ಇನ್ನೊಂದು ಕೆಲಸ ಮಾಡುವವರಿಂದ ಯಾವ ಹೊಸ ಸತ್ಯವೂ ಹೊರಬೀಳಲಾರದು.

ವಾಸು ಅವರು ನನ್ನ ಮೇಲೆ ವ್ಯಂಗ್ಯದ ಆರೋಪ ಮಾಡಿದ್ದಾರೆ. ವ್ಯಂಗ್ಯ ಅವರ

copy right ಅಲ್ಲ ಎಂದು ನಾನು ಭಾವಿಸಿದ್ದೇನೆ. ನನ್ನ ವ್ಯಂಗ್ಯವೇನಿದ್ದರೂ ಅವರ ವ್ಯಂಗ್ಯಕ್ಕೆ ಉತ್ತರ ರೂಪದಲ್ಲಿ ವ್ಯಕ್ತವಾಗಿದೆಯಷ್ಟೆ. ಈ ಸಂಬಂಧ ನನ್ನ ಕೋರಿಕೆ ಇಷ್ಟೆ: ಗಂಭೀರ ಚರ್ಚೆಯ ಸಂದರ್ಭದಲ್ಲಿ ವ್ಯಂಗ್ಯ ಉಚಿತವಲ್ಲವೆಂದು ಭಾವಿಸುವವರು ಮೊದಲು ತಾವು ಅದನ್ನು ತ್ಯಜಿಸಿ ಚರ್ಚೆ ಆರಂಭಿಸಬೇಕು. ಜಾಗತೀಕರಣ ಎಲ್ಲರನ್ನೂ ಭ್ರಷ್ಟ ಮತ್ತು ದುಷ್ಟರನ್ನಾಗಿಸಬಲ್ಲುದು ಎಂಬ ನನ್ನ ಮಾತನ್ನು ವಾಸು ಅವರು ತಮ್ಮ ಪ್ರಿಯ ಪೌರ ಕಾರ್ಮಿಕರಿಗಷ್ಟೇ ಅನ್ವಯಿಸಿಕೊಂಡು ಮತ್ತು ಪೌರ ಕಾರ್ಮಿಕರ ಸಮಸ್ಯೆಗಳ ಬಗ್ಗೆ ನಾನು ಬರೆದಿರುವ ತೀವ್ರ ಸಹಮತದ ಮಾತುಗಳನ್ನು ಗಣನೆಗೇ ತೆಗೆದುಕೊಳ್ಳದೆ, 'ಸಮಾಜವಾದಿಗಳೆಂದರೆ ಕೇವಲ ಮಜಾವಾದಿಗಳು, ಅವರಲ್ಲಿ ಬಹುತೇಕರು ಕುಡುಕರು ಮತ್ತು ಭ್ರಷ್ಟರು; ಅವರ ಎಲ್ಲಾ ವಾದಗಳ ಕೇಂದ್ರ ಧಾತು ಅದೇ, ಎಂದು ಕೆಲವು ಉದಾಹರಣೆಗಳನ್ನು ಕೊಟ್ಟು ಬರೆದು ಬಿಟ್ಟರೆ ಚರ್ಚೆಗೆ ಏನು ಕೊಡುಗೆ ಸಲ್ಲಿಸದಂತಾಗುತ್ತದೆ?' ಎಂದು ಕೇಳಿದ್ದಾರೆ. ಸಮಾಜವಾದಿಗಳು ಇಂತಹ ಸಾರಾ ಸಗಟಾದ ಖಂಡನೆಗೆ ಮಾತ್ರ ಅರ್ಹರು ಮತ್ತು ಇಂದಿನ ರಾಜಕೀಯ ಸಮುದಾಯದಲ್ಲಿ ಅವರು ಮಾತ್ರ ಇಂತಹ ಟೀಕೆಗೆ ಅರ್ಹರು ಎಂದು ವಾಸು ಅವರಿಗೆ ಅನ್ನಿಸಿದ್ದರೆ ಅದನ್ನು ಹೇಳುವ ಹಕ್ಕನ್ನು ಅವರು ಹೊಂದಿದ್ದಾರೆ ಎಂದು ನಾನು ಇಲ್ಲಿ ತಿಳಿಸ ಬಯಸುವೆ. ಸ್ವತಃ ನಾನೇ ಸಮಾಜವಾದಿಗಳ ಸಭೆಗಳಲ್ಲಿಯೇ ಸುಮಾರು ಇದೇ ಅರ್ಥದ ಮಾತುಗಳನ್ನಾಡಿದ್ದೇನೆ. ಅದು ಸಮಾಜವಾದಿಗಳ ಆತ್ಮ ಸಾಕ್ಷಿಯನ್ನಾದರೂ ಕೆಣಕುವ, ಆ ಬಗೆಗಿನ ಚರ್ಚೆಯನ್ನಾದರೂ ಹುಟ್ಟು ಹಾಕುವ ಮತ್ತು ಇಂತಹ ಹೇಳಿಕೆಗಳು ಎಷ್ಟು ಸತ್ಯ, ಯಾವ ಉದ್ದೇಶದವು ಎಂದು ಪರಿಶೀಲಿಸುವ ರಚನಾತ್ಮಕ ಕೆಲಸವನ್ನಾದರೂ ಮಾಡುತ್ತದೆ. ಆದರೆ ಯಾರೂ ನಮ್ಮ ಅಥವಾ 'ನಮ್ಮವರ' ಬಗ್ಗೆ ಒಂದು ಟೀಕೆಯ ಮಾತನ್ನೂ ಆಡಬಾರದು ಎಂದು ನಿರೀಕ್ಷಿಸುವ, ಆಡಿದರೆ ಅಂತಹವರ ಮತ್ತು ಅವರು ನಂಬಿದ ತಾತ್ವಿಕತೆಯ ಅವಹೇಳನ ಶತಃಸಿದ್ಧ ಎಂದು ಎಚ್ಚರಿಸುವ ರಾಜಕಾರಣ, ಅದೆಷ್ಟು ಜನಪರತೆಯ ಬೊಬ್ಬೆ ಹೊಡೆದರೂ ಜನವಿರೋಧಿ ವ್ಯವಸ್ಥೆಯನ್ನಷ್ಟೇ ಸೃಷ್ಟಿಸಬಲ್ಲುದು.

('ಚಾರ್ವಾಕ' ಆಗಸ್ಟ್, ೨೦೦೯)

ಅನುಬಂಧ

ಗಾಂಧಿ ಮತ್ತು ಜಾಗತೀಕರಣ: ಒಂದು ಟಿಪ್ಪಣಿ

ಇತ್ತೀಚಿನ ದಿನಗಳಲ್ಲಿ ಒಂದು ನಿರ್ದಿಷ್ಟ ಸಾಮಾಜಿಕ–ಬೌದ್ಧಿಕ ವಲಯದಿಂದ–ವಿಶೇಷವಾಗಿ ದಲಿತ ಅಕಡೆಮಿಕ್ ವಲಯದಲ್ಲಿ–ಗಾಂಧೀಜಿಯ ವ್ಯಕ್ತಿತ್ವದ ರಾಜಕೀಯ–ಸಾಮಾಜಿಕ–ಆರ್ಥಿಕ ಆಯಾಮಗಳ ಪುನರ್ಮೌಲ್ಯಮಾಪನ ಆರಂಭವಾಗಿದೆ. ಈ ಮೌಲ್ಯಮಾಪನ ರೂಪದ ಅಧ್ಯಯನಗಳಲ್ಲಿ; ಕೆಲವು ತಾತ್ವಿಕ ನೆಲೆಗಳಲ್ಲಿ ನಡೆದಿದ್ದರೆ, ಕೆಲವು ವೈಯುಕ್ತಿಕ ಸ್ತರದಲ್ಲಿ ನಡೆದಿವೆ. ಇವೆರಡೂ ತರಹದ ಅಧ್ಯಯನ ಪ್ರಯತ್ನಗಳ ಹಿಂದಿರುವ ಪ್ರೇರಣೆ ಎಂದರೆ, ಜಾಗತೀಕರಣ ತೆರೆದಿಟ್ಟಿರುವ ಹೊಸ ಲೋಕದ ಆಕರ್ಷಣೆಗಳು ಮತ್ತು ಅವುಗಳ ಸುಖದಿಂದ ಭಾರತದ ಅಧೋಲೋಕ ಹಳೆಯ ತಾತ್ವಿಕ ಭಾರಗಳಿಂದಾಗಿ

ಎಲ್ಲಿ ವಂಚಿತವಾಗಿಬಿಡುವವೋ ಎಂಬ ಆತಂಕ. ಈ ಹಳೆಯ ತಾತ್ವಿಕ ಭಾರಗಳಿಗೆ ಗಾಂಧಿ ಪ್ರತೀಕವಾಗಿದ್ದಾರೆಂಬುದು ಈ ಅಧ್ಯಯನಗಳ ಆಧಾರ ನಂಬಿಕೆಯಾಗಿದೆ. ಹಾಗಾಗಿ ಈ ಅಧ್ಯಯನಗಳು ವರ್ತಮಾನದ ಪುನಾರಚನೆಯ ಪ್ರಯತ್ನಗಳಂತೆಯೂ ತೋರಿ ಕುತೂಹಲ ಹುಟ್ಟಿಸುವಂತಿವೆ.

ಗಾಂಧಿಯನ್ನು ಈ ಆಧಾರ ನಂಬಿಕೆಯ ನೆಲೆಯಲ್ಲಿ ನಿರಚನಗೊಳಿಸಲು ಬಹಳ ಬಾರಿ ಈ ಅಧ್ಯಯನಕಾರರು ಮತ್ತು ಟೀಕಾಕಾರರು ಅಂಬೇಡ್ಕರರನ್ನು ರಾಜಕೀಯ ಸಾಧನವಾಗಿ–ಭಿಂಣಟಣಜಡಿ ಠಿಯಟಣ ಆಗಿ–ಬಳಸುವುದೂ ಉಂಟು! ಉದಾಹರಣೆಗೆ, ಗಾಂಧಿ ಸಾಂಪ್ರದಾಯಿಕತೆಯ ಮತ್ತು ಅಂಬೇಡ್ಕರ್ ಆಧುನಿಕತೆಯ ಪ್ರತೀಕಗಳೆಂಬಂತೆ ಸರಳೀಕರಿಸಿ ಈ ಅಧ್ಯಯನಗಳಲ್ಲಿ ವಾದ ಮಂಡಿಸಲಾಗುತ್ತಿದೆ. ಅಷ್ಟೇ ಅಲ್ಲ, ಅಂಬೇಡ್ಕರ್ ಈಗ ಈ ಜಾಗತೀಕರಣದ ದಿನಗಳಲ್ಲಿ ಬದುಕಿದ್ದರೆ, ಅವರ ನಿಲುವುಗಳು ಏನಾಗಿರುತ್ತಿದ್ದವು ಎಂಬುದನ್ನು ಊಹಿಸಿ, ವಾದಿಸಿ; ಅವರು ಖಂಡಿತ ಖಾಸಗಿ ಬಂಡವಾಳದ ಪರವಾಗಿರುತ್ತಿದ್ದರು ಎಂದು ಹೇಳುತ್ತಾ, (ಉದಾ: ಚಂದ್ರಪ್ರಸಾದ್ ಭಾನ್ ಬರಹಗಳು) 'ದಲಿತ ಬಂಡವಾಳ' ಎಂಬ ಪರಿಕಲ್ಪನೆಯೊಂದನ್ನು ಪ್ರತಿಪಾದಿಸಲಾಗುತ್ತಿದೆ. ಆದರೆ ಈ ಪ್ರತಿಪಾದನೆ ಪೂರ್ಣವೆನಿಸಿಕೊಳ್ಳಬೇಕಾದರೆ, ಈ ಕಾಲದಲ್ಲಿ ಗಾಂಧಿ ಬದುಕಿದ್ದರೆ ಅವರ ನಿಲುವುಗಳು ಏನಾಗಿರುತ್ತಿದ್ದವು ಎಂಬುದನ್ನೂ (ಸಾಧಾರವಾಗಿ) ಊಹಿಸಿ ವಾದ ಮಾಡಬೇಕಾಗುತ್ತದೆ. ಆದರೆ ಹಾಗೆ ಮಾಡದೆ, ಹೀಗೆ ಏಕಪಕ್ಷೀಯವಾಗಿ ವರ್ತಮಾನದ ಪುನಾರಚನೆ ಮಾಡುವುದರಿಂದ, ಈ ಪುನಾರಚನೆಗೆ ಮೂಲ ಪ್ರೇರಣೆ ಒದಗಿಸಿದ ಆಧಾರ ನಂಬಿಕೆಗೇ ಅನ್ಯಾಯವೆಸಗಿದಂತಾಗುತ್ತದೆ! ಆದರೆ ಇದನ್ನು ಮರೆಮಾಚಲೋ ಎಂಬಂತೆ, ಈ ಪ್ರತಿಪಾದನೆಯ ಭಾಗವೆಂಬಂತೆ ಪ್ರಸ್ತುತಪಡಿಸುವ ಅಧ್ಯಯನಗಳ ವೇಷದಲ್ಲಿ ಗಾಂಧಿಯ ಚಾರಿತ್ರ್ಯ ವಧೆಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಗಾಂಧೀಜಿಯನ್ನು ಕಳೆದ ಶತಮಾನದ ಮೇಲ್ಜಾತಿ–ಮೇಲ್ವರ್ಗಗಳ ರಾಜಕೀಯ ಪಿತೂರಿಯ ನಾಯಕನಂತೆ ಮಂಡಿಸುವ ಚರಿತ್ರೆಯ ಇಂತಹ ಪುನಾರಚನೆಯ ಪ್ರಯತ್ನಗಳ ಹಿಂದಿರುವುದು ಪೂರ್ಣ ಜಾತಿ ದೃಷ್ಟಿಯೇ. ಇದನ್ನು ಸಮರ್ಥಿಸಿಕೊಳ್ಳಲು ಇಲ್ಲಿ ವಸಾಹತುಶಾಹಿ ರಾಜಕಾರಣದ (ಶೋಷಣಾ) ಸ್ವರೂಪವನ್ನೇ ಮರೆಮಾಚಲಾಗಿದೆ ಅಥವಾ ಅಲ್ಲಗಳೆಯಲಾಗಿದೆ. ಕೆಲವು ಪ್ರಸಂಗಗಳಲ್ಲಿ ವೈಭವೀಕರಿಸಲಾಗಿದೆ ಕೂಡ! (ಉದಾ: ಎಂ.ಪಿ.ಉಮೇಶಚಂದ್ರ ಅವರ ಬರಹಗಳು)

ಹೀಗೆ ಜಾತಿ ವ್ಯವಸ್ಥೆಯ ಕುರುಡಿನಲ್ಲಿ ವಸಾಹತುಶಾಹಿಯನ್ನು (ಆದರ್ಶ)ನಾಯಕನ ಸ್ಥಾನದಲ್ಲಿಟ್ಟು ನೋಡಿದ್ದರಿಂದಲೇ, ಗಾಂಧಿ ಈ 'ಅಧ್ಯಯನ'ಗಳಲ್ಲಿ ಖಳನಾಯಕರಂತೆ ನಿರೂಪಿತರಾಗಿದ್ದಾರೆ. ಅಂಬೇಡ್ಕರ್‌ರನ್ನು ದಲಿತರ ಮಧ್ಯೆ ಸ್ಥಾನೀಕರಿಸಿ, ಗಾಂಧಿಯನ್ನು ಮೇಲ್ಜಾತಿಗಳ ಮಧ್ಯೆ ಸ್ಥಾನೀಕರಿಸಿ ನೋಡುವ ಇಂತಹ ಅಧ್ಯಯನಗಳು ಮೇಲ್ನೋಟಕ್ಕೆ–ಹೊಸತನದ ಹುರುಪಿನಲ್ಲಿ–ಗತಿಶೀಲವೆನ್ನಿಸಿದರೂ, ಮೂಲತಃ ಜಾತಿಸ್ಥಿತ ನೋಟಗಳಾಗಿರುವುದರಿಂದ ಆತ್ಯಂತಿಕವಾಗಿ ಜಡವಾದಿ ಅಧ್ಯಯನಗಳೇ ಅನ್ನಿಸಿಕೊಳ್ಳುತ್ತವೆ. ಹೀಗಾಗಿ ಇವಾವುವೂ ಗಾಂಧಿ ಮಂಡಿಸಿದ ರಾಜಕೀಯ ದರ್ಶನದ ಮೂಲ ಸತ್ಯಗಳನ್ನು ಅಲುಗಾಡಿಸಲಾರವು; ನಾವು ಸಮಕಾಲೀನ ತಲ್ಲಣಗಳಿಗೆ ಸಿಕ್ಕಿ ಈ ಸತ್ಯಗಳ ತಾಳಿಕೆ–ಬಾಳಿಕೆಗಳ ಬಗ್ಗೆ ನಮ್ಮದೇ ಅನುಮಾನ, ಪ್ರಶ್ನೆಗಳನ್ನು ಎತ್ತಬಹುದಾದರೂ.

ಈ ಅನುಮಾನ ಅಥವಾ ಪ್ರಶ್ನೆಗಳು ಏಳುವುದೂ, ಗಾಂಧಿ 'ಆಧುನಿಕತೆ'ಯ ಪ್ರಶ್ನೆಯನ್ನು ನಿರ್ವಹಿಸಿದ ಬಗೆಯನ್ನು ನಾವು ಹೇಗೆ ಮತ್ತು ಯಾವ ನೆಲೆಯಲ್ಲಿ ನಿಂತು ಗ್ರಹಿಸಿದ್ದೇವೆ ಎಂಬುದನ್ನು ಅವಲಂಬಿಸಿಯೇ. ಗಾಂಧೀಜಿ ಆಧುನಿಕರಲ್ಲಿ ಆಧುನಿಕರಾಗಿದ್ದ ರಿಂದಲೇ, ಮೆಕಾಲೆ ಕಲ್ಪನೆಯ ಆಧುನಿಕ ವ್ಯವಸ್ಥೆಯ ಪ್ರತೀಕವಾಗಿದ್ದ ಬ್ರಿಟಿಷ್ ಪ್ರಭುತ್ವವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಮಣಿಸಲು ಅವರಿಗೆ ಸಾಧ್ಯವಾದದ್ದು. ಇದರ ಹಿಂದಿದ್ದ ಶಕ್ತಿ, ಪಶ್ಚಿಮದ ಆಧುನಿಕತೆ ಎಂಬುದು ಆತ್ಯಂತಿಕವಾಗಿ ಮಾನವ ನಾಗರೀಕತೆಯಯನ್ನು ನಿಶ್ಚೇಷ್ಟಿತಗೊಳಿಸುವ ರೋಗ ಎಂಬ ಅವರ ನಂಬಿಕೆ. ಗಾಂಧೀಜಿಯ ಈ ನಂಬಿಕೆಯನ್ನು ನಾವು ಎಷ್ಟರಮಟ್ಟಿಗೆ ಒಪ್ಪುತ್ತೇವೆ ಎಂಬುದನ್ನು ಅನುಸರಿಸಿ ನಾವು ಜಾಗತೀಕರಣವನ್ನು ಕುರಿತ ನಮ್ಮ ನಿಲವುಗಳನ್ನು ಸ್ಪಷ್ಟಗೊಳಿಸಕೊಳ್ಳಬಹುದಾಗಿದೆ. ಜಾಗತೀಕರಣ ಎಂಬುದು ಪಶ್ಚಿಮದ ಆಧುನಿಕತೆಯ ಅಶ್ಲೀಲ ರೂಪದ ಅನಾವರಣ ಎಂದು ಭಾವಿಸುವವರು ಒಂದು ಕಡೆ ಇದ್ದರೆ, ಅದು ಇತಿಹಾಸದಲ್ಲಿನ ವಂಚಿತರಿಗಾಗಿ ತೆರೆದಿರುವ ಅಪೂರ್ವ ಅವಕಾಶಗಳ ಹೆಬ್ಬಾಗಿಲು ಎಂದು ಭಾವಿಸುವವರು ಇನ್ನೊಂದೆಡೆ ಇದ್ದಾರೆ. ಈ ಮಧ್ಯೆ, ಈ ಎರಡು ತುದಿಗಳ ನಡುವೆ ರಾಜಕಾರಣ ಮಾಡುವ ವಿವಿಧ ಕ್ಷೇತ್ರಗಳ ಪುಢಾರಿಗಳು ಗಾಂಧಿಯನ್ನು ಮುಗಿಸಲು ಅವಕಾಶಗಳನ್ನು ಸೃಷ್ಟಿಸಿಕೊಳ್ಳುವ ತವಕದಲ್ಲಿದ್ದಾರೆ. ಇದು ಮತ್ತೆ ಜಾಗತೀಕರಣದ ಆಕರ್ಷಣೆಗಳು ನಮ್ಮ ನಾಟಕ, ಸಿನೆಮಾ, ಸಾಹಿತ್ಯ, ಸಂಶೋಧನೆ ಇತ್ಯಾದಿ ಕ್ಷೇತ್ರಗಳಲ್ಲಿ ಸೃಷ್ಟಿ ಮಾಡುತ್ತಿರುವ ಎಗ್ಗಿಲ್ಲದ mediocrity ಮತ್ತು ಅದಕ್ಕೆ ಸಿಗುತ್ತಿರುವ ಎಗ್ಗಿಲ್ಲದ ಮಾನ್ಯತೆಗಳಲ್ಲಿ ವ್ಯಕ್ತವಾಗುತ್ತಿದೆಯಷ್ಟೆ!

ಇತ್ತೀಚಿನ 'ಗಾಂಧಿ–ಅಂಬೇಡ್ಕರ್' ನಾಟಕದಲ್ಲಿ ಗಾಂಧಿ, ಅಂಬೇಡ್ಕರ್ ತಮ್ಮಲ್ಲಿಗೆ ಬಂದು ಹೋದ ಜಾಗವನ್ನು ಶುದ್ಧೀಕರಿಸುವ ಕಲ್ಪನೆ ಇದಕ್ಕೊಂದು ಉದಾಹರಣೆಯಷ್ಟೆ!

(ಸಕಾಲ, ಅಕ್ಟೋಬರ್ ೨೦೦೭)

ಗಾಂಧಿ ದರ್ಶನದ ಸರಳೀಕರಣದ ಅಪಾಯಗಳು

ಮನುಷ್ಯ ದೇವರಾಗುವ ತನಕ ಅವನಿಗೆ ಶಾಂತಿಯಿಲ್ಲ.
–ಮಹಾತ್ಮ ಗಾಂಧಿ

(ಮೇಲಿನ ವಾಕ್ಯದಲ್ಲಿ, ಅವನಿಗೆ ಎಂದರೆ ಮನುಷ್ಯನಿಗೋ ದೇವರಿಗೋ ಎಂಬುದು ನನಗಿನ್ನೂ ಸ್ಪಷ್ಟವಾಗಿಲ್ಲವಾದರೂ, ದೇವರ ಕಲ್ಪನೆಯನ್ನೇ ಅಲ್ಲಗಳೆಯುವವರು ಮತ್ತು ಮನುಷ್ಯ ದೇವರಾಗುವ ಸಾಧ್ಯತೆಯನ್ನೇ ನಿರಾಕರಿಸುವವರು ಈ ಲೇಖನವನ್ನು ಓದುವ ಅಗತ್ಯವಿಲ್ಲ ಎಂದು ಮೊದಲಿಗೇ ಹೇಳಬಯಸುವೆ.–ಲೇಖಕ.)

ಇತ್ತೀಚೆಗೆ ಇಂಗ್ಲಿಷ್ ಟಿ.ವಿ. ವಾಹಿನಿಯೊಂದು ಇಂಗ್ಲಿಷ್ ವಾರಪತ್ರಿಕೆಯೊಂದರೊಡನೆ ಸೇರಿ ಭಾರತದ ಆಧುನಿಕ ಇತಿಹಾಸದಲ್ಲಿ ಮಹಾತ್ಮ ಗಾಂಧಿ ನಂತರದ ಅತಿ ಮಹತ್ವದ ವ್ಯಕ್ತಿ ಯಾರು ಎಂಬ ಬಗ್ಗೆ ಸಮೀಕ್ಷೆಯೊಂದನ್ನು ನಡೆಸಿತು. ಅದರ ಫಲಿತಾಂಶಗಳನ್ನು ದೂರವಾಣಿ ಕರೆಗಳ ಮೂಲಕ ಮಾಡಲಾದ ಸಮೀಕ್ಷೆಯಲ್ಲಿ ಮೂಡಿದ ಹತ್ತು ಜನರ ಪಟ್ಟಿ, 'ವೈಜ್ಞಾನಿಕ ಮಾದರಿ' ಆಧಾರದ ಮೇಲೆ ಮಾಡಲಾದ ಸಮೀಕ್ಷೆಯಲ್ಲಿ ಮೂಡಿದ ಹತ್ತು ಜನರ ಪಟ್ಟಿ, ರಾಷ್ಟ್ರ ಮಟ್ಟದ ಚಿಂತಕರ ತಂಡವೊಂದು ಚರ್ಚಿಸಿ ಸಿದ್ಧ ಮಾಡಿದ ಹತ್ತು ಜನರ ಪಟ್ಟಿ ಮತ್ತು ಈ ಮೂರೂ ಪಟ್ಟಿಗಳನ್ನು ಗಮನದಲ್ಲಿಟ್ಟುಕೊಂಡು ಸಂಪಾದಕ ಬಳಗ ಒಟ್ಟಾರೆಯಾಗಿ ಶ್ರೇಣೀಕರಣ ಮಾಡಿ ಸಿದ್ಧಪಡಿಸಿರುವ ಹತ್ತು ಜನರ ಪಟ್ಟಿ –ಈ ನಾಲ್ಕು ಸ್ತರಗಳಲ್ಲಿ ಪ್ರಕಟಿಸಿದೆ. ಈ ನಾಲ್ಕು ಪಟ್ಟಿಗಳಲ್ಲಿ ಶ್ರೇಣೀಕರಣ ಬೇರೆ ಬೇರೆಯಾಗಿ ಕಂಡು ಬಂದಿದ್ದರೂ ಈ ನಾಲ್ಕೂ ಪಟ್ಟಿಗಳಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರು ಕಾಣಿಸಿಕೊಂಡಿರುವುದಲ್ಲದೆ, ಇದರಲ್ಲಿ ದೂರವಾಣಿ ಕರೆಗಳನ್ನಾಧರಿಸಿದ ಸಮೀಕ್ಷೆಯಲ್ಲಿ ಅಂಬೇಡ್ಕರ್ ಎಲ್ಲರಿಗಿಂತ ಬಹು ಮುಂದಿದ್ದು ಒಟ್ಟಾರೆ ಶ್ರೇಣೀಕರಣದ ಪಟ್ಟಿಯಲ್ಲಿ ಮೊದಲ ಸ್ಥಾನ ಗಳಿಸಿದ್ದಾರೆ.(ಆಶ್ಚರ್ಯವೆಂದರೆ, ನಂತರದಲ್ಲೇ ಇನ್ನೊಂದು ಟಿ.ವಿ. ವಾಹಿನಿ ನಡೆಸಿದ ಇದೇ ಮಹತ್ವದ ಐದು ಜನರ ಆಯ್ಕೆಯ 'ವೈಜ್ಞಾನಿಕ ಮಾದರಿ' ಸಮೀಕ್ಷೆಯಲ್ಲಿ ಅಂಬೇಡ್ಕರ್ ಹೆಸರು ಕಾಣದೇ ಹೋಗಿ, ಯಾವುದು 'ವೈಜ್ಞಾನಿಕ'ವೋ ಯಾವುದು 'ಅವೈಜ್ಞಾನಿಕ'ವೋ ಗೊತ್ತಾಗದೇ ಹೋಗಿದೆ!)

ಇದೆಲ್ಲದುದಕ್ಕಿಂತ ಈ ಸಮೀಕ್ಷೆಯ ಗಮನಾರ್ಹ ಸಂಗತಿಯೆಂದರೆ, ಈ ಸಮೀಕ್ಷೆಗಳನ್ನು ಪ್ರಕಟಿಸಿರುವ ವಾರ ಪತ್ರಿಕೆಯ ಈ ಅಂಬೇಡ್ಕರ್ ವಿಶೇಷ ಸಂಚಿಕೆಯ ಗೌರವ ಸಂಪಾದಕ ಸೂಚ್ಯವಾಗಿ ವ್ಯಕ್ತಪಡಿಸಿರುವ ಈ ಆಕ್ಷೇಪಣೆ: ಈ ಸಮೀಕ್ಷೆಗಾಗಿ ಆಯ್ಕೆಗಳನ್ನು ಗಾಂಧಿ ನಂತರ ಎಂದು ಏಕೆ ಸೀಮಿತಗೊಳಿಸಬೇಕಿತ್ತು? ಈ ಆಕ್ಷೇಪಣೆಯನ್ನು ಆತ

ವ್ಯಕ್ತಪಡಿಸಿರುವುದು, ಅಂಬೇಡ್ಕರ್‌ಗೆ ಮೊದಲ ಸ್ಥಾನ ನೀಡಿದ್ದ ದೂರವಾಣಿ ಕರೆಗಳನ್ನಾಧರಿಸಿದ ಸಮೀಕ್ಷೆಯಲ್ಲಿ ಬಹಳ ಜನ ಕೇಳಿದ್ದ ಇದೇ ಪ್ರಶ್ನೆಯನ್ನು ಪ್ರತಿಧ್ವನಿಸುತ್ತಾ. ಹಾಗಾಗಿ, ಈ ಪ್ರಶ್ನೆ ದೂರವಾಣಿ ಕರೆ ಸಮೀಕ್ಷೆಯಲ್ಲಿ ಮಾತ್ರ ಮುನ್ನೆಲೆಗೆ ಬಂದಿರುವುದರ ಕಾರಣವೇನಿರಬಹುದೆಂದು ನೋಡಿದರೆ ಈ ದೂರವಾಣಿ ಕರೆಗಳ ಹರಹಿನಲ್ಲಿ ಇದಕ್ಕೆ ಉತ್ತರ ದೊರೆಯುತ್ತದೆ. ಈ ಕರೆಗಳು ಅತಿ ಹೆಚ್ಚು ಬಂದಿರುವುದು ದಲಿತ ಮತ್ತು ಸಂಘ ಪರಿವಾರಗಳ ರಾಜಕಾರಣ ತೀವ್ರವಾಗಿರುವೆಡೆಗಳಿಂದ: ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಎರಡನೇ ಮತ್ತು ಮೂರನೇ ಸ್ಥಾನ ಕ್ರಮವಾಗಿ ಉತ್ತರ ಪ್ರದೇಶ ಮತ್ತು ಗುಜರಾತ್‌ಗಳದ್ದು. ನಂತರದ ಸ್ಥಾನಗಳು ದೆಹಲಿ, ಕರ್ನಾಟಕ, ಮಧ್ಯಪ್ರದೇಶ ಇತ್ಯಾದಿಗಳದ್ದು. ಅತಿ ಹೆಚ್ಚು ರಾಜಕೀಯ ಜಾಗೃತಿ ಹೊಂದಿದ ರಾಜ್ಯಗಳೆನಿಸಿದ ಕೇರಳ, ಬಂಗಾಲ ಮತ್ತು ತಮಿಳ್ನಾಡುಗಳು ಇಲ್ಲಿ ಎಲ್ಲೋ ಮೂಲೆ ಸೇರಿವೆ! ಹಾಗಾಗಿಯೇ ಈ ಸಮೀಕ್ಷೆಯಲ್ಲಿ ಅಂಬೇಡ್ಕರ್ ನಂತರದ ಸ್ಥಾನಗಳು ದೊರೆತಿರುವುದು ಅಬ್ದುಲ್ ಕಲಾಂ, ಸರ್ದಾರ್ ಪಟೇಲ್, ವಾಜಪೇಯಿ ಮುಂತಾದ ಸಂಘ ಪರಿವಾರದ ಅಭ್ಯರ್ಥಿಗಳಿಗೇ.

ಇಲ್ಲಿನ ಒಂದು ಸಮಾಧಾನದ ಸಂಗತಿಯೆಂದರೆ ಭಾರತದಲ್ಲಿ ದಲಿತ ಪರಿವಾರದ ಸಂಪರ್ಕ ಜಾಲ ಸಂಘ ಪರಿವಾರದ ಬ್ರಾಹ್ಮಣ-ಬನಿಯಾ ಸಂಪರ್ಕ ಜಾಲವನ್ನು ಹಿಂದಿಕ್ಕಿದೆ ಎಂಬುದು! (ದಲಿತ ಸಂಘಟನೆಗಳಿಂದ ನನಗೂ ಈ ಸಮೀಕ್ಷೆಯಲ್ಲಿ ಅಂಬೇಡ್ಕರ್ ಪರವಾಗಿ ದೂರವಾಣಿ ಕರೆ ಮಾಡಬೇಕೆಂದು ಕೋರಿ ಎರಡು-ಮೂರು ಸಂದೇಶಗಳು ಬಂದಿದ್ದವು.) ಈ ದೃಷ್ಟಿಯಿಂದ ನಮ್ಮ ದಲಿತ ಸಮುದಾಯ ಆಧುನಿಕ ತಂತ್ರಗಳ ವಿಷಯದಲ್ಲಿ ಸಾಕಷ್ಟು ಸಬಲೀಕರಣಗೊಂಡಿದೆ ಎಂದು ಹೇಳಿದರೆ, ಇದು ಮೀಸಲಾತಿ ವಿರೋಧಿ ಹೇಳಿಕೆ ಎಂದು ಯಾರೂ ತಪ್ಪು ತಿಳಿಯಲಾರರು ಎಂದು ಭಾವಿಸುವೆ! ಇರಲಿ, ಈ ದೂರವಾಣಿ ಕರೆಗಳನ್ನಾಧರಿಸಿದ ಸಮೀಕ್ಷೆಯ ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಆಧುನಿಕ ಭಾರತದ ನಿರ್ಮಾಪಕ ಎಂದೇ ಅಧಿಕೃತ ಇತಿಹಾಸದಲ್ಲಿ ದಾಖಲಾಗಿರುವ ರಾಷ್ಟ್ರದ ಮೊದಲ ಪ್ರಧಾನಿ ನೆಹ್ರೂ ಕೊನೆಯ ಸ್ಥಾನಕ್ಕೆ ದೂಡಲ್ಪಟ್ಟಿದ್ದಾರಷ್ಟೇ ಅಲ್ಲ, ಆಘಾತಕಾರಿ ಎನ್ನಿಸುವಷ್ಟು ನಿಕೃಷ್ಟ ಸಂಖ್ಯೆಯ 'ಮತ'ಗಳು ಅವರಿಗೆ ಬಿದ್ದಿವೆ.

ಗಾಂಧಿ ವಾರಸುದಾರಿಕೆ v/s ಅಂಬೇಡ್ಕರ್ ವಾರಸುದಾರಿಕೆ

ಈ ಸಮೀಕ್ಷೆಗಳ ಮಿತಿಗಳು ಮತ್ತು ರಾಜಕೀಯ ಉದ್ದೇಶಗಳೇನೇ ಇರಲಿ, ಇದರಿಂದ ಹೊಮ್ಮಿರುವ ಎರಡು ಸಂಗತಿಗಳು ನಮ್ಮ ಗಮನ ಸೆಳೆಯಬಲ್ಲವಾಗಿವೆ. ಒಂದು: ಗಾಂಧಿಯೇನೂ ನಮ್ಮ ಇತಿಹಾಸದ ಮೈಲಿಗಲ್ಲಾಗಬೇಕಿಲ್ಲ ಎಂಬುದಾದರೆ, ಇನ್ನೊಂದು ಸಮಕಾಲೀನ ಭಾರತೀಯ ಜನಾಂಗ ನೆಹ್ರೂಗೆ ಕೊನೆಯ ಸ್ಥಾನ ನೀಡಿರುವ ಮೂಲಕ ಸೂಚಿಸಿರುವ ಇತಿಹಾಸ ಕುರಿತ ತೀವ್ರತರವಾದ ಅವಜ್ಞೆ. ಇದು ಗಾಂಧಿ ಕುರಿತಂತೆಯೂ ಹೇಳಬಹುದಾದ ಮಾತು. ಈ ಸಂಬಂಧವಾಗಿಯೇ ಈ ಸಮೀಕ್ಷೆಯಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಇಲ್ಲಿ ಕೊನೆಯ ಸ್ಥಾನ ಪಡೆದ ನೆಹ್ರೂ ರಾಷ್ಟ್ರ ಮಟ್ಟದ ಚಿಂತಕರ ತಂಡದ ಆಯ್ಕೆ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದು, ರಾಷ್ಟ್ರದಲ್ಲಿ ಇಂದು ಉಂಟಾಗಿರುವ ಸಾಮಾನ್ಯ ಜನತೆ ಮತ್ತು ಬುದ್ಧಿಜೀವಿಗಳ ನಡುವಣ ದೊಡ್ಡ ಕಂದಕದ

ಆಘಾತಕಾರಿ ಸೂಚನೆ ನೀಡುತ್ತಿರುವುದು. ಇವೆಲ್ಲವೂ ಒಟ್ಟಿಗೆ ಸೇರಿ ನೀಡುತ್ತಿರುವ ಸ್ಪಷ್ಟ ಸೂಚನೆ ಎಂದರೆ, ಇತಿಹಾಸ ಜನಪ್ರಿಯ ನೆಲೆಯಲ್ಲಿ ಪುನಾರಚನೆಗೊಳ್ಳುತ್ತಿದ್ದು, ಇದರ ಹಿಂದೆ ನಮ್ಮ ಬದುಕಿನ ಮೂಲ ನಂಬಿಕೆಗಳು ಮತ್ತು ಒಟ್ಟಾರೆ ದೃಷ್ಟಿಕೋನವನ್ನು ನಿರ್ಣಾಯಕವಾಗಿ ಬದಲಿಸುತ್ತಿರುವ ಮತ್ತು ಆ ಮೂಲಕ ನಮ್ಮನ್ನು ನಿಧಾನವಾಗಿ ನಮಗೇ ಅಪರಿಚಿತಗೊಳಿಸುತ್ತಿರುವ ಮೋಡಿ ರಾಜಕಾರಣವೊಂದು ಕ್ರಿಯಾಶೀಲವಾಗಿದೆ ಎಂಬುದು. ಇದೇ ಇಂದು ಮಾಧ್ಯಮಗಳಲ್ಲಿ ಪದೆ ಪದೇ ಪ್ರಸ್ತಾಪವಾಗುತ್ತಿರುವ ಗಾಂಧಿ ವಾರಸುದಾರಿಕೆಯ ಕಾಲ ಮುಗಿದಿದೆಯೇ? ಎಂಬ ಪ್ರಶ್ನೆಗೆ ಕಾರಣವಾಗಿರುವುದು. ಮತ್ತು ಈ ಪ್ರಶ್ನೆ ಅಲ್ಲಿಗೇ ನಿಲ್ಲದೆ ಅಂಬೇಡ್ಕರ್ ವಾರಸುದಾರಿಕೆಯ ಕಾಲ ಆರಂಭವಾಗಿದೆಯೇ? ಎಂಬ ಪ್ರಶ್ನೆಯೊಂದಿಗೆ ಮುಂದುವರೆದು, ಈ ರಾಜಕಾರಣದ ಹಿಂದಿನ ಶಕ್ತಿಗಳು ಮತ್ತು ಉದ್ದೇಶಗಳ ಬಗ್ಗೆ ಭಯ-ಆತಂಕಗಳನ್ನು ಉಂಟು ಮಾಡಿರುವುದು. ಹಾಗೇ ಈ ಸಮೀಕ್ಷೆಯನ್ನು ಸ್ವಲ್ಪ ವಾರೆಗಣ್ಣಿನಲ್ಲಿ ನೋಡುವಂತೆ ಮಾಡಿರುವುದು: ಗಾಂಧಿ ಮತ್ತು ಅಂಬೇಡ್ಕರ್ ನಿಜವಾಗಿ ಪರಸ್ಪರ ರದ್ದುಗೊಳ್ಳುವಂತಹ ವ್ಯಕ್ತಿತ್ವಗಳೇ? ಒಬ್ಬರಿದ್ದೆಡೆ ಇನ್ನೊಬ್ಬರು ಇಲ್ಲದಿರಲಾರದಂತಹ ಐತಿಹಾಸಿಕ ಶಕ್ತಿಗಳೇ?

-೨-

ಗಾಂಧಿ ಕುರಿತ ಈ ಲೇಖನಕ್ಕೆ ಪೀಠಿಕೆಯಾಗಿ ಏಕೆ ಇದನ್ನೆಲ್ಲ ಹೇಳಬೇಕಾಗಿ ಬಂತೆಂದರೆ, ಗಾಂಧಿಯನ್ನು ಇಂದು ನೆನೆಯಲು, ಆ ಬಗ್ಗೆ ಮುಕ್ತವಾಗಿ ಮಾತಾಡಲು, ಬರೆಯಲು ಹೊರಟಾಗಲೆಲ್ಲ ನಮ್ಮ ಮನಸ್ಸು ಮತ್ತು ಬಾಯಿಗಳೆರಡಕ್ಕೂ ಅಡ್ಡವಾಗಿ ಹೇಗೆ ಹಲವು ಅಡೆತಡೆಗಳನ್ನು ಇತ್ತೀಚಿನ ದಿನಗಳಲ್ಲಿ ನಿರ್ಮಿಸಲಾಗಿದೆ ಎಂಬುದನ್ನು ಸೂಚಿಸಲು. ಒಂದು ಕಡೆ ಕಟ್ಟಾ ಅಂಬೇಡ್ಕರ್ ಪಂಥೀಯರು ಗಾಂಧಿಯನ್ನು 'ದಲಿತ ವಂಚಕ' ಎಂದು ಗುರುತಿಸಿ ಎಸೆಯುವ ಚೂಪಾದ ಪ್ರಶ್ನೆಗಳು, ಇನ್ನೊಂದೆಡೆ-ಬಹಳ ಜನರು ಗಮನಿಸದಿರುವ-ಸಂಘ ಪರಿವಾರದವರು ಗಾಂಧಿಯನ್ನು 'ಕ್ಷಮಿಸಿ' ತಮ್ಮ ಪರಿವಾರಕ್ಕೆ ಸೇರಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳ ಹಿಂದಿನ ರಾಜಕಾರಣ ಸೂಚಿಸುತ್ತಿರುವ ಅಪಾಯಗಳು.(ಈ ಪರಿವಾರದ 'ಬುದ್ಧಿಜೀವಿ'ಗಳಾಗಿ ಹೊರಹೊಮ್ಮಿರುವ ಸುಧೀಂದ್ರ ಕುಲಕರ್ಣಿ ಮತ್ತು ಬಲಬೀರ್ ಪೂಂಜಾ ಗಾಂಧಿ ಕುರಿತು ಇತ್ತೀಚೆಗೆ ಪ್ರಕಟಿಸಿರುವ ಪುಸ್ತಕಗಳನ್ನು ಗಮನಿಸಿ.) ಇವೆರಡೇ ಸಾಲದೆಂಬಂತೆ ಗಾಂಧಿ ಮತ್ತು ಅವರ ಮಗ ಹರಿಲಾಲ್ ನಡುವಣ ಸಂಘರ್ಷವನ್ನು ಕುರಿತು ಇತ್ತೀಚೆಗೆ ಒಂದಾದಮೇಲೊಂದರಂತೆ ರಂಗಪ್ರವೇಶಗೈಯುತ್ತಿರುವ ಸಿನಿಮಾ-ನಾಟಕಗಳು ಮತ್ತು ಅವು ಪಡೆಯುತ್ತಿರುವ ಸುಯೋಜಿತ ಪ್ರಚಾರ. ಜೊತೆಗೇ, ಗಾಂಧಿ ಅಧ್ಯಯನದ ಹೆಸರಲ್ಲಿ ವಿದೇಶಿ ಲೇಖಕರು ತಮ್ಮ ಪುಸ್ತಕಗಳ ಮೂಲಕ ಪ್ರಚುರಪಡಿಸುತ್ತಿರುವ ಗಾಂಧೀಜಿಯ ಲೈಂಗಿಕ ಪ್ರಯೋಗಗಳು, ತಥಾಕಥಿತ ಪ್ರೇಮ ಪ್ರಕರಣ ಮತ್ತು ಸಲಿಂಗಕಾಮ ಸಂಬಂಧ ಕುರಿತ ಕಥೆಗಳು. ಇವು ಗಾಂಧಿಯನ್ನು ಇಂದು ನೆನಪಿಸಿಕೊಳ್ಳುವ ಕೆಲಸವನ್ನು ಹೆಚ್ಚು ಕ್ಲಿಷ್ಟ, ಜಟಿಲ ಮತ್ತು ಸಂಕೀರ್ಣಗೊಳಿಸಿವೆ. ಬೌದ್ಧಿಕವಾಗಿ ಸುಸ್ತು ಮಾಡುವಂತಿವೆ.

ಗೋಡ್ಸೆಯ ನೀತಿ ಪುಸ್ತಕ

ಇದೆಲ್ಲದಕ್ಕೊಂದು ರೂಪಕವಾಗಿ ನನ್ನ ಪತ್ನಿ ಸವಿತಾ ಹೇಳಿದ ಪ್ರಸಂಗವೊಂದನ್ನು ಇಲ್ಲಿ ದಾಖಲಿಸಬೇಕು. ಸವಿತಾ ನಮ್ಮ ಮನೆಯ ಪಕ್ಕದಲ್ಲೇ ಇಟ್ಟಿರುವ 'ಗಾಂಧಿಗಿರಿ' ಎಂಬ ದೇಸಿ ವಸ್ತು ಮತ್ತು ಪುಸ್ತಕ ಮಾರಾಟ ಮಳಿಗೆಗೆ ಇತ್ತೀಚೆಗೆ ಶಿವಮೊಗ್ಗದ ಪ್ರತಿಷ್ಠಿತ ಶಾಲೆಯೊಂದರಲ್ಲಿ ಪಿಯುಸಿ ಓದುತ್ತಿರುವ 'ಸಾತ್ವಿಕ' ಕಳೆಯ ಹುಡುಗನೊಬ್ಬ ಬಂದು ಯಾವುದಾದರೂ 'ಒಳ್ಳೆಯ ನೀತಿ ಪುಸ್ತಕ' ಕೊಡಲು ಕೇಳಿದ. ಪಂಚತಂತ್ರ, ಈಸೋಪನ ನೀತಿ ಕಥೆಗಳಂತಹ ಪುಸ್ತಕಗಳನ್ನು ಓದುವ ವಯಸ್ಸನ್ನು ಮೀರಿದ ಈ ಹುಡುಗನಿಗೆ ಯಾವ ಪುಸ್ತಕ ಕೊಡುವುದೆಂದು ಯೋಚಿಸಿದ ಸವಿತಾ, ಪರಮಹಂಸ, ವಿವೇಕಾನಂದರ ಪುಸ್ತಕಗಳನ್ನು ತೋರಿಸಿದಾಗ, ಆತ ಇವೆಲ್ಲವನ್ನೂ ಈಗಾಗಲೇ ಓದಿರುವುದಾಗಿ ತಿಳಿಸಿದ. ನನ್ನ ಪತ್ನಿ ಇಮ್ಮ ಇವನಿಗೆ ಇನ್ನೆಂತಹ ನೀತಿ ಪುಸ್ತಕ ಕೊಡಬಹುದು ಎಂದು ಯೋಚಿಸುತ್ತಿರುವಾಗ ಆತ 'ಗೋಡ್ಸೆ ಪುಸ್ತಕ ಇದ್ದರೆ ಕೊಡಿ' ಎಂದು ಕೇಳಿ ಅವಳನ್ನು ಗಾಬರಿಗೊಳಿಸಿದ. ಗಾಬರಿಯಿಂದ ಸಾವರಿಸಿಕೊಂಡ ಅವಳು, ಆ ಪುಸ್ತಕ ಇಲ್ಲವೆಂದೂ, ಗಾಂಧಿ ಆತ್ಮ ಚರಿತ್ರೆ ಇದೆಯೆಂದೂ ಅದನ್ನು ಕೊಡಲಾ? ಎಂದು ಕೇಳಲಾಗಿ, ಆತ ಅದನ್ನು ಓದಿರುವುದಾಗಿ ಹೇಳಿದನಂತೆ. ಕೊನೆಗೆ ಸವಿತಾ ಆತನಿಗೆ ಎರಡು ಬುದ್ಧಿ ಮಾತು ಹೇಳಿ ಗಾಂಧಿಯ 'ಹಿಂದ್ ಸ್ವರಾಜ್' ಕೊಟ್ಟು ಕಳಿಸಿದಳಂತೆ. ಕೊನೆಯ ಮಾತು ಕೇಳಿ ನಾನು ಸಮಾಧಾನ ಪಟ್ಟೆನಾದರೂ, ಒಟ್ಟು ಇಡೀ ಪ್ರಸಂಗ ನನ್ನನ್ನು ನಿರಂತರವಾಗಿ ಕಾಡುತ್ತಲೇ ಇದೆ. ಕಾಡುತ್ತಿರುವ ಪ್ರಶ್ನೆ: 'ನೀತಿ' ಎನ್ನುವುದು ಹೀಗೆ ವಿಕ್ಷಿಪ್ತವಾಗಲು ಕಾರಣವೇನು?

ಗಾಂಧಿಯನ್ನು ಕೊಂದ 'ಪ್ರಸಂಗ'ದಲ್ಲಿ ನೀತಿಯನ್ನು ಕಾಣುವ ಮನಸ್ಸು ನಿನ್ನೆ-ಮೊನ್ನೆಯದೇನಲ್ಲ. ಅದು ಗಾಂಧಿಯನ್ನು ದೈಹಿಕವಾಗಿ ಕೊಂದ ಕಾಲದಲ್ಲೇ ಹುಟ್ಟಿ ಈಗ ಆತ್ಮತಃ ಕೊಲ್ಲುತ್ತಿರುವ ಈ ಕಾಲಘಟ್ಟದವರೆಗೂ ವಿಸ್ತರಿಸುತ್ತಾ ಬಂದಿದೆ. ಗಾಂಧಿ ಕೊಲೆ ವಿಚಾರಣೆಯ ತೀರ್ಪು ಬರೆದ ನ್ಯಾ॥ ಖೋಸ್ಲಾ ಹೇಳುವಂತೆ, ಗೋಡ್ಸೆಯ ವಾದ ಕೇಳಿ ನ್ಯಾಯಾಲಯದಲ್ಲಿ ಹಾಜರಿದ್ದ ಜನಜಂಗುಳಿ ಸ್ಪಂದಿಸುತ್ತಿದ್ದ ರೀತಿ-ನೀತಿಗಳಿಂದ ನ್ಯಾಯಾಲಯವೇನಾದರೂ ಪ್ರಭಾವಿತವಾಗಿದ್ದರೆ, (ಗಾಂಧಿಯನ್ನು ಮರಣೋತ್ತರವಾಗಿ ಶಿಕ್ಷೆಗೊಳಪಡಿಸಿ?) ಗೋಡ್ಸೆಯನ್ನು ಖುಲಾಸೆ ಮಾಡಬೇಕಿತ್ತು! ಇದಕ್ಕೆ ತಕ್ಕನಾಗೇ, ಕಳೆದ ಎಪ್ಪತ್ತರ ದಶಕದಲ್ಲಿ ನಾನು ದೆಹಲಿಯಲ್ಲಿದ್ದಾಗ ನನ್ನ ಮನೆಯ ಮಾಲೀಕನ ಮಕ್ಕಳು ಆರೆಸ್ಸೆಸ್ ಪ್ರಣೀತ 'ಸರಸ್ವತಿ ವಿದ್ಯಾ ಮಂದಿರ' ಶಾಲೆಗಳಲ್ಲಿ ಓದುತ್ತಿದ್ದು, ಅವರಿಗೆ ಗಾಂಧಿ ಬಗ್ಗೆ ಅವರ 'ಮೇಡಂ'ಗಳು ಹೇಳುತ್ತಿದ್ದ ಕಥೆಗಳು ನನ್ನನ್ನು ಗಾಬರಿಗೊಳಿಸುವಂತಿದ್ದವು. ಒಂದು ಉದಾಹರಣೆ: ಗೋಡ್ಸೆಯ ಗುಂಡು ಎದೆಗೆ ನಾಟಿದಾಗ ಗಾಂಧಿ ಬಾಯಿಂದ ಬಂದ ಮಾತು 'ಹೇ ರಾಂ!' ಅಲ್ಲ, 'ಪಕಡೋ ಪಕಡೋ'(ಹಿಡಿಯಿರಿ ಹಿಡಿಯಿರಿ!) ಎಂದು. ಇದು ಇಂದೂ ಹಲವೆಡೆ ಮಕ್ಕಳ ಮನಸ್ಸಿಗೆ ತುಂಬಲಾಗುತ್ತಿರುವ ಇತಿಹಾಸದ ಪರಿ. ಇದರ ವಿಸ್ತರಣೆಯನ್ನೇ ನಾನು ಇತ್ತೀಚೆಗೆ ಹಾಸನದಲ್ಲಿನ ಒಂದು ಅಧ್ಯಯನ ಶಿಬಿರದಲ್ಲಿ ಎದುರಾದ ಭಗತ್ ಸಿಂಗ್ ನೇಣೇರಲು ಮತ್ತು ಸುಭಾಷ್ ಚಂದ್ರ ಬೋಸರು ಕಾಣೆಯಾಗಲು ಯಾರು ಕಾರಣರೆಂಬ ಪ್ರಶ್ನೆಗಳಲ್ಲಿ ಕಂಡದ್ದು. ಹಾಗೇ, ನಾನು ಈ

ಹಿಂದೆ ಭಾಗವಹಿಸುತ್ತಿದ್ದ ದಲಿತ ಸಂಘರ್ಷ ಸಮಿತಿಯ ಅಧ್ಯಯನ ಶಿಬಿರಗಳಲ್ಲಿ ಕೇಳಿಬರುತ್ತಿದ್ದ ಮಾತುಗಳು. ಅದರ ಒಂದು ಮಾದರಿ: ಗಾಂಧಿ ಸತ್ತ ಸುದ್ದಿ ಕೇಳಿ ಅಂಬೇಡ್ಕರ್ ಒಂದು ತಪ್ಪಲೆ ತುಂಬ ಹಾಲು ಕಾಯಿಸಿಕೊಂಡು ಕುಡಿದರು! ಇದು ಅಂಬೇಡ್ಕರ್ ವ್ಯಕ್ತಿತ್ವಕ್ಕೆ ಅವಮಾನ ಮಾಡುವ ಮಾತುಗಳೆಂದು ಆ ದಲಿತ ಗೆಳೆಯರಿಗೆ ಹೇಳೋಣವೆಂದರೆ, ಗಾಂಧಿ ಸಾವಿನ ಸಂದರ್ಭದಲ್ಲಿ ಸ್ವತಃ ಅಂಬೇಡ್ಕರ್ ನೀಡಿದ ಕಟು ಹೇಳಿಕೆ ನಮ್ಮ ಬಾಯನ್ನು ಕಟ್ಟುವಂತಿದೆಯಲ್ಲಾ?

–೩–

ಗಾಂಧಿಯ ಮೂರು ಮಹಾ ತಪ್ಪುಗಳು

ಗಾಂಧಿ ಮರಣದ ನಂತರವಷ್ಟೇ ಅಲ್ಲ, ತಮ್ಮ ಜೀವಿತ ಕಾಲದಲ್ಲೇ ಎಡ-ಬಲಗಳಿಂದಷ್ಟೇ ಅಲ್ಲದೆ, ತಮ್ಮ ಕುಟುಂಬದ ಮಧ್ಯದಿಂದಲೂ ವಿರೋಧ, ಟೀಕೆ, ಅಸಮಾಧಾನ, ಬೈಗುಳ, ಖಂಡನೆಗಳನ್ನು ಎದುರಿಸುತ್ತಾ ಬಂದವರು. ಆದರೂ ಅವರು 'ಮಹಾತ್ಮ'ರೆನಿಸಿಕೊಂಡದ್ದು ಯಾರಿಗಾದರೂ ಸೋಜಿಗದ ಸಂಗತಿ ಎನಿಸಬಹುದು. ಅಥವಾ 'ಮಹಾತ್ಮ'ರೆನಿಸಿಕೊಳ್ಳಲು ಇದೂ ಒಂದು ಕಾರಣವಾಗಿರಬಹುದು: ಸುತ್ತಲ ದೂಷಣೆ-ಪ್ರತಿಕೂಲತೆಗಳ ನಡುವೆಯೂ ಅವರು ತಮ್ಮ ಸಾರ್ವಜನಿಕ ಜೀವನದಲ್ಲಿ ವಿಚಲಿತರಾಗದೆ ಸ್ಥಿರವಾಗಿ ನಿಂತು ತಮ್ಮ ನುಡಿ-ನಡೆಗಳೆರಡರ ಮೂಲಕವೂ ಜಗತ್ತು ಕಿವಿಗೊಟ್ಟು ಕೇಳುವಂತಹ ಸಂದೇಶವೊದನ್ನು ಸಾರಿದರೆಂದು. ನಿಜ, ಗಾಂಧಿ ಚಿತ್ರದ ಹೊಳಪು ಅವರ ಕೊನೆಯ ದಿನಗಳ ಹೊತ್ತಿಗೆ ಮಸುಕಾಗಲು ಆರಂಭಿಸಿತ್ತು. ಏಕೆಂದರೆ ರಾಷ್ಟ್ರ ವಿಭಜನೆ ಅವರ ಬದುಕಿನ ಒಂದು ದೊಡ್ಡ ಸೋಲೇ ಆಗಿತ್ತು. ಲೋಹಿಯಾ ಹೇಳಿದಂತೆ, ತಮ್ಮ ಶವದ ಮೇಲಷ್ಟೇ ರಾಷ್ಟ್ರ ವಿಭಜನೆ ನಡೆದೀತು ಎಂಬ ಮಾತನ್ನು ಗಾಂಧಿ ಉಳಿಸಿಕೊಳ್ಳದೆ ತಮ್ಮ ಮಹಾತ್ಮತನದಲ್ಲಿ ಒಂದು ಸಿಬಿರಷ್ಟನ್ನು ಕಳೆದುಕೊಂಡಿದ್ದರು. ಅಥವಾ ದೇವನೂರ ಮಹದೇವ ಹೇಳುವಂತೆ ಅವರ ಎತ್ತರ ಆಕಾಶಕ್ಕಿಂತ ಎರಡು ಗೇಣು ಕಡಿಮೆಯಾಯಿತು. ನನ್ನ ಪ್ರಕಾರ ಗಾಂಧಿ ತಮ್ಮ ಸಾರ್ವಜನಿಕ ಬದುಕಿನಲ್ಲಿ, ಮೇಲಿನ ಒಂದು ಸೇರಿದಂತೆ ಮುಖ್ಯವಾಗಿ ಮೂರು ನಿರ್ಣಾಯಕ ತಪ್ಪುಗಳನ್ನು ಮಾಡಿದರು. ಇತರ ಎರಡೆಂದರೆ, ಅವರು ತಮ್ಮ ರಾಷ್ಟ್ರೀಯ ಆಂದೋಲನದ ಆರಂಭದಲ್ಲೇ, ಜನ ಬೆಂಬಲ ಸಂಘಟಿಸಿಕೊಳ್ಳಲೋ ಏನೋ, ಒಡಲೊಳಗೆ ಕೋಮುವಾದಿ ಕಿಡಿ ಹೊತ್ತಿಸಿಟ್ಟುಕೊಂಡಿದ್ದ 'ಖಿಲಾಫತ್' ಚಳುವಳಿಗೆ ಬೆಂಬಲ ಘೋಷಿಸಿದ್ದು ಮತ್ತು ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರ್ ಮಾತುಗಳನ್ನು ಅಗತ್ಯ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಯತ್ನಿಸದೆ ಸ್ವಲ್ಪ 'ಪೆದ್ದು' ಎನ್ನಬಹುದಾದ ಆತ್ಮವಿಶ್ವಾಸದಲ್ಲಿ, ತಾವೇ ಅಸ್ಪೃಶ್ಯ ಸಮುದಾಯದ ನಾಯಕನೆಂದು ಹೇಳಿಕೊಳ್ಳುವ ಮೂಲಕ ಅವರನ್ನು ಕೆರಳಿಸಿದ್ದು.

ನಾಲ್ಕನೆಯ ತಪ್ಪೂ ಒಂದಿದೆ, ಅದನ್ನು ಸಂಪೂರ್ಣವಾಗಿ ತಪ್ಪು ಎನ್ನಲಾಗದಾದರೂ. ಅದು ಆದದ್ದು ೧೯೩೯ರ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಲ್ಲಿ ಗಾಂಧಿಯವರ ಅಭ್ಯರ್ಥಿ

ಪಟ್ಟಾಭಿ ಸೀತಾರಾಮಯ್ಯನವರು ಸೋತು, ಸುಭಾಷ್ ಚಂದ್ರ ಬೋಸ್ ಗೆದ್ದಾಗ. ಗಾಂಧಿ ಮುನಿಸಿಕೊಂಡು ಕಾಂಗ್ರೆಸ್‌ನ ಎಲ್ಲ ಕಾರ್ಯಕಲಾಪಗಳಿಂದ ದೂರ ಸರಿದು, ಸುಭಾಷ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವಂತಹ ಒತ್ತಡವನ್ನು ಉಂಟುಮಾಡಿದ್ದು. ಇದು ಸಂಪೂರ್ಣ ತಪ್ಪಲ್ಲವೇಕೆಂದರೆ, ಸುಭಾಷ್ ಗೆದ್ದದ್ದೇ, ಆಗ ತಾನೇ ಅಮೆರಿಕಾದಲ್ಲಿ ಮಾರ್ಕ್ಸ್‌ವಾದ ಕಲಿತು ಬಂದಿದ್ದ ಜಯಪ್ರಕಾಶ್ ನಾರಾಯಣ್ ಮಾಡಿದ್ದ ಒಂದು ತಪ್ಪಿನಿಂದಾಗಿ. ಕಾಂಗ್ರೆಸ್ಸಿನಲ್ಲಿನ ಸರ್ದಾರ್ ಪಟೇಲರ ನೇತೃತ್ವದ ಬಲಪಂಥೀಯ ಗುಂಪಿನ ಬೆನ್ನು ಮುರಿಯುವ ಎಡಪಂಥೀಯ ಆವೇಶದಲ್ಲಿ ಜೆಪಿ ತಾವು ನಾಯಕರಾಗಿದ್ದ ಕಾಂಗ್ರೆಸ್ ಸಮಾಜವಾದಿ ಗುಂಪಿನೊಳಕ್ಕೆ ಗಾಂಧಿ ವಿರೋಧಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಿಗೆ ದೊಡ್ಡ ಪ್ರಮಾಣದಲ್ಲಿ ಪ್ರವೇಶ ನೀಡಿದ್ದರು. (ತದ ನಂತರದಲ್ಲೇ, ಇದು ಎಲ್ಲ ಕಡೆ ರಾಷ್ಟ್ರೀಯ ಹೋರಾಟಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ರೂಪಿಸಲಾಗಿದ್ದ ಕಮ್ಯೂನಿಸ್ಟರ ಜಾಗತಿಕ ಮಟ್ಟದ ಪಿತೂರಿಯ ಒಂದು ಭಾಗ ಎಂಬುದು ಗೊತ್ತಾಯಿತು. ಆಗ ಸ್ವತಃ ಜೇಪಿಯವರ ಮುಂದಾಳತ್ವದಲ್ಲೇ ಅವರನ್ನೆಲ್ಲ ಪಕ್ಷದಿಂದ ಹೊರಹಾಕಲಾಯಿತೆಂಬುದು ಬೇರೆ ವಿಚಾರ.) ಬಹುಶಃ ಗಾಂಧೀಜಿಗೆ ಈ ಸಂದರ್ಭದಲ್ಲಿ ಕಾಂಗ್ರೆಸ್ ತಮ್ಮ ಕೈತಪ್ಪಿ ಹೋಗಿ ತಮ್ಮ ಇಡೀ ಜೀವನದ 'ಸ್ವರಾಜ್ಯ ಸಾಧನೆ'ಯ ಸಾರ್ವತ್ರಿಕ ಗುರಿಯೇ ಕಳೆದುಹೋಗುತ್ತಿದೆ ಎಂಬ ಆತಂಕ ಉಂಟಾಗಿರಬಹುದು. ಹಾಗಾಗಿ, ಅವರು ಹೊರನೋಟಕ್ಕೆ ಅಪ್ರಜಾಸತ್ತಾತ್ಮಕವಾಗಿ ಕಾಣುವ ಇಂತಹ ನಿರ್ಧಾರ ಕೈಗೊಳ್ಳಲು ಮುಂದಾಗಿದ್ದರೆ ಆಶ್ಚರ್ಯವಿಲ್ಲ. ಈ ಚುನಾವಣೆಯಲ್ಲಿ, ಸಮಾಜವಾದಿ ಗುಂಪಿನ ಪ್ರಮುಖ ನಾಯಕರೊಲ್ಲಬ್ಬರಾಗಿದ್ದ ಸ್ವತಃ ಲೋಹಿಯಾರೇ ಡೋಲಾಯಮಾನರಾಗಿ, ಕೊನೆಗೆ ಮತ ಚಲಾಯಿಸದಿರಲು ನಿರ್ಧರಿಸಿದರೆಂದರೆ, ಆಗ ಪರಿಸ್ಥಿತಿ ಎಷ್ಟು ನಾಜೂಕಾಗಿತ್ತು ಎಂಬುದು ಗೊತ್ತಾದೀತು.

ಇಷ್ಟರ ಹೊರತಾಗಿ ಗಾಂಧೀಜಿ ಬದುಕು ಪ್ರಕೃತಿ ಸಹಜ, ಸರಳ, ನೇರವಾಗಿತ್ತೆಂದೇ ನನಗನ್ನಿಸುತ್ತದೆ. ಬರೀ ಸಹಜ, ಸರಳ, ನೇರ ಅಲ್ಲ, ಐನ್‌ಸ್ಟೀನ್ ಹೇಳಿದಂತೆ, ಇಂತಹ ಮನುಷ್ಯನೊಬ್ಬ ರಕ್ತ-ಮಾಂಸಗಳೊಂದಿಗೆ ಈ ಭೂಮಿಯ ಮೇಲೆ ನಡೆದಾಡಿದ್ದ ಎಂದು ಮುಂದಿನ ಜನಾಂಗ ನಂಬಲು ಸಾಧ್ಯವಾಗದಂತಹ ಪವಾಡ ಸದೃಶ ಬದುಕನ್ನು ಅವರು ನಡೆಸಿದ್ದರು. ಅದು, ಆ ಮಹಾತ್ಮನೇ ತನ್ನ ಬದುಕನ್ನು ವರ್ಣಿಸಿಕೊಂಡ ಮಾತುಗಳಲ್ಲೇ ಹೇಳುವುದಾದರೆ, ಸತ್ಯದೊಡನೆ ನಡೆಸಿದ ಪ್ರಯೋಗ. ಸತ್ಯ ಎಂಬುದಿಲ್ಲಿ ಅಮೂರ್ತ ವಸ್ತುವಲ್ಲ; ಒಣ ಅಧ್ಯಾತ್ಮವೂ ಅಲ್ಲ. ಗಾಂಧಿಯ ಮಾತುಗಳಲ್ಲೇ ಹೇಳುವುದಾದರೆ, "ಸತ್ಯದೊಡನೆ ಮುಖಾಮುಖಿ ಎಂದರೆ ಸೃಷ್ಟಿಯ ಅತಿ ಕ್ಷುದ್ರವನ್ನೂ ಅದು ನಾನೇ ಎಂಬಂತೆ ಅದರೊಂದಿಗೆ ಗುರುತಿಸಿಕೊಂಡು ಪ್ರೀತಿಸುವುದು. ಆದ್ದರಿಂದಲೇ ನಾನು ಬದುಕಿನ ಯಾವ ಕ್ಷೇತ್ರದಿಂದಲೂ ಹೊರಗೆ ಇರಲಾರೆ. ಇಂತಹ ಸತ್ಯ ನಿಷ್ಠೆಯೇ ನನ್ನನ್ನು ರಾಜಕಾರಣಕ್ಕೆ ಎಳೆದಿರುವುದು. ಹಾಗಾಗಿಯೇ ರಾಜಕಾರಣಕ್ಕೂ ಧರ್ಮಕ್ಕೂ ಸಂಬಂಧವಿಲ್ಲ ಎನ್ನುವವರಿಗೆ ಧರ್ಮವೆಂದರೇನು ಎಂದು ಗೊತ್ತಿಲ್ಲ ಎಂದು ಹೇಳಲು ನನಗೆ ಸಂಕೋಚವಿಲ್ಲ."

ಅಸಂಬದ್ಧ, ಅಪ್ರಸ್ತುತ, ಪುರಾತನ?

ಬಹುಶಃ ಇಲ್ಲಿಯೇ ಗಾಂಧಿ ಬಹಳ ಜನರ ಕಣ್ಣಿಗೆ ಅಸಂಬದ್ಧರಂತೆ, ಸಂಪೂರ್ಣ ಅಪ್ರಸ್ತುತವಾಗಿ ಹೋಗಿರುವ ನಾಯಕನಂತೆ, ಹೆಚ್ಚೆಂದರೆ ಕೆಲವರ ಪಾಲಿಗೆ ವರ್ಷಕ್ಕೊಮ್ಮೆ ಪೂಜೆಗಷ್ಟೇ ಅರ್ಹರಾದ ಪುರಾತನರಂತೆ ಕಾಣತೊಡಗಿರುವುದು. ಸತ್ಯ ಎಂದೊಡನೆ ಶ್ಲೋಕಗಳು, ಮಂತ್ರಗಳು, ಸುರಾಗಳು, ಅಧ್ಯಾಯಗಳು ಮತ್ತು ಧರ್ಮ ಎಂದೊಡನೆ ದೇವಸ್ಥಾನ, ಮಸೀದಿ, ಚರ್ಚು, ಪುರೋಹಿತರು, ಮುಲ್ಲಾಗಳು, ಪಾದ್ರಿಗಳು, ವ್ರತಗಳು, ಹಬ್ಬಗಳು ಅಥವಾ ಮತ ಬ್ಯಾಂಕುಗಳು ಎಂದಷ್ಟೇ ಗ್ರಹಿಸುವ ಮಟ್ಟಕ್ಕೆ; ಒಳಗೆ ನಮ್ಮ ಬದುಕಿನ ಅಂತರಾಳ ಮತ್ತು ಹೊರಗೆ ರಾಜಕೀಯ ಸಂಸ್ಕೃತಿ ಅವನತಿಗೊಂಡಿರುವ ಈ ದಿನಗಳಲ್ಲಿ ಸತ್ಯವೇ ದೇವರು, ಆ ದೇವರೇ ಧರ್ಮ, ಆ ಧರ್ಮವೇ ರಾಜಕಾರಣ ಎಂಬ ಗಾಂಧಿಯ ಬದುಕನ್ನು ಕುರಿತ ಹಾಸುಹೊಕ್ಕಾದ ಈ ಮಾತು ಯಾರಿಗೆ ತಾನೇ ತಾಕೀತು? ಇದು ಏಕಾಯಾಮದ ಬದುಕಿನ ದಿನಗಳು. ಇಲ್ಲಿ ಸರಕೇ ದೇವರು, ಧರ್ಮ ಮತ್ತು ರಾಜಕಾರಣ. ಇರುವುದೊಂದೇ ಕಾಲ: ವರ್ತಮಾನ, ಈ ದಿನ, ಈ ಕ್ಷಣ. ಹಾಗಾಗಿ ಇರುವುದೊಂದೇ ಮೌಲ್ಯ: ಸುಖ ಅಥವಾ ನಿಖರವಾಗಿ ಹೇಳುವುದಾರೆ ಮಜಾ. ಈ ಪರಿಸ್ಥಿತಿಯಲ್ಲಿ ಗಾಂಧಿ ಹೇಳುವ ಸೃಷ್ಟಿಯ ಕ್ಷುದ್ರಗಳನ್ನು ಪ್ರೀತಿಸುವ ಮಾತಿರಲಿ, ಕಾಣುವ ಕಣ್ಣಾದರೂ ಹೇಗೆ ಉಳಿದಿದ್ದೀತು? ಅದೂ ಅಂಬೇಡ್ಕರ್‌ವಾದಿಗಳೆನಿಸಿಕೊಂಡವರು, ಈ ಕ್ಷುದ್ರಗಳ ಒಂದು ನಿರ್ದಿಷ್ಟ ಮಾನವ ರೂಪಗಳನ್ನಾದರೂ ಕಂಡು ಕನಲಿದ ಅಂಬೇಡ್ಕರರನ್ನೂ ಈ ಏಕಾಯಾಮದ ಬದುಕಿನ ವಿಗ್ರಹವನ್ನಾಗಿ ಕೆತ್ತತೊಡಗಿರುವಾಗ? ಹಾಗೇ ಅವರ ವ್ಯಕ್ತಿತ್ವವನ್ನು, ಅದರ ಹೊರಚಾಚುಗಳನ್ನು ಅವರ ಕಾಲ ಸಂದರ್ಭದಿಂದ ಇವೊತ್ತಿನ ಕಾಲ ಸಂದರ್ಭಕ್ಕೆ ವಿಸ್ತರಿಸಲು ನಿರಾಕರಿಸುತ್ತಿರುವಾಗ?

ಆದರೆ ಮಾನವ ಬದುಕಿಗಿರುವ ಬಹು ಆಯಾಮಗಳನ್ನು ಅನ್ವೇಷಿಸುತ್ತಲೇ ಅವುಗಳ ಉದ್ದಗಲಗಳಿಗೂ ತಮ್ಮ ತಾತ್ವಿಕತೆ ಮತ್ತು ಕ್ರಿಯಾಶೀಲತೆಗಳೆರಡರಲ್ಲೂ ವ್ಯಾಪಿಸಿಕೊಂಡಿದ್ದ ಗಾಂಧಿ, ಇಂದು ಈ ಏಕಾಯಾಮದ ಬದುಕಿಗೆ ದೊಡ್ಡ ಸವಾಲಿನಂತೆ ನಮ್ಮೆದುರು ನಿಂತಿದ್ದಾರೆ. ಅವರನ್ನು ಹಿಂದಿನ ಮತ್ತು ಇಂದಿನ ವ್ಯವಸ್ಥೆಯ ಯಜಮಾನರುಗಳು ಏಕಾಯಾಮಕ್ಕೆ ಒಗ್ಗಿಸುವ ಪ್ರಯತ್ನ ಮಾಡಿದಷ್ಟೂ ಅವರ ಬಹು ಆಯಾಮಗಳ ವ್ಯಕ್ತಿತ್ವ ಉಜ್ವಲಗೊಳ್ಳುತ್ತಾ ಹೋಗುತ್ತಿದೆ. ಆ ಮೂಲಕ ಅವರು ಈ ಏಕಾಯಾಮದ ಬದುಕಿನ ಬಿಕ್ಕಟ್ಟುಗಳನ್ನೂ, ಆತ್ಯಂತಿಕ ದುರಂತವನ್ನೂ ಮುನ್ನೋಡಬಲ್ಲವರಾಗಿದ್ದ ಕಾಲಜ್ಞಾನಿಯ ರೂಪ ತಾಳುತ್ತಿದ್ದಾರೆ. ಇದನ್ನು ನಂಬಲು ಅವರ ಬದುಕನ್ನು–ಅದರ ಈವರೆಗಿನ ಸರಳೀಕರಣಗಳನ್ನು ಮೀರಿ, ಅವು ಹುಟ್ಟಿಸಿದ ಹಲವು ಪ್ರಶ್ನೆಗಳನ್ನು ಎದುರಿಸುತ್ತಾ–ಅದರ ಸಂಕೀರ್ಣತೆಯಲ್ಲಿ ನೋಡಿ, ಇಂದೂ ಅವರು ಜೀವಂತವಾಗಿರುವುದರ ಸಾಕ್ಷಿಯಾಗಿ ಅವರ ಉಸಿರಾಟದ ಹಬೆಯನ್ನು ಅನುಭವಿಸಬೇಕಾಗುತ್ತದೆ.

-೪-

ನೋಟದಲ್ಲಿನ ಒಡಕುಗಳು...

ಗಾಂಧಿ ಕೇವಲ ಸ್ವಾತಂತ್ರ್ಯ ಹೋರಾಟಗಾರನೇ? ಸತ್ಯಾಗ್ರಹಿಯೇ? ಸ್ವರಾಜ್ಯ ವಾದಿಯೇ? ಅಹಿಂಸಾ ತತ್ವ ಪ್ರತಿಪಾದಕನೇ? ಸನಾತನ ಹಿಂದೂವೇ? ಈ ಪ್ರಶ್ನೆಗಳು ಒಂದರೊಳಗೊಂದು ಹಾಸುಹೊಕ್ಕಾಗಿವೆಯಷ್ಟೇ ಅಲ್ಲ, ಅವರ ಬದುಕಿನ ಬೇರೆ ಅವಿಭಾಜ್ಯ (ಒಂದನ್ನು ಬಿಟ್ಟು ಇನ್ನೊಂದು ಇರಲಾಗದಂತಹ) ಅಂಗಗಳ ಬಗೆಗೂ ನಮ್ಮ ಗಮನ ಸೆಳೆಯುವಂತಹವಾಗಿವೆ: ಅವರು ವಕೀಲರಾಗಿದ್ದರು, ವರ್ಣಭೇಧ ನೀತಿ ವಿರೋಧಿ ಹೋರಾಟಗಾರರಾಗಿದ್ದರು. ಯುದ್ಧ ಗಾಯಾಳು ಶುಶ್ರೂಷಕರಾಗಿದ್ದರು, ಕಟ್ಟಡ ಕೆಲಸಗಾರ ರಾಗಿದ್ದರು, ಬಡಗಿ, ಚಮ್ಮಾರಿಕೆಯಲ್ಲೂ ಪರಿಶ್ರಮ ಹೊಂದಿದ್ದರು, ತೋಟಗಾರರಾಗಿದ್ದರು, ಭಾಷಾ ಶಿಕ್ಷಕರಾಗಿದ್ದರು, ಪತ್ರಕರ್ತರಾಗಿದ್ದರು, ಲೇಖಕರಾಗಿದ್ದರು, ವೈದ್ಯರಾಗಿದ್ದರು, ಆಶ್ರಮ ಮೇಲ್ವಾಚರಾಗಿದ್ದರು, ಲೆಕ್ಕಾಧಿಕಾರಿಯಾಗಿದ್ದರು, ಪ್ರಾಣಿ ಪೋಷಕರಾಗಿದ್ದರು, ಅರ್ಥಶಾಸ್ತ್ರ ಮತ್ತು ರಾಜನೀತಿ ಪ್ರವೀಣರಾಗಿದ್ದರು... ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವೆಲ್ಲವನ್ನೂ ಅವರ ವ್ಯಕ್ತಿತ್ವ ಸಮೃದ್ಧಿಯನ್ನು ನಿರೂಪಿಸಲು ಇಲ್ಲಿ ಹೇಳುತ್ತಿಲ್ಲ. ಬದಲಿಗೆ, ಮನುಷ್ಯ ಜೀವನದ ಸಾಧ್ಯಾಸಾಧ್ಯತೆಗಳ ಬಗ್ಗೆ ಅವರಿಗಿದ್ದ ಕುತೂಹಲ, ಆಸಕ್ತಿ ಮತ್ತು ಪರಿಶ್ರಮಗಳನ್ನು ಸೂಚಿಸಲು ಮತ್ತು ಅವರು ಅದನ್ನು ಅದರ ಸಮಗ್ರತೆಯಲ್ಲಿ ಅರ್ಥ ಮಾಡಿಕೊಂಡು; ಅದರಂತೆ-ಅಂದರೆ ಬದುಕನ್ನು ಅದರ ಸತ್ಯಾರ್ಥ ರೂಪಗಳೊಂದಿಗೆ ನಡೆಸುವ ಪ್ರಯೋಗದಂತೆ-ಬಾಳಲೆತ್ನಿಸಿದ ಪರಿಯನ್ನು ಅರ್ಥ ಮಾಡಿಕೊಳ್ಳುವ ಅಗತ್ಯವನ್ನು ಮನಗಾಣಿಸಲು ಹೇಳುತ್ತಿರುವೆ.

ಇಂತಹ ವೈಯುಕ್ತಿಕ ಪ್ರಯೋಗ-ಸಾಹಸದ ಭಾಗವಷ್ಟೇ ಅವರ ಸ್ವಾತಂತ್ರ್ಯ ಹೋರಾಟ ಹಾಗೂ ಅದರ ಭಾಗವಾಗಿ ಅವರು ಪ್ರತಿಪಾದಿಸಿದ ಅಹಿಂಸೆ, ಧರ್ಮ ಮತ್ತು ಜಾತಿ ಪದ್ಧತಿ ಕುರಿತ ಮೀಮಾಂಸೆಗಳು. ಗಾಂಧಿಯನ್ನು ಈ ವಿಶಾಲ ಚೌಕಟ್ಟಿನಲ್ಲಿರಿಸದೇ, ಆ ಹೋರಾಟ ಮತ್ತು ಮಿಮಾಂಸೆಗಳನ್ನು ಬಿಡಿ ಬಿಡಿಯಾಗಿ ನೋಡತೊಡಗಿದಾಗ, ಅಂತಹ ಈ ನೋಡುವಿಕೆಯಲ್ಲೇ ಒಡಕು ಇರುವುದರಿಂದ ಅವರ ಹೋರಾಟ ಮತ್ತು ಮೀಮಾಂಸೆ ಗಳಲ್ಲಿ ಸಲ್ಲದ ಒಡಕು ಕಾಣತೊಡಗುವುದು ಸಹಜ. ಜೊತೆಗೆ ಗಾಂಧಿ ನಮ್ಮೆಲ್ಲರ ವ್ಯಕ್ತಿತ್ವಗಳಂತೆಯೇ ಒಂದು ಪ್ರಕ್ರಿಯೆಯಾಗಿ ವಿಕಾಸಗೊಂಡ ವ್ಯಕ್ತಿತ್ವ. ನಮ್ಮ ವ್ಯಕ್ತಿತ್ವಗಳಲ್ಲಿನ ಈ ಗುಣವನ್ನೇ ಗಮನಿಸಲಾಗದಷ್ಟು ಇಂದಿನ ತುರುಸಿನ ಬದುಕಿನಲ್ಲಿ ವ್ಯಸ್ತರಾಗಿರುವ ನಾವು ಗಾಂಧಿ ವ್ಯಕ್ತಿತ್ವವನ್ನು, ಅದರಿಂದ ಮೂಡಿದ ತತ್ವ-ಮೀಮಾಂಸೆಗಳನ್ನು ಆಯಾ ಪರಿಪ್ರೇಕ್ಷ್ಯಗಳಲ್ಲಿ ನೋಡಲಾಗದವರಾಗಿ ಅವರನ್ನು ಇಂದಿನಲ್ಲಿ ನಿಂತು ವಿಮರ್ಶಿಸ ತೊಡಗಿದ್ದೇವೆ. ಮುಖ್ಯವಾಗಿ ಅಹಿಂಸೆ, ಧರ್ಮ ಮತ್ತು ಜಾತಿ ಪದ್ಧತಿಯನ್ನು ಕುರಿತ ವಿಮರ್ಶೆಯಂತೆಯೇ, ಗಾಂಧಿ ಅಂದರೆ ಪೂರ್ಣವಾಗಿ ಏನು ಎಂಬ ವಿರಾಟ್ ಪ್ರಶ್ನೆಯನ್ನು ಕುರಿತೂ ಈ 'ನಿಂತ' ವಿಮರ್ಶೆ ಸಾಗುತ್ತಾ, ಇಂದು ರಾಜ್‌ಘಾಟ್‌ನಲ್ಲಿ ವರ್ಷಕ್ಕೊಮ್ಮೆ ಗಣ್ಯಾತಿಗಣ್ಯರ ಕೈಗಳಲ್ಲಿನ ಪುಷ್ಪಗುಚ್ಛದ ರೂಪದಲ್ಲಿ ಸಾಕಾರಗೊಂಡು ನಿಂತಿದೆ.

ಅಹಿಂಸೆಯೆಂಬ ಪ್ರಾಕೃತಿಕ ಗುಣ

ತಮ್ಮನ್ನು ಪಾಷಂಡಿ ಗಾಂಧಿವಾದಿಯೆಂದು ಹೆಮ್ಮೆಯಿಂದ ಕರೆದುಕೊಳ್ಳುವ ಲೋಹಿಯರಂತಹ ಲೋಹಿಯಾ ಕೂಡಾ ರಾಷ್ಟ್ರ ವಿಭಜನೆಗೆ ಹಲವು ಕಾರಣಗಳನ್ನು ನೀಡುತ್ತಾ, ಗಾಂಧೀಜಿಯ ಅಹಿಂಸೆಯೂ ಇವುಗಳಲ್ಲಿ ಒಂದೆಂದು ಹೇಳುತ್ತಾರಲ್ಲದೆ, ಅವರ ಉಪವಾಸ ಸತ್ಯಾಗ್ರಹ ಪರಿಕಲ್ಪನೆಯನ್ನು ಬೆದರಿಕೆಯ ತಂತ್ರವನ್ನಾಗಿ ನೋಡಿ ಟೀಕಿಸುತ್ತಾರೆ. ಗಾಂಧೀಜಿಯ ಅಹಿಂಸೆಯನ್ನು ಹಿಂಸೆಗೆ ವಿರುದ್ಧವಾದ ಪರಿಕಲ್ಪನೆಯನ್ನಾಗಿ ನೋಡುವ ಸೀಮಿತ ಗ್ರಹಿಕೆಯ ಫಲವಿದು ಎಂದೇ ನಾನು ಭಾವಿಸುತ್ತೇನೆ. ಗಾಂಧಿ ಅಹಿಂಸೆಯನ್ನು ಪರ್ವತಗಳಷ್ಟೇ ಹಳೆಯದೆನ್ನುವ ಮೂಲಕ ಅದನ್ನು ಪ್ರಾಕೃತಿಕ ಗುಣವೆಂದು(ಪ್ರಕೃತಿಯನ್ನು ಸಾಮರಸ್ಯದಲ್ಲಿ ಸುಸ್ಥಿರವಾಗಿ ಇಟ್ಟಿರುವ ಶಕ್ತಿ ಎನ್ನುವ ಅರ್ಥದಲ್ಲಿ) ವರ್ಣಿಸಿರುವುದೂ, ಪ್ರಕೃತಿಯಲ್ಲಿ ಅಡಗಿರುವ 'ಹಿಂಸೆ'ಯನ್ನು ಗ್ರಹಿಸಿಯೇ ಈ ಮಾತನ್ನು ಅವರು ಆಡಿದ್ದಾರೆಂಬುದನ್ನು ಮರೆತದ್ದರ ಫಲವಿದು. ಅವರು ಸಾಕಷ್ಟು ವಾಚ್ಯವಾಗಿಯೂ ಆಡಿರುವ, ಹೇಡಿಯ ಅಹಿಂಸೆಗಿಂತ ಧೀರನ ಹಿಂಸೆ ಮೇಲು ಮತ್ತು ಅಹಿಂಸೆಯಲ್ಲಿ ಆತ್ಮ ಸ್ವಚ್ಛೀಕರಣದದ ಹಿಂಸೆಯೂ ಸೇರಿದೆ ಎಂಬ ಮಾತುಗಳನ್ನೂ ನಾವು ಗಮನಿಸಿದಂತಿಲ್ಲ.

ಭಗತಸಿಂಗ್‌ರ ನೇಣು ಶಿಕ್ಷೆಯನ್ನೂ, ಸ್ವತಃ ತಮ್ಮ ಸಾವನ್ನೂ ಅವರು ಈ ತಾತ್ವಿಕ ಗ್ರಹಿಕೆಯಲ್ಲೇ ಆಹ್ವಾನಿಸಿದ್ದರು ಎಂಬುದನ್ನು ನಾವು ಗಮನಿಸಬೇಕು. ಆದರೆ ಅವರು ಭಗತ್ ಸಿಂಗರನ್ನು ನೇಣಿನಿಂದ ಉಳಿಸಲು ಒಳ್ಳೆಯ ವಕೀಲರನ್ನು ನೇಮಿಸುವಂತೆ ಕಾಂಗ್ರೆಸ್ಸಿಗೆ ಸೂಚಿಸಿದ್ದರು. ಹಾಗೇ, ತಾವು ೧೨೫ ವರ್ಷ ಬದುಕಿ ಜನಸೇವೆ ಮಾಡಬೇಕೆಂಬ ಹೊರಬಯಕೆಯನ್ನು ವ್ಯಕ್ತಪಡಿಸುತ್ತಿದ್ದುದರ ಮಧ್ಯೆಯೇ ಸ್ವಾತಂತ್ರ್ಯಾನಂತರದ ಘಟನೆಗಳ ಹಿನ್ನೆಲೆಯಲ್ಲಿ ಕೆಲ ಬಾರಿ ಸಾವಿನ ಒಳ ಬಯಕೆಗೂ ಒಳಗಾಗುತ್ತಿದ್ದ ಅವರು ಸಹಜವಾಗಿಯೇ, ಸಾವಿನ ತೊಡೆಯ ಮೇಲೆ ನಿರಾತಂಕವಾಗಿ ಮಲಗಬಲ್ಲವನೇ ಧೀರ ಎಂದು ನಂಬಿದ್ದರು ಎಂಬುದನ್ನು ಮರೆಯಲಾಗದು. ಅಹಿಂಸೆಯನ್ನು ಕುರಿತ ಈ ಆಳವಾದ ನಂಬಿಕೆಯ ಮಾತನ್ನು ಅವರು ವ್ಯಕ್ತಿ ಮಟ್ಟದಲ್ಲಿ ಮಾತ್ರವಲ್ಲ, ಒಂದು ಸಮಾಜ, ಒಂದು ರಾಷ್ಟ್ರ ಹಾಗೂ ಒಂದು ನಾಗರೀಕತೆಯ ಮಟ್ಟಿಗೂ ಸತ್ಯ ಎಂದು ನಂಬಿದ್ದರು. ಆದರೆ ಈ ನಂಬಿಕೆ ರಾಷ್ಟ್ರ ವಿಭಜನೆ, ಆನಂತರದ ಹಿಂಸೆ-ನರಹತ್ಯೆಯ ಸಂದರ್ಭದಲ್ಲಿ ಅವರಿಗೆ ಕೈಕೊಟ್ಟಿತು ನಿಜ. ಆದರೆ ಅದರ ಹಿಂದೆ ಅವರ ಮೂರು ಮಹಾ ತಪ್ಪುಗಳಲ್ಲಿ ಒಂದು ಎಂದು ನಾನು ಹೇಳಿದ ಖಿಲಾಫತ್ ಆಂದೋಲನಕ್ಕೆ ಅವರು ನೀಡಿದ ಬೆಂಬಲದಲ್ಲಿ ಕಾಣುವ ಅಲ್ಪಕಾಲಿಕ ರಾಜಕಾರಣವಿರುವುದನ್ನು ನಾವು ಗಮನಿಸಬೇಕು.

ಅಧಿಕಾರ ರಾಜಕಾರಣದ ವಾಸನೆಯೇ ಇಲ್ಲದಿದ್ದ ದಕ್ಷಿಣ ಆಫ್ರಿಕಾದ ಹೋರಾಟಗಳಲ್ಲಿ ಕಾಣದೇ ಹೋಗಿದ್ದ ಬಹು ಧರ್ಮಗಳ ಸಂದರ್ಭದ ಸಮಸ್ಯೆ ಭಾರತದಲ್ಲಿನ ಹೋರಾಟದ ನಿರ್ಣಾಯಕ ಹಂತದಲ್ಲಿ ಆರಂಭವಾದ ಅಧಿಕಾರ ರಾಜಕಾರಣದ ಸಂದರ್ಭದಲ್ಲಿ ಹೇಗೆ ಭುಗಿಲೇಳಬಹುದು ಎಂಬುದನ್ನು ಅವರು ಊಹಿಸಿರಲಾರರು. ಇದಕ್ಕೆ ಮುಖ್ಯ ಕಾರಣ, ಅವರು ಇಸ್ಲಾಮನ್ನು ಇತರ ಧರ್ಮಗಳಂತೆ ಮನುಷ್ಯನ ಅಧ್ಯಾತ್ಮಿಕ ಹುಡುಕಾಟದ ಸಾಧನ ಎಂದು ನಂಬಿದ್ದು. ಇತರ ಧರ್ಮಗಳು ರಾಜಕೀಯೀಕರಣಕ್ಕೆ ಒಳಗಾಗಬಲ್ಲುವುದಾರೂ, ಇಸ್ಲಾಂ ಹುಟ್ಟಿನಿಂದಲೇ ರಾಜಕೀಯ ಧರ್ಮವಾಗಿದ್ದು; ಆ ಕಾರಣದಿಂದಲೇ ಅದು

ಅಹಿಂಸೆಯನ್ನು ಒಂದು ಸಾರ್ವತ್ರಿಕ ತತ್ವವಾಗಿ ಮಾನ್ಯ ಮಾಡಲಾಗದ್ದು ಎಂಬುದನ್ನು ಅವರು ಗ್ರಹಿಸದೇ ಹೋದದ್ದು. ಖಿಲಾಫತ್ ಚಳುವಳಿಯ ಮೂಲದಲ್ಲೇ ಈ ಅಂಶ ಎದ್ದು ಕಾಣುವಷ್ಟು ಸ್ಪಷ್ಟವಾಗಿದ್ದರೂ, ಅವರು ತಮ್ಮ ಮಹತ್ವಾಕಾಂಕ್ಷೆಯ ಆಂದೋಲನಕ್ಕೆ ವಿಶಾಲ ಜನ ಬೆಂಬಲ ಸಂಘಟಿಸಿಕೊಳ್ಳುವ ಆತುರದಲ್ಲಿ ಈ ತಪ್ಪು ಮಾಡಿದರು. ಇದರ ಪರಿಣಾಮವಾಗಿ ಆ ಮಹತ್ವಾಕಾಂಕ್ಷೆಯ ಆಂದೋಲನ ಯಶಸ್ಸು ಕಾಣುವ ಘಳಿಗೆಯಲ್ಲಿ ಅದೇ ಅವರಿಗೆ ಕೈಕೊಟ್ಟು ಅದರ ಪ್ರತಿಫಲವನ್ನು ಅವರು ಉಣ್ಣಬೇಕಾಯಿತು: ಹಲವರ ಕಣ್ಣಿಗೆ ಅವರ ಬದುಕಿನ ಸಂದೇಶ ವಿಫಲವಾದಂತೆ ಕಂಡ ದುರಂತವನ್ನು ಅವರು ಎದುರಿಸಬೇಕಾಯಿತು. ನಿಜ, ಅವರು ಕೆಲವು ಮುಸಲ್ಮಾನರನ್ನು–ಖಾನ್ ಅಬ್ದುಲ್ ಗಫಾರ್ ಖಾನ್, ಅಬ್ದುಲ್ ಕಲಾಂ ಆಜಾದ್ ಇತ್ಯಾದಿ–ಪ್ರಭಾವಿಸಿದರು. ಆದರೆ ಭಾರತದ ಸಂದರ್ಭದಲ್ಲಾದರೂ ಇತರ ಧರ್ಮಗಳನ್ನು ಪ್ರಭಾವಿಸಿದಂತೆ ಅವರು ಇಸ್ಲಾಮನ್ನು ಪ್ರಭಾವಿಸಲಾಗಲಿಲ್ಲ. ಪ್ರವಾದಿ ಮೊಹಮ್ಮದ್ ತಮ್ಮ ಧ್ಯಾನಾವಸ್ಥೆಯ ಅಂತಿಮ ಹಂತ ತಲುಪಲಾಗಲಿಲ್ಲ ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಗಾಂಧಿ ಗಮನಿಸಿರಲಾರರು.

ರಾಷ್ಟ್ರ ವಿಭಜನೆ ಎಂಬ ಶಿಕ್ಷೆ

ಅದರೆ ರಾಷ್ಟ್ರ ವಿಭಜನೆಯನ್ನು ಅವರ ಬದುಕಿನ ಒಟ್ಟು ವೈಫಲ್ಯವೆಂದು ಕಾಣುವುದು ಅವರ ಬದುಕನ್ನು ಬಹು ಸೀಮಿತಗೊಳಿಸಿ ನೋಡುವ ತಪ್ಪಾದೀತು. ಅದು ಅವರು ತಮ್ಮ ಬದುಕಿನಲ್ಲಿ ಮಾಡಿದ ಒಂದು ತಪ್ಪಿಗೆ ಅನುಭವಿಸಿದ ಶಿಕ್ಷೆ ಎಂದಷ್ಟೇ ಪರಿಗಣಿಸಬಹುದೇನೋ. ಆದರೆ ಅದು ಅವರೊಬ್ಬರೇ ಅನುಭವಿಸಿದ್ದಲ್ಲ; ಲಕ್ಷಾಂತರ ಜನ ಅನುಭವಿಸಿದ ಶಿಕ್ಷೆ ಎಂದು ವಾದಿಸುವವರೂ ಉಂಟು. ಆದರೆ ಅದು ಅವರನ್ನು ಸಂಪೂರ್ಣ ಹೊಣೆಗಾರರನ್ನಾಗಿ ಮಾಡಲಾಗದ ರಾಷ್ಟ್ರ ವಿಭಜನೆಯ ಪರಿಣಾಮ ಎಂಬುದನ್ನು ನಾವು ಅರಿಯಬೇಕು. ರಾಷ್ಟ್ರ ವಿಭಜನಗೆ ಲೋಹಿಯಾ ಪಟ್ಟಿ ಮಾಡುವ ಕಾರಣಗಳಲ್ಲಿ ಗಾಂಧಿಜಿಯ ಅಹಿಂಸೆಯೂ ಒಂದಷ್ಟೆ. ಅವುಗಳ ಜೊತೆಗೆ ಅವರು ಬ್ರಿಟಿಷ್ ಆಡಳಿತದ ಕುಟಿಲತೆ, ವಯಸ್ಸಾಗುತ್ತಿದ್ದ ಕಾಂಗ್ರೆಸ್ ನಾಯಕರ ಅಧಿಕಾರಾತುರ, ಒಟ್ಟಾರೆ ಜನತೆಯಲ್ಲಿ ಉಂಟಾಗಿದ್ದ ಮಾನಸಿಕ ಆಯಾಸ, ಮುಸ್ಲಿಂ ಲೀಗ್‌ನ ಪ್ರತ್ಯೇಕತಾವಾದದ ಜೊತೆ ಹಿಂದೂ ಧಿಮಾಕು ಸೇರಿ ಸೃಷ್ಟಿಸಿದ್ದ ಮತೀಯ ಗಲಭೆಗೆ ಫಲವತ್ತಾಗಿದ್ದ ರಾಷ್ಟ್ರೀಯ ವಾತಾವರಣ ಎಂದು ಪಟ್ಟಿ ಮಾಡುತ್ತಾರೆ. ಗಾಂಧೀಜಿಗೆ ಈ ಒತ್ತಡಗಳನ್ನು ಮೀರಿ ರಾಷ್ಟ್ರ ವಿಭಜನೆಯನ್ನು ತಪ್ಪಿಸಲು ಆಗ ತಮಗೆ ಸಾಧ್ಯವಿದ್ದ–ಒಂದನ್ನು ಬಿಟ್ಟು–ಎಲ್ಲ ಪ್ರಯತ್ನಗಳನ್ನೂ ಮಾಡಿದರು. ಆದರೆ ಅದರಲ್ಲಿ ಅವರು ಸೋತರೆಂದರೆ, ಅದು ನಾನು ಈ ಮುನ್ನ ಹೆಸರಿಸಿದ ಅವರ ಮೂರನೇ ಮಹಾ ತಪ್ಪುಗಳಲ್ಲಿ ಒಂದು ಎಂಬುದು ನಿಜವಾದರೂ, ಆ ಸೋಲು ಅದೇ ವೇಳೆಗೆ ಇನ್ನೊಂದು ಸತ್ಯವನ್ನು ನಮಗೆ ಮನಗಾಣಿಸುತ್ತದೆ ಎಂಬುದನ್ನೂ ಗಮನಿಸಬೇಕು. ಅದೆಂದರೆ, ನಾವು ಇಷ್ಟು ಕಾಲ ಮತ್ತು ಭಾವ ದೂರಗಳಲ್ಲಿ ನಿಂತು ಸರಳ ಪಠ್ಯಗಳ ಓದಿನಲ್ಲಿ ಗ್ರಹಿಸಿರುವಂತೆ ಸ್ವಾತಂತ್ರ್ಯ ಹೋರಾಟವೆನ್ನುವುದು, ಅದರ ಕೇಂದ್ರ ಬಿಂದು ಗಾಂಧಿಯಾಗಿದ್ದರೂ, ಒಂದು ಏಕರೂಪಿ ಪ್ರವಾಹವಾಗಿರಲ್ಲಿಲ್ಲ ಎಂಬುದು. ಅದು ಹಲವು ವಿಭಿನ್ನ ದೃಷ್ಟಿಕೋನಗಳ ಒತ್ತಡ ಗುಂಪುಗಳ ಸಂಕೀರ್ಣ ವಿದ್ಯಮಾನವಾಗಿದ್ದು,

ಗಾಂಧಿ ಅಲ್ಲಿ 'ವಿಟೋ' ಚಲಾಯಿಸುವ ಸ್ಥಿತಿ ಇರಲಿಲ್ಲ. ಬದಲಿಗೆ ಅವರು ಒಟ್ಟಾರೆ ಆಂದೋಲನದ ಸಂಘಟಿತ ದನಿಗೆ ಕಿವಿಗೊಡಲೇಬೇಕಾದ ಅನಿವಾರ್ಯತೆಗೂ ಒಳಗಾಗಿದ್ದರು. ಈ ಮಾತನ್ನು ಸರಿಯಾದ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ರಾಷ್ಟ್ರ ವಿಭಜನೆಯ ಸಲಹೆಯನ್ನು ಚರ್ಚಿಸಲು ನಡೆದ ಕಾಂಗ್ರೆಸ್ ಕಾರ್ಯಕಾರಿ ಸಭೆಯಲ್ಲಿನ ನಡಾವಳಿಯ ಜೀವಂತ ವಿವರಗಳನ್ನೊಳಗೊಂಡ ವಿವಿಧ ನಿರೂಪಣೆಗಳನ್ನು ಗಮನಿಸಬೇಕು. (ಹಾಗೇ, ಶೂದ್ರರ ಮತ್ತು ಹೆಣ್ಣು ಮಕ್ಕಳ ಶಿಕ್ಷಣ ಸಮಾಜ ವಿರೋಧಿ ಕೃತ್ಯ ಎಂದು ನಂಬಿ ಅದರ ವಿರುದ್ಧ ದೊಡ್ಡ ಸಮರವನ್ನೇ ನಡೆಸಿದ ಕಟ್ಟಾ ಸಂಪ್ರದಾಯವಾದಿ ಬಾಲಗಂಗಾಧರ ತಿಲಕರ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ಗಾಂಧಿ ಸಾಕಷ್ಟು ಸೂಕ್ಷ್ಮವಾಗಿ ಮತ್ತು ಗೌರವಪೂರ್ಣವಾಗಿಯೇ ಎದುರಿಸಿದರೂ, ಅದರ ರೀತಿ ನೀತಿಗಳು ಈಗಲೂ ಕೆಲವು ವಲಯಗಳಿಂದ ಟೀಕೆಗೆ ಒಳಗಾಗುತ್ತಿದೆ ಎಂಬುದನ್ನು ನಾವು ಗಮನಿಸಬೇಕು)

ನನ್ನ ಪ್ರಕಾರ ಆಗ ಗಾಂಧಿ ಮುಂದೆ ಎರಡು ಆಯ್ಕೆಗಳಿದ್ದವು. ಒಂದು, ವೈಯುಕ್ತಿಕವಾಗಿ ರಾಷ್ಟ್ರ ವಿಭಜನೆಯ ಪ್ರಕ್ರಿಯೆಯಿಂದ ದೂರ ಉಳಿಯುವುದು. ಎರಡು, ಉಪವಾಸ ಕೂತು ತಮ್ಮ ಆತ್ಮಬಲದ ಒತ್ತಡದಿಂದ ಎಲ್ಲ ಪಕ್ಷಗಳ ಅತಿಗಳನ್ನು ತಹಬಂದಿಗೆ ತರುವುದು. ಅವರು ಎರಡನೇ ಆಯ್ಕೆ ಮಾಡದೆ, ಮೊದಲನೆಯದರ ಆಯ್ಕೆ ಮಾಡಿದ್ದು; ಅದನ್ನೂ ಕೂಡಾ ಪ್ರತಿಭಟನೆಯಗಿ ಮಾಡದೆ ತಮ್ಮ ಅಧ್ಯಾತ್ಮಿಕ ರಾಜಕಾರಣದ('ದೀರ್ಘಾವಧಿ ರಾಜಕಾರಣವೇ ಧರ್ಮ; ಅಲ್ಪಾವಧಿ ಧರ್ಮವೇ ರಾಜಕಾರಣ') ಸಹಜ ಮುಂದುವರಿಕೆ ಯೆಂಬಂತೆ–ರುದ್ರ ಭೀಕರವೆನ್ನಿಸುವ ನೌಖಾಲಿ ಯಾತ್ರೆ ಮತ್ತು ಪಾಕಿಸ್ತಾನಕ್ಕೆ ಮಾತು ಕೊಟ್ಟಂತೆ ನಗದು ಪಾಲನ್ನು ಕೊಡಬೇಕೆಂಬ ಜನ–ಅಪ್ರಿಯ ಆಗ್ರಹಗಳ ರೂಪದಲ್ಲಿ–ಮಾಡಿದ್ದು ನನ್ನಂತಹವರಿಗೆ ಈಗ ಅವರ ಬದುಕಿನ ಒಂದು ನಿರ್ಣಾಯಕ ಬಿರುಕಾಗಿ, ಹಾಗೇ ಒಂದು ಮಹಾ ತಪ್ಪಾಗಿ ಕಾಣುತ್ತಿದೆ, ನಿಜ. ಆದರೆ ಇಂತಹ ರಾಜಕಾರಣದ ನಿರಂತರತೆಯನ್ನು ಕಾಪಾಡಿಕೊಂಡದ್ದು ತಮ್ಮ ತಪ್ಪಿನ ಪ್ರಾಯಶ್ಚಿತ್ತವಾಗಿಯೇ, ತಾವು ಕಂಡುಕೊಂಡ ಸತ್ಯ ದರ್ಶನದ ಸಮಗ್ರತೆಯ ಪ್ರಯತ್ನವಾವಾಗಿಯೇ ಎಂದು ಗ್ರಹಿಸಲೂ ಇಲ್ಲಿ ಅವಕಾಶವಿದೆಯಲ್ಲವೇ?

ಇತಿಹಾಸದ ಸೇಡು?

ಇದಾವುದನ್ನೂ ಮಾಡದೆ, ಗಾಂಧಿ ಮೇಲೆ ಸೂಚಿಸಿದಂತೆ ಎರಡನೇ ಆಯ್ಕೆಯನ್ನು ಮಾಡಿಕೊಂಡಿದ್ದರೆ ಅದು ಲೋಹಿಯಾರಂತಹವರ ದೃಷ್ಟಿಯಿಂದ ಕೇವಲ ಬೆದರಿಕೆಯ ತಂತ್ರವಾಗುತ್ತಿತ್ತಲ್ಲವೇ? ಈ ಆಯ್ಕೆ ಮಾಡಿಕೊಳ್ಳದಿರಲು ಅವರಿಗೆ ಅವರದ್ದೇ ಆದ–ಬಹುಶಃ ತಮ್ಮ ಆತ್ಮಬಲವನ್ನು ಮೀರಿದ ಬಲಗಳು ಹೊರಗಡೆ ಕ್ರಿಯಾಶೀಲವಾಗಿದ್ದು, ರಾಷ್ಟ್ರ ವಿಭಜನೆ ಅನಿವಾರ್ಯ ಎಂಬ ಅರಿವಿನಲ್ಲಿ ಅವರಿಗಷ್ಟೇ ಮನವರಿಕೆಯಾಗಿದ್ದ–ಕಾರಣಗಳೂ ಇರಬಹುದಲ್ಲವೆ? ಆದರೆ ಗಾಂಧಿ ವಿಕ್ಷಿಪ್ತ ಮನಸ್ಸಿನ ಹಿಂದೂವೊಬ್ಬನ ಗುಂಡಿಗೆ ಬಲಿಯಾಗಿ ಅಸು ನೀಗುವ ಬದಲು ರಾಷ್ಟ್ರ ವಿಭಜನೆಯನ್ನು ಪ್ರತಿಭಟಿಸಲು ಉಪವಾಸ ಕೂತು ಅಸು ನೀಗಿದ್ದರೆ ಅವರ ಬದುಕಿಗೆ ಅವರೇ ಹುಡುಕುತ್ತಿದ್ದ ಪೂರ್ಣತೆಯ

ಪ್ರಭೆ ಪೂರ್ಣವಾಗಿ ದೊರಕುತ್ತಿತ್ತೋ ಏನೋ! ಇದು ಇತಿಹಾಸವನ್ನು ಧಿಕ್ಕರಿಸಲೆತ್ನಿಸಿದ ಗಾಂಧಿಯ ಮೇಲೆ ಇತಿಹಾಸ ತೀರಿಸಿಕೊಂಡ ಸೇಡೂ ಇರಬಹುದೇನೋ ಯಾರಿಗೆ ಗೊತ್ತು? ಆದರೆ ಇಂತಹ ನಿರ್ದಯ ಇತಿಹಾಸದೆದುರಿನಲ್ಲಿ ಗಾಂಧಿಯಂತಹ ವ್ಯಕ್ತಿತ್ವದ ಪೂರ್ಣತೆಯ ಸಾಧ್ಯಾಸಾಧ್ಯತೆಗಳ ಬಗ್ಗೆ ಮಾತಾಡಲು ನಾವು ಎಷ್ಟರವರು ಎಂಬ ಅಳುಕೂ ನನ್ನಂತಹವರನ್ನು ಕಾಡುತ್ತದೆ.

ಆದರೆ ಆ ಸಾಹಸವನ್ನು ಬಹಳ ಜನ ಮಾಡಿದ್ದಾರೆ. ರಾಜಕಾರಣದ ಈ ನೆಲೆಯಲ್ಲಲ್ಲದಿದ್ದರೂ, ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯಲ್ಲಿ. ಉದಾಹರಣೆಗೆ, ಮಗ ಹರಿಲಾಲ್, ಗಾಂಧಿ ಬದುಕಿನ ಆದರ್ಶಗಳಿಗೆ ಹಾಕಿದ ಸವಾಲುಗಳು ಮತ್ತು ಅದು ಇಂದು ಉತ್ಪಾದಿಸುತ್ತಿರುವ ಸಾಹಿತ್ಯ-ನಾಟಕ ಮತ್ತು ಸಿನಿಮಾಗಳು. ಇಂದು-ಗಾಂಧಿ ಕುರಿತಂತೆ ಇತಿಹಾಸ ದೂರದಲ್ಲಿ ನಿಂತು ಪಕ್ಕಾ ಆಧುನಿಕ ಸಂಸಾರಸ್ಥರಾಗಿ ಶಾಸ್ತ್ರೀಯ ವಿಶ್ಲೇಷಣೆ ಮಾಡಬಲ್ಲ ಸೌಲಭ್ಯ ಹೊಂದಿದವರಾಗಿರುವ ಸಂದರ್ಭದಲ್ಲಿ-ಈ ಸವಾಲುಗಳು ಬಹು ಗಂಭೀರವಾಗಿ, ವಿಶೇಷವಾಗಿ ಹರಿಲಾಲನ ಬದುಕಿನ ನಾಟಕೀಯವೆನ್ನಿಸುವ ಕರುಣಾಜನಕ ದುರಂತದ ಹಿನ್ನೆಲೆಯಲ್ಲಿ ನ್ಯಾಯಯುತವಾಗಿಯೇ ಕಂಡಾವು. ಆದರೆ ಗಾಂಧಿ ತಾವು ಕಂಡುಕೊಂಡ ದರ್ಶನದಂತೆ ವಿಶ್ವ ಕುಟುಂಬಿಯಾಗಿದ್ದರು. ಹಾಗಾಗಿ, ಅದರ ಚೌಕಟ್ಟಿನಲ್ಲಷ್ಟೇ ಅವರು ವೈಯುಕ್ತಿಕ ಕುಟುಂಬದ ಹಿತವನ್ನು ಕಾಣಲೆತ್ನಿಸುತ್ತಿದ್ದರು. ಈ ಆದರ್ಶ, ಗಾಂಧೀಜಿಯ ಒಟ್ಟು ದರ್ಶನದ, ಅಧ್ಯಾತ್ಮಿಕತೆಯ ಭಾಗವಾಗಿ ಐತಿಹಾಸಿಕ ಮಹತ್ವ ಮತ್ತು ಅನಿವಾರ್ಯತೆಗಳನ್ನೂ ಹೊಂದಿತ್ತು. ಇದನ್ನು ಅರಿಯಲು ನಿರಾಕರಿಸುವವರಿಗೆ ಗಾಂಧಿ ಹರಿಲಾಲನ ವಾದಕ್ಕೆ ಮಣಿದಿದ್ದರೆ ಅವರು ಗಾಂಧಿಯಾಗಿ ಉಳಿಯುತ್ತಿರಲಿಲ್ಲ ಎಂದು ಹೇಳಿದರೆ ಅರ್ಥವಾಗುವುದಾದರೂ ಹೇಗೆ? ಇನ್ನು ಗಾಂಧಿಯ ಪ್ರೇಮ, ಕಾಮಗಳ ಬಗ್ಗೆ ರೋಚಕವಾಗಿ ಚರ್ಚಿಸುವವರ ಬಗ್ಗೆ ಹೆಚ್ಚು ಏನೂ ಹೇಳದಿರುವುದು ಒಳ್ಳೆಯದು. ಆಧುನಿಕ ನಾಗರೀಕತೆಯ ಮನಸ್ಸು, ತನ್ನನ್ನು ಒಂದು ರೋಗವೆಂದು ಕರೆದುದಲ್ಲದೆ ತನ್ನ ವಿರುದ್ಧದ ಹೋರಾಟಕ್ಕಾಗಿ ಬದುಕನ್ನೇ ಮುಡುಪಾಗಿಟ್ಟವನ ಮೇಲೆ ತನ್ನ ಹುಟ್ಟು ಗುಣಕ್ಕನುಸಾರವಾಗಿ ಆ ಬದುಕನ್ನೇ ಗ್ರಾಹಕ ವಸ್ತುವಿನಂತೆ ಬಳಸುತ್ತಾ ಹಲ್ಲೆ ಮಾಡುತ್ತಿದೆ ಎಂಬುದರ ಹೊರತಾಗಿ? ಇಲ್ಲಿ ಬಯಲಾಗುತ್ತಿರುವವರಾದರೂ ಯಾರು?

–೫–

ಅಂಬೇಡ್ಕರ್-ಅಂಬೇಡ್ಕರ್‌ವಾದಿಗಳ ಸವಾಲು

ಆದರೆ ಗಾಂಧಿಯನ್ನು ಇಂದು ಹೆಚ್ಚು ಸಮಸ್ಯಾತ್ಮಕವಾಗಿ ಪ್ರಸ್ತುತಪಡಿಸಿರುವುದು ಅವರಿಗೆ ಅಂಬೇಡ್ಕರ್ ಹಾಕಿದ್ದ ಸವಾಲು. ಅದಕ್ಕಿಂತ ಹೆಚ್ಚಾಗಿ ಅಂಬೇಡ್ಕರ್ ಹೆಸರಲ್ಲಿ ಇಂದು ಅಂಬೇಡ್ಕರ್‌ವಾದಿಗಳೆನಿಸಿಕೊಂಡವರು ಹಾಕುತ್ತಿರುವ ಸವಾಲುಗಳು. ಇವುಗಳ ಪರಿಣಾಮವಾಗಿಯೋ ಎಂಬಂತೆ ಮಾಧ್ಯಮಗಳು ಎತ್ತುತ್ತಿರುವ, 'ಈ ರಾಷ್ಟ್ರದಲ್ಲಿ ಗಾಂಧಿಯ ವಾರಸುದಾರಿಕೆ ಕೊನೆಗೊಂಡು ಅಂಬೇಡ್ಕರರ ವಾರಸುದಾರಿಕೆ ಆರಂಭವಾಗಿದೆಯೆ?' ಎಂಬ ಪ್ರಶ್ನೆ. ಇದನ್ನು ವಿವೇಚಿಸುವ ಮೊದಲು ಗಾಂಧಿ-ಅಂಬೇಡ್ಕರ್ ಸಂಬಂಧ ಸಂದರ್ಭದ ಬಗ್ಗೆ ಎರಡು ಮುಖ್ಯ ಸಂಗತಿಗಳನ್ನು ನಾವು ನಾವು ಗಮನಿಸಬೇಕು. ಒಂದು, ಅಂಬೇಡ್ಕರರ

ಬಿಂಬ ಸಾರ್ವಜನಿಕವಾಗಿ ದೊಡ್ಡದಾಗಿ ಕಾಣತೊಡಗಿದ್ದು ಇತ್ತೀಚಿನ ಎರಡು ದಶಕಗಳಿಂದೀಚೆಗೆ–ಸಾಮಜಿಕ ನ್ಯಾಯವೆನ್ನುವುದು ವಿಶ್ವಾಸಾರ್ಹತೆ ಕಳೆದುಕೊಂಡ ಸಮಾಜವಾದಿ ರಾಜಕಾರಣದಿಂದ ಕಳಚಿಕೊಂಡು, ಅದರ ಪರಿಣಾಮವಾಗಿ ಮೂಡಿದ ಪ್ರತೀಕಾರಾತ್ಮಕ ರಾಜಕಾರಣದ ಭಾಗವಾಗಿ ಸರ್ಕಾರ ಬೃಹತ್ ಪ್ರಮಾಣದಲ್ಲಿ ಪ್ರಾಯೋಜಿಸಿದ ಅಂಬೇಡ್ಕರ್ ಶತಮಾನೋತ್ಸವದ ನಂತರ–ಎಂಬುದು. ಎರಡು, ಗಾಂಧಿ ವಾರಸುದಾರರು(ಇದರಲ್ಲಿ ಗಾಂಧಿವಾದಿಗಳು, ಕಾಂಗ್ರೆಸ್ಸಿಗರು, ಸಮಾಜವಾದಿಗಳು ಎಲ್ಲರೂ ಸೇರುತ್ತಾರೆ) ಗಾಂಧಿಯನ್ನು ಕ್ರಮೇಣ ಮತ್ತು ಈಗ ಇತಿಹಾಸ ಮರೆತ ಹೊಸ ತಲೆಮಾರುಗಳಿಗೆ ಸಂಪೂರ್ಣವಾಗಿ ಅನುಮಾನಾಸ್ಪದ ಮತ್ತು ಅಪ್ರಸ್ತುತ ಎಂಬಂತೆ ಮಾಡಿದ ಮೇಲೆ ಆ ಜಾಗದಲ್ಲಿ ಅಂಬೇಡ್ಕರ್ ಬಿಂಬವನ್ನು ತುಂಬುವ ಕಾರ್ಯ ನಡೆದಿದೆ ಎಂಬುದು.

ಇದಕ್ಕೆ ಮುನ್ನ ಅಂಬೇಡ್ಕರ್ ದಲಿತಪರ ಹೋರಾಟಗಾರರಾಗಿ, ಬಹುಶ್ರುತ ವಿದ್ವಾಂಸರಾಗಿ, ಸಂವಿಧಾನ ನಿರ್ಮಾತೃಗಳಲ್ಲಿ ಒಬ್ಬರಾಗಿ; ಆದರೆ, ಇತಿಹಾಸದಲ್ಲಿ ಅಸಾಧಾರಣವೆಂದೇನೂ ಅನ್ನಲಾಗದ ಒಂದು ಸಾಮಾನ್ಯ ಸ್ಥಾನವನ್ನಷ್ಟೆ ಪಡೆದಿದ್ದರು ಎಂಬುದನ್ನು ನಾವು ಮರೆಯಲಾಗದು. (ಅಥವಾ, ಎಪ್ಪತರ ದಶಕದಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ ಅಂಬೇಡ್ಕರ್‌ರ ಪುನರನ್ವೇಷಣೆಯನ್ನು ಆರಂಭಿಸುವವರೆಗೂ, ಈಗ ಕೆಲವರು ವಾದಿಸುತ್ತಿರುವಂತೆ, ಅವರ ನೆನಪು ರಾಷ್ಟ್ರ ಜೀವನದ ಸ್ಮೃತಿಯಲ್ಲಿ ಉದ್ದೇಶಪೂರ್ವಕವಾಗಿ ದಮನಗೊಂಡಿತ್ತೆಂದು ಹೇಳಬಹುದೇ?) ಜೊತೆಗೆ, ಅಸ್ಪೃಶ್ಯರ ಅವಮಾನ ಮತ್ತು ಶೋಷಣೆಗಳಿಗೆ ಹಿಂದೂ ಧರ್ಮವನ್ನೂ, ಅದರ ತಾತ್ವಿಕತೆಯನ್ನೂ, ಕಾಲಾನುಕಾಲದ ಅದರ ಸವರ್ಣೀಯ ನಾಯಕತ್ವವನ್ನೂ ಮತ್ತು ಅದರ ಸಮಕಾಲೀನ ಪ್ರತಿನಿಧಿಯಾಗಿ ಗಾಂಧಿಯನ್ನು ಗುರುತಿಸಿ ಅವರನ್ನೂ ಸಾರಾಸಗಟಾಗಿ ದೂಷಿಸುತ್ತಾ, ಅದಕ್ಕೆ ಅಗತ್ಯವಾದ ವಿದ್ವತ್ಪೂರ್ಣ ವಾದಗಳನ್ನೂ ಮಂಡಿಸುತ್ತಾ, ಇದರ ಭಾಗವಾಗಿ ಅನಿವಾರ್ಯವೆಂಬಂತೆ ಹಲವು ಬಾರಿ ವಸಾಹತು ಆಳ್ವಿಕೆಯೊಂದಿಗೆ ಗುರುತಿಸಿಕೊಂಡ ಅರೋಪಗಳಿಗೆ ತುತ್ತಾಗುತ್ತಾ ಬಂದ ಅಂಬೇಡ್ಕರ್, ಅಸ್ಪೃಶ್ಯ ಬೆಂಬಲಿಗರನ್ನಷ್ಟೇ ನೆಚ್ಚಿಕೊಂಡು ಮೀಸಲು ಸ್ಥಾನಗಳಲ್ಲಿ ಕೂಡಾ ಚುನಾವಣೆಗಳಲ್ಲಿ ಗೆಲ್ಲಲು ಆಗಲೇ ಇಲ್ಲ ಎಂಬುದನ್ನು ಕೂಡ. ಅವರು ಜಯಶಾಲಿಯಾದ ಮೂರು ಚುನಾವಣೆಗಳಲ್ಲಿ ಮೊದಲನೆಯದನ್ನು ಕಾಂಗ್ರೆಸ್ಸೇತರ ಉದಾರವಾದಿ ಸವರ್ಣೀಯ ಹಿಂದೂ ನಾಯಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಗೆದ್ದರೆ, ಮಿಕ್ಕೆರಡರ ಪೈಕಿ ಒಂದರಲ್ಲಿ ಅವರು ಮುಸ್ಲಿಂ ಲೀಗ್ ಪ್ರಾಯೋಜಿತ ಅಭ್ಯರ್ಥಿಯಾಗಿದ್ದರು ಮತ್ತು ಇನ್ನೊಂದರಲ್ಲಿ ಕಾಂಗ್ರೆಸ್ ಪ್ರಾಯೋಜಿತ ಅಭ್ಯರ್ಥಿಯಾಗಿದ್ದರು. (ನನ್ನ ಈ ಮಾಹಿತಿ ತಪ್ಪಿದ್ದರೆ, ದಯವಿಟ್ಟು ತಿದ್ದಲು ಕೋರುವೆ.) ಅವರು ಸಂವಿಧಾನದ ಮುಖ್ಯ ಚಾಲಕ ಶಕ್ತಿಯಾಗಲು ಸಾಧ್ಯವಾದದ್ದೂ, ನಂತರ ಕಾಂಗ್ರೆಸ್ ನೇತೃತ್ವದ ಮಧ್ಯಂತರ ಸರ್ಕಾರದಲ್ಲಿ ಕಾನೂನು ಮಂತ್ರಿಯಾದದ್ದೂ ಕಾಂಗ್ರೆಸ್ಸಿನ ಪ್ರಾಯೋಜಕತ್ವದಲ್ಲೇ. ಇತ್ತೀಚೆಗೆ ದಲಿತ ಸಮುದಾಯದ ಇನ್ನೋರ್ವ ಕಣ್ಮಣಿಯಾಗಿ ಥುತ್ತನೆ ಮೂಡಿರುವ ಜಗಜೀವನರಾಂ ಅವರ ಪತ್ನಿ ಇಂದ್ರಾಣಿದೇವಿಯವರ ನೆನಪುಗಳ ಪುಸ್ತಕದ ಪ್ರಕಾರ ಅಂಬೇಡ್ಕರ್ ತಮ್ಮನ್ನು ಮಂತ್ರಿ ಮಾಡಲು ನೆಹ್ರೂಗೆ ಒಂದು ಮಾತು ಹೇಳುವಂತೆ ಜಗಜೀವನರಾಂ ಅವರನ್ನು ಕೋರಿದ್ದರಂತೆ.

ಗಾಂಧೀಜಿಯ ಪ್ರಾಯಶ್ಚಿತ್ತ?

ಈ ಅಂತೆ ಕಂತೆಗಳು ಏನೇ ಇರಲಿ, ಅಂಬೇಡ್ಕರ್ ಈ ಎರಡೂ ಮಹತ್ವದ ಸ್ಥಾನಗಳನ್ನಲಂಕರಿಸಲು ಅಂದು ಇತರೆಲ್ಲ ಭಾರತೀಯರಿಗಿಂತ ಹೆಚ್ಚು ಸಮರ್ಥರೂ, ಅರ್ಹರೂ ಆಗಿದ್ದರು ಮತ್ತು ಅದನ್ನು ಗಾಂಧಿ ಮಾರ್ಗದರ್ಶನದ ಕಾಂಗ್ರೆಸ್ ತಡವಾಗಿಯಾದರೂ, ಅದರೆ ಅತಿ ಸೂಕ್ತ ಕಾಲದಲ್ಲಿ ಗುರುತಿಸಿ ಮಾನ್ಯ ಮಾಡಿತು ಎಂಬುದನ್ನು ಗಮನಿಸದಿರಲಾಗದು. ಇದಕ್ಕೆ ಆ ಹೊತ್ತಿಗೆ ಅಂಬೇಡ್ಕರ್ ಕೂಡಾ ಅಂದು ತಮಗೆದುರಾದ ಪರಿಸ್ಥಿತಿಯಲ್ಲಿ ಒಂಟಿಯಾಗಿ ಹೋದ ಅಸಹಾಯಕತೆಯಲ್ಲಿ ಕಾಂಗ್ರೆಸ್, ಸವರ್ಣೀಯ ಹಿಂದೂ ಸಮುದಾಯ ಮತ್ತು ಗಾಂಧಿ ಬಗ್ಗೆ ತಮ್ಮ ನಿಲುವಿನಲ್ಲಿ ಉದಾರವಾದುದೂ ಕಾರಣವಾಗಿತ್ತು. ಹಾಗೇ, ಇದು ಒಂದು ರೀತಿಯಲ್ಲಿ ಗಾಂಧಿ ಅಂಬೇಡ್ಕರ್ ಬಗ್ಗೆ ಆರಂಭದಲ್ಲಿ–ಎರಡನೇ ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ–ತೋರಿದ್ದ ಶತತ್ವಕ್ಕಾಗಿ ಮತ್ತು ಕಾಂಗ್ರೆಸ್ ಸ್ವಾತಂತ್ರ್ಯಾಂದೋಲನದುದ್ದಕ್ಕೂ–ಅವರ ವಾದಗಳು ಎಷ್ಟೇ ಏಕಪಕ್ಷೀಯ ಮತ್ತು ಕಟುವಾಗಿದ್ದರೂ–ಅವರು ಪ್ರತಿನಿಧಿಸುತ್ತಿದ್ದ ಸಮುದಾಯದ ಅವಮಾನ ಮತ್ತು ಶೋಷಣೆಗಳ ದೀರ್ಘ ಇತಿಹಾಸದ ದೃಷ್ಟಿಯಿಂದಲಾದರೂ ಅಗತ್ಯ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು, ಬಹುಶಃ ತಾನು ಹಾಕಿಕೊಂಡಿದ್ದ ರಾಜಕೀಯ ಚೌಕಟ್ಟು ಹೇರಿದ್ದ ಒತ್ತಾಯಗಳಿಂದಾಗಿ ವಿಫಲವಾಗಿದ್ದುದಕ್ಕಾಗಿ ಮಾಡಿಕೊಂಡ ಪ್ರಾಯಶ್ಚಿತ್ತವೂ ಅಗಿತ್ತು.

ಈ ಎಲ್ಲ ಹಿನ್ನೆಲೆಯಲ್ಲಿ ಅಂಬೇಡ್ಕರ್ ಈಗ ಗಾಂಧಿ ಜಾಗವನ್ನು ತುಂಬಿಕೊಂಡು ಅವರಿಗೆ, ಅವರ ತಾತ್ವಿಕತೆಗೆ, ಆ ತಾತ್ವಿಕತೆಯ ತಥಾಕಥಿತ ವೈಫಲ್ಯಕ್ಕೆ ಪರ್ಯಾಯ, ಪರಿಹಾರ ಒದಗಿಸಿದ್ದಾರೆ ಎಂದು ಹೇಳುವುದು ಅನುಚಿತವಾದೀತು. ಇತಿಹಾಸದಲ್ಲಿ ಇಬ್ಬರಿಗೂ ಅವರವರದೇ ಆದ ಜಾಗಗಳಿವೆ. ಒಂದು ವ್ಯತ್ಯಾಸವೆಂದರೆ ಅಂಬೇಡ್ಕರ್ ಇಂದು ಎದುರಾಗುತ್ತಿರುವ ಸನ್ನಿವೇಶಗಳ ಎದುರಲ್ಲಿ ಮತ್ತೆ ಮತ್ತೆ ಸೃಜನಶೀಲ ಮನರನ್ವೇಷಣೆಗೆ ಒಳಗಾಗುತ್ತಾ, ಹಿಂದೆಂದಿಗಿಂತ ಹೆಚ್ಚೆಚ್ಚು ಪ್ರಸ್ತುತರಾಗುತ್ತಿದ್ದಾರೆ; ಚರ್ಚೆಗೂ ಒಳಗಾಗುತ್ತಿದ್ದಾರೆ. ಇತಿಹಾಸದ ಪುನಾರಚನೆ ನಡೆಯುತ್ತಿರುವ ಇಂತಹ ಸಂದರ್ಭದಲ್ಲಿ ಗಾಂಧಿ ಹಿನ್ನೆಲೆಗೆ ಸರಿದಂತೆ ತೋರುತ್ತಿರುವುದಕ್ಕೆ ಕಾರಣವಿದೆ. ಅದೆಂದರೆ, ಅವರು ಸ್ವಾತಂತ್ರ್ಯ ನಂತರದಲ್ಲೇ ಜನಾಂದೋಲನ ರೂಪದ ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿಸದೆ ವಿಸರ್ಜಿಸಬೇಕೆಂದು ಹೇಳಿದ್ದರೂ ಅದು ನೆರವೇರದೇ ಹೋಗಿ ಗಾಂಧಿ ಚಿತ್ರದ ಚೌಕಟ್ಟು ಕಾಲದೂರಕ್ಕೆ ಸಿಕ್ಕಿ ಜನಪ್ರಿಯ ನೆಲೆಯಲ್ಲಿ ಕಾಂಗ್ರೆಸ್ ರಾಜಕಾರಣದ ಮಟ್ಟಕ್ಕೆ(ಈ ಮಧ್ಯೆ ಇಂದಿರಾ, ರಾಜೀವ್, ಸೋನಿಯಾ, ರಾಹುಲ್, ಪ್ರಿಯಾಂಕ ಇತ್ಯಾದಿ ಗಾಂಧಿಗಳ ಗೊಂದಲ ಬೇರೆ!) ಸಂಕುಚಿತಗೊಂಡಿರುವುದು. ಗಾಂಧೀಜಿಯ ಈ ಬಯಕೆ ನೆರವೇರದಿರಲು ಪರೋಕ್ಷ ಕಾರಣ, ಸಮಾಜವಾದಿಗಳು ತಮ್ಮ ಅತಿ ಬುದ್ಧಿವಂತಿಕೆಯ ಮೇಲಾಟಗಳಲ್ಲಿ ಸಮತೋಲನ ಕಳೆದುಕೊಂಡು ಸೃಷ್ಟಿಸಿದ ವಿಘಟನಾತ್ಮಕ ರಾಜಕಾರಣ ದಿಂದಾಗಿ ತಾವು ಕಾಂಗ್ರೆಸ್ಸಿಗೆ ರಾಜಕೀಯ ಪರ್ಯಾಯವಾಗಲು ವಿಫಲರಾದದ್ದು ಎಂಬುದನ್ನೂ ಇಲ್ಲಿ ಹೇಳಬೇಕಾಗಿದೆ.

ಅದೇನೇ ಇರಲಿ, ಗಾಂಧೀಜಿಯ ಪ್ರಸ್ತುತತೆ ಅಥವಾ ಅರ್ಥಪೂರ್ಣತೆ ಇರುವುದು

ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿ ರೂಪಿಸಿದ ಕಾಂಗ್ರೆಸ್ ರಾಜಕಾರಣದಲ್ಲಷ್ಟೇ ಅಲ್ಲ. ಹಾಗಿದ್ದಲ್ಲಿ ಅವರು ತಮ್ಮ ಬದುಕಿನ ಸಾಹಸ ಯಾತ್ರೆಯನ್ನು ಪೂರ್ಣಗೊಳಿಸುವ ಮುನ್ನವೇ ಅಥವಾ ಅದರ ಭಾಗವಾಗಿಯೇ ಕಾಂಗ್ರೆಸ್‌ನ ವಿಸರ್ಜನೆಗೆ ಸೂಚಿಸುತ್ತಿರಲಿಲ್ಲ. ಗಾಂಧೀಜಿ ಸ್ವಾತಂತ್ರ್ಯ ಹೋರಾಟವನ್ನು ಗ್ರಹಿಸಿದ್ದು, ರೂಪಿಸಿದ್ದು, ನಡೆಸಿದ್ದು ಮನುಷ್ಯನನ್ನು(ಸಾರ್ವತ್ರಿಕವಾಗಿ ಹೇಳುವುದಾರೆ ಜಗತ್ತನ್ನು) ಪಶ್ಚಿಮದ ನಾಗರೀಕತೆಯ ವ್ಯಾಮೋಹದಿಂದ ಬಿಡುಗಡೆಗೊಳಿಸುವ ತಮ್ಮ ಜೀವನ ಸಾರ್ಥಕತೆಯ ಮಹಾಸಾಹಸದ ಭಾಗವಾಗಿ. ಅವರು ಅದನ್ನು ಕಂಡುಕೊಂಡದ್ದು ಇಂಗ್ಲೆಂಡಿನಲ್ಲಿ, ದಕ್ಷಿಣ ಆಫ್ರಿಕಾದಲ್ಲಿ. ಪ್ರಯೋಗ ನಡೆಸಿದ್ದು ಭಾರತದಲ್ಲಿ. ಇದನ್ನು ಅರಿಯಲಾಗದ ಅಂಬೇಡ್ಕರ್‌ವಾದಿಗಳೆನಿಸಿಕೊಂಡವರು, ಅವರಲ್ಲಿ 'ಸನಾತನ ಹಿಂದೂ'ವನ್ನು ಮಾತ್ರ ಕಂಡು–'ಸನಾತನ' ಎಂಬ ಶಬ್ದದ ಅರ್ಥವನ್ನು ತಪ್ಪಾಗಿ ಗ್ರಹಿಸಿದ್ದೇವೆ ಎಂಬುದರ ನೆದರೂ ಇಲ್ಲದೆ– ಅವರ ಮೇಲೆ ಬೆಂಕಿಯುಗುಳುತ್ತಿದ್ದಾರೆ. (ಸನಾತನ ಎಂದರೆ ಆದಿ–ಅಂತ್ಯಗಳಿಲ್ಲದೆ ನಿರಂತರ ಸತ್ಯಾನ್ವೇಷಣೆಯಲ್ಲಿರುವ ನಿತ್ಯ ನೂತನತೆ ಎಂದು.) ಗಾಂಧಿ–ಅಂಬೇಡ್ಕರ್ ಕಾಲದಲ್ಲಿ ದಲಿತ ಸಮೂಹಕ್ಕೆ ಅಂಬೇಡ್ಕರ್ ಭಾಷೆಗಿಂತ ಗಾಂಧೀಜಿ ಭಾಷೆ ಹೆಚ್ಚು ತಲುಪುತ್ತಿತ್ತು ಮತ್ತು ಅಂಬೇಡ್ಕರ್ ಜೊತೆಗಿಂತ ಗಾಂಧಿ ಸನಿಹದಲ್ಲೇ ಹೆಚ್ಚು ದಲಿತರಿದ್ದರು ಎಂಬುದನ್ನು ಮರೆತು.

ಆದರೆ ಇಂದು ಒಟ್ಟು ಸಮಾಜದ ವಿಷಯದಲ್ಲೂ ಅಗಿರುವಂತೆ ಗಾಂಧಿ ಹಿಂದೆ ಸರಿದು, ಬಹುಪಾಲು ದಲಿತರ ದೃಷ್ಟಿಯಲ್ಲಿ ಅಂಬೇಡ್ಕರ್ ಮುನ್ನೆಲೆಗೆ ಬಂದು ಅವರ ಬಹುಮುಖ ವಿದ್ವತ್ತು ಮುಂತಾದ ಇತರ ಅನೇಕ ಕಾರಣಗಳಿಂದಾಗಿ ಎಲ್ಲರ ಗಮನ ಸೆಳೆಯುವಂತಾಗಿದ್ದರೆ, ಅದಕ್ಕೆ ಕಾರಣಗಳು ಎರಡು. ಒಂದು, ಮೊದಲೇ ಹೇಳದಂತೆ ಗಾಂಧಿ ವಾರಸುದಾರಿಕೆಯನ್ನು ಅವರ ವ್ಯಕ್ತಿತ್ವದ ಸರಳೀಕರಣದ ಮೂಲಕ ಅಪಮೌಲ್ಯಗೊಳಿಸಲಾಗಿರುವುದು. ಎರಡು, ಇಡೀ ಸಮಾಜದ ಭಾಗವಾಗಿ ದಲಿತರು ಉಳಿದ ಸಮಾಜದಂತೆಯೇ ಆಧುನಿಕ ನಾಗರೀಕತೆಯ ಸಕ್ರಿಯ ಭಾಗೀದಾರರರಾಗಿರುವುದು. ಈ ನಾಗರೀಕತೆಯ ನಿರ್ದಯ ಸ್ಪರ್ಧೆಯಲ್ಲಿ ಜಯಶಾಲಿಗಳಾಗಲು ಅವರಿಗೆ ಆಧುನಿಕ ನಾಗರೀಕತೆಯ ಟೀಕಾಕಾರರಾಗಿದ್ದ ಸಾತ್ವಿಕ ಗಾಂಧಿಯ ಕರ್ತವ್ಯಪಾರಾಯಣತೆಯ ಸಾಮಾಜಿಕ ಮಾರ್ಗಕ್ಕಿಂತ, ಅದರ ಅಭಿಮಾನಿಯಾಗಿ ಅದೇ ದಲಿತರ ವಿಮೋಚನೆಗೆ ಪರಿಹಾರವೆಂದು ನಂಬಿದ್ದ ರಾಜಸಿಕ ಅಂಬೇಡ್ಕರ್‌ರ ಹಕ್ಕೊತ್ತಾಯದ ರಾಜಕೀಯ ಮಾರ್ಗವೇ ಹೆಚ್ಚು ಸ್ಫೂರ್ತಿದಾಯಕವಾಗಿ ಕಂಡಿರುವುದರಲ್ಲಿ ಆಶ್ಚರ್ಯವೇನಿಲ್ಲ.

–೬–

ಅಂಬೇಡ್ಕರ್‌ರ ಭೌತವಾದ

ಅಂಬೇಡ್ಕರ್ ಪಶ್ಚಿಮದ ಆಧುನಿಕ ನಾಗರೀಕತೆಯ ಅವಿಮರ್ಶಾತ್ಮಕ ಬೆಂಬಲಿಗರಾಗಿದ್ದರು. ಅವರ ರಾಜಕೀಯ ಮತ್ತು ಆರ್ಥಿಕ ನೀತಿ–ಅವರು ಪ್ರತಿಪಾದಿಸಿದ ಸರ್ಕಾರಿ ಸಮಾಜವಾದವೂ ಸೇರಿದಂತೆ–ಪಶ್ಚಿಮದ ಸಗಟು ಪ್ರಜಾಪ್ರಭುತ್ವ ಮಾದರಿಗಳಿಂದ ಸ್ಫೂರ್ತಿ

ಪಡೆದಿತ್ತು. ಕೃಷಿ, ಕೈಗಾರಿಕೆ, ಯಂತ್ರ, ಆಡಳಿತ, ಅಭಿವೃದ್ಧಿ ಯೋಜನೆ, ಈ ಎಲ್ಲ ಕ್ಷೇತ್ರಗಳಲ್ಲೂ ಅವರು ವಿಕೇಂದ್ರೀಕರಣದ ಪರಮ ವಿರೋಧಿಯಾಗಿದ್ದರು. ಹಳ್ಳಿ, ದಲಿತರ ಪಾಲಿನ ನರಕವೆಂದು ದೃಢವಾಗಿ ನಂಬಿದ್ದ ಅವರು ನಗರೀಕರಣದ ಪ್ರತಿಪಾದಕರಾಗಿದ್ದರು. ಅವರು ಕಬೀರ್ ಪಂಥದ ಕೌಟುಂಬಿಕ ಹಿನ್ನೆಲೆಯಿಂದ ಬಂದವರಾಗಿದ್ದರೂ, ಪಶ್ಚಿಮದ ಪ್ರಭಾವದಲ್ಲಿ ಭೌತವಾದಿಯಾಗಿ ಪರಿವರ್ತಿತರಾಗಿದ್ದರು. ಹಾಗಾಗಿಯೇ ಅವರು ಬೌದ್ಧ ಧರ್ಮವನ್ನು ಮಾರ್ಕ್ಸ್‌ವಾದಿ ಪರಿಭಾಷೆಗೆ ಸಮಾನಾಂತರವಾಗಿ ನಿರೂಪಿಸುವ ಪ್ರಯತ್ನ ಮಾಡಿದರು. (ಬೌದ್ಧ ವಿದ್ವಾಂಸರು ಇದನ್ನು ಒಪ್ಪಲಿಲ್ಲ ಎಂಬುದು ಬೇರೆ ಮಾತು.) ಮೂಲತಃ ಗಾಂಧಿಯಂತೆಯೇ ಧಾರ್ಮಿಕ ಮನಸ್ಸಿನವರಾಗಿದ್ದ ಅಂಬೇಡ್ಕರ್ ಬಹುಶಃ ತಾವು ತಮ್ಮ ಬದುಕಿನ ಸಾರ್ಥಕತೆಯ ಅನ್ವೇಷಣೆಯ ಮಹಾ ಪ್ರಯಾಣದಲ್ಲಿ ಅನಿವಾರ್ಯವಾಗಿ ಆರಿಸಿಕೊಳ್ಳಬೇಕಾಗಿ ಬಂದ ಗಾಂಧಿ ವಿರೋಧಿ ಸಂಘರ್ಷಾತ್ಮಕ ರಾಜಕಾರಣದ ಒತ್ತಡಗಳಿಂದಾಗಿ ಭೌತವಾದವನ್ನು ಆವಾಹಿಸಿಕೊಳ್ಳಬೇಕಾಯಿತು. ಇದರ ವಿರೋಧಾಭಾಸಗಳಿಂದ ಹುಟ್ಟಿದ ಆಂತರಿಕ ವಿಪ್ಲವವನ್ನು ಮೀರಲೆಂದೇ ಅವರು ತಮ್ಮ ಬದುಕಿನ ಕೊನೆ ಘಳಿಗೆಯಲ್ಲಿ ನಾಟಕೀಯ ರೀತಿಯಲ್ಲಿ ಬೌದ್ಧ ಸಂನ್ಯಾಸಿ ವಸ್ತ್ರ ಮತ್ತು ದಂಡ ಧಾರಣೆ ಮಾಡುವ ತೀರ್ಮಾನ ಕೈಗೊಂಡರೇನೋ ಎಂಬ ಅನುಮಾನ ನನ್ನದು. ಇದನ್ನು ನೋಡಲು ಗಾಂಧಿ ಇರಬೇಕಿತ್ತು ಮತ್ತು ಮುಂದಿನ ಪರಿಣಾಮಗಳು ಕುತೂಹಲಕಾರಿಯಾಗಿರುತ್ತಿತ್ತೆಂದು ನನಗೆ ಅನೇಕ ಬಾರಿ ಅನ್ನಿಸಿದೆ. ಅದೇನೇ ಇರಲಿ, ಇಂದಿನ ನನ್ನ ಕೆಲವು ದಲಿತ ನಾಯಕ ಮಿತ್ರರು ಸಭೆಗಳಲ್ಲಿ ಬುದ್ಧ ಬುದ್ಧ ಎನ್ನುತ್ತಲೇ ಬೆಂಕಿಯ ಕಿಡಿಗಳನ್ನು ಉಗುಳುವುದನ್ನು ನೋಡಿದಾಗಲೆಲ್ಲ ಅಂಬೇಡ್ಕರರನ್ನು ಕಾಡಿದ ಈ ದ್ವಂದ್ವದ ತೀವ್ರತೆ ನನ್ನ ಅನುಭವಕ್ಕೆ ಬರುತ್ತದೆ.

ಆದರೆ ಪಶ್ಚಿಮದ ಆಧುನಿಕ ನಾಗರೀಕತೆಯನ್ನೇ ಮುಖಾಮುಖಿ ಮಾಡಿಕೊಂಡು ಅದಕ್ಕೆ ಪರ್ಯಾಯ ರೂಪಿಸುವ ಯುಗಸಾಹಸವೆನ್ನಬಹುದಾದ ಪ್ರಯೋಗದಲ್ಲಿ ತೊಡಗಿದ್ದ ಗಾಂಧೀಜಿಯ ಬದುಕಿನಲ್ಲಿ ಮೊದಲು ನಾವು ಗಮನಿಸಬೇಕಾದದ್ದು, ಅವರು ಮೂಲತಃ ಯಾವ ಮತ್ತು ಎಂತಹ ಸಂದರ್ಭದಲ್ಲೂ 'ವರ್ತಮಾನ'ಕ್ಕಷ್ಟೇ ಬಂಧಿತವಾದ ವ್ಯಕ್ತಿತ್ವವಾಗಿ ಕಾಣುವಂತಹವರಲ್ಲ ಎಂಬುದನ್ನು. ಆದರೆ ಗಾಂಧಿಯೊಂದಿಗೆ ಅಂಬೇಡ್ಕರ್ ನಡೆಸಿದ ಘರ್ಷಣೆ ಪೂರಾ ವರ್ತಮಾನಕ್ಕೆ ಸಂಬಂಧಿಸಿದ್ದಷ್ಟೇ ಆಗಿತ್ತು. ಅದು ಮೇಲೆ ತಿಳಿಸಿದಂತೆ ಜಾತಿ ಪದ್ಧತಿ ಕುರಿತ ನಿಲುವೇ ಆಗಿರಲಿ, ಹಳ್ಳಿಗಳನ್ನು ಕುರಿತ ನಿಲುವೇ ಆಗಿರಲಿ; ಅಥವಾ ಪ್ರಜಾಪ್ರಭುತ್ವದ ಸ್ವರೂಪವನ್ನು ಕುರಿತದ್ದೇ ಆಗಿರಲಿ, ಅಭಿವೃದ್ಧಿ ತಂತ್ರ, ಮಾದರಿಗಳನ್ನು ಕುರಿತದ್ದೇ ಆಗಿರಲಿ, ಇಬ್ಬರ ನಿಲುವುಗಳು–ಕೆಲವು ಘರ್ಷಣಾತ್ಮಕವಾಗುವಷ್ಟು ಮತ್ತೆ ಕೆಲವು ಘರ್ಷಣಾತ್ಮಕವೆನ್ನಿಸುವಷ್ಟು–ವಿಭಿನ್ನವಾಗಿರಲು ಇದೇ ಮೂಲ ಕಾರಣವಾಗಿತ್ತು. ಗಾಂಧಿ ಈ ಕ್ಷಣವನ್ನು ಮನುಷ್ಯನು ಸೃಷ್ಟಿಯ ಭಾಗವಾಗಿ ಮುಳುಗೆದ್ದು ತೇಲುತ್ತಾ ಬಂದಿರುವ ಅನಂತ ಕಾಲ ಪ್ರವಾಹದ ಒಂದು ಬಿಂದುವಾಗಿ ನೋಡುತ್ತಿದ್ದರು. ಆದರೆ ಅಂಬೇಡ್ಕರ್‌ಗೆ ಕಾಲ ಪ್ರವಾಹವು ನಿಯತ ಇತಿಹಾಸವಾಗಿ ಘನೀಭವಿಸಿದ ರೂಪದಲ್ಲಷ್ಟೇ ಕಾಣುತ್ತಿದ್ದು, ಈ ಕ್ಷಣವೆಂಬುದು ಆ ಇತಿಹಾಸದ ಭಾಗವಾಗಿತ್ತು. ಗಾಂಧಿ ನಾಗರೀಕತೆಯ ಅಳತೆಯಲ್ಲಿದ್ದರೆ, ಅಂಬೇಡ್ಕರ್ ಇತಿಹಾಸದ ಅಳತೆಯಲ್ಲಿದ್ದರು.

ಹಾಗಾಗಿಯೇ, ಅಂಬೇಡ್ಕರ್ ಮಹಾತ್ಮರು ಮಹಾತ್ಮರ ಭಾಷೆಯಲ್ಲಿ ಮಾತಾಡದೆ ಸಾಮಾನ್ಯ ಮನುಷ್ಯನ ಭಾಷೆಯಲ್ಲಿ ಮಾತಾಡುವಂತೆ ಗಾಂಧಿಯನ್ನು ಕೆಣಕುತ್ತಿದ್ದುದು. ಈ ಹಿನ್ನೆಲೆಯಲ್ಲಿ ಇವರಿಬ್ಬರ ನಡುವಣ ಘರ್ಷಣೆಗೆ ಮುಖ್ಯ ಕಾರಣವಾದ ಜಾತಿಪದ್ಧತಿಯನ್ನು ಕುರಿತ ನಿಲುವುಗಳನ್ನೇ ನೋಡೋಣ.

ಗಾಂಧಿಯ ಜಾತಿ ಮೀಮಾಂಸೆ

ಗಾಂಧಿ ಜಾತಿಪದ್ಧತಿಯ ಮೂಲವನ್ನು ವರ್ಣ ಧರ್ಮದಲ್ಲಿ, ಆನಂತರ ವರ್ಣ ಪದ್ಧತಿಯಲ್ಲಿ ನೋಡಿ, ಅದು ಈಗ ಶ್ರೇಣೀಕರಣ ಮತ್ತು ಶೋಷಣೆಯ ಸಾಧನವಾಗಿರುವುದನ್ನು ಕಂಡರು. ಹಾಗಾಗಿ ಜಾತಿಪದ್ಧತಿಯ ಕೆಡಕುಗಳನ್ನು ನಿವಾರಿಸಲು ಅವರು ಕಂಡುಕೊಂಡ ಮಾರ್ಗವು, ಜಾತಿಪದ್ಧತಿಯನ್ನು ಇತಿಹಾಸದ, ಹಾಗಾಗಿ ಅದರ ರಾಜಕಾರಣದ ಭಾಗವಾಗಿ ಕಂಡ ಅಂಬೇಡ್ಕರ್ ಅದರ ನಿವಾರಣೆಗಾಗಿ ಕಂಡುಕೊಂಡ ಮಾರ್ಗಕ್ಕಿಂತ ಬೇರೆಯಾಗಿತ್ತು. ಮುಖ್ಯವಾಗಿ ಅದರ ವೇಗ ಮತ್ತು ತೀವ್ರತೆಗಳಲ್ಲಿ. ಸಾಧನ ಮತ್ತು ಸಾಧ್ಯಗಳಲ್ಲಲ್ಲ. ಗಾಂಧಿಯ ಮಾರ್ಗ, ಜಾತಿಪದ್ಧತಿಯನ್ನು ಮೂಲತಃ ಕಾಲಾನುಕಾಲದಲ್ಲಿ ಮನುಷ್ಯ ತನ್ನ ಸಂಸ್ಕೃತಿ–ನಾಗರೀಕತೆಗಳನ್ನು ಕಟ್ಟಿಕೊಳ್ಳುವಲ್ಲಿ ನಡೆಸುತ್ತಾ ಬಂದ ಸಾಮಾಜಿಕ ವ್ಯವಸ್ಥೆಯ ಪ್ರಯೋಗದ ಒಂದು ಉತ್ಪನ್ನವಾಗಿ ಕಂಡಿತ್ತು. ಹಾಗಾಗಿ ಅದು ಅದನ್ನು ಮನುಷ್ಯನೊಳಗಿನ ಅಪರಿಹಾರ್ಯ ದುಷ್ಟತನದ ಪ್ರತೀಕದಂತೆ ಪರಿಗಣಿಸದೆ ಅದನ್ನೊಂದು ತತ್ಕಾಲೀನ ರೋಗವೊಂದಕ್ಕೆ ಮದ್ದು ಅರೆಯುವ ವಿಧಾನವಾಗಿ ವಿನ್ಯಾಸಗೊಳಿಸಿಕೊಂಡಿತ್ತು. ಆದರೆ ಅಂಬೇಡ್ಕರ್‌ಗೆ ಜಾತಿ ಪದ್ಧತಿ, ಅದರ ಓರ್ವ ಕ್ರೂರ ಬಲಿಯಾಗಿ ಅನುಭವಿಸಿದ ನೋವು–ನರಳಾಟಗಳಲ್ಲಿ ಒಂದು ಕ್ಷಿಪ್ರ ಶಸ್ತ್ರ ಚಿಕಿತ್ಸೆಯ ಮೂಲಕ ತಕ್ಷಣ ಕತ್ತರಿಸಿ ಹಾಕಬೇಕಾದ ನಮ್ಮ ಸಾಮಾಜಿಕ ದೇಹದ ಒಂದು ವ್ರಣಭಾಗವಾಗಿ ಕಂಡಿತ್ತು.

ಆದರೆ ಗಾಂಧಿಗೆ ಈ ಶಸ್ತ್ರ ಚಿಕಿತ್ಸೆ ವಿಧಾನ, ಅದು ಯಾವುದರ ಪರಿಹಾರವಾಗುವುದೆಂದು ಅಂಬೇಡ್ಕರ್ ನಂಬಿದ್ದರೋ ಅದರ ಉಲ್ಬಣತೆಗೆ ಕಾರಣವಾಗುವಂತೆ ಕಂಡಿತು. ಏಕೆಂದರೆ ಅವರ ಪ್ರಕಾರ ಜಾತಿ ಪದ್ಧತಿಯ ತರ್ಕ ನಮ್ಮ ಸಾಮಾಜಿಕ ದೇಹದ ಒಂದು ಭಾಗದ ವ್ರಣರೂಪ ಮಾತ್ರವಾಗಿರದೆ ಅದಕ್ಕೆ ಇಡಿಯಾಗಿ ಹತ್ತಿರುವ ಒಂದು ಕುಸಂಸ್ಕೃತಿ–ನಾಗರೀಕತೆಯೆಂಬ ವಿಷದ ರೂಪದಲ್ಲಿಯೂ ಕ್ರಿಯಾಶೀಲವಾಗಿತ್ತು. ಹಾಗಾಗಿಯೇ ಗಾಂಧಿ ಅಸ್ಪೃಶ್ಯರನ್ನು ಹಿಂದೂ ಸಮುದಾಯದ ಮುಖ್ಯ ವಾಹಿನಿಯ ಅವಿಭಾಜ್ಯವಾಗಿಯೇ ಕಾಣುವ ಮತ್ತು ಅವರಿಗೆ ಪ್ರತ್ಯೇಕ ಮತಕ್ಷೇತ್ರಗಳ ಸಲಹೆಗೆ ಒಪ್ಪದ ನಿಷ್ಠುರ ನಿಲುವುಗಳನ್ನು ತಾಳಬೇಕಾಯಿತು. ಹಾಗೇ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮವನ್ನು ಅವರು, ನಿಜವಾಗಿ 'ಸ್ವರಾಜ್ಯ ಆಂದೋಲನ' ಎಂದೇ ಇಂದು ಗುರುತಿಸಬೇಕಾದ ತಮ್ಮ ಸ್ವಾತಂತ್ರ್ಯ ಆಂದೋಲನದ ರಚನಾತ್ಮಕ ಭಾಗವಾಗಿ ಸಂಯೋಜಿಸಿದರು. ಆದರೆ ಗಾಂಧಿಯ ಈ ಆಲೋಚನಾ ಕ್ರಮವನ್ನು ಹಿಂದೂ ರಾಜಕಾರಣದ ಭಾಗವಾಗಿ ಮಾತ್ರ ಕಾಣುವಷ್ಟು ವರ್ತಮಾನದ ರಾಜಕಾರಣದಲ್ಲಿ ವ್ಯಸ್ತರಾಗುವ ಸ್ಥಿತಿಗೆ ಸಿಕ್ಕಿದ್ದ ಅಂಬೇಡ್ಕರ್‌ಗೆ ಗಾಂಧಿ ಅಸ್ಪೃಶ್ಯರ ಆಜನ್ಮ ಶತ್ರುವಿನಂತೆ ಕಂಡಿದ್ದರೆ ಆಶ್ಚರ್ಯವಿಲ್ಲ. (ಹಾಗೇ ಇಲ್ಲಿ ಅಸ್ಪೃಶ್ಯತೆಯ

ಸಮಸ್ಯೆ ಗಾಂಧಿಯನ್ನು ಅಂಬೇಡ್ಕರ್‌ರೊಡನೆ ಆರಂಭವಾದ ಮುಖಾಮುಖಿಯ ಕಾಲಕ್ಕಿಂತ ಬಹು ಮುಂಚೆಯೇ–ಅವರ ಶಾಲಾ ದಿನಗಳು, ದಕ್ಷಿಣ ಆಫ್ರಿಕಾದಲ್ಲಿನ ಹೋರಾಟದ ದಿನಗಳೂ ಮತ್ತು ಸಾಬರ್ಮತಿ ಆಶ್ರಮದ ಬದುಕಿನ ದಿನಗಳಲ್ಲೂ–ಕಾಡುತ್ತಿತ್ತು ಎಂಬುದನ್ನೂ ಗಮನಿಸಬೇಕು.)

ಆದರೂ ಅಂದು ಅಸ್ಪೃಶ್ಯರೂ ಸೇರಿದಂತೆ ಸಾಮಾನ್ಯ ಜನತೆಯಿಂದ ಗಾಂಧಿ ಮಾರ್ಗಕ್ಕೇ ಮಾನ್ಯತೆ ದೊರೆಯಿತೆಂಬುದನ್ನು ನಾವು ಗಮನಿಸದಿರಲಾಗದು. ಇಂದು ಅಂಬೇಡ್ಕರ್ ಮಾರ್ಗಕ್ಕೆ ಒಟ್ಟಾರೆ ಸಾಮಾನ್ಯ ಜನತೆಯಿಂದಲ್ಲದಿದ್ದರೂ ತತ್ಕಾಲೀನ ರಾಜಕೀಯ ಹಿತಾಸಕ್ತಿಗಳ ಕಾರಣದಿಂದಾಗಿ ಆಳುವ ವ್ಯವಸ್ಥೆಯಿಂದ ಮಾನ್ಯತೆ ದೊರಕಿದ್ದರೆ, ಅದು ದಲಿತ ಸಮುದಾಯ ಮತ್ತು ಒಟ್ಟಾರೆ ಸಮಾಜದ ನಡುವಣ ಸಂಬಂಧಗಳ ಮೇಲೆ ಯಾವ ಪರಿಣಾಮ ಉಂಟು ಮಾಡಿದೆ ಮತ್ತು ಇದರ ದೀರ್ಘಕಾಲಿಕ ಪರಿಣಾಮಗಳೇನು ಎಂಬುದನ್ನು ನಾವು ತತ್ಕಾಲೀನ ರಾಜಕೀಯ ಆವೇಶಗಳನ್ನು ಮೀರಿ ನಿಂತು ಪರಿಶೀಲಿಸಬೇಕಾಗಿದೆ. ನಿಜ, ಇಂದು ಎದುರಾಗಿರುವ ಜಾಗತೀಕರಣದ ಸಂದರ್ಭದಲ್ಲಿ ಅಂಬೇಡ್ಕರ್‌ರ ಮಾರ್ಗಕ್ಕೆ ಸಂಪೂರ್ಣ ವಿದಾಯ ಹೇಳಿದರೆ ದಲಿತರು 'ವರ್ತಮಾನ'ದ ಅವಕಾಶಗಳನ್ನು ಕಳೆದುಕೊಳ್ಳುವ ಅಪಾಯವಿದೆ ಎಂಬ ವಾದದಲ್ಲಿ ಹುರುಳಿಲ್ಲದಿಲ್ಲ. ಆದರೆ ಈ ಜಾಗತೀಕರಣದ ಮುಂದಿನ ಪರಿಣಾಮಗಳೇನು ಮತ್ತು ಅದಕ್ಕಿಂತ ಮುಖ್ಯವಾಗಿ ಈ ಆತಂಕಕಾರಿ ಪರಿಣಾಮಗಳ ಜಾಗತೀಕರಣವಾದರೂ ಏಕೆ ನಮಗೆ ಎದುರಾಯಿತು ಎಂಬುದನ್ನು ಸ್ವಲ್ಪ ಸಾವಧಾನದಲ್ಲಿ ಯೋಚಿಸಿದಾಗ ಅಂಬೇಡ್ಕರ್ ತಮ್ಮ ಕಾಲದಲ್ಲಿ ಗಾಂಧಿ ಮಾರ್ಗ ಕುರಿತಂತೆ ತಳೆದ ಸಂಪೂರ್ಣ ನಿಷೇಧಾತ್ಮಕ ಮತ್ತು ಕಟುವಾದ ನಿಲುವನ್ನು ಈಗ ತಳೆಯಲಾಗದು ಎಂಬುದರ ಅರಿವಾದೀತು. ಈ ದೃಷ್ಟಿಯಿಂದ ಇವೊತ್ತಿನ ಅಂಬೇಡ್ಕರ್‌ವಾದಿಗಳಲ್ಲಿ ಅತಿ ಹೆಚ್ಚು ಸ್ಪಷ್ಟತೆ ಮತ್ತು ಸಮತೋಲನ ಹೊಂದಿರುವವರೆಂದು ನಾನು ಭಾವಿಸಿರುವ ಆನಂದ್ ತೇಲ್ತುಂಬ್ಡೆ ಅವರಂತಹವರೂ ತಮ್ಮ ಸಂದರ್ಶನವೊಂದರಲ್ಲಿ (ನೋಡಿ: ಸಂವಾದ, ಸೆಪ್ಟಂಬರ್, ೨೦೧೨) ಅಂಬೇಡ್ಕರ್‌ವಾದಿಗಳು ಮೊದಲು ಅಂಬೇಡ್ಕರ್‌ರನ್ನು ಅರಿತುಕೊಳ್ಳಬೇಕೆಂದು ಹೇಳಿರುವುದರ ಜೊತೆಗೇ ದಲಿತರು ಗಾಂಧಿಯಿಂದ ಪಡೆಯಬಹುದಾದದ್ದು ಏನೂ ಇಲ್ಲ ಎಂದು ಹೇಳಿರುವುದು ನನಗೆ ಆಶ್ಚರ್ಯವನ್ನೂ, ವಿಷಾದವನ್ನೂ ಉಂಟು ಮಾಡಿದೆ.

–೭–

ಆಧುನೀಕರಣ ಮತ್ತು ಜಾತಿ ವಿನಾಶ

ಹೌದು, ಜಾಗತೀಕರಣ ಎಂದೆ. ಅದು ಸೃಷ್ಟಿ ಮಾಡುತ್ತಿರುವ ಅವಕಾಶಗಳು ಮತ್ತು ಅವುಗಳಿಂದ ದಲಿತರು ವಂಚಿತರಾಗುವ ಅಪಾಯವಿಲ್ಲದಿಲ್ಲ ಎಂದೆ. ಆದರೆ ಈ ಜಾಗತೀಕರಣವೆಂಬುದು ಅಂಬೇಡ್ಕರ್ ಅವಿಮರ್ಶಾತ್ಮಕವಾಗಿ ಒಪ್ಪಿಕೊಂಡಂತೆ ಕಾಣುವ ಪಶ್ಚಿಮದ ಆಧುನಿಕತೆಯ ಇತ್ತೀಚಿನ ಅವತಾರ ಎಂಬ ಅಂಶದ ಹಿನ್ನೆಲೆಯಲ್ಲಿ ಈ ಮಾತನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗೇ, ಅವರ ಗ್ರಾಮ ವಿರೋಧಿ,

ಕೈಗಾರಿಕೀಕರಣ ಪರವಾದ ಆರ್ಥಿಕ ನೀತಿಯ ಹಿಂದಿದ್ದ ಈ ಆಧುನೀಕರಣ ಪ್ರಕ್ರಿಯೆ ಜಾತಿಯನ್ನು ಹಿನ್ನೆಲೆಗೆ ಸರಿಸಿ ಕ್ರಮೇಣ ಇಲ್ಲವಾಗಿಸುತ್ತದೆಂಬ ನಂಬಿಕೆ ಮತ್ತು ತರ್ಕ ಎಷ್ಟರಮಟ್ಟಿಗೆ ನಿಜವಾಗಿದೆ ಎಂದೂ ಕೇಳಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್ ಹಾಗೇನೂ ನಂಬಿರಲಿಲ್ಲ. ತರ್ಕಿಸಿರಲಿಲ್ಲ ಎಂದು ವಾದಿಸುವವರು ಅಂಬೇಡ್ಕರ್ ನಮ್ಮ ಸಂವಿಧಾನದ ಮುಖ್ಯ ಚಾಲಕ ಶಕ್ತಿಯಾಗಿ, ವಕ್ತಾರರಾಗಿ ಮೀಸಲಾತಿ ತತ್ವವನ್ನು ಅಳವಡಿಸುವುದರ ಜೊತೆಗೇ (ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ, ಇದಕ್ಕೆ ಮೊದಮೊದಲು ಅಂಬೇಡ್ಕರರ ವಿರೋಧವಿತ್ತೆಂದೂ, ನಂತರ ರಾಜಕೀಯ ಮೀಸಲಾತಿಯನ್ನು ಹತ್ತು ವರ್ಷಗಳಿಗೆ ಮತ್ತು ಸರ್ಕಾರಿ ಸೇವಾ ಮೀಸಲಾತಿಯನ್ನು ಹೆಚ್ಚೆಂದರೆ ನಲವತ್ತು ವರ್ಷಗಳಿಗೆ ಕಟ್ಟುನಿಟ್ಟಾಗಿ ಸೀಮಿತಗೊಳಿಸಬೇಕೆಂದು ಹೇಳಿದ್ದನ್ನು, ತಾವು ಸಂವಿಧಾನ ಸಭೆಯಲ್ಲಿ ಅದರ ಕಿರಿಯ ಸದಸ್ಯನಾಗಿ ಆಲಿಸಿದ್ದಾಗಿ ಲೋಕಸಭೆಯ ಮಾಜಿ ಕಾರ್ಯದರ್ಶಿಯೂ, ಹಿರಿಯ ಸಂವಿಧಾನ ತಜ್ಞರೂ ಆದ ಸುಭಾಷ್ ಕಶ್ಯಪ್ ಇತ್ತೀಚೆಗೆ ಟಿ.ವಿ. ಚರ್ಚೆಯೊಂದರಲ್ಲಿ ದಾಖಲಿಸಿದ್ದಾರೆ.) ಜಾತಿ ವಿನಾಶದ ಉದ್ದೇಶ ಮತ್ತು ಅದನ್ನು ಖಚಿತಪಡಿಸಿಕೊಳ್ಳುವ ಕಾರ್ಯಕ್ರಮವೊಂದನ್ನು ಸಂವಿಧಾನದ ಆಯಕಟ್ಟಿನ ಜಾಗದಲ್ಲಿ ಏಕೆ ಅಳವಡಿಸಲಿಲ್ಲ ಎಂದು ಕೇಳಬೇಕಾಗುತ್ತದೆ. ಇದಕ್ಕೆ ಇತರರ ವಿರೋಧವಿತ್ತು ಎನ್ನುವುದಾದರೆ, ಮುಂದೆ ಕಾನೂನು ಮಂತ್ರಿಯಾಗಿ ಹಿಂದೂ ವೈಯುಕ್ತಿಕ ಕಾನೂನು ತಿದ್ದುಪಡಿ ಮಸೂದೆ ವಿಷಯದಲ್ಲಿ ಪಟ್ಟು ಬಿಡದವರಾಗಿ ರಾಜೀನಾಮೆ ನೀಡಿದಂತೆ ಈ ವಿಷಯದಲ್ಲೂ ಅವರು ಪಟ್ಟು ಬಿಡದೆ ಏಕೆ ಹೋರಾಡಲಿಲ್ಲ ಎಂದು ಕೇಳಬೇಕಾಗುತ್ತದೆ. ಹಾಗೇ, ಕೇಂದ್ರೀಕೃತ ಅಥವಾ ಏಕಾತ್ಮಕ ರಾಷ್ಟ್ರ ಕಲ್ಪನೆ ಸಹಿತವಾದ ಸಂಸದೀಯ ಪ್ರಜಾಪ್ರಭುತ್ವ ರೂಪದ ಪ್ರಾತಿನಿಧಿಕ ರಾಜಕಾರಣ ಮತ್ತು ಮೀಸಲಾತಿ ಎರಡೂ ಸೇರಿ ತಮ್ಮ ಇಡೀ ಬದುಕಿನ ಹೋರಾಟದ ಪರಮ ಗುರಿಯಾಗಿದ್ದ ಜಾತಿ ವಿನಾಶವನ್ನು ಸಾಧಿಸುತ್ತದೆ ಎಂದು ಅಂಬೇಡ್ಕರ್ ನಂಬಿದ್ದರೆ? ಎಂದೂ ಕೇಳಬೇಕಾಗುತ್ತದೆ. ಅವರು ಹಾಗೆ ನಂಬಿದ್ದರೆ ಅವರ ನಂಬಿಕೆ ಇಂದು ಹುಸಿಯಾಗಿದೆ ಎಂದೂ ಹೇಳಬೇಕಾಗುತ್ತದೆ.

ಅಂಬೇಡ್ಕರ್‌ವಾದಿಗಳ ಹಳೆಯ ರಾಗ

ಇಂದು ಗಾಂಧಿ ತೀವ್ರವಾಗಿ ನೆನಪಿಗೆ ಬರುತ್ತಿರುವುದು ಇಲ್ಲೇ. ನಿರ್ದಿಷ್ಟವಾಗಿ ಜಾತಿ ಸಮಸ್ಯೆಯ, ವಿಶೇಷವಾಗಿ ಅಸ್ಪೃಶ್ಯತಾ ಅಚರಣೆಯ ನಿವಾರಣೆಗಾಗಿ ಗಾಂಧಿ ಬದ್ಧರಾಗಿ ತಮ್ಮ ಜಾತಿ ಮೀಮಾಂಸೆಯನ್ನು ಪದೇ ಪದೇ ಪುನರಾವಲೋಕನಕ್ಕೆ ಒಳಪಡಿಸುತ್ತಾ ಕೊನೆಗೆ ತಮ್ಮ ವೈಯುಕ್ತಿಕ ಮಿತಿಯಲ್ಲೇ ಆದರೂ ಅಂಬೇಡ್ಕರ್ ನಿರೀಕ್ಷೆಗಿಂತ ಒಂದು ಹೆಜ್ಜೆ ಮುಂದೆ ಹೋದರು ಎಂದು ಹೇಳಬಹುದಾದ ನಿರ್ಧಾರಕ್ಕೆ ಬಂದರು ಎನ್ನುವುದರಲ್ಲಿ. ಅಂತರ್ಜಾತಿಯಲ್ಲದ ಯಾವುದೇ ಮದುವೆಗೂ ತಾವು ಬರುವುದಿಲ್ಲವೆಂದೂ, ದಂಪತಿಗಳಲ್ಲಿ ಒಬ್ಬರಾದರೂ ಅಸ್ಪೃಶ್ಯರಾಗಿರದಿದ್ದಲ್ಲಿ ತಮ್ಮ ಆಶ್ರಮದಲ್ಲಿ ಅವರ ಮದುವೆಗೆ ಅವಕಾಶ ನೀಡುವುದಿಲ್ಲವೆಂದೂ ಅವರು ಘೋಷಿಸಿದರು. ಆದರೂ ಹಲವು ಅಂಬೇಡ್ಕರ್‌ವಾದಿಗಳು ಗಾಂಧಿ ಜಾತಿ ಪದ್ಧತಿ ಪರವಾಗಿದ್ದರು ಎಂಬ ತಮ್ಮ ಹಳೇ ರಾಗವನ್ನು ಹಾಡುತ್ತಲೇ ಇದ್ದಾರೆ ಎಂದರೆ ಏನು ಹೇಳೋಣ? ನಮ್ಮ ಸಂವಿಧಾನ ಎತ್ತಿ

ಹಿಡಿಯುವ ಆಧುನಿಕ ಪ್ರಜಾಪ್ರಭುತ್ವ ಪದ್ಧತಿಯು ಸಾಮಾನ್ಯ ಮನುಷ್ಯನನ್ನು, ನಿರ್ದಿಷ್ಟವಾಗಿ ಭಾರತೀಯನನ್ನು ಜಾತಿ ಮತ್ತು ವರ್ಗ ಪದ್ಧತಿಯೂ ಸೇರಿದಂತೆ ಯಾವುದೇ ಶೋಷಣಾ ಪದ್ಧತಿಯಿಂದ ನಿಜಾರ್ಥದಲ್ಲಿ ಬಿಡುಗಡೆಗೊಳಿಸಲಾರದು ಎಂದು ಗಾಂಧಿ ನಂಬಿದ್ದರು. ಇದನ್ನು ಮನುಷ್ಯನ ದುರಂತವನ್ನು ಜಾತಿ ಚೌಕಟ್ಟಿನಲ್ಲಷ್ಟೇ ಗ್ರಹಿಸುವ ಒತ್ತಾಯಕ್ಕೆ ಸಿಕ್ಕಿರುವವವರು ಮತ್ತು ಅದರಿಂದ ಬಿಡುಗಡೆಗೊಳ್ಳಬಯಸದವರು ಅರ್ಥ ಮಾಡಿಕೊಳ್ಳುವು ದಾದರೂ ಹೇಗೆ? ಗಾಂಧೀಜಿ ಪ್ರಕಾರ ಮನುಷ್ಯನ ದೇಹಾತ್ಮಗಳ ನಡುವೆ ಒಡಕು ಉಂಟು ಮಾಡುವ ಸಂಕೀರ್ಣ ಯಂತ್ರಗಳನ್ನಾಧರಿಸಿದ ಕೈಗಾರಿಕೀಕರಣ, ಕಣ್ಣಾಸರೆಯಿಂದ ದೂರಕ್ಕೆ ಹಬ್ಬಿಹೋಗಿರುವ ಆಡಳಿತ ವ್ಯವಸ್ಥೆ, ವ್ಯಾಜ್ಯಗಳಿಗೆ ಸಂಬಂಧವೇ ಇಲ್ಲದಿರುವವರಿಂದ ನಿರ್ವಹಿಸಲ್ಪಡುವ ಜಡ ನ್ಯಾಯದಾನ ಪದ್ಧತಿ ಮತ್ತು ಇವನ್ನೆಲ್ಲ ಸಮರ್ಥಿಸಲೆಂದೇ ಹುಟ್ಟಿಕೊಂಡ ಇತಿಹಾಸ ರಚನೆ –ಇವು ಮುಖ್ಯವಾಗಿ ಪಶ್ಚಿಮದ ಆಧುನಿಕ ನಾಗರೀಕತೆಯ ಹತಾರಗಳಾಗಿದ್ದು, ಈ ಹತಾರಗಳಿಂದಲೇ ಭಾರತವನ್ನು ಗುಲಾಮ ದೇಶವನ್ನಾಗಿ ಮಾಡಲಾಗಿದೆ. ಇಂತಹ ನಾಗರೀಕತೆಯ ಮೌಲ್ಯಗಳು ಮತ್ತು ಮಾದರಿಗಳಿಂದ ಸಜ್ಜಾದ ಈ ಆಧುನಿಕ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯು ಭಾರತೀಯ ನಾಗರೀಕತೆಯ ಮೂಲ ಮಾತೃಕೆಗಳಿಗೇ ಆಘಾತ ಉಂಟುಮಾಡುವಂತಹದ್ದಾಗಿದೆ. ಇದು ಅವನನ್ನು ಗುರುತು ಕಳೆದುಕೊಂಡ ಎಡಬಿಡಂಗಿಯನ್ನಾಗಿಸಿ ಅವನ ದೇಶದಲ್ಲೇ ಅವನನ್ನು ನಿರಾಶ್ರಿತನನ್ನಾಗಿ ಪರಿವರ್ತಿಸಿಬಿಡುತ್ತದೆ ಹಾಗೂ ಇದರ ಮೊದಲ ಬಲಿ ಸಹಜವಾಗಿ ದಲಿತರೇ ಆಗಿರುತ್ತಾರೆ ಎಂಬುದು ಗಾಂಧೀಜಿಯ ವಾದವಾಗಿತ್ತು. ಇದನ್ನೇ ಲೋಹಿಯಾ ಮುಂದುವರೆಸಿ, ತಮ್ಮ ಸಮಾಜವಾದದ ಜಾತಿ ವಿನಾಶ, ವಿಕೇಂದ್ರೀಕೃತ ತಂತ್ರಜ್ಞಾನ ಮತ್ತು ಆಡಳಿತ ಹಾಗೂ ಭಾಷಾ ನೀತಿಯನ್ನು ರೂಪಿಸಿಕೊಂಡದ್ದು. ಅದರೆ ಇವುಗಳ ಕಾರ್ಯಕ್ರಮ ರೂಪಗಳಲ್ಲಿ ಸಮಕಾಲೀನ ರಾಜಕಾರಣದ ಏಳುಬೀಳುಗಳನ್ನು ಮೀರಲಾಗದ ಅಸಹಾಯಕತೆಯಲ್ಲಿ ಹುಟ್ಟಿದ ಕಹಿ–ಕ್ರೋಧಗಳು ಸೇರಿಕೊಂಡಿದ್ದರಿಂದ ಅವರ ರಾಜಕಾರಣ ದಾರಿ ತಪ್ಪಿತು.

ಗಾಂಧಿಯ ಮುನ್ನೋಟ

ಅದೇನೇ ಇರಲಿ, ಗಾಂಧೀಜಿಯ ಈ ಮುನ್ನೋಟ ಕೇವಲ ಅಮೂರ್ತ ವಾದವಾಗಲೀ ಅಥವಾ ಯಥಾಸ್ಥಿತಿವಾದಿಯೊಬ್ಬನ ಹುಸಿ ಆತಂಕವಾಗಲೀ ಆಗಿರಲಿಲ್ಲ ಎಂಬುದು ಇಂದು ದಿನೇ ದಿನೇ ರಾಷ್ಟ್ರಾದ್ಯಂತ ಹೊಸ ಹೊಸ ಹೆಸರುಗಳಲ್ಲಿ ಹೊಮ್ಮುತ್ತಿರುವ ಲಕ್ಷಾಂತರ ಸಂಖ್ಯೆಯ ನಿರಾಶ್ರತರೇ ಸಾಕ್ಷಿಯಾಗಿದ್ದಾರೆ. ಸಾಂಪ್ರದಾಯಿಕ ಜಾತಿ ಮತ್ತು ಕೋಮು ಗಲಭೆಗಳ ನಿರಾಶ್ರಿತರ ಜೊತೆಗೀಗ ಅಣೆಕಟ್ಟೆ ನಿರಾಶ್ರಿತರು, ಕೈಗಾರಿಕಾ ನಿರಾಶ್ರಿತರು, ಕೈಗಾರಿಕಾ ದುರಂತ ನಿರಾಶ್ರಿತರು, ಗಣಿಗಾರಿಕೆ ನಿರಾಶ್ರಿತರು, ಆತ್ಮಹತ್ಯೆ ಸರಣಿಗೆ ಸಿಲುಕಿರುವ ರೈತರ ಕುಟುಂಬಗಳ ಹಸಿರು ಕ್ರಾಂತಿ ನಿರಾಶ್ರಿತರು ಇತ್ಯಾದಿ. ವಲಸೆಯೆಂಬ ಬುಡ ಕಡಿದುಕೊಳ್ಳುವ ಅತಿ ಕಠೋರ ಶಿಕ್ಷೆಗೆ ಒಳಗಾಗಿರುವ ಇವರನ್ನೆಲ್ಲ ಸ್ಥೂಲವಾಗಿ ಒಂದೇ ಹೆಸರಿನಲ್ಲಿ ಕರೆಯುವುದಾದರೆ, 'ರಾಷ್ಟ್ರ ನಿರ್ಮಾಣ' ಕಾರ್ಯದ ನಿರಾಶ್ರಿತರು ಎನ್ನಬಹುದಾಗಿದೆ ಎಂಬುದೇ ಇಂದಿನ ಒಂದು ಕ್ರೂರ ವ್ಯಂಗ್ಯವಾಗಿದೆ. ಇವರನ್ನು ಬಿಟ್ಟರೆ ಮಿಕ್ಕವರೆಲ್ಲ ರಾಷ್ಟ್ರ ಜೀವನದಲ್ಲಿ ನೆಮ್ಮದಿಯಿಂದಿದ್ದಾರೆ ಎಂದೇನಲ್ಲ. ಅವರಲ್ಲಿ ಬಹುಪಾಲು

ಜನರು (ಹೊಸ ಮಧ್ಯಮ ವರ್ಗದವರು) ಜಾಗತೀಕರಣ ಎಂದು ಕರೆಯಲಾಗುವ ಆಧುನೀಕರಣದ ತರ್ಕದ ಮುಂದಿನ ಹೆಜ್ಜೆಯ ಬಗ್ಗೆ ನಿಶ್ಚಯವಿಲ್ಲದವರಾಗಿ ತಾವು ಒಂದಲ್ಲ ಒಂದು ದಿನ ಒಂದಲ್ಲ ಒಂದು ರೀತಿಯ ನಿರಾಶ್ರಿತರಾಗುವ ಸುಪ್ತ ಭೀತಿಗೆ ಸಿಕ್ಕಿ ಕೋಟಿ ಕೋಟಿ ಕೋಟಿ ಕೋಟಿ... ರೂಪಾಯಿಗಳಷ್ಟು ಬಾಜಿ ಬೆಲೆ ಕಟ್ಟಲ್ಪಡುತ್ತಿರುವ ಬದುಕಿನ ಭದ್ರತೆ ಎಂಬ ಮರೀಚಿಕೆಗಳನ್ನು ಹುಡುಕಿಕೊಂಡು ನಿಲುಗಡೆಯಿಲ್ಲದ ಓಟ-ಅಲೆದಾಟಗಳಲ್ಲಿ ನಿರತರಾಗಿದ್ದಾರೆ. ಇದರ ಪರಿಣಾಮವಾಗಿ ಇಡೀ ರಾಷ್ಟ್ರಜೀವನವೇ ಇಂದು ಆತಂಕಕಾರಿ ಅಸ್ಥಿತರೆಗೆ ಈಡಾಗಿದೆ.

ಪ್ರಜಾಪ್ರಭುತ್ವದ ಹೆಸರಿನಲ್ಲಿ ನಾವಿಂದು ಎಂಥೆಂಥವರನ್ನು ನಮ್ಮ ಪ್ರತಿನಿಧಿಗಳಾಗಿ ಆಳಲು ಆರಿಸಿ ಕಳಿಸುತ್ತಿದ್ದೇವೆ ಮತ್ತು ಅದಕ್ಕೂ ಮುಖ್ಯವಾಗಿ ಅಂಥವರನ್ನು ಪದೇ ಪದೇ ಆರಿಸಿ ಕಳಿಸುವ ಅಸಹಾಯಕ ಸ್ಥಿತಿ ನಮಗೇಕೆ ಒದಗಿದೆ? ಯೋಚಿಸುವ ಕಾಲ ಬಂದಿದೆ. ಏಕೆಂದರೆ, ಇದೆಲ್ಲದರ ಪರಿಣಾಮವನ್ನು ನೋಡಿರಿ: ಭಾರತವಿಂದು ನಿರ್ಭೀತ ಮತ್ತು ನಿರ್ಲಜ್ಜ ಹಗಲು ದರೋಡೆಗಳ, ಬೀದಿ ಅತ್ಯಾಚಾರಗಳ, ವೈವಿಧ್ಯಮಯ ಹಿಂಸೆ-ಕೊಲೆ ಪಾತಕಗಳ, ಅಸಹಾಯಕ ಕೌಟುಂಬಿಕ ಆತ್ಮಹತ್ಯೆಗಳ, ನ್ಯಾಯ ಕಾಣದ ಅನಾಥರ ಆಕ್ರಂದನಗಳ, ಹಕ್ಕು ಕಳೆದುಕೊಂಡವರ ಪ್ರತ್ರಿಭಟನೆಗಳಿಗೆ ಸಿಕ್ಕಿ ಅಶಾಂತಿಯ ಗೂಡಾಗಿದೆ. ಈ ವ್ಯಾಪಕ ಅಶಾಂತಿಯ ಮೂಲ ಯಾವುದು ಎಂದು ಗುರುತಿಸಲಾಗದಷ್ಟು ಜಟಿಲವಾಗಿ ಬೆಳೆದಿರುವ ಈ ರಾಷ್ಟ್ರ ವ್ಯವಸ್ಥೆಯೆಂಬ ಸಂಕೀರ್ಣ ಜಾಲದ ಯಜಮಾನರುಗಳು ದಿಕ್ಕೇ ತೋಚದೆ ಕಂಡಕಂಡವರ ಮೇಲೆ ಕಂಡ ಕಂಡ ಕಾರಣಗಳ ಮೇಲೆ ದೇಶದ್ರೋಹದ ಮೊಕದ್ದಮೆಗಳನ್ನು ಹೂಡತೊಡಗಿದ್ದಾರೆ! ದೇಶದ ಪ್ರಜೆಗಳೇ ದೇಶದ್ರೋಹಿಗಳಾಗಿ ಕಾಣುತ್ತಿರುವ ಈ ಪರಿಸ್ಥಿತಿಯನ್ನು ಏನೆಂದು ಕರೆಯೋಣ? ಇದು ರಾಷ್ಟ್ರ ಕಲ್ಪನೆಯ ವಿಕ್ಷಿಪ್ತೀಕರಣವೇ ಅಲ್ಲವೆ? ಆದರೆ ನಮ್ಮ ರಾಷ್ಟ್ರ ಪಾಲಕರು ಇದನ್ನು ದೇಶ ಜಾಗತಿಕ ಶಕ್ತಿಯಾಗುವೆಡೆಗೆ ದಾಪುಗಾಲು ಹಾಕುತ್ತಿರುವುದರಿಂದಾಗಿ ಏಳುತ್ತಿರುವ ಧೂಳಿನ ತಾತ್ಕಾಲಿಕ ಪರಿಣಾಮ ಮಾತ್ರವೆಂದೂ, ಇನ್ನೊಂದಿಷ್ಟು ವಿದೇಶಿ ಬಂಡವಾಳದ ನೇರ ಹೂಡಿಕೆ ಸಾಧ್ಯವಾಗಿಬಿಟ್ಟರೆ ಜಾಗತಿಕ ಶಕ್ತಿಯ ಗುರಿ ಮುಟ್ಟಿ ಈ ಧೂಳೆಲ್ಲ ಕರಗಿ ಹೋಗುವುದೆಂದೂ ಹೇಳುತ್ತಾ ದೇಶದ ಕಿವಿಗೆ ಒಂದಾದರಮೇಲೊಂದು ಹೂವಿಡುವ ಕಾಯಕವನ್ನು ಮುಂದುವರೆಸಿದ್ದಾರೆ.

ಜಾಗತೀಕರಣ ಮತ್ತು ಪಶುಬದುಕು

ಜಾಗತೀಕರಣವನ್ನು ಈ ನೆಲೆಯಿಂದ, ಈ ತೀವ್ರತೆಯಲ್ಲಿ ನೋಡಲಾಗದವರು ಇಂದಿಗೆ ಮಾತ್ರ ಬದುಕಲೆಣಿಸುವ ಒಂದು ರೀತಿಯ ಪಶು ಸಮಾನ ಜೀವಿಗಳೆಂದೇ ಹೇಳಬೇಕಾಗುತ್ತದೆ. ಗಾಂಧಿ ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಪಶ್ಚಿಮದ ಆಧುನಿಕ ನಾಗರೀಕತೆ ಮನುಷ್ಯನನ್ನು ಪಶುವನ್ನಾಗಿ ಮಾಡುತ್ತದೆ ಎಂಬರ್ಥದಲ್ಲೇ ಅದನ್ನು ಬರಿಯ ದೇಹಸುಖ ವರ್ಧಕವಾದ ಸೈತಾನಿ ನಾಗರೀಕತೆಯೆಂದೂ ಕರೆದು ಅದೊಂದು ರೋಗ ಎಂದು ಗುರುತಿಸಿದ್ದರು. ಜಗತ್ತನ್ನು, ನಿರ್ದಿಷ್ಟವಾಗಿ ಭಾರತವನ್ನು ಬ್ರಿಟಿಷ್ ದಾಸ್ಯದಿಂದ ಬಿಡುಗಡೆಗೊಳಿಸುವುದು ಎಂದರೆ ಈ ದಾಸ್ಯಕ್ಕೆ ಕಾರಣವಾದ ಆಧುನಿಕ ನಾಗರೀಕತೆಯ ಮೋಹದಿಂದ, ಮನುಷ್ಯನನ್ನು ಮೈಮರೆಸಿ ಸೃಷ್ಟಿಯ ಅಖಂಡತೆಯಿಂದ ಬೇರ್ಪಡಿಸುವ

ಮಿತಿಯಿಲ್ಲದ ಸುಖದ ಆಮಿಷದಿಂದ ಬಿಡುಗಡೆಗೊಳಿಸುವುದೆಂದು ಅವರು ನಂಬಿದ್ದರು. ಹಾಗಾಗಿ ನಿಜವಾದ ಮತ್ತು ಪೂರ್ಣವಾದ ಬಿಡುಗಡೆ ಅಥವ ಸ್ವಾತಂತ್ರ್ಯ, ಸ್ವರಾಜ್ಯ ಸ್ಥಾಪನೆಯಲ್ಲಿ ಮಾತ್ರ ಸಾಧ್ಯ ಎಂದು ಅವರು ಪ್ರತಿಪಾದಿಸಿದರು. ಅವರ ಪ್ರಕಾರ ಸ್ವರಾಜ್ಯ ಆರಂಭವಾಗುವುದು ವ್ಯಕ್ತಿ ಸ್ವಾಯತ್ತತೆ, ಅಂದರೆ ತನ್ನ ಬದುಕನ್ನು–ಅನ್ಯವೆನಿಸುವುದರ ಕನಿಷ್ಠಮಾತ್ರ ಹಸ್ತಕ್ಷೇಪವಿರುವ ಹಾಗೆ– ಆದಷ್ಟೂ ತಾನೇ ನಿಯಂತ್ರಿಸಿಕೊಳ್ಳಬಲ್ಲ ಸ್ಥಿತಿಯ ಮನವರಿಕೆ ಮತ್ತು ನಿರ್ಮಾಣದೊಂದಿಗೆ. ಅದಕ್ಕೇ ಅವರು ಅದನ್ನು ಅಹಿಂಸೆಯನ್ನಾಧರಿಸಿದ ಸ್ವಯಂಪೂರ್ಣ ಗ್ರಾಮ ಕಲ್ಪನೆಯನ್ನು ರೂಪಿಸಿ 'ಗ್ರಾಮ ಸ್ವರಾಜ್ಯ'ವೆಂದೂ ಕರೆದರು. ಅವರ ಪ್ರಕಾರ, 'ಗ್ರಾಮ ಸ್ವರಾಜ್ಯ'ಕ್ಕೆ ಒಗ್ಗದ ಬಗ್ಗದ ಎಲ್ಲವೂ ಭಾರವೇ, ಬಂಧನವೇ.

ಇದು ಇಂದು ಅತಿಯೆನಿಸುವ, ಅವ್ಯಾಹಾರಿಕವೆನ್ನಿಸುವ, ಬರೀ ಭೋಳೆ ಆದರ್ಶಮಯ ವಿಚಾರವೆನ್ನಿಸುವುದು ನಿಜ. ಆದರೆ ಆಧುನಿಕ ರಾಷ್ಟ್ರ ವ್ಯವಸ್ಥೆ ಜಾಗತೀಕರಣದ ಮೂಲಕ ಹೊರಿಸಿರುವ ಭಾರ, ಬಂಧನ ಮತ್ತು ನಿರೀಕ್ಷೆ–ಅಪೇಕ್ಷೆಗಳು ನಮ್ಮನ್ನು ಇಂದು ಸೃಷ್ಟಿಯ ಭಾಗವಾದ ಮನುಷ್ಯ ಜೀವಿಯಾಗಿ ಮತ್ತು ಒಂದು ಸಮಾಜವಾಗಿ ಎಂತಹ ಬಿಕ್ಕಟ್ಟಿನಲ್ಲಿ, ಇಕಟ್ಟಿನಲ್ಲಿ ತಂದು ನಿಲ್ಲಿಸಿದೆ ಎಂದು ಯೋಚಿಸಿದಾಗ ಗಾಂಧಿಯ 'ಗ್ರಾಮ ಸ್ವರಾಜ್ಯ'ವಲ್ಲದಿದ್ದರೂ, ಇಂದಿಗೆ ವ್ಯಾವಹಾರಿಕವೆನ್ನಿಸುವ ನಮ್ಮದೇ 'ಗ್ರಾಮ ಸ್ವರಾಜ್ಯ'ದ ಕಲ್ಪನೆಯನ್ನು ರೂಪಿಸಿಕೊಳ್ಳುವುದರ ಹೊರತಾಗಿ ನಾವು ಒಂದು ರಾಷ್ಟ್ರವಾಗಿ, ಸಮಾಜವಾಗಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮನುಷ್ಯರಾಗಿ ಬದುಕುಳಿಯುವುದು ಕಷ್ಟ ಎಂದೇ ನನಗನ್ನಿಸುತ್ತದೆ. ಇದೇ ಇಂದು ಗಾಂಧಿ ಜೀವಂತವಾಗಿರುವ ಪರಿ. ಹಾಗೇ ಇದು ಗಾಂಧಿ ಆಧುನಿಕ– ಅತ್ಯಾಧುನಿಕರೆನಿಸಿಕೊಂಡವರಿಗಿಂತಲೂ ಹೆಚ್ಚು ಆಧುನಿಕರಾಗಿ ಕಾಣುವ ಪರಿ. ಗಾಂಧಿಯವರ ಈ ಆಧುನಿಕತೆಯಲ್ಲಿನ ಸೃಜನಶೀಲತೆಯನ್ನು, ಮನುಷ್ಯ ಸ್ಪಂದನವನ್ನು ಗ್ರಹಿಸಲಾಗದಷ್ಟು ಇತಿಹಾಸದ ಸಿದ್ಧ ಎರಕಗಳಲ್ಲಿ ಸಿಕ್ಕಿಹಾಕಿಕೊಂಡ ಮನಸ್ಸು ಮಾತ್ರ ದಲಿತರು ಇಂದು ಗಾಂಧಿಯಿಂದ ಪಡೆಯುವುದೇನೂ ಇಲ್ಲವೆಂದು ಹೇಳಬಲ್ಲುದು. ಇಂಥವರ ಪ್ರಕಾರ ದಲಿತರು ಎಂದರೆ ಸಾರ್ವತ್ರಿಕ ಮನುಷ್ಯ ಭಾವನೆಗಳಿಂದ ಹೊರಗಿರುವವರೇ ಆಗಿರಬೇಕು... ಹೊಸ ಕಾಲದ, ಹೊಸ ರೀತಿಯ, ಸ್ವಯಂ ಘೋಷಿತ ಅಸ್ಪೃಶ್ಯತೆ?

ಮೊಲೆವಾಲು ನಂಜಾಗಿ...

ನಿಜ, ಇದು ತಾಯ ಮೊಲೆವಾಲು ನಂಜಾಗಿ ಕಾಡುತ್ತಿರುವ ಮಾಯೆಯ ಕಾಲ. ಆ ಮಾಯೆಗೆ ಸಿಕ್ಕವರು ಸಿಂಹಿಣಿಯ ಹಾಲನ್ನು ಹುಡುಕಿಕೊಂಡು ಕಾಡಿಗೆ ಹೊರಟಿದ್ದಾರೆ. ಅವರು ಕಾಡಿನಲ್ಲಿ ಕಳೆದುಹೋಗದೆ ಸುಕ್ಷೇಮವಾಗಿ ಊರಿಗೆ ಹಿಂದಿರುಗಿ ಬರುವರೆಂದು ಆಶಿಸೋಣ! ಹಾಗೆ ಬಂದಾಗಲಾದರೂ ಗಾಂಧಿ ಒಂದು ಕೈಯನ್ನು ಲೋಹಿಯಾರ ಹೆಗಲ ಮೇಲೂ, ಇನ್ನೊಂದು ಕೈಯನ್ನು ಅಂಬೇಡ್ಕರ್‌ರ ಹೆಗಲ ಮೇಲೂ ಇಟ್ಟು ಗಂಭೀರ ಚರ್ಚೆಯಲ್ಲಿ ತೊಡಗಿಕೊಂಡು ನಡೆಯುತ್ತಿರುವುದನ್ನು ಕಂಡಾರು. ಈ ನಡಿಗೆ ಗಾಂಧಿ ಸಾವಿನ ಎರಡು ದಿನಗಳ ಮುನ್ನ ಬಿರ್ಲಾ ಭವನದ ಸನಿಹದಲ್ಲಿ ಲೋಹಿಯಾರೊಂದಿಗೆ 'ವರ್ತಮಾನ'ದಲ್ಲೇ ಅರಂಭವಾಗಿತ್ತಾದರೂ, ಅವರಿಗೆ ಅಂಬೇಡ್ಕರ್ ಜೊತೆ ಸಿಕ್ಕಿದ್ದು 'ಭವಿಷ್ಯ'ದಲ್ಲೇ, ಅದೂ ಲೋಹಿಯಾರ ಸಾವಿನ ನಂತರ ಎಂದು ಕಾಣುತ್ತದೆ....

(ಸಂವಾದ ಅಕ್ಟೋಬರ್, ೨೦೧೨)

ಸ್ವಾತಂತ್ರ್ಯ ಮತ್ತು ಸ್ವರಾಜ್ಯ

ಹೆಗ್ಗೋಡಿನ 'ನೀನಾಸಂ' ಬಗ್ಗೆ, ಅದು ನಡೆಸುವ ಚಟುವಟಿಕೆಗಳ ಸ್ವರೂಪ ಮತ್ತು ಸಾರ್ಥಕತೆಯ ಬಗ್ಗೆ ಹಲವರ ಅನೇಕ ರೀತಿಯ ಅಭಿಪ್ರಾಯ-ಭಿನ್ನಾಭಿಪ್ರಾಯಗಳಿವೆ. ಆದರೆ, ಭಾರತದ ಈ ಹಳ್ಳಿ ಮೂಲೆಯಲ್ಲಿ ರಾಷ್ಟ್ರದ ಪ್ರಮುಖ ಚಿಂತಕರನೇಕರು ವರ್ಷಕ್ಕೊಮ್ಮೆ ಕರ್ನಾಟಕದ ನೂರಾರು ಎಳೆಯರೊಂದಿಗೆ ಒಂದೇ ಸೂರಿನಡಿ ಕುಳಿತು ವಿಚಾರ ವಿನಿಮಯ ಮಾಡಿಕೊಳ್ಳುವ ಘಟನೆ, ಅದರ ಕೆಲ ಭಾಗಗಳ ಮಟ್ಟಿಗಾದರೂ ನನಗೆ ಹಲವು ಬಾರಿ ರೋಮಾಂಚನ ತಂದಿದೆ. ಈ ಬಾರಿ ಅದು ತನ್ನ ಇಂತಹ ಅನನ್ಯ ವಾರ್ಷಿಕ ಸಾಂಸ್ಕೃತಿಕ ಶಿಬಿರ (ಅಕ್ಟೋ.೫ರಿಂದ ೧೧ರವರೆಗೆ)ಕ್ಕಾಗಿ 'ಹಿಂದ್ ಸ್ವರಾಜ್'ನ್ನು ಚರ್ಚೆಯ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದೆ. ಗಾಂಧಿ ಈ ಕೃತಿಯನ್ನು ಮೊದಲಿಗೆ ೧೯೦೮ರಲ್ಲಿ ಗುಜರಾತಿಯಲ್ಲಿ ಬರೆದರಾದರೂ, ಅದು ಪ್ರಥಮ ಬಾರಿಗೆ ಸಾರ್ವಜನಿಕವಾಗಿ ಪ್ರಕಟವಾದದ್ದು ೧೯೦೯ರಲ್ಲಿ. ಅವರ ಸಂಪಾದಕತ್ವದ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಧಾರಾವಾಹಿಯಾಗಿ; ಅವರ ಗೆಳೆಯ ಕಲೆನ್‌ಬಾಕ್‌ಗೋಸ್ಕರ ಅವರೇ ಮಾಡಿದ ಇಂಗ್ಲಿಷ್ ಭಾಷಾಂತರದಲ್ಲಿ. ಆದರೂ, ಗಾಂಧಿವಾದದ ಬೈಬಲ್ ಎನಿಸಿರುವ ಈ ಕೃತಿಗೆ ಈಗ ನೂರು ವರ್ಷ ತುಂಬುತ್ತಿದೆಯೆಂದು 'ನೀನಾಸಂ' ಇದನ್ನು 'ಮನೋಭೂಮಿಕೆಯಲ್ಲಿ ಸ್ವರಾಜ್ಯ' ಎಂಬ ಶೀರ್ಷಿಕೆಯಡಿ ಚರ್ಚೆಗೆ ಎತ್ತಿಕೊಂಡಿರುವುದು, ಇಂದಿನ ಸಂದರ್ಭದ ರಾಜಕೀಯ ತುರ್ತನ್ನು ಸೂಚಿಸುತ್ತದೆ ಎಂದೇ ನಾನು ಭಾವಿಸಿದ್ದೇನೆ.

ಹಾಗೆ ನೋಡಿದರೆ, ಇತ್ತೀಚಿನವರೆಗೆ ಗಾಂಧಿ ಕೃತಿಗಳಲ್ಲೆಲ್ಲ ಅತ್ಯಂತ ಹೆಚ್ಚು ಔದಾಸೀನ್ಯಕ್ಕೆ ಒಳಗಾಗಿದ್ದಂತೆ ತೋರುತ್ತಿದ್ದ ಈ ಕೃತಿ, ಕಳೆದ ಹತ್ತು-ಹದಿನೈದು ವರ್ಷಗಳಲ್ಲಿ ಇದ್ದಕ್ಕಿದ್ದಂತೆ ಮತ್ತೆ ಮತ್ತೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಒಳಗಾಗುತ್ತಿದೆ. ಇಪ್ಪತ್ತನೇ ಶತಮಾನದ ಆರಂಭದ ದಶಕದ ಹೊತ್ತಿಗೆ, ಹಿಂದೂ ಪುರುತ್ಥಾನವಾದಿಗಳು, ಸಾಂಸ್ಕೃತಿಕ ರಾಷ್ಟ್ರೀಯವಾದಿಗಳು ಮತ್ತು ಹಿಂಸಾವಾದಿ ಕ್ರಾಂತಿಕಾರಿಗಳು ಲಂಡನ್‌ನಲ್ಲಿ ಒಟ್ಟುಗೂಡಿ ಭಾರತದ ಸ್ವಾತಂತ್ರ್ಯವನ್ನು ಆಗಿನ ಕಾಂಗ್ರೆಸ್‌ನ 'ಸಂವಿಧಾನಾತ್ಮಕ' ಮಾರ್ಗದ ಮೂಲಕ ಪಡೆಯುವ ಪ್ರಯತ್ನಗಳಿಗೆ ಪ್ರತಿಯಾಗಿ, ಹಿಂಸೆಯೂ ಸೇರಿದಂತೆ ತೀವ್ರವಾದಿ ಮಾರ್ಗಗಳ ಮೂಲಕ ಪಡೆಯುವ ಪ್ರಯತ್ನಗಳಿಗೆ ಭೂಮಿಕೆಯನ್ನು ಸಿದ್ಧಪಡಿಸುತ್ತಿದ್ದರು. ಆಗ ಇವರೊಂದಿಗೆ ಸಂಪರ್ಕಕ್ಕೆ ಬಂದ ಗಾಂಧಿ, ಇಂತಹ ಪ್ರಯತ್ನಗಳು ಏಕೆ ನಿಷ್ಪ್ರಯೋಜಕ ಮತ್ತು ಹೇಗೆ ನಿಜವಾದ ಸಾತಂತ್ರ್ಯವನ್ನು ತಂದುಕೊಡಲಾರವು ಎಂದು ದ.ಆಫ್ರಿಕಾದಲ್ಲಿನ ಜನಾಂಗವಾದಿ ಸರ್ಕಾರವನ್ನೆದುರಿಸಿದ ತಮ್ಮ ಅನುಭವಗಳ ಆಧಾರದ ಮೇಲೆ ವಿವರಿಸಿ ಈ ಪುಸ್ತಕ ಬರೆದರು. ಈ ಪುಸ್ತಕವನ್ನು ಅವರು ೧೯೦೮ರಲ್ಲಿ ಇಂಗ್ಲೆಂಡ್‌ನಿಂದ ದ.ಆಫ್ರಿಕಾಕ್ಕೆ

ಸಮುದ್ರಯಾನ ಮಾಡುತ್ತಿದ್ದಾಗ ಎಂತಹ ಅದಮ್ಯ ಹುರುಪಿನಲ್ಲಿ ಬರೆದರೆಂದರೆ, ಅದನ್ನು ಪೂರ್ಣಗೊಳಿಸಲು ಬಲಗೈಗೆ ಆಯಾಸವಾದಾಗ ಎಡಗೈಯನ್ನೂ ಬಳಸಬೇಕಾಯಿತಂತೆ!

ಆದರೆ, ಆಗ ಅವಸರದ ಮತ್ತು ಅಪಕ್ವ ಬರವಣಿಗೆಯೆಂದು ತಮ್ಮ ಗುರು ತಿಲಕರಿಂದಲೇ ತಿರಸ್ಕರಿಸಲ್ಪಟ್ಟಿದ್ದ ಈ ಪುಸ್ತಕ ತಿಲಕರಂತೆಯೇ ಅನೇಕರಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಟೀಕೆಗಳಿಗೊಳಪಟ್ಟಿದ್ದರೂ, ಗಾಂಧಿ ತಮ್ಮ ಉಸಿರಿನ ಕೊನೆಯವರೆಗೂ ಅದಕ್ಕೆ ಎಷ್ಟು ಕಟಿ ಬದ್ಧರಾಗಿದ್ದರೆಂದರೆ, ಬ್ರಿಟಿಷ್ ಪಾರ್ಲಿಮೆಂಟನ್ನು 'ವೇಶ್ಯೆ' ಎಂದು ಕರೆದ ಶಬ್ದದ ಹೊರತಾಗಿ ಅದರ ಒಂದು ಶಬ್ದವನ್ನೂ ಬದಲಿಸಲಾರೆ ಎಂದು ಸ್ಪಷ್ಟಪಡಿಸಿದ್ದರು. ಈ ತಮ್ಮ ಕೃತಿಯ ಮೂಲ ತಾತ್ವಿಕತೆ ಬಗ್ಗೆ ಗಾಂಧೀಜಿಗೆ ಎಷ್ಟು ದೃಢ ನಂಬಿಕೆ ಇತ್ತೆಂದರೆ, ೧೯೪೫ರಲ್ಲಿ ನೆಹರೂ ವೈಸ್‌ರಾಯ್ ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿ ಸ್ವತಂತ್ರ ಭಾರತದ ಪ್ರಧಾನಮಂತ್ರಿ ಎಂದು ಬಿಂಬಿತವಾಗಿದ್ದಾಗಲೇ ಅವರು 'ಹಿಂದ್ ಸ್ವರಾಜ್' ಕಡೆ ನೆಹರೂ ಅವರ ಗಮನ ಸೆಳೆಯುತ್ತಾರೆ. ಆದರೆ ನೆಹರೂ ಅದನ್ನು, ಜಗತ್ತು ಮುಂದಕ್ಕೆ ಹೆಜ್ಜೆ ಹಾಕುತ್ತಿರುವಾಗ ಹಿಂದಕ್ಕೆ ಹೆಜ್ಜೆ ಹಾಕೆನ್ನುವ ಅಪ್ರಸ್ತುತ ಕೃತಿ ಎಂದು ತಿರಸ್ಕರಿಸಿದಾಗ, ಗಾಂಧೀಜಿಯ ಮನಸ್ಸಿನಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷವಾಗಿ ವಿಸರ್ಜಿಸಿ ಅದನ್ನೊಂದು ಸ್ವಯಂಸೇವಾ ಸಂಘಟನೆಯನ್ನಾಗಿ ಪರಿವರ್ತಿಸಬೇಕೆಂಬ ಆಲೋಚನೆ ಹಾದು ಹೋಗುತ್ತದೆ! ನಂತರದ ದಿನಗಳಲ್ಲಿ ಕಾಂಗ್ರೆಸ್‌ನ ರಾಜಕೀಯ ನಾಯಕತ್ವದ ಬಗ್ಗೆ ತಮ್ಮಂತೆಯೇ ಭ್ರಮನಿರಸನಗೊಂಡಿದ್ದ ಮತ್ತು ರಾಷ್ಟ್ರ ವಿಭಜನೆಯ ಕೋಮು ಹಿಂಸಾಚಾರವನ್ನು ತಣಿಸುವ ತಮ್ಮ ಪ್ರಯತ್ನದ ಯಾತ್ರೆಯುದ್ದಕ್ಕೂ ತಮ್ಮೊಡನಿದ್ದ ಕಾಂಗ್ರೆಸ್ ಸೋಶಲಿಸ್ಟ್ ನಾಯಕರಲ್ಲೊಬ್ಬರಾಗಿದ್ದ ಡಾ॥ ರಾಮಮನೋಹರ ಲೋಹಿಯಾ ಅವರೊಂದಿಗೆ ಈ ಬಗ್ಗೆ ಪ್ರಸ್ತಾಪವನ್ನೂ ಮಾಡುತ್ತಾರೆ. ಆದರೆ ಅದಕ್ಕೆ ಅಂತಿಮ ರೂಪ ಕೊಡುವ ಮುನ್ನವೇ ಗಾಂಧಿ ಹಿಂದೂ ಕೋಮುವಾದಿಯ ಗುಂಡಿಗೆ ಬಲಿಯಾಗುತ್ತಾರೆ.

ಗಾಂಧೀಜಿಗೆ ಇಷ್ಟು ಮುಖ್ಯವೆನಿಸಿದ್ದ ಮತ್ತು ಅದನ್ನು ಅನುಷ್ಠಾನಗೊಳಿಸಬೇಕೆಂದು ಅವರು ಬಯಸಿದ ಸರ್ಕಾರಿ ಗಾಂಧೀವಾದಿಗಳೆಲ್ಲರ(ಇದು ಲೋಹಿಯಾರ ವರ್ಗೀಕರಣ. ಅವರ ಪ್ರಕಾರ ಗಾಂಧೀವಾದಿಗಳ ಇನ್ನೆರಡು ವರ್ಗಗಳೆಂದರೆ, ವಿನೋಬಾ ನೇತೃತ್ವದ ಮಠೀಯ ಗಾಂಧೀವಾದಿಗಳು ಮತ್ತು ಸಮಾಜವಾದದ ಹಾದಿ ಹಿಡಿದ ಬಂಡುಕೋರ ಗಾಂಧೀವಾದಿಗಳು!) ಕಣ್ಣಲ್ಲಿ ಶುದ್ಧ ಅವ್ಯವಾಹಾರಿಕವೆನಿಸಿದ;ಹಾಗಾಗಿ ತಮ್ಮ ರಾಜಕೀಯ ವಾರಸುದಾರಿಕೆಯ ಬಗ್ಗೆಯೇ ಅವರನ್ನು ಪುನರಾಲೋಚನೆಗೆ ಒಡ್ಡಿದ ಈ ಕೃತಿಯಲ್ಲಿ ನಿಜವಾಗಿ ಏನಿದೆ?

'ಇಂಡಿಯನ್ ಒಪಿನಿಯನ್' ಪತ್ರಿಕೆಯ ಸಂಪಾದಕರಾಗಿದ್ದ ಗಾಂಧಿ, ತಾವು ಸಂಪಾದಕ ರಾಗಿ ಓದುಗರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವ ಧಾಟಿಯಲ್ಲಿ ಬರೆಯಲಾಗಿರುವ ಈ ಪುಸ್ತಕ, ಪತ್ರಿಕೋದ್ಯಮ ಬರವಣಿಗೆಯ ಒಂದು ಅತ್ಯುತ್ತಮ ಮಾದರಿಯಂತಿದೆ. ಅಷ್ಟೇ ಅಲ್ಲ, ತೀವ್ರವಾದಿ ಸ್ವಾತಂತ್ರ್ಯ ಹೋರಾಟಗಾರರ ಪರವಾಗಿ ಪ್ರಶ್ನೆಗಳನ್ನು ತಾವೇ ಹಾಕಿಕೊಳ್ಳುತ್ತಾ; ಅದಕ್ಕೆ ನೀಡಲಾಗುವ ಉತ್ತರಗಳಿಂದ ಅವರಲ್ಲಿ ಏಳಬಹುದಾದ ಸಂಶಯಗಳನ್ನು ಉಪ ಪ್ರಶ್ನೆಗಳ ರೂಪದಲ್ಲಿ ಪ್ರಸ್ತುತಪಡಿಸುತ್ತಾ, ಅವಕ್ಕೂ ಉತ್ತರ ನೀಡುವ

ಮೂಲಕ ವಿಚಾರ ವೃತ್ತವೊಂದನ್ನು ಪೂರ್ಣ ಮಾಡುತ್ತಾರೆ. ಗಾಂಧಿಯವರ ಈ ಶೈಲಿ, ರಾಜಕೀಯ ಸಂವಾದದ ಅತ್ಯುತ್ತಮ ಮಾದರಿಯೂ ಹೌದು. ಈ ಸಂವಾದದ ಮೂಲಕ ಅವರು ಪಶ್ಚಿಮದಲ್ಲಿ ಆಗ ರೂಪುಗೊಳ್ಳುತ್ತಿದ್ದ ರಾಷ್ಟ್ರ ಕಲ್ಪನೆಯ ಹಿನ್ನೆಲೆಯಲ್ಲಿ ಚಲಾವಣೆಗೆ ಬಂದಿದ್ದ ರಾಷ್ಟ್ರೀಯ ಸ್ವಾತಂತ್ರ್ಯದ ಪರಿಕಲ್ಪನೆಗೆ ಭಾರತೀಯ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು 'ಸ್ವರಾಜ್ಯ' ಎಂಬ ಅರ್ಥ ವಿಸ್ತರಣೆ ಒದಗಿಸಿದರು. ಸ್ವಾತಂತ್ರ್ಯ ಎನ್ನುವುದು ಸಮೂಹವೊಂದು ಹೊರಗಿನಿಂದ ಪಡೆದುಕೊಳ್ಳುವಂತಹುದಾಗಿದ್ದು, ಅದು ಪೂರ್ಣ ಸ್ವಾತಂತ್ರ್ಯವೆನಿಸಿಕೊಳ್ಳುವುದಿಲ್ಲ. ಅದರೊಂದಿಗೆ ವ್ಯಕ್ತಿ ಒಳಗಿಂದ ಸಾಧಿಸಿಕೊಳ್ಳುವ ಸಾತಂತ್ರ್ಯವೂ ಸೇರಿದಾಗ ಮಾತ್ರ ಪೂರ್ಣವಾಗುತ್ತದೆ ಎಂದು ಭಾವಿಸಿದ ಗಾಂಧಿ, ಅದನ್ನು 'ಸ್ವರಾಜ್ಯ' ಎಂದು ಕರೆದರು. ಸ್ವಾತಂತ್ರ್ಯ ಎನ್ನುವುದು ಪ್ರಜೆಗಳ ಹಕ್ಕುಗಳನ್ನಷ್ಟೇ ಮೂಲ ಕಾಳಜಿಯನ್ನಾಗಿರಿಸಿಕೊಂಡಿದ್ದರೆ; ಗಾಂಧಿ ರೂಪಿಸಿದ 'ಸ್ವರಾಜ್ಯ' ಪರಿಕಲ್ಪನೆಯು ಕರ್ತವ್ಯ ಪಾಲನೆಯಿಂದಷ್ಟೇ ಹಕ್ಕುಗಳು ದೊರೆಯುವುವು ಎಂದು ಪ್ರತಿಪಾದಿಸುವ ಮೂಲಕ ಸ್ವಾತಂತ್ರ್ಯ ಸ್ವಚ್ಛಂದವಾಗದಂತೆ ತಡೆಯುತ್ತಾ, ಒಂದು ಜವಾಬ್ದಾರಿಯುಳ್ಳ ರಾಷ್ಟ್ರದ ಪರಿಕಲ್ಪನೆಯನ್ನು ಮುಂದಿಡುತ್ತದೆ.

ಪ್ರತಿಯೊಂದು ಜನಸಮುದಾಯಕ್ಕೂ ಒಂದು ಪ್ರತಿಭಾ ವೈಶಿಷ್ಟ್ಯ(Genius)ವಿರುತ್ತದೆ. ಅದೇ ಅವರ ಜೀವಶಕ್ತಿ ಕೂಡ. ಅದನ್ನು ಭಂಗಗೊಳಿಸಿದರೆ, ಅವರ ಎಲ್ಲವನ್ನೂ ಭಂಗಗೊಳಿಸಿದಂತೆಯೇ. ಬ್ರಿಟಿಷ್ ವಸಾಹತುಶಾಹಿ ತನ್ನ ಆಡಳಿತ, ಶಿಕ್ಷಣ ಮತ್ತು ಉದ್ಯೋಗ ನೀತಿಗಳ ಮೂಲಕ ಮಾಡುತ್ತಿರುವುದು ಅದನ್ನೇ. ಹಾಗಾಗಿ ಬ್ರಿಟಿಷ್ ವಸಾಹತುಶಾಹಿಯಿಂದ ಬಿಡುಗಡೆ ಎಂದರೆ ಕೇವಲ ಬ್ರಿಟಿಷ್ ಆಳ್ವಿಕೆಯಿಂದ ಬಿಡುಗಡೆಯಲ್ಲ; ಅದು ನಡೆಸಿರುವ ಈ ವಿನಾಶಕಾರಿ ಕಾರ್ಯಾಚರಣೆ ಮತ್ತು ಅದರ ದುಷ್ಪರಿಣಾಮಗಳಿಂದ ಕೂಡ ಬಿಡುಗಡೆ ಆಗಬೇಕು. ಅದರಿಂದ, ನಮ್ಮ ಭವಿಷ್ಯವನ್ನು ನಮ್ಮ ಪ್ರತಿಭಾ ವೈಶಿಷ್ಟ್ಯಗಳ ಸೃಜನಶೀಲ ಅನ್ವಯಗಳಿಂದಲೇ ರೂಪಿಸಿಕೊಳ್ಳುವ ಸಂಕಲ್ಪವೂ ಮೂಡಬೇಕು. ಹಾಗಾಗಿ ಬ್ರಿಟಿಷರಷ್ಟೇ ಹೋದರೆ ಸಾಲದು; ಬ್ರಿಟಿಷತ್ವವೂ ಹೋಗಬೇಕು. ಇದು ಗಾಂಧಿ ಮಂಡಿಸಿದ 'ಸ್ವರಾಜ್ಯ' ಕಲ್ಪನೆಯ ಮೂಲ ತಾತ್ವಿಕತೆ.

ಈ ಬ್ರಿಟಿಷತ್ವವನ್ನು ಗಾಂಧಿ ಆಗ ಯಾವುದನ್ನು ಆಧುನಿಕ ನಾಗರೀಕತೆ ಎಂದು ಕರೆಯಲಾಗುತ್ತಿತ್ತೋ ಅದರಲ್ಲಿ ಗುರುತಿಸುತ್ತಾರೆ. 'ಹಿಂದೂಸ್ತಾನ ತಿಣುಕುತ್ತಿರುವುದು ಬ್ರಿಟಿಷರ ಭಾರದಿಂದಲ್ಲ, ಆಧುನಿಕ ನಾಗರೀಕತೆಯ ರಾಕ್ಷಸ ಭಾರದಿಂದ' ಎಂಬುದು 'ಹಿಂದ್ ಸ್ವರಾಜ್'ನ ಬೀಜವಾಕ್ಯ. ಆತ್ಮಶಕ್ತಿ ಸಂವರ್ಧನೆಗೆ ಬದಲಾಗಿ ಶರೀರ ಸುಖ ಸಂವರ್ಧನೆಯನ್ನಷ್ಟೇ ತನ್ನ ಗುರಿಯನ್ನಾಗಿಸಿಕೊಂಡಿದೆ ಎಂದು ಅವರು ಆಧುನಿಕ ನಾಗರೀಕತೆಯನ್ನು ಒಂದು 'ರೋಗ' ಎಂದು ಕರೆಯುತ್ತಾರೆ. ಈ ಸಂಬಂಧವಾಗಿ ಅವರು ಬ್ರಿಟಿಷರ ಕೈಗಾರಿಕಾ ಉತ್ಪನ್ನಗಳಿಗೆ ನಾವು ಮರುಳಾದುದೇ ನಮ್ಮ ಸ್ವಾತಂತ್ರ್ಯ ಹರಣಕ್ಕೆ ನಾಂದಿಯಾಯಿತೆಂದು ಹೇಳುತ್ತಾರೆ. ಹಾಗಾಗಿ, ಅವರ ಪ್ರಕಾರ ಆತ್ಮ ಸಂಯಮವಿಲ್ಲದೆ, ತನ್ನ ಅಗತ್ಯಗಳ ಬಗ್ಗೆ ಸ್ಪಷ್ಟ ಕಲ್ಪನೆಯಿಲ್ಲದೆ, ಯಾವ ರೀತಿಯ ಸ್ವಾತಂತ್ರ್ಯ ಸಂರಕ್ಷಣೆಯೂ ಸಾಧ್ಯವಿಲ್ಲ. ಪ್ರಜೆ ತನ್ನ ಧರ್ಮವೆಂದು ರಾಷ್ಟ್ರ ಕುರಿತ ತನ್ನ ಕರ್ತವ್ಯಗಳನ್ನು ಪಾಲಿಸದ ಹೊರತು, ಸ್ವಾತಂತ್ರ್ಯವೆನ್ನುವುದು ಹಕ್ಕುಗಳ ಹೆಸರಲ್ಲಿ ಬಲಾಢ್ಯರ ಪಾಲಾಗಿ ಎಲ್ಲ ನೆಲೆಗಳಲ್ಲೂ

ಹಾನಿಗೀಡಾಗುತ್ತದೆಂದು ಗಾಂಧಿ ವಾದಿಸುತ್ತಾರೆ. ಹಾಗಾಗಿ ಆತ್ಮದ (ಅಂದರೆ ಆತ್ಮಸಾಕ್ಷಿಯ) ಪ್ರಜ್ಞೆ ಕಳೆದುಕೊಳ್ಳದಂತಹ ಪ್ರಜೆಗಳನ್ನುಳ್ಳ ರಾಷ್ಟ್ರವನ್ನು ಪಡೆಯುವುದೇ ನಿಜವಾದ ಮತ್ತು ಪರಿಪೂರ್ಣ ಸ್ವಾತಂತ್ರ್ಯವೆಂದು ಅವರು ಅಭಿಪ್ರಾಯಪಡುತ್ತಾರೆ. ಇದನ್ನು ಸತ್ಯ ಮತ್ತು ಅಹಿಂಸೆಗಳ ಮೂಲಕ ಆಳುವವರ ಮತ್ತು ಆಳಿಸಿಕೊಳ್ಳುವವರ ಆತ್ಮಸಾಕ್ಷಿಯನ್ನು ಮುಟ್ಟುವಂತಹ 'ಸತ್ಯಾಗ್ರಹ'ದ ಮೂಲಕ ಮಾತ್ರ ಪಡೆಯಲು ಸಾಧ್ಯ ಎಂಬ ನಂಬಿಕೆಯೂ ಸೇರಿಕೊಂಡು ಗಾಂಧೀಜಿಯ ಸ್ವರಾಜ್ಯದ ಕಲ್ಪನೆ ಪೂರ್ಣಗೊಳ್ಳುತ್ತದೆ.

ಇದು ಸಾಧ್ಯವಾಗುವುದು, ಆಧುನಿಕತೆಯ ಆಕರ್ಷಣೆಗಳಿಗೆ ಸಿಕ್ಕಿ ತನ್ನ ಪ್ರತಿಭಾ ವೈಶಿಷ್ಟ್ಯದ ಬಗ್ಗೆಯೇ ಕೀಳರಿಮೆ ಬೆಳೆಸಿಕೊಂಡಿರುವ– ಆಗ 'ಹಿಂದೂಸ್ತಾನ'ವೆಂದು ಕರೆಯಲ್ಪಡುತ್ತಿದ್ದ–ಭಾರತ, ಈ ಸಂದಿಗ್ಧ ಉಂಟಾದುದೇಕೆಂದು ಯೋಚಿಸಿದಾಗ ಮತ್ತು ತನ್ನ ಪ್ರತಿಭಾ ವೈಶಿಷ್ಟ್ಯ ಸೃಷ್ಟಿಸಿರುವ ಪರಂಪರೆಯ ದೋಷಗಳನ್ನು ತಿದ್ದಿಕೊಂಡು ಅದರ ಆಧಾರದ ಮೇಲೆ ತನ್ನದೇ ರಾಷ್ಟ್ರವನ್ನು ಪುನಾರಚಿಸಿಕೊಂಡಾಗ ಮಾತ್ರ. ಹಾಗಾಗಿ ಗಾಂಧಿ ಪ್ರತಿಪಾದಿಸಿದ ಸ್ವರಾಜ್ಯ 'ಹಿಂದ್ ಸ್ವರಾಜ್' ಎನಿಸಿಕೊಂಡಿತಷ್ಟೆ. ಇದನ್ನು ಯಾವುದೇ ಕಾರಣಕ್ಕೂ ಹಿಂದೂ ಸ್ವರಾಜ್ಯ ಎಂದು ಗೊಂದಲ ಮಾಡಿಕೊಳ್ಳಬಾರದು! ಏಕೆಂದರೆ, ಆಗ (ಮತ್ತು ಈಗಲೂ) ಹಿಂದೂ ರಾಷ್ಟ್ರೀಯತೆ ಆರ್ಯಸಂಸ್ಕೃತಿ, ಪವಿತ್ರಭೂಮಿ, ಪಿತೃಭೂಮಿ, ಮಾತೃಭೂಮಿ ಇತ್ಯಾದಿ ಪೌರಾಣಿಕ ಪರಿಕಲ್ಪನೆಗಳಿಂದ ಪ್ರೇರಿತವಾದ ಜನಾಂಗವಾದ ಹಾಗೂ ಅನ್ಯಮತ ಅಸಹನೆ(ಹಿಂದೂಗಳಲ್ಲದವರೆಲ್ಲರೂ ಇಲ್ಲಿನ 'ಅತಿಥಿ'ಗಳಷ್ಟೆ!) ಮತ್ತು ಅವಕ್ಕೆ ಪೂರಕವಾಗಿ ರಾಜಕಾರಣದ ಹಿಂದೂಕರಣ ಹಾಗೂ ಹಿಂದೂ ಧರ್ಮದ ಸೇನೀಕರಣಗಳನ್ನು ಪ್ರತಿಪಾದಿಸುತ್ತಿತ್ತು. ಆದರೆ ಇದಕ್ಕೆ ಪ್ರತಿಯಾಗಿ ಗಾಂಧಿ ಹಿಂದೂ ಧರ್ಮದ ಸನಾತನ ತಿರುಳೆನಿಸಿದ ಒಬ್ಬೊಬ್ಬನದೂ ಒಂದೊಂದು ಮತ ಎನ್ನುವ ಬಹು ಸಂಸ್ಕೃತಿತ್ವ ಮತ್ತು ನೈಸರ್ಗಿಕ ಧರ್ಮಪಾಲನೆಯನ್ನಾಧರಿಸಿದ ಸಮುದಾಯ ಪ್ರಜ್ಞೆಯ ಹೊಸ ರಾಷ್ಟ್ರೀಯತೆಯನ್ನು ರೂಪಿಸುವ ಪ್ರಯತ್ನದಲ್ಲಿ ತೊಡಗಿದ್ದರು. ಆ ಮೂಲಕ ಸ್ವಾತಂತ್ರ್ಯ ಹೋರಾಟವನ್ನು ಸ್ವರಾಜ್ಯ ಸ್ಥಾಪನೆಯ ಕಾರ್ಯಾಚರಣೆಯನ್ನಾಗಿ ಮತ್ತು ಹಿಂದೂ ಧರ್ಮವನ್ನು ಎಲ್ಲರ–ಪ್ರಜಾಸತ್ತಾತ್ಮಕ–ಧರ್ಮವನ್ನಾಗಿ ಪರಿವರ್ತಿಸುವ ಉದ್ದೇಶವನ್ನೂ ಹೊಂದಿದ್ದರು. ಹಿಂದೂವಾದಿಗಳೆನಿಸಿಕೊಂಡವರಿಗೆ ಹಿಂದುತ್ವವೆನ್ನುವುದು ಹಿಂದೂ ಧರ್ಮ ಕಾಲಾನುಕಾಲದಲ್ಲಿ ರೂಢಿಸಿಕೊಂಡ ರಾಜಕೀಯ ಸ್ವರೂಪವನ್ನಷ್ಟೇ ಸಂರಕ್ಷಿಸಿಕೊಳ್ಳುವ ಸಾಧನವಾಗಿದ್ದರೆ, ಗಾಂಧೀಜಿಗೆ ತಮ್ಮ ರಾಜಕಾರಣ ಹಿಂದೂ ಧರ್ಮವನ್ನು ಉದಾರಗೊಳಿಸುವ ಮೂಲಕ ಸುಧಾರಿಸಿ ಅದರ ಧಾರಣ ಶಕ್ತಿಯನ್ನು ಸಂವರ್ಧಿಸಿಕೊಳ್ಳುವ ಸಾಧನವಾಗಿತ್ತು. ದೇವರು, ದೇವಸ್ಥಾನ, ಜಾತಿ, ಕರ್ಮ, ಸಂಸ್ಕಾರ, ಇತಿಹಾಸ ಇತ್ಯಾದಿಗಳ ಬಗ್ಗೆ ಗಾಂಧೀಜಿಯ ಧೋರಣೆಗಳನ್ನು ಹಿಂದೂವಾದಿಗಳ ಧೋರಣೆಗಳೊಂದಿಗೆ ಹೋಲಿಸಿ ನೋಡಿದರೆ ಇದು ಇನ್ನಷ್ಟು ಸ್ಪಷ್ಟವಾದೀತು.

ಹಾಗಾಗಿಯೇ ಗಾಂಧಿ ಹಿಂದ್ ಸ್ವರಾಜ್ ಸ್ಥಾಪನೆಗಾಗಿ ಮುದ್ರಣ ಯಂತ್ರ, ರೈಲೂ ಸೇರಿದಂತೆ ಎಲ್ಲ ಆಧುನಿಕ ಯಂತ್ರ ಸಾಮಗ್ರಿಗಳ ವಿರುದ್ಧ, ವಕೀಲಿಕೆಯನ್ನಾಧರಿಸಿದ ಆಧುನಿಕ ನ್ಯಾಯ ಪದ್ಧತಿಯ ವಿರುದ್ಧ , ಔಷಧ ಕೈಗಾರಿಕೆಯ ಸಾಮ್ರಾಜ್ಯ ಸ್ಥಾಪಿಸುವ ಆಧುನಿಕ ವೈದ್ಯ ಪದ್ಧತಿಯ ವಿರುದ್ಧ, ಒಂದು ಧರ್ಮದವರ ವಿರುದ್ಧ ಇನ್ನೊಂದು

ಧರ್ಮದವರನ್ನು ಎತ್ತಿಕಟ್ಟುವ ಆಧುನಿಕ ಚರಿತ್ರೆಕಾರಿಕೆಯ ವಿರುದ್ಧ ತಮ್ಮ ವಾದಗಳನ್ನು ಮಂಡಿಸಿದರು. ಆಧುನಿಕ ನಾಗರೀಕತೆಯ ತಾತ್ವಿಕ ಹೆಗ್ಗುರುತುಗಳೆನಿಸಿದ್ದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ತಮ್ಮ ಸ್ವರಾಜ್ಯದ ತಾತ್ವಿಕ ಪರಿಕಲ್ಪನೆಗೆ ಪೂರಕವಾಗಿ ಅಳವಡಿಸಿಕೊಂಡಿದ್ದ ಗಾಂಧಿ; ಅದೇ ನಾಗರೀಕತೆಯ ತಾಂತ್ರಿಕ ಹೆಗ್ಗುರುತಗಳೆನಿಸಿದ್ದ ಯಂತ್ರ, ರೈಲು, ವಕೀಲಿಕೆ, ರಸಾಯನಿಕ ಔಷಧ ಪದ್ಧತಿ ಇತ್ಯಾದಿಗಳನ್ನು ಮಾರಕವೆಂದೇತಕೆ ಪರಿಗಣಿಸಿದರೆಂದು ನಾವು ಚಿಂತಿಸಬೇಕು. ಮನುಷ್ಯ ತನ್ನೊಳಗಿನ ದೈವಿಕತೆಯನ್ನು ಕಂಡುಕೊಳ್ಳುವುದೇ ಆತನ ಬದುಕಿನ ಪರಮ ಗುರಿ ಮತ್ತು ಸಾರ್ಥಕತೆಯಾಗಿದೆ ಮತ್ತು ಅದಕ್ಕೆ ದೇಹವೊಂದು (ಕರ್ಮ)ಮಾಧ್ಯಮವಾಗಿದೆ ಎಂದು ಗಾಂಧಿ ಭಾವಿಸಿದ್ದರು. ಇದಕ್ಕೆ ಅಡಚಣೆ ಉಂಟುಮಾಡುವ ಎಲ್ಲವನ್ನೂ ಅನುಮಾನದಿಂದ ನೋಡುತ್ತಿದ್ದ ಅವರು, ಆಧುನಿಕ ನಾಗರೀಕತೆಯ ಈ ಎಲ್ಲ ತಾಂತ್ರಿಕತೆಗಳು ಮನುಷ್ಯನ ದೇಹದ ಆರೋಗ್ಯ ಮತ್ತು ಆತ್ಮದ ಘನತೆಯನ್ನು ಹಾಳುಗೆಡುಹುವ ಮೂಲಕ ಅವನನ್ನು ತನ್ನ ಪರಮ ಗುರಿಯಿಂದ ಚ್ಯುತಿಗೊಳಿಸುವುವೆಂದು ಬಲವಾಗಿ ನಂಬಿದ್ದರು.

ಆದರೆ ಗಾಂಧಿ ಇವುಗಳ ವಿರುದ್ಧ ತಮ್ಮ ಸತ್ಯಾಗ್ರಹದ ಸಾಧನವನ್ನೇಕೆ ಬಳಸಲಿಲ್ಲ ಎಂಬುದನ್ನೂ ನಾವು ಯೋಚಿಸಬೇಕು. ಹಾಗೆ ಯೋಚಿಸಿದಾಗ ಗೊತ್ತಾಗುವುದು, ಗಾಂಧಿ ಇವುಗಳ ವಿರುದ್ಧ ಮಾತನಾಡುತ್ತಿದ್ದುದು ರೂಪಕ ಭಾಷೆಯಲ್ಲಿ ಎಂದು. ಪ್ರತಿ ಹಂತದಲ್ಲೂ ಆಧುನಿಕ ನಾಗರೀಕತೆಯನ್ನು ಪ್ರಶ್ನಿಸಿಯೇ ಅದರ ಒಳಿತುಗಳನ್ನು ಅಳವಡಿಸಿಕೊಳ್ಳ ಬೇಕೆಂಬುದು ಅವರ ಆಶಯವಾಗಿತ್ತು. ಇದನ್ನರಿಯದ ಪ್ರಗತಿಪರರೆನ್ನಿಸಿಕೊಂಡ ಕೆಲವು ಮೂಢರು ಗಾಂಧೀಜಿಯನ್ನು ಯಥಾಸ್ಥಿತಿವಾದಿ, ಪ್ರತಿಗಾಮಿ, ಸನಾತನಿ ಎಂದೆಲ್ಲ ಟೀಕಿಸುವರು. ಆದರೆ ಇಂದು ಜಾಗತೀಕರಣದ ರೂಪ ತಳೆದು ನಮ್ಮೆದುರಿಗೆ ನಿಂತಿರುವ ಆಧುನಿಕ ನಾಗರೀಕತೆ ನಮ್ಮನ್ನು ವ್ಯಕ್ತಿಗಳನ್ನಾಗಿ ಮತ್ತು ಸಮೂಹವನ್ನಾಗಿ ನೈಸರ್ಗಿಕ ಮತ್ತು ನೈತಿಕ ನೆಲೆಗಳಲ್ಲಿ ಎಲ್ಲಿಗೆ ಮತ್ತು ಎಂತಹ ಸಂದಿಗ್ಧಗಳಲ್ಲಿ ತಂದು ನಿಲ್ಲಿಸಿದೆ ಎಂಬುದನ್ನು ಯೋಚಿಸಿದಾಗ ಇಂತಹ ಟೀಕೆಗಳ ಹುಸಿತನದ ಅರಿವಾದೀತು.

ಗಾಂಧಿ ಬಹು ಹಿಂದೆಯೇ ಸ್ಪಷ್ಟಪಡಿಸಿದ್ದರು, 'ನಾನು ಯಂತ್ರ ವಿರೋಧಿಯಲ್ಲ, ಯಂತ್ರ ನಾಗರೀಕತೆಯ ವಿರೋಧಿ' ಎಂದು. ವಿಚಾರಗಳಲ್ಲಿ ಆಧುನಿಕರಲ್ಲಿ ಅತ್ಯಾಧುನಿಕ ರೆನಿಸಿದ್ದ ಗಾಂಧೀಜಿಯ ಈ ಮಾತಿನ ಮರ್ಮವನ್ನರಿಯುವ ಕಾಲವೀಗ ಬಂದಿದೆ. ಹಾಗಾಗಿಯೇ ಇಂದು ಜಗತ್ತಿನಾದ್ಯಂತ 'ಹಿಂದ್ ಸ್ವರಾಜ್' ಬಗ್ಗೆ ಹೊಸ ಕುತೂಹಲ ಹುಟ್ಟಿದೆ. ಅಧ್ಯಯನ, ಚರ್ಚೆ, ಸಂವಾದಗಳು ನಡೆದಿವೆ. ಗಾಂಧಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಲಾಗುತ್ತಿದೆ. ಆದರೆ, ಗಾಂಧೀಜಿಯನ್ನು ರಾಷ್ಟ್ರಪಿತನೆಂದು ಕರೆದುಕೊಳ್ಳುತ್ತಿರುವ ನಾವು?

(ವಿಶ್ರಾಂತ ಕರ್ನಾಟಕ, ೧೭ ಅಕ್ಟೋಬರ್, ೨೦೦೮)

ಹಿಂದ್ ಸ್ವರಾಜ್: ಕೆಲವು ಪ್ರಶ್ನೋತ್ತರಗಳು

೧. ಹಿಂದ್ ಸ್ವರಾಜ್ ಪ್ರಕಟವಾಗಿ ನೂರು ವರ್ಷಗಳಾದವು. ಸ್ವಾತಂತ್ರ್ಯ ಬಂದು ಕೂಡ ಆರು ದಶಕಗಳು ಕಳೆದವು. ಯಾವ ಹಂತದಲ್ಲೂ 'ಹಿಂದ್ ಸ್ವರಾಜ್' ಪ್ರತಿಪಾದಿಸುವ ನಾಗರೀಕತೆ, ಜೀವನ ಶೈಲಿಯ ಕಲ್ಪನೆ ನಮ್ಮ ಸಮುದಾಯದ ಆಯ್ಕೆಯಾಗಲಿಲ್ಲ. ಇದಕ್ಕೆ ಕಾರಣಗಳೇನೆಂದು ಗುರುತಿಸಬಯಸುತ್ತೀರಿ?

'ಹಿಂದ್ ಸ್ವರಾಜ್', ಹಿಂದೂಸ್ತಾನ ಏಕೆ ಸ್ವಾತಂತ್ರ್ಯವನ್ನು ಕಳೆದು ಕೊಂಡಿತು ಮತ್ತು ಅದನ್ನು ಹೇಗೆ ಮರಳಿ ಗಳಿಸಿಕೊಳ್ಳುವುದಷ್ಟೇ ಅಲ್ಲ, ಮುಂದೆ ಕಾಪಾಡಿಕೊಂಡು ಹೋಗು ವುದೂ ಹೇಗೆ ಎಂಬುದನ್ನೂ ವಿವೇಚಿಸಿದ ಕೃತಿ. ಅದು ವಿವರಗಳಲ್ಲಿ ಭಾರತಕ್ಕಷ್ಟೇ ಸಂಬಂಧಿಸಿದಂತೆ ಕಂಡರೂ, ಆಶಯದಲ್ಲಿ ಪಶ್ಚಿಮದ ಆಧುನಿಕ ನಾಗರೀಕತೆಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ವಿಮರ್ಶಿಸುತ್ತಾ ಇಡೀ ಜಗತ್ತಿನ ಮನುಷ್ಯ ನಾಗರೀಕತೆಯ ದಿಕ್ಕು- ದೆಸೆಗಳು ಬದಲಾಗಬೇಕಾದ ಅಗತ್ಯವನ್ನು ಪ್ರತಿಪಾದಿಸಿದ ಕೃತಿ. ಹಾಗಾಗಿಯೇ ಈ ಕೃತಿ ಪ್ರಕಟವಾದಾಗ ಅದು ಚರ್ಚಿತವಾದದ್ದು ಹೆಚ್ಚಾಗಿ ಜಾಗತಿಕ ಮಟ್ಟದ ಚಿಂತಕರಿಂದಲೇ ಹೊರತು ಭಾರತೀಯರಿಂದಲ್ಲ. ಗಾಂಧೀಜಿಯ ರಾಜಕೀಯ ಗುರು ಗೋಖಲೆಯವರೇ ಈ ಕೃತಿಯ ಬಗ್ಗೆ 'ಅವಸರದಲ್ಲಿ ಬರೆದಿರು ವುದು; ಇದನ್ನು ಮುಂದೆ ನೀವೇ ಸುಟ್ಟು ಹಾಕುವಿರಿ!' ಎಂದು ಅವರಿಗೆ ಹೇಳಿದ್ದರಂತೆ. ಆದರೆ ಗಾಂಧೀಜಿ ಮಾತ್ರ ಅದನ್ನು ಬರೆದ ಐವತ್ತು ವರ್ಷಗಳ ನಂತರವೂ, ಅದರಲ್ಲಿ ಬಳಸಿರುವ 'ವೇಶ್ಯೆ' ಎಂಬ ಶಬ್ದ ಬಿಟ್ಟು ಇನ್ನೊಂದು ಶಬ್ದವನ್ನೂ ಬದಲಿಸಲಾರೆ ಎಂದು ಘೋಷಿಸಿದ್ದರು! ಯಂತ್ರಾಧಾರಿತ ಆಧುನಿಕ ನಾಗರೀಕತೆ ಇನ್ನೂ ಅಂಬೆಗಾಲಿಟ್ಟು ಭಾರತವನ್ನು ಪ್ರವೇಶಿಸಿದ್ದಾಗಲೇ; ಭಾರತ ಅತ್ಯುತ್ತಮವೆನಿಸಿದ್ದ ಮನಸ್ಸುಗಳಿಂದ ಇಂತಹ ಪ್ರತಿಕೂಲ ಪ್ರತಿಕ್ರಿಯೆಯನ್ನು ಪಡೆದಿದ್ದ ಈ ಕೃತಿ, ಭಾರತವೂ ಸೇರಿದಂತೆ ಜಗತ್ತಿನಲ್ಲಿ ಆಧುನಿಕ ನಾಗರೀಕತೆಯ ಹಿಡಿತ ಹೆಚ್ಚಾಗುತ್ತಾ ಹೋದಂತೆ ಇಡಿಯಾಗಿ ಯಾವುದೇ ಸಮುದಾಯದ ಆಯ್ಕೆಯಾಗಲು ಹೇಗೆ ಸಾಧ್ಯ? ಕಾಲ ಮತ್ತು ದೇಶಗಳ ನೆಲೆಯಲ್ಲಿ ಬಹು ವ್ಯಾಪಕತೆಯನ್ನು ಪಡೆದ ಇಂತಹ ಕೃತಿಗಳು ಯಾವತ್ತೂ ಅಲ್ಪ ಸಂಖ್ಯಾತರ ಮಧ್ಯೆಯಷ್ಟೇ ಜೀವಂತವಾಗಿರುತ್ತವೆ- ಆಳದ ಮಣ್ಣಿನಲ್ಲಿ ಮಲಗಿರುವ ಬೀಜಗಳಂತೆ. ಕಾಲ- ದೇಶಗಳು ಹದಗೊಂಡಾಗ ಅವು ವ್ಯಾಪಕ ಜನಾಂದೋಲನಗಳಾಗಿ ಚಿಗುರೊಡೆಯುತ್ತವೆ.

೨. ಕಾಂಗ್ರೆಸ್ ಪಕ್ಷ ನೆಹರೂ ನಾಯಕತ್ವ ಇವುಗಳನ್ನು ಮಾತ್ರ ಗಾಂಧೀವಾದದಿಂದ ನಾವು ವಿಮುಖರಾಗಲು ಕಾರಣಗಳಾಗಿ ಗುರುತಿಸುವುದು ಎಷ್ಟರಮಟ್ಟಿಗೆ ಸರಿ?

ಸ್ವಾತಂತ್ರ್ಯ ಆಂದೋಲನದ ಇತಿಹಾಸವನ್ನು ವಿವರವಾಗಿ ಅಧ್ಯಯನ ಮಾಡಿದ

ಯಾರಿಗಾದರೂ, ಕಾಂಗ್ರೆಸ್ ಪಕ್ಷ ಎಂದೂ ಏಕಾಕಾರದ ಅಥವಾ ಏಕಾಶಯದ ಆಂದೋಲನವಾಗಿರಲಿಲ್ಲ ಎಂಬುದು ಗೊತ್ತಿರುತ್ತದೆ. ಹಾಗಾಗಿ, ಅದರಲ್ಲಿ ಗಾಂಧೀಜಿಯವರನ್ನು ಮೆಚ್ಚಿಕೊಂಡಿದ್ದವರಷ್ಟೇ ಸಂಖ್ಯೆಯಲ್ಲಿ ಅವರನ್ನು ಪೂರ್ಣವಾಗಿ ಮೆಚ್ಚದವರೂ, ಅಸಹಾಯಕವಾಗಿ ಸಹಿಸಿಕೊಂಡಿದ್ದವರೂ ಇದ್ದರು ಎಂಬುದನ್ನು ನಾವು ಮರೆಯಬಾರದು. ಇನ್ನೂ ಮುಖ್ಯ ಸಂಗತಿ ಎಂದರೆ, ಗಾಂಧೀಜಿ ದ.ಆಫ್ರಿಕಾದಲ್ಲಿ ಸತ್ಯಾಗ್ರಹದಲ್ಲಿ ತೊಡಗಿದ್ದ ಸಮಯದಲ್ಲಿ ರಚಿತವಾದ ಈ ಕೃತಿ ಅವರು ಭಾರತದ ಸ್ವಾತಂತ್ರ್ಯ ವಳುವಳಿಯ ನೇತೃತ್ವ ವಹಿಸಿಕೊಂಡ ನಂತರ ಕಾಂಗ್ರೆಸ್ ಪಕ್ಷ ಅಥವಾ ಅದು ನಡೆಸಿದ ಆಂದೋಲನಗಳ ವೇದಿಕೆಗಳಲ್ಲಿ ಎಂದೂ ಚರ್ಚೆಗೆ ಬಂದಂತೆ ಕಾಣುವುದಿಲ್ಲ. ಹಾಗಾಗಿ ಕಾಂಗ್ರೆಸ್ 'ಹಿಂದ್ ಸ್ವರಾಜ್'ನಿಂದ ವಿಮುಖವಾಯಿತು ಎಂಬ ಮಾತಿಗೇ ಅವಕಾಶವಿಲ್ಲ. ಈ ಕೃತಿ ಕುರಿತ ನೆಹರೂ ನಿಲುವನ್ನೂ ಇದೇ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, ಗಾಂಧೀಜಿ ತಮ್ಮ ರಾಜಕೀಯ ಬದುಕಿನ ನಿರ್ಣಾಯಕ ಘಟ್ಟದ ಹೊತ್ತಿಗೆ, ತಮ್ಮ ಈ ಬೀಜ ಕೃತಿಯನ್ನು ಅಸಂಗತ, ಅವ್ಯಾವಹಾರಿಕ ಎಂದು ಕರೆಯಬಲ್ಲ ಮಾನಸಿಕತೆಯ ನೆಹರೂ ಅವರನ್ನೇ ತಮ್ಮ ರಾಜಕೀಯ ಉತ್ತರಾಧಿಕಾರಿ ಎಂದು ಘೋಷಿಸುವಂತಹ ಇಕ್ಕಟ್ಟಿಗೆ ಸಿಲುಕಿದ್ದರೆನ್ನುವ ಸಂಗತಿಯೇ ಈ ಕೃತಿಯ ಅಂದಿನ 'ದುಃಸ್ಥಿತಿ'ಗೆ ನೆಹರೂ ಅವರೊಬ್ಬರನ್ನೇ ಜವಾಬ್ದಾರರನ್ನಾಗಿ ಮಾಡುವುದು ತಪ್ಪೆಂದು ಸೂಚಿಸುತ್ತದೆ. ನೆಹರೂ ಅವರನ್ನು ಇಂದು ಈ ಸಂಬಂಧ ಯಾರಾದರೂ ದೂಷಿಸುತ್ತಿದ್ದರೆ, ಅದಕ್ಕೆ ಕಾರಣ; ಅವರು ಅಂದು ಆ ಮಾನಸಿಕತೆಯ ಅಧಿಕೃತ ಪ್ರತಿನಿಧಿಯಾಗಿದ್ದರೆಂಬುದೇ ಆಗಿದೆ.

೩. 'ಹಿಂದ್ ಸ್ವರಾಜ್' ಭಾರತ, ಭಾರತೀಯರನ್ನು ಕುರಿತಂತೆ ಮಾತ್ರವಲ್ಲ ಮನುಷ್ಯನ ನಾಗರೀಕತೆಯ ಬಗ್ಗೆ ಎಲ್ಲ ಕಾಲಕ್ಕೂ ಎಲ್ಲ ದೇಶಕ್ಕೂ ಅನ್ವಯವಾಗಬಲ್ಲಂತಹ ಸಂಗತಿಗಳ ಕಡೆ ಗಮನ ಸೆಳೆಯಿತು. ಹೀಗಿದ್ದೂ ಮಾರ್ಕ್ಸ್‌ವಾದ ಜಾಗತಿಕ ಮಟ್ಟದಲ್ಲಿ ಆಕರ್ಷಿಸಿದಷ್ಟು ದೇಶಗಳನ್ನು, ಸರ್ಕಾರಗಳನ್ನು, ಚಿಂತಕರನ್ನು ಗಾಂಧೀವಾದ ಆಕರ್ಷಿಸಲಿಲ್ಲ. ಇದಕ್ಕೆ ಕಾರಣಗಳೇನು?

ಮೊದಲ ಪ್ರಶ್ನೆಗೆ ನೀಡಿದ ಉತ್ತರದಲ್ಲೇ ಈ ಪ್ರಶ್ನೆಗೆ ಅರ್ಧ ಉತ್ತರವಿದೆ. ಮಾರ್ಕ್ಸ್‌ವಾದ, ಆಧುನಿಕತೆಯ ಮುಖ್ಯ ಚಾಲನಾ ಶಕ್ತಿಯಾದ 'ವೈಜ್ಞಾನಿಕತೆ'ಯ ಡಂಗುರ ಸಾರಿಕೊಂಡು ಇತಿಹಾಸವನ್ನು ಬದಲಾಯಿಸುವ 'ಕ್ರಾಂತಿ'ಯ ಪರಿಭಾಷೆಯಲ್ಲಿ ಮಾತನಾಡಿತು. ಆದರೆ ಗಾಂಧಿ 'ಧರ್ಮ'ದ ನೆಲೆಯಲ್ಲಿ ನಿಂತು ಆತ್ಮೋದ್ಧಾರದ ಪರಿಭಾಷೆಯಲ್ಲಿ ಇತಿಹಾಸವನ್ನು 'ಪುನರುಜ್ಜೀವನ'ಗೊಳಿಸುವ ಮಾತನಾಡಿದರು. ಊಳಿಗಮಾನ್ಯ ಸಮಾಜಗಳ ಹಾಗೂ ವಸಾಹತುಶಾಹಿ ದೇಶಗಳ ಶೋಷಿತರಿಗೆ ಮಾರ್ಕ್ಸ್‌ವಾದ ಸಹಜವಾಗಿಯೇ 'ಪ್ರಗತಿಪರತೆ'ಯ ಕ್ರಿಯಾಶೀಲ ರೂಪವಾಗಿ ಕಂಡರೆ, ಇದರ ಹಿನ್ನೆಲೆಯಲ್ಲಿ ಗಾಂಧಿ ಚಿಂತನೆ 'ಅವ– ಪ್ರಗತಿ'ಯ ಸ್ಥಗಿತವಾದವಾಗಿ ಕಂಡಿತು. ಇದನ್ನು 'ಕಾಲ ಮಹಿಮೆ' ಎಂದೂ ಕರೆಯಬಹುದೇನೋ! ಆದರೂ– ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ– ಜಗತಿನಾದ್ಯಂತ ಗಾಂಧೀಜಿಗೆ ಸಿಕ್ಕ ತಾತ್ವಿಕ ಮಾನ್ಯತೆಯೇನೂ

ಕಡಿಮೆಯಲ್ಲ. ಇಂದು ಜಗತ್ತಿನ ವಿವಿಧ ವೇದಿಕೆಗಳಲ್ಲಿ 'ಹಿಂದ್ ಸ್ವರಾಜ' ಮತ್ತೆ ಮತ್ತೆ ಚರ್ಚೆಗೆ ಬರುತ್ತಿರುವುದು ಇದೇ ಕಾರಣದಿಂದಾಗಿ.

೪. ಜಾಗತೀಕರಣ ಕುರಿತಂತೆ ಈಚಿನ ಬಿಕ್ಕಟ್ಟಿನ ಪ್ರಶ್ನೆಗಳ ಬಗ್ಗೆ ಚರ್ಚೆ ನಡೆದಾಗಲೂ ಮತ್ತೆ ಮಾರ್ಕ್ಸ್‌ವಾದವೇ ಮುನ್ನೆಲೆಗೆ ಬರುತ್ತಿದೆ. 'ಹಿಂದ್ ಸ್ವರಾಜ್' ಈಗಲೂ ನಮ್ಮನ್ನು ಆಕರ್ಷಿಸುತ್ತಿಲ್ಲವೇಕೆ?

'ಆಧುನಿಕೋತ್ತರವಾದ'ದ ಹೆಸರಿನಲ್ಲಿ ಆಧುನಿಕತಾವಾದವನ್ನು ಮುಂದುವರೆಸಿ ಕೊಂಡು ಹೋಗುವ ನಮ್ಮ ಕೆಲವು ಬುದ್ಧಿಜೀವಿಗಳ ವಸಾಹತೋತ್ತರ ನವ ವಸಾಹತುಶಾಹಿ ಮಾನಸಿಕತೆಯಲ್ಲಷ್ಟೇ ಹೀಗೆ ಕಾಣುತ್ತಿರುವುದು. ಆದರೆ ಜಾಗತಿಕ ಮಟ್ಟದಲ್ಲಿ ಪರಿಸ್ಥಿತಿ ಹಾಗೇನೂ ಇಲ್ಲ. ಮುಕ್ತ ಬಂಡವಾಳಶಾಹಿ ವ್ಯವಸ್ಥೆಯ ಕುಸಿತದ ಇಂದಿನ ದಿನಗಳಲ್ಲಿ ಜಗತ್ತಿನ ಅತ್ಯುತ್ತಮ ಆರ್ಥಿಕ ಚಿಂತಕರು ಮತ್ತು ಹವಾಮಾನ ಬದಲಾವಣೆ ಅಧ್ಯಯನ ಕ್ಷೇತ್ರದ (ಅಭಿವೃದ್ಧಿ) ತಜ್ಞರು ಭಾರತೀಯ ಸಮಾಜವಾದ ಪ್ರತಿಪಾದಿಸಿದ್ದ ಮಿತಿಗಳುಳ್ಳ ಒಂದು ಸಭ್ಯ ಸರಳ ಜೀವನ ಮಟ್ಟದ ತತ್ವವನ್ನು ಹೆಚ್ಚೆಚ್ಚು ಮಾನ್ಯ ಮಾಡತೊಡಗಿದ್ದಾರೆ. ಇದು ಕ್ರಮೇಣ ಜಾಗತಿಕ ಚರ್ಚೆಯಲ್ಲಿ ಹೆಚ್ಚೆಚ್ಚು ಮುನ್ನೆಲೆಗೆ ಬರುವುದರಲ್ಲಿ ಸಂಶಯವಿಲ್ಲ. ಈ ಭಾರತೀಯ ಸಮಾಜವಾದವೆಂಬುದು ಗಾಂಧೀಜಿಯ 'ಹಿಂದ್ ಸ್ವರಾಜ್'ನ ಸುಧಾರಿತ– ವ್ಯಾವಹಾರಿಕ ರೂಪವಷ್ಟೆ.

೫. ಹಿಂದ ಸ್ವರಾಜ್ ಮೂಲಕ ಗಾಂಧೀವಾದ ಮನುಷ್ಯನ ಆಸೆ– ಆಕಾಂಕ್ಷೆ, ಸ್ವಭಾವಗಳಲ್ಲಿ ನಿರಂತರ ಮಾಗುವಿಕೆ, ಪರಿವರ್ತನೆಯನ್ನು ನಿರೀಕ್ಷಿಸುತ್ತದೆ. ಇಂತಹ ಪರಿವರ್ತನೆಯ ಬಗ್ಗೆ, ಮಾಗುವಿಕೆಯ ಬಗ್ಗೆ ಆಧುನಿಕ ಮನುಷ್ಯರಿಗೆ, ವಿಶೇಷವಾಗಿ ಭಾರತೀಯರಿಗೆ ಒಲವಿದೆಯೇ?

ನಿರಂತರ ಮಾಗುವಿಕೆ ಮನುಷ್ಯನ ಸಹಜ ಸ್ವಭಾವ. ಆದರೆ ಅದು ಈಗ ಆಗುತ್ತಿಲ್ಲವೆಂದರೆ, ಆಧುನಿಕ ನಾಗರೀಕತೆಯಲ್ಲಿ ಏನೋ ಅಸಹಜತೆ ಇದೆ ಎಂದೇ ಅರ್ಥ. ಈ ಅಸಹಜತೆಯ ಮೂಲವನ್ನು ಗಾಂಧೀಜಿ, 'ಹಿಂದ್ ಸ್ವರಾಜ್' ಮೂಲಕ ಅನ್ವೇಷಿಸಿದರು. ಇದು ಇಡಿಯಾಗಿ ಮಾನವ ಸ್ವಭಾವದ ಪ್ರಶ್ನೆಯಾಗಿರುವುದರಿಂದ, ಭಾರತೀಯರ ಬಗ್ಗೆಯಷ್ಟೇ ವಿಶೇಷವಾಗಿ ಹೇಳುವ ಅಗತ್ಯವಿಲ್ಲ. ಬದುಕಿನ ಅಸಹಜತೆಯ ಚಕ್ರ ತನ್ನ ಪ್ರಸ್ತುತ (ಆಧುನಿಕತೆ) ಸುತ್ತನ್ನು ಇದೀಗ ಪೂರೈಸುವತ್ತಿರುವಂತಿದೆ. ಪರಿಣಾಮಗಳನ್ನು ಕಾದು ನೋಡಬೇಕಷ್ಟೆ.

೬. 'ಹಿಂದ್ ಸ್ವರಾಜ್' ಪ್ರತಿಯೊಬ್ಬ ಮನುಷ್ಯನನ್ನು. ಪ್ರತಿಯೊಂದು ಸಂಸ್ಕೃತಿಯನ್ನೂ ತನ್ನತನವನ್ನು ಗುರುತಿಸಿಕೊಳ್ಳುವುದರ ಜೊತೆಗೆ ಸಾಕ್ಷಿ ಪ್ರಜ್ಞೆಯನ್ನು ಕೂಡಾ ಬೆಳೆಸಿಕೊಳ್ಳಬೇಕು ಎಂದು ಬಯಸುತ್ತದೆ. ಇವೊತ್ತಿನ ಹಿಂದೂವಾದಿ ರಾಜಕಾರಣ 'Identity Politics'ಗೆ ಗಮನ ಕೊಡುವಷ್ಟು ಸಾಕ್ಷಿ ಪ್ರಜ್ಞೆಗೆ ಕೊಡುತ್ತಿಲ್ಲ. ಇಂಥ ಸಂದರ್ಭದಲ್ಲಿ 'ಹಿಂದ್ ಸ್ವರಾಜ್'ನ ಪುನರ್‌ಓದು ಹೇಗೆ ನೆರವಾಗಬಲ್ಲುದು?

ಅದನ್ನು ಸಂಸ್ಕೃತಿಯ 'ತನ್ನತನ'ವೆಂದು ಗುರುತಿಸುವುದು ತಪ್ಪಾಗುತ್ತದೆ. ಅದನ್ನು ಸಮುದಾಯವೊಂದರ 'ವಿಶಿಷ್ಟ' ಪ್ರತಿಭೆ ಅಥವಾ 'ದಕ್ಷತೆ' ಎಂದು ಗುರುತಿಸಬಹುದೇನೋ.

ಆವರ ನೀವು ಪ್ರಸ್ತಾಪಿಸಿರುವ ಇಂದಿನ ಹಿಂದೂವಾದಿ ರಾಜಕಾರಣ ತನ್ನ ಮೂಲ ಸ್ವರೂಪದಿಂದಾಗಿಯೇ, ಧಾರ್ಮಿಕತೆಯನ್ನು ಕಳೆದುಕೊಂಡು ಮತೀಯವಾಗಿಬಿಟ್ಟಿರುವುದರಿಂದ ಅದು ಅಲ್ಪಕಾಲಿಕ ಲಾಭಗಳ ತತ್ಕಾಲೀನ ರಾಜಕಾರಣವನ್ನು ಮಾಡುವುದಕ್ಕಷ್ಟೇ ಸೀಮಿತವಾಗಿದೆ. ಅಂತಹ ಕಡೆ ಸಾಕ್ಷಿ ಪ್ರಜ್ಞೆಯ ಮಾತಿಗೆಲ್ಲಿ ಅವಕಾಶ? ಹಾಗೆ ನೋಡಿದರೆ, ಗಾಂಧೀಜಿ 'ಹಿಂದ್ ಸ್ವರಾಜ್ ಮೂಲಕ ಪ್ರತಿಪಾದಿಸುತ್ತಿರುವುದು ಹಿಂದೂ (ವಾದಿ ಅಲ್ಲ) ರಾಜಕಾರಣವನ್ನೇ– ಆದರೆ ಅದರ ಎಲ್ಲ ಅಧ್ಯಾತ್ಮಿಕ ನೆಲೆಯ ಅರ್ಥದಲ್ಲಿ. ಈ ಕೃತಿಯ ಪುನರ್‌ಓದು ನಡೆಯುವುದಿದ್ದರೆ, ಈ ನೆಲೆಯಲ್ಲಿ ನಡೆಯಬೇಕಿದೆ.

೭. ಗಾಂಧೀಜಿಯ 'ಹಿಂದ್ ಸ್ವರಾಜ್' ಮತ್ತು ನೆಹರೂ ಅವರ 'The Discovery of India' ಎರಡೂ ವಿಭಿನ್ನ ದೃಷ್ಟಿಕೋನಗಳನ್ನು ಮಂಡಿಸಿದವು. ಇವೆರಡರ ದೃಷ್ಟಿಕೋನಗಳು ಮೂಲತಃ ತದ್ವಿರುದ್ಧವೇ?

'The Discovery of India' ಭಾರತದ ಇತಿಹಾಸವನ್ನು ಮೆಚ್ಚುಗೆ–ಟೀಕೆಗಳಿಂದ ಇಮ್ಮುಖವಾಗಿ ವಿಮರ್ಶಿಸುವ ಆಧುನಿಕತಾವಾದಿಯಾದ ಕೃತಿ. ಇಲ್ಲಿ ಕೆಲಸ ಮಾಡಿರುವುದು 'ಪೌರ್ವಾತ್ಯವಾದಿ' ಎಂದು ಕರೆಯಲಾಗುವ ಮೂಲತಃ ಪಶ್ಚಿಮದ ಮನಸ್ಸಂಕೀರ್ಣವೇ. ಆದರೆ ಗಾಂಧೀಜಿಯದ್ದು ಶುದ್ಧ ಹಿಂದೂ ಮತೀಯತೆಯನ್ನು ಮೀರಿದ ಜಾಗತಿಕ ಪ್ರಜ್ಞೆಗೆ ತುಡಿಯುವ ಬಹುಶ್ರುತ ಮನಸ್ಸು. ಹೀಗೆ ನೆಹರೂ ಅವರದ್ದು ಕಾಲಬದ್ಧವಾದ ಮನಸ್ಸಾದರೆ, ಗಾಂಧೀಜಿಯದ್ದು ಕಾಲಾತೀತವಾದದ್ದು. ಈ ಎರಡು ಮನಸ್ಸುಗಳ ಅಂತರ ಕೇವಲ ಪ್ರಮಾಣದ ನೆಲೆಯದ್ದಲ್ಲ, ಗುಣದ ನೆಲೆಯದ್ದೂ ಎಂಬುದನ್ನು ಗಮನಿಸಬಲ್ಲವರಿಗೆ 'ತದ್ವಿರುದ್ಧ' ಇತ್ಯಾದಿಗಳ ಭಾಷೆಯಲ್ಲಿ ಮಾತಾಡುವುದು ಅಸಂಬದ್ಧ ಎಂಬುದೂ ಗೊತ್ತಾದೀತು.

೮. ಗಾಂಧೀಜಿ 'ಹಿಂದ್ ಸ್ವರಾಜ್'ನ್ನು ಬರೆಯುವಾಗ ಉಗ್ರ ರಾಷ್ಟ್ರಪ್ರೇಮಿಗಳು, ಹಿಂಸಾವಾದಿಗಳು ಯಂತ್ರ ನಾಗರೀಕತೆಯ ಒಲವುಳ್ಳ ಆರಾಧಕರನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರು. 'ಹಿಂದ್ ಸ್ವರಾಜ್'ದ ಶತಮಾನೋತ್ಸವ ಹೊತ್ತಿಗೆ ನಾವು ಬಲಿಷ್ಠ ರಾಷ್ಟ್ರಗಳ ಪ್ರಭುತ್ವವನ್ನು ವಿಜ್ಞಾನದ ಸಾರ್ವಭೌಮತ್ವವನ್ನು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶ ಮತ್ತು ಕಾಲವು 'ಹಿಂದ ಸ್ವರಾಜ್'ನ್ನು ಮುಂದಿನ ಐವತ್ತು ವರ್ಷಗಳಲ್ಲಿ ಹೇಗೆ ಓದಬಹುದು?

ಮೊದಲಿಗೆ 'ಹಿಂದ್ ಸ್ವರಾಜ್' ಪ್ರಾಥಮಿಕವಾಗಿ, ಓದಬಹುದಾದ ವಿವಿಧ ಸಾಧ್ಯತೆಗಳನ್ನು ಕುರಿತ ಬೌದ್ಧಿಕ ಚರ್ಚೆಗೆ ಒದಗುವ ಶಾಸ್ತ್ರ ಗ್ರಂಥವಲ್ಲ ಎಂದು ಹೇಳಿಬಿಡಬೇಕಾಗುತ್ತದೆ. ಅದು ಇಂದಿಗೆ ಬಿಟ್ಟುಕೊಡುವ ಅರ್ಥ, ತೋರುವ ಪ್ರಸ್ತುತತೆ ಮಾತ್ರ ಮುಖ್ಯ.

ಇನ್ನು ನಿಮ್ಮ ಭವಿಷ್ಯಶಾಸ್ತ್ರೀಯ ಪ್ರಶ್ನೆಗೆ ಉತ್ತರಿಸುವುದೇ ಆದರೆ, ಭಾರತವೂ ಸೇರಿದಂತೆ, ದೇಶದೊಳಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಕಟ್ಟುವುದರಲ್ಲಿ ತೊಡಗಿಕೊಂಡಿರುವುದಾಗಿ ಹೇಳಿಕೊಳ್ಳುವ ಪ್ರಭುತ್ವಗಳು ಜಾಗತಿಕ ನೆಲೆಯಲ್ಲಿ 'ಸೂಪರ್ ಪವರ್' ಪರಿಭಾಷೆಯಲ್ಲಿ ಮಾತನಾಡುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಇದು

ಆಧುನಿಕತೆ ಸೃಷ್ಟಿಸಿರುವ ಆಘಾತಕಾರಿ ವಿರೋಧಾಭಾಸ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಪ್ರತಿಪಾದಿಸುತ್ತಿರುವಾಗಲೇ, ಅವನ್ನು ಆತ್ಯಂತಿಕವಾಗಿ ಬುಡಮೇಲು ಗೊಳಿಸುವ– ಜಾಗತಿಕ 'ಸೂಪರ್ ಪವರ್' ಆಗಲು ಬೇಕಾದ (ದುಷ್ಟ)ಶಕ್ತಿ ಕೇಂದ್ರಗಳನ್ನೂ ಸ್ಥಾಪಿಸಬೇಕಾಗಿಬರುವುದು ಆಧುನಿಕತಾವಾದದಲ್ಲಿ ಅಂತರ್ಗತವಾಗಿರುವ ಮುಖ್ಯ ವೈರುಧ್ಯಗಳಲ್ಲೊಂದು. ಇದಕ್ಕೆ ಕಾರಣ, ಇದು ಮೂಲತಃ ಭೌತವಾದಿಯಾಗಿರುವುದು.

ಇದು ಹೆಚ್ಚೆಚ್ಚು ಅರ್ಥವಾಗುತ್ತಿದ್ದಂತೆ 'ಹಿಂದ್ ಸ್ವರಾಜ'ನ ವಾರೆಗಣ್ಣಿನ ಓದು ನೇರವಾಗುವ ಸಾಧ್ಯತೆ ಹೆಚ್ಚುತ್ತಾ ಹೋಗುತ್ತದೆ.

('ಹಿಂದ್ ಸ್ವರಾಜ್' ಕುರಿತ ವಿಶೇಷ ಸಂಚಿಕೆಯಾಗಿ ಹೊರತರಲಾದ ೨೦೦೯ರ ಜುಲೈ–ಆಗಸ್ಟ್ 'ಸಂಚಯ'ಕ್ಕಾಗಿ ಕೇಳಲಾದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು)

ಗಾಂಧಿ ಚರಿತ್ರೆ...

ಸ್ವತಂತ್ರ ಭಾರತದ ೬೦ನೇ ವರ್ಷಾಚರಣೆಯ ಸಂದರ್ಭದಲ್ಲಿ ರಾಷ್ಟ್ರಪಿತರೆನಿಸಿದ ಗಾಂಧೀಜಿಯನ್ನು ಆ ಪದವಿಯಿಂದ ಇಳಿಸಲು ಅನೇಕ ವಲಯಗಳಿಂದ ಪ್ರಯತ್ನಗಳು ಆರಂಭವಾಗಿರುವಂತೆ ತೋರುತ್ತದೆ. ಗಾಂಧಿ ಹತರಾದದ್ದೇ, ತಮ್ಮ ಹಿಂದೂ ಧರ್ಮವನ್ನೂ, ಹಿಂದೂ ರಾಷ್ಟ್ರವನ್ನೂ ಮುಸ್ಲಿಮರಿಂದ ಕಾಪಾಡ ಬಯಸಿದ ಮೇಲ್ಜಾತಿ ಹಿತಾಸಕ್ತಿಗಳ ಪ್ರತಿನಿಧಿಯಿಂದ ಎಂಬುದು ಸತ್ಯವಾದರೂ; ಅವರನ್ನು ಮೇಲ್ಜಾತಿ ಹಿತಾಸಕ್ತಿಗಳ ಪ್ರತಿನಿಧಿಯೆಂದೂ, ಮೇಲ್ಜಾತಿಯವರ ಹಿಡಿತದಲ್ಲಿದ್ದ ಮಾಧ್ಯಮಗಳ ಮೂಲಕವೇ ಮಹಾತ್ಮ ಹಾಗೂ ರಾಷ್ಟ್ರಪಿತ ಎಂಬ ಪದವಿಗಳನ್ನು ಪಡೆದು ರಾಷ್ಟ್ರದ ಬಹುಪಾಲು ಜನತೆಗೆ ಮೋಸ ಮಾಡಿದವರೆಂದೂ ಬಿಂಬಿಸುವ 'ಸಂಶೋಧನೆ'ಗಳು ಇತ್ತೀಚೆಗೆ ಆರಂಭವಾಗಿವೆ. ಗಾಂಧಿಯನ್ನು ಕೊಂದವರು ಈಗ ಗಾಂಧಿ ಪ್ರತಿಮೆಯ ಬಳಿಯಿಂದಲೇ ತಮ್ಮ ರಾಜಕೀಯ ಆಂದೋಲನಗಳನ್ನು ಆರಂಭಿಸ ತೊಡಗಬೇಕಾದ ಪರಿಸ್ಥಿತಿ ಉಂಟಾಗಿರುವಾಗ, ಈವರೆಗೆ ಗಾಂಧಿ ವಿರುದ್ಧ ಬರೀ ಆಪಾದನೆಗಳನ್ನು ಮಾಡುತ್ತಿದ್ದ ಜನವೀಗ ಚರಿತ್ರೆಯ ಬಗ್ಗೆ ಹೊಸ ಬೆಳಕು ಚೆಲ್ಲುವ ಪ್ರಯತ್ನಗಳೆಂದು ಹೇಳಿಕೊಂಡು ಈ ಸಂಶೋಧನೆಗಳನ್ನು ಮಂಡಿಸುತ್ತಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದ ಗಾಂಧಿ–ಅಂಬೇಡ್ಕರ್ ಮುಖಾಮುಖಿಯನ್ನು ತಮ್ಮದೇ ಆಕರಗಳು ಹಾಗೂ ವಾದಗಳ ಆಧಾರದ ಮೇಲೆ ಪುನರ್ನಿರೂಪಿಸುತ್ತಿರುವ ಈ ಸಂಶೋಧಕರು, ಗಾಂಧಿಯನ್ನು ಚರಿತ್ರೆಯ ಖಳನಾಯಕನಂತೆ ಚಿತ್ರಿಸುವ ಪ್ರಯತ್ನವೊಂದನ್ನು ನಡೆಸಿದ್ದಾರೆ. ಇದರ ಜೊತೆಗೆ ಈಗ ಗಾಂಧಿ ಒಬ್ಬ ನಿರ್ದಯಿ ಹಾಗೂ ಬೇಜವಾಬ್ದಾರಿ ತಂದೆಯೆಂದು ನಿರೂಪಿಸುವ ನಾಟಕಗಳೂ, ಚಲಚಿತ್ರಗಳೂ, ಬರಹಗಳೂ ಬರತೊಡಗಿವೆ. ಗಾಂಧಿ ವ್ಯಕ್ತಿತ್ವದ ಬೃಹತ್ ಭಿತ್ತಿಯ ಹಿನ್ನೆಲೆಯಲ್ಲಿ ಇದೆನ್ನೆಲ್ಲ ನಿರಾಕರಿಸ ಹೊರಡುವುದು ಹಾಸ್ಯಾಸ್ಪದ ಪ್ರಯತ್ನವಾದೀತಾದರೂ, ಇದೆಲ್ಲದರ ಹಿಂದೆ ಒಂದು ಸಂಘಟಿತ ಪ್ರಯತ್ನವಿರಬಹುದೇ ಎಂಬ ಅನುಮಾನ ಹುಟ್ಟಿಸುವಷ್ಟರ ಮಟ್ಟಿಗೆ ಇದೆಲ್ಲವೂ ಒಟ್ಟಿಗೇ ಆರಂಭವಾಗಿರುವ ಬಗ್ಗೆ ಆಶ್ಚರ್ಯವನ್ನಂತೂ ವ್ಯಕ್ತಪಡಿಸಬಹುದಾಗಿದೆ!

ಈ ಎಲ್ಲದರ ಮಧ್ಯೆ ಗಾಂಧಿಯವರ ಮೊಮ್ಮಗ ಹಾಗೂ ಪ.ಬಂಗಾಳದ ರಾಜ್ಯಪಾಲ ಗೋಪಾಲ ಕೃಷ್ಣ ಗಾಂಧಿ ತಮ್ಮ ತಾತನ ಸಮಗ್ರ ಸಾಹಿತ್ಯವನ್ನೊಮ್ಮೆ ಅವಲೋಕಿಸಿ, ಅವುಗಳಿಂದಾಯ್ದ ಉಲ್ಲೇಖಗಳ ಆಧಾರದ ಮೇಲೇ ಅವರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪುಸ್ತಕ ರೂಪದ ಪ್ರಯತ್ನವೊಂದನ್ನು ಮಾಡಿದ್ದಾರೆ. ಆ ಪುಸ್ತಕದ(The Oxford India Gandhi: Essential Writings) ಕೆಲವು ಭಾಗಗಳನ್ನು 'ಔಟ್ ಲುಕ್' ಪತ್ರಿಕೆ ತನ್ನ ಇತ್ತೀಚಿನ ಸಂಚಿಕೆಯೊಂದರಲ್ಲಿ ಪ್ರಕಟಿಸಿದೆ. ಅಲ್ಲಿಂದ ಕೆಲವನ್ನು ಆಯ್ದು ಇಲ್ಲಿ ಅನುವಾದಿಸಿ ಕೊಡುತ್ತಿದ್ದೇನೆ. ಇದರ ಮೂಲಕ ಗಾಂಧಿ ವಿರುದ್ಧ ಈಗ ಆರಂಭವಾಗುತ್ತಿರುವಂತೆ

ತೋರುವ ಅಪಪ್ರಚಾರಕ್ಕೆ ಉತ್ತರ ಕೊಡುವ ಅನುಚಿತ ಪ್ರಯತ್ನವನ್ನಂತೂ ನಾನು ಮಾಡುತ್ತಿಲ್ಲ. ಬದಲಿಗೆ, ಬದುಕಿನ ಸಣ್ಣ–ಸಾಮಾನ್ಯ ವಿವರಗಳಲ್ಲೇ ಗಾಂಧಿ ನಿಜವಾಗಿ ಏನಾಗಿದ್ದರು ಎಂಬುದು ವ್ಯಕ್ತವಾಗಿರುವ ರೀತಿ ನೀತಿಗಳನ್ನು ನಿಮ್ಮೊಂದಿಗೆ ಅರ್ಥ ಮಾಡಿಕೊಳ್ಳಲು ಪ್ರಯತಿಸುತ್ತಿದ್ದೇನೆ. ಹಾಗೇ, ಅಧೋಗತಿ ಮುಟ್ಟಿರುವ ಇಂದಿನ ಕರ್ನಾಟಕದ ರಾಜಕೀಯ ಹಿನ್ನೆಲೆಯಲ್ಲಿಯೂ–ಇದನ್ನು ಆ ಆಧೋಗತಿ ಮುಟ್ಟಿರುವ ರಾಜಕಾರಣಿಗಳು ಯಾರೂ ಓದಲಾರರೆಂಬ ಅನುಮಾನವಿದ್ದರೂ–ಈ ಪುನರ್ರ್ಮನನದ ಪ್ರಯತ್ನ ಪ್ರಸ್ತುತವೆನಿಸಿಕೊಳ್ಳಬಹುದು.

*

ದರ್ಬಾನ್, ೧೮೯೮:

ಮನೆಯನ್ನು ಪಾಶ್ಚಿಮಾತ್ಯ ಮಾದರಿಯಲ್ಲಿ ಕಟ್ಟಲಾಗಿತ್ತು. ಶೌಚದ ನೀರು ಹೊರ ಹೋಗಲು ದಾರಿಯೇ ಇಲ್ಲವಾಗಿತ್ತು. ಹಾಗಾಗಿ ಪ್ರತಿಯೊಂದು ಕೊಠಡಿಯಲ್ಲೂ ಒಂದು ಮಲದ ಮಡಕೆ ಇಡಲಾಗಿತ್ತು. ಇವುಗಳನ್ನು ತೊಳೆಯುವ ಕೆಲಸವನ್ನು ಸೇವಕರಿಗೆ ಅಥವಾ ಭಂಗಿಗಳಿಗೆ ಬಿಡದೆ, ನಾವೇ ಮಾಡಿಕೊಳ್ಳುತ್ತಿದ್ದೆವು. ಬಹಳ ದಿನಗಳಿಂದ ಮನೆಯಲ್ಲೇ ಇದ್ದು ನಮ್ಮವರೇ ಆದವರು ತಂತಮ್ಮ ಮಡಕೆಗಳನ್ನು ತಾವೇ ಸ್ವಚ್ಛಗೊಳಿಸಿಕೊಳ್ಳುತ್ತಿದ್ದರು. ಆದರೆ ಹೊಸದಾಗಿ ಬಂದ ಕ್ರಿಶ್ಚಿಯನ್ ಗೆಳೆಯರೊಬ್ಬರ ಮಲಗುವ ಕೋಣೆಯನ್ನು ಸ್ವಚ್ಛಗೊಳಿಸುವುದು ನಮ್ಮದೇ ಕರ್ತವ್ಯವಾಗಿತ್ತು. ಇತರರ ಮಲದ ಮಡಕೆಗಳನ್ನು ಸ್ವಚ್ಛಗೊಳಿಸಲು ಅಷ್ಟೇನೂ ಹಿಂಜರಿಯದಿದ್ದ ನನ್ನ ಪತ್ನಿಗೆ ಈ ಅನ್ಯಮತದ ಪಂಚಮನ ಮಡಕೆಯನ್ನು ಸ್ವಚ್ಛಗೊಳಿಸುವುದು ತನಗೆ ಆಗದ ಕೆಲಸವಾಗಿ ಕಂಡಿತು. ತಾನು ಮಾಡುವುದಿರಲಿ, ನಾನು ಮಾಡುವುದೂ ಆಕೆಗೆ ಸಹ್ಯವಾಗಲಿಲ್ಲ. ಕೊನೆಗೆ ಆಕೆಯೇ ಅಂದು ನನ್ನನ್ನು ಶಪಿಸುತ್ತಾ, ದುಃಖದಿಂದ ಕೆಂಪಾದ ಕಣ್ಣುಗಳಿಂದ ಅಶ್ರುಧಾರೆ ಹರಿಸುತ್ತಾ ಕೈಯಲ್ಲಿ ಮಡಕೆ ಹಿಡಿದು ಏಣಿ ಇಳಿಯುತ್ತಿದ್ದ ದೃಶ್ಯ ಇನ್ನೂ ನನಗೆ ಕಣ್ಣಿಗೆ ಕಟ್ಟಿದಂತಿದೆ.

ಆಕೆ ಮಡಕೆಯನ್ನು ಹಿಡಿದು ಹೊರಟಿವುದರಷ್ಟರಿಂದಲೇ ನನಗೆ ಸಮಾಧಾನ ವೆಂಬುದೇನೂ ಉಂಟಾಗಲಿಲ್ಲ. ಆಕೆ ಅದನ್ನು ಸಂತೋಷದಿಂದ ಮಾಡಬೇಕೆಂದು ನಾನು ಬಯಸಿದ್ದೆ. ಹಾಗಾಗಿ ನಾನು ದನಿ ಎತ್ತರಿಸಿ ಕೂಗಿ ಹೇಳಿದೆ: 'ಈ ತಲೆ ಹರಟೆಯನ್ನು ನನ್ನ ಮನೆಯಲ್ಲಿ ಸಹಿಸಲಾರೆ'.

ನನ್ನೀ ಮತುಗಳು ಆಕೆಯನ್ನು ಬಾಣದಂತೆ ಚುಚ್ಚಿದವು. ಅವಳು ನನ್ನತ್ತ ತಿರುಗಿ ಕಿರುಚಿ ಹೇಳಿದಳು: 'ನಿಮ್ಮ ಮನೆಯನ್ನು ನೀವೇ ಇಟ್ಟುಕೊಳ್ಳಿ. ನಾನು ಹೋಗುವೆ'. ನನ್ನ ಮೈ ಮೇಲಿನ ಪ್ರಜ್ಞೆ ಹಾರಿ ಹೋಯಿತು. ನನ್ನಲ್ಲಿ ಕರುಣೆ ಎಂಬುದು ಬತ್ತಿ ಹೋಯಿತು. ನಾನು ಅವಳ ಕೈ ಹಿಡಿದು, ಆ ಅಸಹಾಯಕ ಹೆಂಗಸನ್ನು ಹೊರ ದಬ್ಬಲು ಏಣಿಯ ಎದುರಿಗಿದ್ದ ಬಾಗಿಲ ಕಡೆ ಧಾವಿಸಿದೆ. ಅವಳ ಕೆನ್ನೆಗಳ ಮೇಲೆ ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿತ್ತು. ಆಕೆ ನನ್ನತ್ತ ಮತ್ತೆ ಕಿರುಚಿ ಹೇಳಿದಳು:' ನಿಮಗೆ ನಾಚಿಕೆಯಾಗುವುದಿಲ್ಲವೇ? ಎಲ್ಲಿಗೆ ಹೋಗಲಿ ನಾನು? ಯಾರಿದ್ದಾರೆ ನನ್ನವರೆಂಬುವರು ಇಲ್ಲಿ? ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಿಮ್ಮ ಎಲ್ಲ ದುಂಡಾವರ್ತಿಗಳನ್ನು ಸಹಿಸಿಕೊಳ್ಳಬೇಕೇ? ಮೊದಲು ಬಾಗಿಲು ಹಾಕಿ. ನನ್ನೊಂದಿಗೆ ಸರಿಯಾಗಿ ನಡೆದುಕೊಳ್ಳುವುದನ್ನು ಕಲಿಯಿರಿ.'

ನಾನು ಏನೂ ಆಗದವನಂತೆ ದಿಟ್ಟನಾಗಿ ನಿಂತಿದ್ದರೂ, ಒಳಗೆ ನಿಜವಾಗಿಯೂ ನಾಚಿಕೆ ಆರಂಭವಾಗಿತ್ತು. ಬಾಗಿಲು ಮುಚ್ಚಿದೆ. ನನ್ನ ಹೆಂಡತಿ ನನ್ನನ್ನು ಬಿಟ್ಟು ಇರಲಾರದವಳಾದರೆ, ನಾನೂ ಅವಳನ್ನು ಬಿಟ್ಟ ಇರಲಾರೆ.

ಕಲ್ಕತ್ತಾ, ಡಿಸೆಂಬರ್, ೧೯೦೧-೦೨

ಕಾಂಗ್ರೆಸ್ ಅಧಿವೇಶನ ಆರಂಭವಾಗಲು ಇನ್ನೂ ಎರಡು ದಿನಗಳು ಬಾಕಿ ಇದ್ದವು. ಸ್ವಲ್ಪ ಅನುಭವ ಗಳಿಸಲು ನಾನು ಕಾಂಗ್ರೆಸ್ ಕಛೇರಿಯಲ್ಲಿ ಸೇವೆ ಸಲ್ಲಿಸಲು ನಿಶ್ಚಯಿಸಿದ್ದೆ. ಬಾಬು ಭೂಪೇಂದ್ರನಾಥ ಬಸು ಹಾಗೂ ಸಾರ್ಜೆಂಟ್ ಘೋಷಾಲ್ ಕಾರ್ಯದರ್ಶಿಗಳಾಗಿದ್ದರು. ನಾನು ಭೂಪೇನ್ ಬಾಬು ಬಳಿ ಹೋಗಿ ನನ್ನ ಉದ್ದೇಶವನ್ನು ತಿಳಿಸಿದೆ. ಅವರು ನನ್ನನ್ನೊಮ್ಮೆ ನೋಡಿ, "ನನ್ನ ಬಳಿ ಕೆಲಸವಿಲ್ಲ. ಬಹುಶಃ ಘೋಷಾಲ್ ಬಾಬು ನಿಮಗೆ ಸ್ವಲ್ಪ ಕೆಲಸ ಕೊಡಬಹುದು. ಅವರನ್ನು ಕಾಣಿರಿ" ಎಂದರು. ನಾನು ಅವರ ಬಳಿಗೆ ಹೋದೆ. ಅವರು ನನ್ನನ್ನು ಮೇಲಿನಿಂದ ಕೆಳಗಿನವರೆಗೆ ಒಮ್ಮೆ ನೋಡಿ ಮುಗುಳ್ನಗುತ್ತಾ, 'ನಿಮಗೆ ನಾನು ಗುಮಾಸ್ತ ಮಾಡುವಂತಹ ಕೆಲಸ ಕೊಡಬಲ್ಲೆ. ಮಾಡುವಿರಾ?' ಎಂದು ಕೇಳಿದರು.

ನಾನು, "ಖಂಡಿತ. ನನ್ನ ಕೈಯಿಂದ ಆಗದ ಕೆಲಸದ ಹೊರತಾಗಿ ಯಾವ ಕೆಲಸವನ್ನಾದರೂ ಮಾಡಲೆಂದೇ ನಾನಿಲ್ಲಿ ಬಂದಿರುವೆ" ಎಂದೆ.

.....ಸಾ॥ ಘೋಷಾಲ್ ತಮ್ಮ ಅಂಗಿಯ ಗುಂಡಿಗಳನ್ನು ತಮ್ಮ ಸೇವಕನಿಂದ ಹಾಕಿಸಿಕೊಳ್ಳುತ್ತಿದ್ದರು. ಹಿರಿಯರ ಬಗೆಗೆ ನನಗೆ ಯಾವಾಗಲೂ ಗೌರವವಿದ್ದುದರಿಂದ, ನಾನು ಆ ಸೇವಕನ ಕೆಲಸ ಮಾಡುವುದಾಗಿ ಹೇಳಿದೆ. ನನಗೆ ಅದು ಇಷ್ಟದ ಕೆಲಸವೂ ಆಗಿತ್ತು. ಇದು ಗೊತ್ತಾದ ಮೇಲೆ ಅವರು ನನ್ನಿಂದ ಇಂತಹ ಅನೇಕ ವೈಯುಕ್ತಿಕ ಸೇವೆಗಳನ್ನು ಪಡೆಯಲು ಹಿಂಜರಿಯಲಿಲ್ಲ. ಬದಲಾಗಿ ಸಂತೋಷ ಪಟ್ಟರು. ತಮ್ಮ ಗುಂಡಿ ಹಾಕಲು ಹೇಳುತ್ತಾ ಅವರು, "ನೋಡಿ, ಕಾಂಗ್ರೆಸ್ ಕಾರ್ಯದರ್ಶಿಗೆ ತನ್ನ ಅಂಗಿಯ ಗುಂಡಿಗಳನ್ನು ಹಾಕಿಕೊಳ್ಳಲೂ ಪುರುಸೊತ್ತಿಲ್ಲದಾಗಿದೆ. ಯಾವಾಗ ನೋಡಿದರೂ ಏನಾದರೂ ಕೆಲಸವಿರುತ್ತದೆ" ಎನ್ನುತ್ತಿದ್ದರು. ಸಾ॥ ಘೋಷಾಲರ ಈ ಭೋಳೆತನ ನನ್ನಲ್ಲಿ ಕೊಂಚ ನಗು ಉಕ್ಕಿಸುತ್ತಿತಾದರೂ, ಈ ತರಹದ ಸೇವೆ ಪಡೆಯುತ್ತಿದ್ದ ಕಾರಣದಿಂದಾಗಿ ಅವರ ಬಗ್ಗೆ ನನಗೆ ಬೇಸರವೇನೂ ಆಗಲಿಲ್ಲ.

ಕಾಶಿ, ಫೆಬ್ರವರಿ, ೧೯೦೨

ನಾನು ದರ್ಶನಕ್ಕಾಗಿ ಕಾಶಿ ವಿಶ್ವನಾಥ ಮಂದಿರಕ್ಕೆ ಹೋಗಿದ್ದೆ.... ದಕ್ಷಿಣೆ ಕೊಡಲು ಮನಸ್ಸಿಲ್ಲದಿದ್ದರೂ, ಮೂರು ಕಾಸು ತಟ್ಟೆಗೆ ಹಾಕಿದೆ. ಪಂಡನಿಗೆ ಸಿಟ್ಟು ಬಂದು ಅದನ್ನು ನನ್ನತ್ತ ಎಸೆದು ಬಿಟ್ಟ. ಅಲ್ಲದೆ, 'ನನಗೆ ನೀನು ಮಾಡಿದ ಅವಮಾನ ನಿನ್ನನ್ನು ನೇರವಾಗಿ ನರಕಕ್ಕೇ ಒಯ್ಯುತ್ತದೆ' ಎಂದು ಶಪಿಸಿದ. ಇದನ್ನು ಮನಸ್ಸಿಗೆ ಹಚ್ಚಿಕೊಳ್ಳದ ನಾನು, 'ನನ್ನ ವಿಧಿ ಹೇಗೇ ಇರಲಿ ಮಹಾರಾಜ್, ನೀವು ಬಳಸುತ್ತಿರುವ ಭಾಷೆ ನಿಮಗೆ ಶೋಭಿಸುವುದಿಲ್ಲ' ಎನ್ನುತ್ತಾ, 'ನಿಮಗೆ ಇಷ್ಟವಾದರೆ ಈ ಮೂರು ಕಾಸು ತೆಗೆದುಕೊಳ್ಳಿ. ಇಲ್ಲದೇ ಹೋದರೆ, ಅದನ್ನೂ ನೀವು ಕಳೆದುಕೊಳ್ಳುತ್ತೀರಿ' ಎಂದು ಎಚ್ಚರಿಸಿದೆ.

'ಇಲ್ಲಿಂದ ಮೊದಲು ತೊಲಗು. ನಿನ್ನ ಮೂರು ಕಾಸು ಯಾವನಿಗೆ ಬೇಕು!' ಎಂದು ಕೂಗಿದ ಪಂಡ ನನ್ನಮೇಲೆ ಕೆಟ್ಟ ಬೈಗುಳಗಳ ಸುರಿಮಳೆಯನ್ನೇ ಕರೆದ.

ನಾನು ಅವನು ಎಸೆದಿದ್ದ ಮೂರು ಕಾಸನ್ನು ಎತ್ತಿಕೊಂಡು, 'ಬ್ರಾಹ್ಮಣನಿಗೆ ಆದ ನಷ್ಟ ನನಗಾದ ಉಳಿತಾಯ...' ಎಂದು ಉಲ್ಲಾಸದಿಂದ ನನ್ನ ದಾರಿ ಹಿಡಿದೆ.

ಜೋಹಾನ್ಸ್‌ಬರ್ಗ್, ಫೆಬ್ರುವರಿ೨, ೧೯೦೮

ಮಿಲಿ ಗ್ರಹಾಂ ಪೊಲಾಕ್: ಅವನಿಗೆ ಏನು ಬೇಕಂತೆ? ಏನಾದರು ವಿಶೇಷ?

ಮೋಹನದಾಸ ಕರಮಚಂದ ಗಾಂಧಿ: ಹೌದು, ಅವನು ನನ್ನನ್ನು ಕೊಲ್ಲ ಬಯಸಿದ್ದ.

ಪೊ: ಕೊಲ್ಲುವುದು? ನಿನ್ನನ್ನು ಕೊಲ್ಲುವುದು? ಭಯಂಕರ! ಅವನಿಗೇನಾದರೂ ಹುಚ್ಚು ಹಿಡಿದಿದೆಯೇ?

ಗಾ: ಇಲ್ಲ, ನಾನು ನಮ್ಮ ಜನತೆಗೆ ಸಂಬಂಧಪಟ್ಟಂತೆ ದೇಶದ್ರೋಹದ ಕೆಲಸ ಮಾಡುತ್ತಿದ್ದೇನೆ ಹಾಗೂ ಸರ್ಕಾರದಲ್ಲಿ ತಲೆ ಹಾಕಿ ಅವರ ವಿರುದ್ಧವೇ ಕೆಲಸ ಮಾಡುತ್ತ ಅವರ ಸ್ನೇಹಿತನಂತೆ, ನಾಯಕನಂತೆ ನಟಿಸುತ್ತಿದ್ದೇನೆ ಎಂದು ಅವನು ಭಾವಿಸಿದ್ದಾನೆ.

ಪೊ: ಅದೇನೇ ಇರಲಿ, ಅದು ದುಷ್ಟತನ ಹಾಗೂ ಭಯಾನಕ. ಅಂತಹ ಮನುಷ್ಯನನ್ನು ಹಾಗೇ ಬಿಡುವುದು ಕ್ಷೇಮವಲ್ಲ. ಆತನನ್ನು ಬಂಧಿಸಬೇಕು. ಅವನನ್ನು ಹಾಗೇ ಹೋಗಲು ಏಕೆ ಬಿಟ್ಟೆ? ಆತ ನಿಜವಾಗಿಯೂ ಹುಚ್ಚನೇ ಇರಬೇಕು.

ಗಾ: ಇಲ್ಲ, ಆತ ಹುಚ್ಚನಲ್ಲ. ತಪ್ಪು ತಿಳುವಳಿಕೆಯವನಷ್ಟೆ. ನೀನೇ ನೋಡಿದೆಯಲ್ಲಾ, ನಾನು ಅವನೊಂದಿಗೆ ಮಾತನಾಡಿದ ಮೇಲೆ ನನ್ನ ಮೇಲೆ ಬಳಸಲು ಇಟ್ಟುಕೊಂಡಿದ್ದ ಚೂರಿಯನ್ನು ನನಗೇ ಕೊಟ್ಟುಬಿಟ್ಟ.

ಪೊ: ಕತ್ತಲಲ್ಲಿ ಅವನು ನಿನ್ನನ್ನು ಇರಿದೇ ಬಿಡುತ್ತಿದ್ದನೇನೋ, ನಾನು....

ಗಾ: ಈ ಬಗ್ಗೆ ಇಷ್ಟೊಂದು ತಲೆ ಕೆಡಿಸಿಕೊಳ್ಳಬೇಡ. ಅವನು ನನ್ನನ್ನು ಕೊಲ್ಲಬಹುದೆಂದುಕೊಂಡಿದ್ದ. ಆದರೆ, ಅವನಿಗೆ ಆ ಧೈರ್ಯವಿರಲಿಲ್ಲ. ನಾನು ಅವನು ತಿಳಿದಷ್ಟು ಕೆಟ್ಟವನಾಗಿದ್ದರೆ, ನಾನು ನಿಜವಾಗಿಯೂ ಸಾವಿಗೆ ಅರ್ಹನೇ. ಈಗ ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಇದು ಮುಗಿದ ಅಧ್ಯಾಯ. ಆ ಮನುಷ್ಯ ನನ್ನ ಮೇಲೆ ಮತ್ತೆ ಆಕ್ರಮಣ ಮಾಡಲಾರನೆಂದೆನಿಸುತ್ತದೆ. ಅವನನ್ನು ದಸ್ತಗಿರಿ ಮಾಡಿಸಲು ನಾನೇನಾದರೂ ಯತ್ನಿಸಿದ್ದರೆ, ಅವನನ್ನು ನನ್ನ ಶತ್ರುವನ್ನಾಗಿ ಮಾಡಿಕೊಳ್ಳುತ್ತಿದ್ದೆನಷ್ಟೆ. ಆದರೆ, ಈಗವನು ನನ್ನ ಸ್ನೇಹಿತನಾಗಿದ್ದಾನೆ.

ಜೊಹಾನ್ಸ್‌ಬರ್ಗ್, ಮೇ ೧೮, ೧೯೧೧ (ಛಗನ್ ಲಾಲ್‌ಗೆ ಪತ್ರವೊದರಲ್ಲಿ)

ಅವನು(ಹರಿಲಾಲ್) ಸೋಮವಾರ ಸಂಜೆ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆಲ್ಲವನ್ನೂ ಹೊರಹಾಕಿದ. ಆತನ ಪ್ರಕಾರ ನಾನು ಎಲ್ಲ ನಾಲ್ಕು ಮಕ್ಕಳನ್ನೂ ಲೆಕ್ಕಕ್ಕೇ ಇಟ್ಟಿಲ್ಲದ ಹಾಗೆ; ಅವರ ಯಾವುದೇ ಆಶೋತ್ತರಗಳಿಗೂ ಬೆಲೆ ಕೊಡದೆ, ನಿರ್ದಯಿಯಾಗಿ ದಮನ ಮಾಡಿಟ್ಟಿದ್ದೇನೆ. ಆತ ಈ ಆಪಾದನೆಗಳನ್ನು ಸಂಕೋಚದಿಂದಲೇ, ಆದರೆ ಅತ್ಯಂತ ವಿನೀತನಾಗಿ ಮಾಡಿದ. ಈ ಸಂದರ್ಭದಲ್ಲಿ ಆತನ ಮನಸ್ಸಿನಲ್ಲಿ ಹಣದ ವಿಷಯ ಇರಲೇ

ಇಲ್ಲ. ಅವನ ಮಾತುಗಳೆಲ್ಲವೂ ನನ್ನ ಸಾಮಾನ್ಯ ವರ್ತನೆಯ ಬಗ್ಗೆಯೇ ಇತ್ತು. ಇತರ ತಂದೆಯರಂತೆ ನಾನು ನನ್ನ ಮಕ್ಕಳ ಬಗ್ಗೆ ಒಂದು ಒಳ್ಳೆಯ ಮಾತಾಡಿರಲಿಲ್ಲ, ಅವರಿಗಾಗಿ ವಿಶೇಷವಾದುದೇನನ್ನೂ ಮಾಡಿರಲಿಲ್ಲ ಹಾಗೂ ಅವರು ಮತ್ತು ಅವರಮ್ಮ ನನ್ನ ಆದ್ಯತೆಯಲ್ಲಿ ಕೊನೆಯವರಾಗಿದ್ದರು ಎಂಬುದು ಅವನ ಆರೋಪವಾಗಿತ್ತು.

ಫೀನಿಕ್ಸ್, ಮೇ ೧೯೧೩

ದೇವದಾಸ್ ತಾನಿನ್ನು ಕದಿಯುವುದಿಲ್ಲ ಎಂದು ವಚನ ನೀಡಿದ್ದರೂ, ಇನಾಂಡ ಜಲಪಾತದ ಬಳಿ ಕದ್ದ ಸಿಹಿ ನಿಂಬೆಗಳನ್ನು ತಿಂದುಬಿಟ್ಟಿದ್ದ. ಸಿಕ್ಕಿ ಬಿದ್ದಾಗ, ತುಂಬ ಜಾಣನಂತೆ, ಬುದ್ಧಿವಂತಿಕೆಯಿಂದ ಮಾತಾಡತೊಡಗಿದ. ಇದು ನನಗೆ ನೋವನ್ನುಂಟು ಮಾಡಿತು. ಆತ ನೀಡಿದ ನೆಪವಂತೂ ನನ್ನನ್ನು ಘಾಸಿಗೊಳಿಸಿತು. ನಾನು ಯಾವಾಗಲೂ ಅವನನ್ನು ಹೊಡೆಯುತ್ತೀನೇನೋ ಎಂಬಂತೆ, ಆತ ನನ್ನಿಂದ ಏಟು ಬೀಳುವುದೆಂದು ತನ್ನ ತಪ್ಪನ್ನು ಹೇಳಿಕೊಳ್ಳಲಿಲ್ಲವೆಂದು ನುಡಿದ. ಸರಿ, ನಾನು ಅವನಿಗೆ ಬುದ್ಧಿ ಕಲಿಸಲು ನನ್ನ ಕಪಾಳಕ್ಕೇ ಹೊಡೆದುಕೊಳ್ಳಲು ನಿರ್ಧರಿಸಿ ನಾಲ್ಕಾರು ಏಟು ಹಾಕಿಕೊಂಡಾಗ ನನ್ನ ಬಗ್ಗೆಯೇ ನನಗೆ ಎಷ್ಟು ದುಃಖವಾಯಿತೆಂದರೆ, ನನಗೆ ಜೋರಾಗಿ ಅಳುವೇ ಬಂದುಬಿಟ್ಟಿತು.

ಆಗಸ್ಟ್ ೧೦, ೧೯೨೦(ಕಲ್ಲೆನ್‌ಬ್ಯಾಕ್‌ಗೆ ಪತ್ರ)

.... ನಾನೀಗ ನನ್ನೊಡನೆ ಆಗಾಗ್ಗೆ ಪ್ರಯಾಣ ಮಾಡುವ ಮಹಿಳೆಯೊಬ್ಬಳೊಂದಿಗೆ ಆತ್ಮೀಯ ಸಂಪರ್ಕದಲ್ಲಿದ್ದೇನೆ. ನಮ್ಮ ಸಂಬಂಧ ವ್ಯಾಖ್ಯಾನವನ್ನು ಮೀರಿದ್ದು. ನಾನು ಆಕೆಯನ್ನು ನನ್ನ ಅಧ್ಯಾತ್ಮಿಕ ಪತ್ನಿ ಎಂದು ಕರೆಯುತ್ತೇನೆ. ನನ್ನ ಸ್ನೇಹಿತನೊಬ್ಬ ಇದನ್ನು ಬೌದ್ಧಿಕ ವಿವಾಹ ಎಂದು ಕರೆದಿದ್ದಾನೆ. ನೀನು ಒಮ್ಮೆ ಆಕೆಯನ್ನು ನೋಡಬೇಕೆಂಬುದು ನನ್ನ ಆಸೆ. ಅವಳ ಆಶ್ರಯದಲ್ಲೇ ನಾನು ಪಂಜಾಬ್‌ನ ಲಾಹೋರ್‌ನಲ್ಲಿ ಹಲವು ತಿಂಗಳುಗಳನ್ನು ಕಳೆದಿದ್ದೇನೆ. 'ಬಾ' ಆಶ್ರಮದಲ್ಲಿದ್ದಾಳೆ. ಆಕೆಗೆ ಸಾಕಷ್ಟು ವಯಸ್ಸಾಗಿದೆ;ಆದರೆ ಎಂದಿನಂತೆ ದಿಟ್ಟವಾಗಿಯೇ ಇದ್ದಾಳೆ. ಆಕೆ ನಿನಗೆ ತಿಳಿದಿರುವಂತೆ ತನ್ನ ದೌರ್ಬಲ್ಯ ಹಾಗೂ ಸದ್ಗುಣಗಳ, ಅದೇ ಹೆಂಗಸೇ. ಮಣಿಲಾಲ್ ಮತ್ತು ರಾಮದಾಸ್ ಫೀನಿಕ್ಸ್‌ನಲ್ಲಿದ್ದು ಇಂಡಿಯನ್ ಒಪಿನಿಯನ್ ನೋಡಿಕೊಳ್ಳುತ್ತಿದ್ದಾರೆ. ಹರಿಲಾಲ್ ಕಲ್ಕತ್ತಾದಲ್ಲಿದ್ದು ತನ್ನ ವ್ಯಾಪಾರ ನೋಡಿಕೊಳ್ಳುತ್ತಿದ್ದಾನೆ. ಅವನ ಹೆಂಡತಿ ಹೋಗಿ ಬಿಟ್ಟಳು. 'ಬಾ' ಅವನ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾಳೆ.

ಏಪ್ರಿಲ್ ೩೦, ೧೯೨೦(ಶ್ರೀಮತಿ ಜಿನ್ನಾಗೆ ಪತ್ರದಲ್ಲಿ)

ಶ್ರೀಯುತ ಜಿನ್ನಾಗೆ ನನ್ನ ನೆನಪು ತಿಳಿಸಿ ಹಾಗೂ ಅವರನ್ನು ಹಿಂದೂಸ್ಥಾನಿ ಅಥವಾ ಗುಜರಾತಿ ಕಲಿಯಲು ಪುಸಲಾಯಿಸಿ. ನಾನು ನಿಮ್ಮ ಸ್ಥಾನದಲ್ಲಿದ್ದಿದ್ದರೆ, ಈ ಹೊತ್ತಿಗೆ ಅವರೊಂದಿಗೆ ಗುಜರಾತಿ ಅಥವಾ ಹಿಂದೂಸ್ಥಾನಿಯಲ್ಲಿ ಮಾತನಾಡಲಾರಂಭಿಸು ತ್ತಿದ್ದೆ. ಇದರಿಂದಾಗಿ ನೀವು ನಿಮ್ಮ ಇಂಗ್ಲಿಷ್‌ನ್ನು ಮರೆಯುವ ಅಥವಾ ನಿಮ್ಮ ನಡುವೆ ತಪ್ಪು ತಿಳುವಳಿಕೆ ಮೂಡುವ ಅಪಾಯವೇನೂ ಇರಲಾರದು. ಹೌದು ತಾನೇ?

ಇದನ್ನು ನೀವು ಮಾಡುವಿರಾ? ನೀವು ನನ್ನ ಬಗ್ಗೆ ಇಟ್ಟುಕೊಂಡಿರುವ ಪ್ರೀತಿಯ ಸಲುವಾಗಿಯಾದರೂ ಮಾಡಿ ಎಂದು ಕೇಳುವೆ.

ಪೂನಾ, ಆಗಸ್ಟ್ ೨೩, ೧೯೩೩

ಗಾಂಧಿ: ಆನಂದ್, ಈ ಸಂದಿಗ್ಧದಲ್ಲಿ ನಾನೇನು ಮಾಡಬಹುದೆಂದು ನಿನಗನ್ನಿಸುತ್ತದೆ? ನನ್ನನ್ನು ಸಾಯಲು ಬಿಡುತ್ತಾರೆಂದು ಭಾವಿಸಿದ್ದೆ. ಹಾಗೆ ನೋಡಿದರೆ, ಅಂತಹ ಸಂದರ್ಭಕ್ಕೆ ನಾನು ಪೂರ್ಣವಾಗಿ ಸಿದ್ಧನಾಗಿದ್ದೆ ಕೂಡ. ಹಾಗಾಗಿಯೇ, ನನ್ನ ಬಿಡುಗಡೆಯ ಹಿಂದಿನ ಒಂದು ದಿನವಷ್ಟೇ ನಾನು ನನ್ನೆಲ್ಲಾ ಸಣ್ಣ ಪುಟ್ಟ ವೈಯುಕ್ತಿಕ ವಸ್ತುಗಳನ್ನು ಆಸ್ಪತ್ರೆಯ ದಾದಿಯರಿಗೆ ಹಾಗೂ ಸಹಾಯಕರಿಗೆ ಕೊಟ್ಟುಬಿಟ್ಟಿದ್ದೆ. ಉಪವಾಸ ಮಾಡಿ ತಂದುಕೊಳ್ಳುವ ನನ್ನ ಸಾವನ್ನು ಜನ ಹೇಗೆ ತೆಗೆದುಕೊಳ್ಳುತ್ತಿದ್ದರೋ ತಿಳಿಯದು.

ಆನಂದ್ ಹಿಂಗೋರಣಿ: ಏಕೆ, ಅದು ಅತ್ಯಂತ ಧೀರೋದಾತ್ತ ಸಾವಾಗಿರುತ್ತಿತ್ತು ಬಾಪು.

ಗಾ: ಛೇ! ಅಸಹ್ಯ. ಅದನ್ನು, ಉಪವಾಸ ಮಾಡಿ ಸಾಯುವುದನ್ನು, ನೀನು ಧೀರೋದಾತ್ತ ಸಾವೆಂದು ಪರಿಗಣಿಸುವೆಯ? ಅದರಲ್ಲಿ ಧೀರತೆ ಎಲ್ಲಿಂದ ಬಂತು? ಆದರೆ ನನ್ನ ಜಾತಕದಲ್ಲಿ ನಾನು ಧೀರನ ಸಾವನ್ನು ಅಪ್ಪುವೆನೆಂದು ಬರೆದಿದೆ ಎಂಬುದು ನಿನಗೆ ಗೊತ್ತಾ?

ಆ: ಆದರೆ ಬಾಪು, ಈ ಉಪವಾಸದ ಸಾವೂ ಧೀರೋದಾತ್ತ ಸಾವೇ. ಉದ್ದೇಶಪೂರ್ವಕವಾಗಿ ಅಂಗುಲ ಅಂಗುಲವಾಗಿ ಸಾವನ್ನು ಎದುರುಗೊಳ್ಳುವುದೇನೂ ಸುಲಭದ ಕೆಲಸವಲ್ಲ.

ಗಾ: ಇಲ್ಲ, ನನಗೆ ಹಾಗೆನ್ನಿಸುವುದಿಲ್ಲ. ನನ್ನ ಸಾವು ನೇಣುಗಂಬದ ಮೇಲೆ ಅಥವಾ ಗುಂಡಿನೆದುರಿಗೇ ಘಟಿಸುವಂತಹುದು. ಅದು ನಿಜವಾಗಿ ಧೀರೋದಾತ್ತ ಸಾವು; ಉಪವಾಸ ಮಾಡುತ್ತಾ ಹಾಸಿಗೆಯಲ್ಲಿ ಸಾಯುವುದಲ್ಲ.

ಜೈನ ಮಂದಿರ, ಮದ್ರಾಸ್, ಡಿಸೆಂಬರ್ ೨೨, ೧೯೩೩

ಈಗ ನಾನು ನನ್ನ ದಂಧೆ ಆರಂಭಿಸುತ್ತಿದ್ದೇನೆ. ನೀವು ದೂರದೂರದ ಸ್ಥಳಗಳಿಗೆ ಹೋಗಿ ಜನರನ್ನು ಲೂಟಿ ಮಾಡಿ ಗಂಟು ಮಾಡಿಕೊಳ್ಳುತ್ತೀರಾ. ನಾನೀಗ ನಿಮ್ಮನ್ನು ಲೂಟಿ ಮಾಡಲು ಹೊರಟಿರುವೆ.

ಪ್ರೇಕ್ಷಕರು ಈ ಹೇಳಿಕೆಯನ್ನು ನಗುತ್ತಾ, ಘೋಷಣೆ ಕೂಗುತ್ತಾ ಸ್ವಾಗತಿಸಿದರು. ದಂತದ ಕರಂಡವೊಂದನ್ನು ಹರಾಜಿಗಿಡುತ್ತಾ, 'ಇದಕ್ಕೆಷ್ಟು ಕೊಡುವಿರಿ?' ಎಂದು ಗಾಂಧಿ ಕೇಳಿದರು.

ಸುಮಾರು ೧೫ ರೂಪಾಯಿ ಬೆಲೆ ಬಾಳುವ ಆ ಕರಂಡಕ್ಕೆ ಮೊದಲ ಸವಾಲಿನಲ್ಲಿ ರಾಮನಾಥ ಗೋಯಂಕಾ ೧೦೧ ರೂಪಾಯಿಗಳನ್ನು ಕೂಗಿದರು.

'ಮುಂದೆ ಬನ್ನಿ. ಇಲ್ಲಿ ಸೇರಿರುವ ಗುಜರಾತಿಗಳಿಗೆ ೧೦೧ ರೂಪಾಯಿ ಏನೂನೂ ಅಲ್ಲ!' ಮುಂದಿನ ಕೂಗು ೨೦೧ ರೂಪಾಯಿಗಳಿಗೇರಿತು.

ಹಾಗಾದರೆ ಕೊಟ್ಟುಬಿಡಲಾ... ಒಂದು ಬಾರಿ... ಎರಡು ಬಾರಿ... ಮೂರನೇ ಬಾರಿ ಎಂದು ನಾನು ಹೇಳುವುದಿಲ್ಲ... ಇನ್ನೂ ಕಾಲ ಮಿಂಚಿಲ್ಲ... ಒಂದೆರಡು ನೂರು ನಿಮಗೆ ಏನೇನೂ ಅಲ್ಲ....

(ಹರಾಜು ಮುಗಿದು ಗಾಂಧಿ ವೇದಿಕೆಯ ಕೆಳಗೆ ಇಳಿಯುತ್ತಿದ್ದಂತೆ ಒಬ್ಬ ಹುಡುಗ ಅವರ ಬಳಿ ಓಡೋಡಿ ಬರುತ್ತಾನೆ)

ಹುಡುಗ: ನಿಮ್ಮ ಸಹಿ ಬೇಕು... ದಯವಿಟ್ಟು ಹಾಕಿ ಕೊಡಿ.

ಗಾ: ನೀನೇನು ಕೊಡುವೆ? ನನಗೆ ರೂಪಾಯಿ ಬೇಕು.

ಹು: ಒಂದು ರೂಪಾಯಿ ಕೊಡುವೆ.

ಗಾ: (ಅವನ ಕಿವಿಯ ಮುರಗಳನ್ನು ನೋಡುತ್ತಾ, ಮುಟ್ಟುತ್ತಾ) ಏನು ಇವು?

ಹು: ನೀವು ಅವುಗಳನ್ನು ತೆಗೆದುಕೊಳ್ಳಬಹುದು.

ಗಾ: ನಿನ್ನ ತಂದೆಯ ಅನುಮತಿ ಇದೆಯಾ?

ಹು: ಅವನ್ನು ನಿಮಗೆ ಕೊಡಲು ಅವರ ಅಭ್ಯಂತರವೇನೂ ಇರಲಾರದು.

ಗಾ: ನಿನಗೆ ಇಷ್ಟೊಂದು ಸ್ವಾತಂತ್ರ್ಯ ಇದೆಯಲ್ಲ!(ಮುರಗಳನ್ನು ಬಿಚ್ಚಿಕೊಂಡು) ನಿನಗಿದು ಅಗತ್ಯವಿಲ್ಲ. ಇನ್ನು ಮುಂದೆಯೂ ಮುರಗಳನ್ನು ಹಾಕಿಕೊಳ್ಳಬೇಡ. ಹೊಸವಕ್ಕಾಗಿ ನಿನ್ನ ತಂದೆಯನ್ನು ಕೇಳಬೇಡ.(ಸಹಿ ಹಾಕಿಕೊಡುತ್ತಾ) ನಿನ್ನ ಹೆಸರೇನು ಮರಿ?

ಹು: ಬಿ.ವಿ.ತಮ್ಮಪ್ಪ.

ಗಾ: ಎಷ್ಟು ವಯಸ್ಸು ನಿನಗೆ?

ಹು: ಹದಿಮೂರು

ಗಾ: ಓ! ಹದಿಮೂರನೇ ವಯಸ್ಸಿಗೇ ನಿನಗೆ ಸ್ವಾತಂತ್ರ್ಯ ದಕ್ಕಿದೆ. ನನಗೆ ಆ ಸೌಭಾಗ್ಯವಿರಲಿಲ್ಲ!

ಕರಾಚಿ, ಜುಲೈ ೧೦, ೧೯೩೪

....ಡಾ॥ ಅಂಬೇಡ್ಕರರು ನಮ್ಮಲ್ಲಿ ಹಲವರು ನಾಚಿಕೆ ಪಡುವಷ್ಟು ಬುದ್ಧಿವಂತರು ಹಾಗೂ ಜಾಣರು. ತಮ್ಮ ಚುರುಕಾದ ಬುದ್ಧಿಯಿಂದ ಅವರು ಹಲವು ಜನರ ಹೃದಯವನ್ನು ಮುಟ್ಟಿದ್ದಾರೆ. ಅವರ ತ್ಯಾಗ ತುಂಬ ದೊಡ್ಡದು. ಅವರು ಯಾವಾಗಲೂ ತಮ್ಮ ಕೆಲಸದಲ್ಲಿ ಮಗ್ನರು. ಅವರು ಸರಳ ಜೀವನ ನಡೆಸುವರು. ಅವರು ತಿಂಗಳಿಗೆ ಒಂದೆರಡು ಸಾವಿರ ರೂಪಾಯಿಗಳನ್ನಾದರೂ ಸಂಪಾದಿಸಬಲ್ಲವರು. ಅವರು ಈರೋಪಿಗೆ ಹೋಗಿ ನೆಲಸಲು ಕೂಡ ಸಾಧ್ಯ. ಆದರೆ ಅವರಿಗೆ ಅಲ್ಲಿಗೆ ಹೋಗಲು ಇಷ್ಟವಿಲ್ಲ. ಅವರಿಗೆ ಹರಿಜನರ ಕ್ಷೇಮಾಭ್ಯುಯದ್ದೇ ಚಿಂತೆ. ಆದರೆ ಇಂದು ಸಮಾಜದಲ್ಲಿ ಇಂತಹ ಮನುಷ್ಯನ ಸ್ಥಾನಮಾನವಾದರೂ ಏನು? 'ನಾನು ವಿಧಾನ ಸಭೆ ಅಧಿವೇಶನಕ್ಕೆಂದು ಪೂನಾಗೆ ಹೋದಾಗ, ಇತರರೆಲ್ಲ ಅವರ ಸ್ನೇಹಿತರ ಮನೆಗಳಲ್ಲಿ ತಂಗಿ ತಮ್ಮ ದಿನಭತ್ಯೆಯನ್ನು ಉಳಿಸಿಕೊಳ್ಳುವವರಾರೆ, ನಾನು ಹೋಟೆಲಿನಲ್ಲಿ ತಂಗಿ ಆ ಇಡೀ ೧೦ ರೂಪಾಯಿಗಳನ್ನು ಖರ್ಚು ಮಾಡಿಕೊಳ್ಳಬೇಕಾಗಿದೆ. ನನ್ನನ್ನು ಒಬ್ಬ ಸಹೋದ್ಯೋಗಿಯೆಂದಾಗಲೀ,

ಸ್ನೇಹಿತನೆಂದಾಗಲೀ ಒಪ್ಪಿಕೊಳ್ಳುವ ಒಂದು ಹಿಂದೂ ಕುಟುಂಬವೂ ಪೂನಾದಲ್ಲಿ ಇಲ್ಲ' ಎಂದು ಅವರು ಹೇಳುತ್ತಾರೆ. ಯಾರ ಅವಮಾನವಿದು?

ಬಾಂಬೆ, ಜನವರಿ ೧೯೩೬

ನನ್ನ ಜೀವನದ ಅತ್ಯಂತ ಕರಾಳ ದಿನ ನಾನು ಬಾಂಬೆಯಲ್ಲಿದ್ದಾಗ ಸಂಭವಿಸಿತು.... ಅದು ನನ್ನ ಕಾಮುಕತೆ ಇದ್ದಕ್ಕಿದ್ದಂತೆ ಕೆರಳಿದ ಸಮಯ. ನಾನು ಮಲಗಿದ್ದಾಗ, ನನಗೆ ಒಬ್ಬ ಹೆಂಗಸನ್ನು ನೋಡಬೇಕೆನಿಸಿತು. ಸುಮಾರು ನಲವತ್ತು ವರ್ಷಗಳ ಕಾಲ ದೇಹದ ಬಯಕೆಯನ್ನು ಗೆಲ್ಲುವ ಪ್ರಯತ್ನದಲ್ಲಿದ್ದ ಮನುಷ್ಯನಿಗೆ ಇಂತಹ ಭಯಾನಕ ಅನುಭವವಾದಾಗ ತುಂಬಾ ಹಿಂಸೆಯಾಗಲೇ ಬೇಕು. ಅಂತಿಮವಾಗಿ ನಾನು ಈ ಭಾವನೆಯನ್ನು ಗೆದ್ದೆನಾದರೂ, ನನ್ನ ಜೀವನದ ಅತ್ಯಂತ ನಾಚಿಕೆಗೇಡಿನ ಘಳಿಗೆಯೊಂದಿಗೆ ಮುಖಾಮುಖಿಯಾಗಿದ್ದೆ ಹಾಗೂ ನಾನೇನಾದರೂ ಆಗ ಸೋತು ಹೋಗಿದ್ದರೆ, ಅದು ನನ್ನನ್ನು ನಿರ್ನಾಮ ಮಾಡುತ್ತಿತ್ತು.

(ವಿಶ್ರಾಂತ ಕರ್ನಾಟಕ, ನವೆಂಬರ್ ೧೬, ೨೦೦೭)

ಇಂದೂ ಇರುವ ಗಾಂಧಿ!

ಕೆಲವು ವಾರಗಳ ಹಿಂದೆ, ಗಾಂಧಿ ಬರವಣಿಗೆಯಿಂದಲೇ ಆಯ್ದ ಪ್ರಸಂಗಗಳ ಮೂಲಕ ಗಾಂಧಿ ವ್ಯಕ್ತಿತ್ವವನ್ನು ಪರಿಚಯಿಸುವ; ಗಾಂಧಿ ಮೊಮ್ಮಗ ಗೋಪಾಲ ಕೃಷ್ಣ ಗಾಂಧಿ ಅವರ The Oxford India Gandhi:Essential writing ಪುಸ್ತಕದಿಂದ ಏಳೆಂಟು ಪ್ರಸಂಗಗಳನ್ನು ಈ ಅಂಕಣದಲ್ಲೇ 'ಗಾಂಧಿ ಚರಿತ್ರೆ' ಎಂಬ ಶೀರ್ಷಿಕೆಯಡಿ ಅನುವಾದಿಸಿ ಕೊಟ್ಟಿದ್ದೆ. ಅದಕ್ಕೆ ಹಿನ್ನೆಲೆಯಾಗಿ, ಇತ್ತೀಚೆಗೆ ಗಾಂಧಿಯನ್ನು ಉದ್ದೇಶಪೂರ್ವಕವಾಗಿ ಟೀಕಿಸುವ, ಖಂಡಿಸುವ, ಅವಹೇಳನ ಮಾಡುವ ಸಾಹಿತ್ಯ ಈಗ ನಿಯಮಿತವೆಂಬಂತೆ ಹೊರಬರುತ್ತಿರುವುದರ ಬಗ್ಗೆಯೂ ಪ್ರಸ್ತಾಪಿಸಿದ್ದೆ. ಇಂತಹ ಸಾಹಿತ್ಯ, ಜಗತ್ತಿನಾದ್ಯಂತ ಇಂದು ಗಾಂಧಿ ಕುರಿತಂತೆ ಆಸಕ್ತಿ ಮತ್ತು ಕುತೂಹಲ ಹೆಚ್ಚುತ್ತಿರುವುದಕ್ಕೆ ಪ್ರತಿಕ್ರಿಯೆಯೂ ಆಗಿರಬಹುದು. ಬಹುಶಃ ಕಳೆದ ಶತಮಾನದಲ್ಲಿ ಗಾಂಧಿ ಬಗೆಗೆ ಆದಷ್ಟು ಚರ್ಚೆ ಇನ್ನಾವ ನಾಯಕನ ಬಗ್ಗೆಯೂ ಆದಂತಿಲ್ಲ. ಇದಕ್ಕೆ ಕಾರಣ, ಗಾಂಧಿ ಚಿಂತನೆಯ ಆಳ. ಅಗೆದಷ್ಟೂ ಅರ್ಥ ಹೆಚ್ಚುತ್ತಾ ಹೋಗುವಂತಹ ಆಳವದು.

ಇದು ಇತ್ತೀಚೆಗೆ ತೀವ್ರವಾಗಿ ನನಗೆ ಅನ್ನಿಸಿದ್ದು, ಉಡುಪಿಯ ಮಹಾತ್ಮ ಗಾಂಧಿ ಮೆಮೊರಿಯಲ್ ಕಾಲೇಜಿನಲ್ಲಿ ೨೦೦೭ರ ಫೆಬ್ರುವರಿಯಲ್ಲಿ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆಗೊಂಡ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣದ ಭಾಷಣಗಳು, ಯು.ಆರ್.ಅನಂತಮೂರ್ತಿಯವರ ಉದ್ಘಾಟನಾ ಭಾಷಣದ 'ಇಂದೂ ಇರುವ ಗಾಂಧಿ' ಎಂಬ ಅರ್ಥಪೂರ್ಣ ಶೀರ್ಷಿಕೆಯೊಂದಿಗೆ ಸಂಪಾದಿತವಾಗಿ ಬಂದಿರುವ ಪುಸ್ತಕವನ್ನು ಓದುತ್ತಿದ್ದಾಗ. ಅಂದು ಉದ್ಘಾಟನೆಯಾದ ಗಾಂಧಿ ಅಧ್ಯಯನ ಕೇಂದ್ರ ಪ್ರಕಟಿಸಿರುವ(ಇದನ್ನು ಬಿಟ್ಟು ಈ ಕೇಂದ್ರ ಈವರೆಗೆ ಏನನ್ನು ಮಾಡಿದೆಯೋ ತಿಳಿಯದು!) ಈ ಪುಸ್ತಕವನ್ನು ಗೆಳೆಯ ಜಯಪ್ರಕಾಶ ಮಾವಿನಕುಳಿ ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಅನಂತಮೂರ್ತಿ ಯವರ ಉದ್ಘಾಟನಾ ಭಾಷಣಕ್ಕೆ ಜಿ.ಕೆ.ಗೋವಿಂದರಾಯರ ಪ್ರತಿಕ್ರಿಯೆ, ಎಂ.ವಿ.ಕಾಮತರ ಗಾಂಧಿ ಯುಗದ ನೆನಪುಗಳು ಹಾಗೂ ಕೆ.ಕೆ.ಪೈ ಅವರ ಅಧ್ಯಕ್ಷ ಭಾಷಣಗಳಲ್ಲದೆ, ಗಾಂಧೀವಾದದ 'ಮೂಲಭೂತ' ಪುಸ್ತಕವೆಂದು ಪರಿಗಣಿತವಾಗಿರುವ 'ಹಿಂದ್ ಸ್ವರಾಜ್' ಕುರಿತಂತೆ ಪಟ್ಟಾಭಿರಾಮ ಸೋಮಯಾಜಿ, ಜೆ.ಎಸ್. ಸದಾನಂದ, ರಾಜಾರಾಮ ತೋಳ್ಪಾಡಿ, ಎಂ.ಎಸ್.ಆಶಾದೇವಿ ಹಾಗೂ ಪಿ.ಎಲ್.ಧರ್ಮ ಅವರು ಭಾಗವಹಿಸಿರುವ ಕುತೂಹಲಕಾರಿ ಚರ್ಚೆಯನ್ನೂ ಈ ಪುಸ್ತಕ ಒಳಗೊಂಡಿದೆ.

ಎಂ.ವಿ. ಕಾಮತರ ಇಂಗ್ಲಿಷ್ ಭಾಷಣವನ್ನು ಕನ್ನಡಕ್ಕೆ ತಂದು ಪ್ರಕಟಿಸಬಹುದಿತ್ತು ಎಂಬೊಂದು ಕೊರತೆಯನ್ನು ಬಿಟ್ಟರೆ, ಈ ಪುಸ್ತಕ ಗಾಂಧಿ ವ್ಯಕ್ತಿತ್ವ ಮತ್ತು ಚಿಂತನೆಯ ಅವಿಭಾಜ್ಯತೆ ಕುರಿತಂತೆ ಅನೇಕ ಒಳನೋಟಗಳನ್ನು ಒದಗಿಸುತ್ತಾ, ಒಂದು ಸಣ್ಣ 'ಗಾಂಧಿ

ಪುರಾಣ'ವನ್ನು ಸೃಷ್ಟಿಸುವಷ್ಟು ಸ್ಪಂದನಶೀಲವಾಗಿದೆ. ಆದರೆ ಗಾಂಧಿ ಕುರಿತ ೮೮ ಪುಟಗಳ ಈ ಪುಸ್ತಕವನ್ನು ೯೦ ರೂಪಾಯಿಗಳ ದುಬಾರಿ ಬೆಲೆಯಲ್ಲಿ ಸಿದ್ಧಪಡಿಸಿರುವುದು ಮಾತ್ರ ದೊಡ್ಡ ವಿಪರ್ಯಾಸ! ಉಡುಪಿ–ಮಣಿಪಾಲ–ಪೈಗಳೆಂದರೆ ಇದೇ ಏನೋ... ಇರಲಿ, ಈ ಪುಸ್ತಕದ ಬಗ್ಗೆ ಇನ್ನು ಹೆಚ್ಚು ಬರೆಯುವುದಕ್ಕಿಂತ ಇದರ ಕೆಲವು ಭಾಗಗಳನ್ನು ಆಯ್ದು(ಅವುಗಳಲ್ಲಿ ಎರಡನ್ನು ಅನುವಾದಿಸಿ) ಕೊಡುವುದು ಹೆಚ್ಚು ಅರ್ಥಪೂರ್ಣವೆನಿಸೀತು.

ಅದಕ್ಕೆ ಮೊದಲು, ಯು.ಆರ್. ಅನಂತಮೂರ್ತಿಯವರು ತಮ್ಮ 'ರುಜುವಾತು' ಪುಸ್ತಕದ ಒಂದು ಲೇಖನದಲ್ಲಿ ಪ್ರಸ್ತಾಪಿಸಿರುವ ಒಂದು ಕುತೂಹಲಕಾರಿ ಮಾತುಕತೆಯನ್ನು ಪೀಠಿಕೆಯಾಗಿ ಉಲ್ಲೇಖಿಸುವ ಮನಸ್ಸಾಗುತ್ತಿದೆ: "ಒಮ್ಮೆ ಕೆಲವು ದಲಿತ ಸ್ನೇಹಿತರು ಕವಿ ಪುತಿನ ಅವರನ್ನು ನೋಡಲು ಹೋಗಿದ್ದರಂತೆ. ಹಣೆಯ ಮೇಲೆ ನಾಮ ಹಾಕಿ ನಿತ್ಯ ತಪ್ಪದೆ ಜಪ ಮಾಡುತ್ತಿದ್ದ ಈ ಶ್ರೀವೈಷ್ಣವ ಕವಿ ಪ್ರೀತಿ ತುಂಬಿದ್ದ ಹೃದಯದ ಮನುಷ್ಯ. ಅವರು 'ನೀವು ಗಾಂಧಿಯನ್ನು ಯಾಕೆ ಬೈಯುತ್ತೀರಿ?' ಅಂತ ದಲಿತರನ್ನು ಕೇಳಿದರಂತೆ. ದಲಿತರು ತಮ್ಮ ಕಾರಣಗಳನ್ನೆಲ್ಲ ಪಟ್ಟಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಪುತಿನ, 'ಮಹಾತ್ಮ ಗಾಂಧಿ ಈ ದೇಶದಲ್ಲಿ ಹುಟ್ಟದೇ ಇದ್ದಿದ್ದರೆ, ಈ ಜಾಗದಲ್ಲಿ ಕೂತು ನಿಮ್ಮ ಜತೆ ಮಾತಾಡುವ ಸಾಧ್ಯತೆಯೇ ನನಗೆ ಇರುತ್ತಿರಲಿಲ್ಲ' ಎಂದರಂತೆ."

*

ಇನ್ನು, 'ಇಂದೂ ಇರುವ ಗಾಂಧಿ' ಪುಸ್ತಕದಲ್ಲಿನ ಅನಂತಮೂರ್ತಿಯವರ ಉದ್ಘಾಟನಾ ಭಾಷಣದ ಒಂದು ತುಣುಕು:

"ಒಮ್ಮೆ ಅಮೆರಿಕನ್ ಜರ್ನಲಿಸ್ಟ್ ಬಂದು ಗಾಂಧಿಯನ್ನು 'What is your Agenda?' ಅಂತ ಕೇಳುತ್ತಾನೆ. ಏನು ಹೇಳಬೇಕು ಗಾಂಧಿ–'ರಾಷ್ಟ್ರದಲ್ಲಿ ರಾಜಕೀಯ ಸ್ಥಿತ್ಯಂತರ ನನ್ನ ಅಜೆಂಡಾ' ಅಂತ ಹೇಳಬೇಕು. ಅವನ ಆಶ್ಚರ್ಯಕ್ಕೆ ಗಾಂಧಿ ಅದನ್ನು ಹೇಳುವುದೇ ಇಲ್ಲ. 'My agendas are three. ಮೊದಲನೆಯದು ಹಿಂದೂ ಮುಸ್ಲಿಂ ಯೂನಿಟಿ, ಎರಡನೆಯದು removal of untouchability, ಮೂರನೆಯದು 'ಸ್ವದೇಶಿ'. ನಾಲ್ಕನೆಯದು ಯಾವುದು? ಅವರು ಹೇಳುವುದೇ ಇಲ್ಲ. ಯಾಕೆಂದರೆ, ಇವು ಮೂರೂ ಈಡೇರಿದರೆ ಬ್ರಿಟಿಷರಿಗೆ ಇಲ್ಲಿ ಇರುವ ಅಗತ್ಯವೇ ಇಲ್ಲ."*

ಅನಂತಮೂರ್ತಿಯವರ ಭಾಷಣಕ್ಕೆ ಪ್ರತಿಕ್ರಿಯಿಸುತ್ತಾ ಪ್ರೊ|| ಜಿ.ಕೆ. ಗೋವಿಂದರಾಯರು ಆಡಿರುವ ಈ ಮಾತುಗಳೂ ಇಲ್ಲಿ ಉಲ್ಲೇಖನಾರ್ಹ:

"ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿದ್ದಂತಹ unequal society AiÀÄ°è equality ಸಾಧಿಸುವುದು ಎಂತಹ ಭಯಂಕರ ಕೆಲಸ ಅನ್ನುವುದು ಇಬ್ಬರಿಗೂ ಗೊತ್ತಿತ್ತು. ಸಮುದ್ರದಿಂದ ಒಂದು ಹಿಡಿ ಉಪ್ಪು ತೆಗೆದು ಗಾಂಧಿ ಬ್ರಿಟಿಷರಿಗೆ ಹಾಕಿದ ಸವಾಲು. ಮಹರ್ ಸರೋವರದಿಂದ ಒಂದು ಬೊಗಸೆ ನೀರನ್ನು ಎತ್ತಿದ ಅಂಬೇಡ್ಕರ್ ಈ ಇಡೀ ಹಿಂದೂ ಸಮಾಜಕ್ಕೆ ಹಾಕಿದ ಸವಾಲು. ಎರಡೂ ಸಮಾನ. ಅದ್ಭುತ ಅದು. ಪ್ರಚೋದನೆ ನೀಡಿ ನಾಲ್ಕು ಮೇಲ್ಜಾತಿಯವರಿಗೆ ತಲೆ ಒಡೆಯಿರೋ ಅಂದು ಬಿಡಬಹುದಿತ್ತು. ಅವರ ಬದಲು ಯಾವ ಸರೋವರಕ್ಕೆ ನಮಗೆ ಪ್ರವೇಶವಿಲ್ಲವೋ ಅಲ್ಲಿಗೆ ಹೋಗಿ ನನ್ನ ಪ್ರತಿಭಟನೆ

ವ್ಯಕ್ತಪಡಿಸುತ್ತೇನೆ ಅನ್ನುವುದು ನಿರಂತರವಾಗಿ ನಡೆಯುವ ಮಾನಸಿಕ ಕ್ರಾಂತಿ. Living revolution. ಅದಕ್ಕೆ ದೇಶದ ಭವಿಷ್ಯವನ್ನು ರೂಪಿಸುವಾಗ ನಮ್ಮ ಮನಸ್ಸಿನಲ್ಲಿ ಉಳಿಯುವ ಎರಡು ಹೆಸರು ಗಾಂಧಿ ಮತ್ತು ಅಂಬೇಡ್ಕರ್, ನಂತರ ಲೋಹಿಯಾ.*

ಇದೇ ಪುಸ್ತಕದಲ್ಲಿರುವ ಎಂ.ವಿ. ಕಾಮತರ ಒಂದು ನೆನಪು ಹಾಗೂ ಅವರು ನಿರೂಪಿಸಿರುವ ಗಾಂಧೀಜಿ ಬದುಕಿನ ಒಂದು ಘಟನೆ:

"೧೯೩೨ರಲ್ಲಿ ಗಾಂಧಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದ ಕಾಲ. ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ಸತ್ಯಾಗ್ರಹಿಯಾಗಿದ್ದ ಉಪನ್ಯಾಸಕನೊಬ್ಬನಿದ್ದ. ಒಂದು ಸಂಜೆ ಆತ ತನ್ನಂತಹ ಹಲವು ಸತ್ಯಾಗ್ರಹಿಗಳ ಜೊತೆಯಲ್ಲಿ ಒಂದು ಕೈಯಲ್ಲಿ ಉಪ್ಪು ಮತ್ತೊಂದು ಕೈಯಲ್ಲಿ ಕಾಂಗ್ರೆಸ್ ಧ್ವಜ ಹಿಡಿದು ಮೆರವಣಿಗೆಯಲ್ಲಿ ಘೋಷಣೆ ಕೂಗುತ್ತಾ ನಡೆದಿದ್ದ. ಆತನನ್ನು ತಡೆದ ಪೋಲಿಸರು ಕೈಗಳಲಿದ್ದುದನ್ನು ಬಿಸಾಕುವಂತೆ ಆಗ್ರಹಿಸಿದರು. ಆತ ನಿರಾಕರಿಸಿದ. ಪೋಲೀಸರು ಆತನ ಎರಡೂ ಕೈಗಳನ್ನು ಲಾಠಿಗಳಿಂದ ಹೇಗೆ ಚಚ್ಚಿ ಹಾಕಿದರೆಂದರೆ ಅವನ ಎರಡೂ ಕೈಗಳು ಬರೀ ಮಾಂಸದ ಮುದ್ದೆಯಾಗಿ ಹೋದವು. ಆತ ಪ್ರಜ್ಞೆ ತಪ್ಪಿ ರಸ್ತೆಯ ಮೇಲೆ ಕುಸಿದು ಬಿದ್ದಾಗಲೂ ಆತನ ಕೈಗಳು ಉಪ್ಪು ಮತ್ತು ಧ್ವಜವನ್ನು ಬಲವಾಗಿ ಹಿಡಿದೇ ಇದ್ದವು.

.......ಒಂದು ದಶಕದ ನಂತರ ೧೯೪೨ರಲ್ಲಿ ಗಾಂಧೀಜಿ 'ಭಾರತ ಬಿಟ್ಟು ತೊಲಗಿ' ಚಳುವಳಿಗೆ ಕರೆ ಕೊಟ್ಟರು. ಆಗಲೂ ಈ ಉಪನ್ಯಾಸಕ ಇದರಲ್ಲಿ ಭಾಗವಹಿಸಿದ. ಈ ಸಂದರ್ಭದಲ್ಲಿ ಪೋಲೀಸರು ಆತನ ಕಾಲುಗಳನ್ನು ಅಕ್ಷರಶಃ ಮುರಿದು ಹಾಕಿದರು. ಆಗಲೂ ಆತ 'ಮಹಾತ್ಮ ಗಾಂಧಿ ಕಿ ಜೈ! ಇನ್ಕ್ವಿಲಾಬ್ ಜಿಂದಾಬಾದ್' ಎಂದು ಕೂಗುತ್ತಲೇ ಇದ್ದ.

ಎಷ್ಟೋ ವರ್ಷಗಳ ನಂತರ ನಾನು ೧೯೯೦ರಲ್ಲಿ ನನ್ನ ಅಂಕಣ ಬರಹವೊಂದರಲ್ಲಿ ಇದನ್ನೆಲ್ಲ ನೆನಪು ಮಾಡಿಕೊಂಡು ಬರೆದಿದ್ದೆ. ಮಾರನೆಯ ದಿನ ನನಗೊಂದು ದೂರವಾಣಿ ಕರೆ ಬಂತು. ನಾನು ಯಾರ ಬಗ್ಗೆ ಬರೆದಿದ್ದನೋ ಆತನ ಕರೆ ಅದು. ಆತ ತಾನು ಬಂದು ನನ್ನನ್ನು ಭೇಟಿ ಮಾಡಬಹುದೇ ಎಂದು ಕೇಳಿದ. ನನಗೋ ರೋಮಾಂಚನ! ಮಾರನೆಯ ಸಂಜೆ ೫ ಘಂಟೆಗೆ ಬರಲು ಹೇಳಿದೆ ಹಾಗೂ ಆ ನನ್ನ ಅತಿಥಿಯನ್ನು ಸ್ವಾಗತಿಸಲು ನನ್ನ ಗೆಳೆಯರಿಗೆಲ್ಲ ಹೇಳಿ ವ್ಯಾಪಕ ಸಿದ್ಧತೆ ನಡೆಸಿದೆ. ಮಾರನೆಯ ದಿನ ಸಂಜೆ ನಾನು ನನ್ನ ಅತಿಥಿಯನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ಮಹಡಿಯಲ್ಲಿದ್ದ ನನ್ನ ಮನೆಯಲ್ಲಿ ಕುತೂಹಲದಿಂದ ಕಾಯುತ್ತಿದ್ದಾಗ ಕರೆಗಂಟೆಯ ಶಬ್ದವಾಯಿತು. ಬಾಗಿಲು ತೆಗೆದರೆ, ಮಹಿಳೆಯೊಬ್ಬರು ಬಾಗಿಲಲ್ಲಿ ನಿಂತಿದ್ದರು. ಅವರು 'ಕಾಮತರೆ, ದಯವಿಟ್ಟು ಕೆಳಗೆ ಬರುವಿರಾ? ನಿಮ್ಮ ಧೀರ ಅತಿಥಿ ಕೆಳಗೆ ಕಾಯುತ್ತಿದ್ದಾರೆ' ಎಂದರು. ನಾನು ಗಾಬರಿಯಾಗಿ 'ಅವರಿಗೆ ಮೇಲೆ ಬರಲು ಸಾಧ್ಯವಿಲ್ಲವೇ?' ಎಂದು ಕೇಳಿದೆ. ಅದಕ್ಕೆ ಆಕೆ 'ಕ್ಷಮಿಸಿ. ಅವರಿಗೆ ಮೆಟ್ಟಿಲು ಹತ್ತುವುದಿರಲಿ, ಏನನ್ನೂ ಆಧಾರವಾಗಿ ಹಿಡಿದುಕೊಳ್ಳಲೂ ಸಾಧ್ಯವಾಗುವುದಿಲ್ಲ. ಅವರು ಸರ್ಕಾರಿ ಅಂಬುಲೆನ್ಸ್‌ನಲ್ಲಿ ಗಾಲಿ ಕುರ್ಚಿಯಲ್ಲಿ ಕೂತು ನಿಮ್ಮನ್ನು ಕಾಣಲು ಬಂದಿದ್ದಾರೆ' ಎಂದರು.

ನಾನು ನನ್ನ ಬಾಲ್ಯ ಕಾಲದ ನಾಯಕನನ್ನು ಈಗ ಕಣ್ಣಾರೆ ಮತ್ತೆ ನೋಡಲು ದಡ

ದಡನೆ ಮೆಟ್ಟಲಿಳಿದು ಹೋದೆ. ಮಹಿಳೆ ಹೇಳಿದ್ದು ನಿಜ. ನನ್ನ ನಾಯಕ ಒಂದಿಷ್ಟೂ ಚಲನೆ ಸಾಧ್ಯವಾಗದ ಸ್ಥಿತಿಯಲ್ಲಿದ್ದ. ಆತ. 'ಕಾಮತರೇ, ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ಮೇಲೆ ಬರಲಾರೆ. ಆರು ದಶಕಗಳ ಹಿಂದೆ ನಾನು ಮಾಡಿದ್ದನ್ನು ನೆನಪಿಸಿಕೊಂಡು ನೀವು ಬರೆದಿದ್ದುಕ್ಕಾಗಿ ನಿಮಗೆ ಕೃತಜ್ಞತೆ ಹೇಳಲಷ್ಟೇ ಬಂದದ್ದು ನಾನು. ನಿಮ್ಮ ಈ ಬರವಣಿಗೆಗಿಂತ ದೊಡ್ಡ ಗೌರವ ನನಗೆ ಇನ್ನಾವುದಿದೆ? ನನಗಿನ್ನೇನೂ ಬೇಡ' ಎಂದು ಹೊರಟೇ ಬಿಟ್ಟರು. ನಾನು ಕಣ್ಣೀರಿನಿಂದ ಒದ್ದೆಯಾಗಿ ನಿಂತಿದ್ದೆ."

ಗಾಂಧಿ ಯುಗವೆಂದರೆ ಇದು!

ಕಾಮತರು, ಗಾಂಧಿ ಬದುಕಿನಿಂದ ಉಲ್ಲೇಖಿಸಿರುವ ಘಟನೆ ಎಂದರೆ:

"ಗಾಂಧಿ ದ. ಆಫ್ರಿಕಾದಲ್ಲಿದ್ದಾಗ ಅಲ್ಲಿನ ಭಾರತೀಯರ ನಾಗರಿಕ ಹಕ್ಕುಗಳಿಗಾಗಿ ದೊಡ್ಡ ಹೋರಾಟವನ್ನೇ ಕೈಗೆತ್ತಿಕೊಂಡಿದ್ದರು. ಆ ಸಂದರ್ಭದಲ್ಲಿ ದ. ಆಫ್ರಿಕಾದ ಆಗಿನ ಮುಖ್ಯಸ್ಥ ಜ॥ ಸ್ಮಟ್ಸ್ ಅವರನ್ನು ಭೇಟಿಯಾಗಬೇಕಾದ ಸಂದರ್ಭವೊಂದರಲ್ಲಿ ಅವರು 'ನಿಮ್ಮ ಸರ್ಕಾರದ ವಿರುದ್ಧ ಹೋರಾಡಿಯೇ ತೀರುತ್ತೇನೆ' ಎಂದು ಸ್ಪಷ್ಟ ನಿರ್ಧಾರದ, ಆದರೆ ಪ್ರಶಾಂತ ಧ್ವನಿಯಲ್ಲಿ ಹೇಳಿದಾಗ, ಜ॥ ಸ್ಮಟ್ಸ್ 'ಇದನ್ನು ಹೇಳಲು ಇಲ್ಲಿಗೆ ಬಂದಿರಾ?' ಎಂದು ಸಿಟ್ಟು ಮತ್ತು ಗಾಬರಿಗಳಲ್ಲಿ ಕೇಳಿದರು. ಗಾಂಧಿ ಅದಕ್ಕೆ ಉತ್ತರ ಕೊಡುವ ಮುನ್ನವೇ, ಅವರಿಗೆ ಪರೋಕ್ಷವಾಗಿ ಇನ್ನು ನೀವು ಹೋಗಬಹುದು ಎನ್ನುವುದನ್ನು ಸೂಚಿಸುವಂತೆ ಜ॥ಸ್ಮಟ್ಸ್, 'ಇನ್ನೇನಾದರೂ ಇದೆಯಾ ನೀವು ಹೇಳುವುದು?' ಎಂದರು. 'ಹೌದು ' ಎಂದ ಗಾಂಧಿ ಅವರಿಗೆ ಹೇಳಿದ್ದು: 'ಈ ಹೋರಾಟದಲ್ಲಿ ಗೆಲ್ಲುವುದು ನಾನೇ!' ಕುತೂಹಲ ಚಕಿತರಾದ ಸ್ಮಟ್ಸ್, 'ಅದು ಹೇಗೆ ಸಾಧ್ಯ?' ಎಂದು ವಿಚಾರಿಸಿಕೊಳ್ಳಲು ಯತ್ನಿಸಿದರು. ತಕ್ಷಣವೇ ಗಾಂಧಿ ಉತ್ತರಿಸಿದರು: 'ನಿಮ್ಮ ಸಹಾಯದಿಂದ !' ಗಾಂಧಿ ಮಾತ್ರ ಇಂತಹ ಉತ್ತರ ಕೊಡಬಲ್ಲವರಾಗಿದ್ದರು."

ಅದೇನೇ ಇರಲಿ, ಗಾಂಧಿ ಮಾತಿನಿಂದ ಜ॥ ಸ್ಮಟ್ಸ್ ಮೂರ್ಛೆ ಹೋಗುವುದೊಂದು ಬಾಕಿ ಇತ್ತೇನೋ!

*

ಇನ್ನು ಕೊನೆಯದಾಗಿ, ಇದೇ ಪುಸ್ತಕದಲ್ಲಿನ 'ಹಿಂದ್ ಸ್ವರಾಜ್' ಕುರಿತ ಚರ್ಚೆಯಲ್ಲಿ ಪಟ್ಟಾಭಿರಾಮ ಸೋಮಯಾಜಿ ಹೇಳುವ ಅಹಿಂಸೆ ಕುರಿತ ಗಾಂಧಿ ಸಂಕಥನ ಹೀಗಿದೆ:

"ಭಾರತಕ್ಕೆ ಇನ್ನೇನು ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ಒಬ್ಬ ಅಮೆರಿಕನ್ ಪತ್ರಕರ್ತ ಗಾಂಧಿಯ ಸಂದರ್ಶನ ಮಾಡುತ್ತಾನೆ. ಆಗ ಆತ ಗಾಂಧಿಗೆ ಕೇಳಿದ ಒಂದು ಪ್ರಶ್ನೆ: 'ಸ್ವತಂತ್ರ ಭಾರತಕ್ಕೆ ನಿಮ್ಮ ಮೊದಲ ಅಜೆಂಡಾ ಏನು?' ಅಂತ. ಗಾಂಧಿ ಹೇಳುತ್ತಾರೆ, 'ಲ್ಯಾಂಡ್ ರಿಫಾರ್ಮ್' ಅಂತ. ಆ ಅಮೆರಿಕಾದ ಪತ್ರಕರ್ತನಿಗೆ ದಿಗಿಲಾಗುತ್ತದೆ. 'ಭೂಸುಧಾರಣೆಯನ್ನು ಜಾರಿಗೆ ತರಲು ಹೊರಟರೆ, ಇಡೀ ಭಾರತ ಕುರುಕ್ಷೇತ್ರವಾಗಿ ರಣರಂಗವಾಗುವುದಿಲ್ಲವೇ? ಇದು ನಿಮ್ಮ ಅಹಿಂಸಾತ್ಮಕ ತತ್ವಕ್ಕೆ ವಿರೋಧವಲ್ಲವೇ?' ಅಂತ ಆತನ ಪ್ರಶ್ನೆ. ಆಗ ಗಾಂಧಿ, 'ಎಷ್ಟು ದಿವಸ ನಡೆಯಬಹುದು, ಹಿಂಸೆ?' ಹದಿನೈದು

ದಿವಸ ನಡೆಯಬಹುದೋ' ಅಂತಾರೆ. ಆ ಮೇಲೆ ಆ ಪತ್ರಕರ್ತ ಕೇಳುತ್ತಾನೆ. 'ಜಮೀನ್ದಾರರು ಬಹಳ ಭೀಕರ ಹಿಂಸೆ ಮಾಡುವ ಸಾಮರ್ಥ್ಯವುಳ್ಳವರು. ಅವರನ್ನು ಎದುರು ಹಾಕಿಕೊಳ್ಳುವುದು ಸಾಧ್ಯವೋ ಅಂತ. ಅದಕ್ಕೆ ಗಾಂಧಿ, 'ಅವರೂ ಯುದ್ಧವನ್ನು ಬಿಟ್ಟು ಪಲಾಯನ ಮಾಡುವ ಮೂಲಕ ಸಹಾಯ ಮಾಡಬಹುದು!' ಅಂತ ಪ್ರತಿಕ್ರಿಯಿಸುತ್ತಾರೆ. ಇದನ್ನು ಯಾಕೆ ಪ್ರಸ್ತಾಪ ಮಾಡಿದೆ ಎಂದರೆ, ಗಾಂಧಿಯ ಅಹಿಂಸೆಯ ಕಲ್ಪನೆಯಲ್ಲಿ ಈ ರೀತಿಯ ಅನಿವಾರ್ಯವಾದ, ನಿವಾರಿಸಿಕೊಳ್ಳಬಹುದಾದ ಹಿಂಸೆಯನ್ನು ಒಳಗೊಳ್ಳ ಬಹುದಾದ ಸಾಧ್ಯತೆ ಇದೆ. ಅಹಿಂಸೆ ಅನ್ನುವುದು ಕೇವಲ ಎಡಗೆನ್ನೆಗೆ ಹೊಡೆದರೆ ಬಲಗೆನ್ನೆ ಒಡ್ಡುವುದು ಎಂಬ ಮೊದ್ದುತನವಲ್ಲ. ಗಾಂಧಿಯಲ್ಲಿ ದೊಡ್ಡ ದರ್ಶನ ಅದು. 'ಯಾರೋ ಒಬ್ಬನ ಹೆಗಲ ಮೇಲೆ ಕೂತು ಸವಾರಿ ಮಾಡಿಕೊಂಡೇ ಜೀವನ ಮಾಡುವುದು ಅಭ್ಯಾಸ ಆಗಿರುವವನಿಗೆ ಒಂದು ದಿನ ಹೊತ್ತುಕೊಂಡಿರುವವನು, ಇನ್ನು ನನ್ನ ಕೈಯಲ್ಲಿ ಆಗುವುದಿಲ್ಲ ಅಂತ ಹೇಳಿ ಕೂತವನನ್ನು ಕೆಳಗೆ ಹೊತ್ತು ಹಾಕುತ್ತಾನೆ. ಬಿದ್ದವನಿಗೆ ತರಚು ಗಾಯಗಳಾಗುತ್ತವೆ. ಅದನ್ನೇ ಹಿಂಸೆ ಎಂದು ಕರೆದರೆ ಹೇಗೆ?' ಅಂತ ಗಾಂಧಿ ಕೇಳುತ್ತಾರೆ. ಈ ದರ್ಶನ ಗಾಂಧಿಗೆ ಸಾಧ್ಯವಾಗಿರುವುದು ಹಿಂಸಾ ಪಂಥದ ಜೊತೆಗೆ ಅವರು ನಡೆಸಿದ ವಾಗ್ವಾದದ ಮೂಲಕ."

(ವಿಶ್ರಾಂತ ಕರ್ನಾಟಕ, ಜನವರಿ ೪, ೨೦೦೮)

ಗಾಂಧಿವಾದಿಯೊಬ್ಬರ ತಳಮಳಗಳು ಮತ್ತು ಇಕ್ಕಟ್ಟುಗಳು

ಸುರೇಂದ್ರ ಕೌಲಗಿಯವರು ನಮ್ಮ ನಡುವಿನ ಅತ್ಯಂತ ಹಿರಿಯ ಗಾಂಧೀವಾದಿಗಳಲ್ಲೊಬ್ಬರು. ಸರ್ವೋದಯ ಆಂದೋಲನವನ್ನು ಇನ್ನೂ ಉಳಿಸಿ ಬೆಳೆಸುವ ಪ್ರಯತ್ನದಲ್ಲಿರುವ ಆ ಆಂದೋಲನದ ಮುಖ್ಯ ಧುರೀಣರಲ್ಲೊಬ್ಬರು. ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಮತ್ತು ಸಮಾಜವಾದಿ ಆಂದೋಲನದ ನಾಯಕರಲ್ಲೊಬ್ಬರಾದ ಜೆಪಿಯೆಂದೇ ಜನಪ್ರಿಯರಾದ ಜಯಪ್ರಕಾಶ ನಾರಾಯಣರು ಐವತ್ತರ ದಶಕದಲ್ಲಿ ಪಕ್ಷ ರಾಜಕಾರಣ ತೊರೆದು ವಿನೋಬಾ ಭಾವೆಯವರ ಸರ್ವೋದಯ ಆಂದೋಲನವನ್ನು ಸೇರುವ ಮುನ್ನ ತಮ್ಮೆಲ್ಲ ತಾತ್ವಿಕ ಸಂದಿಗ್ಧತೆಗಳನ್ನು ಆತ್ಮ ನಿರೀಕ್ಷಣೆಯ ಮೂಲಕ ಪರಿಹರಿಸಿಕೊಳ್ಳಲು ಮುಂಬೈನಲ್ಲಿ ಏಳು ವಾರಗಳ ಉಪವಾಸ ಕೈಗೊಂಡಿದ್ದರು. ಆ ಸಂದರ್ಭದಲ್ಲಿ ಜೆಪಿಯವರ ವ್ಯಕ್ತಿತ್ವದಿಂದ ಆಕರ್ಷಿಸಲ್ಪಟ್ಟ ತರುಣ ಸುರೇಂದ್ರ ಕೌಲಗಿಯವರು, ಅವರ ಜೊತೆಯಲ್ಲೇ ಬಹಳ ವರ್ಷಗಳ ಕಾಲ ಸರ್ವೋದಯ ಆಂದೋಲನದಲ್ಲಿ ತೊಡಗಿಕೊಂಡವರು. ಭೂದಾನ, ಜೀವನ ದಾನ, ಸಖೋದೇವ್ರಾ ಆಶ್ರಮದ ಮೂಲಕ ನಡೆದ ಗ್ರಾಮ ಪುನರುಜ್ಜೀವನ, ಶಾಂತಿಸೇನೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ಜೆಪಿ ಮತ್ತು ಅವರ ಅನುಯಾಯಿಗಳೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದವರು. ಸ್ವಲ್ಪ ಕಾಲ ಜೆಪಿಯವರ ಆಪ್ತ ಕಾರ್ಯದರ್ಶಿಯೂ ಆಗಿದ್ದವರು. ನಂತರ ಎಪ್ಪತ್ತರ ದಶಕದಲ್ಲಿ ರಾಷ್ಟ್ರದಲ್ಲಿ ಒಡಮೂಡುತ್ತಿದ್ದ ಸರ್ವಾಧಿಕಾರ ಆಳ್ವಿಕೆಯ ವಿರುದ್ಧ ಜೆಪಿಯವರು ಸಂಘಟಿಸಿದ 'ಸಂಪೂರ್ಣ ಕ್ರಾಂತಿ' ಆಂದೋಲನದೊಂದಿಗೂ ಗುರುತಿಸಿಕೊಂಡವರು. ನಂತರ ಮಂಡ್ಯ ಜಿಲ್ಲೆಯ ಮೇಲೂಕೋಟೆಯಲ್ಲಿ 'ಜನಪದ ಟ್ರಸ್ಟ್' ಸ್ಥಾಪಿಸಿ ಅದರ ಮೂಲಕ ಅನೇಕ ರೀತಿಯ ಗ್ರಾಮ ಕೇಂದ್ರಿತ ವಿಧಾಯಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಾ, ಅದರಲ್ಲಿ ಸೋಲು-ಗೆಲುವುಗಳೆರಡನ್ನೂ ಕಾಣುತ್ತಾ ಧೃತಿಗೆಡದೆ ಮುನ್ನಡೆದಿರುವ ಧೀರರು.

ಈ ಟ್ರಸ್ಟ್‌ನ ಮುಖವಾಣಿಯಂತಿರುವ 'ಜನಪದ ವಿಚಾರ' ಎಂಬ ಮಾಸಿಕಕ್ಕೆ ಕೌಲಗಿಯವರು ಸಂಪಾದಕೀಯ ರೂಪದಲ್ಲಿ ಬರೆದಿರುವ ಲೇಖನಗಳ ಆಯ್ದ ಸಂಗ್ರಹವಿದು. ಇಂತಹ ಹಿರಿಯರ ಇಂತಹ ಲೇಖನಗಳ ಸಂಗ್ರಹಕ್ಕೆ, ಇವರ ಮುಂದೆ ಯಾವ ನೆಲೆಯಿಂದ ಹೇಗೇ ನೋಡಿದರೂ ಅಬ್ಬೇಪಾರಿಯಂತೆ ಕಾಣುವ ನಾನು ಮುನ್ನುಡಿಯ ಮಾತುಗಳನ್ನು ಬರೆಯುವುದೆಂದರೆ ಅದು ಬಹು ಮುಜುಗರದ ವಿಷಯವೇ ಆಗಿದೆ. ಬೇಡ ಬೇಡ, ಆಗದು ಆಗದು ಎಂದರೂ ಕೌಲಗಿಯವರು ತಮ್ಮ ಪ್ರೀತಿಯ ಒತ್ತಾಯಕ್ಕೆ ಸಿಕ್ಕಿಸಿ ನನ್ನಿಂದ ಈ ಕೆಲವು ಮಾತುಗಳನ್ನು ಬರೆಸುತ್ತಿದ್ದಾರೆ. ಅದರ ಎಲ್ಲ ಸುಖ-ದುಃಖಗಳಿಗೆ ಅವರೇ

ಹೊಣೆಗಾರರೆಂದು ಹೇಳಿ ಈ ಕೆಲವು ಮಾತುಗಳನ್ನು ಬರೆಯುವ ಸಾಹಸ ಮಾಡಿರುವೆ:

ಸುರೇಂದ್ರ ಕೌಲಗಿಯಬರು ಈಗ ಎಂಭತ್ತರ ಆಜುಬಾಜಿನಲ್ಲಿರುವವರು. ಸುಮಾರು ಅರವತ್ತು ವರ್ಷಗಳ ಸಾರ್ವಜನಿಕ ಜೀವನದ ಅನುಭವ ಅವರ ಬರಹಗಳ ಹಿಂದಿದೆ. ಅವರು ಗಾಂಧಿ–ವಿನೋಬಾ–ಜೆಪಿಯವರ ವಿಚಾರಗಳಿಂದ ಪ್ರಭಾವಿತರಾದವರು. ಹಾಗಾಗಿ ಇವರ ಬರಹಗಳು ಈ ವಿಚಾರಗಳಿಂದ ಸ್ಫೂರ್ತಿ ಪಡೆದು ರಾಷ್ಟ್ರ ಕಳೆದ ಇಪ್ಪತ್ತು–ಇಪ್ಪತ್ತೈದು ವರ್ಷಗಳಿಂದ 'ಜಾಗತೀಕರಣ'ದ ಹೆಸರಿನಲ್ಲಿ ಹಾದು ಹೋಗುತ್ತಿರುವ ಮಾರ್ಗದ ಬಗ್ಗೆ ಆತಂಕ, ಕಳವಳ, ಒಮ್ಮೊಮ್ಮೆ ಆಕ್ರೋಶವನ್ನೂ ವ್ಯಕ್ತಪಡಿಸುತ್ತವೆ. ರಾಷ್ಟ ತನ್ನ ಹಾದಿಯನ್ನು ಕೂಡಲೇ ಬದಲಿಸಿಕೊಳ್ಳಬೇಕಾದ ತುರ್ತು ಅಗತ್ಯವನ್ನೂ ಆಧಾರ ಸಮೇತವಾಗಿ ಮನಗಾಣಿಸುತ್ತವೆ. ಹಾಗೇ ಅವು ಹಿಡಿಯಬೇಕಾದ ಪರ್ಯಾಯ ಹಾದಿಯನ್ನೂ ಸೂಚಿಸುತ್ತವೆ– ಒಮ್ಮೊಮ್ಮೆ, ನಾವು ಈವರೆಗೆ ಕಾಣದೇ ಹೋಗಿದ್ದ ಗಾಂಧಿ–ವಿನೋಬಾ ವಿಚಾರಗಳಲ್ಲಿನ ಅನೇಕ ಒಳನೋಟಗಳನ್ನೂ ತೆರೆದಿಡುತ್ತಾ.

ಇದು ಕೌಲಗಿಯವರಿಗೆ ಸಾಧ್ಯವಾಗಿರುವುದು ಅವರು ಈ ರಾಷ್ಟ್ರ, ಸಮಾಜದ ಭವಿಷ್ಯದ ಬಗ್ಗೆ ಈ ಇಳಿವಯಸ್ಸಿನಲ್ಲೂ ಉಳಿಸಿಕೊಂಡು ಬಂದಿರುವ ಕಳಕಳಿ ಮತ್ತು ಬದ್ಧತೆಗಳ ಪ್ರಾಮಾಣಿಕತೆ ಮತ್ತು ತೀವ್ರತೆಗಳಿಂದಾಗಿ; ಹಾಗೇ, ತಾವು ನಂಬಿದ ಗಾಂಧಿ–ವಿನೋಬಾರ ವಿಚಾರಗಳನ್ನು ಕುರಿತ ನಿರಂತರ ಮತ್ತು ನಿತಾಂತ ಅಧ್ಯಯನದಿಂದಾಗಿ. ಇವರ ಕೆಲವು ಬರಹಗಳ ಶೀರ್ಷಿಕೆಗಳನ್ನೇ ನೋಡಿ: 'ರಾಜಕಾರಣದ ಅಧೋಗತಿ: ಅಗತ್ಯವಾಗಿದೆ ಕ್ಷಿಪ್ರ ಸಂಪೂರ್ಣ ಕ್ರಾಂತಿ', 'ಶಾಂತಿಯಾ ಸಿಪಾಯಿ ನಡೆ! ಕ್ರಾಂತಿಯಾ ಸಿಪಾಯಿ ನಡೆ!' 'ಉಪ್ಪಿಗಿಂತ ರುಚಿಯಿಲ್ಲ! ಸರ್ಕಾರದ ನೀತಿ ಸರಿಯಿಲ್ಲ! ಪೊಳ್ಳು ಪ್ರಜಾತಂತ್ರದ ವಿರುದ್ಧ ಕ್ರಾಂತಿ ನಡೆಸದೆ ವಿಧಿಯಿಲ್ಲ!', 'ಮೆಕಾಲೆಯ ಪುನರ್‌ಜನ್ಮವಾಗುತ್ತಿದೆ ಜೋಕೆ!' 'ಅಣ್ಣಾ ಹಜಾರೆ ಪಾಂಚಜನ್ಯ ಊದಿದ್ದಾರೆ!' ಇತ್ಯಾದಿ. ಇದು ಎಂಭತ್ತರ ಹರೆಯದವರು ಬಳಸಬಲ್ಲ ಭಾಷೆಯೇ? ಅವರ ಈ ಉತ್ಸಾಹ, ಆವೇಶ ಸಾಂಕ್ರಾಮಿಕವಾಗಲಿ!

ಆದರೆ ಇಂದಿನ ಸನ್ನಿವೇಶದಲ್ಲಿ ಹೊರಕ್ಕೆ ಸ್ವಲ್ಪ ಅಸ್ವಾಭಾವಿಕವಾಗಿ ಕಾಣುವ ಈ ಉತ್ಸಾಹ, ಆವೇಶಗಳ ಹಿಂದೆ ತಣ್ಣನೆಯ, ನಿರುದ್ವೇಗದ ಚಿಂತನೆಯೂ ಇದೆ ಎಂಬುದು ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಸಂಗತಿ. ಕೌಲಗಿಯವರು ಇಂದಿನ ಎಲ್ಲ ರಾಷ್ಟೀಯ ಸಮಸ್ಯೆಗಳ ಮೂಲವನ್ನು ಇಂದಿನ ಜಾಗತಿಕ ನೆಲೆಯ ರಾಜಕಾರಣದಲ್ಲಿ; ಅದಕ್ಕೂ ಮುಖ್ಯವಾಗಿ ಅದು ಸೃಷ್ಟಿಸಿರುವ ನೀತಿ–ಅನೀತಿಗಳ ನಡುವಣ ಗೊಂದಲದಲ್ಲಿ ಗುರುತಿಸುತ್ತಾರೆ: 'ಒಂದರ್ಥದಲ್ಲಿ ನೀತಿ–ಅನೀತಿಯ ವಿಷಯದಲ್ಲಿ ಜಾಗತಿಕ ಮಟ್ಟದಲ್ಲೇ ಅರಾಜಕತೆ ಉಂಟಾಗಿದೆ... ಉಪ್ಪೇ ರುಚಿ ಕಳೆದುಕೊಂಡಾಗ ಉಪ್ಪಿಗೆ ರುಚಿ ತಂದು ಕೊಡುವವರಾರು ಎಂಬಂತಾಗಿದೆ ನಮ್ಮ ಪ್ರಜಾತಂತ್ರದ ಸ್ಥಿತಿ'. ಈ ಮಾತಿನ ಮೂಲಕ ಅವರು ಎಲ್ಲ ಲೌಕಿಕ (ವೈಯುಕ್ತಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಇತ್ಯಾದಿ) ಮತ್ತು ಪರಮಾರ್ಥಿಕ (ಹಿಂದೂ, ಕ್ರೈಸ್ತ, ಮುಸಲ್ಮಾನ, ಬೌದ್ಧ ಜೈನ ಇತ್ಯಾದಿ) ಧರ್ಮಗಳಿಗೂ ಅನ್ವಯಿಸಬಹುದಾದ ಗಾಂಧಿಯವರ 'ಧರ್ಮ ಮತ್ತು ನೀತಿಗಳ ನಡುವೆ ಆಯ್ಕೆ ಮಾಡಿಕೊಳ್ಳಲೇಬೇಕಾದ ಸಂದರ್ಭ ಬಂದರೆ ನಾನು ನೀತಿಯನ್ನೇ ಆಯ್ದೇನು' ಎಂಬ ಮಾತು ಇಡೀ ಗಾಂಧಿವಾದದ ಮೂಲ ಅಡಿಪಾಯವಾಗಿದೆ ಎಂಬುದನ್ನು

ಗುರುತಿಸುತ್ತಾರೆ. ಇದು ಗಾಂಧಿವಾದದ ನಿಜ ನಾಡಿ ಮಿಡಿತವನ್ನು ಹಿಡಿದ ಪ್ರಾಮಾಣಿಕ ಅಭ್ಯಾಸಿಯೊಬ್ಬನ ಮೊದಲ ಲಕ್ಷಣ ಮತ್ತು ಶಕ್ತಿ ಎಂದು ನಾನು ಭಾವಿಸುವೆ. ಹಾಗಾಗಿಯೇ, ಕೌಲಗಿಯವರು ಈ ನೀತಿ–ಅನೀತಿಗಳ ಗೊಂದಲಕ್ಕೆ ಕಾರಣವನ್ನೂ ಅವರು ಗಾಂಧಿ ವಿಚಾರಧಾರೆಯ ಹಿನ್ನೆಲೆಯಲ್ಲೇ ಸರಿಯಾಗಿ ಗುರುತಿಸಬಲ್ಲವರಾಗಿದ್ದಾರೆ : (ಮೂಲಭೂತ ಕರ್ತವ್ಯಗಳನ್ನು ಮರೆತು) 'ಮೂಲಭೂತ ಹಕ್ಕುಗಳ ಪ್ರತಿಪಾದನೆಯ ಮೂಲಕ ದೇಶ ಅನೀತಿಯತ್ತ ಹೋಗುತ್ತಿರುವಾಗ ಅದನ್ನು ತಡೆಯುವ ಶಕ್ತಿ ಯಾರಿಗಿದೆ?' ಇದರ ಪರಿಣಾಮಗಳನ್ನು ಕೌಲಗಿಯವರು ನಿಜ ಗಾಂಧಿವಾದಿಗೆ ಮಾತ್ರ ಸಾಧ್ಯವಿರುವ ನಿರ್ಭಿಡೆಯಿಂದ ಹೇಳುವುದು ಹೀಗೆ: 'ಭ್ರಷ್ಟತೆಯೆಂಬುದು ಯಾರಿಗೂ ಅನೀತಿಯೆನಿಸುವುದೇ ಇಲ್ಲ. ಪ್ರತ್ಯಕ್ಷವಾಗಿ–ಪರೋಕ್ಷವಾಗಿ ನ್ಯಾಯಾಂಗವೂ ಭ್ರಷ್ಟಾಚಾರವನ್ನು ಬೆಳೆಸಿದೆ. ಭ್ರಷ್ಟರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳಲು ನ್ಯಾಯಾಂಗ ಮತ್ತು ಕಾರ್ಯಾಂಗ ವಿಫಲವಾಗಿವೆ.' ಹೀಗೆ ಇಡೀ ವ್ಯವಸ್ಥೆಯೇ ಅನೀತಿಯುತವೂ, ಆ ಮೂಲಕ ಭ್ರಷ್ಟವೂ ಆಗಲು ಕಾರಣವೇನು? ಮತ್ತೆ ಗಾಂಧಿಯಿಂದ ಸ್ಫೂರ್ತಿ ಪಡೆದು ಕೌಲಗಿಯವರು ಇದಕ್ಕೆ ಕೊಡುವ ಉತ್ತರ: 'ಗ್ರಾಮಗಳ ನಾಶದೊಂದಿಗೆ ಸಮಾಜ ಜೀವನ ನಾಶಗೊಂಡಿತು. ಸಮಾಜ ಜೀವನದ ನಾಶದೊಂದಿಗೆ ರಾಜಕೀಯ ಪಕ್ಷಗಳ ವಿಚಾರಶೀಲತೆಯೂ ನಾಶಗೊಂಡಿತು. ವಿಚಾರಶೀಲ ನಾಶದಿಂದ ತಪ್ಪು ಅಭಿವೃದ್ಧಿ ನೀತಿ ಜಾರಿಗೆ ಬಂತು. ಪಾಶ್ಚಿಮಾತ್ಯ ಸಂಸ್ಕೃತಿ, ಅರ್ಥಶಾಸ್ತ್ರ, ಅಭಿವೃದ್ಧಿ ಇವೇ ಭಾರತದ ಉಸಿರಾದವು. ಇದರ ಪರಿಣಮವೇ ದೇಶದ ತುಂಬ ತಾಂಡವವಾಡುತ್ತಿರುವ ಅನೀತಿ'

ಈ ಸಂಗ್ರಹದ 'ಅನೀತಿಯತ್ತ ಸಮಾಜ; ತೀರ್ಪು ಯಾರಿಂದ?' ಎಂಬ ಶೀರ್ಷಿಕೆಯ ಮೊದಲ ಬರಹದಿಂದ ಉಲ್ಲೇಖಿತವಾಗಿರುವ ಈ ಮೇಲಿನ ಮಾತುಗಳ ವಿಸ್ತರಣೆ, ವಿವರಣೆ, ಸಮರ್ಥನೆಯ ಪ್ರಯತ್ನಗಳೇ ಆಗಿವೆ, ಮುಂದಿನ ಎಲ್ಲ ಲೇಖನಗಳು. ದೇಶ ಕಂಡ ಇತ್ತೀಚಿನ ಕ್ಷಾಮ ಅಥವಾ ಅನಾವೃಷ್ಟಿಗೆ ಕಾರಣವನ್ನು ಹುಡುಕುತ್ತಾ ಅವರು ಆಧುನೀಕರಣದ ಹೆಸರಿನಲ್ಲಿ ಜಾಗತೀಕರಣ ನಡೆದು ಬಂದ ಹಾದಿಯನ್ನು ಗುರುತಿಸುವುದು ಹೀಗೆ: 'ಇಂದು ದೇಶದಲ್ಲಿ ಕ್ಷಾಮ ಬಿದ್ದಿರುವುದಕ್ಕೆ ಪ್ರಕೃತಿ ವಿಕೋಪ ಒಂದು ಕಾರಣ. ಸರ್ಕಾರದ ಸಮಗ್ರ ನೀತಿಯ ತಿರುಗು ಮುರುಗಾಟ ಇನ್ನೊಂದು ಕಾರಣ. ಸ್ವಾತಂತ್ರ್ಯ ಬಂದ ತರುಣದಲ್ಲಿ ಪಂಚಾಯತ್ ರಾಜ್ಯ, ವಿಕೇಂದ್ರೀಕರಣ, ಸಣ್ಣ ಕೈಗಾರಿಕೆಗಳು, ಕೃಷಿ ಅಭಿವೃದ್ಧಿ. ನೀರಾವರಿ ಅಭಿವೃದ್ಧಿ, ಅರಣ್ಯ ಅಭಿವೃದ್ಧಿ, ಪ್ರಾದೇಶಿಕ ಭಾಷಾಭಿವೃದ್ಧಿ ಮುಂತಾದವುಗಳಿಗೆ ಪ್ರಾಶಸ್ತ್ಯವಿತ್ತು. ಕ್ರಮೇಣ ಈ ನೀತಿ ನೇಪಥ್ಯಕ್ಕೆ ಸರಿಯಿತು. ಈಗ ಬೃಹತ್ ನಗರಗಳ ಸ್ಥಾಪನೆ, ಆಡಳಿತ ಕೇಂದ್ರೀಕರಣ, ಬೃಹತ್ ಕೈಗಾರಿಕೆಗಳ ಸ್ಥಾಪನೆ, ಕೃಷಿಯ ತಾತ್ಸಾರ, ಅರಣ್ಯ ನಾಶ, ಇಂಗ್ಲಿಷ್ ಭಾಷಾ ಸಾಮ್ರಾಜ್ಯದ ವಿಸ್ತರಣೆ ಈ ನೀತಿ ಪ್ರಧಾನವಾಯಿತು.' ('ಕ್ಷಾಮ ಮತ್ತು ಗ್ರಾಮ')

ಹೀಗೇ ಮುಂದುವರೆದ ಅವರು ಇಂದು ಪ್ರತಿಪಾದಿಸಲಾಗುತ್ತಿರುವ ಸಾವಯವ ಕೃಷಿಯ ಮೂಲ ರೂಪವೇ ಆಗಿದ್ದ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಸುಧಾರಿಸುವ ಪ್ರಯತ್ನ ಮಾಡದೆ ಪಶ್ಚಿಮದಿಂದ ಆಮದು ಮಾಡಿಕೊಂಡ ಹಸಿರು ಕ್ರಾಂತಿಯನ್ನು ಆರಂಭಿಸುವ ಮೂಲಕ ನಮ್ಮ ಗ್ರಾಮ ಜಗತ್ತಿನ ದಿಕ್ಕೆಡಿಸಿ ಈಗ ಗ್ರಾಮಗಳ ನಾಶಕ್ಕೇ

ಕಾರಣವಾಗಿರುವ ಸರ್ಕಾರದ ಸದ್ಯದ ಅಧಿಕೃತ ನೀತಿಯೇ ಆಗಿರುವ ನಗರೀಕರಣ ನೀತಿಯನ್ನು ವಿಶ್ಲೇಷಿಸ ಹೊರಡುತ್ತಾರೆ. ಈ ನಗರೀಕರಣಕ್ಕೆ ಮೂಲ ಅಗತ್ಯವೆನಿಸಿರುವ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಇಂದಿನ ಸಮಸ್ಯೆಯನ್ನು ಅವರು ನೋಡುವುದು ಹೀಗೆ: 'ವಿದ್ಯುಚ್ಛಕ್ತಿ ಮುಖ್ಯವಾಗಿ ಬೇಕಾಗಿರುವುದು ಯಾಂತ್ರೀಕರಣಕ್ಕಾಗಿ. ಯಾಂತ್ರೀಕರಣದ ಚಾಲಕ ಶಕ್ತಿ ವಾಣಿಜ್ಯ ಹಿತಾಸಕ್ತಿ. ಈ ಹಿತಾಸಕ್ತಿಯ ಹಿಂದಿರುವುದು ಆರ್ಥಿಕ ಹಿತಾಸಕ್ತಿ. ಆರ್ಥಿಕ ಹಿತಾಸಕ್ತಿಯ ಹಿಂದೆ ಇರುವ ಚಾಲಕ ಶಕ್ತಿ ವಸಾಹತು ಸ್ಥಾಪನೆ. ವಸಾಹತುಶಾಹಿ ಹಿಂದೆ ನಿಂತಿರುವುದು ಬಂಡವಾಳಶಾಹಿ. ಬಂಡವಾಳಶಾಹಿಗೆ ಇಂಧನ ರಾಜಕೀಯೋದ್ದೇಶ. ರಾಜಕೀಯೋದ್ದೇಶದ ಸ್ವಾರ್ಥದ ಪರಿಣಾಮ ಗ್ರಹ ಸಮರ. ಗ್ರಹ ಸಮರದ ಅಂತಿಮ ಪರಿಣಾಮ ಜೀವಕೋಟಿಯ ನಾಶ'. ಕೌಲಗಿಯವರ ಈ ಸುದೀರ್ಘ ತರ್ಕ ಸರಣಿಯ ಮೂಲ ಪ್ರೇರಣೆ ಭಾರತಕ್ಕೂ ಈಗ ಕುಮ್ಮಕ್ಕು ಕೊಟ್ಟಿರುವ ಅಮೆರಿಕಾ ನಡೆಸಿರುವ ಚಂದ್ರನ ಮೇಲಿನ 'ದಾಳಿ'. ಇಂದಿನ ಅಭಿವೃದ್ಧಿ ಎಂಬ ಜಾಗತಿಕ ಯಂತ್ರಕ್ಕೆ ಬೇಕಾದ ಮೂಲ ಇಂಧನವೆಂದು ಪರಿಗಣಿಸಲ್ಪಟ್ಟಿರುವ ಅಣುವಿದ್ಯುತ್‌ನ ಮಾತೃಕೆಗಳನ್ನು ಚಂದ್ರನಲ್ಲಿರುವ ಹೀಲಿಯಂ ಮುಂತಾದ ಅಪರೂಪದ ಖನಿಜಗಳ ರೂಪದಲ್ಲಿ ಕಂಡಿರುವ ಅಮೆರಿಕಾ, ಅದಕ್ಕಾಗಿ ಮಾನವನ ಕುತೂಹಲ ಮತ್ತು ಸಾಹಸ ಶಕ್ತಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನಗಳ ಹೆಸರಿನಲ್ಲಿ ದುರುಪಯೋಗಪಡಿಸಿಕೊಳ್ಳುತ್ತಿರುವುದರ ಪರಿಣಾಮವನ್ನು ವಿಶ್ಲೇಷಿಸುವುದು ಹೀಗೆ: 'ವೈಜ್ಞಾನಿಕ ಸಂಶೋಧನೆ, ಮಾನವನ ಕುತೂಹಲ, ಬುದ್ಧಿ ವಿಕಾಸ ಮುಂತಾದ ಕಾರಣಗಳಲ್ಲದೆ ಈ ದಾಳಿಗಳಿಗೆ ಯಾವ ಮಾನವೀಯ ಅಂಶಗಳ ಕಾರಣವಿದೆ? ಅಣು ಅಸ್ತ್ರಗಳ ತಯಾರಿಕೆಯ ಹಿಂದೆಯೂ ಸಹ ಅವೇ ಬೌದ್ಧಿಕ, ವೈಜ್ಞಾನಿಕ ಕಾರಣಗಳಿದ್ದುವಲ್ಲವೇ? ಆದರೆ ಅಣು ಅಸ್ತ್ರ ಕಂಡು ಹಿಡಿದ ಬಳಿಕ ಪಶ್ಚಾತ್ತಾಪ ಪಟ್ಟೆವಲ್ಲವೇ?.... ವಿಜ್ಞಾನ ಮತ್ತು ತಂತ್ರಜ್ಞಾನ ಮನುಷ್ಯನ ನೈತಿಕತೆಯನ್ನು ಎಳ್ಳಷ್ಟೂ ಹೆಚ್ಚಿಸಿಲ್ಲ. ಬದಲಿಗೆ ಅವನ ಅನೈತಿಕತೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿದೆ'('ಚಂದ್ರನ ಮೇಲಿನ ದಾಳಿ: ಮನುಕುಲದ ನಾಶಕ್ಕೆ ನಾಂದಿ')

ಹೀಗೆ ಗಾಂಧಿ ಚಿಂತನೆಯನ್ನು ಇಂದಿನ ಜಾಗತಿಕ ವಿದ್ಯಮಾನಗಳ ಎಲ್ಲ ಆಯಾಮಗಳಿಗೂ ವಿಸ್ತರಿಸಿ ಅದರ ಅಖಂಡತೆಯನ್ನು ಪರಿಚಯಿಸುವ ಕೌಲಗಿಯವರು ಅದನ್ನು ಭೋಪಾಲ್ ಅನಿಲ ದುರಂತ, ಕೋಪೆನ್‌ಹೇಗನ್ ಪರಿಸರ ಸಮ್ಮೇಳನ, ಒಬಾಮಾ-ಒಸಾಮಾಗಳ ನಡುವೆ ನಡೆದ ದ್ವಂದ್ವ ಯುದ್ಧ(ಇದರಲ್ಲಿ ಒಬಾಮಾನನ್ನು ಒಸಾಮಾನಿಗೆ ಸಮಾನನಾದ ದುಷ್ಟನಂತೆ ಚಿತ್ರಿಸಿರುವುದನ್ನು ಒಪ್ಪಲಾಗದಾದರೂ), ಅಯೋಧ್ಯಾ ವಿವಾದದ ಸುತ್ತ ಬೆಳೆಯುತ್ತಿರುವ ಕೋಮುವಾದಿ ರಾಜಕಾರಣ ಮತ್ತು ಇದೆಲ್ಲದರ ಮೂಲದಲ್ಲಿರುವ ಇಂದಿನ ಇಂಗ್ಲಿಷ್ ಮತ್ತು ಉದ್ಯೋಗ ಕೇಂದ್ರಿತ ಶಿಕ್ಷಣ ನೀತಿ ಇತ್ಯಾದಿಗಳನ್ನೂ ತಮ್ಮ ಈ ಚಿಂತನೆಯ ತೆಕ್ಕೆಗೆ ತೆಗೆದುಕೊಂಡು ಜಾಗತಿಕ ಸರ್ವೋದಯ ಚಿಂತನೆಯನ್ನಾಗಿ ಕಟ್ಟುತ್ತಾ ಹೋಗುತ್ತಾರೆ. ಮುಖ್ಯವಾಗಿ ಇಂದಿನ ಶಿಕ್ಷಣ ಪದ್ಧತಿ ಕುರಿತಂತೆ ಪ್ರೊ॥ ರಾಬರ್ಟ್ ಹಚಿನ್ಸ್ ಎಂಬ ಶಿಕ್ಷಣ ತಜ್ಞನನ್ನು ಉಲ್ಲೇಖಿಸುತ್ತಾ ಹೇಳುವ ಈ ಮಾತು ಗಮನಾರ್ಹ ವೆನಿಸುತ್ತದೆ: 'ಈಗ ಜಾರಿಯಲ್ಲಿರುವುದು ತತ್ಕಾಲೀನ(ಅಡ್‌ಹಾಕ್) ಶಿಕ್ಷಣ ಪದ್ಧತಿ. ಇದು ಇರುವುದಕ್ಕೆ ಹೊಂದಿಕೊಂಡು ಹೋಗುವ ಕೌಶಲ್ಯಗಳನ್ನು ಕಲಿಸುವ ಪದ್ಧತಿ. ಇರುವುದನ್ನು

ಪರಿಶೀಲಿಸಿ ಬದಲಾಯಿಸಬೇಕಿದ್ದರೆ ಬದಲಾಯಿಸಬೇಕಾದ ಇಚ್ಛಾ ಶಕ್ತಿಯನ್ನು ರೂಢಿಸುವ ಪದ್ಧತಿಯಲ್ಲ. ತತ್ಕಾಲೀನವಾದುದು ಯಾವಾಗಲೂ ಪರಿಸ್ಥಿತಿಯ ವಶವಾಗಿರುತ್ತದೆಯೇ ಹೊರತು ಪರಿಸ್ಥಿತಿಯನ್ನು ನಿಯಂತ್ರಿಸಲಾರದು.'('ಉದ್ಯೋಗ ಮತ್ತು ಶಿಕ್ಷಣ ಜೊತೆ ಜೊತೆಯಲ್ಲಿ')

ಇದೆಲ್ಲದರ ಹಿನ್ನೆಲೆಯಲ್ಲಿ ಕೌಲಗಿಯವರು ರಾಷ್ಟ್ರದ ಇತ್ತೀಚಿನ ಮುಂಗಡ ಪತ್ರಗಳನ್ನೂ ವಿಶ್ಲೇಷಿಸುವ ನೆಲ ಮಟ್ಟದ ವಿವರಗಳಿಗೂ ಬಂದು, 'ನಮ್ಮ ಅಂದಾಜು ಪತ್ರಗಳನ್ನು ತಯಾರಿಸುವಾಗ ವಿದೇಶಿ ವ್ಯಾಖ್ಯೆಯ ಪ್ರಗತಿಯ ಮಾನದಂಡವನ್ನು ದೃಷ್ಟಿಯಲ್ಲಿರಿಸಿಕೊಳ್ಳ ಲಾಗುತ್ತದೆ' ಎಂದು ರಾಷ್ಟ್ರ ಇಂದು ಚಲಿಸುತ್ತಿರುವ ದಿಕ್ಕು ತಪ್ಪಾಗಿದೆ ಎಂಬ ತಮ್ಮ ಮಾತಿಗೆ ನೆಲ ಮಟ್ಟದ ಕಾರಣವನ್ನು ಸೂಚಿಸುತ್ತಾರೆ.('ಅಂದಾಜು ಪತ್ರ: ಆಕಾಶದಲ್ಲಿನ ನಕ್ಷತ್ರ'). ಇದಕ್ಕೆಲ್ಲ ಸರ್ಕಾರಕ್ಕೆ ಎರಡು ತಲೆಗಳಿರುವುದೇ ಕಾರಣ ಎಂದು ಅವರು ಸೋದಾಹರಣವಾಗಿ ವಿಶ್ಲೇಷಿಸುತ್ತಾ, ಇದಕ್ಕೆ ಮತ್ತೆ ಕಾರಣ ಜನತೆ ತನ್ನ ತಲೆಯನ್ನು ಅಂದರೆ ಬುದ್ಧಿಮತ್ತೆಯನ್ನು ಸ್ವಾತಂತ್ರ್ಯ ಬಂದ ಕೂಡಲೇ ಸರ್ಕಾರಕ್ಕೆ ಒಪ್ಪಿಸಿ ತಾನು ಸರ್ಕಾರದ ಮೂರ್ಖತನದ ಆಟಗಳನ್ನು ನೋಡುತ್ತ ಮೂಕ ಪ್ರೇಕ್ಷಕನಾಗಿ ಕುಳಿತದ್ದು' ('ಸರ್ಕಾರಕ್ಕೆ ಎರಡು ತಲೆ! ಜನತೆಯ ತಲೆ ಎಲ್ಲಿ?')ಎನ್ನುತ್ತಾರೆ. ಇಂದಿನ ಸಾಲು ಸಾಲಾದ ಕೋಟಿ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಹಗರಣಗಳನ್ನು ಉಲ್ಲೇಖಿಸಿ ಹೌಹಾರುತ್ತಾ 'ರಾಜಕೀಯದಲ್ಲಿ ಕೂಡಾ ಭಗವಂತನ ರಾಜ್ಯ ಸ್ಥಾಪಿತವಾಗಬೇಕಿದೆ. ಸತ್ಯವನ್ನು ಬಲಿಕೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶ ಹೊದುವುದೇ ಹೆಚ್ಚು ಲೇಸೆಂಬುದು ನನ್ನ ಮತ' ಎಂಬ ಗಾಂಧಿಯ ಮಾತನ್ನು ಸಹಜ ಆವೇಶದಿಂದ ಉಲ್ಲೇಖಿಸಿ ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನದತ್ತ ಒಮ್ಮೆ ಆಸೆಗಣ್ಣುಗಳಿಂದ ನೋಡುತ್ತಾರೆ. ('ಸಾಬರ್ ಮತಿಯಿಂದ ಜಂತರ್‌ಮಂತರ್: ಜಂತರ್‌ಮಂತರ್‌ನಿಂದ ರಾಮಲೀಲಾ ಮೈದಾನ: ಮುಂದೆಲ್ಲಿಗೆ?') ನಂತರ ಇದು ಮುಗಿಯದ ಹೋರಾಟವೆಂಬಂತೆ 'ಗಾಂಧಿ ಬೇಕೋ? ಬೇಡವೋ?– ನಿರ್ಧರಿಸಿ' ಎಂಬ ಈ ಸಂಗ್ರಹದ ಕೊನೆಯ ಬರಹದ ಕೊನೆಯಲ್ಲಿ 'ಗಾಂಧಿ ಯಾವ ಜೀವನ ಮೌಲ್ಯಗಳಿಗಾಗಿ ಹುತಾತ್ಮರಾದರೋ ಆ ಮೌಲ್ಯಗಳ ಸ್ಥಾಪನೆಯಾಗಬೇಕಾದ ಕಾಲ ಈಗ ಬಂದಿದೆ. ಗಾಂಧಿ ಹೆಸರನ್ನು ತೆಗೆದುಕೊಳ್ಳುತ್ತಾ ದಿನನಿತ್ಯ ನಮ್ಮ ವ್ಯವಹಾರದಲ್ಲಿ ಅವರ ಹತ್ಯೆ ಮಾಡುವುದನ್ನು ನಿಲ್ಲಿಸೋಣ. ಅದಕ್ಕಾಗಿ ನಮಗೆ ಗಾಂಧಿ ನಮಗೆ ಬೇಕೋ ಬೇಡವೋ ನಿರ್ಧರಿಸಿ' ಎಂದು ಕರೆ ಕೊಡುತ್ತಾರೆ.

–೨–

ಈ ಎಲ್ಲವೂ ಸರಿ. ಈ ವಿಶ್ಲೇಷಣೆಗಳೆಲ್ಲವೂ ಸಮರ್ಪಕವೇ. ಕೌಲಗಿಯವರ ಗಾಂಧಿ ಚಿಂತನೆಯ ಕರಾರುವಾಕ್ಕಾದ ಗ್ರಹಿಕೆಯ ಚಿತ್ರ ನಮಗೆ ಇಲ್ಲಿ ದೊರೆಯುತ್ತದೆ. ಆದರೂ ಇವರ ಈ ಕರೆಗೆ ಜನರೇಕೆ ಓಗೊಡುತ್ತಿಲ್ಲ? ಕೌಲಗಿಯವರು ಅದದೇ ಮಾತುಗಳನ್ನು, ವಿಚಾರಗಳನ್ನು ಮತ್ತೆ ಮತ್ತೆ ಏಕೆ ಹೇಳಬೇಕಾಗಿ ಬಂದಿದೆ? ಇದು ಈ ವಿಶ್ಲೇಷಣೆಗಳ ಸರಿತನ ಮತ್ತು ಸಮರ್ಪಕತೆಗಳನ್ನು ಮೀರಿ ಒಂದು ಮುಖ್ಯ ಪ್ರಶ್ನೆಯಾಗಿ ನನ್ನನ್ನು

ಕಾಡುತ್ತದೆ. ವಿಶೇಷವಾಗಿ ಇಂತಹ ಹಲವು ಸುಸಂಗತವೂ, ಸತ್ಯವೂ, ಪ್ರಾಮಾಣಿಕವೂ, ಅಧ್ಯಯನಶೀಲವೂ ಆದ ವಾದ-ವಿಶ್ಲೇಷಣೆಗಳನ್ನು ಓದಿ, ತಲೆದೂಗುವಂತಾಗುವ ಸಂದರ್ಭಗಳಲ್ಲಿ. ಏಕೆಂದರೆ, ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳಲ್ಲಿ ಈ ಕೂಗನ್ನು ಕೌಲಗಿಯವರಂತಹ ಅನೇಕರು ಆಗಾಗ್ಗೆ ಹಾಕುತ್ತಲೇ ಇದ್ದಾರೆ. ಆದರೆ ಹಾಗೆ ಕೂಗು ಹಾಕಿದ ಗಂಟಲುಗಳು ಹರಿಯುತ್ತಿವೆಯೇ ಹೊರತು ಜನಸಮೂಹದ ಬಹುಭಾಗ ಇತ್ತ ನೋಡಲೂ ಬಯಸದೆ ಜಾಗತೀಕರಣದ ಸುಖಫಲಗಳನ್ನು ಮೆಲ್ಲುತ್ತಲೇ ಮುನ್ನಡೆದಿದೆ. ಅವುಗಳಿಂದ ವಂಚಿತರಾದವರಿಗೆ ಈ ಕೂಗು ಕೇಳುತ್ತಲೂ ಇಲ್ಲ ಅಥವಾ ಕೇಳಿದರೂ ಅದರ ಪರಿಭಾಷೆ ಅವರಿಗೆ ಅರ್ಥವಾಗುತ್ತಲೂ ಇಲ್ಲ. ಏಕೆ ಹೀಗೆ?

ಕೌಲಗಿಯವರು ವಾಸಿಸುತ್ತಿರುವ ಮೇಲುಕೋಟೆಯೇ ನಾನು ನೋಡಿದಂತೆ ಕಳೆದ ಹದಿನೈದು-ಇಪ್ಪತ್ತು ವರ್ಷಗಳಲ್ಲಿ ಹಳ್ಳಿಯ ಎಲ್ಲ ಮೂಲ ಸೊಬಗನ್ನೂ ಕಳೆದುಕೊಂಡು ನಮ್ಮ ಶಿವಮೊಗ್ಗದಂತೆಯೇ ಆಗಿದೆ. ಹಾಗಾಗಿ ಹಿಂದೆ ನನಗೆ ಅಲ್ಲಿ ಮೂರು ದಿನಗಳಿದ್ದರೂ ಇನ್ನೂ ಇರುವ ಆಸೆಯನ್ನು ಹತ್ತಿಕ್ಕಿ ಅಲ್ಲಿಂದ ಬರಬೇಕಾಯಿತು. ಆದರೆ ಮೊನ್ನೆ ಹೋದಾಗ ಒಂದೂವರೆ ದಿನಗಳಲ್ಲೇ ಸಾಕಾಗಿ, ಹೊರಟರೆ ಸಾಕಪ್ಪಾ ಎನ್ನಿಸಿತ್ತು. ಅಲ್ಲಿನ ಬೆಟ್ಟ ಕಣಿವೆಗಳು, ಕೊಳಗಳು, ಅವುಗಳಲ್ಲಿನ ತಾವರೆಗಳು, ದೇವಾಲಯಗಳು, ಅದರ ಪುರೋಹಿತರುಗಳೂ, ಕೌಲಗಿಯವರು ವಾಸಿಸುವ ಪುರಾತನ ಮನೆಯಿರುವ ಬೀದಿಯೂ ಸೇರಿದಂತೆ ಅಲ್ಲಿನ ಸಣ್ಣಪುಟ್ಟ ಬೀದಿಗಳೂ, ಅದರೊಳಗಿದ್ದ ನಮ್ಮ ಪುತಿನ ಮನೆಯ ನೆನಪಿನ ಆತ್ಮೀಯತೆಯೂ, ಕೊನೆಗೆ ನಾವು ಅಲ್ಲಿನ ಹೋಟೆಲೊಂದರಲ್ಲಿ ತಿಂದು ಬಹು ಕಾಲ ನೆನಪಿಸಿಕೊಳ್ಳುತ್ತಿದ್ದ ಪುಳಿಯೋಗರೆಯ ರುಚಿಯೂ, ಮಿನಿ ನಗರವೊಂದರ ಗಿಜಿಬಿಜಿ ಗದ್ದಲ, ರೂಕ್ಷ ಶೃಂಗಾರ, ಎಡವಿ ಬೀಳುವ ಅವಸರಗಳಿಗೆ ಸಿಕ್ಕಿ ಮೂಲ ಜೀವಾಧಾರಗಳನ್ನೇ ಕಳಚಿಕೊಂಡಂತೆ ತೀವ್ರವಾಗಿ ಜಖಂಗೊಂಡಿದ್ದವು. ಇದೆಲ್ಲದರಿಂದಾಗಿ ಚೆಲುವ ನಾರಾಯಣನ ಚೆಲವೂ ಜಖಂಗೊಂಡಿದ್ದರೂ ಆಶ್ಚರ್ಯವಿಲ್ಲ. ಪುಣ್ಯವಶಾತ್ ಈ ಬಾರಿ ಆತನನ್ನು ಕಾಣುವ ಸೌಭಾಗ್ಯ ನನ್ನದಾಗಿರಲಿಲ್ಲ.

ಇದನ್ನೆಲ್ಲ ನಾನು ಇಲ್ಲೇಕೆ ಹೇಳುತ್ತಿರುವೆನೆಂದರೆ, ಕೌಲಗಿಯವರು ಯಾಂತ್ರೀಕರಣ ವಿಲ್ಲದ ಗ್ರಾಮ, ಅಲ್ಲಿನ ಶ್ರಮ, ಸಾವಧಾನ, ಸಂಯಮಗಳ ಬದುಕನ್ನು ಪ್ರತಿಪಾದಿಸುತ್ತಿರುವಾಗ, ಅದು ಇಂದು ಹಲವರಿಗೆ ಹಳಹಳಿಕೆಯಾಗಿ ಕಂಡರೆ; ಹಾಗಾಗಿ ಸಮಾನ ಮನಸ್ಕ ಕೆಲವರ ಹೊರತಾಗಿ ಮಿಕ್ಕವರು ಅದನ್ನು ಕಿವಿಗೆ ಹಾಕಿಕೊಳ್ಳದೇ ಹೋಗುವಂತಾಗಿದ್ದರೆ, ಅದಕ್ಕೆ ಅವರು ಜಗತ್ತಿನ ಪರಿವರ್ತಶೀಲತೆಯನ್ನು ಗಣನೆಗೇ ತೆಗೆದುಕೊಳ್ಳದಂತೆ ಪೂರ್ವ ನಿಶ್ಚಿತ ಪರಿಭಾಷೆಯಲ್ಲೇ-ಒಂದು ಸಿದ್ಧ ಗಾಂಧಿವಾದಿ ಎರಕದಲ್ಲಿ- ಮಾತನಾಡುತ್ತಿರುವುದು ಕಾರಣವಿರಬಹುದು ಎಂದು ಸೂಚಿಸಲು. ಕನಿಷ್ಟ ಅವರು ತಮ್ಮ ದೀರ್ಘಕಾಲಿಕ ಬದುಕಿನ ಹೋರಾಟ, ಏಳುಬೀಳುಗಳ ಜೀವಂತ ವಿವರಗಳೊಂದಿಗೆ, ತಮ್ಮ ವಿಚಾರ-ವಿಶ್ಲೇಷಣೆ-ವಾದಗಳನ್ನು ಅವುಗಳ ನಿಕಷಕ್ಕೊಡ್ಡಿ ಇಲ್ಲಿ ಮಂಡಿಸಿದ್ದರೆ ಅದಕ್ಕೊಂದು ಹೊಸ ಪ್ರಭೆ, ಶಕ್ತಿ ಮತ್ತು ಪ್ರಸ್ತುತತೆಗಳು ದೊರಕುತ್ತಿದ್ದುವೇನೋ. ಗಾಂಧಿ-ವಿನೋಬಾರನ್ನು ಅವರ ಕಾಲದ ಮೂರ್ತಿಗಳನ್ನಾಗಿಯೇ ಕಾಪಾಡಿಕೊಂಡು ಈಗ ಬದಲಾದ ಕಾಲ ಸಂದರ್ಭದಲ್ಲಿ ಅವರನ್ನು ಹಾಗೇ ಪ್ರತಿಷ್ಠಾಪಿಸುವ ಇಲ್ಲಿನ ಪ್ರಯತ್ನ ಅಷ್ಟೇನೂ ಸಾಧುವಲ್ಲವೆಂದೇ ನನ್ನ

ಅಭಿಪ್ರಾಯ. ಹಾಗಾಗಿ ಕೌಲಗಿಯವರು ಗಾಂಧಿ ಬೇಕೇ ಬೇಡವೇ ನಿರ್ಧರಿಸಿ ಎಂದು ಕೇಳಿದಾಗ ಯಾವ ಗಾಂಧಿ ಎಂಬ ಮರುಪ್ರಶ್ನೆ ಯಾರಿಂದಲಾದರೂ ಎದುರಾದರೆ ಆಶ್ಚರ್ಯಪಡಬೇಕಿಲ್ಲ.

ಏಕೆಂದರೆ, ವಿಶೇಷವಾಗಿ ಇಲ್ಲಿ ವಿನೋಬಾ ಕಣ್ಣಿನ ಗಾಂಧಿ ಅಂದರೆ ಸಂತ ಗಾಂಧಿ ಮಾತ್ರ ಪ್ರಸ್ತುತಗೊಂಡಿದ್ದಾರೆ ಎಂದೆನಿಸದಿರದು. ಗಾಂಧಿಯನ್ನು ಬದಲಾದ ಕಾಲಘಟ್ಟಗಳಲ್ಲಿ ಬದಲಾದ ಸವಾಲುಗಳೆದುರಲ್ಲಿ ನಿರೂಪಿಸಿದ ರಾಜಾಜಿ, ಮಿನೂ ಮಸಾನಿ, ಲೋಹಿಯಾ, ಅಚ್ಯುತ ಪಟವರ್ಧನ್, ಅಶೋಕ ಮೆಹ್ತಾ, ಧರ್ಮಪಾಲ್, ಜೆ.ಸಿ. ಕುಮಾರಪ್ಪ, ಇತ್ತೀಚಿನ ವಿವಿಧ ಹಿನ್ನೆಲೆಗಳ ಕಮ್ಯೂನಿಸ್ಟರು, ನಾಗರಿಕ ಹಕ್ಕುಗಳ ಹೋರಾಟಗಾರರು, ಪರಿಸರವಾದಿಗಳು, ಶಾಂತಿವಾದಿಗಳು, ನಮ್ಮ ಅಮರ್ತ್ಯಸೇನರೂ ಸೇರಿದಂತೆ ಹಲವು ಪಶ್ಚಿಮದ ಅರ್ಥಶಾಸ್ತ್ರಜ್ಞರ (ಉದಾ:. ಷೂಮೇಕರ್, ಕ್ರೂಗ್ರಮನ್, ಸ್ಟಿಗ್ಲಿಟ್ಸ್ ಇತ್ಯಾದಿ) ಗೊಡವೆಗೇ ಹೋಗದಿರುವುದು ಅಥವಾ ಇವರೆಲ್ಲ ಸೇರಿ ಸೃಷ್ಟಿಸಿರುವ ಗಾಂಧಿವಾದದ ಸಂಕೀರ್ಣತೆಗಳನ್ನು ಗಮನಿಸದೇ ಹೋಗಿರುವುದು ಈ ನೋಟದ ಸಮಸ್ಯೆಯೆಂದು ನನಗೆ ಕಾಣುತ್ತದೆ. ಇಲ್ಲಿ ಕೌಲಗಿಯವರು ತಾವು ಹತ್ತಿರದಲ್ಲಿ ಒಡನಾಡಿದ ಜೆಪಿಯವರ ಗಾಂಧಿ ದೃಷ್ಟಿಯನ್ನೂ (ಅದು ಅವರು ೧೯೭೭ರಲ್ಲಿ ರೂಪಿಸಿದ ಜನತಾ ಪಕ್ಷದ 'ಗಾಂಧಿ ಸಮಾಜವಾದ'ದ ಪ್ರಣಾಳಿಕೆಯಾಗಿ ಕಾರ್ಯಕ್ರಮಗಳ ರೂಪದಲ್ಲಿ ಕಾಣಿಸಿಕೊಂಡಿತ್ತು.) ತಮ್ಮ ಮಂಡನೆಗಳಲ್ಲಿ ಅಷ್ಟಾಗಿ ಅಳವಡಿಸಿಕೊಳ್ಳದಿರುವುದು ನನಗೆ ಆಶ್ಚರ್ಯವನ್ನು ತಂದಿದೆ. ಹಾಗೇ ಇಲ್ಲಿನ ಗಾಂಧಿ ಚಿಂತನೆಯ ಪ್ರಸ್ತುತಿಯಲ್ಲಿ ನನಗೆ ಕಂಡ ಇನ್ನೊಂದು ದೊಡ್ಡ ಕೊರತೆಯೆಂದರೆ, ಗಾಂಧಿ ಕಾಲದಲ್ಲೇ ಅವರ ವ್ಯಕ್ತಿತ್ವ ಮತ್ತು ಚಿಂತನೆಗಳಿಗೆ ತೀವ್ರ ಸವಾಲೊಡ್ಡಿದ ಅಂಬೇಡ್ಕರರ ಹೋರಾಟ ಮತ್ತು ಚಿಂತನೆಗಳು ಅವರನ್ನು ಕೆಲವು ವಿಷಯಗಳಲ್ಲಾದರೂ ನಿರ್ಣಾಯಕವಾಗಿ ಪ್ರಭಾವಿಸಿದ್ದರ ಯಾವ ಸೂಚನೆಗಳೂ ಇಲ್ಲಿ ಇಲ್ಲದಿರುವುದು. ಇಲ್ಲಿನ ಬರಹಗಳ ಕಾಲಾವಧಿಯಲ್ಲೇ ಖೈರ್ಲಾಂಜಿಯ ಬರ್ಬರ ಘಟನೆ ನಡೆಯಿತಲ್ಲಾ, ಅದು ಇವರನ್ನೂ ಕಿಂಚಿತ್ತೂ ಅಲ್ಲಾಡಿಸಲಿಲ್ಲವೇ? ಅದು ಇವರ ಗಾಂಧಿ ಚಿಂತನೆಯನ್ನು ಒಂದು ಕ್ಷಣವಾದರೂ ತಲ್ಲಣಕ್ಕೆ ಈಡು ಮಾಡಲಿಲ್ಲವೇ? ಕೌಲಗಿಯವರು ಈ ದಿಕ್ಕುಗಳಲ್ಲಿ ಕಣ್ಣುಗಳನ್ನು ಒಂದಿಷ್ಟು ಅರಳಿಸಿದ್ದರೆ ಗ್ರಾಮ, ಶ್ರಮ, ಯಂತ್ರ, ಸಂಯಮ, ಸಮಾಧಾನ ಎಂಬ ಕಲ್ಪನೆಗಳು ಹತ್ತೊಂಭತ್ತು–ಇಪ್ಪತ್ತನೇ ಶತಮಾನದ ಕೊನೆಯ ಹೊತ್ತಿಗೆ ಚಪ್ಪಟೆಯಾಗಿ ಹೋಗಿದ್ದ ತಮ್ಮ ಮೂಲಾರ್ಥಗಳಾಚೆಗೆ ವಿಸ್ತರಿಸಿಕೊಂಡು ಬಿಡಿ ಬಿಡಿಯಾಗಿಯೂ, ಜೊತೆಗೂಡಿಯೂ ಹೊಸ ರೂಪಕಾರ್ಥಗಳನ್ನು ಪಡೆದು ಗಾಂಧಿಯನ್ನು ಇಪ್ಪತ್ತೊಂದನೇ ಶತಮಾನಕ್ಕೆ ಪ್ರಸ್ತುತಗೊಳಿಸಿಕೊಳ್ಳುವಲ್ಲಿ ನಡೆಸಿರುವ ಪ್ರಯತ್ನಗಳನ್ನು ಗಮನಿಸಬಹುದಿತ್ತು. ಆ ಮೂಲಕ ತಮ್ಮ ಗಾಂಧಿವಾದಿ ಪರಿಭಾಷೆಯನ್ನು ಸಂಸ್ಕರಿಸಿಕೊಳ್ಳಬಹುದಿತ್ತು ಎನಿಸುತ್ತದೆ.

ಆದರೆ ಈ ಪ್ರಯತ್ನವನ್ನು ಮಾಡದಂತೆ ತೋರುವ ಕೌಲಗಿಯವರು, ಹಾಗಾಗಿ ಎಷ್ಟೇ ಪ್ರಾಮಾಣಿಕವಾಗಿ, ಹೃದಯಪೂರ್ವಕವಾಗಿ 'ಕ್ರಾಂತಿ', 'ಕ್ರಾಂತಿ' ಎಂದು ಕೂಗು ಹಾಕುತ್ತಿದ್ದರೂ, ಅದು ಸದುದ್ದೇಶಗಳ ಸಾತ್ವಿಕನೊಬ್ಬನ ಅಸಹಾಯಕ ತುರ್ತು ಕರೆ ಎನಿಸುತ್ತದೆಯೇ ಹೊರತು ಇಲ್ಲಿ ಕೌಲಗಿಯವರೇ ಹೇಳುತ್ತಿರುವಂತೆ ಎಲ್ಲ ದಿಕ್ಕುಗಳಿಂದಲೂ

ಜಖಂಗೊಂಡು ಇಂದು ಪೂರ್ಣ ಕೆಟ್ಟು ಹೋಗಿರುವ ವ್ಯವಸ್ಥೆಯನ್ನು ಬುಡಮೇಲು ಗೊಳಿಸುವುದಿರಲಿ, ಅದರ ಕೆಲವು ಮುಖ್ಯ ಆಧಾರ ನಂಬಿಕೆಗಳನ್ನಾಗಲೀ, ಅದರ ನೆಲೆ ಮತ್ತು ಪರಿಭಾಷೆಯನ್ನಾಗಲೀ ಪ್ರಶ್ನಿಸಬಲ್ಲ ಆಳದ ಬಂಡಾಯದ ಕರೆ ಎಂದೆನ್ನಿಸುವುದಿಲ್ಲ. ಇದನ್ನೇ ಇಲ್ಲಿನ ಲೇಖನಗಳ ಶೈಲಿ, ಸ್ವರೂಪಗಳಲ್ಲಿ ಗುರುತಿಸಿ ಹೇಳುವುದಾದರೆ, ಇಲ್ಲಿನ ವಾದಗಳಿಗೆ ಬೆಂಬಲವಾಗಿ ಗಾಂಧಿ-ವಿನೋಬಾರ ಉಲ್ಲೇಖಗಳ ಹೊರತಾಗಿ ವೇದೋಪನಿಷತ್ತುಗಳಿಂದಷ್ಟೇ ಅಲ್ಲದೆ ನಮ್ಮ ಡಿವಿಜಿ, ಬೇಂದ್ರೆ, ವೀಸೀ, ಅಡಿಗರ ಪದ್ಯ ಸಾಲುಗಳನ್ನೂ ಸ್ಫೂರ್ತಿ ವಾಕ್ಯಗಳಾಗಿ ಬಳಸಲಾಗಿದೆ. ಆದರೆ, ಇದೇ ಕಾಲದಲ್ಲಿನ ಸಾಮಾಜಿಕ-ಸಾಂಸ್ಕೃತಿಕ ಪರಿವರ್ತನೆಯ ಬಹು ದೊಡ್ಡ ಕಾವ್ಯ ಧ್ವನಿಯಾಗಿ ಮತ್ತು ಈ ಕವಿಗಳಷ್ಟೇ ಏನು, ಇನ್ನೂ ದೊಡ್ಡ ಪ್ರಮಾಣದಲ್ಲಿ ಜನಪ್ರಿಯರಾಗಿ ಮೇಲುಕೋಟೆಗೆ ಬಹು ಸನಿಹದ ಮೈಸೂರಿನಿಂದ ಹಲವು ಕ್ರಾಂತಿಕಾರಿ ಕವನಗಳ ಡಿಂಡಿಮ ಬಾರಿಸಿದ ಕುವೆಂಪು ಅವರ ಒಂದು ಸಾಲೂ ಇಲ್ಲಿನ ಯಾವುದೇ ಬರಹಕ್ಕೆ ಸ್ಫೂರ್ತಿ ವಾಕ್ಯವಾಗಿಲ್ಲ ಏಕೆ ಎಂದು ಕೇಳುವಂತಾಗುತ್ತದೆ. ಕೌಲಗಿಯವರ ಮಿತಿಗಳು ಈ ಸ್ತರದವು ಎಂದು ಹೇಳಿದರೆ ಸಾಕೆನಿಸುತ್ತದೆ. ಇದು ಉದ್ದೇಶಪೂರ್ವಕ ಎಂದು ನಾನು ಹೇಳುತ್ತಿಲ್ಲ. ಇದು ಅವರ ಸಂವೇದನೆಯ, ಪ್ರಜ್ಞೆಯ ಮಿತಿ ಇರಬಹುದು.

ಇಷ್ಟೆಲ್ಲ ಹೇಳಿದ ಮೇಲೂ ನಾನು ಕೌಲಗಿಯವರ ಪ್ರಯತ್ನವನ್ನು, ಅದರ ಹಿಂದಿನ ಉತ್ಸಾಹ-ಬದ್ಧತೆಗಳನ್ನು ಪ್ರಶ್ನಿಸಲಾರೆ. ಅದು ಅವರ ಈ ಪ್ರಯತ್ನದ ಹಿಂದಿನ ಕೆಲಸ-ಕಾರ್ಯಗಳನ್ನೂ, ಆ ಉತ್ಸಾಹ-ಬದ್ಧತೆಗಳನ್ನೂ ಕಣ್ಣಾರೆ ನೋಡಿರುವ ನನಗೆ ಅಸಭ್ಯತೆಯಷ್ಟೇ ಅಲ್ಲ, ಸಣ್ಣತನವೂ ಆದೀತು. ಆದರೂ ಅವರ ಪ್ರಯತ್ನದ ಶಕ್ತಿಯ ಜೊತೆ ಅವುಗಳ ಮಿತಿಗಳನ್ನೂ ನನಗೆ ಕಂಡಂತೆ ನಾನು ಹೇಳದಿದ್ದರೆ ಇದು ಓದುಗರ ಪಾಲಿಗೆ ಮುನ್ನುಡಿ ಯಾಗದೆ ಅಭಿಮಾನಿಯೊಬ್ಬನ ಭಿನ್ನವತ್ತಳೆಯಾದೀತೆಂಬ ಅಳುಕಿನಿಂದ ಈ ಸಾಲುಗಳನ್ನು ಬರೆದಿರುವೆ. ಕೌಲಗಿಯವರು ಅನ್ಯಥಾ ಭಾವಿಸಲಾರರೆಂಬ ಭರವಸೆಯನ್ನು ಅವರ ಬರಹಗಳಲ್ಲಿ ಎದ್ದು ಕಾಣುವ ಪ್ರಾಮಾಣಿಕತೆಯಿಂದ ನಾನು ಪಡೆದುಕೊಂಡಿರುವೆ. ಅದು ಹುಸಿಯಾಗಲಾರದೆಂಬ ನಂಬಿಕೆಯೊಡನೆ ಈ ಮಾತುಗಳನ್ನು ಮುಗಿಸುತ್ತಿದ್ದೇನೆ. ಸುರೇಂದ್ರ ಕೌಲಗಿಯವರು ನನ್ನಂತಹ ಕಿರಿಯರೊಡನೆ ಸಂವಾದಿಸುತ್ತಾ ನಮ್ಮನ್ನು ಬೆಳೆಸಲು ಇನ್ನಷ್ಟು ಕಾಲ ಆಯುರಾರೋಗ್ಯಗಳೊಂದಿಗೆ ಬದುಕಿ ಬಾಳಲಿ ಎಂದು ಆಶಿಸುತ್ತೇನೆ.

(ಡಿ.ಎಸ್. ನಾಗಭೂಷಣ, ೧೨.೪.೨೦೧೩, 'ಹೊಸ ಮನುಷ್ಯ'ದ ೨೦೧೩ರ ಜೂನ್ ಸಂಚಿಕೆಯಲ್ಲಿ ಪ್ರಕಟ)

ಸಮಾಜವಾದಿ ಆಂದೋಲನದ ಪುನರುಜ್ಜೀವನ: ಏಕೆ ಮತ್ತು ಹೇಗೆ

ಭೂಮಿ ಬಿಟ್ಟು ಮೇಲೇರಿದ್ದೆಲ್ಲ ಮತ್ತೆ ಭೂಮಿಯ ವಾಸ್ತವಕ್ಕೆ ಇಳಿದು ಬರಲೇಬೇಕು! ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಎಲ್ಲರ ಅಗತ್ಯಗಳನ್ನು ನಿರ್ಲಕ್ಷಿಸಿ ಕೆಲವರ ಚಪಲಗಳನ್ನು ಪೂರೈಸುವ ಅಡ್ಡದಾರಿ ಹಿಡಿದ ವಿಶ್ವ ಆರ್ಥಿಕತೆ, ತನ್ನ ವಾಸ್ತವ ಪ್ರಜ್ಞೆಯನ್ನು ಮರಳಿ ಪಡೆದುಕೊಳ್ಳುವಂತಹ ಆಘಾತವನ್ನು ಈಗ ಅನುಭವಿಸಿರುವುದು ಒಳ್ಳೆಯದಕ್ಕೇ ಎಂದು ನಾವು ಭಾವಿಸಬೇಕು. ಇಂದು ಅಮೆರಿಕಾ ನುಚ್ಚು ನೂರಾಗಿರುವ ತನ್ನ ಆರ್ಥಿಕತೆಯನ್ನು ಪುನಾರಚಿಸಿಕೊಳ್ಳಲು ೭೦೦ ದಶಲಕ್ಷ ಡಾಲರ್ ಸರ್ಕಾರಿ(ತೆರಿಗೆದಾರರ) ಹಣವನ್ನು ಸಾರ್ವಜನಿಕ ಹೂಡಿಕೆಗೆ ಬಿಡುಗಡೆ ಮಾಡುವ ಪ್ರಯತ್ನದಲ್ಲಿದೆ. ೨೫೦ ದಶಲಕ್ಷ ಡಾಲರ್‌ಗಳನ್ನು ತನ್ನ ಕುಸಿದಿರುವ ಬ್ಯಾಂಕುಗಳ ಪುನಶ್ಚೇತನಕ್ಕಾಗಿ ನೀಡಲು ನಿರ್ಧರಿಸಿದೆ. ಬ್ರಿಟನ್ ಎಲ್ಲರಿಗಿಂತ ಮುಂಚೆಯೇ ತನ್ನ ಬ್ಯಾಂಕುಗಳ ಸುರಕ್ಷತೆಗಾಗಿ ನಗದು ಪೂರೈಕೆಯ ದೊಡ್ಡ ಯೋಜನೆಯನ್ನೇ ಪ್ರಕಟಿಸಿದೆ. ರಷ್ಯಾ ತನ್ನ ದೇಶದ ಬ್ಯಾಂಕುಗಳ ಠೇವಣಿದಾರರಿಗೆ ವಿಮಾ ಸೌಲಭ್ಯ ಒದಗಿಸಲು ಮುಂದೆ ಬಂದಿದೆ. ಐರೋಪ್ಯ ರಾಷ್ಟ್ರಗಳಂತೂ ತಮ್ಮ ದೇಶದ ಬ್ಯಾಂಕುಗಳಿಗೆ ಠೇವಣಿ ಸೆಳೆಯಲು ವೈವಿಧ್ಯಮಯ ಉಡುಗೊರೆಗಳ ಆಕರ್ಷಣೆ ಒಡ್ಡಿವೆ! ಅಂತೂ ಈಗ ಜಗತ್ತಿನಾದ್ಯಂತ ಸರ್ಕಾರಗಳು ಮುಕ್ತ ಮಾರುಕಟ್ಟೆಯ ಅನಾಹುತಗಳಿಗೆ ಎಚ್ಚೆತ್ತುಕೊಂಡು, ದೇಶದ ಆರ್ಥಿಕತೆಯಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ನಿಯಂತ್ರಣಗಳ ಅಗತ್ಯಗಳನ್ನು ಮನಗಂಡಿವೆ. ಸಮಾಜವಾದದ ಕಾಲ ಮುಗಿಯಿತೆಂದು ಅವಸರದಲ್ಲಿ ಅಂದವರೀಗ ನಾಲಿಗೆ ಕಚ್ಚಿಕೊಳ್ಳತೊಡಗಿದ್ದಾರೆ!

–'ಮುಕ್ತ ಮಾರುಕಟ್ಟೆ ಎಂಬ ಮಹಾಮೋಸ'
ಎಂಬ ಇದೇ ಲೇಖಕರ ಲೇಖನದಿಂದ

ಜಾಗತೀಕರಣದ ಈ ದಿನಗಳಲ್ಲಿ ಸಮಾಜವಾದದ ಬಗ್ಗೆ ಮಾತಾಡುವುದೇ ಕೆಲವರಿಗೆ ತಮಾಷೆಯಾಗಿ ಕಾಣುವುದು. ಏಕೆಂದರೆ ಸಮಾಜವಾದದ ಸಾವಿನಲ್ಲೇ ಜಾಗತೀಕರಣ ಚಿಗುರೊಡೆದಿರುವುದು ಎಂದು ಇವರು ನಂಬಿದ್ದಾರೆ. ಅರ್ಥಾತ್, ಕಳೆದ ಶತಮಾನದ ಮಹಾ ರಾಜಕೀಯ ಪ್ರಯೋಗವಾದ ಸಮಾಜವಾದ, ಈಗ ತನ್ನೆಲ್ಲ ವಿಶ್ವಾಸಾರ್ಹತೆ ಕಳೆದುಕೊಂಡು ಜಾಗತೀಕರಣಕ್ಕೆ ದಾರಿ ಮಾಡಿಕೊಟ್ಟಿದೆ ಎಂಬುದು ಇವರ ವಾದ. ಇವರ ಪ್ರಕಾರ ಜಾಗತೀಕರಣವೆಂಬುದು ಮತ್ತೇನೂ ಆಗಿರದೆ, ಯಾವ ಸಮಾಜವಾದ ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ಮೂಲಗಳನ್ನು ಗುರುತಿಸಿ ಅವಕ್ಕೆ ಪರಿಹಾರ

ರೂಪವಾಗಿ ಮೂಡಿನಿಂತಿತೋ, ಅದರ ವಿರುದ್ಧ ಬಂಡವಾಳಶಾಹಿ ಸಾಧಿಸಿರುವ ಆತ್ಯಂತಿಕ ವಿಜಯವೇ ಆಗಿದೆ. ಇದು ಒಂದು ರೀತಿಯಲ್ಲಿ ನಿಜವೂ ಹೌದು. ಏಕೆಂದರೆ ಕಳೆದ ಶತಮಾನದ ಮಧ್ಯೆ ಭಾಗದಲ್ಲಿ ಹೊಸ ನೈತಿಕತೆಯ ಮಾತ್ರವಲ್ಲ, ಹೊಸ ಮಾನವತೆಯ ಪ್ರತೀಕವಾಗಿ ಜಗತ್ತಿನ ಎಲ್ಲ ಭಾಗಗಳ ಚಿಂತಕರ ರಾಜಕೀಯ ಆಕರ್ಷಣೆಯಾಗಿದ್ದ ಸಮಾಜವಾದ; ಆ ಶತಮಾನದ ಕೊನೆಯ ಹೊತ್ತಿಗೆ ಚಲಾವಣೆ ಕಳೆದುಕೊಂಡ ನಾಣ್ಯದಂತೆ ಇತಿಹಾಸದ ಜೇಬು ಸೇರುವ ಸ್ಥಿತಿ ತಲುಪಿದ್ದನ್ನು ಕಣ್ಣಾರೆ ಕಂಡವರು, ಇನ್ನೇನು ಭಾವಿಸಿಯಾರು?

ಆದರೆ ಈ ಸತ್ಯಕ್ಕೆ ಇನ್ನೊಂದು ಮುಖವೂ ಇದೆ. ಜಗತ್ತಿನ ಇತಿಹಾಸದುದ್ದಕ್ಕೂ ಅನೇಕ ರೀತಿಯ ಐತಿಹಾಸಿಕ ಕಾರಣಗಳಿಂದಾಗಿ ಪ್ರಬಲರಾದವರ ಮತ್ತು ದುರ್ಬಲರಾದವರ ನಡುವೆ ಘರ್ಷಣೆ ನಡೆದೇ ಇದೆ. ಈ ನಿರಂತರ ಘರ್ಷಣೆಯ ಒಂದು ಭಾಗವಾಗಿ ಕಳೆದ ಶತಮಾನದ ರಾಜಕೀಯ ಇತಿಹಾಸ ನೋಡಿದಾಗ, ಯಾರಾದರೂ ಅಂತಿಮವಾಗಿ ಗೆದ್ದಿದ್ದಾರೆ ಎಂದು ಹೇಳುವುದು ಇತಿಹಾಸದ ದೃಷ್ಟಿ ಯಿಂದ ಕಷ್ಟವಾಗುತ್ತದೆ. ಏಕೆಂದರೆ ಕಳೆದ ಶತಮಾನದ ಯಾವ ಸಮಾಜವಾದೀ ಚಿಂತನೆಯ ಒಂದು ಭಾಗವಾಗಿ ಮಾರ್ಕ್ಸ್‌ವಾದ ಮೂಡಿಬಂತೋ ಆ ಮಾರ್ಕ್ಸ್‌ವಾದ, ಈ ನಿರಂತರ ಘರ್ಷಣೆಗೆ ಕಾರಣವಾದ ಐತಿಹಾಸಿಕ ಶಕ್ತಿಗಳ ಮರ್ಮವನ್ನು ತಾನು ಅರಿತಿ ದ್ದೇನೆಂದು ಘೋಷಿಸಿಕೊಂಡು; ಅದರ ಶಾಶ್ವತ ನಿವಾರಣೆಯ 'ವೈಜ್ಞಾನಿಕ' ಮದ್ದನ್ನೂ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ' ರೂಪದಲ್ಲಿ ಪ್ರಚಾರಮಾಡಿ ಹುಟ್ಟಿಸಿದ ನಂಬಿಕೆಯ ಹಿನ್ನೆಲೆಯಲ್ಲಿ ಮಾತ್ರ, ಇವೊತ್ತಿನ ಸೋಲು-ಗೆಲುವುಗಳ ಮಾತುಗಳು ಅರ್ಥ ಪಡೆಯುತ್ತವೆ. ಸಮಾಜವಾದವನ್ನು ಅಥವಾ ಮಾರ್ಕ್ಸ್‌ವಾದವನ್ನು ಜಗತ್ತಿನ ಇತಿಹಾಸದುದ್ದಕ್ಕೂ ಪಟ್ಟಭದ್ರರ ಹಾಗೂ ವಂಚಿತರ ನಡುವೆ ಪದೇ ಪದೇ ನಡೆಯುತ್ತ ಬಂದಿರುವ ಘರ್ಷಣೆಯ ಇತ್ತೀಚಿನ ರಾಜಕೀಯ ಚಿಂತನಾ ರೂಪಗಳಷ್ಟೇ ಎಂದು ನೋಡಿದಾಗ, ಸೋತಿರುವುದು ಈ ರಾಜಕೀಯ ರೂಪಗಳೇ ಹೊರತು, ಸಮಾಜವಾದ ಪ್ರತಿನಿಧಿಸುವ ಮನುಷ್ಯನ ಸಮಾನತೆಯ ಆಶಯವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಜಾಗತೀಕರಣ ಎಂದರೆ-ಹಳೆಯ ಮಾರ್ಕ್ಸ್‌ವಾದಿಗಳೂ ತಮ್ಮ ಸಿದ್ಧಾಂತದ (ಕುರುಡು)ನಂಬಿಕೆಯ ಆಧಾರದ ಮೇಲೆ ಹೇಳುತ್ತಿದ್ದಂತೆ-'ಇತಿಹಾಸದ ಅಂತ್ಯ' ಎಂದು ಇಂದಿನ ಜಾಗತೀಕರಣವಾದಿಗಳೂ ಹೇಳುತ್ತಿದ್ದಾರೆ. ಅವರಿಗೆ ಇತಿಹಾಸ ನಿರ್ಮಾಣವಾಗು ವುದು ಮನುಷ್ಯನ ಅದಮ್ಯ ಚೇತನ ಶಕ್ತಿಯಿಂದಲೇ ಹೊರತು, ಮಾರುಕಟ್ಟೆಯ ಜಡ ಶಕ್ತಿಗಳಿಂದಲ್ಲ ಎಂಬ ಆಧ್ಯಾತ್ಮಿಕ ಸತ್ಯದ ಅರಿವಿಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಮಾರುಕಟ್ಟೆಗೆ ಅಥವಾ ಅದು ಸೃಷ್ಟಿಸುವ ಭೌತಿಕ ದಾಹಕ್ಕೆ ಒಂದು ಮಿತಿಯಿದೆ-ಒಂದು ಸ್ಥಗಿತತೆಯ, ಒಂದು ಕೊಳೆಯುವಿಕೆಯ ಬಿಂದು ಇದೆ. ಆ ಸ್ಥಿತಿ ಮುಟ್ಟಿದೊಡನೆ ಮನುಷ್ಯ ಚೇತನ, ಮಾರುಕಟ್ಟೆ ಶಕ್ತಿಗಳು ಹೊಟ್ಟೆಯಿಂದಲೇ ಒಡೆದೆದ್ದು ನಿಲ್ಲುತ್ತದೆ.

ಈ ಒಡೆದೆದ್ದು ನಿಲ್ಲುವುದು ಎಂಬುದು ಭವಿಷ್ಯದ ಮಾತಲ್ಲ. ಇಂದೇ ಅದು ಒಡೆದೆದ್ದು ಬರುತ್ತಿದೆ.... ಮಾರುಕಟ್ಟೆಯ ಗಜಿಬಿಜಿ ಗಲಾಟೆಯಲ್ಲಿ ಅದರ ಬಿರಿಯುವಿಕೆಯ ಸದ್ದು ಕೇಳಿಸುತ್ತಿಲ್ಲವಷ್ಟೇ! ಬಂಡವಾಳಶಾಹಿ ಆರ್ಥಿಕತೆಯ ನಿಜ ಬಣ್ಣ ಬಯಲಾಗುತ್ತಿರುವ ಜಾಗತಿಕ ಮಹಾ ಹಿಂಜರಿತದ ಈ ದಿನಗಳಲ್ಲಂತೂ ಸಮಾಜವಾದಿ ಆರ್ಥಿತಕೆಯಲ್ಲದೆ,

ಸಮಾಜವಾದಿ ರಾಜಕಾರಣದ ಬಗೆಗೂ ಮರುಚಿಂತನೆ ಮಾಡುವ ಕಾಲ ಬಂದಿದೆ ಎಂದು ಪಶ್ಚಿಮದ (ಉದಾ: ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರರಾದ ಜೋಸೆಫ್ ಸ್ಟಿಗ್ಲಿಟ್ಜ್ ಮತ್ತು ಪಾಲ್ ಕ್ರುಗ್‌ಮನ್) ಅರ್ಥಶಾಸ್ತ್ರಜ್ಞರು ಹೇಳತೊಡಗಿದ್ದಾರೆ! ಈವರೆಗೆ ಮುಕ್ತ ಬಂಡವಾಳಶಾಹಿ ಎತ್ತಿ ಹಿಡಿಯುತ್ತಿದ್ದ ಅಮೆರಿಕಾ ಮತ್ತು ಈರೋಪಿನ ಹಲವು ದೇಶಗಳು ಈಗ ದಿವಾಳಿ ಎದ್ದಿರುವ ತಮ್ಮ ಖಾಸಗಿ ಬ್ಯಾಂಕುಗಳು ಮತ್ತು ಇತರೆ ಹಣಕಾಸಿನ ಸಂಸ್ಥೆಗಳನ್ನು ಉಳಿಸಿಕೊಳ್ಳಲು ತೆರಿಗೆದಾರರ ಕೋಟ್ಯಾಂತರ ಡಾಲರುಗಳನ್ನು ಸಾರ್ವಜನಿಕ ವಲಯದಲ್ಲಿ ಹೂಡತೊಡಗಿವೆ! 'ಒಂದೇ ಜಗತ್ತು' ಎನ್ನುವ ಜಾಗತೀಕರಣದ ವಿರುದ್ಧ ಹಳೆಯ ಸಮಾಜವಾದಿಗಳ, ಮಾರ್ಕ್ಸ್‌ವಾದಿಗಳ ಹುಯ್ಲು ಒಂದು ಕಡೆ ಇದ್ದರೆ, 'ಇನ್ನೊಂದು ಜಗತ್ತು ಸಾಧ್ಯ' ಎಂಬ ಪರ್ಯಾಯ ಕಲ್ಪನೆಯೊಂದನ್ನು ಮಂಡಿಸುತ್ತಿರುವ ಹೊಸ ಮುಖದ ಚಿಂತಕರ ಘೋಷಣೆ ಇನ್ನೊಂದೆಡೆ ಗಂಭೀರ ಚರ್ಚೆಗೆ ಒಳಗಾಗಿದೆ. ಸಮಾಜವಾದ ತನ್ನ ಆರಂಭಿಕ ದಿನಗಳಲ್ಲಿ ಬಡ–ಶ್ರೀಮಂತ ದೇಶಗಳೆಂಬ ಭೇದ ಭಾವಗಳಿಲ್ಲದೆ ಹೇಗೆ ಎಲ್ಲ ಜನರ ಗಮನ–ಆಸಕ್ತಿಗಳನ್ನು ಸೆಳೆದಿತ್ತೋ (ಐವತ್ತು–ಅರವತ್ತರ ದಶಕದಲ್ಲಿ ಅಮೇರಿಕಾದಲ್ಲೂ ಒಂದು ಸಮಾಜವಾದಿ ಪಕ್ಷ ಕ್ರಿಯಾಶೀಲವಾಗಿತ್ತು!) ಈ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ರೂಪದ ಹೊಸ ಸಮಾಜವಾದ, ಜಗತ್ತಿನ ಎಲ್ಲ ದೇಶಗಳ–ಜಿ೮ ದೇಶಗಳೂ ಸೇರಿದಂತೆ–ಜನರ ಗಮನ ಮತ್ತು ಆಸಕ್ತಿಗಳನ್ನು ಸೆಳೆದಿದೆ. ಈ ಚಳುವಳಿ ಕಳೆದ ಶತಮಾನದ ಸಮಾಜವಾದವೂ ಸೇರಿದಂತೆ ಎಲ್ಲ ಎಡ ಪಂಥೀಯ ರಾಜಕೀಯ ಪ್ರಯೋಗಗಳ ಅನುಭವ–ಪಾಠಗಳ ಆಧಾರದ ಮೇಲೆ ತನ್ನ ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದೆ. ನಾನು ಇದನ್ನು ಪ್ರಸ್ತಾಪಿಸುತ್ತಿರುವುದು, ಇದೇ ಹೊಸ ಶತಮಾನದ ಸಮಾಜವಾದ ಎಂದು ಸೂಚಿಸಲಲ್ಲ. ಜಾಗತೀಕರಣವೆಂಬುದು ಇತಿಹಾಸದ ಅಂತಿಮ ಘಟ್ಟವಲ್ಲ. ಇತಿಹಾಸದ ಶಕ್ತಿಗಳು ಇನ್ನೂ ಜೀವಂತವಿದ್ದು, ಹೊಸ (ರಾಜಕೀಯ)ಸತ್ಯದ ಅನ್ವೇಷಣೆಯಲ್ಲಿ ತೊಡಗಿದೆ ಎಂದು ಸೂಚಿಸಲು. ಇದು, ನಾವು ನಂಬಿದ್ದ ಸಮಾಜವಾದ ಸೋತಿದೆಯೋ ಎಂದು ಕೇಳಿಕೊಂಡು, ಸೂಕ್ತ ಉತ್ತರ ಕಂಡುಕೊಳ್ಳಲು ಆತ್ಮವಿಶ್ವಾಸವನ್ನು ಒದಗಿಸುತ್ತದೆ.

ಜಗತ್ತಿನ ಮಾತು ಒತ್ತಟ್ಟಿಗಿರಲಿ, ಭಾರತದಲ್ಲಿ ಸಮಾಜವಾದ ಸೋತಿದೆ ಎನ್ನುವವರಿಗೆ ಕಳೆದ ೫೦ ವರ್ಷಗಳಲ್ಲಿ ಭಾರತದಲ್ಲಿ ಆಗಿರುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತ್ಯಂತರಗಳ ನೆಲೆಗಳ ಪರಿಚಯವೇ ಇಲ್ಲ ಎಂದು ಹೇಳಬೇಕಾಗುತ್ತದೆ. ಇತಿಹಾಸದ ಸಮಾಜವಾದಿ ಅರಿವಿನಿಂದಾಗಿಯೇ ಶಿಕ್ಷಣ, ಸಾರ್ವಜನಿಕ ಉದ್ಯೋಗ ಹಾಗೂ ರಾಜಕೀಯ ಅಧಿಕಾರಕ್ಕೆ 'ತೆರೆದುಕೊಂಡ' ಸಮಾನ ಅವಕಾಶಗಳು– ಇದನ್ನು ಮುಕ್ತ ಸ್ಪರ್ಧೆಯ ಜೊತೆಗೆ ಗೊಂದಲ ಮಾಡಿಕೊಳ್ಳಬಾರದು–ಎಷ್ಟು ವಂಚಿತ ಜನವರ್ಗಗಳನ್ನು ಜಾಗೃತಗೊಳಿಸಿಲ್ಲ? ಎಂತೆಂತಹ ಸಾಮಾಜಿಕ–ಆರ್ಥಿಕ–ರಾಜಕೀಯ ಅಂತರ್‌ಚಲನೆಗಳಿಗೆ ಹಾಗೂ ಸಂಚಲನಗಳಿಗೆ ಕಾರಣವಾಗಿಲ್ಲ? ದುರಾದೃಷ್ಟದ ಸಂಗತಿ ಎಂದರೆ, ಭಾರತದ ಸಮಾಜವಾದಿ ಚಳವಳಿ, ಆಗಿರುವುದರ ಅರಿವೇ ಇಲ್ಲದೇ; ಆಗದಿರುವುದರ ಬಗ್ಗೆಯೇ ಕೂಗಾಡುತ್ತಾ, ತನ್ನ ಸ್ಥಿಮಿತವನ್ನು ಕಳೆದುಕೊಂಡಿತು. ಹಾಗೆ ನೋಡಿದರೆ ಭಾರತದ ಸಮಾಜವಾದಿ ಚಳವಳಿ ಎಂದರೆ ಅಧಿಕೃತ ಸಮಾಜವಾದಿ ಪಕ್ಷಗಳ ನಿಲುವು–ಧೋರಣೆ–ಸಾಧನೆಗಳು ಮಾತ್ರವಾಗಿರದೆ,

ಸರಿಸುಮಾರು ಎಲ್ಲ ರಾಜಕೀಯ ಪಕ್ಷಗಳ ನೀತಿ ವಿಕಾಸದ ಪರಿಣಾಮಗಳೂ ಸೇರಿದ ಒಂದು ರಾಜಕೀಯ ವಿದ್ಯಮಾನ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂದು ಬಿಜೆಪಿಯಂತಹ ಬಲಪಂಥೀಯ ಸಂಪ್ರದಾಯವಾದಿ ಪಕ್ಷವೂ ಮಂಡಲ್ ಆಯೋಗದ ಶಿಫಾರಸ್ಸುಗಳನ್ನೂ, ಪಂಚಾಯತ್‌ರಾಜ್ ಕಾಯಿದೆಯ ಬಲವರ್ಧನೆಯನ್ನೂ ಬೆಂಬಲಿಸುವ ರಾಜಕೀಯ ಅನಿವಾರ್ಯತೆ ಉಂಟಾಗಿರುವುದೇ, ಕಳೆದ ಐವತ್ತು ವರ್ಷಗಳ ಭಾರತದ ಸಮಾಜವಾದಿ ಚಳವಳಿಯ ಯಶಸ್ಸು ಎಂದು ಏಕೆ ನಾವು ಭಾವಿಸಬಾರದು? ಈ ಯಶಸ್ಸನ್ನು ಅರ್ಥಮಾಡಿಕೊಂಡಾಗಲೇ ಅಥವಾ ಅರ್ಥಮಾಡಿಕೊಳ್ಳುವ ನೆಲೆಗಳಲ್ಲೇ, ಸಮಾಜವಾದಿ ಚಳವಳಿಯ ವೈಫಲ್ಯಗಳ ನೆಲೆಗಳೂ ಸ್ಪಷ್ಟವಾಗಿ ನಮ್ಮ ಅರಿವಿಗೆ ಬರ ತೊಡಗುವುದು.

ಸಮಾಜವಾದಿ ಪಕ್ಷ(ಸದ್ಯದ ಮುಲಾಯಂಸಿಂಗ್–ಬಂಗಾರಪ್ಪನವರ ಪಕ್ಷವಲ್ಲ) ಎಂದೂ ಕೇಂದ್ರದಲ್ಲಿಯಾಗಲೀ, ಯಾವುದೇ ರಾಜ್ಯದಲ್ಲಿಯಾಗಲ್ಲೀ ಏಕಾಂಗಿಯಾಗಿ ಯಾವುದೇ ಅವಧಿಯ ಆಡಳಿತ ನಡೆಸಿದ ಸಂದರ್ಭವಿಲ್ಲವಾದ್ದರಿಂದ, ನಾವಿಂದು ಸಮಾಜವಾದಿ ಚಳವಳಿಯ ಪರಿಣಾಮಗಳ ಬಗ್ಗೆ ಮಾತಾಡುವಾಗಲೆಲ್ಲ ಅದರ ಅನಧಿಕೃತ–ಅಪ್ರತ್ಯಕ್ಷ–ಪರಿಣಾಮಗಳ ಬಗ್ಗೆಯೇ ಮಾತಾಡುತ್ತಿರುತ್ತೇವೆ ಎಂಬುದೂ ನೆನಪಿರಬೇಕು. ಅಂದರೆ ಸಮಾಜವಾದಿ ಪಕ್ಷಗಳ (ಹೌದು, ಪಕ್ಷಗಳು;ಏಕೆಂದರೆ ಭಾರತದ ಸಮಾಜವಾದದ ಚರಿತ್ರೆ ಎಂದರೆ ವಿಭಜನೆ ಹಾಗೂ ವಿಲೀನಗಳ ಚರಿತ್ರೆಯೇ ಆಗಿದೆ!) ಹೊರಗಿನ ಒತ್ತಡ ಹಾಗೂ ಆಡಳಿತ ಪಕ್ಷದೊಳಗಿನ ಸಮಾಜವಾದಿ ಒಲವುಳ್ಳ ಶಕ್ತಿಗಳ ಒಳಗಿನ ಒತ್ತಡಗಳೂ ಸೇರಿ ಭಾರತದ ಸಮಾಜವಾದಿ ರಾಜಕಾರಣವನ್ನು ಕಟ್ಟಿವೆ ಎಂಬುದನ್ನು ಗಮನಿಸಿಯೇ ನಾವು ಭಾರತದ ಸಮಾಜವಾದಿ ಚಳವಳಿಯ ಮೌಲ್ಯಮಾಪನ ಮಾಡಬೇಕು. ಏಕೆಂದರೆ, ಸಮಾಜವಾದಿ ಚಳವಳಿಯ ಈ ಯಶಸ್ಸಿನ ನೆಲೆಯಲ್ಲಿಯೇ ಅದರ ವೈಫಲ್ಯಗಳ ಸುಳಿವುಗಳೂ ನಮಗೆ ದೊರೆಯುವುದು.

ಹೀಗಾಗಿ ಮೊದಲ ಪ್ರಶ್ನೆ : ಭಾರತದಲ್ಲಿ ಸಮಾಜವಾದಿ ಚಳವಳಿ ಏಕೆ ಸುಸ್ಥಿರವಾಗಿ ಬೆಳೆಯಲಾಗಲಿಲ್ಲ? ಏಕೆ ಒಡೆಯುತ್ತ, ಕೂಡುತ್ತ, ಚದುರುತ್ತ: ತನ್ನ ತತ್ವವನ್ನೂ, ಅದರ ಪರಿಣಾಮಶೀಲತೆಯನ್ನೂ ಕಳೆದುಕೊಳ್ಳುತ್ತಾ ಹೋಯಿತು? ಅನೇಕ ಶಕ್ತಿಗಳ 'ಆಡೊಂಬಲ'ವಾಗಿದ್ದ ಕಾಂಗ್ರೆಸ್ಸಿನ ಗರ್ಭದಲ್ಲಿ ಜನಿಸಿದ ಭಾರತೀಯ ಸಮಾಜವಾದಿ ಚಳವಳಿ ಬಹಳ ಕಾಲ ತನ್ನ ಸ್ವಂತ ಅಸ್ತಿತ್ವವನ್ನೂ, ಅಸ್ಮಿತೆಯನ್ನೂ ಸ್ಥಾಪಿಸಿಕೊಳ್ಳಲಾಗದೆ ಕಾಂಗ್ರೆಸ್ ಎಂಬ ಮಹಾಸಮಾಜದ 'ವಂಚಿತ'ರ ಗುಂಪಿನಂತೆಯೇ ಬೆಳೆದು, ಆ ಕಹಿ ಮನೋಭಾವದೊಂದಿಗೇ ಕಾಂಗ್ರೆಸ್ಸಿನಿಂದ ಹೊರ ಬಂತು. ಬಂದನಂತರ ಅಲ್ಲಿಂದ ಹೊತ್ತುಕೊಂಡು ಬಂದಿದ್ದ ಅನೇಕ ವೈಯುಕ್ತಿಕ ಹಾಗೂ ತಾತ್ವಿಕ ಸಂದಿಗ್ಧಗಳನ್ನೂ ತಮ್ಮದೇ ಸ್ವತಂತ್ರ ರಾಜಕಾರಣದ ಸ್ಥಾಪನೆಯ ಕುಲುಮೆಯಲ್ಲಿ ಕರಗಿಸಿಕೊಳ್ಳುವ ಮುನ್ನವೇ ಭಾರಿ ಚುನಾವಣಾ ಸೋಲನ್ನು ಅನುಭವಿಸಿ, ಆ ಹತಾಶ–ಗೊಂದಲದಲ್ಲಿ ಪಕ್ಷದ ಮೊದಲ ವಿಭಜನೆಯಾದದ್ದು. ಉದಾಹರಣೆಗೆ ನೆಹರೂ ಕುರಿತ ಲೋಹಿಯಾ ಹಾಗೂ ಜೆ.ಪಿ.ಯವರ ವೈಯಕ್ತಿಕ ನಿಲುವುಗಳು ರಾಜಕೀಯ ಸ್ವರೂಪ ಪಡೆದು, ಸಮಾಜವಾದಿ ಚಳವಳಿಯಲ್ಲಿ ಅನೇಕ ಅನಾಹುತಗಳಿಗೆ ಕಾರಣವಾಯಿತು.

ಹಾಗೇ ಕಾಂಗ್ರೆಸ್‌ನೊಳಗೇ ಹುಟ್ಟಿಕೊಂಡ ಸಮಾಜವಾದಿ ಬೀಜಗುಂಪು ರೂಪಿಸಿಕೊಂಡ ಮೂಲತಃ ಮಾರ್ಕ್ಸ್‌ವಾದಿ ತಾತ್ವಿಕ ವಿನ್ಯಾಸದೊಳಕ್ಕೆ ಗಾಂಧಿಯನ್ನು ಅನುಸಂಧಾನಿಸುವ ಪ್ರಯತ್ನ ಅನೇಕ ಅಸಾಧ್ಯ ತಾತ್ವಿಕ ರೂಪಕಗಳನ್ನು ಹುಟ್ಟುಹಾಕಿ, ಸಂಘಟನೆಯನ್ನು ಅಸಾಧ್ಯಗೊಳಿಸಿತು. ಸಮಾಜವಾದಿ ಕಾರ್ಯಕರ್ತನ ಒಂದು ಕಣ್ಣಲ್ಲಿ ಅನ್ಯಾಯದ ವಿರುದ್ಧ ಕ್ರೋಧದ ಕಣ್ಣೀರು ಮತ್ತು ಇನ್ನೊಂದು ಕಣ್ಣಲ್ಲಿ ಅನ್ಯಾಯಕ್ಕೊಳಗಾದವರ ಬಗೆಗಿನ ಕರುಣೆಯ ಕಣ್ಣೀರು ಇರಬೇಕೆಂಬ ಲೋಹಿಯಾರ ಪ್ರಸಿದ್ಧ ಘೋಷವಾಕ್ಯ, ವೈಯಕ್ತಿಕ ನೆಲೆಯಲ್ಲಿ ಸಾಕ್ಷಾತ್ಕಾರವಾಗಬೇಕಾದ ಹೋರಾಟ ತತ್ವ, ಸಾಮಾಜಿಕ ನೆಲೆಯಲ್ಲಿ ಅದನ್ನು ರೂಢಿಸಲು, ಕಷ್ಟಸಾಧ್ಯವಾದ ನಿರಂತರ ತರಬೇತಿ ಕಾರ್ಯಕ್ರಮಗಳು ಅಗತ್ಯ. ಆದರೆ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವ ತಾಕತ್ತನ್ನೇ ಗಳಿಸಿಕೊಳ್ಳದ ಲೋಹಿಯಾ ಸಮಾಜವಾದಿ ಚಳವಳಿ, ಬರೀ ಕಾಂಗ್ರೆಸ್ ವಿರೋಧಿ ಕ್ರೋಧದ ಬೆಂಕಿಯಾಗಿ ಉರಿದು ಆರಿ ಹೋಗಿದ್ದು ಸಹಜವೇ ಆಗಿದೆ. ನಗರ ಪ್ರದೇಶಗಳ ಕಾರ್ಯಕರ್ತರ ಬೌದ್ಧಿಕ ಪ್ರಜ್ಞೆ ಹಾಗೂ ಗ್ರಾಮಾಂತರ ಪ್ರದೇಶದ ಕಾರ್ಯಕರ್ತರ ನಡುವಣ ವಾಸ್ತವ ಪ್ರಜ್ಞೆಗಳ ನಡುವೆ ಪಕ್ಷ ಕಳೆದುಹೋದ ಸಾಧ್ಯತೆಯನ್ನು ನಾವು ಅಲ್ಲ ಗಳೆಯುವಂತಿಲ್ಲ.

ಕಾಗೋಡು ಹಾಗೂ ಸೊಂಡೂರು ಭೂ ಸತ್ಯಾಗ್ರಹಗಳನ್ನು ಸಮಾಜವಾದಿ ಹೋರಾಟಗಳೆಂದು ಕರೆಯಲಾಗುವುದಾದರೂ, ಈ ಹೋರಾಟಗಳನ್ನು ನಿಜವಾಗಿ ಆರಂಭಿಸಿದ್ದು ಸ್ಥಳೀಯ ರೈತ ಸಂಘಗಳು ಎಂಬುದನ್ನು ನಾವು ಮರೆಯಬಾರದು. ಅವು ತಮ್ಮ ಹೋರಾಟಗಳನ್ನು ತಾರ್ಕಿಕ ಅಂತ್ಯಗಳಿಗೆ ಒಯ್ಯಲಾಗದೆ, ಆಗ ಪ್ರಭುತ್ವ ವಿರೋಧಿ ಪಕ್ಷವಾಗಿ ಪ್ರಸಿದ್ಧವಾಗಿದ್ದ ಸಮಾಜವಾದಿ ಪಕ್ಷಕ್ಕೆ ನೇತೃತ್ವ ವಹಿಸಿಕೊಟ್ಟವಷ್ಟೇ. ಆದರೆ ದತ್ತಾಗಿ ಬಂದ ಈ ಹೋರಾಟಗಳ ಮೂಲಕ ಪಕ್ಷ, ಸಮಾಜವಾದಿ ಚಳವಳಿಯನ್ನು ಬೆಳೆಸಲು ವ್ಯವಸ್ಥಿತ ಪ್ರಯತ್ನಗಳನ್ನು ಮಾಡಿದ ಸೂಚನೆಗಳೇನೂ ನಮಗೆ ಸಿಗುವುದಿಲ್ಲ. ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಚಳವಳಿಯ ತವರು ಎನಿಸಿದ್ದ ಶಿವಮೊಗ್ಗ ಜಿಲ್ಲೆ ಇಂದು ಈ ಹಿಂದೆ ಇಲ್ಲಿ ಹೆಸರೇ ಇರದಿದ್ದ ಸಂಘ ಪರಿವಾರದ ಭದ್ರಕೋಟೆ ಯಾಗಿರುವುದನ್ನು ವಿವರಿಸುವುದಾದರೂ ಹೇಗೆ? ಸೊಂಡೂರು ಭೂ ಸತ್ಯಾಗ್ರಹದ ನೇತೃತ್ವವನ್ನು ರೈತ ಸಂಘದಿಂದ ಪಡೆದ ಸಮಾಜವಾದಿ ಪಕ್ಷ, ರೈತರಿಗೆ ಭೂಮಿ ಹಂಚಿಕೆಯಾಗುವ ವಿಧಿ ವಿಧಾನಗಳು ಆರಂಭವಾಗುವ ಹೊತ್ತಿಗೆ ಅಲ್ಲಿಂದ ಕಾಲ್ಕಿತ್ತಿತ್ತು. (ಚಳವಳಿ ನಡೆದಿದ್ದೂ ಬೆಂಗಳೂರು-ಶಿವಮೊಗ್ಗಗಳಿಂದ ಬಂದಿದ್ದ ಕಾರ್ಯಕರ್ತರ ಬಲದೊಡನೆ!) ಎಂದರೆ ಏನು ಹೇಳುವುದು? ಸದಾ ವಿರೋಧಾನಂದಿಗಳಾಗಿದ್ದ ಸಮಾಜವಾದಿಗಳು ಗುದ್ದಲಿ, ವೋಟು, ಸೆರೆಮನೆ(ರಚನಾತ್ಮಕ ಕೆಲಸ, ಚುನಾವಣಾ ರಾಜಕೀಯ, ಪ್ರತಿಭಟನೆ) ತಮ್ಮ ಪಕ್ಷದ ತ್ರಿರೂಪಿ ಕಾರ್ಯಕ್ರಮವೆಂದು ಹೇಳಿಕೊಂಡರೂ, ಪ್ರತಿಭಟನೆಗೆ ಪೂರಕವಾಗಿ ರಚನಾತ್ಮಕ ಕೆಲಸಗಳಲ್ಲಿ ಆಸಕ್ತಿಯನ್ನೇ ವಹಿಸದೇ ಅಂತಿಮವಾಗಿ ವೋಟುಗಳಿಂದಲೂ ವಂಚಿತರಾದರು.

ಸಿದ್ಧಾಂತ ಏನೇ ಇದ್ದರೂ, ಕಾಂಗ್ರೆಸ್‌ನೊಡನೆಯ ದಾಯಾದಿ ಮತ್ಸರವನ್ನು ತನ್ನ ಅಸ್ತಿತ್ವಕ್ಕೆ ಆಧಾರ ಮಾಡಿಕೊಂಡಂತೆ ಬೆಳೆದ ಸಮಾಜವಾದಿ ಚಳವಳಿ, ಕೊನೆಗೆ ತಾನುಳಿಯಲು 'ಕಾಂಗ್ರೆಸ್ಸೇತರವಾದ'ವನ್ನೂ ಸೃಷ್ಟಿಸಿಕೊಳ್ಳಬೇಕಾಯಿತು ಎಂಬುದನ್ನು ಸಮಾಜವಾದಿ

ಚಳವಳಿಯ ಇತಿಹಾಸದ ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿ ಗಮನಿಸಬೇಕು. ಹಾಗೇ, ಲೋಹಿಯಾ ಬದುಕಿದ್ದಾಗಲೇ ಈ ಕಾಂಗ್ರೆಸ್ಸೇತರವಾದದ ಮೊದಲ ಬಲಿ ಅವರ ಕಣ್ಣೆದುರಲ್ಲೇ ಬಿಹಾರದಲ್ಲಿನ ಸಂಯುಕ್ತ ಸಮಾಜವಾದಿ ಪಕ್ಷದ ನೇತೃತ್ವದ ಸಮ್ಮಿಶ್ರ ಸರ್ಕಾರವೇ ಆಗಿತ್ತು. ಬಿ.ಪಿ.ಮಂಡಲ್ ಎಂಬ ಸಮಾಜವಾದಿ ಸಂಸತ್ ಸದಸ್ಯ ರಾಜ್ಯದ ಮುಖ್ಯಮಂತ್ರಿ ಆಗುವ ಆಸೆಯಿಂದ ಪಕ್ಷದ ನೀತಿ ಸಂಹಿತೆಯನ್ನೇ ಉಲ್ಲಂಘಿಸಿ, ವಿಧಾನ ಪರಿಷತ್ ಸದಸ್ಯನಾಗಲು ಹವಣಿಸುವ ಮೂಲಕ ಅಂತಿಮವಾಗಿ ಪಕ್ಷವನ್ನು ಒಡೆದು ಸರ್ಕಾರದ ಪತನಕ್ಕೆ ಕಾರಣನಾದ. ಅಷ್ಟು ಸುಲಭವಾಗಿ ಶಿಥಿಲಗೊಳಿಸಿತ್ತು ಸಮಾಜವಾದದ ನೈತಿಕತೆಯನ್ನು, ಈ ಕಾಂಗ್ರೆಸ್ಸೇತರವಾದವೆಂಬ ಪಕ್ಷ ಉಳಿಸಿಕೊಳ್ಳುವ ಹತಾಶ ಯತ್ನ! ಇನ್ನು ಕಾಂಗ್ರೆಸ್ಸೇತರವಾದವನ್ನು ತಾತ್ವಿಕವಾಗಿ ವಿರೋಧಿಸಿದ ಸಮಾಜವಾದಿಗಳ ಒಂದು ಗುಂಪು (ಕೆಲವರ ಹೊರತಾಗಿ) ಅನತಿಕಾಲದಲ್ಲೇ ಕಾಂಗ್ರೆಸ್ಸಿನಲ್ಲಿ ವಿಲೀನವಾದದ್ದು ಸಮಾಜವಾದಿ ಚಳವಳಿಯ ಇನ್ನೊಂದು ವಿಪರ್ಯಾಸ!

ಇನ್ನು ಇದಾದ ಹತ್ತು ವರ್ಷಗಳ ನಂತರ ಮಾಜಿ ಸಮಾಜವಾದಿ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಜನತೆಯೇ ಕಟ್ಟಿದ್ದೆಂದು ಹೇಳಬಹುದಾದ ಜನತಾ ಪಕ್ಷ ಗಾಂಧಿ ಸಮಾಜವಾದದ ದೀಕ್ಷೆ ಪಡೆದೂ, ಮೂರೇ ವರ್ಷಗಳಲ್ಲಿ ವಿಘಟನೆಗೊಂಡು, ಭಾರತದ ರಾಜಕಾರಣದ ಅತಿ ದೊಡ್ಡ ಛಿದ್ರೀಕರಣಕ್ಕೆ ಮತ್ತು ಅದಕ್ಕಿಂತ ಮುಖ್ಯವಾಗಿ ಕೋಮುವಾದಿ ರಾಜಕಾರಣದ ಬಲವರ್ಧನೆಗೆ ಕಾರಣವಾಯಿತು. ಇದು, ನಾನು ನನ್ನ ಇನ್ನೊಂದು ಲೇಖನದಲ್ಲಿ ಹೇಳಿದಂತೆ, ಕೆಲವು ಸಮಾಜವಾದಿಗಳಲ್ಲಿ ಹೊಸ 'ಎಚ್ಚರ' ಮೂಡಿಸಿ; ಕಾಂಗ್ರೆಸ್ಸೇತರವಾದವನ್ನು ಅರ್ಧಕ್ಕೆ ಕೈ ಬಿಟ್ಟು, ಕಾಂಗ್ರೆಸ್‌ವಾದವನ್ನು ಪ್ರತಿಪಾದಿಸಲು ಪ್ರೇರೆಪಿಸಿತು! ಮುಖ್ಯವಾಗಿ ಲೋಹಿಯಾರ ಆಪ್ತ ಶಿಷ್ಯರಾದ ಮತ್ತು ಸಮಾಜವಾದಿ ಆಂದೋಲನದ ಕಾಂಗ್ರೆಸ್ ವಿರೋಧಿ ಹೋರಾಟಗಳಲ್ಲಿ ಅವರಿಗೆ ಬೆಂಬಲವಾಗಿ ನಿಂತಿದ್ದ ಮಧುಲಿಮೆಯೆ ಅವರೇ, ಬಲಪಂಥೀಯ ಕೋಮುವಾದಿ ರಾಜಕಾರಣದೆದುರು ಕಾಂಗ್ರೆಸ್ಸನ್ನು ಬೆಳೆಸುವ ಅಗತ್ಯ ಮತ್ತು ಮಹತ್ವದ ಮಾತುಗಳನ್ನಾಡಲಾರಂಭಿಸಿದರು... ಆ ಮೂಲಕ ಅವರು ಸಮಾಜವಾದಿ ಸಂಘಟನೆಯ ಆತ್ಯಂತಿಕ ವೈಫಲ್ಯವನ್ನೂ ಒಪ್ಪಿಕೊಳ್ಳಲಾರಂಭಿಸಿದರು. ಸಮಾಜವಾದಿ ಆಂದೋಲನದ ಸರಿ ಸುಮಾರು ಆರಂಭದಿಂದಲೂ ಇದ್ದ ಮತ್ತು ಸಮಾಜವಾದಿ ಚಳವಳಿಯ ಇತಿಹಾಸವನ್ನು ಒಬ್ಬ ಸಾಕ್ಷಿದಾರನಾಗಿಯೂ ಬರೆದಿರುವ ಲಿಮೆಯೆ, ತಮ್ಮ ಬದುಕಿನ ಕೊನೇ ದಿನಗಳಲ್ಲಿ ಸಮಾಜವಾದಿ ಪಕ್ಷದ ಅನಿವಾರ್ಯ ಅಂತ್ಯವನ್ನೂ ಮನಗಂಡಿದ್ದರು..

ಆದರೆ, ಹಾಗೆ ಮನಗಾಣದ ಎರಡನೇ ಸಾಲಿನ ನಾಯಕರು ತಮ್ಮ ರಾಜಕೀಯ ಅನುಕೂಲಗಳಿಗೆ ತಕ್ಕಂತೆ ವಿವಿಧ ಪಕ್ಷಗಳಲ್ಲಿ ಹಂಚಿ ಹೋದರು. ನಂತರದ ಗೊಂದಲಗಳಲ್ಲಿ ಜಾತಿ ಬಲಗಳಿದ್ದ ಕೆಲವು ನಾಯಕರು–ಉದಾ : ಲಾಲೂ ಮತ್ತು ಮುಲಾಯಂರಂತಹವರು– ತಮ್ಮದೇ ಪ್ರಾದೇಶಿಕ ಪಕ್ಷಗಳನ್ನು ಕಟ್ಟಿ ಕೊಂಡರು. ಈ ಪಕ್ಷಗಳಲ್ಲಿನ 'ಗೌಡಿಕೆ'ಯನ್ನು ಸಹಿಸಲಾರದೆ ಕೆಲವರು ಪಕ್ಷ ಬಿಟ್ಟು ಇನ್ನೆಲ್ಲಿಗೂ ಹೋಗಲಾರದ ಸ್ಥಿತಿ ತಲುಪಿ, ಕೊನೆಗೆ ಬಿಜೆಪಿ ಮೈತ್ರಿಕೂಟ ಸೇರಿದರು! ಹೀಗೆ ಭಾರತದಲ್ಲಿ ಸಮಾಜವಾದಿ ಆಂದೋಲನ ಭಾರತದ ಸರ್ವ ಪಕ್ಷಗಳಿಗೂ ತನ್ನ ಕೊಡುಗೆಯನ್ನು ನೀಡಿದೆ... ಆ ಮೂಲಕ ಭಾರತದ

ಸಮಾಜವಾದವೆಂದರೆ, ಹಾಕಿಕೊಂಡವರ ತಲೆಯ ಆಕಾರ ಪಡೆಯುವ ಕಾಂಗ್ರೆಸ್ ಟೊಪ್ಪಿಗೆ ಇದ್ದಂತೆ ಎಂದು ಈ ಆಂದೋಲನದ ಇತಿಹಾಸ ಬರೆದಿರುವ ಹ್ಯಾರಿಸ್ ವ್ರೊಫರ್ಡ್ ಎಂಬ ರಾಜಕೀಯ ಟೀಕಾಕಾರನ ಮಾತುಗಳನ್ನು ನಿಜಗೊಳಿಸಿದೆ!

-೨-

ಭಾರತದ ಸಮಾಜವಾದಿ ಆಂದೋಲನವನ್ನು ಹತ್ತಿರದಿಂದ ಮತ್ತು ವಸ್ತುನಿಷ್ಠವಾಗಿ ಅಭ್ಯಾಸ ಮಾಡಿದವರಿಗೆ ಇದೇನೂ ಅಸಹಜ ವೆನಿಸುವುದಿಲ್ಲ. ಸಮಾಜವಾದಿ ಪಕ್ಷವೆಂಬುದೇ ಈ ಹಿಂದೆ ಸೂಚಿಸಿದಂತೆ ಮೂಲತಃ ಕಾಂಗ್ರೆಸ್ ಪಕ್ಷದ ಉಪ ಪಕ್ಷವಾಗಿ ಆರಂಭವಾದದ್ದು. ಸ್ವಾತಂತ್ರ್ಯಪೂರ್ವ ಕಾಂಗ್ರೆಸ್ಸಿನೊಳಗೇ ಎದ್ದ ಯುವ ಜನರ ತಾತ್ವಿಕ ಬಂಡಾಯದ ಫಲವದು. ಅದು ಕೂಡಾ ಬಹಳ ಕಾಲ ಒಂದು ತಾತ್ವಿಕ ಸ್ಪಷ್ಟತೆ ಪಡೆದುಕೊಂಡಿರಲಿಲ್ಲ. ಆಗ ಇನ್ನೂ ಹಸಿ ಹಸಿ ನೆನಪಾಗಿದ್ದ ರಷ್ಯಾದ ಕ್ರಾಂತಿಯ ಸ್ಫೂರ್ತಿಯಿಂದಾಗಿ ಮೂಲತಃ ಮಾರ್ಕ್ಸವಾದಿಗಳಾಗಿದ್ದ ಇವರು, ಕಾರ್ಯಾಚರಣೆಯಲ್ಲಿ ಅಂದಿನ ಭಾರತದ ಕಮ್ಯೂನಿಷ್ಟ ಪಕ್ಷದ ವರಸೆಗಳನ್ನೊಪ್ಪದೆ ಕಾಂಗ್ರೆಸ್‌ನೊಳಗೇ ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಬಿತ್ತಲಾರಂಭಿಸಿದವರು. ಇವರ ನಾಯಕ ಜಯಪ್ರಕಾಶ ನಾರಾಯಣ. ಗಾಂಧೀಜಿಯ ಕಾಲು ಮುಟ್ಟಿ ನಮಸ್ಕರಿಸುವಷ್ಟು ಗಾಂಧಿ ವ್ಯಕ್ತಿತ್ವದ ಬಗ್ಗೆ ಗೌರವವುಳ್ಳವರಾಗಿದ್ದ ಇವರು, ಗಾಂಧೀಜಿಯ ರಾಜಕೀಯ ವಿಚಾರಧಾರೆಯ ಕಟ್ಟಾ ವಿರೋಧಿಯೂ ಆಗಿದ್ದರು! ಒಮ್ಮೆ ಕಮ್ಯೂನಿಷ್ಟರು ಜೆಪಿಯವರ ಈ ದ್ವಂದ್ವ ವ್ಯಕ್ತಿತ್ವದ ಉಪಯೋಗ ಪಡೆದು ಅವರ ಉಪ ಪಕ್ಷದ ಒಳಹೊಕ್ಕು ಮಾಡಿದ ಅವಾಂತರ ಗೊತ್ತಾದ ನಂತರವಷ್ಟೇ, ಈ ಉಪ ಪಕ್ಷ ಮಾರ್ಕ್ಸ್‌ವಾದ ಎಲ್ಲ ನೈತಿಕತೆಯನ್ನು ಮೀರಿ ನಿಂತದ್ದು ಎಂದು ಮನ ಗಂಡು, ಗಾಂಧಿವಾದದ ಕಡೆ ಸಹಾನುಭೂತಿ ಪರವಾದ ನಿಲುವು ತಳೆಯಲು ಸಾಧ್ಯವಾದದ್ದು. ಆ ಸಂದರ್ಭದಲ್ಲಿಯೇ ಜರ್ಮನಿಯಲ್ಲಿನ ತಮ್ಮ ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಫ್ಯಾಸಿಸ್ಟರು ಮತ್ತು ಕಮ್ಯೂನಿಷ್ಟರು– ಈ ಇಬ್ಬರ 'ಅನೈತಿಕ' ವರಸೆಗಳನ್ನು ಕಂಡಿದ್ದ ಡಾ. ರಾಮ ಮನೋಹರ ಲೋಹಿಯಾ, ಈ ಉಪ ಪಕ್ಷಕ್ಕೆ ತಾವು ಜರ್ಮನ್ ಸಮಾಜವಾದಿ ಅರ್ಥಶಾಸ್ತ್ರಜ್ಞರಾದ ಷೂಮೇಕರ್ ಮತ್ತು ಝೆಂಬಾರ್ಟ್ ಅವರಿಂದ ಕಲಿತಿದ್ದ ಮಧ್ಯಮ ಮಾರ್ಗದ ಸಮಾಜವಾದದ ಸೈದ್ಧಾಂತಿಕ ನೆಲೆ ಒದಗಿಸುವ ಪ್ರಯತ್ನ ಮಾಡಿದ್ದು. ಇದಕ್ಕೆ ಪೂರಕವಾಗಿ ಒದಗಿ ಬಂದದ್ದು ಆಗಿನ್ನೂ ಜೀವಂತ ಪ್ರಯೋಗದಲ್ಲಿದ್ದ ಗಾಂಧಿವಾದ.

ಹೀಗೆ ಭಾರತೀಯ ಸಮಾಜವಾದವೆಂಬುದು ಮಾರ್ಕ್ಸ್‌ವಾದ, ಐರೋಪ್ಯ ಸಮಾಜವಾದ ಮತ್ತು ಗಾಂಧಿವಾದಗಳೆಂಬ ಮೂರು ರಾಜಕೀಯ ವಿಚಾರಧಾರೆಗಳ ಮಿಶ್ರಣವಾಗಿ ಒಂದು ಪಕ್ಷವನ್ನು ಕಟ್ಟತೊಡಗಿತ್ತು. ಕಾಂಗ್ರೆಸ್‌ನೊಳಗಿನ ಈ 'ಕಾಂಗ್ರೆಸ್ ಸೋಷಲಿಸ್ಟ್' ಎಂಬ ಈ ಉಪ ಪಕ್ಷಕ್ಕೆ, ವಲ್ಲಭಭಾಯಿ ಪಟೇಲರ ನೇತೃತ್ವದ ಬಲ ಪಂಥೀಯ ಗುಂಪು ಕಾಂಗ್ರೆಸ್ಸ್ ಪಕ್ಷದ ಅಂಗರಚನೆಗೆ ಒಂದು ತಿದ್ದುಪಡಿ ತಂದು, ಪಕ್ಷದೊಳಗೊಂದು ಉಪ ಪಕ್ಷವಿರಲು ಸಾಧ್ಯವಿಲ್ಲದಂತೆ ಮಾಡಿ ತನ್ನ ಮಾತೃಪಕ್ಷದಿಂದ ಹೊರ ಹೋಗುವುದು ಅನಿವಾರ್ಯವೆನಿಸಿದಾಗಲೂ, ಅದು ರಾಜಕೀಯ ಪಕ್ಷವೊಂದರ ಯಾವ ಸ್ಪಷ್ಟ ಲಕ್ಷಣಗಳನ್ನು ಹೊಂದಿರಲಿಲ್ಲ! ಬಹಳಕಾಲ ಉಪ ಪಕ್ಷವಾಗಿ ಕೆಲಸ

ಮಾಡಿದ್ದುದರಿಂದ ಸಡಿಲ ಸಂಘಟನೆಯನ್ನಷ್ಟೇ ಹೊಂದಿದ್ದ ಈ ಪಕ್ಷ, ಒಂದು ಸ್ಪಷ್ಟ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿಲ್ಲ. ಈ ಎರಡೂ ಕಾರಣಗಳಿಂದಾಗಿ ೧೯೫೨ರ ಮೊದಲ ಮಹಾಚುನಾವಣೆಯಲ್ಲಿ ಹೀನಾಯವಾಗಿ ಸೋತ ನಂತರ ಆತ್ಮ ಪರಿವೀಕ್ಷಣೆಗಾಗಿ ಪಂಚಮಢಿ ಎಂಬಲ್ಲಿ ಸಮಾವೇಶಗೊಂಡಾಗಲೇ, ಈ ಪಕ್ಷ ತನ್ನ ಈ ಎರಡೂ ದೌರ್ಬಲ್ಯಗಳ ಬಗ್ಗೆ ಗಂಭೀರವಾಗಿ ಚಿಂತಿಸಿದ್ದು! ಹಿರಿಯ ನಾಯಕ ಆಚಾರ್ಯ ನರೇಂದ್ರದೇವ ಅವರ ಅನುಪಸ್ಥಿತಿಯಲ್ಲಿ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಾ. ರಾಮಮನೋಹರ ಲೋಹಿಯಾ ಪ್ರಸ್ತುತ ಪಡಿಸಿದ 'ಸಮಾಜವಾದ ತಾತ್ವಿಕ ಅಡಿಗಲ್ಲುಗಳು' (Doctrinal foundation of socialism) ಎಂಬ ಭಾಷಣವೇ ಭಾರತದ ಸಮಾಜವಾದಿ ಆಂದೋಲನಕ್ಕೆ ತನ್ನದೆನ್ನುವ ಒಂದು ಸ್ಪಷ್ಟ ವೈಚಾರಿಕ ಆಕೃತಿಯನ್ನು ನೀಡಿದ್ದು.

ಆದರೆ ಬಹುಬೇಗ ದಾಯಾದಿ ಮತ್ಸರದಲ್ಲೆಂಬಂತೆ ತನ್ನ ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲೇ ಮೈಮರೆತ ಸಮಾಜವಾದಿ ಆಂದೋಲನ–ವಿಶೇಷವಾಗಿ ಲೋಹಿಯಾ ಧಾರೆ–ಇದರ ರಚನಾತ್ಮಕ ಅಂಶಗಳ ಕಡೆ ಗಮನಕೊಟ್ಟಿದ್ದು, ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಹೋರಾಟದಲ್ಲಿ ಆಯಾಸಗೊಂಡಾಗ ಹೋಗಿ ತಾತ್ವಿಕ ವಿವೇಚನೆಯಲ್ಲಿ ತೊಡಗಲು, ಸ್ವತಃ ಲೋಹಿಯಾ ಪ್ರತಿಪಾದಿಸಿದ್ದ 'ಸಮಾಜವಾದಿ ಆಶ್ರಮ'ಗಳ ಕಲ್ಪನೆ ಬರೀ ಕಲ್ಪನೆಯಾಗಷ್ಟೇ ಉಳಿಯಿತು. ಹಾಗಾಗಿ ಈ ಸಮಾಜವಾದಿಗಳು ತಮ್ಮ ಈ 'ಹೋರಾಟ'ಗಳಿಂದಾಗಿ ಸೇರಿದ್ದು ಆಶ್ರಮಗಳನ್ನಲ್ಲ, ಸೆರೆಮನೆಗಳನ್ನಷ್ಟೇ– ಅದೂ ಇನ್ನಾವ ಪಕ್ಷದ ಹೋರಾಟಗಾರರೂ ಸೇರದಷ್ಟು ಬಾರಿ ಮತ್ತು ಅವಧಿಗಳವರೆಗೆ! ಹಾಗೆ ನೋಡಿದರೆ, ಇಂತಹ ಹೋರಾಟಗಳಲ್ಲಿ ಹೀಗೆ ಆಯಾಸಗೊಂಡವರಲ್ಲಿ ಕೆಲವರು ಪಕ್ಷವನ್ನೇ ಬಿಟ್ಟು ಹೋದರೆ, ಇನ್ನು ಕೆಲವರು ಪಕ್ಷ ರಾಜಕಾರಣವನ್ನೇ ತೊರೆದು ಹೋದರು.. ಹಾಗೆ ಪಕ್ಷ ರಾಜಕಾರಣವನ್ನು ತೊರೆದ ಮುಖ್ಯ ನಾಯಕರಲ್ಲೊಬ್ಬರಾದ ಜಯಪ್ರಕಾಶರು ಬಿಹಾರದ ಸೆಖೋದೇವೂರಾ ಎಂಬಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು. ಆದರದು ಸರ್ವೋದಯದ ಆಶ್ರಮವಾಗಿತ್ತು. ಅದು ಸರ್ವೋದಯ ಚಳವಳಿಯಂತೆಯೇ ಕ್ರಮೇಣ ಹಾಳು ಬಿದ್ದಿತೆಂಬುದು ಬೇರೆ ಮಾತು!

ಲೋಹಿಯಾ ಅವರೇನೋ ತಮ್ಮ ಹೋರಾಟದೊಂದಿಗೆ ತಾತ್ವಿಕ ಅನ್ವೇಷಣೆಗಳಲ್ಲೂ ತೊಡಗಿಕೊಂಡರು. ಇದರಿಂದಾಗಿ ರಾಷ್ಟ್ರಾದ್ಯಂತ ಅನೇಕ ಲೇಖಕರು–ಕಲಾವಿದರು–ಬುದ್ಧಿಜೀವಿಗಳು ಅದರೆಡೆಗೆ ಆಕರ್ಷಿತರಾದರು. ಅವರ 'ಇತಿಹಾಸ ಚಕ್ರ', 'ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ' ಮತ್ತು 'ರಾಜಕೀಯದ ಮಧ್ಯೆ ಬಿಡುವು' ಇಂತಹ ತಾತ್ವಿಕ ಅನ್ವೇಷಣೆಯ ವಿವಿಧ ಸ್ತರಗಳ ಪ್ರಯತ್ನಗಳು. ಆದರೆ ಈ ವಿಷಯದಲ್ಲಿ ಲೋಹಿಯಾರದ್ದು 'ಏಕವ್ಯಕ್ತಿ ಪ್ರದರ್ಶನ'ವಾಯಿತೇ ಹೊರತು, ಸಮಾಜವಾದಿ ಪಕ್ಷವೆಂಬುದು ಕಾಂಗ್ರೆಸ್ಸಿಗೆ ಒಂದು ರಾಜಕೀಯ ಪರ್ಯಾಯ ಒದಗಿಸುವ ಜನರ ಆಂದೋಲನವಾಗಿ ಬೆಳೆಯಲಾರದಾಯಿತು. ಬದಲಿಗೆ ಅದೊಂದು 'ಪ್ರತಿಭಟನೆ'ಯ ಹೆಸರಿನ ಕೈ ಬೆರಳೆಣಿಕೆಯ 'ಗಲಭೆಕೋರರ' ಪಕ್ಷವೆಂದೇ ಜನರ ಕಣ್ಣಲ್ಲಿ ದಾಖಲಾಗುತ್ತಾ ಹೋಯಿತು. ಇದರಿಂದಾಗಿ ಪಕ್ಷ ತನ್ನ ಜನಪರ ತಾತ್ವಿಕತೆಯ ಹೊರತಾಗಿಯೂ, ಆಯ್ಕೆಯಾದ ಅದರ ಕೆಲವೇ ಶಾಸಕರ ಜನಪರ ಶಾಸನಸಭಾ 'ಪ್ರದರ್ಶನ'ಗಳ ಹೊರತಾಗಿಯೂ, ಸೋಲಿನ ಮೇಲೆ ಸೋಲನ್ನು ಅನುಭವಿಸುತ್ತಾ ಹೋಯಿತು. ಇದರ ಪರಿಣಾಮವಾಗಿ ಪಕ್ಷ, ರಾಷ್ಟ್ರ ಮತ್ತು

ರಾಜ್ಯ ಮಟ್ಟಗಳಲ್ಲಿ ಪದೇ ಪದೇ ಹೋಳಾಗತೊಡಗಿತು. ಈ ಮಧ್ಯೆ ಕಾಂಗ್ರೆಸ್ ಪಕ್ಷ ಪದೇ ಪದೇ ತನ್ನ ಸಮಾಜವಾದಿ ನೀತಿ ಬದ್ಧತೆಯನ್ನು ಪುನರುಚ್ಚರಿಸುತ್ತಿದ್ದುದರಿಂದಲೂ, ಕಾಂಗ್ರೆಸ್ಸಿನ ಕಡೆ ವಲಸೆ ನಡೆದೇ ಇತ್ತು. ೧೯೬೦ರಲ್ಲಿ ಉತ್ತರಪ್ರದೇಶದ ಬುಲಂದ್‌ಷಹರ್ ಎಂಬಲ್ಲಿ ಸಮಾಜವಾದಿ ಕಾರ್ಯಕರ್ತರು ಮತ್ತು ರೈತರು ಸೇರಿ 'ಲೋಹಿಯಾ ಸಾಗರ' ಎಂಬ ಕಿರು ಜಲಾಶಯವೊಂದನ್ನು ನಿರ್ಮಿಸಿದ್ದರ ಹೊರತಾಗಿ, ಸಮಾಜವಾದಿಗಳು 'ರಚನಾತ್ಮಕ' ಎನ್ನಬಹುದಾದ ಯಾವ ಚಟುವಟಿಕೆಯನ್ನು ಮಾಡಿದಂತೆ ತೋರುವುದಿಲ್ಲ. ಕೊನೇ ಪಕ್ಷ ತನ್ನ ಸಂಘಟನೆಗಾಗಿ ಒಂದು ಕೇಂದ್ರ ಕಾರ್ಯಾಲಯದ ಕಟ್ಟಡವೊಂದನ್ನೂ ಅದು ಕಟ್ಟಿಕೊಳ್ಳಲಾಗಲಿಲ್ಲ. ಹಾಗಾಗಿಯೇ ಶುದ್ಧ ಅಲೆಮಾರಿಗಳ ಪಕ್ಷದಂತಿದ್ದ ಸಮಾಜವಾದಿ ಪಕ್ಷ ಇಂದು ಭಾರತದ ರಾಜಕಾರಣದಿಂದಾಗಿಯೇ ಕಾಣೆಯಾಗಿದೆ. ಹಾಗಾಗಬಾರದೆಂದು ತಮ್ಮ ಬದುಕಿನ ಕೊನೇ ದಿನಗಳಲ್ಲಿ, ನಾನು ಈ ಹಿಂದೆಯೇ ತಿಳಿಸಿದಂತೆ, ಅದರ ಇಬ್ಬರು ಮುಖ್ಯ ನಾಯಕರಾದ ಲೋಹಿಯಾ ಮತ್ತು ಜಯಪ್ರಕಾಶರು ಹತ್ತು ವರ್ಷಗಳ ಅವಧಿಯಲ್ಲಿ–೧೯೬೭ ಮತ್ತು ೧೯೭೭ರಲ್ಲಿ–ಕಾಂಗ್ರೆಸ್ಸೇತರವಾದದ ಎರಡು ದೊಡ್ಡ ರಾಜಕೀಯ ತಂತ್ರ ಗಳನ್ನು ರೂಪಿಸಿದವರಾದರೂ!

ಇಷ್ಟಾದರೂ ಸಮಾಜವಾದದ ಸೆಳೆತ ಭಾರತೀಯ ಸಮಾಜದಲ್ಲಿ ಕಡಿಮೆಯಾದಂತಿಲ್ಲ. ಜಾಗತೀಕರಣ, ಒಂದು ಜನವರ್ಗವನ್ನು ಬಲಿ ತೆಗೆದುಕೊಂಡೇ ಇನ್ನೊಂದು ಜನವರ್ಗದ ಅಪಾರ ಸಿರಿವಂತಿಕೆಗೆ ಕಾರಣವಾಗುತ್ತಿರುವ (ಇದನ್ನೇ ನವವಸಾಹತುಶಾಹಿ ಎನ್ನುವುದು) ಕ್ರಮೇಣ ಸ್ಪಷ್ಟವಾಗುತ್ತಿದ್ದಂತೆ, ಸಮಾಜವಾದದ ಬಗ್ಗೆ ಜನರಲ್ಲಿ ಮತ್ತೆ ಕುತೂಹಲ ಹುಟ್ಟುತ್ತಿದೆ. ಆದರೆ ಈ ಸೆಳೆತ ಮತ್ತು ಕುತೂಹಲಗಳನ್ನೂ ಅರ್ಥಪೂರ್ಣಗೊಳಿಸುವಂತಹ ಒಂದು ಸಂಘಟನೆಯಲ್ಲಿಯೇ ಇಂದು ಇಲ್ಲವಾಗಿದೆ. ಹಾಗೆ ನೋಡಿದರೆ ಸಮಾಜವಾದದ ಪುನರುಜ್ಜೀವನಕ್ಕೆ ಇಂದು ಹೊಸ ಅವಕಾಶವೊಂದು ತಾನಾಗಿ ರೂಪುಗೊಂಡಿದೆ. ಕಾಂಗ್ರೆಸ್ ಪೂರ್ವಾಶ್ರಮದ ನೆನಪುಗಳ ಭಾರಗಳಿಂದ ಮುಕ್ತರಾದ ಹೊಸ ತಲೆಮಾರಿನ ಸಮಾಜವಾದಿಗಳು, ಸಮಾಜವಾದವನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಪುನರ್ರೂಪಿಸುವ ಅವಕಾಶ ಹೊಂದಿದ್ದಾರೆ. ಅದರ ತಂತ್ರಜ್ಞಾನ, ಆಡಳಿತ, ಜಾತಿ, ಭಾಷೆ ಇನ್ನಿತರ ನೀತಿಗಳನ್ನು ಹೊಸ ಸಂದರ್ಭಕ್ಕೆ ತಕ್ಕಂತೆ ಪುನರ್ ನಿರೂಪಿಸುವ 'ಸ್ವಾತಂತ್ರ್ಯ' ಅವರಿಗಿದೆ. ಮುಖ್ಯವಾಗಿ ಸಮಾಜವಾದ ಪ್ರತಿಪಾದಿಸಿದ ಸರಳ ಸಭ್ಯ ಜೀವನ ಮಟ್ಟದ ಮಧ್ಯಮ ಮಾರ್ಗವನ್ನು ಅದು ಇಂದಿನ ಹೊಸ ಆರ್ಥಿಕ ಸಂದರ್ಭದಲ್ಲಿ ವ್ಯವಹಾರಿಕವೆನಿಸುವ ರೀತಿಯಲ್ಲಿ ನಿರ್ದಿಷ್ಟಕರೀಸಬೇಕಿದೆ. ಲೋಹಿಯಾ ಅವರು ಅರವತ್ತರ ದಶಕದ ಆರ್ಥಿಕತೆಯ ಹಿನ್ನೆಲೆಯಲ್ಲಿ, ಅಸಮಾನತೆಯ ಅಂತರ ಹತ್ತುಪಟ್ಟಿಗಿಂತ ಹೆಚ್ಚಿರಬಾರದು ಎನ್ನುವ ಗರಿಷ್ಠ ಸಾಧ್ಯ ಸಮಾನತೆಯ ಸೂತ್ರದ ಆಧಾರದ ಮೇಲೆ ಸರಳ ಸಭ್ಯ ಜೀವನ ಮಟ್ಟವನ್ನು ನಿರ್ದಿಷ್ಟೀಕರಿಸಿದ್ದರು. ಆದರೆ ಅದು ಕೂಡಾ ಬಹಳ ಜನರಿಗೆ ಅಂದು ವ್ಯವಹಾರಿಕ ಅನ್ನಿಸಲಿಲ್ಲ. ಏಕೆಂದರೆ ಅದು ಸಾಮಾನ್ಯ ಮನುಷ್ಯನೊಬ್ಬನ ಸುಖದ ಇಚ್ಛೆಯ ಎಲ್ಲೆಗಳನ್ನು ಗುರುತಿಸಿರಲಿಲ್ಲ ಮತ್ತು ಆ ಇಚ್ಛೆಯನ್ನು ನಿಯಂತ್ರಿಸಬಲ್ಲ ರಾಜಕೀಯ ಶಕ್ತಿಯನ್ನು ಸಮಾಜವಾದ ಸಂಘಟನೆ ಗಳಿಸಿಕೊಂಡಿರಲಿಲ್ಲ.

ಈಗಲಾದರೋ ಸಮಾನತೆಯ ಅಂತರ, ಸಾವಿರ ಪಟ್ಟನ್ನು ಮೀರಿ ಹೋಗಿದೆ!

ಲೋಹಿಯಾ ಕಾಲದಲ್ಲಿ ಕೆಲವರಲ್ಲಾದರೂ ಇನ್ನೂ ವಿಶ್ವಾಸ ಉಳಿಸಿಕೊಂಡಿದ್ದ ಗಾಂಧಿವಾದದ ಸರಳ ಜೀವನದ ಆದರ್ಶ ಇಂದು ಅಪ್ರಸ್ತುತವೆನಿಸಿಕೊಂಡಿದೆ. ಮಾಹಿತಿ ತಂತ್ರಜ್ಞಾನದ ಸ್ಫೋಟ ಹಲವಾರು ನೆಲೆಗಳಲ್ಲಿ ಕೆಲಸ ಮಾಡುತ್ತಾ, ಸಮಾಜದ ಲೌಕಿಕ ನಿರೀಕ್ಷೆಗಳ ಮಟ್ಟವನ್ನೂ ಹಲವು ಪಟ್ಟು ಹೆಚ್ಚಿಸಿದೆ. ಇನ್ನು ಸಾಮಾಜಿಕ ನ್ಯಾಯದ ಆಂದೋಲನವೂ ಈ ವರ್ಷಗಳಲ್ಲಿ ಚೈತನ್ಯ ಶಾಲಿಯಾಗಿ ಬೆಳೆದು, ಇದರಿಂದಾಗಿ ಪರಿಶಿಷ್ಟರೂ ಸೇರಿದಂತೆ ಸಮಾಜದ ಶೂದ್ರ ಜಾತಿಗಳು ಗಣನೀಯ ಸಾಮಾಜಿಕ ಚೈತನ್ಯವನ್ನು ಪಡೆದುಕೊಂಡು, ರಾಜಕಾರಣದಲ್ಲಿ ಸಾಕಷ್ಟು ಆಕ್ರಮಣಕಾರಿ ಪಾತ್ರವನ್ನೇ ವಹಿಸುತ್ತಿವೆ. ಇಂತಹ ಹೊಸ ಸಾಮಾಜಿಕ-ಆರ್ಥಿಕ ಸಂಕೀರ್ಣತೆಗಳಲ್ಲಿ, ಸಮಾಜವಾದ ತನ್ನ ಹೊಸ ದಿಗಂತಗಳನ್ನು ಕಂಡುಕೊಳ್ಳಬೇಕಿದೆ. ಹಾಗೆ ಕಂಡುಕೊಂಡ ಹೊಸ ಎಲ್ಲೆಗಳಲ್ಲೇ ಸಮಾಜವಾದಿಗಳೆನಿಸಿ ಕೊಂಡವರು ತಮ್ಮ ಜೀವನ ಶೈಲಿಯನ್ನು ರೂಢಿಸಿಕೊಂಡು, ಅದರ ಚೆಲುವನ್ನೇ ಒಂದು ಹೊಸ ಮೌಲ್ಯವೆಂಬಂತೆ ಪ್ರಚುರ ಪಡಿಸುವಂತಹ ಸಾಂಸ್ಕೃತಿಕ ಆಂದೋಲನವನ್ನಾಗಿ, ಹೊಸ ಸಮಾಜವಾದಿ ಆಂದೋಲನವನ್ನು ಕಟ್ಟಬೇಕಾಗಿದೆ. ಮುಖ್ಯವಾಗಿ ಕುಟುಂಬವೊಂದರ ಆಸ್ತಿ ಮತ್ತು ಆದಾಯ ಮಿತಿಗಳ ನಿರ್ಧಾರಗಳೊಂದಿಗೆ ಈ ಕೆಲಸ ಆರಂಭವಾಗಬೇಕಿದೆ. ಅದರ ಆಧಾರದ ಮೇಲೆ ಸಾಮಾಜಿಕ ನ್ಯಾಯ ಮೀಮಾಂಸೆಯನ್ನು ಮನಾರಚಿಸಬೇಕಿದೆ. ಈ ಮೀಮಾಂಸೆ ಮುಖ್ಯವಾಗಿ ಜಾಗತೀಕರಣ ಸೃಷ್ಟಿಸಿರುವ 'ಸುಖ'ದ ಕಲ್ಪನೆಯ ನಿಜತ್ವವನ್ನು ಶೋಧಿಸಬಲ್ಲ ಪಾರಮಾರ್ಥಿಕತೆಯನ್ನು ಮೈಗೂಡಿಸಿಕೊಳ್ಳಬೇಕಿದೆ. ಇಲ್ಲದೇ ಹೋದಲ್ಲಿ, ಜಾತಿ, ಭಾಷೆ, ಆಡಳಿತ ಮತ್ತು ತಂತ್ರಜ್ಞಾನಗಳನ್ನು ಕುರಿತ ನಮ್ಮ ಹಳೆಯ ನೀತಿಗಳನ್ನು ಪುನರ್ ವಿಮರ್ಶಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ.

ಈ ವಿಷಯಗಳನ್ನು ಕುರಿತಂತೆ, ಸಮಾಜವಾದ ಹಿನ್ನೆಲೆಗೆ ಸರಿದ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದಿರುವ ಎಲ್ಲ ಚರ್ಚೆಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸಿ, ಸಮಾಜವಾದವನ್ನು ಹೊಸಕಾಲದ ಮಧ್ಯಮ ಮಾರ್ಗವನ್ನಾಗಿ ಹೇಗೆ ಜನರ ಕಣ್ಣಲ್ಲಿ ವ್ಯಾವಹಾರಿಕವೂ ಹೌದೆನ್ನುವ ರೀತಿಯಲ್ಲಿ ಪ್ರಸ್ತುತ ಪಡಿಸಬಹುದು ಎಂಬುದರ ರೂಪು ರೇಷೆಗಳನ್ನು ಸಿದ್ಧ ಪಡಿಸಬೇಕಿದೆ. ಅದು ಮುಖ್ಯವಾಗಿ, ಮುಕ್ತ ಮಾರುಕಟ್ಟೆಯ ಆರ್ಥಿಕತೆ ಸೃಷ್ಟಿಸುತ್ತಿರುವ ಆಸ್ಫೋಟನಕಾರಿ ಅಸಮಾನತೆಯ, ಅಪರಾಧಗಳ, ಅಶ್ಲೀಲತೆಯ ಹಾಗೂ ಅವನತಿಯ ಸಮಾಜಕ್ಕೆ ಒಂದು ನೈತಿಕ ಪರ್ಯಾಯವಾಗಿರುವಂತೆ ನೋಡಿಕೊಳ್ಳಬೇಕಿದೆ. ಉದಾಹರಣೆಗೆ, ಇಂದಿನ ಆರ್ಥಿಕತೆಯಲ್ಲಿ ತಿಂಗಳಿಗೆ ಪ್ರತಿ ಕುಟುಂಬಕ್ಕೂ ಹತ್ತು ಸಾವಿರ ರೂಪಾಯಿಗಳ ಆದಾಯವಿಲ್ಲದೆ, ಯಾರಾದರೂ ಒಂದು ಲಕ್ಷಕ್ಕಿಂತ ಹೆಚ್ಚಿನ ಆದಾಯಗಳಿಸುವುದು ಮತ್ತು ಅಂತಹ ವ್ಯವಸ್ಥೆ ಇರುವುದು ಅನೈತಿಕ ಎಂಬ ಸಾಂಸ್ಕೃತಿಕ ಎಚ್ಚರವನ್ನು ಪ್ರಚೋದಿಸುವ ರೀತಿಯಲ್ಲಿ ಈ ಆಂದೋಲನವನ್ನು ಆರಂಭಿಸಬೇಕಿದೆ. ನೇರವಾಗಿ ಹೇಳುವುದಾದರೆ, ಹೊಸ ಸಮಾಜವಾದವೆಂಬುದು ರೂಪುಗೊಳ್ಳುವುದಾದರೆ, ಅದೊಂದು ಹೊಸ ನೈತಿಕ ಆಂದೋಲನವಾಗಿಯೇ ಆರಂಭವಾಗಬೇಕಿದೆ. ಇದಕ್ಕೆ ಸದ್ಯಕ್ಕೆ ಪಕ್ಷದ ಅಗತ್ಯವಿಲ್ಲ. ಮೊದಲು ಈ ಎಲ್ಲ ವಿಷಯಗಳ ಬಗ್ಗೆ ಚರ್ಚಿಸಲು, ಸಹಮತ ಮೂಡಿಸಲು ಒಂದು ಅಧ್ಯಯನದ ವೇದಿಕೆಯ ಅಗತ್ಯವಿದೆ. ಸಮಾಜವಾದವನ್ನು ಗಾಂಧಿವಾದದ ಹೆಸರಲ್ಲಾಗಲಿ, ಸರ್ವೋದಯದ ಹೆಸರಲ್ಲಾಗಲಿ, ಹೊಸ ಸಮಾಜವಾದದ

ಹೆಸರಲ್ಲಾಗಲಿ ಪುನರುಜ್ಜೀವನಗೊಳಿಸ ಬಯಸುವವರು. ಮೊದಲು ಇಂತಹ ವೇದಿಕೆಯೊಂದರ ಅನಿವಾರ್ಯತೆಯನ್ನು ಮನಗಂಡು, ಅದನ್ನು ರೂಪಿಸುವ ಕಡೆ ಪ್ರಯತ್ನ ಗಳನ್ನು ಆರಂಭಿಸಬೇಕಿದೆ.

('ಉರಿವ ಪಂಜು': ಕೆ.ರಾಮದಾಸ್ ಅವರ ಸ್ಮರಣ ಸಂಪುಟಕ್ಕಾಗಿ ಬರೆದ ಲೇಖನ, 'ಸಂವಾದ'ದ ೨೦೦೮ರ ಸೆಪ್ಟಂಬರ್ ಸಂಚಿಕೆಯಲ್ಲಿ ಪ್ರಕಟ)

ಒಂದು ಸಂದರ್ಶನ:

ಹೊಸ ಸಮಾಜವಾದ ಇಂದಿನ ಅಗತ್ಯ

(ಸಾಗರದ 'ಚಾರ್ವಾಕ'ದ ವಾರ್ಷಿಕ ಸಂಚಿಕೆಗಾಗಿ ಎಚ್.ಬಿ. ರಾಘವೇಂದ್ರ ಹಾಗೂ ಎನ್.ಎಮ್. ಕುಲಕರ್ಣಿಯವರು ನಡೆಸಿದ ಸಂದರ್ಶನ)

ಕರ್ನಾಟಕದ ಕಳೆದ ಮೂರು ದಶಕದ ಸರಿ ಸುಮಾರು ಎಲ್ಲ ಪ್ರಮುಖ ಚಳುವಳಿಗಳಲ್ಲಿ ನೀವು ತೊಡಗಿಕೊಂಡವರು. ಅದು ಸಮಾಜವಾದಿ ಚಳುವಳಿಯಾಗಿರಬಹುದು, ರೈತ ಚಳುವಳಿಯಾಗಿರಬಹುದು, ದಲಿತ ಚಳುವಳಿಯಾಗಿರಬಹುದು ಅಥವಾ ಭಾಷಾ ಚಳುವಳಿಯಾಗಿರಬಹುದು. ಈ ಚಳುವಳಿಗಳಿಂದ ನೀವು ಆಕರ್ಷಿತರಾದದ್ದು ಹೇಗೆ? ಅದರ ಹಿನ್ನಲೆ ಸ್ವಲ್ಪ ವಿವರಿಸಿ.

ಮೊದಲನೆಯದಾಗಿ ನಾನು ಕರ್ನಾಟಕದ ಈ ಎಲ್ಲ ಚಳುವಳಿಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದೆ ಅಂತ ಹೇಳಲಾರೆ. ಏಕೇಂದ್ರೆ ನಾನು ಒಬ್ಬ ಸರ್ಕಾರಿ ನೌಕರನಾಗಿದ್ದೆ. ಆದರೆ ಎಲ್ಲಾ ಚಳುವಳಿಗಳ ಜೊತೆ ನನ್ನ ಸಂಪರ್ಕವಿತ್ತು. ನನ್ನ ಒಳ್ಳೆಯ ಸ್ನೇಹಿತರು ಆ ಚಳುವಳಿಗಳಲ್ಲಿದ್ದರು. ಒಬ್ಬ ಸಮಾಜವಾದಿಯಾಗಿ ಅವರ ಒಡನಾಡಿಯಾಗಿ ಆ ಚಳುವಳಿಗಳ ಕುರಿತು ನಾನು ವಿಮರ್ಶೆ ಮಾಡ್ತಿದ್ದೆ. ಈ ಕಾರಣದಿಂದಾಗಿ ಚಳುವಳಿಗಳಲ್ಲಿ ತೊಡಗಿದ ನನ್ನ ಸ್ನೇಹಿತರು ನನ್ನ ಅಭಿಪ್ರಾಯಗಳನ್ನು ಕೇಳ್ತಾಯಿದ್ದರು. ಅವರ ಅಧ್ಯಯನ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ಅವರ ಸಭೆಗಳಲ್ಲಿ ವಿಶೇಷ ಆಹ್ವಾನಿತನಾಗಿ ನಾನು ಭಾಗವಹಿಸ್ತಾ ಇದ್ದೆ. ಮುಖ್ಯವಾಗಿ ನಾನು ರೈತ ಚಳುವಳಿ, ದಲಿತ ಚಳುವಳಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದೆ ಅಂತ ಹೇಳಬಹುದು. ಭಾಷಾ ಚಳುವಳಿಯ ಬಗ್ಗೆ ನಾನು ವ್ಯಾಪಕವಾಗಿ ಬರೆದಿರುವೆನಾದರೂ, ಅದರೊಂದಿಗೆ ನನ್ನ ಸಂಬಂಧ ಅಷ್ಟಾಗಿ ಇರಲಿಲ್ಲ. ಕಾರಣ, ನನ್ನ ಅಭಿಪ್ರಾಯದಲ್ಲಿ ಅದು ಯಾವುದೇ ತಾತ್ವಿಕತೆ ಇಲ್ಲದೆ, ಬಹು ಸ್ಥೂಲವಾದ ಭಾಷಾಭಿಮಾನವೊಂದನ್ನೇ–ಅದೂ ಅನ್ಯಭಾಷಾ ಅಸಹಿಷ್ಣುತೆಯನ್ನು ಪೋಷಿಸುತ್ತಾ–ಏಕೈಕ ಕಾರ್ಯಕ್ರಮವನ್ನಾಗಿ ಮಾಡಿಕೊಂಡು, ತುಂಬಾ ಒರಟಾದ ಚಳುವಳಿಯಾಗಿ ಬೆಳೆಯತೊಡಗಿದ್ದುದು.

ಸಮಾಜವಾದಿ ಚಳುವಳಿಯಲ್ಲಿ ನಾನು ತೊಡಗಿಕೊಂಡಿದ್ದು ಕೂಡಾ ಅದರ ಅಂತಿಮ ಘಟ್ಟದಲ್ಲಿ, ೭೦ರ ದಶಕದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ. ಅದೊಂದು ಆಕಸ್ಮಿಕ ಎನ್ನಬಹುದು. ಡಾ॥ ರಾಮಮನೋಹರ ಲೋಹಿಯಾರವರ "ರಾಜಕೀಯದ ಮಧ್ಯ ಬಿಡುವು" ಪುಸ್ತಕ ಓದಿ ಅದರಿಂದ ಪ್ರಭಾವಿತನಾಗಿ. ರಾಜಕೀಯ ಅಂದರೆ ಕೇವಲ ಚುನಾವಣಾ ರಾಜಕೀಯ ಅಂತ ತಿಳಿದಿದ್ದ ನನಗೆ ಆ ಪುಸ್ತಕ ಓದಿದ ನಂತರ ರಾಜಕೀಯದ

ಆಳ, ವಿಸ್ತಾರ ಅರಿವಿಗೆ ಬಂತು. ನಂತರ ಕುತೂಹಲಿತನಾಗಿ ಅವರ ರಾಜಕೀಯ ದರ್ಶನದ ಇತರ ಪುಸ್ತಕಗಳನ್ನು ಓದತೊಡಗಿದೆ. ಹೀಗೆ ನಾನು ತಾತ್ವಿಕ ಕುತೂಹಲದಿಂದ ಸಮಾಜವಾದಿ ಚಳುವಳಿಯ ಸಂಪರ್ಕಕ್ಕೆ ಬಂದವನು.

ನಾನಾಗ ದೆಹಲಿಯ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದೆ. ತುರ್ತು ಪರಿಸ್ಥಿತಿಯ ದಿನಗಳವು. ಅಕಸ್ಮತ್ತಾಗಿ ತುರ್ತು ಪರಿಸ್ಥಿತಿ ವಿರೋಧಿ ಗುಂಪಿನ ಸಂಪರ್ಕಕ್ಕೆ ಬಂದ ನಾನು, ಅದರ ಚಟುವಟಿಕೆಗಳಲ್ಲಿ ಭಾಗವಹಿಸಿದೆ. ಅದರ ಭಾಗವಾಗಿಯೇ ಜೆಪಿಯವರ 'ಸೆರಮನೆ ದಿನಚರಿ'ಯನ್ನು ಕನ್ನಡಕ್ಕೆ ಅನುವಾದಿಸಿದೆ. ಇದರಿಂದಾಗಿ ಕರ್ನಾಟಕದ ಅನೇಕ ಸಮಾಜವಾದಿಗಳ ಸಂಪರ್ಕ ಏರ್ಪಟ್ಟಿತು. ಮುಖ್ಯವಾಗಿ ದೇವನೂರ ಮಹಾದೇವ, ರಾಜಶೇಖರ ಕೋಟಿ, ನೆಲಮನೆ ದೇವೇಗೌಡ, ಎಂ.ಡಿ.ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶ್, ಕೆ.ರಾಮದಾಸ್, ಪ.ಮಲ್ಲೇಶ್, ಗೋವಿಂದಯ್ಯ ಇತ್ಯಾದಿ. ಇವರೆಲ್ಲ ಅಂದಿನ ಸಮಾಜವಾದಿಗಳಲ್ಲೇ ಕಿಶನ್ ಪಟ್ನಾಯಕ್ ಧಾರೆ ಅಂತ ಒಂದು ಗುಂಪೇನಿತ್ತು ಅದರ ಜೊತೆಗೆ ಗುರುತಿಸಿಕೊಂಡವರು. ಅದು ಅಧಿಕೃತ ಸಮಾಜವಾದಿ ಪಕ್ಷ ೧೯೭೭ರಲ್ಲಿ ಜನತಾ ಪಕ್ಷದಲ್ಲಿ ಲೀನವಾಗಿ ಹೋದ ನಂತರ ಸಮಾಜವಾದವನ್ನ ಪುರ್ನನಿರೂಪಿಸೋ ಮತ್ತು ಆ ಮೂಲಕ ಸಮಾಜವಾದಿ ಚಳುವಳಿಯನ್ನ ಪುರ್ನಸಂಘಟಿಸೋ ಪ್ರಯತ್ನ ಮಾಡ್ತಾ ಇತ್ತು. ಇದು ಸಹಜವಾಗಿಯೇ ನನ್ನನ್ನ ಆಕರ್ಷಿಸಿತು.

ಲೋಹಿಯಾರ ಆಪ್ತ ಶಿಷ್ಯರಲ್ಲೊಬ್ಬರಾದ ಕಿಷನ್ ಸಮಾಜವಾದಿಗಳಲ್ಲಿ ಅಪರೂಪವೆನಿಸತೊಡಗಿದ್ದ ಶಿಸ್ತು ಮತ್ತು ಸರಳ ಬದುಕಿನ ಪ್ರಾಮಾಣಿಕ ಮನುಷ್ಯ. ಇವರ ಸ್ಫೂರ್ತಿಯಲ್ಲಿ ನಾನು ೧೯೭೮ರಲ್ಲಿ ಹಾಸನದಲ್ಲಿ ತರುಣ ಲೋಹಿಯಾವಾದಿಗಳ ಸಮ್ಮೇಳನವೊಂದನ್ನು ಆಯೋಜಿಸಿದೆ. ಹಾಸನ ಆಗ ಹೊಸ ತಲೆಮಾರಿನ ಸಮಾಜವಾದಿಗಳ ಕೇಂದ್ರವಾಗಿತ್ತು. ಮಂಜುನಾಥ ದತ್ತ, ಕೆ.ಟಿ.ಶಿವಪ್ರಸಾದ್, ವೆಂಕಟೇಶಮೂರ್ತಿ ಮುಂತಾದವರಿದ್ದ ಈ ಗುಂಪೇ ಮುಂದೆ ಕರ್ನಾಟಕದ ರೈತ ಚಳುವಳಿಗೆ ಯುವಶಕ್ತಿಯ ಬೆನ್ನೆಲುಬನ್ನು ಒದಗಿಸಿದ್ದು. ನಂತರ ನಾನು ೧೯೮೦ರ ಸುಮಾರಿಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಸಮಾಜವಾದಿ ಸಮ್ಮೇಳನವೊಂದನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಸಮ್ಮೇಳನಕ್ಕೆ ದೇಶದ ಹಲವಾರು ರಾಜ್ಯಗಳಿಂದ ಸಮಾಜವಾದಿಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿದ್ದರು. ಸಮಾಜವಾದಿ ಚಳುವಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಪುನಶ್ಚೇತನ ನೀಡುವ ಉದ್ದೇಶದಿಂದ ಈ ಸಮ್ಮೇಳನವನ್ನು ಮಾಡಿದ್ದು. ಇದರಲ್ಲಿ ಕರ್ನಾಟಕದ ಸಮಾಜವಾದಿ ಚಿಂತಕರು, ಹೋರಾಟಗಾರರೆನಿಸಿದ್ದ ಪ್ರೊ॥ ನಂಜುಂಡಸ್ವಾಮಿ, ಲಂಕೇಶ್, ಅನಂತಮೂರ್ತಿ, ರಾಮದಾಸ್, ತೇಜಸ್ವಿ, ಮೊದಲಾದವರೆಲ್ಲ ಭಾಗವಹಿಸಿದ್ದರು. ಆಗ ನಡೆಯುತ್ತಿದ್ದ ದಲಿತ ಜಾಥಾವೊಂದರಲ್ಲಿ ಭಾಗವಹಿಸುತ್ತಾ ಬೆಂಗಳೂರಿಗೆ ಬಂದಿದ್ದ ದೇವನೂರ ಮಹಾದೇವ ಮತ್ತು ಬಿ.ಕೃಷ್ಣಪ್ಪ ಸೇರಿದಂತೆ ದಲಿತ ಚಳುವಳಿಯ ಅನೇಕ ಹಿರಿಯ ನಾಯಕರೂ ಈ ಸಮ್ಮೇಳನಕ್ಕೆ ಸಾಕ್ಷಿಯಾದರು. ಜೊತೆಗೆ ರಾಚಪ್ಪ ಬೆಟ್ಸೂರ್, ರಾಚಪ್ಪ ಹಡಪದ್, ವೀರಣ್ಣ ತಿಮ್ಮಾಜಿ ಮುಂತಾದ ಲೋಹಿಯಾ ಕಾಲದ ಸಮಾಜವಾದಿ ಕಾರ್ಯಕರ್ತರು ಅಲ್ಲಿದ್ದರು. ಸಮ್ಮೇಳನದ ವಿಶೇಷತೆ ಏನೆಂದರೆ, ಸಮಾಜವಾದದ ಬಗ್ಗೆ ಅಷ್ಟೇನೂ ಗೊತ್ತಿರದ ಅನೇಕ ಯುವಕರು ಸಮಾಜವಾದದ ಕಲ್ಪನೆಯಿಂದ ಆಕರ್ಷಿತರಾಗಿ ದೊಡ್ಡ ಕನಸಿನೊಂದಿಗೆ

ಭಾಗವಹಿಸಿದ್ದುದು. ಅಲ್ಲಿಯೇ ನನಗೆ ಮೊದಲ ಬಾರಿಗೆ ಕರ್ನಾಟಕದಲ್ಲಿನ ಬೃಹತ್ ಸಮಾಜವಾದಿ ಸಮೂಹದ ಪರಿಚಯವಾದದ್ದು.

ನಂತರದ ದಿನಗಳಲ್ಲಿ ನಾನು ಸಮಾಜವಾದ ಕುರಿತು ಕನ್ನಡದಲ್ಲಿ ಬರೆಯುತ್ತಾ ಬಂದೆ. ಈಗಲೂ ಅದನ್ನು ಮುಂದುವರೆಸಿದ್ದೇನೆ. ೧೯೭೭ರಲ್ಲಿ ಸಮಾಜವಾದಿಗಳ ಮುಖವಾಣಿಯಾಗಿದ್ದು, ನಿಂತು ಹೋಗಿದ್ದ 'ಮಾನವ' ಮಾಸಿಕದ ಜವಾಬ್ದಾರಿಯನ್ನು ನೆಲೆಮನೆ ದೇವೇಗೌಡರ ನೆರವಿನಿಂದ ಮತ್ತು ಮಹಾದೇವರ ಮಾರ್ಗದರ್ಶನದಲ್ಲಿ ಸಂಪಾದಕನಾಗಿ ವಹಿಸಿಕೊಂಡು ಒಂದು ವರ್ಷ ನಡೆಸಿದೆ. ಅಮೇಲೆ ಸ್ವಲ್ಪ ಸಮಯ ನಾನು ಆಕಾಶವಾಣಿ ಕೆಲಸ ಬಿಟ್ಟು 'ಲಂಕೇಶ್ ಪತ್ರಿಕೆ'ಯಲ್ಲಿ ವಿಶೇಷ ವರದಿಗಾರನಾಗಿ ಕೆಲಸ ಮಾಡಿದೆ. ಅದು ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿ ಮತ್ತೆ ಗರಿಗೆದರತೊಡಗಿದ್ದ ರೋಮಾಂಚನಕಾರಿ ಕಾಲ.

ಆ ಸಂದರ್ಭದಲ್ಲಿಯೇ ರೈತ ಚಳುವಳಿ ಹುಟ್ಟಿಕೊಂಡಿದ್ದು. ೧೯೮೦ರಲ್ಲಿ ಕಿಶನ್ ಪಟ್ನಾಯಕ್‌ರವರ ನೇತೃತ್ವದಲ್ಲಿ ರಾಷ್ಟ್ರೀಯ ಸಮಾಜವಾದಿ ಸಮ್ಮೇಳನ ಏನು ನಡೆಯಿತೋ ಅದು ಅಷ್ಟೇನೂ ಪರಿಣಾಮ ಬೀರಲಿಲ್ಲ. ಅದರಿಂದ ಹತಾಶರಾದ ಕರ್ನಾಟಕದ ಕೆಲವರು ಪ್ರೊ॥ ನಂಜುಂಡಸ್ವಾಮಿ ನೇತೃತ್ವದಲ್ಲಿ ರೈತ ಸಂಘವನ್ನು ಕಟ್ಟಲು ಹೊರಟರು. ನಾನು ನನ್ನ ಯುವ ಸ್ನೇಹಿತರಿಗೆ ರೈತ ಸಂಘ ಬೇಡ ಅಂತಲೇ ಹೇಳಿದೆ. ಸಮಾಜವಾದಿ ಚಳುವಳಿಯನ್ನು ಎಲ್ಲರ ಚಳುವಳಿಯಾಗಿ ಬೆಳೆಸಬೇಕು. ನೀವು ರೈತರಿಗೆ ಪ್ರತ್ಯೇಕ ಚಳುವಳಿ ಮಾಡಿ ಸಮಾಜವಾದದ ಸಮಗ್ರತೆಯನ್ನು ಹಾಳು ಮಾಡುವಿರಿ ಎಂದು ಎಚ್ಚರಿಸಿದೆ. ಆದರೆ ಅವರು ಸಮಾಜವಾದವನ್ನು ರೈತ ಚಳುವಳಿಯ ಮೂಲಕ ಕಟ್ಟುವ ಮಾತನ್ನಾಡಿ ನನ್ನ ಬಾಯಿ ಮುಚ್ಚಿಸಿದರು. ಮುಂದೇನಾಯಿತು ಎಂಬುದು ನಿಮಗೆ ತಿಳಿದೇ ಇದೆ. ಇದನ್ನು ತಡೆಯಲು ನಾವು ಕೆಲವು ಗೆಳೆಯರು ರೈತ ಚಳುವಳಿ ಮತ್ತು ದಲಿತ ಚಳುವಳಿಯನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದಿವಿ. ಇದನ್ನು ವಿರೋಧಿಸಿದ ಎರಡೂ ಚಳುವಳಿಗಳ ಕೆಲವು ನಾಯಕರು ಈ ಎರಡೂ ಚಳುವಳಿಗಳನ್ನು ಅವನತಿಯತ್ತ ಕೊಂಡೊಯ್ಯುವಲ್ಲಿ ಯಶಸ್ವಿಯಾದರು.

೭೦-೮೦ರ ದಶಕದಲ್ಲಿ ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಸಮಾಜವಾದವನ್ನು ಮತ್ತೆ ಕಟ್ಟಬಹುದು ಎನ್ನೋ ಆಶಾವಾದ ಇತ್ತು, ರಾಜಕೀಯ ವಾತಾವರಣವೂ ಇತ್ತು. ೧೯೭೭ರಲ್ಲಿ ಜೆಪಿಯವರ ಆಗ್ರಹದ ಮೇರೆಗೆ ಭಾರತದ ಎಲ್ಲ ಮುಖ್ಯ ಕಾಂಗ್ರೆಸ್ಸೇತರ ಪಕ್ಷಗಳು ವಿಲೀನವಾಗಿ ರಚಿಸಿದ್ದ ಜನತಾ ಸರ್ಕಾರ, ಸಮಾಜವಾದವನ್ನು ತನ್ನ ನೀತಿಯನ್ನಾಗಿ ಅಳವಡಿಸಿಕೊಂಡು ಜನಮನ್ನಣೆ ಗಳಿಸಿತ್ತು ಎಂಬುದನ್ನು ನಾವು ಮರೆಯಬಾರದು. ಆದರೆ ನಾಯಕರ ದೂರದೃಷ್ಟಿಯ ಕೊರತೆ ಮತ್ತು ಅನೇಕ ವ್ಯಕ್ತಿಗತ ದೌರ್ಬಲ್ಯಗಳ ಕಾರಣದಿಂದ ಅದು ಕುಸಿದು ಬಿತ್ತು. ನಂತರ ನಡೆದ ಸಮಾಜವಾದದ ಅನೇಕ ಬೆರಕೆ ಪ್ರಯೋಗಗಳೂ ವಿಫಲಗೊಂಡು, ೯೦ರ ದಶಕದ ಹೊತ್ತಿಗೆ ಸಮಾಜವಾದ ಕುರಿತಂತೆ ಜನರ ಆಶಾಭಾವನೆಯಲ್ಲ ಕರಗಿ, ಅದು ತನ್ನ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡು ಬಿಟ್ಟಿತು. ಇದರಿಂದಾಗಿಯೇ ಖಾಸಗೀಕರಣ ಮತ್ತು ಉದಾರೀಕರಣದ ಹುಯ್ಲು ಹೆಚ್ಚಿ, ಜಾಗತೀಕರಣದ ಸ್ವಾಗತಕ್ಕೆ ವೇದಿಕೆ ಸಿದ್ಧವಾಯ್ತು.

ಇದೆಲ್ಲದರ ವಿವರವಾದ ವಿಶ್ಲೇಷಣೆಗೆ ಹೊರಟರೆ ತುಂಬಾ ವಿವರಕ್ಕೆ ಹೋಗಬೇಕಾಗುತ್ತೆ. ಈಗ ಬೇಡ ಅದು.

ಇತ್ತೀಚೆಗೆ ನಿಮ್ಮ "ಮರಳಿ ಬರಲಿದೆ ಸಮಾಜವಾದ" ಎಂಬ ಕೃತಿ ಬಿಡುಗಡೆಯಾಗಿದೆ. ನಾವೆಲ್ಲ ಅದೊಂದು ಆಶಾವಾದದ ಕನಸು ಎಂಬರ್ಥದಲ್ಲಿ ಬರೆದಿದ್ದೀರಿ ಅಂದುಕೊಂಡಿದ್ದೆವು. ಆದರೆ ಇವತ್ತಿನ ಜಾಗತಿಕ ಅರ್ಥವ್ಯವಸ್ಥೆಯ ಕುಸಿತವನ್ನು ಗಮನಿಸಿದರೆ ನಿಮ್ಮ ಆಶಾವಾದದ ಕನಸು ಚಿಗುರೊಡೆಯುತ್ತಿರುವಂತೆ ಕಾಣುತ್ತಿದೆಯಲ್ಲ?

ಮರಳಿ ಬರಲಿದೆ ಸಮಾಜವಾದ ಅಂತ ನಾನು ಹೇಳಿರುವುದು ಈ ಹಿಂದೆ ಕಂಡಿರುವ ಸಮಾಜವಾದವೇ ಮತ್ತೆ ಬರುತ್ತದೆ ಎಂಬರ್ಥದಲ್ಲಲ್ಲ. ಇಂದಿನ ಮುಕ್ತ ಮಾರುಕಟ್ಟೆಯ ಅರ್ಥವ್ಯವಸ್ಥೆಯ ದುಷ್ಪರಿಣಾಮಗಳಿಂದ ಮತ್ತು ಈ ಹಿಂದಿನ ಸಮಾಜವಾದಿ ಚಳುವಳಿಯ ತಪ್ಪುಗಳಿಂದ ಪಾಠ ಕಲಿತು ಮನುಷ್ಯ ಹೊಸದೊಂದು ಸಮಾಜವಾದವನ್ನು ಕಟ್ಟಿಕೊಳ್ಳುತ್ತಾನೆ. ಆ ಮೂಲಕ ಸಮಾಜವಾದ ಹೊಸ ರೂಪದಲ್ಲಿ ಮತ್ತೆ ಬರಲಿದೆ ಎಂಬುದು ನನ್ನ ಅನ್ನಿಸಿಕೆ. ನಿಮಗೆ ಈಗಾಗಲೇ ಗೊತ್ತಿರುವಂತೆ ಭಾರತದಲ್ಲಿ ಈ ಜಾಗತೀಕರಣದ ರೂವಾರಿ ಎನಿಸಿದ ನಮ್ಮ ಪ್ರಧಾನಿ ಮನಮೋಹನ್‌ಸಿಂಗ್‌ರವರೇ ಕಳೆದ–೨೦೦೪ರ– ಚುನಾವಣೆಯ ಹೊತ್ತಿಗೆ "ಆಮ್ ಆದ್ಮಿ" ಸರ್ಕಾರದ ಬಗ್ಗೆ ಅಂದರೆ ಶ್ರೀಸಾಮಾನ್ಯನ ಸರ್ಕಾರದ ಬಗ್ಗೆ ಮಾತನಾಡಬೇಕಾಯಿತು. ಮತ್ತು ಅವರು ಹಣಕಾಸಿನ ಮಂತ್ರಿಯಾಗಿ ತಮ್ಮ ಉದಾರೀಕರಣ–ಖಾಸಗೀಕರಣ ಕಾರ್ಯಕ್ರಮದ ಭಾಗವಾಗಿ ರದ್ದುಗೊಳಿಸಿದ್ದ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಮತ್ತು ಕೆಲವು ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರುವ ಭರವಸೆ ನೀಡಬೇಕಾಯಿತು. ಯಾಕೇಂದ್ರೆ ಹಿಂದಿನ ಚುನಾವಣೆಗಳಲ್ಲಿ ಹೆಚ್ಚಿದ ಅಭಿವೃದ್ಧಿ ದರದ ಹೊರತಾಗಿಯೂ, ಈ ಉದಾರೀಕರಣ ಮತ್ತು ಖಾಸಗೀಕರಣಗಳ ನೀತಿಯನ್ನು ಜನ ಒಪ್ಪದೆ ಕಾಂಗ್ರೆಸ್ಸನ್ನು ಸೋಲಿಸಿದ್ದರು. ಹಾಗೇ ಇವರ ಆರ್ಥಿಕ ನೀತಿಯನ್ನು ಇನ್ನಷ್ಟು ತೀವ್ರ ಗತಿಯಲ್ಲಿ ಮುಂದುವರೆಸಿ 'ಪ್ರಕಾಶಮಾನ ಭಾರತ'ವನ್ನು ಸೃಷ್ಟಿಸಿದ ಭಾಜಪ ನೇತೃತ್ವದ ಸರ್ಕಾರವನ್ನೂ ಜನ ಸೋಲಿಸಿದರು. ಇದರ ಅರ್ಥ ಏನು? ಈ ಉದಾರೀಕರಣ ಮತ್ತು ಖಾಸಗೀಕರಣ ಗಳನ್ನಾಧರಿಸಿದ ಜಾಗತೀಕರಣ ದೇಶದ ಸಾಮಾನ್ಯ ಜನತೆಗೆ ಒಳಿತನ್ನು ಮಾಡಿಲ್ಲ. ಈಗ ಪ್ರಧಾನಿಯಾಗಿ ಮನಮೋಹನ ಸಿಂಗ್ ಅವರು, ಜಗತ್ತಿನಾದ್ಯಂತ ಮುಕ್ತ ಮಾರುಕಟ್ಟೆ ಆರ್ಥಿಕತೆ ಕುಸಿದು ಜನ ಮತ್ತು ಸರ್ಕಾರಗಳೆರಡೂ ಕಂಗಾಲಾಗಿರುವಾಗ ರಾಷ್ಟ್ರಗಳ ಆರ್ಥಿಕತೆಯ ಮೇಲೆ ಸರ್ಕಾರಗಳ ನಿಯಂತ್ರಣದ ಅಗತ್ಯದ ಬಗ್ಗೆ ಮಾತನಾಡುತ್ತಿದ್ದಾರೆ!

ಇನ್ನು ಇವತ್ತಿನ ಜಾಗತಿಕ ಆರ್ಥಿಕ ಹಿಂಜರಿತ ನೋಡಿದರಂತೂ ಮುಕ್ತ ಮಾರುಕಟ್ಟೆಯ ಅರ್ಥ ವ್ಯವಸ್ಥೆ ತನ್ನ ಆಂತರಿಕ ವಿರೋಧಾಭಾಸಗಳಿಂದಲೇ ಕುಸಿದು ಬಿದ್ದಿದೆ ಎಂಬುದು ದಿನೇ ದಿನೇ ಸಾಬೀತಾಗುತ್ತಿದೆ. ಸಮಾಜವಾದಕ್ಕೇನು ಈ ಹಿಂದೆ ಆಘಾತವಾಗಿತ್ತೋ ಅದಕ್ಕಿಂತ ದೊಡ್ಡ ಆಘಾತ ಈಗ ಇದಕ್ಕೆ ಆಗಿದೆ. ಅಮೇರಿಕದ ಲೆಹಮನ್ ಬ್ರದರ್ಸ್ ಆಗಲೀ, ಅದರ ಜೊತೆಗೇ ದಿವಾಳಿ ಎದ್ದ ಇನ್ಯಾವುದೇ ಕಂಪನಿಗಳಾಗಲಿ ಏಕೆ ಕುಸಿದು ಬಿದ್ದವು ಎಂದು ನೋಡಿದಾಗ ಅವುಗಳ ಹಿಂದೆ ಇದ್ದುದು ಯಾವುದೇ ಯಾವುದೇ

ತಾರ್ಕಿಕ ಅಥವಾ ಸಂಗತ ಆರ್ಥಿಕ ತತ್ವವಲ್ಲ; ಬದಲಿಗೆ ಇದ್ದುದು ಬರೀ ದಗಾಕೋರತನ ಎಂಬುದು ಎದ್ದು ಕಾಣುವಂತಾಗಿದೆ. ನಮ್ಮ ಭಾರತದ ಸತ್ಯಂ ಕಂಪ್ಯೂಟರ್ಸ್ ಹಗರಣ ಇದಕ್ಕೊಂದು ತಾಜಾ ಉದಾಹರಣೆ. ಒಂದು ಮಿತಿ ಮೀರಿ ಹಣ, ಸಂಪತ್ತು ಎಲ್ಲಿ ಕ್ರೋಢೀಕರಣವಾಗುತ್ತದೋ ಅಲ್ಲಿ ಭ್ರಷ್ಟತೆ ಮತ್ತು ದುಷ್ಟತನ ಸಹಜವೆಂಬಂತೆ ಹುಟ್ಟುತ್ತದೆ. ಸಮಾಜವಾದ ಇದೆಲ್ಲಕ್ಕೂ ಆಂತರಿಕವಾಗಿಯೇ ಮಿತಿಗಳನ್ನು ಸೃಷ್ಟಿಸುವಂತಹ ಮಧ್ಯಮ ಮಾರ್ಗದ ಆರ್ಥಿಕತೆಯ ಮತ್ತು ಬದುಕಿನ ಸಿದ್ಧಾಂತ. ಒಂದು ಸಭ್ಯ ಸರಳ ಸಾಮಾಜಿಕ ಬದುಕು ಅದರ ಮೂಲ ಸ್ಫೂರ್ತಿ.

ಸಮಾಜವಾದದ ಹೆಸರೇ ಸೂಚಿಸುವಂತೆ, ಅದು ಮನುಷ್ಯ ಮೂಲತಃ ಸಮಾಜ ಜೀವಿ ಎನ್ನುವ ನಂಬಿಕೆಯನ್ನಾಧರಿಸಿದ ಸಿದ್ಧಾಂತ. ಅದಕ್ಕೆ ವಿರುದ್ಧವಾಗಿ ಬಂಡವಾಳಶಾಹಿ ಎನ್ನುವುದು ಮನುಷ್ಯನ ವೈಯಕ್ತಿಕ ಸಾಹಸ, ಆಶೆ, ಆಕಾಂಕ್ಷೆಗಳನ್ನು ಆಧರಿಸಿದ ಸಿದ್ಧಾಂತ. ಮನುಷ್ಯ ಮೂಲತಃ ಸಾಮಾಜಿಕ ಜೀವಿ ಎಂಬುದನ್ನು ಮರೆಯುವ ಅದು ಸಾಮೂಹಿಕತೆಯ ಸ್ಪರ್ಶವಿಲ್ಲದೆ, ಮನುಷ್ಯನನ್ನು ಬೇಜವಬ್ದಾರನನ್ನಾಗಿ ಮಾಡಿ ಭ್ರಷ್ಟಗೊಳಿಸುತ್ತದೆ, ದಗಾಕೋರನನ್ನಾಗಿ ಮಾಡುತ್ತದೆ ಎಂಬುದು ಇತಿಹಾಸದಲ್ಲಿ ಮತ್ತೆ ಮತ್ತೆ ಸಾಬೀತಾಗಿದೆ. ಇದನ್ನು ಸರಿಪಡಿಸಬೇಕೆಂದರೆ ನಾವು ಸಮಾಜದ ಜೊತೆಗೇ ಮನುಷ್ಯನನ್ನೂ ಕಟ್ಟಬೇಕಾಗಿದೆ. ವ್ಯಕ್ತಿಯನ್ನು ದಮನ ಮಾಡಿ ಸಮಾಜವನ್ನು ಕಟ್ಟಲಾಗುವುದಿಲ್ಲ. ವ್ಯಕ್ತಿ ಮತ್ತು ಸಮಾಜದ ನಡುವಣ ಸಮತೋಲನವನ್ನು ಸೃಷ್ಟಿಸುವುದೇ ಸಮಾಜವಾದ. ಇಂಥ ಸಮಾಜವಾದದ ಅಗತ್ಯವನ್ನು ಮನುಷ್ಯ ಒಂದಲ್ಲಾ ಒಂದು ದಿವಸ ಮನಗಾಣಲೇಬೇಕು ಎಂಬುದು ನನ್ನ ನಂಬಿಕೆ. ಆ ಸೂಚನೆಗಳು ಈಗಾಗಲೇ ಜಗತ್ತಿನಾದ್ಯಂತ ಕಾಣತೊಡಗಿವೆ. 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿ ಇದರ ಪ್ರತೀಕವಾಗಿದೆ.

ಕಳೆದ ಎರಡು–ಮೂರು ದಶಕಗಳಲ್ಲಿ ಕರ್ನಾಟಕದಲ್ಲಿ ಕರ್ನಾಟಕದ ಸಮಾಜವಾದಕ್ಕೆ ಪ್ರೊ॥ ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ರಾಮದಾಸ್‌ರಂತಹ ಧೀಮಂತ ನಾಯಕರ ನಾಯಕತ್ವ ದೊರಕಿತ್ತು. ಅವರಿಂದಾಗಿ ಸಮಾಜವಾದ ಯಾವ ಒಂದು ಉತ್ತುಂಗ ಸ್ಥಿತಿಯನ್ನು ತಲುಪಿತ್ತೋ ಅದರ ನಂತರದ ಕಾಲ ಘಟ್ಟದಲ್ಲಿ ಈಗ ಸಮಾಜವಾದ ಮತ್ತೆ ಬೆಳೆಯಬಲ್ಲ ಸಾಧ್ಯತೆ ಇದೆ ಅಂತೀರಾ?

ಕ್ಷಮಿಸಿ, ಕರ್ನಾಟಕದ ಸಾಂಸ್ಕೃತಿಕ ನಾಯಕರ ಹೆಸರನ್ನು ನೀವೇನು ಹೇಳಿದಿರಿ, ಇವರ ಕಾಲದಲ್ಲಿ ಸಮಾಜವಾದ ತನ್ನ ದೃಷ್ಟಿ ಕೇಂದ್ರವನ್ನು ಕಳೆದುಕೊಂಡು ಗೊಂದಲದ ಗೂಡಾಯಿತೆಂದೇ ಹೇಳಬೇಕು. ಇವರೆಲ್ಲರಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸುತ್ತಲೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವರಲ್ಲಿ ತೇಜಸ್ವಿ ಸ್ವಲ್ಪ ಮಟ್ಟಿಗೆ ಅಪವಾದವಷ್ಟೆ. ಅವರು 'ಅಖಿಲ ಕರ್ನಾಟಕ ಲೇಖಕ ಹಾಗೂ ಬರಹಗಾರರ ಒಕ್ಕೂಟ'ದ ಹರಿಕಾರರಾಗಿ, ಕರ್ನಾಟಕದಲ್ಲಿ ಸಮಾಜವಾದಿ ತತ್ವ ಚಿಂತನೆಗೆ ಹೊಸ ಆಯಾಮ ನೀಡಿದರು. ಇವರೆಲ್ಲ ದೊಡ್ಡ ಲೇಖಕರು, ಚಿಂತಕರು. ನಂಜುಂಡಸ್ವಾಮಿ ಮತ್ತು ರಾಮದಾಸ್ ದೊಡ್ಡ ಹೋರಾಟಗಾರರು, ಅದರಲ್ಲಿ ಅನುಮಾನವೇ ಬೇಡ. ಇವರ ಚಿಂತನೆ–ಸಾಹಸಗಳ ಸ್ಫೂರ್ತಿಯಿಂದಲೇ ನಮ್ಮಂಥವರು ಸಮಾಜವಾದಿ ಚಳುವಳಿಯತ್ತ ಆಕರ್ಷಿತರಾದವರು.

ಆದರೆ ಇವರೆಲ್ಲ ತಮ್ಮ ಎಲ್ಲ ದ್ವಂದ್ವಗಳನ್ನು, ದೌರ್ಬಲ್ಯಗಳನ್ನು ಇಟ್ಟುಕೊಂಡೇ ಸಮಾಜವಾದವನ್ನು ಕಟ್ಟಲಿಕ್ಕೆ ಹೊರಟವರು. ಆದರೆ ಈ ಪ್ರಕ್ರಿಯೆಯಲ್ಲಿ ಅವರ ದ್ವಂದ್ವಗಳು, ದೌರ್ಬಲ್ಯಗಳು ಹೆಚ್ಚಾದಂತೆ ಕಂಡವೇ ಹೊರತು ಕಡಿಮೆಯಾದಂತೆ ಕಾಣುವುದಿಲ್ಲ! ಅನಂತಮೂರ್ತಿಯವರ 'ಪೂರ್ವಕ್ಕೆ ಮುಖ ಪಶ್ಚಿಮಕ್ಕೆ ಪಯಣ' ರೂಪಕವೇ ಇದಕ್ಕೊಂದು ಉದಾಹರಣೆ.

ಇದಕ್ಕೆ ಮುಖ್ಯ ಕಾರಣ ಇವರೆಲ್ಲ ಮೂಲತಃ ಲೇಖಕರು ಮತ್ತು ಬಂಡುಕೋರರು. ಹಾಗಾಗಿ ಅತಿ ವೈಯುಕ್ತಿಕ ಜೀವಿಗಳು. ಜೊತೆಗೆ ಇವರಲ್ಲಿ ಕೆಲವರು ಸಮಾಜವಾದ ಜಾರಿಗೆ ಬರಲಿಕ್ಕೆ ಸಾಧ್ಯವಿಲ್ಲವೇನೋ ಎಂಬ ಅನುಮಾನ ಇಟ್ಟುಕೊಂಡೇ ಸಮಾಜವಾದವನ್ನು ಕಟ್ಟಲಿಕ್ಕೆ ಹೊರಟವರು! ಏಕೆಂದರೆ, ಸಮಾಜವಾದ ಅನ್ನುವುದು ಅಷ್ಟು ದೊಡ್ಡ ಆದರ್ಶಗಳನ್ನು ಇಟ್ಟಕೊಂಡ ದೂರಗಾಮಿಯಾದ ಕನಸು. ಹೀಗಾಗಿ ಇವರ ಬಹುಪಾಲು ಪ್ರತಿಭೆಯೆಲ್ಲ ಪ್ರಭುತ್ವ ವಿರೋಧಿ ತಾತ್ವಿಕ ಅನ್ವೇಷಣೆ ಮತ್ತು ಚಟುವಟಿಕೆಗಳಲ್ಲೇ ವ್ಯಕ್ತವಾಗಿ, ಸಮಾಜವಾದದ ರಚನಾತ್ಮಕ ಮುಖ ಸ್ಪಷ್ಟವಾಗಿ ಮೂಡದೇ ಹೋಯಿತು. ಇದೇ ಮಾತು ಸಮಾಜವಾದಿ ಚಳುವಳಿಗಳೆನಿಸಿದ ರೈತ ಮತ್ತು ದಲಿತ ಚಳುವಳಿಗಳ ಕಾರ್ಯಕ್ರಮಗಳಿಗೂ ಅನ್ವಯಿಸುತ್ತದೆ.

ಗೋಪಾಲಗೌಡರು?

ಗೋಪಾಲಗೌಡರು ಇವರಿಗಿಂತ ಹಿಂದಿನ ತಲೆಮಾರಿನವರು ಮತ್ತು ಕೆಟ್ಟದ್ದನ್ನು ಕೆಡುವುದರ ಜೊತೆಗೇ ಒಳ್ಳೆಯದನ್ನು ಕಟ್ಟಲೂ ಶ್ರಮಿಸಿದವರು. ಜೊತೆಗೆ ಅವರು ಸಾರ್ವಜನಿಕ ಜೀವನದಲ್ಲಿ ಎಷ್ಟು ಮುಳುಗಿ ಹೋಗಿರುತ್ತಿದ್ದರೆಂದರೆ, ಅವರ ಬೌದ್ಧಿಕತೆ ವಾಸ್ತವದಲ್ಲಿ ಪರೀಕ್ಷೆಗೆ ಒಳಪಟ್ಟೇ ಸಾಧುತ್ವವನ್ನು ಗಳಿಸಿಕೊಳ್ಳಬೇಕಿತ್ತು! ಲೋಹಿಯಾರವರಾಗಲಿ, ಗೋಪಾಲಗೌಡರಾಗಲಿ ಮತ್ತು ಅವರ ಗೆಳೆಯರಾಗಲಿ ನಿಜವಾಗಿ ದೊಡ್ಡ ತ್ಯಾಗಗಳನ್ನು ಮಾಡಿ ದೊಡ್ಡ ಮನಸ್ಸಿನೊಂದಿಗೆ, ದೊಡ್ಡ ಕನಸುಗಳೊಂದಿಗೆ ಸಮಾಜವಾದಿ ಚಳುವಳಿಯನ್ನು ಕಟ್ಟಿದರು. ಕರ್ನಾಟಕದಲ್ಲಿ ೬೦-೭೦ರ ದಶಕದಲ್ಲಿ ಇವರ ಪಕ್ಷದ ಶಾಸಕರ ಸಂಖ್ಯೆ ಎಷ್ಟೇ ಕಡಿಮೆಯಾಗಿದ್ದರೂ ಕೂಡಾ ಸಾಮಾನ್ಯ ಜನರ ನಿರೀಕ್ಷೆಗಳನ್ನು, ಆಶೋತ್ತರಗಳನ್ನು ಪ್ರತಿನಿಧಿಸಲು ಇದ್ದವರು ಅವರೇನೆ. ಇವತ್ತು ಸಮಾಜವಾದವೆಂದರೆ ವ್ಯಾವಹಾರಿಕವಾಗಿ ಒಂದು ತಮಾಷೆಯ ವಸ್ತು ಎನಿಸಿಕೊಂಡಿದ್ದರೂ ಕೂಡಾ, ಒಂದು ಆದರ್ಶವಾಗಿ ಅದಕ್ಕೆ ಅಷ್ಟೇ ಗೌರವ ಕೂಡಾ ಇದೆ. ಇತ್ತೀಚೆಗೆ ಬಿಜೆಪಿಯ ಮುಖ್ಯಮಂತ್ರಿಯ ಚಂದ್ರು ಅವರನ್ನ ಒಂದು ಸಮಾರಂಭದಲ್ಲಿ ಭೇಟಿ ಮಾಡಿದ್ದೆ. ಅಲ್ಲಿ ಯಾರೋ ಒಬ್ಬರು ಅವರು ಕೋಮುವಾದಿ ಪಕ್ಷದಲ್ಲಿದ್ದಾರೆಂದು ಆಕ್ಷೇಪಿಸಿದಾಗ ಅವರು, 'ಏ ನಾನೂ ಸಮಾಜವಾದಿನೇ ಕಣಪ್ಪ. ಈ ಪಕ್ಷದಲ್ಲಿ ಇರಬಹುದು ಅಷ್ಟೆ!' ಅಂತ ತಮ್ಮ ರಾಜಕೀಯ ಗೌರವವನ್ನು ಕಾಪಾಡಿಕೊಳ್ಳಲು ಯತ್ನಿಸಿದರು! ಅಂಥವರು ಬಹಳಷ್ಟು ಜನ ಬೇರೆ ಬೇರೆ ಪಕ್ಷಗಳಲ್ಲಿದ್ದಾರೆ. ಸಮಾಜವಾದಿ ಚಳುವಳಿ ಒಂದು ರಾಜಕೀಯ ಪಕ್ಷವಾಗಿ ಉಳಿಯುವಂಥಹ ಶಿಸ್ತನ್ನು, ಧೃಡತೆಯನ್ನು ಉಳಿಸಿಕೊಂಡು ಬರಲಿಲ್ಲ.

ಗೋಪಾಲಗೌಡರು ತುಂಬಾ ಅಶಿಸ್ತಿನ ಮನುಷ್ಯ ಅಂತ ಹೇಳ್ತಾರಲ್ಲ?

ಗೋಪಾಲಗೌಡರು ಅಷ್ಟೇ ಅಲ್ಲ, ಲೋಹಿಯರವರೂ ಅಶಿಸ್ತಿನ ಮನುಷ್ಯರೇ ಅಂತ ಹೇಳ್ತಾರೆ. ಲೋಹಿಯರವರನ್ನು ಹಲವು ಬಾರಿ ಸಮಾಜವಾದಿ ಚಳುವಳಿಯಿಂದ ಹೊರ ಹಾಕಲಾಯಿತು, ಅಶಿಸ್ತಿನ ಹೆಸರಿನಲ್ಲಿ. ಸಮಾಜವಾದಿಗಳಲ್ಲಿ ಎರಡು ರೀತಿಯ ಅಶಿಸ್ತನ್ನು ನೋಡ್ತೇವೆ. ಒಂದು ರಾಜಕೀಯ ಅಶಿಸ್ತು. ಪಕ್ಷ ತೆಗೆದುಕೊಂಡ ತೀರ್ಮಾನವನ್ನು ಪ್ರಶ್ನಿಸುವುದು, ಇತರ ನಾಯಕರ ಹೇಳಿಕೆಗಳ ಬಗ್ಗೆ ಬಹಿರಂಗವಾಗಿ ಭಿನ್ನಾಭಿಪ್ರಾಯ ವ್ಯಕ್ತ ಪಡಿಸುವುದು ಒಂದು ರೀತಿಯದಾದರೆ, ಇನ್ನೊಂದು ರೀತಿಯದು ವೈಯಕ್ತಿಕ ಬದುಕಿನ ಅಶಿಸ್ತು. ಹಣಕಾಸಿನ ವಿಷಯದಲ್ಲಿ ಬೇಜವಾಬ್ದಾರಿಯಿಂದ ವರ್ತಿಸುವುದು, ಸಮಯ ಪಾಲನೆ ಮಾಡದೇ ಇರುವುದು, ಇನ್ನೊಬ್ಬರ ಬಗ್ಗೆ ಉಡಾಫೆಯಿಂದ ಮಾತನಾಡುವುದು ಇದೆಲ್ಲಾ ಸಮಾಜವಾದಿ ಚಳುವಳಿಯಲ್ಲಿ ಜಾಸ್ತಿ. ಯಾಕೆಂದರೆ ಸಮಾಜವಾದ, ಸಾಮೂಹಿಕ ಬದುಕಿನ ಆದರ್ಶಗಳೊಂದಿಗೆ ವ್ಯಕ್ತಿ ಸ್ವಾತಂತ್ರ್ಯವನ್ನೂ ಎತ್ತಿ ಹಿಡಿಯುವ ಸಿದ್ಧಾಂತವಾಗಿತ್ತು. ಕೆಲವೊಮ್ಮೆ ಇದು ಅತೀಗೆ ಹೋಗುತ್ತಿತ್ತು.

ಗೋಪಾಲಗೌಡರ ವಿಷಯದಲ್ಲಿ ಹೇಳುವುದಾದರೆ ಅವರು ಎಷ್ಟು ಕಷ್ಟ ಪಟ್ಟಿದ್ದಾರೆ ಜೀವನದಲ್ಲಿ ಎಂದರೆ, ಅವರು ಎಷ್ಟೋ ಸಲ ಊಟಕ್ಕಿಲ್ಲದೆ ದಿನ ಕಳೆದಿದ್ದಾರೆ. ಎಷ್ಟೋ ಸಲ ಪಾರ್ಟಿ ಮೀಟಿಂಗ್‌ಗೆ ಹೋಗಬೇಕಿದ್ದರೆ ರೈಲ್ವೆ ಸ್ಟೇಷನ್‌ನಲ್ಲಿ ಕುಳಿತೇ ಇರುತ್ತಿದ್ದರು, ಯಾರಾದರೂ ಬಂದು ಟಿಕೆಟ್ ಕೊಡಿಸ್ತಾರೇನೋ ಅಂತ. ಇವತ್ತು ಯಾರೋ ಎರಡು ರೂಪಾಯಿ ಕೊಟ್ಟಿದ್ದರಿಂದ ಎರಡು ದಿನದ ಖರ್ಚಿಗೆ ತೊಂದರೆಯಿಲ್ಲ ಅಂತ ಬರೆಯುತ್ತಾರೆ ತಮ್ಮ ದಿನಚರಿಯಲ್ಲಿ... ಅಂತಹ ಬಡತನದಲ್ಲಿ ಇದ್ದುಕೊಂಡು ಒಂದು ಕಾಲಘಟ್ಟದ ಯುವಕರ ಕನಸುಗಳನ್ನು ಬಡಿದೆಬ್ಬಿಸುವಂತಹ ಚಳುವಳಿಯನ್ನು ಕಟ್ಟಿದರು ಎನ್ನುವುದು ತುಂಬಾ ದೊಡ್ಡ ವಿಷಯ. ಈ ಹಿನ್ನೆಲೆಯಲ್ಲಿ ಅವರ ಅಶಿಸ್ತಿನ ಬಗ್ಗೆ ಮಾತಾಡುವುದು ಜುಜುಬಿತನವಾದೀತು.

ವ್ಯಕ್ತಿಯನ್ನು ದಮನ ಮಾಡಿ ಸಮಾಜವಾದ ಕಟ್ಟಕ್ಕೆ ಆಗೋಲ್ಲ ಅಂದರಲ್ಲ, ವ್ಯಕ್ತಿಗಿಂತ ಸಮಾಜ ಮುಖ್ಯ ಅಲ್ವಾ? ಒಳ್ಳೆಯದನ್ನು ಕಟ್ಟಲು ಹೊರಟಾಗ ಅದಕ್ಕೆ ಎದುರಾಗುವವರನ್ನು ದಮನ ಮಾಡುವುದು ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗುವುದಿಲ್ಲವೆ?

ಇಲ್ಲ. ನೋಡಿ ಸಮಾಜ ಅನ್ನುವುದು ನಾವು ಕಟ್ಟಿಕೊಂಡಿರುವುದು. ಅದೊಂದು ಕಲ್ಪನೆ. ಆದರೆ ವ್ಯಕ್ತಿ ಕಲ್ಪನೆ ಅಲ್ಲ. ಅವನು ಹುಟ್ಟಿನಿಂದಲೇ ಒಂದು ಸ್ವಾಯತ್ತ ಘಟಕ. ಅದೇ ಸಮಾಜದ ಮೂಲ ಶಕ್ತಿ ಕೂಡ. ಅದನ್ನು ದಮನ ಮಾಡಿ ನೀವು ಏನನ್ನೂ ಕಟ್ಟಲಿಕ್ಕೆ ಸಾಧ್ಯವಿಲ್ಲ. ಸಮಾಜವಾದದ ಮುಖ್ಯ ಆಕರ್ಷಣೆ ಏನೆಂದರೆ ಮನುಷ್ಯನ ಖಾಸಗಿತನದ ಮೇಲೆ, ಅವನ ಮೂಲ ಅಸ್ಮಿತೆಯ ಮೇಲೆ ಆಕ್ರಮಣ ಮಾಡದೆ ಸಮಾಜದ ಪುರ್ನನಿರ್ಮಾಣ ಸಾಧ್ಯ ಎಂಬ ಅದರ ನಂಬಿಕೆ. ಅದರಿಂದಾಗಿ ಅದು ರಾಜಕೀಯ ಪಕ್ಷವಾಗಿ ಬೆಳೆಯುವಲ್ಲಿ ಬಹಳಷ್ಟು ಕಡೆ ಎಡರು ತೊಡರುಗಳನ್ನು, ಸಂದಿಗ್ಧಗಳನ್ನು ಎದುರಿಸಬೇಕಾಯಿತು ನಿಜ. ಆದರೆ ವ್ಯಕ್ತಿಯನ್ನು ದಮನ ಮಾಡಿದ ಸಮಾಜವಾದಿ ರಾಷ್ಟ್ರಗಳು ಹೇಗೆ ಉರುಳಿ ಬಿದ್ದಿವೆ, ಹೇಗೆ ನರಳ್ತಾ ಇವೆ ಎಂಬುದನ್ನು ನಾವು ಇವತ್ತು

ನೋಡ್ತಾ ಇದ್ದೇವೆ. ಅದು ರಷ್ಯಾ ಇರಬಹುದು, ಅದರ ಸುತ್ತಲಿದ್ದ ರಾಷ್ಟ್ರಗಳಿರಬಹುದು. ಅಥವಾ ಚೀನ ಇರಬಹುದು.

ಆದ್ದರಿಂದ ವ್ಯಕ್ತಿ ಮತ್ತು ಸಮಾಜಗಳಿಗೆ ಸಂಬಂಧಿಸಿದಂತೆ, ಅಂದಿನ ಬಂಡವಾಳಶಾಹಿ ಮತ್ತು ಕಮ್ಯುನಿಸ್ಟ್ ಸಿದ್ಧಾಂತಗಳೆಂಬ ಎರಡು ಅತಿಗಳ ನಡುವೆ ಮನುಷ್ಯನ ಖಾಸಗಿ ಪ್ರಪಂಚವನ್ನು ರಕ್ಷಿಸಿಕೊಂಡೇ ಸಮಾಜವಾದವನ್ನು ಕಟ್ಟಲು ಸಾಧ್ಯವೇ ಅಂತ ಲೋಹಿಯಾರವರು ಕೆಲವು ತಾತ್ವಿಕ ಪ್ರಮೇಯಗಳನ್ನು ಮಂಡಿಸಿದರು. ರಾಜಕೀಯ ಅಧಿಕಾರದ ಮೂಲಕ ಅದಕ್ಕೊಂದು ವಾಸ್ತವಿಕ ನೆಲಗಟ್ಟನ್ನು ಒದಗಿಸಲು ಅವರಿಗೆ ಸಾಧ್ಯವಾಗಲಿಲ್ಲ. ಯಾಕೆಂದರೆ ಅವರು ನೆಹರುರಂತಹ ಬಹಳ ಪ್ರಬಲವಾದ ರಾಜಕೀಯ ಎದುರಾಳಿಗೆ ಪ್ರತಿಯಾಗಿ ರಾಜಕಾರಣ ಮಾಡಬೇಕಿತ್ತು. ನೆಹರೂ ಅವರ ಕಾಂಗ್ರೆಸ್ ಪಕ್ಷಕ್ಕೆ ಸ್ವಾತಂತ್ರ್ಯ ಹೋರಾಟದ ವಾರಸುದಾರಿಕೆ ಬೇರೆ ಇತ್ತು. ಹೀಗಾಗಿ ಅವರ ಜೊತೆ ಭಿನ್ನಾಭಿಪ್ರಾಯ ಇಟ್ಟುಕೊಳ್ಳೋದೇ ದೊಡ್ಡ ವಿಷಯ ಆಗ. ಆದರೂ ಲೋಹಿಯಾರವರು ವ್ಯಕ್ತಿ ಮತ್ತು ಸಮಾಜದ ನಡುವಣ ಸಮತೋಲನವನ್ನು ಕಾಯ್ದು ಕೊಳ್ಳಲು ಮೂರು ಮುಖ್ಯ ಸಂಗತಿಗಳನ್ನು ಪ್ರತಿಪಾದಿಸಿದ್ದರು.

ಮೊದಲನೆಯದಾಗಿ ಅಧಿಕಾರವನ್ನು ಕೇಂದ್ರೀಕರಿಸಬಾರದು. ಅದು ಸದಾ ವಿಕೇಂದ್ರಿಕೃತವಾಗಿರಬೇಕು. ಮತ್ತು ಈ ವಿಕೇಂದ್ರೀಕರಣ ಕೆಳಮಟ್ಟದಿಂದ ಶುರುವಾಗಬೇಕು. ಇದು ಅವರು ಪ್ರತಿಪಾದಿಸಿದ ಚತುಸ್ತಂಭ ರಾಷ್ಟ್ರದ ಕಲ್ಪನೆಯಲ್ಲಿ ಅಡಗಿದೆ. ಎರಡನೆಯದು ಸಂಪತ್ತಿನ ಉತ್ಪಾದನೆಯ ವಿಕೇಂದ್ರೀಕರಣ. ಸಂಪತ್ತು ಅಥವಾ ಮನುಷ್ಯನ ಲೌಕಿಕ ಅಗತ್ಯಗಳು ಅವನ ನೆರೆಹೊರೆಯಲ್ಲೇ ಉತ್ಪಾದಿತವಾಗುವಂತಿರಬೇಕು. ಅದಕ್ಕಾಗಿ ಸಣ್ಣ ಪ್ರಮಾಣದ ತಂತ್ರಜ್ಞಾನದ ಆವಿಷ್ಕಾರವಾಗಬೇಕು. ಇದರಿಂದ ಸಂಪತ್ತು ಅಥವಾ ಬಂಡವಾಳ ಒಂದೆಡೆ ಕೇಂದ್ರಿಕೃತಗೊಳ್ಳದೇ ಸಣ್ಣ ಸಣ್ಣ ಘಟಕಗಳಲ್ಲಿ ಹಂಚಿಹೋಗಿ, ವ್ಯಕ್ತಿ ಸ್ವಾತಂತ್ರ್ಯ ಹರಣ ಕೂಡ ನಿಯಂತ್ರಿಸಲ್ಪಡುತ್ತದೆ. ಮೂರನೆಯದು, ಅಭಿವೃದ್ಧಿ ಎಂದರೆ ಪಶ್ಚಿಮದ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಕಲ್ಪನೆಗೆ ಪ್ರತಿಯಾಗಿ, ನಮ್ಮ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗನುಣವಾದ ಸರಳ ಸಭ್ಯ ಜೀವನ ಮಟ್ಟದ ಕಲ್ಪನೆ.

ಇದು ಗಾಂಧೀಜಿಯವರಿಂದ ಅವರು ಪಡೆದ ಪ್ರೇರಣೆಯ ಫಲ. ಗ್ರಾಮ ಸ್ವರಾಜ್ಯ ಕಲ್ಪನೆಯ ವಿಸ್ತರಣೆ. ಆದರೆ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ಕಾಂಗ್ರೆಸ್ ತೋರಿದ ಅವಸರದಲ್ಲಿ, ರಾಷ್ಟ್ರ ವಿಭಜನೆಯ ಗೊಂದಲದಲ್ಲಿ ಈ ಚಿಂತನೆಯೇ ನಮ್ಮ ಸಂವಿಧಾನ ಕರ್ತೃಗಳ ಮನದಿಂದ ಮರೆಯಾಯಿತು. ಅಧಿಕಾರ ಮತ್ತು ಸಂಪತ್ತಿನ ವಿಕೇಂದ್ರೀಕರಣದ ವಿಷಯ ಸಂವಿಧಾನದ ಮುಖ್ಯ ಆಶಯವಾಗಿ ನಿರೂಪಿತವಾಗದೇ ಹೋಯಿತು. ತಮ್ಮ ಕಾಂಗ್ರೆಸ್ ವಿರೋಧಿ ಧೋರಣೆಯಿಂದಾಗಿ ಸಮಾಜವಾದಿಗಳು ಸಂವಿಧಾನ ರಚನಾ ಸಭೆಯನ್ನೂ ಬಹಿಷ್ಕರಿಸಿದ್ದೂ ಇದಕ್ಕೆ ಪೂರಕವಾಯಿತು. ಇದು ಅವರು ಐತಿಹಾಸಿಕವಾಗಿ ಮಾಡಿದ ದೊಡ್ಡ ತಪ್ಪು. ಇನ್ನೊಂದು ಮುಖ್ಯ ವಿಷಯವೇನೆಂದರರೆ–ನಾನು ಇದನ್ನು ಹೇಳಲೇ ಬೇಕು–ಅಂಬೇಡ್ಕರ್‌ರವರು ಸಂವಿಧಾನ ರಚನಾ ಸಮಿತಿಯಲ್ಲಿ ಬಹು ದೊಡ್ಡ ಪಾತ್ರ ವಹಿಸಿದ ಕಾರಣದಿಂದಾಗಿಯೋ ಏನೋ, ಸಂವಿಧಾನದಲ್ಲಿ ಕೇಂದ್ರೀಕೃತ ವ್ಯವಸ್ಥೆಗೇ ಹೆಚ್ಚು ಒತ್ತು ಬಿದ್ದಿತು. ಯಾಕೆಂದರೆ ವಿಕೇಂದ್ರೀಕರಣದಿಂದ ಹಳ್ಳಿಗಳಲ್ಲಿ ದಲಿತರಿಗೆ ಮತ್ತು

ಹಿಂದುಳಿದವರಿಗೆ ನ್ಯಾಯ ಸಿಗಲಿಕ್ಕಿಲ್ಲ ಅನ್ನೋ ಭಯ ಅವರಿಗಿತ್ತು. ನಂತರ ಇತ್ತೀಚೆಗೆ ರಾಜೀವ್ ಗಾಂಧಿಯವರ ಕಾಲದಲ್ಲಿ ಸಂವಿಧಾನ ತಿದ್ದುಪಡಿ ಮಾಡಿ ಪಂಚಾಯ್ತಿತ್ ರಾಜ್‌ಗೆ ಸಂವಿಧಾನಿಕ ಮಾನ್ಯತೆ ನೀಡಲಾಯಿತಾದರೂ, ಅದು ಲೋಹಿಯಾ ಅಥವಾ ಗಾಂಧಿ ಕಲ್ಪನೆಯ ಅಧಿಕಾರ ಮತ್ತು ಸಂಪತ್ತುಗಳ ವಿಕೇಂದ್ರೀಕರಣ ವ್ಯವಸ್ಥೆಯಾಗಲು ಕಾಲ ಮಿಂಚಿ ಹೋಗಿತ್ತು. ಹೀಗಾಗಿ ನಮ್ಮ ರಾಷ್ಟ್ರ ತಾಂತ್ರಿಕವಾಗಿ ಒಕ್ಕೂಟವೆನಿಸಿದರೂ ಅದು ತಿರುಳಲ್ಲಿ, ಕಾರ್ಯಶೈಲಿಯಲ್ಲಿ ಏಕಾತ್ಮಕ ರಾಷ್ಟ್ರವೇ ಆಗಿದೆ.

ಅಂಬೇಡ್ಕರ್ ಅವರ ಅಂದಿನ ತೀರ್ಮಾನ ಇವತ್ತಿನ ಸಂದರ್ಭದಲ್ಲಿ ಯಾವ ಗೊಂದಲಗಳನ್ನು ಸೃಷ್ಟಿಸಿದೇ ಅಂತೀರಾ?

ಅದು ಅಂಬೇಡ್ಕರ್ ಅವರ ವೈಯುಕ್ತಿಕ ತೀರ್ಮಾನ ಎಂದು ಹೇಳಲಾಗುವುದಿಲ್ಲ. ಅದೊಂದು ಸಾಮೂಹಿಕ ನಿರ್ಧಾರ. ಆದರೆ ಇದರ ಹಿಂದೆ ಪ್ರಧಾನವಾಗಿ ಅಂಬೇಡ್ಕರ್ ಪ್ರಭಾವ ಇದ್ದಿರಬಹುದೆಂದಷ್ಟೇ ನಾನು ಸೂಚಿಸುತ್ತಿರುವುದು. ಇದರ ಪರಿಣಾಮವಾಗಿ ಇವೊತ್ತು ಏಕಾತ್ಮಕ ರಾಷ್ಟ್ರ ಅನ್ನೋದು ಹುಸಿ ರಾಷ್ಟ್ರೀಯತೆಯೊಂದನ್ನು ಸೃಷ್ಟಿಸಿದೆ. ರಾಷ್ಟ್ರೀಯತೆಯನ್ನು ಕಲ್ಪಿಸಿಕೊಳ್ಳುವಲ್ಲಿಯೇ ನಮಗೆ ಗೊಂದಲಗಳನ್ನು ಸೃಷ್ಟಿಸಿದೆ. ಹಾಗೆ ನೋಡಿದರೆ, ನಿಜವಾದ ರಾಷ್ಟ್ರೀಯತೆ ಅಂದರೆ ನಮ್ಮ ಭಾಷಾ ರಾಷ್ಟ್ರೀಯತೆ. ಕನ್ನಡ ರಾಷ್ಟ್ರೀಯತೆ, ತಮಿಳು ರಾಷ್ಟ್ರೀಯತೆ, ಬಂಗಾಳಿ ರಾಷ್ಟ್ರೀಯತೆ ಇತ್ಯಾದಿ. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಸ್ಫೋಟಗೊಂಡಿದ್ದೇ ೧೯೦೫ರಲ್ಲಿ ಬಂಗಾಳ ವಿಭಜನೆ ಮಾಡಿದಾಗ ಎಂಬುದನ್ನು ನಾವು ಗಮನಿಸಬೇಕು. ಅಂದರೆ ಭಾಷಾ ರಾಷ್ಟ್ರೀಯತೆಗೆ ಆಘಾತವಾದಾಗಲೇ ರಾಷ್ಟ್ರೀಯ ಹೋರಾಟ ಆರಂಭವಾದದ್ದು. ಅದಕ್ಕಿಂತ ಮೊದಲು ರಾಷ್ಟ್ರೀಯ ಚಳುವಳಿ ಅನ್ನುವುದು ಕೆಲವು ವರ್ಗಗಳ ಹಿತಕ್ಕಾಗಿ ಕೆಲವು ವಿನಾಯ್ತಿ ಅಥವಾ ಸವಲತ್ತುಗಳನ್ನು ಕೇಳುತ್ತಾ ಮನವಿ ಸಲ್ಲಿಸುವುದು, ಅಪೀಲು ಕೊಡುವುದು ಅಷ್ಟಕ್ಕೇ ಸೀಮಿತವಾಗಿತ್ತು. ಹೀಗಾಗಿ, ಭಾಷಾ ರಾಷ್ಟ್ರೀಯತೆಗಳನ್ನು ಗುರುತಿಸಿ ಅವುಗಳ ಆಶೋತ್ತರಗಳ ಆಧಾರದ ಮೇಲೆ ಒಂದು ಒಕ್ಕೂಟ ರಾಷ್ಟ್ರವನ್ನು ಕಟ್ಟುವಂತಹ ಮತ್ತು ಅಧಿಕಾರ ಮತ್ತು ಸಂಪತ್ತಿನ ವಿಕೇಂದ್ರೀಕರಣವನ್ನು ನಿರ್ದೇಶಿಸುವ ಸಂವಿಧಾನವನ್ನು ನಾವು ರಚಿಸಿಕೊಂಡಿದ್ದರೆ, ಇವತ್ತು ಜಾಗತೀಕರಣದ ಜೊತೆ ಜೊತೆಗೇ ಕೋಮುವಾದಿ ರಾಷ್ಟ್ರೀಯತೆ ತಲೆ ಎತ್ತುತ್ತಿರಲಿಲ್ಲ. ಇಂದು ಕೋಮುವಾದಿಗಳು ಈ ಏಕಾತ್ಮಕ ರಾಷ್ಟ್ರ ಪರಿಕಲ್ಪನೆಯನ್ನು ತಮ್ಮ ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ಹೈಜಾಕ್ ಮಾಡಿದ್ದಾರೆ.

ನೀವು ಹೇಳುವುದು ಕೇಂದ್ರೀಕೃತ ವ್ಯವಸ್ಥೆಗಿಂತ ಗಣರಾಜ್ಯ ವ್ಯವಸ್ಥೆಗೆ ಹೆಚ್ಚಿನ ಒತ್ತು ಕೊಡಬೇಕು ಎನ್ನುವುದೆ?

ಗಣರಾಜ್ಯ ಸ್ವರೂಪವನ್ನು ಈಗಿರುವಂತೆ ಇಟ್ಟುಕೊಂಡರೆ ಕಷ್ಟ ತಪ್ಪಿದ್ದಲ್ಲ. ಭಾಷಾ ರಾಷ್ಟ್ರೀಯತೆಗಳನ್ನು ಪ್ರಾದೇಶಿಕ ಸಂಕುಚಿತತೆ ಎಂದು ದಮನ ಮಾಡುವ ಏಕಾತ್ಮಕ ರಾಷ್ಟ್ರದ ರಾಜಕಾರಣ, ಇನ್ನಷ್ಟು ಗಲಭೆ-ಗೊಂದಲ-ಅಶಾಂತಿಗಳನ್ನಷ್ಟೇ ಸೃಷ್ಟಿಸಬಲ್ಲುದು. ಇದಕ್ಕೆ ಪರಿಹಾರವೆಂದರೆ, ರಾಷ್ಟ್ರವನ್ನು ನಿಜವಾದ ಒಕ್ಕೂಟ ವ್ಯವಸ್ಥೆಯನ್ನಾಗಿಸುವುದು. ಇವತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳಿರುವಂತೆ. ಕಳೆದ ೫೦-೬೦ ವರ್ಷಗಳಲ್ಲಿ

ನಮ್ಮ ಸಂವಿಧಾನಕ್ಕೆ ತಂದಿರುವ ತಿದ್ದುಪಡಿಗಳನ್ನು ನೋಡಿದರೆ ನಮ್ಮ ಮೂಲ ಸಂವಿಧಾನದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಅಧಿಕಾರಗಳಲ್ಲಿ ಎಷ್ಟೋ ಸಮತೋಲನ ಇತ್ತು; ಆದರೆ ಸಂವಿಧಾನ ತಿದ್ದುಪಡಿ ಆಗ್ತಾ ಆಗ್ತಾ, ಇವತ್ತು ಹೆಚ್ಚಿನ ಅಧಿಕಾರವೆಲ್ಲ ಹೇಗೆ ಕೇಂದ್ರದ ಪಾಲಾಗಿದೆ ಎಂಬುದು ಗೊತ್ತಾಗುತ್ತದೆ. ಇತ್ತೀಚಿನ ಉದಾಹರಣೆ ಎಂದರೆ, ನಮ್ಮ ಸಂವಿಧಾನದ ಮೂಲ ಸ್ವರೂಪವನ್ನು ನಿರ್ಧರಿಸುವಂತಹ ರಾಜ್ಯ ಸಭೆ ಮತ್ತು ಲೋಕಸಭೆಗಳ ರಚನೆ ಏನಿದೆ, ಅದನ್ನು ಮೂಲಭೂತವಾಗಿ ಬದಲಾಯಿಸಲಾಗಿರುವುದು. ರಾಜ್ಯಸಭೆ ನಮ್ಮ ಭಾಷಾಧಾರಿತ ರಾಜ್ಯಗಳ ಅಧಿಕಾರಗಳನ್ನು ಕಾಯುವ ಸಭೆ. ಮೂಲ ಸಂವಿಧಾನದ ಪ್ರಕಾರ ಈ ರಾಜ್ಯಸಭೆಗೆ ರಾಜ್ಯಗಳ ಪ್ರತಿನಿಧಿಗಳಾಗಿ ಆಯ್ಕೆಯಾಗಬೇಕಾದವರು ಆಯಾ ರಾಜ್ಯಗಳ ನಿವಾಸಿಗಳೇ ಆಗಬೇಕಿತ್ತು. ಆದರೆ ಹಿಂದಿನ ಎನ್.ಡಿ.ಎ. ಸರ್ಕಾರ ತಂದ ತಿದ್ದುಪಡಿಯಿಂದಾಗಿ ಈಗ ಯಾರು ಯಾವ ರಾಜ್ಯವನ್ನಾದರೂ ಪ್ರತಿನಿಧಿಸ ಬಹುದಾಗಿದೆ! ಹೀಗಾದರೆ ಒಕ್ಕೂಟಕ್ಕೇನು ಅರ್ಥ? ಕುಲದೀಪ್ ನಯ್ಯಾರ್ ಇದನ್ನು ಪ್ರಶ್ನಿಸಿ ಕೋರ್ಟಿಗೆ ಹೋದಾಗ, ಸುಪ್ರೀಂ ಕೋರ್ಟ್ ಕೂಡ ಈ ತಿದ್ದುಪಡಿಯನ್ನು ಎತ್ತಿ ಹಿಡಿಯಿತು! ಅಂದರೆ, ಸಂವಿಧಾನವನ್ನು ಅರ್ಥೈಸುವ ಜವಾಬ್ದಾರಿ ಹೊಂದಿರುವ ನ್ಯಾಯಾಂಗ ಕೂಡ ಕಾಲದ ರಾಜಕೀಯ ಕರೆಗಳಿಗೆ ತಕ್ಕಂತೆ ತನ್ನ ಅರ್ಥೈಸುವಿಕೆಯನ್ನು ಬದಲಾಯಿಸಿಕೊಳ್ಳುತ್ತಾ ಹೋಗುತ್ತದೆ! ಇದು ನಿಜವಾದ ಅಪಾಯದ ಸೂಚನೆ.

ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಸುವ ಕುರಿತು ನಿಮ್ಮ ತೀವ್ರ ವಿರೋಧವನ್ನು ಈಗಾಗಲೇ ಪ್ರಕಟಪಡಿಸಿದ್ದೀರಿ. ಬಡವರು, ಹಿಂದುಳಿದ ವರ್ಗದವರು ಮತ್ತು ಗ್ರಾಮೀಣ ಮಕ್ಕಳು ಕನ್ನಡ ಮಾಧ್ಯಮ ಶಾಲೆಗೆ ಹೋಗುವುದು ಅನಿವಾರ್ಯವಾಗಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ಇಂಗ್ಲೀಷ್ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ಇರುವುದರಿಂದ ಸಹಜವಾಗಿ ಅವರು ಹಿನ್ನಡೆ ಅನುಭವಿಸುತ್ತಾರೆ. ನಿಮ್ಮ ನಿಲುವು ಈ ಸಮೂಹಕ್ಕೆ ಅನ್ಯಾಯ ಮಾಡಿದಂತಲ್ಲವೆ?

ಇದಕ್ಕೆ ಸಾಕಷ್ಟು ಬಾರಿ ಉತ್ತರ ಕೊಟ್ಟಿದ್ದೀನಿ. ಮತ್ತೆ ಹೇಳೋದಾದರೆ ಇವೊತ್ತಿನ ಶಿಕ್ಷಣ ವ್ಯವಸ್ಥೆಯಲ್ಲಿ ಒಂದನೇ ತರಗತಿಯಿಂದಾಗಲಿ, ಐದನೇ ತರಗತಿಯಿಂದಾಗಲಿ ಇಂಗ್ಲೀಷ್ ಬೋಧಿಸುವುದರಿಂದ ಅಂತಹ ಮುಖ್ಯ ವ್ಯತ್ಯಾಸವೇನೂ ಆಗುವುದಿಲ್ಲ ಅಂತ ನನ್ನ ಸ್ಪಷ್ಟ ಅಭಿಪ್ರಾಯ. ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಸುವ ನಿರ್ಧಾರ, ಇಂಗ್ಲೀಷ್ ಭಾಷೆಯನ್ನು ಸಾರ್ವಜನಿಕ ಜೀವನದ ಅಧಿಕೃತ ಭಾಷೆಯನ್ನಾಗಿ ಮಾಡೋದಕ್ಕೆ ಮತ್ತು ಮಾತೃಭಾಷೆ ಅಥವಾ ಪ್ರಾಂತೀಯ ಭಾಷೆಯನ್ನು ಎರಡನೆ ದರ್ಜೆಗೆ ತಳ್ಳೋದಕ್ಕೆ ಜಾಗತೀಕರಣದ ಹಿಂದಿರುವ ನವ ಸಾಮ್ರಾಜ್ಯಶಾಹಿ ಶಕ್ತಿಗಳು ನಡೆಸಿರೋ ರಾಜಕೀಯ ಹುನ್ನಾರ ಅಂತ ನಾನು ತಿಳಿದು ಕೊಂಡಿದ್ದೇನೆ.

ಎರಡನೆಯದಾಗಿ ಜಾಗತೀಕರಣವನ್ನು, ಅದರ ಆರ್ಥಿಕತೆಯನ್ನು ವಿರೋಧಿಸುವ ನೀವು; ಅದಕ್ಕೆ ಪೂರಕ ಶಕ್ತಿಯಾಗಿ ಜಾಗತೀಕರಣವಾದಿಗಳು ಎತ್ತಿ ಹಿಡಿಯುತ್ತಿರುವ ಶಿಕ್ಷಣದಲ್ಲಿನ ಇಂಗ್ಲಿಷ್ ಪ್ರಾಥಮಿಕತೆಗಾಗಿ ಆಗ್ರಹಿಸುವುದು ಒಂದು ದೊಡ್ಡ ವಿರೋಧಾಭಾಸ ವಲ್ಲವೆ? ನೀವು ಇದೇ ರೀತಿಯ ಆರ್ಥಿಕತೆ, ಇದೇ ರೀತಿಯ ರಾಷ್ಟ್ರವನ್ನು ಕಟ್ಟಬೇಕು ಅಂದ್ಕೊಂಡಿದ್ರೆ ಇಂಗ್ಲೀಷ್ ಬೇಕು ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ನೀವು

ನಮ್ಮ ಈ ಅಭಿವೃದ್ಧಿಯ ಪರಿಕಲ್ಪನೆ ಸರಿಯಿಲ್ಲ. ಎಲ್ಲ ತಲೆಕೆಳಗಾಗಿದೆ ಅಂತ ಹೇಳ್ತಾ, ಇಂಗ್ಲೀಷ್ ಭಾಷೆಯ ಸ್ಥಾನಮಾನವನ್ನು ಹೆಚ್ಚಿಸಲೂ ಆಗ್ರಹಿಸುವುದು ಅಪ್ಪಟ ಅಪ್ರಾಮಾಣಿಕತೆ ಆಗುತ್ತದೆ. ಹೊಸ ಸಮಾಜವಾದದ ಅನ್ವೇಷಣೆಗಾಗಿ ನಾವು ನಮ್ಮ ಪ್ರಾದೇಶಿಕ ಭಾಷೆಗಳ ಕಡೆಗೇ ನೋಡಬೇಕಾಗುತ್ತದೆ. ಭಾಷೆ ಎಂದರೆ ಅದು ಕೇವಲ ಸಂಪರ್ಕ ಮಾಧ್ಯಮವಲ್ಲ. ಅದೊಂದು ಸಂಸ್ಕೃತಿ. ಜೀವನವನ್ನು ಗ್ರಹಿಸುವ, ಕಟ್ಟಿಕೊಳ್ಳುವ ಒಂದು ವಿಶಿಷ್ಟ ಕ್ರಮ ಕೂಡಾ. ಹೀಗಾಗಿ ನಮ್ಮ ಭಾಷೆಯನ್ನು ಎರಡನೇ ದರ್ಜೆಗೆ ಇಳಿಸಿ ಪ್ರತಿ ರಾಜಕಾರಣವನ್ನು ಕಟ್ಟುತ್ತೇವೆ ಅಂದ್ರೆ ಅದು ಆತ್ಮದ್ರೋಹದ ಮಾತಾಷ್ಟೇ ಆಗುತ್ತದೆ.

ದೇವನೂರ ಮಹಾದೇವ ಅವರು ಇಂಗ್ಲೀಷನ್ನ ಮಾಧ್ಯವನ್ನಾಗಿ ಕೇಳುತ್ತಿಲ್ಲ, ಕೇವಲ ಭಾಷೆಯನ್ನಾಗಿ ಕೇಳುತ್ತಿದ್ದೇವೆ ಎನ್ನುತ್ತಾರಲ್ಲ?

ಮಹದೇವ ನನ್ನ ಆಪ್ತಾತಿ ಆಪ್ತ ಗೆಳೆಯರು. ನಾನು ಅವರನ್ನ ನನ್ನ ಒಬ್ಬ ಫಿಲಾಸಫರ್–ಗೈಡ್–ಫ್ರೆಂಡ್ ಅಂತ ತಿಳಿದವನು. ಭಾಷಾ ನೀತಿಯ ವಿಚಾರದಲ್ಲಿ ಯಾವಾಗ ಅಭಿಪ್ರಾಯ ಭೇದ ಉಂಟಾಯಿತೋ ಆಗಿನಿಂದ ನನ್ನ ಮತ್ತು ಅವರ ನಡುವೆ ಭಾವನಾತ್ಮಕ ಕಂದಕ ಉಂಟಾಗಿದೆ. ಮತ್ತೆ ಯಾರೋ ಒಬ್ಬ ದೊಡ್ಡ ವ್ಯಕ್ತಿ ಹೇಳಿದಾರೆ ಅನ್ನೋ ಕಾರಣಕ್ಕೆ ನಾನು ನನ್ನ ಅಭಿಪ್ರಾಯವನ್ನ ಬದಲಿಸಿಕೊಳ್ಳಲಾರೆ. ಅವರ ಅಭಿಪ್ರಾಯ ಅವರಿಗೆ ನನ್ನ ಅಭಿಪ್ರಾಯ ನನಗೆ. ಇಂದು ಭಾಷೆಯನ್ನಾಗಿ ಕೇಳುತ್ತಿರುವುದು, ನಾಳೆ ಮಾಧ್ಯಮವನ್ನಾಗಿ ಕೇಳಲೆಂದೇ ಎಂಬುದು ಇವರು ಇಂಗ್ಲಿಷ್ ಪರವಾಗಿ ಮಂಡಿಸುತ್ತಿರುವ ವಾದದಿಂದಲೇ ಸ್ಪಷ್ಟವಾಗುವಂತಿದೆ. ಆದ್ದರಿಂದ ಇಂಗ್ಲೀಷ್ ಭಾಷೆಯಿಂದಲೇ ಇಂದು ಉದ್ಧಾರ ಸಾಧ್ಯ ಎಂದು ನಿಜವಾಗಿ ನಂಬಿರುವವರು ಅದನ್ನು ಭಾಷೆಯಾಗಿ ಮಾತ್ರವಲ್ಲ, ನೇರವಾಗಿ ಇಂಗ್ಲೀಷ್ ಮಾಧ್ಯಮವನ್ನೇ ಬೇಡುವುದರ ಮೂಲಕ ಹೆಚ್ಚು ಪ್ರಾಮಾಣಿಕರಾಗುವುದು ಒಳಿತು. ಆದರೆ ಆ ಧೈರ್ಯ ಇನ್ನೂ ಅವರಿಗೆ ಬಂದಿಲ್ಲ!

ಭಾಷಾ ಚಳುವಳಿಯನ್ನು (ಗೋಕಾಕ್ ಚಳುವಳಿ) ಒರಟು ಸ್ವರೂಪದ್ದೆಂದು ಹೇಳಿದಿರಿ. ಅದು ಕೂಡಾ ಭಾಷಾ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಚಳುವಳಿಯಲ್ಲವೇ?

ಗೋಕಾಕ್ ಚಳುವಳಿ ಶಿಕ್ಷಣದಲ್ಲಿ ಕನ್ನಡದ ಮಕ್ಕಳಿಗೆ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಕಲಿಸಲು ಆಗ್ರಹಿಸುವುದಕ್ಕೆ ಸೀಮಿತವಾದ ಒಂದು ಚಳುವಳಿ. ಭಾಷಾ ರಾಜಕಾರಣವನ್ನು ಅದರ ತಾರ್ಕಿಕ ಅಂತ್ಯಕ್ಕೆ ಕರೆದೊಯ್ಯುವ ಯಾವುದೇ ಆಶಯವನ್ನು ಕೂಡ ಅದು ಪ್ರಕಟಪಡಿಸಲಿಲ್ಲವಾದ್ದರಿಂದ ಅದನ್ನು ಭಾಷಾ ರಾಷ್ಟ್ರೀಯತೆಯ ಚಳುವಳಿ ಎಂದು ಕರೆಯಲಾಗುವುದಿಲ್ಲ. ನಮ್ಮ ಎಲ್ಲ ಕನ್ನಡ ಚಳುವಳಿಗಳ ಮಿತಿ ಇದು. ಇದಕ್ಕೆ ಕಾರಣಗಳನ್ನು ತೇಜಸ್ವಿ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಎಂಬ ತಮ್ಮ ಒಕ್ಕೂಟದ ಭಾಷಣದಲ್ಲಿ ವಿವರಿಸಿದ್ದಾರೆ.

ಕೋಮುವಾದ ನಮ್ಮ ದೇಶವನ್ನು ಕಾಡ್ತಿರೋ ಪ್ರಮುಖ ಸಮಸ್ಯೆ. ಇದನ್ನ ದೇಶದ ಒಳಗಿನ ಕೋಮುವಾದಿಗಳು ಮತ್ತು ಹೊರಗಿನ ಉಗ್ರವಾದಿಗಳಿಬ್ಬರೂ (ಪರಸ್ಪರರನ್ನು ದೂಷಿಸುತ್ತ) ಬೆಳೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಮಾಜವಾದವನ್ನು ಒಪ್ಪಿಕೊಂಡ ಯುವಕರಿಗೆ ನಿಮ್ಮ ಕಿವಿ ಮಾತೇನು?

ನೋಡಿ ಸಮಾಜವಾದ ಚಳುವಳಿ, ವಿಶೇಷವಾಗಿ ಲೋಹಿಯಾ ಧಾರೆ ಧರ್ಮವನ್ನು ಕುರಿತು ಒಂದು ಸ್ಪಷ್ಟವಾದ ನಿಲುವನ್ನು ತಾಳಿದೆ. ಅದು ನಾವಿವತ್ತು ಎತ್ತಿ ಹಿಡಿಯುತ್ತಿರುವ ಸೆಕ್ಯೂಲರಿಸಮ್‌ಗಿಂತ ತುಂಬಾ ಭಿನ್ನವಾಗಿದೆ. ಈ ಮಾರ್ಕ್ಸ್‌ವಾದಿ ಸಮಾಜವಾದ ಇದೆಯಲ್ಲ– ಯಾವುದನ್ನ ನಾವು ವೈಜ್ಞಾನಿಕ ಸಮಾಜವಾದ ಅಂತ ಕರೀತೀವಿ–ಅದು ಧರ್ಮವನ್ನು ಅಫೀಮು ಅಂತ ಕರೀತು. ಇದರಿಂದ ದೊಡ್ಡ ಗೊಂದಲವೇ ಆಗಿ ಹೋಗಿದೆ. ಧರ್ಮ ಅನ್ನೋದು ಭಾರತದಲ್ಲಿ ಬಹುಮುಖಿಯಾದದ್ದು. ಅದು ಸಾಂಸ್ಕೃತಿಕ ಮುಖವುಳ್ಳದ್ದು. ಅದು ಪಶ್ಚಿಮದಲ್ಲಿದ್ದಂತೆ ಕೇವಲ ಚರ್ಚಲ್ಲ. ಅಥವಾ ಇಲ್ಲಿನ ದೇವಸ್ಥಾನ ಮಾತ್ರವಲ್ಲ. ಕೃಷಿ ಸಂಸ್ಕೃತಿಗೆ, ಬುಡಕಟ್ಟು ಸಂಸ್ಕೃತಿಗೆ ಸಂಬಂಧಿಸಿದ ಆಚರಣೆಗಳು ಕೂಡ ಇಲ್ಲಿ ಧರ್ಮ ಎನ್ನಿಸಿಕೊಂಡಿದೆ. ತೇರು, ಜಾತ್ರೆ, ಭೂಮಿ ಹುಣ್ಣಿಮೆ ಇವೆಲ್ಲವೂ ಇಲ್ಲಿ ಧರ್ಮ. ಆದರೆ ಆಧುನಿಕ ರಾಷ್ಟ್ರವಾಗುವ ಭರದಲ್ಲಿ ನಾವು ಪಶ್ಚಿಮದ ಆಧುನಿಕತೆಯ ಸೃಷ್ಟಿಯಾದ ಧರ್ಮ ಮತ್ತು ರಾಜಕಾರಣವನ್ನ ಪ್ರತ್ಯೇಕ ಮಾಡುವ ಸೆಕ್ಯೂಲರ್ ತತ್ವವನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡೆವು. ರಾಜಕಾರಣ ಎಂದರೇನು? ಜನತಾ ಶಕ್ತಿಯ ನಿರ್ವಹಣೆ. ಈ ಜನತಾ ಶಕ್ತಿಯ ಸಾಂಸ್ಕೃತಿಕತೆಯನ್ನೇ ಅನುಮಾನಾಸ್ಪದಗೊಳಿಸಿ ನಾವೆಂತಹ ರಾಜಕಾರಣವನ್ನು ಮಾಡಬಲ್ಲೆವು? ನಮ್ಮ ರಾಜಕಾರಣದ ಇಂದಿನ ಎಲ್ಲ ಅನೈತಿಕತೆ ಮತ್ತು ಭ್ರಷ್ಟತೆಗಳು ಈ ಮೂಲದಿಂದಲೇ ಬಂದವು ಎಂದು ನಾನು ಭಾವಿಸಿದ್ದೇನೆ. ಇಲ್ಲಿ ಗಾಂಧಿಯವರ 'ನನಗೆ ದೀರ್ಘಕಾಲಿಕ ರಾಜಕಾರಣವೇ ಧರ್ಮ, ಅಲ್ಪಕಾಲಿಕ ಧರ್ಮವೇ ರಾಜಕಾರಣ' ಎಂಬ ಮಾತು ನನಗೆ ನೆನಪಿಗೆ ಬರುತ್ತಿದೆ.

ಲೋಹಿಯಾ ಅವರು ಧರ್ಮಕ್ಕೆ ನಾಲ್ಕು ಮುಖಗಳಿವೆ ಅಂತ ಹೇಳ್ತಾ ಇದ್ದರು. ಮೊದಲನೆಯದು ಅಗಮ್ಯದೊಡನೆ ಸಂವಾದ. ಮನುಷ್ಯ ಪೂರ್ಣನಲ್ಲ. ಅವನ ಪೂರ್ಣತೆಯ ಹಂಬಲ ಚಿರಂತನವಾದದ್ದು. ಹಾಗಾಗಿ ಮನುಷ್ಯ ಅಗಮ್ಯದ ಹಂಬಲದಲ್ಲಿ ಧ್ಯಾನಸ್ಥನಾಗುವುದು ಅವನ ಹುಟ್ಟು ಲಕ್ಷಣ. ಎರಡನೆಯದು ಸಾಮಾಜಿಕ ಸದ್ವರ್ತನೆಯ ತರಬೇತಿ: ಒಳ್ಳೆಯದು, ಕೆಟ್ಟದು, ಬೇಕು–ಬೇಡಗಳ ಶಿಕ್ಷಣ. ಮೂರನೆಯದು ಹೆಣ್ಣು ಗಂಡಿನ ನಡುವೆ ಮತ್ತು ಜಾತಿ–ವರ್ಗಗಳ ತರತಮಗಳನ್ನು ಬೋಧಿಸುವ ಕೆಲವು ಲಕ್ಷಣಗಳು ಧರ್ಮದಲ್ಲಿವೆ. ನಾಲ್ಕನೆಯ ಮುಖ ಅನ್ಯಮತ ಅಸಹಿಷ್ಣುತೆ ಅಥವಾ ಮತಾಂಧತೆ. ಧರ್ಮದ ಈ ನಾಲ್ಕು ಮುಖಗಳಲ್ಲಿ ಮೊದಲ ಎರಡನ್ನು ಇಟ್ಟುಕೊಂಡು, ಕೊನೆಯ ಎರಡನ್ನು ತಿರಸ್ಕರಿಸಬೇಕೆಂದು ಲೋಹಿಯಾ ಹೇಳುತ್ತಿದ್ದರು. ನಾವು ಆಧುನಿಕತೆಯ ಹೆಸರಿನಲ್ಲಿ ಧರ್ಮವನ್ನು ಸಾರ್ವಜನಿಕ ಜೀವನದಿಂದ ದೂರ ಇಡಬೇಕು ಅಂತ ಹೇಳಿದ್ದರಿಂದ ಜನತೆ ಈ ಸೆಕ್ಯೂಲರಿಸಮನ್ನು ಆಳದಲ್ಲಿ ಒಪ್ಪಲಿಲ್ಲ. ಜೊತೆಗೆ ಈ ಸೆಕ್ಯೂಲರ್ ರಾಷ್ಟ್ರವನ್ನು ಕಟ್ಟಲಿಕ್ಕೆ ಹೊರಟಾಗ, ಅದು ಧರ್ಮದ ಆಧಾರದ ಮೇಲೆ ವಿಭಜಿತವಾದ ಕಹಿ ನೆನಪು ಜನರ ಮನಸ್ಸಿನಲ್ಲಿದೆ ಎಂಬುದನ್ನೂ ನಾವು ಮರೆಯಬಾರದು. ನಮ್ಮದು ನಿಜವಾಗಿ ಸೆಕ್ಯುಲರ್ ರಾಷ್ಟ್ರವಾಗುವುದು ನಾವು ಏಕರೂಪದ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿದಾಗ. ಹಾಗಾಗಿಯೇ ಎಲ್ಲ ರಾಜಕಿಯ ಪಕ್ಷಗಳು ಇದನ್ನು ಪ್ರಸ್ತಾಪಿಸಲು ಹಿಂದು ಮುಂದು ನೋಡುತ್ತಿದ್ದಾಗ ಲೋಹಿಯಾ ಇದನ್ನು ೧೯೬೭ರಲ್ಲಿಯೇ ಒಂದು ಚುನಾವಣಾ ವಿಷಯವನ್ನಾಗಿ ಘೋಷಿಸಿದರು. ಇದರಿಂದಾಗಿ ಚುನಾವಣೆಯಲ್ಲಿ ಅವರ

ಪಕ್ಷಕ್ಕೆ ಹಲವೆಡೆ ಸೋಲುಂಟಾಯಿತು. ಅದರಿಂದೇನೂ ಅವರು ವಿಚಲಿತರಾಗಲಿಲ್ಲ. ಕಿಶನ್ ಪಟ್ನಾಯಕ್ ಎರಡನೇ ಬಾರಿ ಸೋತದ್ದು ಇದೇ ಕಾರಣಕ್ಕೆ.

ಗಾಂಧಿ ಹತ್ಯೆಯ ಕಾರಣದಿಂದಾಗಿ ದಮನಗೊಂಡಿದ್ದ ಹಿಂದೂ ಕೋಮುವಾದ ಶಾಬಾನು ಪ್ರಕರಣದಿಂದ ಮತ್ತೆ ಚಿಗುರೊಡೆಯಲು ಅವಕಾಶವಾಯಿತು. ಇದರಿಂದ ಸಿಟ್ಟಿಗೆದ್ದ ಹಿಂದುಗಳನ್ನು ಸಂತೈಸಲು ರಾಜೀವ್ ಗಾಂಧಿ ಬಾಬ್ರಿ ಮಸೀದಿಯ ಬಾಗಿಲು ತೆಗಿಸಿ ಪೂಜೆ–ಕರಸೇವೆ ಇತ್ಯಾದಿಗಳಿಗೆ ಅವಕಾಶ ಮಾಡಿಕೊಟ್ಟು ದೊಡ್ಡ ಅನಾಹುತಕ್ಕೇ ದಾರಿ ಮಾಡಿಕೊಟ್ಟರು. ಹೀಗೆ ನಾವು ಅಪದ್ಧ ಸೆಕ್ಯುಲರಿಸಂನ್ನು ರಕ್ಷಿಸಿಕೊಳ್ಳುವ ನೆಪದಲ್ಲಿ ಸ್ಪರ್ಧಾತ್ಮಕ ಕೋಮುವಾದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ನನ್ನ ಪ್ರಕಾರ ಸೆಕ್ಯೂಲರಿಸಮ್‌ನ್ನು ನಾವು ಅಳವಡಿಸಿಕೊಂಡ ರೀತೀನೇ ಇಂದು ಭಯಂಕರ ಕೋಮುವಾದಕ್ಕೆ ಕಾರಣವಾಗಿದೆ. ಆದ್ದರಿಂದ ಸೆಕ್ಯೂಲರಿಸಮನ್ನು ಇಂದಿನ ಸಂದರ್ಭಕ್ಕೆ ರಿಡಿಫೈನ್ ಮಾಡಿಕೊಳ್ಳುವುದೆಂದರೆ, ಜನಪ್ರಿಯತೆಯನ್ನು ಪಣಕ್ಕೊಡ್ಡಿ ಯೂನಿಫಾರಂ ಸಿವಿಲ್ ಕೋಡ್‌ಗಾಗಿ ಆಗ್ರಹಿಸುವುದು.

ಭಾರತದಂತಹ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಅಲ್ಪಸಂಖ್ಯಾತರಿಗೆ ಕೆಲವು ಸವಲತ್ತುಗಳನ್ನು ಕೊಡುವುದು ತಪ್ಪು ಅಂತೀರಾ?

ಭಾರತದ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳನ್ನು ಕೊಟ್ಟ ಮೇಲೆ ಮತ್ತೆ ಅಲ್ಪಸಂಖ್ಯಾತತೆಯ ಪರಿಭಾಷೆಯಲ್ಲಿ ಮಾತಾಡುವುದು ಈ ಸಮಾನ ಹಕ್ಕುಗಳ ಜಾರಿಯ ಬಗ್ಗೆ ನಮಗಿರುವ ಅಪನಂಬಿಕೆ ಅಥವಾ ಸಂದೇಹಗಳನ್ನಷ್ಟೇ ಸೂಚಿಸುತ್ತದೆ. ಎಲ್ಲರಿಗೂ ಧರ್ಮ, ಸಂಸ್ಕೃತಿ, ಪೂಜಾ ವಿಧಾನ ಇತ್ಯಾದಿಗಳಿಗೆ ಸಂಬಂಧಪಟ್ಟಂತೆಯೂ ಸಮಾನ ಮೂಲಭೂತ ಹಕ್ಕುಗಳನ್ನು ಕೊಟ್ಟ ಮೇಲೆ ಮತ್ತೆ ಅಲ್ಪಸಂಖ್ಯಾತರ ಹೆಸರಲ್ಲಿ ಸವಲತ್ತು ಕೊಡುತ್ತೀರೆಂದರೆ ಏನೋ ಓಲೈಸುವಿಕೆ ನಡೀತಾ ಇದೆ ಅಂತ ಯಾರಿಗಾದರೂ ಅನಿಸೋದಕ್ಕೆ ಶುರುವಾಗುತ್ತೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಸ್ಲಿಂ ಕೋಮುವಾದ ಬೆಳೆದದ್ದೇ ಸೆಕ್ಯೂಲರಿಸಂ ಹೆಸರು ಹೇಳಿಕೊಂಡು. ಈಗ ಹಿಂದೂ ಕೋಮುವಾದ ಪುನರವತರಿಸಿರುವುದು ಮುಸ್ಲಿಂ ಕೋಮುವಾದವನ್ನು ಕಾರಣ ಮಾಡಿಕೊಂಡು! ಅಂದರೆ, ಸೆಕ್ಯೂಲರಿಸಮ್‌ನ್ನು ಮುಸ್ಲಿಮರು ಒಂದು ರೀತಿ ಅರ್ಥಮಾಡಿಕೊಂಡಿದ್ದಾರೆ, ಹಿಂದೂಗಳು ಇನ್ನೊಂದು ರೀತಿ ಅರ್ಥ ಮಾಡಿಕೊಂಡಿದ್ದಾರೆ. ಸರ್ಕಾರ ಮತ್ತೊಂದು ರೀತಿ ಅರ್ಥ ಮಾಡಿಕೊಂಡಿದೆ! ಇದೇ ಇಂದಿನ ಎಲ್ಲ ಕೋಮುವಾದ ಸಂಬಂಧಿ ಎಲ್ಲ ಅನಾಹುತಗಳಿಗೆ ಕಾರಣವಾಗಿದೆ.

ಬದಲಾವಣೆಗಳಿಗೆ ರಾಜಕೀಯ ಪಕ್ಷಗಳನ್ನು, ಸಿದ್ಧಾಂತಗಳನ್ನು ಅವಲಂಬಿಸುವ ಬದಲು ಈ ರಾಜಕಾರಣವನ್ನೇ ಅಪ್ರಸ್ತುತಗೊಳಿಸಿ ಚಳುವಳಿ ನಡೆಸುವ ಅಣ್ಣಾ ಹಜಾರೆ, ಮೇಧಾಪಾಟ್ಕರ್ ರೀತಿಯ ನಿಲುವು ಹೆಚ್ಚು ಪರಿಣಾಮಕಾರಿಯಲ್ಲವೆ?

ಅವರಿಬ್ಬರನ್ನೂ ನಾನು ಕಂಡಿದ್ದೇನೆ, ಮಾತಾಡಿಸಿದ್ದೇನೆ. ಅವರು ರಾಜಕಾರಣವನ್ನು ಅಪ್ರಸ್ತುತಗೊಳಿಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾದೀತು. ಅವರು ಮಾಡುತ್ತಿರುವುದೂ ರಾಜಕಾರಣವೇ. ಆದರೆ ಅದು ಚುನಾವಣಾ ರಾಜಕೀಯಕ್ಕೆ ಹೊರತಾದ ಪರ್ಯಾಯ

ರಾಜಕಾರಣ. ರಾಜಕಾರಣಕ್ಕೆ, ಕಳೆದು ಹೋಗಿರುವ ಅದರ ತಾತ್ವಿಕತೆಯನ್ನು ಮರಳಿ ಗಳಿಸಿಕೊಡಲು ಯತ್ನಿಸುತ್ತಿರುವ ಜನತಾ ಚಳುವಳಿಗಳ ನಾಯಕರವರು. ಅವರು ಮಾತ್ರವಲ್ಲ ನಮ್ಮ ಹಳ್ಳಿಗಳಿಗೆ ಹೋದರೆ ಅವರ ಹಾಗೇ, ಆದರೆ ತಮ್ಮ ಮಿತಿಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ನೋಡಬಹುದು. ಅದನ್ನೊಂದು ಜನಶಕ್ತಿಯಾಗಿ ಪರಿವರ್ತಿಸುವ ಕೆಲಸವಾಗಬೇಕಿದೆ ಇಂದು.

ಪಾಳೇಕರ್ ಕೃಷಿಯಲ್ಲಿ ತೊಡಗಿದವರನ್ನೇ ತೆಗೆದುಕೊಳ್ಳಿ. ಪಾಳೇಕರ್ ಕೃಷಿಯನ್ನು ಒಂದು ಜನಶಕ್ತಿಯನ್ನಾಗಿ ರೂಪಿಸಲು ಸಾಧ್ಯವಾದರೆ, ಅದು ಕೈಗಾರಿಕೀಕರಣದ ವಿರುದ್ಧ ನಾವು ಈವರೆಗೆ ಮಾಡಿರದಂತಹ ದೊಡ್ಡ ಹೋರಾಟ ಆಗಲಿಕ್ಕೆ ಸಾಧ್ಯವಿದೆ. ಆದರೆ ಪಾಳೇಕರ್ ಕೃಷಿ ವಿರುದ್ಧವೆ ಅಪಪ್ರಚಾರ ಶುರುವಾಗಿದೆ ಇವತ್ತು. ಅದನ್ನು ಶುರು ಮಾಡಿದವರೆ ಇಂದು ಅಪಪ್ರಚಾರಕ್ಕೆ ತೊಡಗಿದ್ದಾರೆ ಎಂದರೆ ಏನು ಹೇಳುವುದು? ಬದಲಾವಣೆಯ ಮಾತನಾಡುವವರಲ್ಲೇ ಈ ರೀತಿಯ ಸಮಸ್ಯೆಗಳು ಕಾಣ್ತಿವೆ ಇವತ್ತು. ಇದಕ್ಕೆ ಕಾರಣ, ಬದಲಾವಣೆಯ ಉಮೇದು ವ್ಯಕ್ತಿತ್ವದ ಆಳದಿಂದ ಹೊಮ್ಮದೆ, ಕೇವಲ ಒಂದು ಖಯಾಲಿಯ ವಿಷಯವಾಗಿರುವುದು. ಮೊದಲಿಗೆ ಬದಲಾವಣೆಯ ಹೋರಾಟದಲ್ಲಿ ತೊಡಗಿದವರು ಎಷ್ಟರ ಮಟ್ಟಿಗೆ ತಮ್ಮ ತಾತ್ವಿಕ ನಂಬಿಕೆಗಳಲ್ಲಿ ನಿಷ್ಠೆಯನ್ನು ಇಟ್ಟುಕೊಂಡಿದ್ದಾರೆ ಅನ್ನೋದು ಮುಖ್ಯವಾಗುತ್ತದೆ. ಜನ ಎಲ್ಲವನ್ನೂ, ಎಲ್ಲರನ್ನೂ ಗಮನಿಸುತ್ತಿರುತ್ತಾರೆ. ನಾವು ಪದೇ ಪದೇ ನಮ್ಮ ಖಯಾಲಿಗೆ ತಕ್ಕಂತೆ ನಮ್ಮ ನಿಲುವುಗಳನ್ನು ಬದಲಾಯಿಸ್ತಾ ಹೋದರೆ ಕಷ್ಟ ಆಗುತ್ತದೆ. ಹೀಗಾಗಿ, ನಮ್ಮ ರಾಜಕೀಯ ಸಂಸ್ಕೃತಿ ನಾಶವಾಗಿದೆ ಅಂತ ನಾವು ಹೇಳ್ತಿರುವಾಗ, ಅದು ನಾಶ ಮಾಡಿರೋದು ಮುಖ್ಯವಾಗಿ ನಮ್ಮ ಶೀಲವನ್ನು ಎಂಬುದು ನಮ್ಮ ಗಮನದಲ್ಲಿರಬೇಕು.

ಜಾಗತೀಕರಣವನ್ನು ಅನಿವಾರ್ಯ ಎಂಬಂತೆ ಮಾಡಿರುವ ನಮ್ಮ ಕೇಂದ್ರ ಹೀನ ರಾಜಕೀಯ, ನಮ್ಮ ವ್ಯಕ್ತಿತ್ವದ ಅಡಿಗಲ್ಲುಗಳನ್ನೇ ನಾಶ ಮಾಡಿದೆ. ಅದನ್ನು ತಿಳಿದು ಅದನ್ನು ಕಟ್ಟುವ ಕಡೆಗೆ ಪ್ರಯತ್ನಪಟ್ಟರೆ, ನಾವು ಏನನ್ನಾದರೂ ಮಾಡಬಹುದು. ಹೊಸ ಸಮಾಜವಾದವನ್ನು ರೂಪಿಸಬಹುದು. ತುಂಬಾ ದೂರದ ಗುರಿ ಇದು. ಹಾಗೇ ಬಹಳ ಕಷ್ಟದ ಗುರಿ ಕೂಡಾ. ಆದರೆ ಮನುಷ್ಯ ಖಂಡಿತಾ ಆ ಗುರಿಯ ಕಡೆ ಸಾಗುತ್ತಾನೆ ಅಂತ ನಂಬುತ್ತೇನೆ ನಾನು. ಏಕೇಂದ್ರೆ, ಇಷ್ಟು ಕಡು ಭ್ರಷ್ಟತೆಯನ್ನು, ಅಸಮಾನತೆಯನ್ನು, ಹಿಂಸೆಯನ್ನು, ಅನೈತಿಕತೆಯನ್ನು ಮನುಷ್ಯ ಯಾವತ್ತೂ ಬಹಳ ದಿವಸ ಸಹಿಸುವುದಿಲ್ಲ. ಕಾಯಬೇಕು ಅಷ್ಟೇ ನಾವು. ಕಾಯುತ್ತಾ ಇದ್ದೀನಿ ನಾನಂತೂ. ಕಾಯುವುದೆಂದರೆ ಸುಮ್ಮನೆ ಕಾಯುವುದಲ್ಲ, ನಮ್ಮ ಕೆಲಸವನ್ನು ನಾವು ಮಾಡ್ತಾನೆ ಕಾಯಬೇಕು. ಅದಕ್ಕೆ, ನಾವು ನಂಬಿದ್ದರಲ್ಲಿ ಅಚಲ ನಂಬಿಕೆ ಬಹಳ ಮುಖ್ಯ.

('ಚಾರ್ವಾಕ', ಜೂನ್ ೨೦೦೯)

ಇದೇ ಲೇಖಕರ ಇತರ ಕೃತಿಗಳು:

- ಗಮನ (ಸಾಹಿತ್ಯ ವಿಮರ್ಶೆ–ವಿಚಾರ)
- ಅನೇಕ (ಸಾಹಿತ್ಯ ವಿಮರ್ಶೆ–ವಿಚಾರ)
- ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ–ವಿಚಾರ)
- ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)
- ಒಂದು ಅಪೂರ್ಣ ಕ್ರಾಂತಿಯ ಕಥೆ(ಜಯಪ್ರಕಾಶ ನಾರಾಯಣರ ಬದುಕು ಮತ್ತು ಹೋರಾಟ)
- ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)
- ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ಚಿಂತನೆಗಳು)
- ಬೇರು ಬಿಳಲು (ಸಾಹಿತ್ಯ ಮತ್ತು ಸಮಾಜವಾದಿ ಸಂಕಥನಗಳು–೧)
- ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು–೨)
- ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು–೩)
- ಇಲ್ಲಿ ಯಾವುದೂ ಅಮುಖ್ಯವಲ್ಲ (ಸಾಹಿತ್ಯ ಮತ್ತು ಸಮಾಜವಾದಿ ಸಂಕಥನಗಳು–೪)
- ಕಂಡದ್ದು ಕಾಡಿದ್ದು(ಸಾಹಿತ್ಯ ಮತ್ತು ಸಮಾಜವಾದಿ ಸಂಕಥನಗಳು–೫)
- ಕನ್ನಡ–ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)
- ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)
- ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ (ಭಾಷಾ ನೀತಿ ಜಿಜ್ಞಾಸೆ)
- ಲೋಹಿಯಾ ಕೈಪಿಡಿ
- ಲೋಹಿಯಾ ವಾಣಿ
- ಜೆಪಿ ಕೈಪಿಡಿ
- ಜೆಪಿ ಸೆರೆಮನೆ ದಿನಚರಿ (ಅನುವಾದ)

ಸಂಪಾದನೆ:
- ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ
- ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)
- ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)
- ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)
- ಹೊಸ ಮನುಷ್ಯ (ಸಮಾಜವಾದಿ ಚಿಂತನೆಯ ಮಾಸಿಕ)

ಸಹ ಸಂಪಾದನೆ:
- ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)
- ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
- ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಮಾಸ್ತಿ ಶತಮಾನೋತ್ಸವ ಸಂಪುಟ)
- ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)
- ಉರಿದ ಪಂಜು (ಕೆ. ರಾಮದಾಸ್ ನೆನಪಿನ ಸಂಪುಟ)

* ಕುವೆಂಪು ಸಾಹಿತ್ಯದರ್ಶನ / ಡಿ.ಎಸ್. ನಾಗಭೂಷಣ ೯೫/-
* ಕುವೆಂಪು ಪುನರಾನ್ವೇಷಣೆ/ ಡಿ.ಎಸ್. ನಾಗಭೂಷಣ ೨೪೦/-
* ಲೋಹಿಯಾ ಕೈಪಿಡಿ/ ಡಿ.ಎಸ್. ನಾಗಭೂಷಣ ೨೫/-
* ಲೋಹಿಯಾ ವಾಣಿ/ ಡಿ.ಎಸ್. ನಾಗಭೂಷಣ ೨೫/-
* ಜೆ.ಪಿ. ಕೈಪಿಡಿ/ ಡಿ.ಎಸ್. ನಾಗಭೂಷಣ ೨೫/-
* ಭಾರತೀಯ ಷೋಡಶ ಸಂಸ್ಕಾರಗಳು (ವೈಜ್ಞಾನಿಕ ದೃಷ್ಟಿಕೋನ) ಡಾ. ಶ್ರೀ ಷ.ಬ್ರ. ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು, ವೀರಾಪುರ ೧೦೦/-
* ನೂರೊಂದು ಮುತ್ತು ರತ್ನಗಳು (ವ್ಯಕ್ತಿ ಚಿತ್ರಣಗಳು) ಜಿ.ಬಿ. ರುದ್ರಪ್ಪ ೧೫೦/-
* ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ/ರೇಖಾ ಬಿ. ೧೪೦/-
* ಕಾಯಕಯೋಗಿ ಸರ್.ಎಂ.ವಿಶ್ವೇಶ್ವರಯ್ಯ /ಡಾ. ಪ್ರದೀಪ್‌ಕುಮಾರ್ ಹೆಬ್ರಿ ೧೦೦/-
* ವಚನಸಂಪದ/ಬಸವಣ್ಣನವರ ವಚನಗಳು/ಜಿ.ಬಿ.ಟಿ.ಗೀತಾವಿಶ್ವನಾಥ್ ೩೦/-
* ಗ್ರೀನ್ ರೂಮಿನಲ್ಲಿ/ಕವನಸಂಕಲನ/ದೀಪ್ತಿ ಭದ್ರಾವತಿ ೫೦/-
* ಮೀನಂಬುಳ/ವಿಮರ್ಶಾ ಲೇಖನಗಳು/ಕೆ.ಆರ್.ಕೃಷ್ಣಯ್ಯ ೧೫೦/-
* ಪ್ರೇಮಜಾಲ/ಕಾದಂಬರಿ/ಬಿ.ಎಲ್.ವೇಣು ೧೧೦/-
* ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು/ ಮಕ್ಕಳ ಕಥೆಗಳು/ಡಾ.ನಾ.ಡಿಸೋಜ ೪೫/-
* ಮಲೆನಾಡಿಗ/ಡಾ.ನಾ.ಡಿ.ಸೋಜಅಭಿನಂದನಾ ಗ್ರಂಥ ೨೫೦/-
* ಹಾರುವ ಹಕ್ಕಿಗೆ ಹಸಿರೆಲೆ ತೋರಣ/ಸಮಗ್ರ ಮಕ್ಕಳ ಕಿರು ಕಾದಂಬರಿಗಳು/ ಡಾ.ನಾ.ಡಿಸೋಜ ೬೦೦/-
* ಮಧುರಾಲಾಪ/ಶರ್ಮ/ಗೀತಗೋವಿಂದ ಅನುವಾದ ೫೦/-
* ಕನ್ನಡ ವ್ಯಾಕರಣ ಸಿಂಚನ/ ಶಿವಲಿಂಗೇಗೌಡ ೧೨೦/-
* ಮಹಿಳೆ, ಮಾಧ್ಯಮ, ಮಾರುಕಟ್ಟೆ/ಮಹಿಳಾ ವಿಮರ್ಶಾ ಲೇಖನಗಳು/ ವಿಜಯ್‌ಕುಮಾರ್ ಹೆಚ್. ೫೦/-
* ಆರೋಗ್ಯ ಸಂರಕ್ಷಣ (ಆಯುರ್ವೇದ ಚಿಕಿತ್ಸಾ ಮಾರ್ಗದರ್ಶಿ) ಡಾ॥ ಚೇತನ್‌ಕುಮಾರ್ ೧೨೦/-

ಲೋಹಿಯಾ ಗಾಂಧಿ ಮಾರ್ಕ್ಸ್...



"ಆಧುನಿಕ ನಾಗರೀಕತೆ ಮತ್ತು ಅದರ ಚಲನಶೀಲತೆ ಕುರಿತಂತೆ ಮಾರ್ಕ್ಸ್ ಒಂದು ನೆಲೆಯಲ್ಲಿ ನಿಂತು ಚರ್ಚಿಸಿದರೆ, ಮಿಕ್ಕ ಮುವ್ವರು ಇನ್ನೊಂದು ನೆಲೆಯಲ್ಲಿ ನಿಂತು ಚರ್ಚಿಸಿದಂತೆ ತೋರುತ್ತದೆ. ಇದಕ್ಕೆ ಮುಖ್ಯ ಕಾರಣ, ಇಡೀ ಜಗತ್ತು ಮನುಷ್ಯ ಶ್ರಮದಿಂದ ಸೃಷ್ಟಿಯಾಗಿದೆ ಎಂಬ ಭೌತ ನಿಲುವನ್ನು ತಳೆಯುವ ಮೂಲಕ ಮಾರ್ಕ್ಸ್, ಮನುಷ್ಯನನ್ನು ಮೂಲತಃ ಇತಿಹಾಸದ ಉಪಕರಣ ಮಾತ್ರವಾಗಿ ನೋಡಿದನೇನೋ ಎಂಬ ಅನುಮಾನ ಮಿಕ್ಕ ಮೂವರು ಚಿಂತಕರಲ್ಲಿದ್ದಂತಿರುವುದು. ಈ ಮೂವರ ಪ್ರಕಾರ, ಮನುಷ್ಯ ಒಮ್ಮೆಗೇ ಉಪಕರಣವೂ ಹೌದು, ಗುರಿಯೂ ಹೌದು;ಅವನು ಉಪಕರಣವಾಗಿರುವುದು ಗುರಿಯಾಗುವ ಪ್ರಕ್ರಿಯೆಯ ಭಾಗವಾಗಿಯೇ. ಇದು ಮಾರ್ಕ್ಸ್‌ನ ಆಲೋಚನಾ ಕ್ರಮದಲ್ಲಿ ದೂರ ತರ್ಕದ ಭಾಗವಾಗಿ ಮತ್ತು ಆನುಷಂಗಿಕ ಮಾತ್ರವಾಗಿ ಕಾಣಲು ಕಾರಣ, ಆತ ಪ್ರಧಾನವಾಗಿ ಯೂರೋಪಿನ ಜ್ಞಾನಯುಗ ಮೂಲವಾದ ಭೌತವಾದಿ ನಾಗರೀಕತೆಯ ಉತ್ಪನ್ನ ಎಂಬುದೇ ಆಗಿರಬಹುದು. ಈ ಒಡಕನ್ನು ಅರಿಯದೇ ಭಾರತದಲ್ಲಿ ಸಮಾಜವಾದಿ ಸಿದ್ಧಾಂತಗಳು ಮತ್ತು ಹೋರಾಟಗಳು ತಮ್ಮ ತಮ್ಮಲ್ಲೇ ಕಟುವಾಗಿ ಹೊಡೆದಾಡಿಕೊಂಡಿದ್ದರಿಂದಲೇ, ಅವು ಗುರಿ ಕಾಣದಾಗಿ ಸೋತು, ಅಂತಿಮವಾಗಿ ಜಾಗತೀಕರಣ ಎಂಬ ನವ ಬಂಡವಾಳವಾದಿ ಮತ್ತು ನವವಸಾಹತುವಾದಿ ರಾಜ-ಕಾರಣಕ್ಕೆ ಸುಲಭವಾಗಿ ದಾರಿ ಮಾಡಿ ಕೊಟ್ಟವೆಂದು ಹೇಳಬಹುದು."

ಡಿ.ಎಸ್. ನಾಗಭೂಷಣ

(ಪುಸ್ತಕದಲ್ಲಿನ ಲೇಖನವೊಂದರಿಂದ)

ISBN 978-93-81876-36-7

9 789381 876367

₹ 175/-

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ೧೦೦ ಅಡಿ ರಸ್ತೆ,
ರಾಜೇಂದ್ರನಗರ, ಶಿವಮೊಗ್ಗ
ದೂ. ೯೪೪೯೮ ೮೬೩೯೦
gbtmohan@gmail.com